೧೮೮೮-೧೯೮೮: ನೂರರ ನೆನಪು

ಶಾಂತಿಶ್ರೀ



ಆಸ್ಥಾನ ಮಹಾವಿದ್ವಾನ್ ಪಂಡಿತರತ್ನ

ಎರ್ತೂರು ಶಾಂತಿರಾಜ ಶಾಸ್ತ್ರಿಗಳ

ಶತಮಾನೋತ್ಸವ ಸ್ಮರಣ ಸಂಪುಟ

ಶಾಂತಿಶ್ರೀ

ನ್ಯಾಯತೀರ್ಥ, ಆಸ್ಥಾನ ಮಹಾವಿದ್ವಾನ್, ಪಂಡಿತರತ್ನ
ಎರ್ತೂರು ಶಾಂತಿರಾಜ ಶಾಸ್ತ್ರಿಗಳ ಶತಮಾನೋತ್ಸವ

ಸಂಸ್ಮರಣ ಸಂಪುಟ

ಸಂಪಾದಕರು
ಡಾ॥ ಎಂ. ಎ. ಜಯಚಂದ್ರ

ಅಖಿಲ ಕರ್ನಾಟಕ ಪಂಡಿತರತ್ನ ಎರ್ತೂರು ಶಾಂತಿರಾಜ ಶಾಸ್ತ್ರಿಗಳ
ಜನ್ಮ ಶತಮಾನೋತ್ಸವ ಸಮಿತಿ, ಬೆಂಗಳೂರು
೧೯೮೯

SHANTHISHREE : Souvenir, Published on the occasion of Panditaratna Erthur Shanthiraja Shastri Birth Centenary Celebration, by Akhila Karnataka Panditaratna Erthur Shanthiraja Shastri Birth Centenary Celebrations Committee, No. 369, 42nd Cross, Jayanagar, 8th Block, Bangalore - 560 082. July 1989.

Editor : Dr. M. A. JAYACHANDRA
ಸಂಪಾದಕರು : ಡಾ॥ ಎಂ. ಎ. ಜಯಚಂದ್ರ

Price : Rs. 15/-
ಬೆಲೆ : ಹದಿನೈದು ರೂಪಾಯಿಗಳು

ಮುದ್ರಕರು :
ಲೋಟಸ್ ಪ್ರಿಂಟರ್ಸ್
ನಂ. ೩೨/೨೫, ೨ನೇ ಮುಖ್ಯ ರಸ್ತೆ,
ಇಂಡಸ್ಟ್ರಿಯಲ್ ಟೌನ್, ರಾಜಾಜಿನಗರ,
ಬೆಂಗಳೂರು – ೫೬೦ ೦೪೪

ಶಾಂತಿಶ್ರೀ ಸಂಪಾದಕ ಮಂಡಳಿ

ಅಖಿಲ ಕರ್ನಾಟಕ ಪಂಡಿತರತ್ನ
ಎತ್ತೂರು ಶಾಂತಿರಾಜಶಾಸ್ತ್ರಿಗಳ ಜನ್ಮಶತಮಾನೋತ್ಸವ ಸಮಿತಿ

ಪರಮ ಸಂರಕ್ಷಕರು

ಸ್ವಸ್ತಿಶ್ರೀ ಕರ್ಮಯೋಗಿ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳು, ಶ್ರವಣಬೆಳಗೊಳ
ಸ್ವಸ್ತಿಶ್ರೀ ಜಗದ್ಗುರು ದೇವೇಂದ್ರಕೀರ್ತಿ ಭಟ್ಟಾರಕ ಸ್ವಾಮಿಗಳು, ಹೊಂಬುಜ
ಸ್ವಸ್ತಿಶ್ರೀ ಜ್ಞಾನಯೋಗಿ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳು, ಮೂಡಬಿದಿರೆ
ಸ್ವಸ್ತಿಶ್ರೀ ಶಾಂತಿಭೂಷಣ ಲಕ್ಷ್ಮೀಸೇನ ಭಟ್ಟಾರಕ ಸ್ವಾಮಿಗಳು, ನರಸಿಂಹರಾಜಪುರ
ಸ್ವಸ್ತಿಶ್ರೀ ಲಲಿತಕೀರ್ತಿ ಭಟ್ಟಾರಕ ಸ್ವಾಮಿಗಳು, ಕಾರ್ಕಳ

ಪೋಷಕರು

ಶ್ರೀ ಆರ್. ಆರ್. ದಿವಾಕರ್ ಅವರು, ಬೆಂಗಳೂರು
ಶ್ರೀ ಆರ್. ಎನ್. ಲಕ್ಷ್ಮೀಪತಿಯವರು, ಬೆಂಗಳೂರು
ಮಾತೃಶ್ರೀ ರತ್ನಮ್ಮನವರು, ಧರ್ಮಸ್ಥಳ
ಶ್ರೀ ಜಿ. ಹೆಚ್. ಆದಿರಾಜಯ್ಯನವರು, ಬೆಂಗಳೂರು
ಶ್ರೀ ಸಿ. ಬಿ. ಭಂಡಾರಿಯವರು, ಬೆಂಗಳೂರು

ಗೌರವಾಧ್ಯಕ್ಷರು : ಸನ್ಮಾನ್ಯ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು, ಧರ್ಮಸ್ಥಳ

ಕಾರ್ಯಾಧ್ಯಕ್ಷರು : ಸನ್ಮಾನ್ಯ ಶ್ರೀ ಎ. ಆರ್. ನಾಗರಾಜ್ ಅವರು, ಬೆಂಗಳೂರು

ಉಪಾಧ್ಯಕ್ಷರು

ಶ್ರೀ ಜಿ. ನಾರಾಯಣ, ಬೆಂಗಳೂರು
ಶ್ರೀ ಚದುರಂಗ, ಮೈಸೂರು
ಶ್ರೀ ಚಿರಂಜೀವಿಸಿಂಗ್, ಮೈಸೂರು
ಶ್ರೀ ಎಂ. ಸಿ. ಅನಂತರಾಜಯ್ಯ, ಬೆಂಗಳೂರು
ಶ್ರೀ ಟಿ. ಸುಬ್ಬರಾವ್, ದಾವಣಗೆರೆ
ಶ್ರೀ ಸಿ. ಬಿ. ಮಹಾವೀರ ಪ್ರಸಾದ್, ಮೈಸೂರು
ಡಾ॥ ರಂ. ಶ್ರೀ ಮುಗಳಿ, ಬೆಂಗಳೂರು
ಡಾ॥ ಹಾ. ಮಾ. ನಾಯಕ್, ಮೈಸೂರು
ಡಾ॥ ಸಿದ್ದಯ್ಯ ಪುರಾಣಿಕ್, ಬೆಂಗಳೂರು
ಡಾ॥ ಹಂಪ. ನಾಗರಾಜಯ್ಯ, ಬೆಂಗಳೂರು
ಡಾ॥ ಬಿ. ಪಿ. ರಾಧಾಕೃಷ್ಣ, ಬೆಂಗಳೂರು

ಕಾರ್ಯದರ್ಶಿಗಳು : ಶ್ರೀ ಎಸ್. ನಾಗಕುಮಾರ್, ಮೈಸೂರು ; ಶ್ರೀ ಎಸ್. ಜಿತೇಂದ್ರಕುಮಾರ್, ಬೆಂಗಳೂರು
ಶ್ರೀ ಹೆಚ್. ಬಿ. ದೇವೇಂದ್ರಸ್ವಾಮಿ, ಬೆಂಗಳೂರು (ಸಹ-ಕಾರ್ಯದರ್ಶಿ)

ಕೋಶಾಧಿಕಾರಿ : ಶ್ರೀ ವೈ. ಎಸ್. ರಾಜೇಂದ್ರಕುಮಾರ್, ಬೆಂಗಳೂರು

ಸದಸ್ಯರು

ಡಾ॥ ಸಿ. ಪಿ. ಕೃಷ್ಣಕುಮಾರ್, ಮೈಸೂರು
ಶ್ರೀ ಜಿ. ಜಿ. ಮಂಜುನಾಥನ್, ಮೈಸೂರು
ಶ್ರೀ ರಘುಚಂದ್ರ ಅಜ್ರಿ, ಮೈಸೂರು
ಶ್ರೀ ಚಂದ್ರಕಾಂತ ಕಾಗವಾಡ್, ಬೆಳಗಾಂ
ಶ್ರೀ ಹೆಚ್. ಎನ್. ಮಾಣಿಕ್ಯರಾಜು, ಹಾಸನ
ಡಾ॥ ಟಿ. ವಿ. ವೆಂಕಟಾಚಲಶಾಸ್ತ್ರಿ, ಮೈಸೂರು
ಶ್ರೀ ಶಿವಾನಂದ ಗಾಳಿ, ಧಾರವಾಡ
ಶ್ರೀ ಎಂ. ಪಿ. ಶಾಂತಿವರ್ಮ, ವೈನಾಡ್
ಶ್ರೀ ಎಸ್. ಬಿ. ವಸಂತರಾಜಯ್ಯ, ಬೆಂಗಳೂರು
ಶ್ರೀ ಎ. ಎನ್. ಚಂದ್ರಕೀರ್ತಿ, ಬೆಳಗಾಂ
ಡಾ॥ ಎಂ. ಡಿ. ವಸಂತರಾಜ್, ಮದ್ರಾಸು
ಶ್ರೀ ಎಂ. ರಾಮಚಂದ್ರ, ಕಾರ್ಕಳ
ಶ್ರೀ ಜಿನರಾಜಶಾಸ್ತ್ರಿ, ಉಜಿರೆ
ಶ್ರೀ ಹೆಚ್. ಪಿ. ಬ್ರಹ್ಮಪ್ಪ, ಹಾಸನ
ಶ್ರೀ ಎಸ್. ಎನ್. ಅಶೋಕಕುಮಾರ್, ಶ್ರವಣಬೆಳಗೊಳ
ಶ್ರೀಮತಿ ಪ್ರೇಮಕುಮಾರಿ, ದಾವಣಗೆರೆ
ಶ್ರೀ ಟಿ. ಎನ್. ಸುರೇಂದ್ರಕುಮಾರ್, ಬೆಂಗಳೂರು
ಶ್ರೀಮತಿ ಶಾಂತ ಸನ್ಮತಿಕುಮಾರ್, ತುಮಕೂರು
ಶ್ರೀಮತಿ ವಿಜಯದೇವೇಂದ್ರಪ್ಪ, ದಾವಣಗೆರೆ
ಡಾ॥ ಪ್ರಸನ್ನಕುಮಾರ್, ಮೂಡಿಗೆರೆ
ಶ್ರೀ ಎಸ್. ಜಿ. ಗುಣವರ್ಮ, ಗೋವ
ಶ್ರೀ ಜಿ. ಪಿ. ನಾಗೇಂದ್ರಪ್ರಸಾದ್, ಬೆಂಗಳೂರು



ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿಗಳು

ಅಖಿಲ ಕರ್ನಾಟಕ ಪಂಡಿತರತ್ನ
ಎತ್ತೂರು ಶಾಂತಿರಾಜಶಾಸ್ತ್ರಿಗಳ ಜನ್ಮಶತಮಾನೋತ್ಸವ ಸಮಿತಿ

ಪರಮ ಸಂರಕ್ಷಕರು

ಸ್ವಸ್ತಿಶ್ರೀ ಕರ್ಮಯೋಗಿ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳು, ಶ್ರವಣಬೆಳಗೊಳ
ಸ್ವಸ್ತಿಶ್ರೀ ಜಗದ್ಗುರು ದೇವೇಂದ್ರಕೀರ್ತಿ ಭಟ್ಟಾರಕ ಸ್ವಾಮಿಗಳು, ಹೊಂಬುಜ
ಸ್ವಸ್ತಿಶ್ರೀ ಜ್ಞಾನಯೋಗಿ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳು, ಮೂಡಬಿದರೆ
ಸ್ವಸ್ತಿಶ್ರೀ ಶಾಂತಿಭೂಷಣ ಲಕ್ಷ್ಮೀಸೇನ ಭಟ್ಟಾರಕ ಸ್ವಾಮಿಗಳು, [illegible]
ಸ್ವಸ್ತಿಶ್ರೀ ಲಲಿತಕೀರ್ತಿ ಭಟ್ಟಾರಕ ಸ್ವಾಮಿಗಳು, ಕಾರ್ಕಳ

ಪ್ರೋತ್ಸಾಹಕರು

ಶ್ರೀ ಆರ್. ಆರ್. ದಿವಾಕರ್ ಅವರು, ಬೆಂಗಳೂರು
ಶ್ರೀ ಆರ್. ಎಸ್. ಲಕ್ಷ್ಮೀಪತಿಯವರು, ಬೆಂಗಳೂರು
ಮಹಾತ್ಮಶ್ರೀ ರತ್ನಮ್ಮನವರು, ಧರ್ಮಸ್ಥಳ
ಶ್ರೀ [illegible], ಬೆಂಗಳೂರು
ಶ್ರೀ [illegible], ಬೆಂಗಳೂರು

ಗೌರವಾಧ್ಯಕ್ಷರು : ಸನ್ಮಾನ್ಯ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು, ಧರ್ಮಸ್ಥಳ

ಕಾರ್ಯಾಧ್ಯಕ್ಷರು : ಸನ್ಮಾನ್ಯ ಶ್ರೀ ಎ. ಆರ್. ನಾಗರಾಜ್ ಅವರು, ಬೆಂಗಳೂರು

ಉಪಾಧ್ಯಕ್ಷರು

ಶ್ರೀ ಜಿ. ನಾರಾಯಣ, ಬೆಂಗಳೂರು
ಶ್ರೀ [illegible], ಮೈಸೂರು
ಶ್ರೀ [illegible], ಮೈಸೂರು
ಶ್ರೀ ಎಂ. [illegible], ಬೆಂಗಳೂರು
ಶ್ರೀ [illegible], ದಾವಣಗೆರೆ
ಶ್ರೀ [illegible] ಪ್ರಸಾದ್, ಮೈಸೂರು
ಡಾ॥ [illegible], ಬೆಂಗಳೂರು
ಡಾ॥ [illegible], ಮೈಸೂರು
ಡಾ॥ [illegible], ಬೆಂಗಳೂರು
ಡಾ॥ [illegible], ಬೆಂಗಳೂರು
ಡಾ॥ [illegible], ಬೆಂಗಳೂರು

ಕಾರ್ಯದರ್ಶಿಗಳು : ಶ್ರೀ ಎಸ್. ನಾಗಕುಮಾರ್, ಮೈಸೂರು ; ಶ್ರೀ ಎಸ್. [illegible], ಬೆಂಗಳೂರು
ಶ್ರೀ ಹೆಚ್. ಬಿ. ದೇವೇಂದ್ರಸ್ವಾಮಿ, ಬೆಂಗಳೂರು ([illegible])

ಕೋಶಾಧಿಕಾರಿ : ಶ್ರೀ ವೈ. ಎಸ್. ರಾಜೇಂದ್ರಕುಮಾರ್, ಬೆಂಗಳೂರು

ಸದಸ್ಯರು

ಡಾ॥ [illegible] ಕೃಷ್ಣಕುಮಾರ್, ಮೈಸೂರು
ಶ್ರೀ [illegible] ನಾಥನ್, ಮೈಸೂರು
ಶ್ರೀ [illegible] ಅಜ್ರಿ, ಮೈಸೂರು
ಶ್ರೀ [illegible] ಕಾಗವಾಡ್, ಬೆಳಗಾಂ
ಶ್ರೀ [illegible] ಮಾಣಿಕ್ಯರಾಜು, ಹಾಸನ
ಡಾ॥ [illegible] ವೆಂಕಟಾಚಲಶಾಸ್ತ್ರಿ, ಮೈಸೂರು
ಶ್ರೀ [illegible], ಧಾರವಾಡ
ಶ್ರೀ [illegible], ಮೈಸೂರು
ಶ್ರೀ ಎಸ್. [illegible], ಬೆಂಗಳೂರು
ಶ್ರೀ [illegible] ಚಂದ್ರಕೀರ್ತಿ, ಬೆಳಗಾಂ
ಡಾ॥ ಎಂ. ಡಿ. ವಸಂತರಾಜ್, ಮದ್ರಾಸು
ಶ್ರೀ ಎಂ. ರಾಮಚಂದ್ರ, [illegible]
ಶ್ರೀ [illegible]
ಶ್ರೀ ಹೆಚ್. [illegible]
ಶ್ರೀ ಎಸ್. ಎನ್. [illegible], ಶ್ರವಣಬೆಳಗೊಳ
ಶ್ರೀಮತಿ [illegible]
ಶ್ರೀ [illegible], ಬೆಂಗಳೂರು
ಶ್ರೀಮತಿ [illegible], ಮೈಸೂರು
ಶ್ರೀಮತಿ [illegible], [illegible]
ಡಾ॥ ಪ್ರಸನ್ನಕುಮಾರ್, [illegible]
ಶ್ರೀ ಎಸ್. ಜಿ. ಗುಣವರ್ಮ, [illegible]
ಶ್ರೀ ಜಿ. ಪಿ. ನಾಗೇಂದ್ರಪ್ರಸಾದ್, ಬೆಂಗಳೂರು



ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿಗಳು

ಸಂಪಾದಕೀಯ

ಇಪ್ಪತ್ತನೆಯ ಶತಮಾನದ ಆರಂಭದ ದಶಕಗಳಲ್ಲಿ ಕರ್ನಾಟಕ ಜೈನ ಸಮಾಜದ ಮೇಲೆ ಸಾಹಿತ್ಯಿಕ ದೃಷ್ಟಿಯಿಂದ ವಿಶೇಷ ಪ್ರಭಾವ ಬೀರಿದವರಲ್ಲಿ ನ್ಯಾಯತೀರ್ಥ, ಮಹಾವಿದ್ವಾನ್, ಜೈನ ಶಾಸ್ತ್ರ ವಿಶಾರದ, ಪಂಡಿತರತ್ನ ಎತರ್ೂರು ಶಾಂತಿರಾಜಶಾಸ್ತ್ರಿಗಳು ಪ್ರಮುಖರು. ಅಂದಿನ ಜೈನ ಸಮಾಜದ ಪುನರುತ್ಥಾನಕ್ಕೆ ಕಾರಣಪುರುಷರೆಂದು ಇಂದಿಗೂ ಅನೇಕ ಹಿರಿಯರು ಅವರನ್ನು ಸ್ಮರಿಸುತ್ತಾರೆ. ಸದ್ಯ ಉಪಲಬ್ಧ ಆಧಾರಗಳ ಪ್ರಕಾರ ೧೯೧೧ ರಿಂದ ತಮ್ಮ ಮೃತ್ಯುಮಹೋತ್ಸವದವರೆಗೆ (೩೧ ಮೇ ೧೯೫೨) ನಿರಂತರವಾಗಿ ೪೨ ವರ್ಷಗಳ ಕಾಲ ಧಾರ್ಮಿಕ ಮಾಧ್ಯಮದಲ್ಲಿ ಕನ್ನಡ ಸಾಹಿತ್ಯ ಸೇವೆ ಸಲ್ಲಿಸಿದರು. ತಾವು ಆಯ್ದುಕೊಂಡ ಕ್ಷೇತ್ರಕ್ಕೆ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡು ಹಿಮಾಲಯ ಸದೃಶ ಸಾಧನೆಗೈದಿದ್ದಾರೆ. ೧೯೨೫ರಲ್ಲಿ ಮಹಾಪುರಾಣದ ಪ್ರಥಮ ಭಾಗ ಹೊರಬಂದಿತು, ಎಂಟು ವರ್ಷಗಳ ಅನಂತರ ೧೯೩೩ರಲ್ಲಿ ದ್ವಿತೀಯ ಭಾಗ ಬೆಳಕು ಕಂಡಿತು, ಅನಂತರ ಏಳು ವರ್ಷದ ಮೇಲೆ ೧೯೪೦ರಲ್ಲಿ ಅಂತಿಮ ಭಾಗ ಪ್ರಕಟಗೊಂಡಿತು. ಒಟ್ಟು ಹದಿನೈದು ವರ್ಷಗಳಿಗೂ ಹೆಚ್ಚು ಕಾಲ ಓರ್ವ ಲೇಖನಿಯೋಗಿಯಾಗಿ ಇಪ್ಪತ್ತು ಸಾವಿರ ಶ್ಲೋಕ ಪ್ರಮಾಣದ ಮಹಾಪುರಾಣವನ್ನು ಕನ್ನಡಕ್ಕೆ ಅನುವಾದಿಸಿ, ಜೈನ ಸಮಾಜದವರ ಆದರಕ್ಕೂ, ಕನ್ನಡ ಸಾಹಿತ್ಯಭಿಮಾನಿಗಳ ಮನ್ನಣೆಗೂ ಪಾತ್ರರಾಗಿದ್ದಾರೆ. ಅವರ ಈ ಮೇರುಕೃತಿಯೇ ಅವರಿಗೆ ಅತ್ಯುತ್ತಮ ಸ್ಮಾರಕವಾಗಿದೆ. ಒಬ್ಬ ಸಂಸ್ಕೃತ ಪ್ರಾಕೃತ ಭಾಷೆಗಳಲ್ಲಿ ಪಾರಂಗತನಾದ ವಿದ್ವಾಂಸ, ಎಷ್ಟೊಂದು ವಿಧದಲ್ಲಿ, ಎಂಥ ಪ್ರಮಾಣದಲ್ಲಿ ತನ್ನ ಮಾತೃಭಾಷೆಗೆ ಸೇವೆ ಸಲ್ಲಿಸಬಲ್ಲ ಎಂಬುದಕ್ಕೆ ಶಾಂತಿರಾಜ ಶಾಸ್ತ್ರಿಗಳು ಅನುಕರಣೀಯ ಮಾದರಿಯಾಗಿದ್ದಾರೆ. ಅವರ ಅಪಾರ ಸಾಹಿತ್ಯ ಅನೇಕ ಪಿಎಚ್.ಡಿ. ನಿಬಂಧಗಳಿಗೆ ವಸ್ತುವಾಗಬಲ್ಲುದಾಗಿದೆ.

ಪ್ರಾಚೀನ ಸಂಪ್ರದಾಯ, ಅರ್ವಾಚೀನ ವಿಚಾರಧಾರೆ ಎರಡನ್ನು ಔಚಿತ್ಯವರಿತು ಮೈಗೂಡಿಸಿಕೊಂಡ ಅಪರೂಪದ ವ್ಯಕ್ತಿತ್ವ ಶಾಸ್ತ್ರಿಗಳದು. ಪ್ರಾಚೀನವಾದುದರಲ್ಲಿ ಉತ್ತಮವಾದುದೆಲ್ಲವನ್ನು ಜನಸಾಮಾನ್ಯರಿಗೆ ಮುಟ್ಟಿಸಬೇಕೆಂಬ ಹಂಬಲ ಅವರದು. ಆದುದರಿಂದಲೇ ರತ್ನಾಕರವರ್ಣಿಯ ಮೂರು ಶತಕಗಳಿಗೆ, ಪೊನ್ನಕವಿಯ ತ್ರೈಲೋಕ್ಯ ಚೂಡಾಮಣಿ ಸ್ತೋತ್ರಕ್ಕೆ, ಅಜ್ಞಾತ ಕನ್ನಡ ಕವಿಯ ಯೋಗಾಮೃತ ಶತಕಕ್ಕೆ ತಿಳಿಗನ್ನಡದಲ್ಲಿ ಅತ್ಯುತ್ತಮ ಗದ್ಯಾನುವಾದ ನೀಡಿ ಉಪಕರಿಸಿದ್ದಾರೆ. ಜನಸಾಮಾನ್ಯರು ಹಾಡಿಕೊಳ್ಳಲು ಅನುಕೂಲವಾಗಿರುವ ಎಂಟು ಸಾವಿರ ಸಾಂಗತ್ಯ ಪದ್ಯಗಳುಳ್ಳ, 'ನೇಮಿಜಿನೇಶ ಸಂಗತಿ' ಎಂಬ ದೊಡ್ಡ ಕಾವ್ಯವನ್ನು ; ಪ್ರಸಿದ್ಧ ಕುಂದಾದ್ರಿ ವರ್ಣನೆಯುಳ್ಳ, ಕವಯಿತ್ರಿ ಕಂತಿಯ ಏಕೈಕ ಉಲ್ಲೇಖವುಳ್ಳ, ಜೈನ ಕಿನ್ನರ ಕಥೆಯಂತಿರುವ 'ನಾಗಕುಮಾರ ಚರಿತೆ' ಎಂಬ ಸಾಂಗತ್ಯ ಕಾವ್ಯವನ್ನು ಶ್ರೇಷ್ಠ ದರ್ಜೆಯಲ್ಲಿ ಸಂಪಾದಿಸಿ ಕೊಟ್ಟಿದ್ದಾರೆ. ಭಾರತದಲ್ಲಿ ಇನ್ನು ಗ್ರಂಥ ಸಂಪಾದನಾ ಶಾಸ್ತ್ರ ರೂಪುಗೊಳ್ಳುತ್ತಿದ್ದ ಸಮಯದಲ್ಲಿ ಶಾಸ್ತ್ರಿಗಳು ಈ ದೊಡ್ಡ ಕಾವ್ಯಗಳನ್ನು ಸಮರ್ಥವಾಗಿ ಸಂಪಾದಿಸಿಕೊಟ್ಟಿರುವುದು ಗಮನಾರ್ಹವಾದುದು. ಕನ್ನಡದ ಆದ್ಯ ಗ್ರಂಥಸಂಪಾದನಾಕಾರರಲ್ಲಿ ಇವರು ಒಬ್ಬ ಗಣ್ಯರಾಗಿದ್ದಾರೆ. ಕರ್ನಾಟಕದಲ್ಲಿ ಅನೇಕ ಪ್ರಾಚೀನ ಜೈನ ಟೀಕಾ ಗ್ರಂಥಗಳಿವೆ. ಇವುಗಳನ್ನು ಸಂಪಾದಿಸಬೇಕಾದರೆ, ಸಂಪಾದಕನಿಗೆ, ಕನ್ನಡ–ಸಂಸ್ಕೃತ-ಪ್ರಾಕೃತ ಭಾಷೆಗಳ ಪ್ರೌಢಿಮೆಯ ಜೊತೆಗೆ ಉತ್ತಮ ಮಟ್ಟದ ಜೈನ ಸಿದ್ಧಾಂತದ ಪರಿಜ್ಞಾನವೂ ಅಗತ್ಯ. ಈ ಅರ್ಹತೆಯನ್ನು ಹೊಂದಿದ್ದ ಶಾಸ್ತ್ರಿಗಳು ತಮಗೆ ದೊರೆತ ಅಲ್ಪ ಅವಕಾಶದಲ್ಲಿ ಕನ್ನಡದಲ್ಲಿ 'ತತ್ತ್ವರತ್ನ ಪ್ರದೀಪಿಕೆ'ಯನ್ನೂ ; ಸಂಸ್ಕೃತದಲ್ಲಿ 'ತತ್ತ್ವಾರ್ಥಸೂತ್ರ' ಹಾಗೂ 'ಪ್ರಮೇಯ ರತ್ನಾಲಂಕಾರ' ಎಂಬ ಗ್ರಂಥಗಳನ್ನು ಸಂಪಾದಿಸಿಕೊಟ್ಟಿದ್ದಾರೆ. ಹೀಗೆ ಅನೇಕ ವಿಧದಲ್ಲಿ ಕನ್ನಡ ಸರಸ್ವತಿಯ ಆರಾಧನೆ ಮಾಡಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಶಾಂತಿರಾಜ ಶಾಸ್ತ್ರಿಗಳಿಗೆ ಒಂದು ವಿಶಿಷ್ಟ ಸ್ಥಾನ ಲಭ್ಯವಾಗಿದೆ.

ಶಾಸ್ತ್ರಿಗಳಿಗೆ ಕರ್ನಾಟಕ ಏಕೀಕರಣದ ಬಗ್ಗೆ ವಿಶೇಷ ಆಸ್ಥೆಯಿತ್ತು. ಆದ್ದರಿಂದಲೇ ೧೯೩೦ರಲ್ಲಿ ಧರ್ಮಸ್ಥಳದ ವಾರ್ಷಿಕ ಸಮ್ಮೇಳನದಲ್ಲಿ, ಸೂಕ್ತ ಅಂಕಿ ಅಂಶಗಳೊಡನೆ ಕರ್ನಾಟಕ ಏಕೀಕರಣವನ್ನು ಸಮರ್ಥಿಸಿ ಭಾಷಣ ಮಾಡಿದ್ದರು. ಅಲ್ಲದೆ ಹರಿದು ಹಂಚಿ ಹೋಗಿದ್ದ ಕನ್ನಡ ಮಾತನಾಡುವ ಪ್ರದೇಶದಲ್ಲೆಲ್ಲ ಒಂದೇ ರೀತಿಯ ಕನ್ನಡ ಪಠ್ಯಪುಸ್ತಕವಿರಬೇಕೆಂಬ ಗೊತ್ತುವಳಿಯನ್ನು ಮಂಡಿಸಿದ್ದರು.

ಬಹುಮುಖ ಪ್ರತಿಭೆಯ ಶಾಸ್ತ್ರಿಗಳು ಸಮಾಜದಿಂದ ಪಡೆದುದಕ್ಕಿಂತ ಹೆಚ್ಚಾಗಿ ಸಮಾಜಕ್ಕೆ ನೀಡಿದುದೇ ಹೆಚ್ಚು. ಇಂಥದೊಂದು ಸಂಸ್ಕೃತಿಯ ಬೀಜವನ್ನು ತಮ್ಮ ಮನೆಯಲ್ಲೇ ಬಿತ್ತಿದ್ದರು. ೧೯೮೧ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಮಹಾಪುರಾಣ ಪ್ರಕಟವಾದ ಸಂದರ್ಭದಲ್ಲಿ, ಅವರ ಮಕ್ಕಳೆಲ್ಲ ಸೇರಿ, ತಮ್ಮ ಪೂಜ್ಯರ ಹೆಸರಿನಲ್ಲಿ ಹತ್ತು ಸಾವಿರ ರೂಪಾಯಿಗಳ ದತ್ತಿಯನ್ನು ಪರಿಷತ್ತಿನಲ್ಲಿ ಸ್ಥಾಪಿಸಿದರು. ಮುಂದೆ ೧೯೮೮ ಜನವರಿ ೩ ರಂದು ಶ್ರವಣಬೆಳಗೊಳದಲ್ಲಿ ಶಾಸ್ತ್ರಿಗಳ ಜನ್ಮಶತಮಾನೋತ್ಸವ ಉದ್ಘಾಟನೆಯಾದಾಗ, ಒಂಬತ್ತು ಜನ ಸದಸ್ಯರನ್ನೊಳಗೊಂಡ "ಪಂಡಿತರತ್ನ ಎ. ಶಾಂತಿ ರಾಜಶಾಸ್ತ್ರಿ ಟ್ರಸ್ಟ್" ಸ್ಥಾಪಿಸಿದರು. ಈ ಟ್ರಸ್ಟ್ ಶಾಸ್ತ್ರಿಗಳ ಎಲ್ಲ ಗ್ರಂಥಗಳನ್ನು ಪುನರ್ ಮುದ್ರಿಸುವ ಹಾಗೂ ಶಾಸ್ತ್ರಿಗಳ ಧ್ಯೇಯಗಳಿಗೆ ಅನುಗುಣವಾದ ಸಮಾಜೋಪಯೋಗಿ ಕಾರ್ಯಗಳನ್ನು ಮಾಡುವ ಉದ್ದೇಶ ಹೊಂದಿದೆ. ಈ ಟ್ರಸ್ಟ್ ಈಗಾಗಲೇ ಶಾಸ್ತ್ರಿಗಳ ೨೫ ಗ್ರಂಥಗಳನ್ನು ಪ್ರಕಟಿಸಿದೆ. ಉಳಿದ ಗ್ರಂಥಗಳನ್ನು ಒಂದೆರಡು ವರ್ಷಗಳಲ್ಲಿ ಪ್ರಕಟಿಸುವ ಭರವಸೆಯನ್ನು ಮೂಡಿಸಿದೆ.

ನೂರರ ನೆನಪಿನ 'ಶಾಂತಿಶ್ರೀ' ಸಂಪುಟದಲ್ಲಿ ನಲವತ್ತಕ್ಕೂ ಹೆಚ್ಚು ಲೇಖನಗಳು ಹಾಗೂ ಸ್ತಂಭಗಳಿವೆ. ಇವು ಶಾಸ್ತ್ರಿಗಳ ವ್ಯಕ್ತಿತ್ವ ಹಾಗೂ ಕರ್ತೃತ್ವವನ್ನು ಉತ್ತಮ ಪರಿಯಲ್ಲಿ ಮೂಡಿಸಬಲ್ಲವು. ಶಾಸ್ತ್ರಿಗಳ ಶತಮಾನೋತ್ಸವವನ್ನು ಪ್ರಭಾವಶಾಲಿಯಾಗಿ ಆಚರಿಸಲು, ಶ್ರೇಷ್ಠ ರೀತಿಯಲ್ಲಿ 'ಶಾಂತಿಶ್ರೀ'ಯನ್ನು ಹೊರತರಲು ಯೋಗ್ಯ ಮಾರ್ಗದರ್ಶನಮಾಡಿದವರು, ಶ್ರೀಕ್ಷೇತ್ರ ಶ್ರವಣಬೆಳಗೊಳದ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರು. ಅವರಿಗೆ ಅನಂತ ನಮೋಸ್ತುಗಳು. ಅಲ್ಲದೆ ಆಗಾಗ ಸೂಕ್ತ ಸಲಹೆ ಸೂಚನೆಗಳನ್ನು ನೀಡಿದ ಡಾ. ಹಂಪನಾ ಅವರಿಗೂ, ಶ್ರೀ ಕೆ. ನೇಮಿನಾಥ್ ಅವರಿಗೂ, ಶ್ರೀ 'ಪ್ರಿಯದರ್ಶಿ' ಅವರಿಗೂ, ಶಾಂತಿಶ್ರೀ ಕಾರ್ಯವನ್ನು ನನಗೊಪ್ಪಿಸಿದ ಶತಮಾನೋತ್ಸವ ಸಮಿತಿಯ ಗೌರವಾಧ್ಯಕ್ಷರಾದ ಸನ್ಮಾನ್ಯ ಶ್ರೀ ಡಿ. ವೀರೇಂದ್ರ ಹೆಗ್ಗಡೆ ಅವರಿಗೂ, ಕಾರ್ಯಾಧ್ಯಕ್ಷರಾದ ಶ್ರೀ ಎ. ಆರ್. ನಾಗರಾಜ್ ಹಾಗೂ ಆತ್ಮೀಯ ಮಿತ್ರರಾದ ಶ್ರೀ ಎಸ್. ಜಿತೇಂದ್ರಕುಮಾರ್ ಅವರಿಗೂ, ಸಂಪಾದಕ ಮಂಡಳಿಯ ಸದಸ್ಯರಿಗೂ ನಾನು ಋಣಿಯಾಗಿದ್ದೇನೆ. ಎಲ್ಲಕ್ಕಿಂತ ಹೆಚ್ಚಾಗಿ ಶಾಂತಿಶ್ರೀಗೆ ಸಕಾಲದಲ್ಲಿ ಒಳ್ಳೆಯ ಬರಹಗಳನ್ನು ನೀಡಿ ಉಪಕರಿಸಿದ ಎಲ್ಲ ಲೇಖಕರಿಗೂ, ಅಂದವಾಗಿ ಸಕಾಲದಲ್ಲಿ ಮುದ್ರಿಸಿಕೊಟ್ಟ ಲೋಟಸ್ ಪ್ರಿಂಟರ್ಸ್ ಮಾಲೀಕರಿಗೂ ನೌಕರ ವರ್ಗದವರಿಗೂ ನಾನು ಆಭಾರಿಯಾಗಿದ್ದೇನೆ.

—ಡಾ|| ಎಂ. ಎ. ಜಯಚಂದ್ರ

ಪರಿವಿಡಿ

ಕೆಲವು ಪ್ರಮುಖ ಸ್ತಂಭಗಳು

ಶ್ರೀ

ವಿವೇಕಾಭ್ಯುದಯ

ಅಹಿಂಸಾ ಪರಮೋ ಧರ್ಮಃ

ಸ್ವದೇಶಕ್ಕೆ ರೂ. ೫-೧-೦	**ಸಂಪಾದಕರು** ಆಸ್ಥಾನವಿದ್ವಾನ್, ನ್ಯಾಯತೀರ್ಥ, ಜೈನಶಾಸ್ತ್ರವಿಶಾರದ ಎ. ಶಾಂತಿರಾಜಶಾಸ್ತ್ರಿಗಳವರು	ಪರದೇಶಕ್ಕೆ ರೂ. ೬-೦-೦
ಖಂಡಲ ೧	ಮೈಸೂರು. ಮಹಾವೀರಶಕ ೨೪೫೯ ಆಶ್ವಯುಜ. ಇಸವಿ ೧೯೩೩ ಸಪ್ಟಂಬರ್.	ಕಿರಣ ೫

ಆಶ್ರಯದಾತರು

ಸ್ವಸ್ತಿಶ್ರೀಚಾರುಕೀರ್ತಿಪಂಡಿತಾಚಾರ್ಯವರ್ಯಸ್ವಾಮಿಗಳವರು, ಶ್ರವಣಬೆಳ್ಗೊಳ.

ಸ್ವಸ್ತಿಶ್ರೀಚಾರುಕೀರ್ತಿಪಂಡಿತಾಚಾರ್ಯವರ್ಯಸ್ವಾಮಿಗಳವರು, ಮೂಡಬಿದುರೆ.

ಶ್ರೀಮಾನ್ ಮಂಜಯ್ಯ ಹೆಗ್ಗಡೆಯವರು, ಧರ್ಮಸ್ಥಳ.


ಜೈನಧರ್ಮಭೂಷಣ ಶ್ರೀ. ಕೃಷ್ಣಯ್ಯಗೌಡರು. ಅನಂತಕೃಷ್ಣಪುರ. ವೈನಾಡು.

ಪ್ರಾಣಿದಯಾಜ್ಞಾನಪ್ರಸಾರಕ ಸಂಘ, ದಾವಣಗೆರೆ.

ಪ್ರಾಣಿದಯಾಪ್ರಚಾರಕ ಸಂಘ, ತುಮಕೂರು.

ವರ್ಧಮಾನ ಪವರ್ ಪ್ರೆಸ್, ಮೈಸೂರು

ವಿವೇಕಾಭ್ಯುದಯ : ಮೊದಲ ವರ್ಷದ ಮುಖಪುಟ




ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿಗಳು



ಶ್ರೀ ಎ.ಆರ್. ನಾಗರಾಜ್
ಕಾರ್ಯಾಧ್ಯಕ್ಷರು
ಶತಮಾನೋತ್ಸವ ಸಮಿತಿ



ಶ್ರೀ ಎಸ್. ನಾಗಕುಮಾರ್
ಕಾರ್ಯದರ್ಶಿ
ಶತಮಾನೋತ್ಸವ ಸಮಿತಿ
ಧರ್ಮದರ್ಶಿ




ಶ್ರೀ. ಹಾ. ಬ್ರ. ದೇವೇಂದ್ರಸ್ವಾಮಿ
ಸಹ-ಕಾರ್ಯದರ್ಶಿ
ಶತಮಾನೋತ್ಸವ ಸಮಿತಿ



ಶ್ರೀ ವೈ.ಎಸ್. ರಾಜೇಂದ್ರ ಕುಮಾರ್
ಕೋಶಾಧಿಕಾರಿ
ಶತಮಾನೋತ್ಸವ ಸಮಿತಿ



ಶ್ರೀ ಎಸ್. ಜಿತೇಂದ್ರಕುಮಾರ್
ವ್ಯವಸ್ಥಾಪಕ ಧರ್ಮದರ್ಶಿ



ಡಾ. ಎಸ್. ಪ್ರಸನ್ನಕುಮಾರ್
ಧರ್ಮದರ್ಶಿ



ಶ್ರೀ ಎಸ್.ಜಿ. ಗುಣವರ್ಮ
ಧರ್ಮದರ್ಶಿ



ಶ್ರೀ ಜಿ.ಪಿ. ನಾಗೇಂದ್ರ ಪ್ರಸಾದ್
ಧರ್ಮದರ್ಶಿ



ಡಾ. ಎಂ.ಎ. ಜಯಚಂದ್ರ
ಸಂಪಾದಕರು : ಶಾಂತಿಶ್ರೀ

ಸಂದೇಶಗಳು



P. Venkatasubbaiah
Governor of Karnataka

Raj Bhavan
Bangalore - 560 001

9th June 1989

Respected Swamiji,

Thank you for your kind letter of 17th May inviting me to be the Chief Guest at the concluding function of the birth Centenary Celebrations of Panditarathna Late Sri A. Shanthiraja Shastry.

It would have been my privilege to participate in the function as Sri A. Shanthiraja Shastry was a great scholar whose contribution to the Kannada literature is invaluable, but for certain exigencies I regret to do so.

However. I convey my best wishes to the organising committee for success of the validictory function.

With profound pranamas,
P. Venkatasubbaiah
Governor

His Holiness Sri Charukeerthi
Bhattaraka Swamiji,
C/o Akhila Karnataka Panditharatna
A. Shanthiraja Shastri Birth Centenary
Celebrations Samithi,
Bangalore–560 082

R. R. Diwakar

Sri Arvind Krupa
233, Sadashiv Nagar
BANGALORE – 560 080

24–1–1989

Dear Sir,

I am in receipt of your kind letter. Let the celebrations inspire the younger generation to serve the cause of Ahimsa in all its aspects and add to the glory of those who have dedicated their live in one form or the other to the Evolution of the Human Spirit to live in Peace and Harmony with each other.

Yours Sincerely,
R. R. DIWAKAR

ಬಿ. ಡಿ. ಜತ್ತಿ ಬಿ.ಎ.,ಎಲ್.ಎಲ್.ಬಿ.

"ಶಿವಾನಂದ"
224, ರಮಣಮಹರ್ಷಿ ರಸ್ತೆ
ಬೆಂಗಳೂರು - 560 080
ಫೋನ್ : 349999

29–4–1989

ಶ್ರೀ ಶಾಂತಿರಾಜಶಾಸ್ತ್ರಿಗಳ ನೂರರ ಸವಿನೆನಪಿಗಾಗಿ 'ಶತಮಾನೋತ್ಸವ ಸ್ಮರಣ ಸಂಪುಟ' ಒಂದನ್ನು ಹೊರತರಲು ನಿರ್ಣಯ ಮಾಡಿದುದು ಸ್ತುತ್ಯಾರ್ಹವಾಗಿದೆ. ಇವರು ಸುಮಾರು 52 ಗ್ರಂಥಗಳನ್ನು ಮತ್ತು ನೂರಾರು ಲೇಖನಗಳನ್ನು ಕನ್ನಡ ಜನತೆಗೆ ನೀಡಿದ್ದಾರೆ. ಇವರ ಕನ್ನಡ ಸಾಹಿತ್ಯ ಸೇವೆ ಅಪಾರವಾಗಿದೆ.

ತಾವು ಏರ್ಪಡಿಸಿರುವ ಸಮಾರಂಭವು ಯಶಸ್ವಿಯಾಗಲಿ ಮತ್ತು ತಾವು ಹೊರತರಲಿರುವ 'ಶತಮಾನೋತ್ಸವ ಸ್ಮರಣ ಸಂಪುಟ'ವು ಒಂದು ಉತ್ತಮ ಗ್ರಂಥವಾಗಲಿ ಎಂದು ಹಾರೈಸುವೆ.

ತಮ್ಮ,
ಬಿ. ಡಿ. ಜತ್ತಿ

Kadidal Manjappa

7, Langford Road,
BANGALORE - 560 025

13ನೇ ಜೂನ್ 1989

ಪಂಡಿತರತ್ನ ಎರ್ತೂರು ಶಾಂತಿರಾಜ ಶಾಸ್ತ್ರಿಗಳ ಜನ್ಮ ಶತಮಾನೋತ್ಸವವನ್ನು ಆಚರಿಸುವುದಾಗಿ ತಿಳಿದು ಸಂತೋಷವಾಯಿತು. ಶತಮಾನೋತ್ಸವವು ಯಶಸ್ವಿಯಾಗಿ ನಡೆಯಲೆಂದು ಹಾರೈಸುತ್ತೇನೆ.

ಇತಿ ನಿಮ್ಮ ವಿಶ್ವಾಸಿ,
ಕಡಿದಾಳ್ ಮಂಜಪ್ಪ

ಪ್ರೊ॥ ಹಾ. ಮಾ. ನಾಯಕ

ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ
ಮೈಸೂರು – 6

ಮೇ 5, 1989

ಪ್ರಿಯಮಿತ್ರರೆ,

ಕೀರ್ತಿಶೇಷರಾದ ಎರ್ತೂರು ಶಾಂತಿರಾಜಶಾಸ್ತ್ರಿಗಳ ನೂರರ ನೆನಪಿನ ಸಂಪುಟವೊಂದು ಪ್ರಕಟವಾಗುತ್ತದೆಂದು ತಿಳಿದು ನನಗೆ ತುಂಬ ಸಂತೋಷವಾಯಿತು. ಕೆಲವರು ಬಿರುದುಗಳಿಂದ ಶೋಭಿತರಾಗುತ್ತಾರೆ; ಇನ್ನು ಕೆಲವರಿಂದ ಬಿರುದುಗಳೇ ಶೋಭಾಯಮಾನವಾಗುತ್ತದೆ. ಶಾಂತಿರಾಜಶಾಸ್ತ್ರಿಗಳು ಈ ಎರಡನೆಯ ವರ್ಗಕ್ಕೆ ಸೇರಿದವರು. ಅವರು ನಿಜವಾದ ಅರ್ಥದಲ್ಲಿ 'ಪಂಡಿತರತ್ನ'ರು, ಅವರು ಮಾಡಿಹೋಗಿರುವ ವಿದ್ವತ್ತಿನ ಕೆಲಸವೇ ಅವರ ನೆನಪಿನ ಸ್ಮಾರಕ!

ನೀವು ಪ್ರಕಟಿಸಲಿರುವ ನೆನಪಿನ ಸಂಪುಟ ಶಾಸ್ತ್ರಿಗಳ ಜೀವನ, ಸಾಧನೆಗಳಿಗೆ ಅನುಗುಣವಾಗಿರಲೆಂದೂ, ಅದಕ್ಕೆ ಆಕರ ಗ್ರಂಥದ ಸ್ವರೂಪ ಬರಲೆಂದೂ ಹಾರೈಸುತ್ತೇನೆ.

ಶುಭಾಶಯಗಳೊಡನೆ,

ನಿಮ್ಮ ವಿಶ್ವಾಸದ
ಹಾ. ಮಾ. ನಾಯಕ

ಜಿ. ಎಸ್. ಸಿದ್ಧಲಿಂಗಯ್ಯ
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು – 560 018

26–4–1989

ಮಾನ್ಯರೆ,

ಆಸ್ಥಾನ ಮಹಾವಿದ್ವಾನ್ ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿಗಳ ಜನ್ಮ ಶತಾಬ್ದಿ ಸಂದರ್ಭದಲ್ಲಿ 'ಶತಮಾನೋತ್ಸವ ಸ್ಮರಣ ಸಂಪುಟ'ವನ್ನು ಹೊರತರುತ್ತಿರುವುದು ಸಂತೋಷದ ಸಂಗತಿ. ಕನ್ನಡ ನಾಡಿನ ಪ್ರಾತಃಸ್ಮರಣೀಯರಲ್ಲಿ ಒಬ್ಬರಾದ ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿಗಳು ಕನ್ನಡ ನಾಡು ನುಡಿಗೆ ಅಪಾರ ಸೇವೆಯನ್ನು ಸಲ್ಲಿಸಿದ್ದಾರೆ. ಅವರ 'ಮಹಾಪುರಾಣ' ಕಾರ್ಯ ಮರೆಯಲಾಗದ್ದು.

ಕನ್ನಡ ಸಾಹಿತ್ಯ ಪರಿಷತ್ತಿಗೂ ಅವರಿಗೂ ಇದ್ದ ಅರ್ಥಪೂರ್ಣ ಸಂಬಂಧವನ್ನು ಜ್ಞಾಪಿಸಿಕೊಂಡಾಗ ಅದು ನಮ್ಮ ಪಾಲಿಗೆ ಹೆಮ್ಮೆಯ ವಿಷಯ. ಇಂತಹ ವಿದ್ವಾಂಸರ ಪುಣ್ಯ ಸ್ಮರಣೆಗೆ ಸ್ಮರಣ ಸಂಪುಟವನ್ನು ತರುತ್ತಿರುವ ಸಂದರ್ಭದಲ್ಲಿ ಇಡೀ ಕನ್ನಡ ಜನತೆಯ ಪರವಾಗಿ, ಪರಿಷತ್ತಿನ ಪರವಾಗಿ ಹೃತ್ಪೂರ್ವಕ ಯಶಸ್ಸನ್ನು ಕೋರುತ್ತೇನೆ. ಒಳ್ಳೆಯ ಕೆಲಸ ಮಾಡುತ್ತಿದ್ದೀರಿ. ಒಳ್ಳೆಯದಾಗಲಿ.

ತಮ್ಮ ವಿಶ್ವಾಸಿ,
ಜಿ. ಎಸ್. ಸಿದ್ಧಲಿಂಗಯ್ಯ

ಡಾ|| ಸಿದ್ಧಯ್ಯ ಪುರಾಣಿಕ
ಅಧ್ಯಕ್ಷರು
58ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

"ಶ್ರೀಗಿರಿ", 4/5–ಎ, ಅಲಿಅಸ್ಕರ್ ರಸ್ತೆ
ಬೆಂಗಳೂರು – 560 052

3–6–1989

ಆಸ್ಥಾನ ಮಹಾವಿದ್ವಾನ್ ಪಂಡಿತರತ್ನಂ ಶ್ರೀ ಎ. ಶಾಂತಿರಾಜಶಾಸ್ತ್ರಿಗಳವರ ಜನ್ಮ ಶತಮಾನೋತ್ಸವವು ನಾಡಿನಲ್ಲೆಲ್ಲ ನಡೆಯುದು ನಿಜವಾಗಿಯೂ ಶ್ಲಾಘನೀಯವಾದುದು. ನಮ್ಮ ನಾಡಿನ ಸದಾಸ್ಮರಣೀಯ ಮಹಾಪಂಡಿತರಲ್ಲಿ ಒಬ್ಬರಾಗಿದ್ದ ಅವರು ಕನ್ನಡ ನುಡಿಗೆ ಸಲ್ಲಿಸಿದ ಸೇವೆ ಅಪಾರವಾದುದು. 52ಕ್ಕೂ ಮಿಕ್ಕಿ ಮೌಲಿಕ ಕೃತಿಗಳು, ನೂರಾರು ವಿದ್ವತ್ಪೂರ್ಣ ಲೇಖನಗಳು, ಸಾವಿರಾರು ಭಾಷಣಗಳು ! ನಿಜಕ್ಕೂ ಅದ್ಭುತ ಸಾಧನೆಯಿದು.

ಅವರಿಂದ ಜ್ಞಾನವನ್ನು ಪಡೆದ, ವಿದ್ಯಾಮೃತವನ್ನು ಕುಡಿದ ಶಿಷ್ಯರೆಷ್ಟೋ, ಶ್ರೋತೃಗಳೆಷ್ಟೋ, ಸ್ನೇಹಿತರೆಷ್ಟೋ ! ಹನ್ನೊಂದು ಸಾವಿರ ಪುಟಗಳಲ್ಲಿ ಹರಹಿರುವ ಅವರ ವಾಙ್ಮಯ ಕನ್ನಡದ ಅಮೂಲ್ಯ ಆಸ್ತಿ. ಆ ಆಸ್ತಿಗೆ ವಾರಸುದಾರರಾದ ನಾವು ಅವರನ್ನು ನೆನೆಯುವುದು ನಮ್ಮ ಪವಿತ್ರ ಕರ್ತವ್ಯ. ಶ್ರೀ ಶಾಸ್ತ್ರಿಗಳವರ ಸ್ಮರಣೆಯಿಂದ ನಮ್ಮಲ್ಲಿ ವಿದ್ವತ್ತಿನ ಮಹತ್ವ ಮೂಡಲಿ !

ಸಿದ್ಧಯ್ಯ ಪುರಾಣಿಕ

ಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯ ಮಹಾಸ್ವಾಮಿಜಿ
ಶ್ರೀ ಹೊಂಬುಜ ಜೈನಮಠ
ಅಂಚೆ : ಹೊಂಬುಜ – 577 436

ಶುಭ ಸಂದೇಶ

ಪಂಡಿತರತ್ನ ಎತ್ತೂರು ಶಾಂತಿರಾಜಶಾಸ್ತ್ರಿಗಳ ಜನ್ಮಶತಮಾನೋತ್ಸವ ಆಚರಣೆಯಂಗವಾಗಿ ನಾಡಿನಾದ್ಯಂತ ಹಲವಾರು ಕಾರ್ಯಕ್ರಮಗಳನ್ನು ನೆರವೇರಿಸಿದ ನಂತರ ಇದೀಗ ಸಮಾರೋಪ ಸಮಾರಂಭವೊಂದನ್ನು ಏರ್ಪಡಿಸಲು ಯೋಜಿಸಿರುವ ವಿಷಯ ಶ್ಲಾಘನೀಯವಾದುದು.

ಕನ್ನಡ ನಾಡಿನಲ್ಲಿ ಹುಟ್ಟಿ, ದೇಶದ ಮಹೋನ್ನತ ವಿದ್ಯಾಲಯಗಳಲ್ಲಿ ಅಧ್ಯಯನವನ್ನು ನಡೆಸಿ ತಮ್ಮ ಸುಮಾರು ಐವತ್ತಕ್ಕಿಂತಲೂ ಹೆಚ್ಚು ಗ್ರಂಥಗಳಿಂದಲೂ, ನೂರಾರು ಲೇಖನಗಳಿಂದಲೂ ಜೈನ ವಾಙ್ಮಯ ಕ್ಷೇತ್ರಕ್ಕೆ ಅಪೂರ್ವ ಕೊಡುಗೆಯನ್ನು ಕೊಟ್ಟಿರುವ ಶ್ರೀ ಎತ್ತೂರು ಶಾಂತಿರಾಜ ಶಾಸ್ತ್ರಿಗಳ ಬದುಕು ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹದು. ಭೌತಿಕವಾಗಿ ಅವರಿಂದು ನಮ್ಮ ಮುಂದೆ ಇಲ್ಲವಾದರೂ ತಮ್ಮ ಅಪೂರ್ವ ಕೃತಿಗಳ ಮೂಲಕ ಅವರು ಅಜರಾಮರವಾಗಿ ಉಳಿಯುವರು. ಭಗವತ್ ಶ್ರೀ ಜಿನಸೇನ ಗುಣಭದ್ರಾಚಾರ್ಯರ ಸಂಸ್ಕೃತ ಮಹಾಪುರಾಣಕ್ಕೆ ಅವರು ಬರೆದ ಕನ್ನಡ ಟೀಕೆಯು ಭಾರತೀಯ ಸಾಹಿತ್ಯಲೋಕದಲ್ಲಿ ಧ್ರುವ ತಾರೆಯಂತೆ ಸದಾಕಾಲ ಮಿನುಗುತ್ತಿರುವುದರಲ್ಲಿ ಸಂದೇಹವಿಲ್ಲ.

ಶೀಘ್ರದಲ್ಲಿಯೇ ನೆರವೇರಲಿರುವ ಜನ್ಮಶತಮಾನೋತ್ಸವದ ಸಮಾರೋಪ ಸಮಾರಂಭವೂ ಯಶಸ್ವಿಯಾಗಿ ನೆರವೇರಲೆಂದೂ, ಆ ಸುಸಂದರ್ಭದಲ್ಲಿ ಪ್ರಕಟವಾಗಲಿರುವ ಸ್ಮರಣ ಸಂಚಿಕೆಯು ಸರ್ವಾಂಗ ಸುಂದರವಾಗಿ ಪ್ರಕಟಗೊಂಡು ಜನಮನವನ್ನು ಆಕರ್ಷಿಸಲೆಂದೂ ಭಗವಾನ್ ಶ್ರೀ ಪಾರ್ಶ್ವನಾಥಸ್ವಾಮಿ ಮತ್ತು ಶ್ರೀ ಮಹಾದೇವಿ ಸನ್ನಿಧಿಯಲ್ಲಿ ಪ್ರಾರ್ಥಿಸುತ್ತಾ ಈ ಮೂಲಕ ಆಶೀರ್ವದಿಸಲಾಗಿದೆ.

ಭದ್ರಂ ಭೂಯಾತ್ ! ವರ್ಧತಾಂ ಜಿನಶಾಸನಂ !!

ಇತಿ ಶುಭಾಶೀರ್ವಾದಗಳು
ಪರಮಪೂಜ್ಯ ಜಗದ್ಗುರು ಸ್ವಸ್ತಿ ಶ್ರೀ ಶ್ರೀ ಶ್ರೀ
ಶ್ರೀ ಮದ್ದೇವೇಂದ್ರ ಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ
ಮಹಾಸ್ವಾಮಿಗಳವರು

ಶ್ರೀ ಲಲಿತಕೀರ್ತಿ ಸ್ವಾಮಿಜಿ

ಶ್ರೀ ಜೈನಮಠ
ಕಾರ್ಕಳ - 574 104
ಕರ್ನಾಟಕ (ಭಾರತ)

23-4-1989

ಶು ಭ ಸಂ ದೇ ಶ

ಶ್ರೀಮಾನ್ ಧರ್ಮಾನುರಾಗಿಗಳಾದ ಎಸ್. ಜಿತೇಂದ್ರಕುಮಾರ್ ಇವರಿಗೆ ಸಹೋದರರಿಗೆ "ಸದ್ಧರ್ಮವೃದ್ಧಿರಸ್ತು"ಎಂದು ಹರಸಿ ಕಳುಹಿಸುವ ನಿರೂಪ.

ನೀವು ನಿಮ್ಮ ಪೂಜ್ಯ ತಂದೆಯವರಾದ ಸ್ವ॥ ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿಗಳ ಜನ್ಮ ಶತಾಬ್ದಿ ಮಹೋತ್ಸವವನ್ನು ನಾಡಿನ ನಾನಾ ಕಡೆಗಳಲ್ಲಿ ತಮ್ಮ ಅನುಜರೊಂದಿಗೆ ಸೇರಿ ಬಹು ವೈಭವದೊಂದಿಗೆ ಗ್ರಂಥಪ್ರಕಾಶನದ ಮೂಲಕ ನಡೆಸಿ, ಕೃತಕೃತ್ಯರೂ ಆದರ್ಶ ಪುತ್ರರೂ ಎಂದೆನಿಸಿದ್ದೀರಿ.

ನೀವುಗಳು ನಿಮ್ಮ ಪ್ರಾತಃಸ್ಮರಣೀಯ ಪೂಜ್ಯ ಸ್ವರ್ಗವಾಸಿ ಪಿತೃವರ್ಯರಾದ ಶ್ರೀ ಪಂಡಿತ ರತ್ನ ಎ. ಶಾಂತಿರಾಜಗಳು ಜೈನಧರ್ಮ ಹಾಗೂ ಸಾಹಿತ್ಯಕ್ಕೆ ಸಲ್ಲಿಸಿದ ಅಭೂತಪೂರ್ವ ಸೇವೆಯು ಸಮಾಜ ಬಾಂಧವರ ಮನೋ-ಮಂದಿರದಲ್ಲಿ ಚಿರಸ್ಥಾಯಿಯಾಗಿ ನೆಲೆಗೊಳ್ಳುವಂತೆ ಮಾಡಿದ್ದೀರಿ, ಸ್ವರ್ಗೀಯ ಶಾಸ್ತ್ರಿಗಳು ತಮ್ಮ ಇಡೀ ಜೀವನವನ್ನೇ ಸಾಹಿತ್ಯ ಸೇವೆಗಾಗಿ ಅರ್ಪಿಸಿ, ಸಫಲ ಸಾಹಿತ್ಯಕಾರರೆಂದು ಖ್ಯಾತಿ ಪಡೆದಿದ್ದಾರೆ.

ಸತ್ಪುತ್ರರಾದ ನಿಮ್ಮ ದಿವಂಗತ ತಂದೆಯವರು ನಿಮ್ಮ ಪಿತೃಭಕ್ತಿಯಿಂದ ಪರಿತೃಪ್ತರಾಗಿದ್ದಾರೆಂಬುದರಲ್ಲಿ ಸಂಶಯವಿಲ್ಲ. ಭಗವಂತನು ನಿಮಗೆಲ್ಲ ಯಾವಾಗಲೂ ಸಮೃದ್ಧಿಯನ್ನು ಕರುಣಿಸಿ, ಸಮಾಜ ಹಾಗೂ ಸಾಹಿತ್ಯ ಸೇವೆ ಎಸಗುವಂತೆ ಶಕ್ತಿ ನೀಡಲೆಂದು ಹಾರ್ದಿಕವಾಗಿ ಆಶೀರ್ವಾದ ನೀಡುತ್ತೇವೆ.

"ಭದ್ರಂಭೂಯಾತ್ ಇತ್ಯಾಶೀಃ"

ಸ್ವಸ್ತಿಶ್ರೀ ಲಲಿತಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ
ಸ್ವಾಮಿಜಿಯವರು
ಶ್ರೀ ಜೈನಮಠ ದಾನಶಾಲೆ, ಕಾರ್ಕಳ. ದ. ಕ.

ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕ ಸ್ವಾಮಿಜಿ

ಶ್ರೀ ಸಿಂಹನಗದ್ದೆ ಬಸ್ತಿಮಠ
ನರಸಿಂಹರಾಜಪುರ – 577 134
ಚಿಕ್ಕಮಗಳೂರು ಜಿಲ್ಲೆ
(ಕರ್ನಾಟಕ)

9–5–1989

ಶು ಭ ಸಂ ದೇ ಶ

ಶ್ರೀಯುತ ಎತ್ತೂರು ಶಾಂತಿರಾಜಶಾಸ್ತ್ರಿಗಳ ಜನ್ಮಶತಮಾನೋತ್ಸವ ಸಮಿತಿಯವರಿಗೆ ಶುಭಾಶೀರ್ವಾದಗಳು.

ತಾವುಗಳು ಕೈಗೊಂಡ ಕಾರ್ಯ ಯಶಸ್ವಿಯಾಗಿ ನಡೆದು ಈಗ ಮುಕ್ತಾಯ ಹಂತದಲ್ಲಿ ಸ್ಮರಣ ಸಂಚಿಕೆ ಬಿಡುಗಡೆ ಮಾಡುವ ಯೋಜನೆ ಕೈಗೊಂಡಿರುವುದು ತುಂಬಾ ಆನಂದವನ್ನುಂಟು ಮಾಡಿತು.

ಸಮಾಜದಲ್ಲಿ ವಿದ್ವಾಂಸರ ಗೌರವ ಸಲ್ಲಬೇಕಾದುದು ಅವಶ್ಯ, ಅದೂ ಕಂಡು ಕೊಂಡಂತಾಯಿತು.

ಈ ಸಮಿತಿಯಿಂದ ಮಹಾಪುರಾಣವೂ ಮುದ್ರಿಸಿ ಹೊರಬರುವುದು ಅಗತ್ಯವೆಂದು ನಮ್ಮ ಭಾವನೆ. ಅಂತೆಯೂ, ಸಾಧ್ಯವಾದ ಸಮಾಜ ಸೇವಾ ಕಾರ್ಯವನ್ನು ಈ ಸಮಿತಿ ಮುಂದುವರಿಸಿ ಕೊಂಡು ಹೋಗಲು ಶಕ್ತಿಯನ್ನು ಪಡೆಯಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತಾ ಆಶೀರ್ವಾದ ಪತ್ರ ಕಳಿಸುತ್ತಿದ್ದೇವೆ.

ಇತಿ ಆಶೀರ್ವಾದಗಳು.

ಸ್ವಸ್ತಿಶ್ರೀ ಶಾಂತಿಭೂಷಣ ಲಕ್ಷ್ಮೀಸೇನ ಸ್ವಾಮಿಜಿ
ನರಸಿಂಹರಾಜಪುರ

ಸದಾ ಸ್ಮರಣೀಯರಾದ ಶಾಂತಿರಾಜ ಶಾಸ್ತ್ರಿಗಳು

ಕನ್ನಡದ ಆದಿಕವಿ ಪಂಪ ಸಂಸ್ಕೃತದ ಭಾಷಾಮೋಹವನ್ನು ಬಿಟ್ಟು ಕನ್ನಡ ನಾಡು–ನುಡಿಗೆ ಮಹತ್ತರ ಸೇವೆಯನ್ನು ಸಲ್ಲಿಸಿದ್ದಕ್ಕಾಗಿ ಸಾವಿರವರ್ಷ ಕಳೆದರೂ ಪಂಪ ಸದಾ ಸ್ಮರಣೀಯ. ಪಂಪನ ಸೇವೆ ಇತರರಿಗೆ ಮಾರ್ಗದರ್ಶನವಾಗಿ ಅನೇಕರು ಕನ್ನಡದಲ್ಲಿ ಸಾಹಿತ್ಯ ರಚಿಸಿದರು. ಪಂಪನು ಹಾಕಿದ ಗೆರೆ ದಾಟಿದವರು ಇಲ್ಲವೆಂದು ಹೇಳಬಹುದು. ಶ್ರೀ ಎ. ಶಾಂತಿರಾಜಶಾಸ್ತ್ರಿಗಳವರು ಕನ್ನಡ ನುಡಿ ಸೇವೆಮಾಡಿ ಪಂಪನನ್ನು ಅನುಸರಿಸಿದರು. ನಾಡು ನುಡಿಯ ಸೇವೆಯೇ ಜೀವನದ ಗುರಿಯಾಗಿಟ್ಟುಕೊಂಡು ಸಾಹಿತ್ಯಸೇವೆ ಸಲ್ಲಿಸಿದವರಲ್ಲಿ ಪಂ. ಎ. ಶಾಂತಿರಾಜ ಶಾಸ್ತ್ರಿಗಳವರು ಇತ್ತೀಚಿನ ನೂರು ವರ್ಷಗಳ ಇತಿಹಾಸದಲ್ಲಿ ಅಗ್ರಗಣ್ಯರು ಎಂದರೆ ತಪ್ಪಾಗಲಾರದು. ಮಹಾಪುರಾಣವನ್ನು ಕನ್ನಡಕ್ಕೆ ಅನುವಾದಿಸಿದ ಕೀರ್ತಿ ಮಾತ್ರವಲ್ಲ, ಜೈನ ಧರ್ಮದ ಅನೇಕ ಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಕನ್ನಡದ ಜನತೆಗೆ ಮಹದುಪಕಾರ ಮಾಡಿರುತ್ತಾರೆ. ಜೀವನದುದ್ದಕ್ಕೂ ಲೇಖನಿಯನ್ನು ಬಿಡದೆ ಸೇವೆ ಸಲ್ಲಿಸಿದ ಶ್ರೀ ಶಾಸ್ತ್ರಿಗಳಿಗೆ ಕನ್ನಡದ ಜನತೆ ಹೇಗೆ ಕೃತಜ್ಞತೆ ಹೇಳಬೇಕೋ ತಿಳಿಯದಾಗಿದೆ.

ಎರ್ತೂರು ಶ್ರೀ ಶಾಂತಿರಾಜ ಶಾಸ್ತ್ರಿಗಳು ಅತಿಶಯಪೂರಿತ ಸೃಜನಾತ್ಮಕ ಗ್ರಂಥರಚನೆ, ಗ್ರಂಥ ಸಂಪಾದನೆ ಹಾಗೂ ಗ್ರಂಥಾವಲೋಕನದಲ್ಲಿ ಅತಿಶಯವಾದ ಅಭಿರುಚಿಯನ್ನೇ ಹೊಂದಿದ್ದ ವಿದ್ಯಾಪುರುಷರು. ವಿದ್ಯಾ ಸಂಪನ್ನತೆ ಹಾಗೂ ಕಾರ್ಯ ಶೀಲತೆ ಶ್ರೀ ಶಾಸ್ತ್ರಿಗಳವರಲ್ಲಿ ಸಂಗಮಗೊಂಡಿತ್ತು. ಜೈನ ಧರ್ಮದ ಪ್ರಚಾರ–ಪ್ರಸಾರ ಅಭ್ಯುತ್ಥಾನದಲ್ಲಿ ಶ್ರೀ ಶಾಸ್ತ್ರಿಗಳವರು ಸಲ್ಲಿಸಿದ ಸೇವೆ ನಾಡಿನ ಜನ-ಮನಗಳಲ್ಲಿ ಅಚ್ಚಳಿಸದಂತಹದ್ದು. ಬಾಳನ್ನು ಶ್ರೀಮಂತಗೊಳಿಸುವ ಅಂಶಗಳು ವ್ಯಕ್ತಿಯ ವ್ಯಕ್ತಿತ್ವದಲ್ಲಿ ಹೇಗೆ ಪ್ರಕಟವಾಗುತ್ತವೆ ಎನ್ನುವುದನ್ನು ತೋರಿಸುವುದರ ಜೊತೆಗೆ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಸಜ್ಜನಿಕೆಯ ಸಾಕಾರ ಮೂರ್ತಿಯಾದ ಶ್ರೀ ಶಾಸ್ತ್ರಿಗಳವರು ಕನ್ನಡ ನುಡಿಗೇ ಹೊಸದಾಗಿ ಬಂದ ಸರಳ ರೀತಿಯಲ್ಲಿ ಅನುವಾದಿಸಿದ 'ಮಹಾಪುರಾಣ' ಹಿಂದೆ ಹಾಗೂ ಮುಂದೆಂದೂ ಆಗಿ ಆಗದ ಮಹಾಕೃತಿ ಅಷ್ಟೇ ಅಲ್ಲ, ಮೇರುಕೃತಿ. ಇದು ಅವರ ನಾಡಿಗೆ ನೀಡಿದ ಅಪೂರ್ವ ಹಾಗೂ ವಿಶಿಷ್ಟ ಕೊಡುಗೆ. ಬದುಕಿನ ಶುಚಿ ಮತ್ತು ಸಾರ್ಥಕತೆ, ಉತ್ಸಾಹ ಹಾಗೂ ಗೆಲುವುಗಳನ್ನು ಎಂದೂ ಕಳೆದುಕೊಂಡವರಲ್ಲ. ಸದಾ ಸೃಜನ ಶೀಲತ್ವದಲ್ಲಿ ಬದುಕಿ ಬಾಳಿದ ಇವರು ಐವತ್ತಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದರು. ಲೇಖಕ ಹಾಗೂ ವಿಮರ್ಶಕರಾಗಿ ಸಾಹಿತ್ಯ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಧ್ರುವತಾರೆಯಾಗಿದ್ದಾರೆ.

ಶ್ರೀ ಶಾಸ್ತ್ರಿಗಳವರು ಬಹುಮುಖ ಪ್ರತಿಭೆಯಿಂದ ಜೀವನದ ಧ್ಯೇಯವನ್ನು ಉಜ್ವಲಗೊಳಿಸಿದರು.

ಸ್ವಸ್ತಿಶ್ರೀ ಕರ್ಮಯೋಗಿ ಚಾರುಕೀರ್ತಿ ಸ್ವಾಮಿಜಿ
ಶ್ರವಣಬೆಳಗೊಳ ಮಠ



ಸನ್ಮಾನ-ಪ್ರಶಸ್ತಿ ಪತ್ರಗಳು

ಪ್ರಕಟಣೆಗಳು-ಘಟನೆಗಳು

ಪ್ರಶಸ್ತಿ ಪತ್ರಿಕೆ

ಶ್ರೀರಸ್ತು

ಸ್ವಸ್ತಿಶ್ರೀ ಮದ್ರಾಯ ರಾಜಗುರು ಭೂಮಂಡಲಾಚಾರ್ಯವರ್ಯ ಮಹಾವಾದವಾದೀಶ್ವರರಾಯ ವಾದಿ ಪಿತಾಮಹಾ ಸಕಲವಿದ್ವಜ್ಜನ ಸಾರ್ವಭೌಮಾದ್ಯನೇಕ ಬಿರುದಾವಲೀ ವಿರಾಜಮಾನ ಶ್ರೀಮನ್ನಿಜ ಘಟಿಕ ಸ್ಥಾನ ಡಿಲ್ಲಿ ಕನಕಾದ್ರಿ ಶ್ವೇತಪುರ ಸುಧಾಪುರ ಸಂಗೀತಪುರ ಕ್ಷೇಮವೇಣುಪುರ ಶ್ರೀಮದ್ಬೆಳುಗುಳ ಸಿದ್ಧ ಸಿಂಹಾಸನಾಧೀಶ್ವರ ಶ್ರೀಮದಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಂಗಳವರು.

ಅಸ್ಮತ್ಪ್ರಿಯಾಗ್ರ ಶಿಷ್ಯರಾದ ಆಸ್ಥಾನವಿದ್ವಾನ್ ನ್ಯಾಯತೀರ್ಥ ಎ. ಶಾಂತಿರಾಜ ಶಾಸ್ತ್ರಿಗಳಿಗೆ ಈ ಮೂಲಕ ಬಹು ಹರ್ಷದಿಂದ ಆಶೀರ್ವದಿಸಿ ಸನ್ನಿಧಾನದಿಂದ ಅನುಗ್ರಹಿಸುವ ಪ್ರಶಸ್ತಿ ಪತ್ರಿಕೆಯೆಂತೆಂದರೆ—

ನೀವು ಈಗ್ಗೆ ಸುಮಾರು ಐವತ್ತು ವರ್ಷಗಳಿಂದ ದೇಶವಿದೇಶಗಳಲ್ಲಿ ಬಹು ಶ್ರಮವಹಿಸಿ ಸಂಸ್ಕೃತ, ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ವಿದ್ಯಾಭ್ಯಾಸವನ್ನು ಮಾಡಿ ಸಂಸ್ಕೃತ ಕರ್ನಾಟಕ ಉಭಯ ಸಾಹಿತ್ಯಗಳಲ್ಲಿ ಪೂರ್ಣ ಪಾಂಡಿತ್ಯವನ್ನು ಸಂಪಾದಿಸಿ ಯಶೋವಂತರೂ ಸಮಾಜ ಗೌರವಪಾತ್ರರೂ ಆದ ವಿದ್ವನ್ಮಣಿಗಳಾಗಿ ರುವುದು ನಮಗೆ ಅತ್ಯಂತ ಸಂತೋಷದಾಯಕವಾಗಿರುತ್ತದೆ.

ನಿಮ್ಮ ಈ ಪಾಂಡಿತ್ಯವನ್ನು ನೀವು ಜೈನಧರ್ಮ ಪ್ರಭಾವನೆಗೂ ಜೈನಶಾಸ್ತ್ರ ಪ್ರಕಟನೆಗೂ ಅತಿಶಯ ಶ್ರದ್ಧೋತ್ಸಾಹಗಳಿಂದ ಉಪಯೋಗಿಸಿ ಜೈನ ಸಮಾಜಕ್ಕೆ ಮಹದುಪಕಾರವನ್ನು ಮಾಡುತ್ತಿರುವಿರಿ.

ನೀವು ಅನೇಕ ವರ್ಷಗಳಿಂದ ಬಹು ಶ್ರಮವಹಿಸಿ ಭಗವಜ್ಜಿನಸೇನಾಚಾರ್ಯಕೃತ ಮಹಾಪುರಾಣವನ್ನು ಮುನ್ನುಡಿ, ಶುದ್ಧವಾದ ಕರ್ಣಾಟಕ ಭಾಷೆಯಲ್ಲಿ ಭಾವಾರ್ಥ ಟಿಪ್ಪಣಿಗಳೊಡನೆ ಅತಿ ಸುಂದರವಾಗಿ ಪ್ರಕಟ ಮಾಡಿರುವಿರಿ.

ಈ ಪುರಾಣಗ್ರಂಥವನ್ನಲ್ಲದೆ ನೇಮಿಜಿನೇಶ ಸಂಗತಿ, ದ್ರವ್ಯಸಂಗ್ರಹ, ಪೂಜಾಸಾರಸಮುಚ್ಚಯ, ಶತಕತ್ರಯೀ, ಅನ್ಯಯೋಗವ್ಯವಚ್ಛೇದಿಕಾ ಮೊದಲಾದ ಇನ್ನೂ ಅನೇಕ ಗ್ರಂಥಗಳನ್ನು ಕನ್ನಡದಲ್ಲಿ ವ್ಯಾಖ್ಯಾನಗಳೊಡನೆ ಪ್ರಕಟಿಸಿ ಭಾಷಾ ಸೇವೆಯನ್ನೂ ಧರ್ಮಸೇವೆಯನ್ನೂ ಮಾಡಿರುವಿರಿ.

ನೀವು ಜೈನ ಸಮಾಜದ ಪತ್ರಿಕೆಯಾದ 'ವಿಶ್ವಬಂಧು'ವಿಗೆ ಜನ್ಮದಾತರಾಗಿ ಅದರ ಸಂಪಾದಕತ್ವದ ಮೂಲಕ ಜೈನಧರ್ಮ ಪ್ರಭಾವನೆಯನ್ನೂ ಜೈನ ಸಮಾಜಸೇವೆಯನ್ನೂ ವಿಶೇಷವಾಗಿ ಮಾಡಿರುವಿರಿ.

ನಿಮ್ಮ ಈ ಅನೇಕ ಕಾರ್ಯಗಳಿಂದ ನಾವು ಸಂತೋಷಪಟ್ಟು ಸುಪ್ರಸಿದ್ಧ ವಿದ್ವನ್ಮಣಿಗಳೂ ಜೈನ ಧರ್ಮ ಪ್ರಭಾವಕರೂ ಸಮಾಜಸೇವಾಸಕ್ತರೂ ಆದ ನಿಮಗೆ ನಮ್ಮ ಸಂತೋಷವನ್ನು ಪ್ರದರ್ಶಿಸುವುದಕ್ಕಾಗಿ ಈ ದಿವಸ ಇಲ್ಲಿ ಮೈಸೂರು ಜೈನ ಅಸೋಸಿಯೇಷನ್ ಸಂಘದವರು ಏರ್ಪಡಿಸಿರುವ ಈ ಜೈನ ಮಹಾಸಭೆಯಲ್ಲಿ

"ಜೈನಶಾಸ್ತ್ರ ವಿಶಾರದ"

ಎಂಬ ಪ್ರಶಸ್ತಿಯನ್ನು ಸನ್ನಿಧಾನದಿಂದ ಅನುಗ್ರಹಿಸಿರುತ್ತೇವೆ.

ಜೈನಧರ್ಮ ಪ್ರಭಾವ ಕಾರ್ಯವೂ ಜೈನ ಸಮಾಜ ಸೇವೆಯೂ ನಿಮ್ಮ ಮೂಲಕ ಇತೋಪ್ಯತಿಶಯ ವಾಗಿ ಚಿರಕಾಲ ನಡೆಯುವಂತೆ ಶ್ರೀಜಿನಶಾಸನ ದೇವತೆಗಳು ನಿಮಗೆ ದೀರ್ಘಾಯುರಾರೋಗ್ಯ ಭಾಗ್ಯಗಳನ್ನು ಅನುಗ್ರಹಿಸಲೆಂದು ನಾವು ಹಾರೈಸುತ್ತೇವೆ.

ಇತಿ ಭದ್ರಂ ಭೂಯಾತ್ ವರ್ಧತಾಂ ಜಿನಶಾಸನಂ

ತಾ. ೯–೨–೧೯೩೩ ಮೊಕ್ಕಾಂ : ಪುಲಿಯಾರ್ಮಲೆ

ಪ್ರಸಿದ್ಧ ಪತ್ರಿಕೆ

ಶ್ರೀ ಮಚ್ಚಾಮುಂಡಿಕಾಂಬಾ ಚರಣ ಸರಸಿಜದ್ವಂದ್ವ ಸೇವಾರೀಧುಣ ಸಮಸ್ತ ಭೂಮಂಡಲ ಮಂಡಪಾಯಮಾನ ನಿಖಿಲದೇಶಾವತಂಸ ಕರ್ಣಾಟಕ ಜನಪದ ಸಂಪದಧಿಷ್ಠಾನಭೂತ ಶ್ರೀಮನ್ಮಹೀಶೂರ ಮಹಾಸಂಸ್ಥಾನ ಮಧ್ಯ ದೇದೀಪ್ಯಮಾನ ನಿಖಿಲ ಕಲಾನಿಧಿ ಕುಲ ಕ್ರಮಾಗತ ರಾಜಕ್ಷಿತಿಪಾಲ ಪ್ರಮುಖ ನಿಖಿಲ ರಾಜಾಧಿರಾಜ ಮಹಾರಾಜ ಚಕ್ರವರ್ತಿ ಮಂಡಲಾನುಭೂತ ದಿವ್ಯರತ್ನ ಸಿಂಹಾಸನಾರೂಢ ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪ ಅಪ್ರತಿಮ ವೀರನರಪತಿ ಬಿರುದಂತೆಂಬರಗಂಡ ಲೋಕೈಕವೀರ ಯದುಕುಲಪಯಃ ಪಾರಾವಾರ ಕಲಾನಿಧಿಶಂಖ ಚಕ್ರಾಂಕುಶ ಕುಠಾರ ಮಕರ ಮತ್ಸ್ಯಶರಭ ಸಾಳ್ವ ಗಂಡಭೇರುಂಡ ಧರಣೀವರಾಹ ಹನುಮದ್ಗರೂಡ ಕಂಠೀರವಾದ್ಯನೇಕ ಬಿರುದಾಂಕಿತರಾದ ಕರ್ನಾಟಕ ಸಿಂಹಾಸನಾಧೀಶ್ವರಃ

ಶ್ರೀಮಜ್ಜಯ ಚಾಮರಾಜೇಂದ್ರ ಒಡೆಯರ್ ಬಹಾದೂರ್,

ಜಿ.ಸಿ.ಬಿ.ಜಿ.ಸಿ.ಎಸ್.ಐ. ಮಹಾಸ್ವಾಮಿಯವರು

ಶಾಲಿವಾಹನ ಶಕ ೧೮೬೯ನೆಯ ವ್ಯಯನಾಮ ಸಂವತ್ಸರದ ಆಷಾಢ ಬಹುಳ ಸಪ್ತಮೀ ಭಾನುವಾರ ದಲ್ಲು ವರ್ಧಂತಿ ಮಹೋತ್ಸವ ಪ್ರಯುಕ್ತವಾದ ದರ್ಬಾರಿನಲ್ಲಿ ನಮ್ಮ ಅನುಗ್ರಹಕ್ಕೆ ಪಾತ್ರರಾದ

ಬ್ರಂ : ಶ್ರೀ : ನ್ಯಾಯತೀರ್ಥ ಮಹಾವಿದ್ವಾನ್

ಎತ್ತೂರು ಶಾಂತಿರಾಜ ಶಾಸ್ತ್ರಿಗಳವರಿಗೆ

"ಪಂಡಿತರತ್ನ"

ಎಂಬ ಬಿರುದನ್ನು ತಕ್ಕಮರ್ಯಾದೆಗಳೊಡನೆ ದಯಂಪಾಲಿಸಿರುತ್ತೇವೆ.

ಸನ್ಮಾನ ಪತ್ರ

ಶ್ರೀರಸ್ತು

ಜೈನಶಾಸ್ತ್ರ ವಿಶಾರದ, ನ್ಯಾಯತೀರ್ಥ, ಪಂಡಿತರತ್ನಂ, ಮೈಸೂರು ಶ್ರೀಮನ್ಮಹಾರಾಜಾಸ್ಥಾನ ಮಹಾವಿದ್ವಾನ್ ಶ್ರೀವರ್ಧಾನ್ ಎ. ಶಾಂತಿರಾಜ ಶಾಸ್ತ್ರಿಗಳವರಿಗೆ.

ಬೆಂಗಳೂರಿನಲ್ಲಿರುವ ಅಖಿಲ ಕರ್ನಾಟಕ ವಿದ್ಯಾ ಸಂಸ್ಕೃತಿ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಅರ್ಪಿಸಿದ ಸನ್ಮಾನ ಪತ್ರ.

ಮಹಾಶಯರೇ,

ಕನ್ನಡ ಸಾಹಿತ್ಯವು ಆದಿಕಾಲದಿಂದಲೂ ಜೈನ ಕವಿಪಂಡಿತ ಪರಂಪರೆಯಿಂದ ಪೋಷಣೆಹೊಂದಿ ಪರಿಪುಷ್ಟವಾಗಿ ಬೆಳೆದುಬಂದಿವೆ ಎಂಬುದು ಸರ್ವವಿದಿತವಾದ ಸಂಗತಿಯಾಗಿದೆ. ಪಂಪ, ರನ್ನಾದಿ ಕವಿಪುಂಗವರೂ, ಕೇಶಿರಾಜ, ಭಟ್ಟಾಕಳಂಕ ಮೊದಲಾದ ಪಂಡಿತವರೇಣ್ಯರೂ, ಚಾಮುಂಡರಾಯನಂಥಾ ಕಲಾಪೋಷಕರೂ ಕನ್ನಡದ ಕೀರ್ತಿಯನ್ನು ಎತ್ತಿಹಿಡಿದು ಚಿರಸ್ಮರಣೀಯರಾಗಿ ಇಂದಿಗೂ ಕನ್ನಡಿಗರಿಗೆ ಮಾರ್ಗದರ್ಶಕರಾಗಿದ್ದಾರೆ. ಇಂಥ ಒಂದು ಪರಂಪರೆಯನ್ನು ಸಾರೋದ್ಧಾರವಾಗಿ ನಡೆಸಿಕೊಂಡು ಬರುವ ಕವಿಪಂಡಿತವರ್ಗವು ವಿರಳವಾಗುತ್ತಿರುವ ಈ ಕಾಲದಲ್ಲಿ ಅರ್ಧಶತಮಾನದಿಂದ ಜೈನ ಸಾಹಿತ್ಯ ಮತ್ತು ಧರ್ಮಗಳ ಸೇವೆಯನ್ನು ವಿವಿಧ ಕೃತಿಗಳಿಂದ ಮಾಡಿ ಅಪೂರ್ವ ಪಂಡಿತರನ್ನು ಸ್ಮರಣೆಗೆ ತರುತ್ತಿರುವ, ಉಭಯ ಭಾಷಾಸಾಹಿತ್ಯಗಳಲ್ಲಿ ಮಹಾವಿದ್ವಾಂಸರಾದ ತಮ್ಮಲ್ಲಿ ಕರ್ಣಾಟಕ ಮಹಾಜನರಿಗಿರುವ ಗೌರವ ಬುದ್ಧಿಯನ್ನೂ, ಅಭಿಮಾನವನ್ನೂ, ಈ ಸನ್ಮಾನ ಪತ್ರಮುಖೇನ ವ್ಯಕ್ತಪಡಿಸಲು ನಮಗೆ ದೊರೆತಿರುವ ಈ ಅವಕಾಶವನ್ನು ನಾವು ಒಂದು ಸುಯೋಗವೆಂದು ಭಾವಿಸಿದ್ದೇವೆ.

ಕನ್ನಡ ನಾಡಿನ ವಿದ್ವತ್ಪರಂಪರೆಗೆ ಸಹಜವಾಗಿರುವ ಉಭಯ ಭಾಷಾಪಾಂಡಿತ್ಯದ ಜೊತೆಗೆ ತಾವು ಆಧುನಿಕ ವಿಷಯಗಳಲ್ಲಿಯೂ ಪಾಂಡಿತ್ಯವನ್ನು ಸಂಪಾದಿಸಿ, ಸತತ ಪರಿಶ್ರಮದಿಂದಲೂ ಸೂಕ್ಷ್ಮವಿಮರ್ಶನಾ ಸಾಮರ್ಥ್ಯದಿಂದಲೂ ಪುರಾತನ ಸಂಸ್ಕೃತ ಕನ್ನಡ ಗ್ರಂಥಗಳನ್ನು ವ್ಯಾಖ್ಯಾನಗಳೊಡನೆ ಸಂಪಾದಿಸಿ ಪ್ರಕಟಪಡಿಸಿರುವಿರಲ್ಲದೆ ಸ್ವತಂತ್ರವಾಗಿಯೂ ಗ್ರಂಥ ರಚನೆ ಮಾಡಿ ಜೈನ ಧರ್ಮವನ್ನು ಪ್ರಕಾಶಪಡಿಸಿದ್ದೀರಿ. ಕನ್ನಡ ಆದಿಕವಿ ಪಂಪನಿಗೆ ಕೀರ್ತಿತಂದ ಆದಿಪುರಾಣಕ್ಕೆ ಆಕರವಾದ ಜಿನಸೇನಾಚಾರ್ಯರ "ಮಹಾಪುರಾಣ", ಸಮಂತಭದ್ರ, ಪೂಜ್ಯಪಾದಾದಿ ಜೈನಾಚಾರ್ಯರು ವ್ಯಾಖ್ಯಾನಮಾಡಿ ಕೊಂಡಾಡಿರುವ ಉಮಾಸ್ವಾತಿ ಪ್ರಣೀತವಾದ "ತತ್ವಾರ್ಥಾಧಿಗಮ ಸೂತ್ರ" ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಯ "ದ್ರವ್ಯ ಸಂಗ್ರಹ" "ಅನ್ಯಯೋಗವ್ಯವಚ್ಛೇದಿಕಾ" ಮೊದಲಾದ ಶಾಸ್ತ್ರಗ್ರಂಥಗಳನ್ನೂ ದಶಭಕ್ತಿ, ಜಿನಭಜನಸಾರ, ಮೊದಲಾದ ಕನ್ನಡ ಕಾವ್ಯಗ್ರಂಥಗಳನ್ನೂ ಇನ್ನೂ ಹಲವಾರು ಕನ್ನಡ, ಸಂಸ್ಕೃತ ಗ್ರಂಥಗಳನ್ನೂ ಟೀಕೆ, ಟಿಪ್ಪಣಿ, ವ್ಯಾಖ್ಯಾನ ವಿವರಣಾದಿಗಳೊಡನೆ ಪರಿಶೋಧಿಸಿ ಪ್ರಕಟಿಸಿ ಅಭ್ಯಾಸಿಗಳಿಗೆ ಅತ್ಯಾವಶ್ಯಕವೂ, ಅಮೂಲ್ಯವೂ ಆದ ಸಹಾಯವನ್ನು ಕಲ್ಪಿಸಿಕೊಟ್ಟಿದ್ದೀರಿ. ತಾವು ಜೈನ ಸಮಾಜಕ್ಕೆ ಮಾತ್ರವಲ್ಲದೆ ಒಟ್ಟು ನಾಡು ನುಡಿಗಳಿಗೆ ಈ ಮೂಲಕ ಅಮೋಘಸೇವೆ ಸಲ್ಲಿಸಿದ್ದೀರಿ.

ಮೈಸೂರು ಸರ್ಕಾರದ ಪ್ರಾಚ್ಯ ಸಂಶೋಧನಾಲಯದಲ್ಲಿಯೂ, ಪೌರಸ್ತ್ಯ ಗ್ರಂಥಭಂಡಾರದಲ್ಲಿಯೂ ಹಲವು ವರ್ಷಗಳ ಕಾಲ ಪಂಡಿತರಾಗಿಯೂ, ಕೀರ್ತಿಶೇಷರಾದ ವರ್ಧಮಾನಯ್ಯನವರ ಮೈಸೂರಿನ ವಿದ್ಯಾರ್ಥಿ ನಿಲಯದಲ್ಲಿ ಜೈನ ಧರ್ಮಾಚಾರ್ಯರಾಗಿಯೂ ಚೈತ್ಯಾಲಯದಲ್ಲಿ ಜೈನಾಗಮ ಪುರಾಣಗಳನ್ನು ಶ್ರಾವಕರಿಗೆ ತಿಳಿನುಡಿಗಳಲ್ಲಿ ಹೇಳಿ ವಿವರಿಸುತ್ತಾ ಪೌರಾಣಿಕರಾಗಿಯೂ ದುಡಿದು ಮಹಾಜನ ಪ್ರೀತ್ಯಾದರಗಳಿಗೆ ಪಾತ್ರರಾಗಿದ್ದೀರಿ.

ತಮ್ಮ ಧರ್ಮಶ್ರದ್ಧೆ ಮತ್ತು ಶಾಸ್ತ್ರಪಾಂಡಿತ್ಯಗಳಿಗಾಗಿ ಶ್ರವಣಬೆಳಗೊಳದ ಶ್ರೀಮಠದಿಂದ 'ಜೈನ ಶಾಸ್ತ್ರವಿಶಾರದ' ಎಂಬ ಪ್ರಶಸ್ತಿಯನ್ನು ಪಡೆದಿದ್ದೀರಿ. ತಮ್ಮ ವಿದ್ಯಾವಿದುಷ್ಯಗಳಿಗೆ ಮೆಚ್ಚಿದ ಆಳಿದ ಮಹಾಸ್ವಾಮಿಯವರಿಂದ 'ಆಸ್ಥಾನ ಮಹಾವಿದ್ವಾನ್' ಪದವಿಯನ್ನೂ ಮತ್ತು ಈಗಿನ ಮಹಾಸ್ವಾಮಿ ಯವರಿಂದ 'ಪಂಡಿತರತ್ನಂ' ಎಂಬ ಬಿರುದನ್ನೂ ಗಳಿಸಿದ್ದೀರಿ. 'ವಿವೇಕಾಭ್ಯುದಯ', 'ವಿಶ್ವಬಂಧು' ಪತ್ರಿಕಾ ಸಂಪಾದಕರಾಗಿ ಜನಮನವನ್ನು ಮೆಚ್ಚಿಸಿ ಅವರಿಂದಲೂ ಮನ್ನಣೆ ಪಡೆದಿದ್ದೀರಿ. ಹೀಗೆ ಗುರು ಮನೆ, ಅರಮನೆ, ಸಮಾಜ–ಎಲ್ಲೆಡೆಗಳಲ್ಲಿಯೂ ಗೌರವ ವಿಶ್ವಾಸಗಳನ್ನು ಸಂಪಾದಿಸಿರುತ್ತೀರಿ. ಆಡಂಬರ ವಿಲ್ಲದ ಜೀವನ, ಸೌಜನ್ಯ, ಧರ್ಮಶ್ರದ್ಧೆ, ವಿದ್ಯಾ, ವಿನಯಗುಣಗಳಿಂದ ಸರ್ವಸಾಮಾನ್ಯರೂ ಮಹಾ ಪಂಡಿತರೂ ಆದ ತಮಗೆ ಕನ್ನಡಿಗರೆಲ್ಲರ ಪ್ರತಿನಿಧಿ ಸಂಸ್ಥೆಯಾದ ಈ ಕನ್ನಡ ಸಾಹಿತ್ಯ ಪರಿಷತ್ತು ಮರ್ಯಾದೆ ಸಲ್ಲಿಸುವುದು ಉಚಿತವೇ ಆಗಿದೆ.

ನಮ್ಮ ಗೌರವ ವಿಶ್ವಾಸಗಳ ಕುರುಹಾಗಿ ಈ ಕಾಣಿಕೆಯನ್ನು ಅಂಗೀಕರಿಸುವುದಕ್ಕೆ ತಾವು ಒಪ್ಪಿದ್ದಕ್ಕೆ ನಾವು ಕೃತಜ್ಞರಾಗಿದ್ದೇವೆ.

ತಮ್ಮ ಶಾಸ್ತ್ರ, ಸಾಹಿತ್ಯ, ಸೇವಾಕಾರ್ಯಗಳು ಇತೋಽಪ್ಯತಿಶಯವಾಗಿಯೂ, ನಿರ್ವಿಘ್ನವಾಗಿಯೂ ನಡೆಯುವಂತೆ ತಮಗೆ, ಆಯುರಾರೋಗ್ಯಭಾಗ್ಯಗಳನ್ನು ಅನುಗ್ರಹಿಸಲೆಂದು ಅನನ್ಯಭಾವದಿಂದ ಭಗವಂತ ನನ್ನು ಪ್ರಾರ್ಥಿಸುತ್ತೇವೆ.

ಶ್ರೀ ಕೃಷ್ಣರಾಜ ಪರಿಷನ್ಮಂದಿರ,
ಬೆಂಗಳೂರು
೧೩ ಮೇ ೧೯೫೧

ಇಂತು
ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರು

ಎತ್ತೂರು ಶಾಂತಿರಾಜ ಶಾಸ್ತ್ರಿಗಳ ಪ್ರಕಟಣೆಗಳು ಮತ್ತು ಪ್ರಮುಖ ಘಟನೆಗಳು

೧೮೮೮—ಶಾಸ್ತ್ರಿಗಳ ಜನನ. ತಂದೆ : ಧರಣಪ್ಪಾರ್ಯ. ತಾಯಿ : ಚಲುವಮ್ಮ. ಸ್ಥಳ : ಎತ್ತೂರು, ದಕ್ಷಿಣ ಕನ್ನಡ ಜಿಲ್ಲೆ.

೧೯೧೧—ಜಿನಭಜನಸಾರ

—ಜೈನಪದ ಸಮುಚ್ಚಯಂ

೧೯೧೩—ಪಂಚಸ್ತೋತ್ರ : ಭಾವಪ್ರಕಾಶಿಕಾ

೧೯೧೬—ಜೈನ ನಿತ್ಯ ವಿಧಿಮುಕ್ತಾವಲೀ

೧೯೧೯—ಪೂಜಾಸಾರ ಸಮುಚ್ಚಯಂ

೧೯೨೨—ರತ್ನಾಕರ ಸಪಾದ ಶತಕಮ್

—ಶತಕತ್ರಯೀ

—ಶತಕತ್ರಯಂ (ರತ್ನಾಕರ ವಿರಚಿತ)

೧೯೨೩—ಅನ್ಯಯೋಗ ವ್ಯವಚ್ಛೇದಿಕಾ

೧೯೨೪—ಶ್ರೀ ಶಾಂತಿಸಾಗರ ಮಹಾಮುನಿಗಳ ಧರ್ಮೋಪದೇಶ ಮತ್ತು ಶ್ರೀ ನೇಮಿಸಾಗರ ವರ್ಣೀಜಿಯವರ ಉಪನ್ಯಾಸ. (ಶಾಸ್ತ್ರಿ ಪರಿಷತ್ ಅಧಿವೇಶನದ ವರದಿ).

—'ವಿಶ್ವಬಂಧು' ಪತ್ರಿಕೆಯ ಉದಯ. ಪಾಕ್ಷಿಕವಾಗಿ ಆರಂಭವಾಗಿ ಅನಂತರ ವಾರ ಪತ್ರಿಕೆಯಾಯಿತು.

೧೯೨೫—ಬೆಂಗಳೂರಿನ ಶ್ರೀಮತಿ ಧರಣಮ್ಮ—ಶ್ರೀ ನಾಗಪ್ಪನವರ ಪುತ್ರಿ ಶ್ರೀಮತಿ ಸುಭದ್ರಾದೇವಿ ಅವರೊಡನೆ ಶಾಸ್ತ್ರಿಗಳ ವಿವಾಹ.

೧೯೨೫—**ಮಹಾಪುರಾಣ** (ಪೂರ್ವಪುರಾಣದ ಪೂರ್ವ ಭಾಗ)

—ಜಿನಭಕ್ತಿಸಾರ (ಚಂದ್ರಸಾಗರ ವರ್ಣಿಕೃತ)

೧೯೨೫ ಜೂನ್ ೧೧—**ಆಸ್ಥಾನ್ ವಿದ್ವಾನ್** ಪ್ರಶಸ್ತಿ: ಶ್ರೀಮನ್ನಾಲ್ವಡಿ ಕೃಷ್ಣರಾಜ ಮಹಾಪ್ರಭುಗಳಿಂದ.

೧೯೨೬ ಸೆಪ್ಟೆಂಬರ್ ೨೬—ವಿಶ್ವಬಂಧು ವಿಶೇಷ ಸಂಚಿಕೆ: ಶ್ರೀ ವರ್ಧಮಾನಯ್ಯನವರ ಸ್ಮಾರಕ ಸಂಚಿಕೆ.

—ಮೂರು ನೋಂಪಿ ಕಥೆಗಳು

—ಜೈನ ದರ್ಶನ

೧೯೨೮—ದ್ರವ್ಯಸಂಗ್ರಹ

೧೯೩೧—ನೇಮಿಜಿನೇಶ ಸಂಗತಿ (ಹರಿವಂಶ ಪುರಾಣ)

—ಶಾಸ್ತ್ರೀಯ ಯಜ್ಞ—ಪುಸ್ತಕ ವಿಮರ್ಶೆ

೧೯೩೨—ಶ್ರವಣಬೆಳ್ಗೊಳ ಶ್ರೀಗಳವರ ಭಾಷಣ ಸಂಗ್ರಹ

—ನಂದೀಶ್ವರಾಷ್ಟಾಹ್ನಿಕ ಪೂಜಾದಿ ಸಂಗ್ರಹ

—ಸುಕುಮಾರ ಚರಿತ್ರಾದಿ ಸಂಗ್ರಹ

೧೯೩೩—ಮಹಾಪುರಾಣ (ಪೂರ್ವಪುರಾಣದ ಉತ್ತರ ಭಾಗ)

—ಧರ್ಮಸ್ಥಳದಲ್ಲಿ ಸರ್ವಧರ್ಮ ಸಮ್ಮೇಳನ ಪ್ರಾರಂಭ. ಈ ಪ್ರಥಮ ಸಮ್ಮೇಳನದಲ್ಲಿ 'ದೇವರ ಸ್ವರೂಪ ಮತ್ತು ದೈವಭಕ್ತಿ' ವಿಷಯವಾಗಿ ಶಾಸ್ತ್ರಿಗಳ ಭಾಷಣ.

—**'ವಿವೇಕಾಭ್ಯುದಯ'** ಮಾಸಪತ್ರಿಕೆಯ ಜನನ.

ಫೆಬ್ರವರಿ ೯—'ಜೈನಶಾಸ್ತ್ರ ವಿಶಾರದ' ಪ್ರಶಸ್ತಿ : ಶ್ರವಣಬೆಳ್ಗೊಳ ಶ್ರೀಗಳವರಿಂದ.

—ನಾಗಕುಮಾರ ಚರಿತಂ (ಬಾಹುಬಲಿ ಕೃತ)

—ಶತಕದ್ವಯ (ರತ್ನಾಕರ ವಿರಚಿತ)

೧೯೩೪—ದಶಭಕ್ತಿ

—ಶ್ರೀ ಪಾರ್ಶ್ವತೀರ್ಥಕರ ಚರಿತ

೧೯೩೫ ಏಪ್ರಿಲ್ ೨—ಜೈನ ಸಿದ್ಧಾಂತ : ತತ್ತ್ವಶಾಸ್ತ್ರ ಮಹಾಸಭೆಯಲ್ಲಿ ಮಾಡಿದ ಭಾಷಣದ ಕಿರು ಪುಸ್ತಕ.

—ಚತುರ್ವಿಂಶತಿ ತೀರ್ಥಕರಾರಾಧನ

—ಶ್ರೀ ಜಂಬೂಸ್ವಾಮಿ ಚರಿತ

೧೯೩೬—ದ್ವಾದಶಾನುಪ್ರೇಕ್ಷೆ

೧೯೩೭—ಸಮ್ಯಕ್ತ್ವ ಕೌಮುದಿ

—ಪರಮಾತ್ಮ ಬೋಧ

—ಧರ್ಮಸ್ಥಳದ ಸರ್ವಧರ್ಮ ಸಮ್ಮೇಳನದಲ್ಲಿ. 'ಕರ್ಣಾಟಕ ಏಕೀಕರಣ' ವಿಷಯದ ಬಗ್ಗೆ ಅಂಕಿಅಂಶಗಳೊಡನೆ ಶಾಸ್ತ್ರಿಗಳ ಭಾಷಣ.

—'ತೀರ್ಥಕರ' ಪದ ಪ್ರಯೋಗದ ಬಗ್ಗೆ ಜಿ. ಪಿ. ರಾಜರತ್ನಂ ಹಾಗೂ ಶಾಸ್ತ್ರಿಗಳ ನಡುವೆ ವಾದ–ವಿವಾದ.

೧೯೩೮—ಧರ್ಮಪರೀಕ್ಷೆ (ಆಚಾರ್ಯ ಅಮಿತಗತಿ)

—ಇಷ್ಟೋಪದೇಶ

—ಮೃತ್ಯುಮಹೋತ್ಸವ

—ನಿತ್ಯಸುಖದ ಮತ್ತು ಉಪಸರ್ಗ ನಿವಾರಣದ ನೋಂಪಿ ಕಥೆ

—ನಿರ್ದುಃಖ ಸಪ್ತಮಿ ಮತ್ತು ಸಮಾಧಿ ವಿಧಾನ ನೋಂಪಿಯ ಕಥೆ

೧೯೪೦—**ಮಹಾಪುರಾಣ (ಉತ್ತರ ಪುರಾಣ)**

—ಶ್ರೀ ಗೋಮಟೇಶ್ವರ ಚರಿತ

ಫೆಬ್ರುವರಿ ೨೬—ವಿವೇಕಾಭ್ಯುದಯ : ಶ್ರೀ ಗೋಮಟೇಶ್ವರ ಮಹಾಮಸ್ತಕಾಭಿಷೇಕದ ವಿಶೇಷ ಸಂಚಿಕೆ.

೧೯೪೧ ಜನವರಿ ೨೫—**'ಆಸ್ಥಾನ ಮಹಾವಿದ್ವಾನ್'** ಗೌರವ : ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಅವರಿಂದ.

೧೯೪೧ (?)—ಪ್ರಾಚ್ಯ ಸಂಶೋಧನಾ ಸಂಸ್ಥೆ, ಮೈಸೂರಿನಲ್ಲಿ ಸಹಾಯಕ ವಿದ್ವಾಂಸರಾಗಿ ನೇಮಕ.

೧೯೪೨—ತ್ರೈಲೋಕ್ಯ ಚೂಡಾಮಣಿ ಸ್ತೋತ್ರ

—ಸ್ವಪ್ನಾವಲಿ

೧೯೪೩—ನಾರೀ ಕರ ದರ್ಪಣ

೧೯೪೪ ನವೆಂಬರ್ ೧೪—**ಧರ್ಮಸ್ಥಳ ಸರ್ವಧರ್ಮ ಸಮ್ಮೇಳನದ ಅಧ್ಯಕ್ಷತೆ, ಧರ್ಮಾಧಿಕಾರಿ ಶ್ರೀ ಮಂಜಯ್ಯ ಹೆಗ್ಗಡೆ ಅವರಿಂದ ಬಿನ್ನವತ್ತಳೆ ಸಮರ್ಪಣೆ.**

—ತತ್ತ್ವಾರ್ಥಸೂತ್ರ (ಸಂಸ್ಕೃತ)

೧೯೪೫—ಪುರುಷಾರ್ಥಸಿದ್ಧ್ಯುಪಾಯಃ

೧೯೪೬ ಜುಲೈ ೨೧—**'ಪಂಡಿತರತ್ನ'** ಅರಮನೆಯ ಅತ್ಯುನ್ನತ ಪ್ರಶಸ್ತಿ : ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಅವರಿಂದ.

೧೯೪೮—ಪ್ರಮೇಯ ರತ್ನಾಲಂಕಾರ (ಸಂಸ್ಕೃತ)

—ಸಜ್ಜನ ಚಿತ್ತ ವಲ್ಲಭ

—ಜೈನಧರ್ಮದ ಸನಾತನತ್ವ ಮತ್ತು ಮಹತ್ವ

೧೯೪೯—ದಶಲಕ್ಷಣ ಧರ್ಮಗಳು

—ಸಪ್ತಪರಮಸ್ಥಾನಗಳು

೧೯೪೯ (?)—ಅನಾರೋಗ್ಯದಿಂದ ಪ್ರಾಚ್ಯ ಸಂಶೋಧನಾ ಸಂಸ್ಥೆಯ ನೌಕರಿಯಿಂದ ನಿವೃತ್ತಿ.

೧೯೫೦—ಯೋಗಾಮೃತ ಶತಕಂ

—ಜೈನವೇದ ಮತ್ತು ಶ್ರುತಪಂಚಮಿ

೧೯೫೧ ಜನವರಿ ೨೮—ಅಭಿಮಾನಿಗಳಿಂದ ಶಾಸ್ತ್ರಿಗಳಿಗೆ ನಿಧಿ ಸಮರ್ಪಣೆ.

—ಶ್ರೀ ಬಾಹುಬಲಿಸ್ವಾಮಿ ಚರಿತ್ರೆ

ಮೇ ೧೩—**ಕನ್ನಡ ಸಾಹಿತ್ಯ ಪರಿಷತ್ತಿನಿಂದ ಸನ್ಮಾನ ಪತ್ರ**

೧೯೫೨ ಮೇ ೩೧—ಮೈಸೂರಿನಲ್ಲಿ ಶಾಸ್ತ್ರಿಗಳ ನಿಧನ

೧೯೫೫—ತತ್ತ್ವರತ್ನ ಪ್ರದೀಪಿಕೆ

೧೯೭೨—ಶಾಸ್ತ್ರಿಗಳ ಪತ್ನಿ ಶ್ರೀಮತಿ ಸುಭದ್ರದೇವಿಯವರ ನಿಧನ.

೧೯೮೧—**ಮಹಾಪುರಾಣ** (ಸಮಗ್ರ ಸಂಪುಟ : ಕನ್ನಡ ಸಾಹಿತ್ಯ ಪರಿಷತ್ತಿನಿಂದ)

—**ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಶಾಸ್ತ್ರಿಗಳ ಹೆಸರಿನಲ್ಲಿ ಹತ್ತುಸಾವಿರ ರೂಪಾಯಿಗಳ ದತ್ತಿನಿಧಿ ಸ್ಥಾಪನೆ.**

೧೯೮೮—ಎತ್ತೂರು ಶಾಂತಿರಾಜ ಶಾಸ್ತ್ರಿ : ಜೀವನ ಮತ್ತು ಸಾಹಿತ್ಯ (ಲೇಖಕರು : ಪ. ನಾಗರಾಜಯ್ಯ)

೧೯೮೮ ಜನವರಿ ೩—ಪರಮಪೂಜ್ಯ ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕಸ್ವಾಮಿಗಳು, ಶ್ರವಣಬೆಳಗೊಳ–ಇವರ ಪಾವನ ಸಾನ್ನಿಧ್ಯದಲ್ಲಿ ಪಂಡಿತರತ್ನ ಎತ್ತೂರು ಶಾಂತಿರಾಜ ಶಾಸ್ತ್ರಿಗಳ **ಜನ್ಮ ಶತಮಾನೋತ್ಸವದ ಉದ್ಘಾಟನೆ.**

—**ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿ ಟ್ರಸ್ಟ್ ಸ್ಥಾಪನೆ.**

೧೯೮೯ ಜುಲೈ ೨೦—ಜನ್ಮ ಶತಮಾನೋತ್ಸವದ ಸಮಾರೋಪ ಸಮಾರಂಭ.

—**ಶಾಂತಿಶ್ರೀ : ಸ್ಮರಣ ಸಂಪುಟ (ಸಂ : ಡಾ॥ ಎಂ. ಎ. ಜಯಚಂದ್ರ)**

ನೆನಪುಗಳು




ಚಿತ್ರಗಳು



ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮಿಜಿ, ಶ್ರವಣಬೆಳಗೊಳ
(ಶತಮಾನೋತ್ಸವ ಮಾರ್ಗದರ್ಶಕರು)



ಸನ್ಮಾನ್ಯ ಶ್ರೀ ಡಿ. ವೀರೇಂದ್ರ ಹೆಗ್ಗಡೆ, ಧರ್ಮಸ್ಥಳ
(ಗೌರವಾಧ್ಯಕ್ಷರು : ಶತಮಾನೋತ್ಸವ ಸಮಿತಿ)



ಸ್ವಸ್ತಿಶ್ರೀ ನೇಮಿಸಾಗರ ವರ್ಣಿಜಿ ಅವರು



ಶ್ರೀ ಶಾಂತಿರಾಜ ಶಾಸ್ತ್ರಿಗಳು (1923)

ಶ್ರೀಮತಿ ಸುಭದ್ರಾದೇವಿ (ಶಾಸ್ತ್ರಿಗಳ ಧರ್ಮಪತ್ನಿ)





ಶ್ರೀ ಶಾಸ್ತ್ರಿಗಳು, ಪತ್ನಿ, ಪುತ್ರಿ-ಕುಮಾರಿ ಜಯಲಕ್ಷ್ಮಿ

ಸನ್ಮಾನ್ಯ ಶ್ರೀ ಎಂ.ಎಲ್. ವರ್ಧಮಾನಯ್ಯನವರು





ಸರ್ವಶ್ರೀ ಜಿ. ಕೆ. ಡಿ. ಭರಮಯ್ಯ
ಎಂ. ವಿ. ಸನತ್ಕುಮಾರ್
ಟಿ. ಶಾಂತರಾಜಪ್ಪ
ಎ. ಶಾಂತಿರಾಜಶಾಸ್ತ್ರಿ (ಎಲ್ಲ ಕುಳಿತಿರುವವರು);
ಆರ್. ವಿ. ಸೂರಪ್ಪ
ಎಂ. ಸಿ. ಲಕ್ಷ್ಮೀಪತಯ್ಯ (ನಿಂತಿರುವವರು)



ಶ್ರೀಮತಿ ಸುಭದ್ರಾದೇವಿ ಮತ್ತು ಮಕ್ಕಳು-ಮೊಮ್ಮಕ್ಕಳು




ಶ್ರೀ ಶಾಸ್ತ್ರಿಗಳ ಪುತ್ರರು ಮತ್ತು ಪುತ್ರಿಯರು



ಶ್ರೀ ಶಾಸ್ತ್ರಿಗಳ ಪುತ್ರರು ಹಾಗೂ ಅವರ ಪತ್ನಿಯರು



ಶ್ರೀ ಶಾಸ್ತ್ರಿಗಳ ಮಕ್ಕಳ ಪರಿವಾರ



ಶ್ರೀ ಶಾಸ್ತ್ರಿಗಳು ತಮ್ಮ ಅತ್ಯಮೂಲ್ಯ ಗ್ರಂಥಗಳನ್ನು ರಚಿಸಿ ಮುದ್ರಿಸಿದ ಮನೆ, ಮೈಸೂರು



ಶ್ರೀ ಶಾಸ್ತ್ರಿಗಳು ತಮ್ಮ ಜೀವನದ ಅಂತ್ಯಕಾಲದಲ್ಲಿ ವಾಸಿಸುತ್ತಿದ್ದ ಮನೆ, ಮೈಸೂರು

ಅಭಿನವ ಶ್ರುತಕೇವಲಿ

— ಪ್ರೊ॥ ಜಿ. ಬ್ರಹ್ಮಪ್ಪ

ನಾನು ಬಾಲಕನಾಗಿದ್ದಾಗ ಪ್ರತಿದಿನವೂ ಮುಂಜಾನೆ ನಮ್ಮ ತಾಯಿ ಮತ್ತು ಅಕ್ಕಂದಿರು ಜಿನಸ್ತುತಿಯ ಉದಯ ರಾಗವನ್ನು ಹಾಡಿ ನಮ್ಮನ್ನು ಎಚ್ಚರಗೊಳಿಸುತ್ತಿದ್ದರು. ಪೂಜ್ಯ ಶಾಸ್ತ್ರಿಗಳ ಜಿನಭಜನಸಾರದಲ್ಲಿರುವ ತ್ರಿಲೋಕ ವಂದನೆಯು ಶ್ರಾವಕಿಯರ ರತ್ನತ್ರಯ ಕಂಠಾಭರಣ ವಾಗಿದ್ದಿತು. ಈ ಕೃತಿಯನ್ನು ಸಮ್ಯಕ್ತ್ವದ ಸಂಪುಟ ವೆಂದರೂ ಒಪ್ಪೀತು. ಜನಪ್ರಿಯತೆಯ ದೃಷ್ಟಿಯಿಂದ ನೋಡಿದಾಗ ಶಾಸ್ತ್ರಿಗಳ ಉಳಿದೆಲ್ಲ ಗ್ರಂಥರಾಶಿಯೂ ಒಂದು ತೂಕವಾದರೆ ಜಿನಭಜನಸಾರದ್ದೇ ಒಂದು ತೂಕ ವಾಗುವುದು.

ನಾನು ಪ್ರೈಮರಿ ಮತ್ತು ಮಿಡ್ಲ್‌ಸ್ಕೂಲ್‌ಗಳಲ್ಲಿ ವಿದ್ಯಾರ್ಥಿಯಾಗಿದ್ದಾಗ ನಮ್ಮೂರಿನವರೇ ಆದ ಚಾರಪ್ಪ ನವರು 'ನಾಗಕುಮಾರ ಚರಿತೆ' 'ಹರಿವಂಶ' ಗಳನ್ನು ಸಂಜೆಯ ಹೊತ್ತು ಸುಶ್ರಾವ್ಯವಾಗಿ ಹಾಡುತ್ತಿದ್ದರು. ಯಾರಾದರೂ ಶ್ರಾವಕರು ಅಲ್ಲಿದ್ದರೆ ತಾವು ಹಾಡಿದ್ದನ್ನು ವಿವರಿಸುತ್ತಿದ್ದರು. ಈ ಚಾರಪ್ಪನವರ ಗಮಕಕಲೆ ನನ್ನ ಮೇಲೆ ಮೋಡಿಮಾಡಿದ್ದಿತು. ಅವರ ಬಳಿ ಹೇರಳವಾಗಿ ಗ್ರಂಥ ರಾಶಿಯಿದ್ದಿತು.

ನಾನು ಹೈಸ್ಕೂಲ್ ವಿದ್ಯಾಭ್ಯಾಸ ಪೂರೈಸಿ ಮುಂದೆ ಓದಲು ಆಶೆಯಿದ್ದರೂ ಅನುಕೂಲವಿಲ್ಲದೆ ಹಳ್ಳಿಯಲ್ಲೇ* ಮಂಕಾಗಿ ಕಾಲ ಕಳೆಯಬೇಕಾಯಿತು. ಈ ವೇಳೆ ಯನ್ನು ನಾನು ಚಾರಪ್ಪನವರ ಸನಿಹದಲ್ಲಿ ಕಳೆದೆನು. ಇವರ ಬಳಿ ಶಾಂತಿರಾಜಶಾಸ್ತ್ರಿಗಳ ಹರಿವಂಶ, ನಾಗ ಕುಮಾರ ಚರಿತೆ, ಶತಕತ್ರಯ, ಮತ್ತು ಧರ್ಮಪರೀಕ್ಷೆ ಈ ಕೃತಿಗಳಿದ್ದವು. ಈ ಗ್ರಂಥಗಳು ಅರ್ಥವಾಗಲಿ ಬಿಡಲಿ ನಾನು ಇವನ್ನು ಓದಿದೆನು. ಓದುತ್ತಾ ನಾನೂ ಕವಿಯಾಗಬೇಕೆಂಬ ಗೀಳನ್ನು ಬೆಳೆಸಿಕೊಂಡೆನು. ನನ್ನ ಕವಿ ಹೃದಯವನ್ನು ಶಾಂತಿರಾಜಶಾಸ್ತ್ರಿಗಳು ಪರೋಕ್ಷ ವಾಗಿ ಉದ್ದೀಪನಗೊಳಿಸಿರುವರು.

ಒಮ್ಮೆ ರಾಂಪುರದ ಜಿನಾಲಯಕ್ಕೆ ಹೋದಾಗ ಅಲ್ಲಿನ ಪುರೋಹಿತರಾದ ಪದ್ಮಣ್ಣನವರು ಮರದ ಪೆಟ್ಟಿಗೆಯಲ್ಲಿದ್ದ ಗ್ರಂಥಗಳನ್ನು ಬಿಸಲಿಗೆ ಆರಿಹಾಕಿದ್ದರು. ಆ ರಾಶಿಯಲ್ಲಿ ಶಾಂತಿರಾಜಶಾಸ್ತ್ರಿಗಳ ಮಹಾಪುರಾಣವೂ ಇದ್ದಿತು. ಕಟ್ಟುಕಳಚಿಕೊಂಡು ಇಡೀ ಗ್ರಂಥ ಅಸ್ತವ್ಯಸ್ಥ ವಾಗಿದ್ದಿತು. ಈ ಗ್ರಂಥದ ಬಗ್ಗೆ ನಾನು ಕುತೂಹಲ ವನ್ನು ತೋರಿದೆನು. "ಇದು ಮಹಾಪುರಾಣ! ಇದು ಇದ್ದ ಕಡೆ ಶ್ರೇಯಸ್ಸಿರುತ್ತದೆ! ನೀನೂ ಹೇಗೂ ಕಾಲ ಕಳೆಯುತ್ತಿರುವೆ, ಈ ಗ್ರಂಥವನ್ನು ತೆಗೆದುಕೊಂಡು ಓದು. ಇದರಿಂದ ನಿನಗೆ ಶುಭವಾಗುವುದು" ಎಂದು ಹೇಳಿ ಪದ್ಮಣ್ಣನವರು ಇಡೀ ಮಹಾಪುರಾಣವನ್ನು ನನಗೆ ಕೊಟ್ಟು ಬಿಟ್ಟರು. ಅವನ್ನು ತಂದು ಹಾಳೆಗಳನ್ನು ಕ್ರಮವಾಗಿ ಜೋಡಿಸಿದೆನು. ಅನಂತರ ಅರ್ಥವಾಗಲಿ ಬಿಡಲಿ ಆಮೂಲಾಗ್ರವಾಗಿ ಓದಿದೆನು. ಕವಿಯಾಗ ಬೇಕೆಂಬ ಗೀಳು ನನಗೆ ಇನ್ನೂ ಹೆಚ್ಚಿತು, ಶಾಸ್ತ್ರಿಗಳು ನನಗೆ ಆದರ್ಶವಾದರು. ನನ್ನ ಭಕ್ತಿ ಏಕಲವ್ಯನ ಭಕ್ತಿ ಯಾಯಿತು. ಆ ಸಣ್ಣ ವಯಸ್ಸಿನಲ್ಲೇ ಅಪಾರ ಗ್ರಂಥ ರಾಶಿ ನನ್ನ ಕಣ್ಮನಗಳನ್ನು ಸೆಳೆದುದು ಸಾಮಾನ್ಯವಾದ ಪುಣ್ಯವೇ?

1946ರಲ್ಲಿ ನಾನು ಬಿ.ಎ. ಆನರ್ಸ್ ವಿದ್ಯಾರ್ಥಿ ಯಾಗಿ ಮೈಸೂರಿನಲ್ಲಿ ತಂಗಿದೆನು. ಮಹಾರಾಜ ಕಾಲೇಜಿನ ಬಳಿಯಿದ್ದ ಓರಿಯೆಂಟಲ್ ಲೈಬ್ರರಿಗೆ ದಿನವೂ ಹೋಗುತ್ತಿದ್ದೆನು. ಹೋದಾಗಲೆಲ್ಲ ದೂರದಿಂದ ಶಾಸ್ತ್ರಿ ಗಳನ್ನು ಕಂಡು ರೋಮಾಂಚನಗೊಳ್ಳುತ್ತಿದ್ದೆನು. ಕಾದ

---

* ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕು, ಅರಸಾಪುರ

ಬಂಗಾರದ ಬಣ್ಣ, ಅಂಗಾಂಗ ಸಾಮರಸ್ಯ, ನಗುಮುಖ, ಸದಾ ಕಾರ್ಯತತ್ಪರ, ನೋಡಿದಷ್ಟೂ ನೋಡಬೇಕೆನಿಸುವ ಹಿತವಾದ ರೂಪ. ಇಂಥ ಶಾಸ್ತ್ರಿಗಳನ್ನು ನಾನು ಮಾತ ನಾಡಿಸುವ ಧೈರ್ಯ ಸಾಲದೆ ತೆಪ್ಪಗೆ ಹಿಂದಿರುಗುತ್ತಿದ್ದೆನು.

1946ರ ನವರಾತ್ರಿಯಲ್ಲಿ ಶಾಸ್ತ್ರಿಗಳಿಗೆ ಅರಮನೆ ಯವರು ಪಂಡಿತರತ್ನ ಎಂಬ ಬಿರುದನ್ನು ಕೊಟ್ಟರು. ಚಿನ್ನದ ತೋಡವನ್ನು ಅವರಿಗೆ ತೊಡಿಸಿದರು. ಮೈಸೂ ರಿನ ಎಂ. ಎಚ್. ಬೋರ್ಡಿಂಗಿನ ಜಿನಾಲಯದ ಅರ್ಚಕ ರಾಗಿದ್ದ ಪಾರ್ಶ್ವನಾಥ ಶಾಸ್ತ್ರಿಗಳಿಗೂ ಆಸ್ಥಾನ ವಿದ್ವಾನ್ ಪದವಿ ದೊರೆಯಿತು.

ದಸರಾ ಮತ್ತು ದೀಪಾವಳಿ ಒಟ್ಟಿಗೆ ಬಂದಂತಾ ಯಿತು! ಶಾಂತಿರಾಜಶಾಸ್ತ್ರಿಗಳನ್ನೂ, ಪಾರ್ಶ್ವನಾಥ ಶಾಸ್ತ್ರಿಗಳನ್ನೂ ಗೌರವಿಸಲು ನಾನು ಒಂದು ಯೋಜನೆ ರೂಪಿಸಿದೆನು. ಸಹಪಾಠಿಗಳ ಸಹಕಾರ ದೊರೆಯಿತು. ಜೈನ ಶ್ರೀಮಂತರು ಬೇಕಾದಷ್ಟು ಹಣ ಕೊಟ್ಟರು. ವಿದ್ಯಾರ್ಥಿನಿಲಯದಲ್ಲಿ ಒಂದು ಔತಣಕೂಟವನ್ನು ಏರ್ಪಡಿಸಿದೆವು. ಶಾಂತಿರಾಜಶಾಸ್ತ್ರಿಗಳನ್ನು ಕುರಿತು ಒಂದು ಭಾವಗೀತೆಯನ್ನು ನಾನು ರಚಿಸಿದೆನು, ಸಭೆಯಲ್ಲಿ ಅದನ್ನು ಓದಿದೆನು. ಶಾಸ್ತ್ರಿಗಳು ತಮ್ಮ ವಿದ್ಯಾಭ್ಯಾಸದ ದಿನಗಳನ್ನು ನೆನಸಿಕೊಂಡು ನಮಗೆಲ್ಲ ಮಾರ್ಗದರ್ಶನ ವಾಗುವಂತೆ ಮಾತನಾಡಿದರು.

ಶಾಂತಿರಾಜಶಾಸ್ತ್ರಿಗಳು ಮಹಾ ಪುಣ್ಯವಂತರು. ಅರಮನೆ ಗುರುಮನೆ ಎರಡರಿಂದಲೂ ಇವರು ಗೌರವ ವನ್ನು ಪಡೆದರು. ಶ್ರಾವಕರ ದೃಷ್ಟಿಯಲ್ಲಿ ಇವರು ಅಭಿನವ ಶ್ರುತಕೇವಲಿಗಳೇ ಆಗಿದ್ದರೆಂದರೆ ಅತಿಶ ಯೋಕ್ತಿಯಾಗದು. ಇವರು ಕಾರಣಪುರುಷರು. ಬರೆಯು ವುದಕ್ಕಾಗೇ ಜನ್ಮತಳೆದ ಮಹಾಮಹಿಮರು. ಹತ್ತಾರು ಜನ ವಿದ್ವಾಂಸರು ಒಟ್ಟಾಗಿ ಬರೆಯಬಹುದಾದುದನ್ನು ಶಾಸ್ತ್ರಿಗಳೊಬ್ಬರೇ ಬರೆದು ತಮ್ಮ ವ್ಯಕ್ತಿತ್ವಕ್ಕೆ ತಾವೇ ಒಪ್ಪ ಹಾಕಿಕೊಂಡಿರುವರು.

1950ರಲ್ಲಿ ನಾನು ದಾವಣಗೆರೆಯ ಧ.ರ.ಮ. ಕಾಲೇಜಿನಲ್ಲಿ ಕನ್ನಡ ಅಧ್ಯಾಪಕನಾಗಿದ್ದೆನು. ಈ ಸಂದರ್ಭ ದಲ್ಲಿ ಶಾಸ್ತ್ರಿಗಳ ಮಹಾಪುರಾಣವನ್ನು ನಾನು ಮತ್ತೊಮ್ಮೆ ಓದಿದೆನು. "ಈ ಕೃತಿ ವಿದ್ವಾಂಸರಿಗೆ ಒಪ್ಪುವ ಕೃತಿ. ಇದನ್ನು ಜನಸಾಮಾನ್ಯರಿಗಾಗಿ ಇನ್ನೂ ತಿಳಿಗೊಳಿಸ ಬೇಕು" ಎಂಬ ಆಶೆ ನನ್ನಲ್ಲಿ ಕಾಣಿಸಿಕೊಂಡಿತು. ಆದರೆ ಜೈನಪರಿಭಾಷೆ ಅನುಭವವಿಲ್ಲದೆ ಈ ಕಾರ್ಯಕ್ಕೆ ಕೈಹಾಕ ಕೂಡದೆಂಬ ಎಚ್ಚರಿಕೆಯೂ ನನ್ನಲ್ಲಿ ಕಾಣಿಸಿಕೊಂಡಿತು, ಜೈನಪರಿಭಾಷೆಯಲ್ಲಿ ಅನುಭವ ಪಡೆಯಲು ನಾನು ಪ್ರಯತ್ನಿಸಿದೆನು. ಶಾಸ್ತ್ರಿಗಳು ಹಿಂದೆ ನಿಂತು ನನಗೆ ಮಾರ್ಗದರ್ಶನ ಮಾಡಿದರೆಂದೇ ನನ್ನ ನಂಬಿಕೆ. ಬಾಲ್ಯ ದಿಂದಲೂ ಶಾಸ್ತ್ರಿಗಳು ನನ್ನ ಮೇಲೆ ಸಮ್ಮೋಹನವೆಸ ಗಿರುವರು.

1983ರಲ್ಲಿ ಜೈನ ಮಹಾಪುರಾಣ ಮತ್ತು ವೈದಿಕ ಪುರಾಣಗಳ ತೌಲನಿಕ ಅಧ್ಯಯನ ನಡೆಸಲು ಯುಜಿಸಿ ನೆರವು ದೊರೆಯಿತು. ಆಗ ಶಾಸ್ತ್ರಿಗಳ ಮಹಾಪುರಾಣದ ತಿಳಿಗನ್ನಡವನ್ನೂ ನಾನು ಸಿದ್ಧಪಡಿಸಿದೆನು. ನನ್ನ ಬೆಳ್ದಿಂಗಳಿಗೆ ಮೂಲ ಶ್ರೋತ ಶಾಂತಿರಾಜಶಾಸ್ತ್ರಿಗಳೆಂದೇ ನನ್ನ ಭಾವನೆ. ಹೆಜ್ಜೆಹೆಜ್ಜೆಗೂ ಅವರ ಆಶೀರ್ವಾದ ನನ್ನ ಮೇಲೆ ಇದ್ದುದರಿಂದಲೇ ಮಹಾಪುರಾಣ ತಿಳಿಗನ್ನಡ ವನ್ನು ನಾನು ರಚಿಸಲು ಸಾಧ್ಯವಾಯಿತು. ಅಜ್ಜನ ಹೆಗಲ ಮೇಲೆ ಕುಳಿತ ಮೊಮ್ಮಗ ಎತ್ತರವನ್ನು ಎಟುಕಿಸಿ ಕೊಳ್ಳಲು ಹಾತೊರೆಯುವಂತೆ ನಾನೂ ಹಾತೊರೆದಿರು ವೆನು. ನನ್ನ ಪುರಾಣದ ಅನುವಾದದ ಕೀರ್ತಿಯ ಬಹು ಭಾಗ ಶಾಸ್ತ್ರಿಯವರಿಗೇ ಸಲ್ಲಬೇಕು.

ಶಾಸ್ತ್ರಿಗಳು ಅಮರರು. ಜೈನ ವಾಙ್ಮಯವನ್ನು ಕನ್ನಡದಲ್ಲಿ ಭಟ್ಟಿ ಇಳಿಸಿ ಶಾಸ್ತ್ರಿಗಳು ಕರ್ಣಾಟಕದ ಮನೆ ಮಾತಾಗಿರುವರು. ಈ ಶತಮಾನದಲ್ಲಿ ಶಾಸ್ತ್ರಿಗಳನ್ನು ಮೀರಿಸುವುದು ಹಾಗಿರಲಿ ಅವರ ಮಟ್ಟಕ್ಕೆ ಏರುವಂಥ ಇನ್ನೊಬ್ಬ ವಿದ್ವಾಂಸ ಕರ್ಣಾಟಕದ ಜೈನ ಸಮಾಜದಲ್ಲಿ ಜನಿಸಿಲೇ ಇಲ್ಲ ಎಂದರೆ ತಪ್ಪಾಗದು. ●

ಜೈನ ವಾಙ್ಮಯದ ಧ್ರುವ ನಕ್ಷತ್ರ

— ಮಾತೃಶ್ರೀ ರತ್ನಮ್ಮನವರು, ಧರ್ಮಸ್ಥಳ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಜೈನಕವಿಗಳಾದ ಪಂಪ, ರನ್ನ, ಜನ್ನ, ಪೊನ್ನ–ಮೊದಲಾದ ಕವಿಗಳು ಸಾಹಿತ್ಯ ರಚಿಸಿದ ಕಾಲವನ್ನು 'ಕನ್ನಡ ಸಾಹಿತ್ಯದ ಸುವರ್ಣ ಯುಗ'ವೆಂದು ಕರೆಯುತ್ತಾರೆ. ಅದೇ ರೀತಿಯಲ್ಲಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪಂಡಿತರತ್ನ ಶ್ರೀ ಎರ್ತೂರು ಶಾಂತಿರಾಜ ಶಾಸ್ತ್ರಿಗಳು ಸಾಹಿತ್ಯ ರಚನೆ ಮಾಡಿದ ಕಾಲವನ್ನು 'ಜೈನ ವಾಙ್ಮಯದ ಪಾಲಿನ ಅಮೂಲ್ಯ–ಕಾಲ' ವೆಂದರೆ ತಪ್ಪಾಗದು.

'ತುಂಬಿದ ಕೊಡ ತುಳುಕದು'–ಎಂಬ ಗಾದೆಯ ಮಾತಿಗನುಸಾರವಾಗಿ ಜೈನಶಾಸ್ತ್ರ–ಪುರಾಣ–ಕಾವ್ಯಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದ್ದರೂ, ಅಸಮಾನವಾದ ಪಾಂಡಿತ್ಯದಿಂದ ಕೂಡಿದ್ದರೂ ಸದಾ ನಿಗರ್ವಿಯಾಗಿ ವಿನಯ–ಸೌಜನ್ಯಾದಿ ಸದ್ಗುಣಗಳಿಂದ ಸಂಪನ್ನರಾಗಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರೆಗೆ ಸಮೀಪದ ಎರ್ತೂರು–ಎಂಬಲ್ಲಿ ಜನಿಸಿ, ಬಳಿಕ ಜಿಲ್ಲೆಯಿಂದ ಹೊರಗೆ ಹೋಗಿ, ಅಪಾರವಾದ ಕೀರ್ತಿಯನ್ನು ಗಳಿಸಿದ ಮಹಾನ್ ವಿದ್ವಾಂಸರು ಅವರು. ಬ್ರಿಟಿಷ್ ಆಡಳಿತದಲ್ಲಿ ಇದ್ದ ದಕ್ಷಿಣ ಕನ್ನಡದಲ್ಲಿ ಜನಿಸಿ, ಮೈಸೂರು ಅರಸರ ಆಡಳಿತದಲ್ಲಿದ್ದ ಮೈಸೂರು ಸಂಸ್ಥಾನದಲ್ಲಿ ಮೆರೆದು, ಆಸ್ಥಾನ ವಿದ್ವಾಂಸರಾಗಿ, 'ಪಂಡಿತರತ್ನ' ಎಂಬ ಬಿರುದನ್ನು ಗಳಿಸಿದ್ದ ಅವರು ಈ ಜಿಲ್ಲೆಯ 'ಮಹಾನ್ ಪುತ್ರ' ಎಂಬುದರಲ್ಲಿ ಸಂದೇಹವಿಲ್ಲ.

ಶ್ರೀ ಶಾಂತಿರಾಜ ಶಾಸ್ತ್ರಿಗಳಿಗೆ ಶ್ರೀಕ್ಷೇತ್ರ ಧರ್ಮಸ್ಥಳದ ಮೇಲೆ ವಿಶೇಷ ಅಭಿಮಾನ, ಶ್ರದ್ಧಾ–ಗೌರವಗಳಿದ್ದವು. ಸಾಮಾನ್ಯವಾಗಿ ವಿದ್ವತ್–ಸಭೆಗಳಲ್ಲಿ ಭಾಗವಹಿಸಲೆಂದು ದಕ್ಷಿಣ ಕನ್ನಡಕ್ಕೆ ಬಂದರೆ ತಪ್ಪದೆ ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಬಂದೇ ಹೋಗುತ್ತಿದ್ದರು. ಅಷ್ಟೇ ಏಕೆ, ಶ್ರೀಕ್ಷೇತ್ರ ಧರ್ಮಸ್ಥದಲ್ಲಿ ಲಕ್ಷದೀಪೋತ್ಸವದ ಸಂದರ್ಭದಲ್ಲಿ ಸಾವಿರಾರು ಜನರು ನೆರೆಯುತ್ತಿರುವಾಗ, ಅವರಿಗೆ ಧಾರ್ಮಿಕ ಮತ್ತು ಸಾಹಿತ್ಯಿಕ ಮಾರ್ಗದರ್ಶನ ನೀಡುವ ದೃಷ್ಟಿಯಿಂದ ಐದೂವರೆ ದಶಕಗಳ ಹಿಂದೆ ಆಗಿನ ಧರ್ಮಾಧಿಕಾರಿಗಳಾಗಿದ್ದ ದಿ॥ ಪೂಜ್ಯ ಮಂಜಯ್ಯ ಹೆಗ್ಗಡೆಯವರು ಸರ್ವಧರ್ಮ ಸಮ್ಮೇಳನ ಮತ್ತು ಸಾಹಿತ್ಯ ಸಮ್ಮೇಳನಗಳನ್ನು ನಡೆಸಬೇಕೆಂಬ ಸಂಕಲ್ಪ ಮಾಡಿದಾಗ, ವಿಚಾರ ವಿನಿಮಯ ಮಾಡಲೆಂದು ಕರೆಸಿಕೊಂಡ ವಿದ್ವಾಂಸರಲ್ಲಿ ದಿ॥ ಶಾಂತಿರಾಜ ಶಾಸ್ತ್ರಿಯವರು ಪ್ರಮುಖರಾಗಿದ್ದಾರೆಂದು ನಾನು ಕೇಳಿದ್ದೇನೆ. ಅಷ್ಟು ಮಾತ್ರವಲ್ಲದೆ. ಸಮ್ಮೇಳನದ ಕಾರ್ಯಕ್ರಮಗಳನ್ನು ಸಂಯೋಜಿಸುವಲ್ಲಿ, ಸಮ್ಮೇಳನಕ್ಕೆ ಮೈಸೂರು, ಬೆಂಗಳೂರು, ಧಾರವಾಡಗಳಿಂದ ಪ್ರಸಿದ್ಧ ವಿದ್ವಾಂಸರನ್ನೂ, ಸಾಹಿತಿಗಳನ್ನೂ ಆಯ್ದು ಕರೆದುಕೊಂಡು ಬರುವುದರಲ್ಲೂ ಪರಿಶ್ರಮ ವಹಿಸುತ್ತಿದ್ದರು ಹಾಗೂ ಪ್ರತಿವರುಷವೂ ಒಂದಲ್ಲ–ಒಂದು ವಿಷಯದ ಬಗ್ಗೆ ವಿದ್ವತ್ಪೂರ್ಣವಾದ ಭಾಷಣಗಳನ್ನು ಮಾಡಿ, ಶ್ರೀ ಕ್ಷೇತ್ರಕ್ಕೆ ಆಗಮಿಸಿದ ಯಾತ್ರಾರ್ಥಿಗಳ ಮನಸ್ಸನ್ನು ಸೂರೆಗೊಳ್ಳುತ್ತಿದ್ದರು. ಅವರು ಧರ್ಮಸ್ಥಳದಲ್ಲಿ ನಡೆದ ಸಮ್ಮೇಳನದಲ್ಲಿ ಅಧ್ಯಕ್ಷತೆಯನ್ನು ಕೂಡಾ ವಹಿಸಿ, ಉದ್ಬೋಧಕ ಸಂದೇಶ ಕೂಡಾ ನೀಡಿದ್ದರೆಂದೂ ನಾನು ಕೇಳಿದ್ದೇನೆ.

ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ತಮ್ಮ ಕುಟುಂಬದ ಜತೆಗೆ ಆಗಮಿಸಿ, ಒಂದೊ ಎರಡೋ ದಿನಗಳ ಕಾಲ ವಿದ್ದು, ತಾವು ರಚಿಸಿದ ಪುಸ್ತಕಗಳ ಪ್ರತಿಗಳನ್ನು ಸಮರ್ಪಿಸಿ ಹೋದುದನ್ನೂ ನಾನು ನೋಡಿದ್ದೇನೆ. ಭೋಜನ–ಉಪಹಾರ, ಆಹಾರ–ವಿಹಾರ, ಮಾತುಕತೆ–ಮೊದಲಾಗಿ ಎಲ್ಲವುಗಳಲ್ಲೂ ಕ್ರಮಬದ್ಧವಾದ, ಶುದ್ಧ ಸಾತ್ವಿಕ ಸ್ವಭಾವದ ಜೀವನವನ್ನು ಸಾಗಿಸಿದ ಅವರೊಬ್ಬ

ಆದರ್ಶ ಶ್ರಾವಕರಾಗಿದ್ದರು. ವಿಶ್ವಬಂಧು, ವಿವೇಕಾಭ್ಯುದಯದಂತಹ ಪತ್ರಿಕೆಗಳನ್ನು ಸಂಪಾದಿಸಿದ್ದ ಹಾಗೂ ಸುಮಾರು 50 ಗ್ರಂಥಗಳನ್ನು ರಚಿಸಿದ್ದ ಅವರ ಬದುಕೂ ಬರವಣಿಗೆಯೂ ಒಂದಕ್ಕೊಂದು ಪೂರಕವಾಗಿದ್ದುವು. ನುಡಿದಂತೆ ನಡೆವ, ಬರೆವಂತೆ ಬಾಳಿವ ಅವರಂತಹ ವಿದ್ವಾಂಸರು ವಿರಳ. ಅವರ ಬರವಣಿಗೆಯೂ ಕೀರ್ತಿಗಾಗಿರಲಿಲ್ಲ–ಎಲ್ಲವೂ ಆತ್ಮ ಸಂತೋಷಕ್ಕಾಗಿ ಅಥವಾ ಜನರಿಗೆ–ವಿಶೇಷವಾಗಿ ಜೈನರಿಗೆ ಮಾರ್ಗದರ್ಶನ ನೀಡುವುದಕ್ಕಾಗಿ.

ಜಿನಭಜನ ಪಾಠ, ಪೂಜಾಸಾರ ಸಮುಚ್ಚಯ, ಜಿನಭಕ್ತಿಸಾರ, ನೋಂಪಿಗಳ ಕಥೆ, ದಶಭಕ್ತಿ, ನಾರೀಕರದರ್ಪಣ, ಸಪ್ತಪರಮ ಸ್ಥಾನಗಳು, ದಶಲಕ್ಷಣ ಧರ್ಮಗಳು, ಜೈನನಿತ್ಯವಿಧಿ, ಜೈನದರ್ಶನ–ಇವೆಲ್ಲ ಗ್ರಂಥಗಳು ಜೈನ ಶ್ರಾವಕರಿಗೆ ನಿತ್ಯೋಪಯೋಗಿ ಗ್ರಂಥಗಳೇ ಸರಿ.

ಸಂಸ್ಕೃತದಲ್ಲಿ ಪಾಂಡಿತ್ಯವನ್ನು ಹೊಂದಿರದ ಜನಸಾಮಾನ್ಯರಿಗಾಗಿ ಅವರು ಸಂಸ್ಕೃತದ ಉದ್ಗ್ರಂಥಗಳನ್ನು ಕನ್ನಡದಲ್ಲಿ ನೀಡಿ ಮಹೋಪಕಾರ ಮಾಡಿದರು. ಮುಖ್ಯವಾಗಿ–ಅವರು ಕನ್ನಡೀಕರಿಸಿದ 'ಮಹಾಪುರಾಣ'ವು ಇಂದಿಗೂ ಕನ್ನಡಿಗರ ಪಾಲಿಗೆ ಅಮೂಲ್ಯಗ್ರಂಥ. ಜೈನ ಶ್ರಾವಕ–ಶ್ರಾವಕಿಯರ ಪಾಲಿಗೆ ಖಂಡಿತವಾಗಿಯೂ ಅನಿವಾರ್ಯಗ್ರಂಥವೇ ಸರಿ.

ಅವರ ಸ್ವಭಾವ–ವ್ಯಕ್ತಿತ್ವಗಳಂತೆ, ಅವರ ಲೇಖನ, ಭಾಷಣಗಳೂ ಸರಳ ಹಾಗೂ ಹೃದಯಸ್ಪರ್ಶಿ. ಜನಸಾಮಾನ್ಯರ ಹೃದಯಗಳನ್ನೂ ತಟ್ಟಿ ಎಬ್ಬಿಸುವಂತೆ ವಿಚಾರ ಪ್ರಚೋದಕವಾಗಿ ಅವರು ಬರೆಯಬಲ್ಲವರಾಗಿದ್ದರು ಹಾಗೂ ಭಾಷಣ ಮಾಡಬಲ್ಲವರಾಗಿದ್ದರು–ಎಂಬುದು ಅವರ ಗ್ರಂಥಗಳನ್ನೋದಿದವರಿಗೆ ಹಾಗೂ ಅವರ ಉಪನ್ಯಾಸ ಆಲಿಸಿದವರಿಗೆ ಅನುಭವಕ್ಕೆ ಬಂದ ಸಂಗತಿಯಾಗಿದೆ.

ಜೈನ ತತ್ವಜ್ಞಾನದ ಸೂಕ್ಷ್ಮಾತಿಸೂಕ್ಷ್ಮ ವಿಚಾರಗಳನ್ನೂ, ಸಿದ್ಧಾಂತಗಳನ್ನೂ, ಕ್ಲಿಷ್ಟಸೂತ್ರಗಳನ್ನೂ ಅತಿ ಸರಳವಾಗಿ ವಿವರಿಸುವ ಕಲೆ ಅವರ ಪಾಲಿಗೆ ಕರಗತವಾಗಿತ್ತು. ಆದ್ದರಿಂದಾಗಿ ಅವರಿಗೆ ಎಲ್ಲೆಡೆಯ ವಿದ್ವತ್ ಸಭೆಗಳಲ್ಲೂ ಮಾನ್ಯತೆ ದೊರಕಿತ್ತು.

'ವಿವೇಕಾಭ್ಯುದಯ' ಮಾಸ ಪತ್ರಿಕೆಯಲ್ಲಿ ಅಮೂಲ್ಯ ವಿಚಾರಗಳ ಬಗ್ಗೆ ಸಂಪಾದಕೀಯಗಳನ್ನು ಬರೆಯುತ್ತಿದ್ದ ಶಾಸ್ತ್ರಿಯವರ ಲೇಖನಿ ಬಹಳ ಪ್ರಬಲವಾಗಿರುತ್ತಿತ್ತು. ಪತ್ರಿಕೆಯನ್ನು ನಿಲ್ಲಿಸಬೇಕಾಗಿ ಬಂದಾಗ, ಧರ್ಮಸ್ಥಳಕ್ಕೆ ಆಗಮಿಸಿ, ಪೂಜ್ಯ ದಿ॥ ಮಂಜಯ್ಯ ಹೆಗ್ಗಡೆಯವರೊಡನೆ ವಿಚಾರ ವಿನಿಮಯ ನಡೆಸಿ, ಪತ್ರಿಕೆಯು ನಿಂತು ಹೋಗದಂತೆ ಮಂಗಳೂರಿನಿಂದ ದಿ॥ ಡಿ. ಪುಟ್ಟಸ್ವಾಮಿಯವರ ಸಂಪಾದಕತ್ವದಲ್ಲಿ ಮುಂದುವರಿಯುವಂತೆ ಮಾಡಿದರೆಂದೂ ಕೇಳಿದ್ದೇನೆ.

ಹೀಗೆ ಶ್ರೀಕ್ಷೇತ್ರ ಧರ್ಮಸ್ಥಳಕ್ಕೂ, ದಿ॥ ಶಾಸ್ತ್ರಿಗಳವರಿಗೂ ಅತ್ಯಂತ ನಿಕಟ ಸಂಬಂಧವಿತ್ತು. ಇಲ್ಲಿನ ಯಾವುದೇ ಮುಖ್ಯ ಕಾರ್ಯಕ್ರಮವಿದ್ದರೂ, ತಪ್ಪದೆ ಬಂದು ಉತ್ಸಾಹದಿಂದ ಪಾಲುಗೊಳ್ಳುತ್ತಿದ್ದರು. ಹಾಗೂ ಇಲ್ಲಿನ ಕಾರ್ಯಕ್ರಮಗಳಿಗೆ ತಮ್ಮ ಪಾಂಡಿತ್ಯದ ಮೆರುಗು ನೀಡಿ, ಯಶಸ್ವಿಯಾಗುವಂತೆ ಸಹಕರಿಸುತ್ತಿದ್ದರು.

ಸಂಕ್ಷೇಪದಲ್ಲಿ ಹೇಳುವುದಾದರೆ–ಆಧುನಿಕ ಕನ್ನಡ ಜೈನ ವಾಙ್ಮಯದ ಆಗಸದಲ್ಲಿ ಅವರು ಅದ್ಭುತ ಪ್ರಕಾಶದಿಂದ ಹೊಳೆಯುವ ಧ್ರುವ ನಕ್ಷತ್ರದಂತಿದ್ದರೆಂದರೆ ಅತಿಶಯೋಕ್ತಿಯಾಗದು. ●

ಈ ಚಿಕ್ಕ ಗ್ರಂಥವನ್ನು (ಸ್ವರೂಪ ಸಂಬೋಧನ ಪಂಚವಿಂಶತಿಃ) ಪ್ರಕಾಶಕ್ಕೆ ತಂದ ಶ್ರೇಯಸ್ಸು ಆಸ್ಥಾನ ವಿದ್ವಾನರಾದ ಪಂ. ಎ. ಶಾಂತಿರಾಜ ಶಾಸ್ತ್ರಿಗಳವರದು. ಇಂದಿಗೆ ಹನ್ನೆರಡು ವರ್ಷಗಳ ಹಿಂದಿನ ಮಾತು. ಆಗ ನಾನೊಬ್ಬ ಬಡ ವಿದ್ಯಾರ್ಥಿ, ಬೆಳಗಾಂವಿಯ ಜೈನ ಬೋರ್ಡಿಂಗ ಹೌಸಿನಲ್ಲಿ ಓದುತ್ತಿದ್ದೆ. ಅಂದಿನಿಂದಲೂ ಶಾಸ್ತ್ರಿಯವರ ಪರಿಚಯ, ಆಯಾ ಕಾಲಕ್ಕೆ ಹಿರಿಯ ಬಂಧುವಿನಂತೆ ಅವರು ನನ್ನ ಅಭ್ಯಾಸದಲ್ಲಿ ಉತ್ತೇಜನವನ್ನು ಕೊಡುತ್ತ ಬಂದಿರುತ್ತಾರೆ. ಅವರ ಆಭಾರವನ್ನು ಎಷ್ಟು ಮನ್ನಿಸಿದರೂ ಕಡಿಮೆಯೇ.

—ಆ. ನೇ. ಉಪಾಧ್ಯೆ
(೧೯೩೪)

ಪತಿತ ಪಾವನ ಶಾಸ್ತ್ರೀಜಿ

—ಶ್ರೀ ಸಿ. ರಾಮಚಂದ್ರ ಸ್ಯಾದ್ವಾದಿ, ತುಮಕೂರು

ತುಮಕೂರು ಜಿಲ್ಲೆಯ ಗುಬ್ಬಿ ತಾಲೋಕಿಗೆ ಸೇರಿದ ಬಿದರೆಯು ಬಹು ಪ್ರಾಚೀನ ಇತಿಹಾಸವನ್ನು ಹೊಂದಿದ ಗ್ರಾಮ. ಇಲ್ಲಿ ಶ್ರೀ ಸುಪಾರ್ಶ್ವನಾಥ ಸ್ವಾಮಿಯ ಮಂದಿರವಿದೆ. ಹಿಂದೆ ಇಲ್ಲಿ ಹಲವು ಜೈನ ಶ್ರಾವಕರ ಮನೆಗಳಿದ್ದವು. ಈಗಲೂ 15–20 ಇವೆ. 'ನಾಗಕುಮಾರ ಷಟ್ಪದಿ' ಎಂಬ ಕಾವ್ಯವನ್ನು ಬರೆದು ಪ್ರಸಿದ್ಧರಾದ ಬೊಮ್ಮಣ್ಣ ಕವಿಗಳು ಈ ಊರಿನವರೇ. ಬಿದರೆ ಪಾಯಸಾಗರ ಸ್ವಾಮಿಗಳು ಈ ಸ್ಥಳದವರೇ. ಈ ಸ್ವಾಮಿಗಳ ವಂಶಸ್ಥರಾದ ಶ್ರೀ ಪದ್ಮ ನಂದಿಶಾಸ್ತ್ರಿಗಳೆಂಬ ಬ್ರಹ್ಮಚಾರಿಗಳು ಇದ್ದರು. ಇವರು ಹಲವು ಭಾಷಾ ಪಂಡಿತರೂ ಜ್ಯೋತಿಷ್ಯ ವಿದ್ವಾಂಸರೂ ಆಗಿದ್ದರು. ಇವರು ನಿತ್ಯವೂ ಪುರಾಣ ಪುಣ್ಯ ಕಥೆಗಳನ್ನು ಓದಿ ಹೇಳುತ್ತಿದ್ದರು. ಅದರಲ್ಲಿಯೂ ಎ. ಶಾಂತಿರಾಜ ಶಾಸ್ತ್ರಿಗಳ ಮಹಾಪುರಾಣವನ್ನು ತುಂಬಾ ಚೆನ್ನಾಗಿ ಹೇಳುತ್ತಿದ್ದರು. ಇದನ್ನು ಓದಿ ತನಗಿದ್ದ ತೊನ್ನು ರೋಗವನ್ನು ನಿವಾರಣೆ ಮಾಡಿಕೊಂಡೆವೆಂದು ಹೇಳುತ್ತಿದ್ದರು.

ಈ ಪುರಾಣವನ್ನು ಕೇಳಿದ ಹಲವು ಮಂದಿ ಜೈನ, ಜೈನೇತರರು ಪ್ರಭಾವಿತರಾಗಿದ್ದರು. ಹಾಲುಮತದವರು, ನೈಗೆಯವರು, ಹರಿಜನರೂ, ಗಿರಿಜನರೂ, ಎಷ್ಟೋ ಮಂದಿ ತಮ್ಮ ಅನಿಷ್ಟ ಪದ್ಧತಿಗಳನ್ನು ತೊರೆದು ವ್ರತಿಕರಾಗಿ ಬಿಟ್ಟರು. ಅಂದ ಮೇಲೆ ದಿ|| ಎ. ಶಾಂತಿರಾಜ ಶಾಸ್ತ್ರೀಜೀಯವರ ಪುರಾಣದ ಪ್ರಭಾವವು ಅತ್ಯಂತ ಪರಿಣಾಮವನ್ನು ಬೀರಿತೆಂದೂ, ಅದರಿಂದ ಹಲವು ಮಂದಿ ಪತಿತರು ಪಾವನರಾದರೆಂದೂ ಹೇಳಲೇ ಬೇಕು. 'ಅವರ ಧರ್ಮ ಪರೀಕ್ಷಾನುವಾದ' ಎಂಬ ಗ್ರಂಥವನ್ನು ಕೇಳಿ ಓದಿ ಪ್ರಭಾವಿತರಾದೆವು.

ಸುಮಾರು 50 ವರ್ಷಗಳ ಹಿಂದೆ ಹೀಗೆ ತಮ್ಮ ಬಾಳನ್ನು ಹಸನಾಗಿ ಮಾಡಿಕೊಂಡು ಪಾವನರಾದವರಲ್ಲಿ ನಾನೂ ಒಬ್ಬ. ಜಾತಿಯಲ್ಲಿ ನೈಗೆಯವನು. ಆಗ ನನ್ನ 8 ನೇ ವಯಸ್ಸಿನಲ್ಲಿ ಪುಣ್ಯವಶಾತ್ ಒಂದು ಅಪೂರ್ವ ಘಟನೆ ಒದಗಿ ನಾನೂ ಒಬ್ಬ ಜೈನ ಧರ್ಮಾವಲಂಬಿಯಾಗುವಂತಾಯಿತು.

ಶ್ರೀ ಪದ್ಮ ನಂದಿಶಾಸ್ತ್ರಿಗಳು ಒಮ್ಮೆ ತಮ್ಮ ಮನೆಯಲ್ಲಿ ಮಹಾಪುರಾಣವನ್ನು ಓದುತ್ತಿದ್ದರು. ಕಾರಣಾಂತರದಿಂದ ನಾನೂ ಆ ಕಡೆ ಹೋದೆ. ಆಗ ಜೀವಂಧರ ಸ್ವಾಮಿಯ ಕಥಾ ಪ್ರಸಂಗದ ವಾಚನ ಮಾಡುತ್ತಿದ್ದರು. ನಾಯಿಯೊಂದು ಯಜ್ಞದ ಹವಿಸ್ಸನ್ನು ಮುಟ್ಟಿದುದರಿಂದ ಕೋಪಗೊಂಡ ಯಾಜ್ಞಿಕರ ಪೆಟ್ಟು ತಿಂದು ಕೀರಾಡಿತು. ಆಗ ಅಲ್ಲಿಯೇ ಸುತ್ತಾಡುತ್ತಿದ್ದ ಜೀವಂಧರ ಕುಮಾರನು ಕೂಡಲೇ ಅಲ್ಲಿಗೆ ಬಂದು ಕಂಠಗತ ಪ್ರಾಣವಾಗಿದ್ದ ನಾಯಿಗೆ ಉಪಚರಿಸಿ ಅದು ಉಳಿಯಲಾರದೆಂದು ತಿಳಿದು ತನ್ನ ತೊಡೆಯ ಮೇಲೆ ಮಲಗಿಸಿಕೊಂಡು ಅದರ ಕಿವಿಯಲ್ಲಿ ಣಮೋಕಾರ ಮಂತ್ರವನ್ನು ಹೇಳಿದನು. ಅದನ್ನು ಕೇಳಿ ಪರಿಣಾಮದಿಂದ ಸತ್ತ ನಾಯಿಯ ಆತ್ಮ ಒಬ್ಬ ಯಕ್ಷ ದೇವನಾಗಿ ಜನ್ಮ ತಾಳುತ್ತದೆ. ಅದು ಜೀವಂಧರನ ಬಳಿ ಬಂದು ಆತನ ಉಪಕಾರದಿಂದ ತನಗೆ ಸದ್ಗತಿಯಾಯಿತೆಂದು ಹೇಳುತ್ತದೆ. "ಣಮೋಕಾರ ಮಂತ್ರದ ಜಪಧ್ಯಾನದಿಂದ ಮುಕ್ತಿಯೇ ದೊರೆಯುತ್ತದೆಂದ ಮೇಲೆ ದೇವಗತಿ ದೊರೆಯದೇ ಇರುತ್ತದೆಯೇ, ನೀನು ಧನ್ಯನಾದೆ ನೀನು ಸಮ್ಯಕ್ತ್ವವನ್ನು ಸ್ವೀಕರಿಸಿ ನಿನ್ನ ಆತ್ಮ ಕಲ್ಯಾಣ ಮಾಡಿಕೋ" ಎಂದು ಜೀವಂಧರನು ಆ ಯಕ್ಷನಿಗೆ ಹೇಳುತ್ತಾನೆ. "ನೀನು ಸ್ಮರಿಸಿದಾಗ ಬಂದು ನಿನಗೆ ಉಪಕಾರ ಮಾಡುತ್ತೇನೆಂದು" ಹೇಳಿ ಆ ಯಕ್ಷನು ಮುಂದೆ ಹಲವು ಕ್ಲಿಷ್ಟಕರವಾದ ಸಂದರ್ಭದಲ್ಲಿ ಜೀವಂಧರನಿಗೆ ನೆರವು ನೀಡಿ ಉಪಕಾರವನ್ನು ಸ್ಮರಿಸಿತು. ಹಾಗಾಗಿ ಈ ಣಮೋಕಾರ

ಮಂತ್ರದ ಮಹಿಮೆ ಅಪಾರವಾದುದು" ಎಂಬ ಈ ಪ್ರಸಂಗವನ್ನು ಕೇಳಿ ನನಗೆ ಆನಂದವಾಯಿತು. ಯಾವುದೋ ಜನ್ಮದ ಸಂಸ್ಕಾರ ಉದಯವಾಗಿ ಆ ಶಾಸ್ತ್ರಿಗಳ ಬಳಿ ಬಂದು ಅವರಿಂದ ಣಮೋಕಾರವನ್ನು ಹೇಳಿಸಿಕೊಂಡು ಕಲಿತೆ. ನನ್ನ ಜನ್ಮ ಹಸನಾಯಿತು. ಅಂದಿನಿಂದ ಆ ಮಹಾಪುರಾಣವನ್ನು ತಪ್ಪದೇ ಕೇಳಿ ಆ ಪುರಾಣದ ಬಗ್ಗೆ ಅಪೂರ್ವ ಭಕ್ತಿ ಗೌರವಗಳು ಉಂಟಾದವು. ನಂತರ ಪಂಚಾಣುವ್ರತವನ್ನು ಸ್ವೀಕರಿಸಿ ಪಾಲಿಸ ತೊಡಗಿದೆ. ಕ್ರಮೇಣ ನನ್ನ ಬಾಳು ಪಾವನನಾಗಿ ಈ ಮಟ್ಟಕ್ಕೆ ಬರಲು ಆ ಮಹಾಪುರಾಣವೇ ಕಾರಣವೆಂದು ತಿಳಿದು, ಇದನ್ನು ಕನ್ನಡದಲ್ಲಿ ಸುಲಭ ಶೈಲಿಯಲ್ಲಿ ಬರೆದ ಶಾಂತಿರಾಜ ಶಾಸ್ತ್ರಿಗಳನ್ನು ನೋಡಬೇಕೆಂಬ ಹಂಬಲವಿತ್ತು. ಬಹುಕಾಲಾನಂತರ ಶ್ರಮಪಟ್ಟು ಮೈಸೂರಿಗೆ ಹೋಗಿ ಶಾಸ್ತ್ರೀಜಿಯವರನ್ನು ಕಂಡಾಗ ನನಗೆ ಆದ ಆನಂದ ಅಷ್ಟಿಷ್ಟಲ್ಲ. ಶಾಸ್ತ್ರಿಗಳು, ಪಂಡಿತರು, ಕವಿಗಳು, ಬರಹಗಾರರು, ಎಂದರೆ ಇಷ್ಟು ತೇಜಸ್ಸು, ವಿನಯ, ಕರುಣ–ಮುಖಭಾವವಿರಬೇಕು ಎನಿಸಿತು. ಅವರು ನನ್ನನ್ನು ಮೈದಡವಿ, ಸಂತಸದಿಂದ, ಕರುಣೆಯಿಂದ ಆಶೀರ್ವದಿಸಿದರು. ಅವರ ಕೆಲವು ನುಡಿಗಳು ನನಗೆ ಮಾರ್ಗದರ್ಶನ ಮಾಡಿದವು. ಸ್ವಾಧ್ಯಾಯ ನಿರತನನ್ನಾಗಿ ಧರ್ಮತತ್ಪರನನ್ನಾಗಿ ಮಾಡಿದವು. ಅವರ ನುಡಿ, ಅವರ ಕರುಣಾಭಾವ, ಶಾಂತಿ ಮುದ್ರೆ ಈಗಲೂ ನನ್ನಲ್ಲಿ ಅಚ್ಚೊತ್ತಿದಂತೆ ಇದೆ.

ಹೀಗೆ ನನ್ನಂತೆ ಹಲವು ಮಂದಿ ಪತಿತರನ್ನು ಪಾವನರನ್ನಾಗಿ ಮಾಡಿದ ಅವರ ಎಲ್ಲಾ ಗ್ರಂಥಗಳನ್ನು ಸಂಗ್ರಹಿಸಿ ಸ್ವಾಧ್ಯಾಯ ಮಾಡಿದೆ. ಸಂಸ್ಕೃತ, ಪ್ರಾಕೃತ, ಹಿಂದಿ ಭಾಷೆಗಳ ಹಲವು ಅಪೂರ್ವ ಗ್ರಂಥಗಳನ್ನು ತಿಳಿಗನ್ನಡದಲ್ಲಿ ಭಾಷಾಂತರಿಸಿ ಪ್ರಕಟಿಸಿ ಕರ್ನಾಟಕದ ಜನತೆಗೆ ತುಂಬಾ ಉಪಕಾರ ಮಾಡಿದ ಶಾಸ್ತ್ರೀಜೀಯವರು ಕೀರ್ತಿಶೇಷರಾದರು.

ಈ ಉಪಕಾರ ಸ್ಮರಣೆಗಾಗಿ ನಾವೂ ಬಿದರೆಯಲ್ಲಿ ಜೈನ ಮಂಡಳಿಯ ನೆರವಿನಿಂದ ಪೂಜ್ಯ ದಿ॥ ಎ. ಶಾಂತಿರಾಜಶಾಸ್ತ್ರಿಗಳ ಜನ್ಮ ಶತಾಬ್ದಿ ಮಹೋತ್ಸವವನ್ನು ಮಾಡಿ ಕೃತಾರ್ಥರಾದೆವು. ಶಾಸ್ತ್ರೀಜಿಯವರ ಮಕ್ಕಳೂ, ಪರಿವಾರವೆಲ್ಲಾ ಬಿದರೆಗೆ ಬಂದು ಸಂತೋಷಪಟ್ಟರು.

ದಿ॥ ಶಾಸ್ತ್ರೀಜೀಯವರ ಪ್ರತಿಯೊಂದು ಗ್ರಂಥವೂ ಮುತ್ತಿನಂತಹವುಗಳು. ಇವರು ತಮ್ಮ ಆರೋಗ್ಯವನ್ನು ಲೆಕ್ಕಿಸದೆ, ತಮ್ಮ ಜೀವನವನ್ನೇ ಮುಡುಪಾಗಿ ಇಟ್ಟು ಹಲವು ಹತ್ತು ರೀತಿಯಲ್ಲಿ ಜೈನಧರ್ಮದ ಸೇವೆ ಮಾಡಿ ಶಾಸ್ತ್ರೀಜೀಯವರು ಆಗ ಆ ಕಾರ್ಯವನ್ನು ಮಾಡದಿದ್ದರೆ ಇಂದಿನ ಜೈನ ಪೀಳಿಗೆಯು ಸಾಹಿತ್ಯಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಪರದಾಡಬೇಕಾಗಿತ್ತು. ಇವರಿಂದ ಕರ್ನಾಟಕದಲ್ಲಿ ಧರ್ಮ ಪುನರುತ್ಥಾನವಾಯಿತು. ಇಂತಹ ಮಹಾನ್ ಚೇತನವನ್ನು "ಪತಿತ ಪಾವನ"ರೆಂದು ಮನಃಪೂರ್ವಕವಾಗಿ ಭಕ್ತಿಯಿಂದ ಸ್ಮರಿಸಿ ಅವರ ಜನ್ಮ ಶತಾಬ್ದಿಯ ಈ ಸಂದರ್ಭದಲ್ಲಿ ಈ ಮೂಲಕ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ. ●

ಜಿನವಾಣಿಗೆ ಆಜೀವ ಪರ್ಯಂತ ಸೇವೆ ಸಲ್ಲಿಸಿದ ಶ್ರೀ ಸ್ವರ್ಗೀಯ ಶಾಸ್ತ್ರಿಗಳು ಈ ಶತಮಾನದ ಮಹಾವಿದ್ವಾಂಸರಾಗಿದ್ದರು. ನನ್ನ ವೈಯಕ್ತಿಕವಾಗಿ ಹೇಳಬಹುದಾಗಿದ್ದರೆ ನನ್ನ ಮೊಟ್ಟಮೊದಲನೇ ಕೃತಿಯಾದ 'ಸತ್ಕ್ರಿಯಾ ದರ್ಪಣ'ಕ್ಕೆ ಆದಿಮಂಗಲದಂತೆ ಅಮೂಲ್ಯವಾದ ತಮ್ಮ ಮುನ್ನುಡಿಯನ್ನು ಬರೆದುಕೊಟ್ಟು ಆಶೀರ್ವದಿಸಿದ್ದರು. ಅವರ ಆಶೀರ್ವಾದದ ಫಲವೊ ಎಂಬಂತೆ ನಾನು ನೂರಾರು ಜೈನ ಶಾಸ್ತ್ರಕ್ಕೆ ಸಂಬಂಧಿಸಿದ ಕೃತಿಗಳನ್ನು ಬರೆಯಲು ಸಾಧ್ಯವಾಯಿತು. ಇದರಿಂದ ಪೂಜ್ಯರು ನಿರಂತರ ಸ್ಮರಣೀಯರಾಗಿದ್ದಾರೆ.

—ಭುವನಹಳ್ಳಿ ಶ್ರೀ ಡಿ. ಪದ್ಮನಾಭ ಶರ್ಮ

ಕೆಲವು ನೆನಪುಗಳು

— ಶ್ರೀ ಎಂ. ಪಿ. ಎಲ್. ಕಾಂತ್, ಮೈಸೂರು

ನಮ್ಮ ರಾಷ್ಟ್ರ ಇನ್ನೂ ಸ್ವತಂತ್ರವೇ ಆಗಿರಲಿಲ್ಲ. ಆಗ ನಾವೆಲ್ಲಾ ಮೈಸೂರು ಅರಮನೆ ಪದ್ಮರಾಜ ಪಂಡಿತರ ಜೈನ ಬ್ರಾಹ್ಮಣ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳಾಗಿದ್ದೆವು. ನಾವು ಕೆಲವರು ಸೇರಿಕೊಂಡು 'ಜೈನ ಯುವಕ ಸಂಘ' ಎಂಬ ಸಂಸ್ಥೆಯೊಂದನ್ನು ಸ್ಥಾಪಿಸಿದೆವು. ಪ. ನಾಗರಾಜಯ್ಯನವರು ಕಾರ್ಯದರ್ಶಿ, ನಾನೇ ಅಧ್ಯಕ್ಷ, ಇತರೆ 7–8 ಮಂದಿ ಕಾರ್ಯಕಾರೀ ಸಮಿತಿಯಲ್ಲಿದ್ದರು. ಇದು ಧರ್ಮ, ಸಾಹಿತ್ಯ ಹಾಗೂ ಸಂಸ್ಕೃತಿ ಪ್ರಚಾರ ಮೊದಲಾದ ಉದ್ದೇಶಗಳಿಂದ ಕೂಡಿದ ಸಂಸ್ಥೆಯಾಗಿತ್ತು. ನಮ್ಮ ವಿದ್ಯಾರ್ಥಿ ನಿಲಯವೇ ಈ ಸಂಘಕ್ಕೆ ಕೇಂದ್ರ ಸ್ಥಾನವಾಗಿತ್ತು.

ಈ ಯುವಕ ಸಂಘದ ಉದ್ಘಾಟನೆಗೆ ಆಸ್ಥಾನ ಮಹಾ ವಿದ್ವಾನ್ ಪಂಡಿತರತ್ನ ಶ್ರೀ ಎ. ಶಾಂತಿರಾಜ ಶಾಸ್ತ್ರಿಯವರನ್ನೇ ಕರೆದಿದ್ದೆವು. ಪ್ರಾರಂಭದಲ್ಲಿ ಸ್ವಾಗತ ಭಾಷಣವನ್ನು ಓದುವಾಗ ನೆರೆದಿದ್ದ ಜನರನ್ನು 'ಸಭಿಕರೇ ....' ಎಂದು ಸಂಬೋಧಿಸಿದೆನು. ಉದ್ಘಾಟನಾ ಭಾಷಣ ಮಾಡುವುದಕ್ಕೆ ಮೊದಲು, ಸ್ವಾಗತ ಭಾಷಣ ಓದುವಾಗ ನಾನು ಪ್ರಯೋಗಿಸಿದ್ದ 'ಸಭಿಕರೇ' ಎಂಬ ಶಬ್ದದ ಬಗ್ಗೆ ಎಲ್ಲರ ಗಮನ ಸೆಳೆಯುತ್ತಾ 'ಸಭಿಕ' ಎಂಬ ಶಬ್ದ ಒಳ್ಳೆಯ ಅರ್ಥ ಕೊಡುವುದಿಲ್ಲವೆಂದೂ, 'ಸಭಿಕರೇ' ಎನ್ನುವುದಕ್ಕೆ ಪ್ರತಿಯಾಗಿ 'ಸಭಾಸದರೆ' ಎಂಬ ಶಬ್ದವನ್ನು ಪ್ರಯೋಗಿಸುವುದು ಉಚಿತವೆಂದು ಸಲಹೆ ಕೊಟ್ಟರು. ಇದರಿಂದ ನಾವು ಶಾಸ್ತ್ರಿಯವರು ಒಂದೊಂದು ಶಬ್ದಕ್ಕೂ ಎಷ್ಟು ಮಹತ್ವ ಕೊಡುತ್ತಿದ್ದರು ಎಂಬುದನ್ನು ತಿಳಿಯಬಹುದಾಗಿದೆ. ಇದು ನನ್ನ ಜೀವನದಲ್ಲಿ ಒಂದು ಮರೆಯಲಾಗದ ಘಟನೆ. ಮುಂದೆಂದೂ ನಾನು ಮರೆತೂ ಸಹ 'ಸಭಿಕರೇ' ಎಂಬ ಶಬ್ದದ ಪ್ರಯೋಗವನ್ನು ಭಾಷಣ ಮಾಡುವ ಸಂದರ್ಭದಲ್ಲಿ ಮಾಡಲಿಲ್ಲ.

ವೈನಾಡಿನ ಧರ್ಮಾತ್ಮರಾದ ದಿವಂಗತ ಶ್ರೀ ಎಂ. ಎಸ್. ಪದ್ಮಯ್ಯನವರು ಮೈಸೂರಿನಲ್ಲಿ ಬಹುಶಃ ಪ್ರಥಮ ಬಾರಿಗೆ ಕೋಟೆ ಶ್ರೀ ಶಾಂತಿನಾಥ ಬಸದಿಯಲ್ಲಿ ಪ್ರತಿ ಭಾನುವಾರ ಸಂಜೆ 7 ರಿಂದ 8 ಗಂಟೆಯವರೆಗೆ ಶ್ರೀ ಶಾಂತಿರಾಜ ಶಾಸ್ತ್ರಿಯವರಿಂದ ಧಾರ್ಮಿಕ ಪ್ರವಚನದ ವ್ಯವಸ್ಥೆ ಮಾಡಿದ್ದರು. ಈ ಧಾರ್ಮಿಕ ಪ್ರವಚನದ ಕಾರ್ಯಕ್ರಮಕ್ಕೆ ನಮ್ಮ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳೆಲ್ಲರೂ ಹೋಗಲೇ ಬೇಕೆಂಬ ಕಡ್ಡಾಯವಿತ್ತು. ಶಾಸ್ತ್ರಿಯವರ ಆಕರ್ಷಕ ವ್ಯಕ್ತಿತ್ವ, ಮುಖದ ತೇಜಸ್ಸು, ಗೌರ ವರ್ಣಕ್ಕೆ ಒಪ್ಪುವಂತಹ ಕನ್ನಡಕ, ನೀಳ ನಾಸಿಕ, ಅರಮನೆಯಿಂದ ಕೊಡಲಾಗಿದ್ದ ನಾಲ್ಕು ಇಂಚು ಕಲಾಬತ್ತುವುಳ್ಳ ಕೆಂಪು ಬಣ್ಣದ ಶಾಲನ್ನು ಧರಿಸಿ ಪ್ರವಚನಕ್ಕೆ ನಿಂತರೆ ಸಭಾಸದರೆಲ್ಲರೂ ಮಂತ್ರ ಮುಗ್ಧರಾಗಿ ಅವರ ಮಾತನ್ನು ಕೇಳುತ್ತಿದ್ದರು. ಅವರ ಧಾರ್ಮಿಕ ಪ್ರವಚನಗಳು ಪಾಂಡಿತ್ಯ ಪೂರ್ಣವೂ, ಗಾಂಭೀರ್ಯ ಪೂರ್ಣವೂ ಆಗಿರುತ್ತಿದ್ದವು. ಅವರಲ್ಲಿ ಹಾಸ್ಯ ಪ್ರಜ್ಞೆ ಇರಲಿಲ್ಲವೆಂದಲ್ಲ. ಅಗ್ಗದ ಹಾಸ್ಯದ ಚಟಾಕಿಗಳನ್ನು ಹಾರಿಸಿ ಜನರನ್ನು ರಂಜಿಸುವ ಸ್ವಭಾವ ಅವರದಾಗಿರಲಿಲ್ಲ. ಇವರ ಪ್ರವಚನಗಳಿಂದ ಧಾರ್ಮಿಕ ಲಾಭ ಪಡೆದವರಲ್ಲಿ ನಾನೂ ಒಬ್ಬ ಎಂದು ಹೇಳಿಕೊಳ್ಳಲು ನನಗೆ ಹೆಮ್ಮೆಯಾಗುತ್ತದೆ.

ಮೈಸೂರಿನಲ್ಲಿ ಶಾಸ್ತ್ರಿಯವರು ದಳವಾಯಿ ಪ್ರೌಢ ಶಾಲೆ ಪಕ್ಕದ ರಸ್ತೆಯಲ್ಲಿರುವ ಮನೆ (ಹಾಲಿ ಶ್ರೀ ಸಿ. ಬಿ. ಇಂದ್ರಕುಮಾರ್‌ರವರ ಮನೆ) ಯಲ್ಲಿ ವಾಸಿಸುತ್ತಿದ್ದರು. ಅಲ್ಲಿಂದ ಅವರು ವಾಣಿ ವಿಲಾಸ ಪುರಂನಲ್ಲಿ ನವ ನಿರ್ಮಿತ ತಮ್ಮ ಸ್ವಂತ ಮನೆಗೆ ವಾಸಿಸಲು ಹೋದರು. ಒಮ್ಮೆ ಪ. ನಾಗರಾಜಯ್ಯನವರು ಮತ್ತು ನಾನು ಅವರ ಹೊಸ ಮನೆಗೆ ಒಂದೆರಡು ಧಾರ್ಮಿಕ ಪುಸ್ತಕಗಳನ್ನು ಖರೀದಿಸಲು ಹೋಗಿದ್ದೆವು. ಮನೆಗೆ ಬಂದವರು ದೊಡ್ಡವರಾಗಲೀ

ಚಿಕ್ಕವರಾಗಲೀ ಎಲ್ಲರನ್ನೂ ಶಾಸ್ತ್ರಿಯವರು ಸಮಾನ ಗೌರವದಿಂದ ಕಾಣುತ್ತಿದ್ದರು. ನಾವಿಬ್ಬರೂ ವಯಸ್ಸಿನಲ್ಲಿ ಚಿಕ್ಕವರಾದವರೂ ಬಹಳ ಪ್ರೀತಿ ವಾತ್ಸಲ್ಯಗಳಿಂದ ಬರ ಮಾಡಿಕೊಂಡು ಕುಳಿತುಕೊಳ್ಳುವಂತೆ ಸೂಚಿಸಿದರು. ನಂತರ ಕುಶಲ ಪ್ರಶ್ನೆ ಮಾಡಿ ಬಂದ ಸಮಾಚಾರವೇನೆಂದು ಕೇಳಿದರು. ನಾವು ಬಂದ ಉದ್ದೇಶವನ್ನು ತಿಳಿಸಿದೆವು. ಕೂಡಲೇ ಅವರು ಒಳಗೆ ಹೋಗಿ ಪುಸ್ತಕಗಳನ್ನು ತಂದು ಕೊಟ್ಟರು. ಪುಸ್ತಕಗಳ ಮೇಲೆ ನಮೂದಿಸಿದ್ದ ಬೆಲೆಯನ್ನು ಪಾವತಿ ಮಾಡಿದೆವು. ಪುಸ್ತಕದ ಮೌಲ್ಯ ಅಷ್ಟೇನೂ ದುಬಾರಿಯಾಗಿರಲಿಲ್ಲ. ಆದಾಗ್ಯೂ ನಮ್ಮನ್ನು ಆಶ್ಚರ್ಯಚಕಿತರನ್ನಾಗಿ ಮಾಡುವಂತೆ ಮುಗುಳ್‌ನಗೆ ನಗುತ್ತಾ ನಮ್ಮಿಬ್ಬರಿಗೂ ಎಂಟೆಂಟು ಆಣೆಗಳನ್ನು ವಾಪಸ್ ಮಾಡಿದರು. ಅಂದಿನ ಎಂಟಾಣೆ ಇಂದಿನ ಹತ್ತು ರೂಪಾಯಿಗಳಿಗೇನೂ ಕಮ್ಮಿ ಇಲ್ಲ. ಆಗ ನಮಗಾದ ಸಂತೋಷ ವರ್ಣನಾತೀತ. ಈ ಘಟನೆ ಶಾಸ್ತ್ರಿಯವರು ಚಿಕ್ಕವಯಸ್ಸಿನ ಹುಡುಗರು ಧಾರ್ಮಿಕ ಗ್ರಂಥಗಳನ್ನು ಓದುವಂತೆ ಪ್ರೋತ್ಸಾಹಿಸುತ್ತಿದ್ದರು ಎಂಬುದಕ್ಕೆ ಒಂದು ನಿದರ್ಶನ. ಇನ್ನೇನು ನಾವು ಅವರ ಮನೆಯಿಂದ ಹೊರಡಬೇಕು ಅನ್ನುವಷ್ಟರಲ್ಲಿ ಶಾಸ್ತ್ರಿಯವರು ಮನೆಯಲ್ಲಿ ಯಾರನ್ನೋ ಕರೆದು ನಮಗೆ ಹೊಸ ಮನೆಯನ್ನು ತೋರಿಸುವಂತೆ ತಿಳಿಸಿದರು. ಹೊಸಬರು ಮನೆಗೆ ಬಂದರೆ ಅವರಿಗೆ ಮನೆ ತೋರಿಸುವ ಸಂಪ್ರದಾಯ ನಮ್ಮಲ್ಲಿ ಕೆಲವರಿಗಾದರೂ ಈಗಲೂ ಇದೆ. ಅದೇ ರೀತಿ ನಮಗೆ ಮನೆಯನ್ನು ತೋರಿಸಿ ವಾಪಸ್ ಕಳುಹಿಸುವಾಗ ಹಣ್ಣು ಹಾಲು ಕೊಟ್ಟು ಉಪಚರಿಸಿ ಬೀಳ್ಕೊಟ್ಟರು. ಇದರಿಂದ ಶಾಸ್ತ್ರಿಯವರ ಹಿರಿತನ, ಸಜ್ಜನಿಕೆ ಹಾಗೂ ಅತಿಥಿಸತ್ಕಾರದ ಒಂದು ಪರಿಚಯ ನಮಗೆ ಆಗುತ್ತದೆ. ನಾಲ್ಕು ದಶಕಗಳಿಗೂ ಹೆಚ್ಚಿನ ಸಮಯವಾದರೂ ಇಂದೂ ಸಹ ಶಾಸ್ತ್ರಿಯವರ ಮಾತು ಬಂದಾಗಲೆಲ್ಲಾ ಮೇಲ್ಕಂಡ ಪ್ರಸಂಗಗಳನ್ನೂ ಬಂಧು ಮಿತ್ರರಿಗೆ ತಿಳಿಸಲು ನನಗೆ ಸಂತೋಷವಾಗುತ್ತದೆ.

ಅಪಾರವಾದ ಜೈನ ಸಾಹಿತ್ಯವನ್ನು ಸಮಕಾಲೀನ ಸಮಾಜಕ್ಕೆ ಪರಿಚಯ ಮಾಡಿಕೊಟ್ಟ ಮಹಾನ್ ವಿದ್ವಾಂಸರಾದ ಶ್ರೀ ಎ. ಶಾಂತಿರಾಜ ಶಾಸ್ತ್ರಿಗಳವರ ಜೀವಿತ ಕಾಲದಲ್ಲಿಯೇ ನಾವು ಇದ್ದೆವು, ಅವರನ್ನು ಕಂಡಿದ್ದೆವು, ಅವರನ್ನು ಬಹಳ ಸಮೀಪದಿಂದ ದರ್ಶಿಸಿದ್ದೆವು ಎನ್ನುವುದು ನಮ್ಮ ಜೀವನದ ಭಾಗ್ಯಗಳಲ್ಲಿ ಒಂದು ಎಂಬುದಾಗಿ ನಾನು ತಿಳಿಯುತ್ತೇನೆ. ●

ವಿದ್ವಾಂಸನ ಕರ್ತವ್ಯ

ರಾತ್ರಿಕಾಲದಲ್ಲಿ ಕತ್ತಲೆಯು ವ್ಯಾಪಿಸುವುದು ಸ್ವಾಭಾವಿಕವೇ ಆಗಿದ್ದರೂ ದೀಪ ಪ್ರಕಾಶದಿಂದ ಅದನ್ನು ಸ್ವಲ್ಪದೂರ ಮಾಡಿ ಸ್ವಕಾರ್ಯವನ್ನು ಸಾಧಿಸಿಕೊಳ್ಳುವಂತೆ ಅನಿವಾರ್ಯವಾಗಿ ಪ್ರಾಪ್ತವಾಗಿರುವ ಕಾಲದೋಷಾದಿ ಪ್ರತಿಬಂಧಕ ಕಾರಣಗಳು ಯಾವುವೇ ಇದ್ದರೂ ಪ್ರಯತ್ನದಿಂದ ಸಾಧ್ಯವಾದಷ್ಟು ಅವುಗಳನ್ನು ದೂರ ಮಾಡಿ ಜನರಲ್ಲಿ ಧಾರ್ಮಿಕ ಸಂಸ್ಕಾರಾದಿಗಳನ್ನುಂಟು ಮಾಡಲು ಪ್ರಯತ್ನಿಸುವುದು ಪ್ರತಿಯೊಬ್ಬ ವಿದ್ವಾಂಸನ ಪವಿತ್ರ ಕರ್ತವ್ಯವಾಗಿರುತ್ತದೆ.

ಸೂರ್ಯನಿಂದ ಕತ್ತಲೆಯು ದೂರವಾಗುವಂತೆ ದೀಪದಿಂದ ಆಗದಿದ್ದರೂ ಪರಿಮಿತ ಕ್ಷೇತ್ರದಿಂದ ದೂರವಾಗಿಯೇ ತೀರುವುದು.

—ಎ. ಶಾಂತಿರಾಜ ಶಾಸ್ತ್ರಿ
(೧೯೩೩)

ನಾನು ಕಂಡ ಶ್ರೀ ಎ. ಶಾಂತಿರಾಜಶಾಸ್ತ್ರಿಗಳು

— ಶ್ರೀ ಎಸ್. ಬಿ. ವಸಂತರಾಜಯ್ಯ

ಈಗ ಸುಮಾರು 55 ವರ್ಷಗಳ ಹಿಂದಿನ ಮಾತು. ನಮ್ಮೂರು ಸಾಲಿಗ್ರಾಮದ ಹಿರಿಯರೂ, ವೃದ್ಧರೂ, ಆಚಾರ ಸಂಪನ್ನರೂ ಆದ ಉಪಾಧ್ಯೆರ ನಾಗರಾಜಯ್ಯನವರು ಇಪ್ಪತ್ತು ಸಾವಿರಕ್ಕೂ ಹೆಚ್ಚಿನ ರೂ.ಗಳನ್ನು ವೆಚ್ಚಮಾಡಿ ನೂತನ ಶಿಲಾಮಯ ದೇವಸ್ಥಾನವನ್ನು ನಿರ್ಮಾಣ ಮಾಡಿ ಮಹಾವೈಭವದಿಂದ ಪಂಚಕಲ್ಯಾಣ ಮಹೋತ್ಸವವನ್ನು ನೆರವೇರಿಸಿದರು. ಸ್ಥಳ ಪರಸ್ಥಳಗಳಿಂದ ಸಾವಿರಾರು ಜನ ಸಮಾರಂಭಕ್ಕೆ ಆಗಮಿಸಿದ್ದರು. ಈ ನೂತನ ಬಸದಿಯಲ್ಲಿ ಪ್ರತಿಷ್ಠಾಪನೆಯಾಗುವ ಮೂರ್ತಿ ಭಗವಾನ್ ಪಾರ್ಶ್ವನಾಥರದಾಗಿತ್ತು. ಅವರು ಬಹು ಜನರ ಮನಸ್ಸನ್ನು ಗೆದ್ದ ತೀರ್ಥಂಕರರಾಗಿದ್ದಾರೆ. ಆದ್ದರಿಂದಲೇ ಶ್ರೀ ಪಾರ್ಶ್ವನಾಥರನ್ನು ಕುರಿತು ಆಚಾರ್ಯ ಗುಣಭದ್ರರು ತಮ್ಮ ಉತ್ತರ ಪುರಾಣದಲ್ಲಿ,

ಅನಭಿವ್ಯಕ್ತ ಮಹಾತ್ಮ್ಯಾ
ದೇವ ತೀರ್ಥಂಕರಾಃ ಪರೇ ।
ತ್ವಮೇವವ್ಯಕ್ತಮಾಹಾತ್ಮ್ಯೋ
ವಾಚ್ಯತೇ ಸಾಧು ಸತ್ಕಥಾ ॥ 28-4

'ಹೇ ದೇವ ಇತರ ತೀರ್ಥಂಕರರ ಮಹಿಮೆ ಪ್ರಕಟವಾಗಿಲ್ಲ. ಆದರೆ ತಮ್ಮ ಮಹಾತ್ಮ್ಯ ಅತಿಶಯವಾಗಿ ಪ್ರಕಾಶಗೊಂಡಿದೆ. ಆದ್ದರಿಂದ ನಿಮ್ಮ ಕಥೆಯು ಚೆನ್ನಾಗಿ ಹೇಳಲ್ಪಡುತಕ್ಕುದಾಗಿದೆ' ಎಂದಿದ್ದಾರೆ. ಈ ಕಾರಣದಿಂದಲೇ ಇರಬೇಕು ನಮ್ಮ ನಾಡಿನ ಬಹಳಷ್ಟು ಮಂದಿರಗಳಲ್ಲಿ ಶ್ರೀ ಪಾರ್ಶ್ವನಾಥರ ಮೂರ್ತಿಗಳನ್ನೇ ಪ್ರತಿಷ್ಠಾಪಿಸಿದ್ದಾರೆ. ಶ್ರೀ ನಾಗರಾಜಯ್ಯನವರೂ ಸಹ ಇಂಥ ಮೂರ್ತಿಯನ್ನೇ ಪ್ರತಿಷ್ಠಾಪಿಸಲು ಆರಿಸಿಕೊಂಡದ್ದು ಸಹಜವೂ ಸೂಕ್ತವಾದುದೂ ಆಗಿತ್ತು.

ಈ ರೀತಿ ನಡೆಯುವ ಶುಭ ಕಾರ್ಯಗಳ ಸಂದರ್ಭದಲ್ಲಿ ಶಾಸ್ತ್ರದಾನ ಮಾಡುವ ಒಳ್ಳೆಯ ಸಂಪ್ರದಾಯ ಜೈನರಲ್ಲಿ ಬಹಳ ಕಾಲದಿಂದ ನಡೆದು ಬಂದಿದೆ. ಜೈನ ಶಾಸ್ತ್ರ ಸಂಪತ್ತು ಸಂರಕ್ಷಿತವಾಗಿ ಬಂದದ್ದು ಈ ಶಾಸ್ತ್ರದಾನ ಒಂದರಿಂದಲೇ ಎಂದು ಹೇಳಬಹುದು. ಅಂತೆಯೇ ಶ್ರೀ ನಾಗರಾಜಯ್ಯನವರೂ ಸಹ ಈ ಪ್ರತಿಷ್ಠಾಪನೆಯ ನೆನಪಿಗಾಗಿ ಶ್ರೀ ಪಾರ್ಶ್ವನಾಥ ತೀರ್ಥಂಕರರ ಜೀವನ ಚರಿತ್ರೆಯನ್ನು ಕುರಿತಾದ ಒಂದು ಚಿಕ್ಕ ಪುಸ್ತಕವನ್ನು ಬರೆಸಿ ಪ್ರಕಟಿಸಿದರು. ಈ ಕಿರು ಹೊತ್ತಿಗೆಯ ಕರ್ತೃಗಳು ಶ್ರೀ ಎ. ಶಾಂತಿರಾಜಶಾಸ್ತ್ರಿಗಳೇ ಆಗಿದ್ದರು. ಅಂದು ಅವರೇ ಈ ಪುಸ್ತಕದ ಪರಿಚಯ ಮಾಡಿಕೊಟ್ಟರು. ಶಾಸ್ತ್ರಿಗಳದು ಕೆಂಪುಮಿಶ್ರಿತವಾದ ಬಿಳುಪು ಬಣ್ಣ. ಮಧ್ಯಮ ನಿಲುವು. ಅಧ್ಯಯನವೆಂಬ ತಪದಿಂದ ಕೃಶಗೊಂಡ ದೇಹ ಆದರೂ ಜ್ಞಾನದ ಬೆಳಕು ಚೆಲ್ಲುತ್ತಿರುವ ಮುಖಮಂಡಲ. ಪಂಡಿತರಿಗೆ ಭೂಷಣಪ್ರಾಯವಾದ ಕೆಂಪುಜರತಾರಿ ಶಾಲು ಹಾಗೂ ಕಲಾಬತ್ತಿನ ಪೇಟ. ಗಾಂಭೀರ್ಯ ತುಂಬಿದ ಮಾತುಗಳು ಹೀಗೆ ಅವರನ್ನು ನೋಡಿದ ಕೂಡಲೇ ಯಾರಿಗಾದರೂ ಅವರಲ್ಲಿ ಗೌರವಾದರಗಳು ಹುಟ್ಟುತ್ತಿದ್ದವು. ಅಂತಹ ಘನ ವ್ಯಕ್ತಿತ್ವ ಅವರದಾಗಿತ್ತು; ಅವರ ಈ ಮೊದಲ ನೋಟವೇ ನನಗೆ ಅವರಲ್ಲಿ ಅಪಾರ ಭಕ್ತಿ ಉಂಟಾಗುವಂತೆ ಮಾಡಿತು.

ಪಂಚಕಲ್ಯಾಣ ಸಮಾರಂಭದಲ್ಲಿ ದೊಡ್ಡವರಿಗೆಲ್ಲ ಒಂದೊಂದು ಪುಸ್ತಕವನ್ನು ಶಾಸ್ತ್ರದಾನ ರೂಪದಲ್ಲಿ ಕೊಟ್ಟರು. ನಮ್ಮ ತಾಯಿಗೂ ಒಂದು ಪುಸ್ತಕ ದೊರಕಿತು. ಅಂದು ರಾತ್ರಿ ನನ್ನಿಂದ ಆ ಪುಸ್ತಕ ಓದಿಸಿ ಕೇಳಿದರು. ಏಕೆಂದರೆ ನಮ್ಮ ತಾಯಿಯ ಹೆಸರು ಸರಸ್ವತಿ ಎಂದಿದ್ದರೂ ಅವರಿಗೆ ಓದು ಬರಹ ಬರುತ್ತಿರಲಿಲ್ಲ. ಹೀಗೆ ಶ್ರೀ ಶಾಂತಿರಾಜಶಾಸ್ತ್ರಿಗಳು ಬರೆದ ಶ್ರೀ ಪಾರ್ಶ್ವನಾಥ ತೀರ್ಥಂಕರರ ಚರಿತೆ ನಾನು ಓದಿದ ಮೊದಲನೆಯ ಜೈನ ಪುಸ್ತಕವಾಗಿತ್ತು. ಈ ಓದು ನನ್ನಲ್ಲಿ ಅಧ್ಯಯನ ಶ್ರದ್ಧೆಯನ್ನು ಹುಟ್ಟಿಸಿತು. ಅಲ್ಲಿಂದ

ಇಲ್ಲಿಯವರೆಗೂ ಈ ಅಧ್ಯಯನವನ್ನು ನಿರಂತರವಾಗಿ ನಡೆಸಿಕೊಂಡು ಬಂದಿದ್ದೇನೆ. ಅದು ನನಗೆ ಬೆಳಕು ಕೊಟ್ಟಿದೆ. ಅಪಾರವಾದ ಆನಂದವನ್ನು ನೀಡಿದೆ. ಆ ದಿನ ನನ್ನ ಆ ಎಳೆಯ ಮನಸ್ಸಿನ ಮೇಲೆ ಅಚ್ಚೊತ್ತಿ ನಿಂತ ಶ್ರೀ ಶಾಸ್ತ್ರಿಗಳ ಆ ಭವ್ಯ ವ್ಯಕ್ತಿತ್ವ ಹಾಗೂ ಆ ಚಿಕ್ಕ ಹೊತ್ತಿಗೆಯ ಓದು ನನ್ನ ಜೀವನದುದ್ದಕ್ಕೂ ಪ್ರೇರಕ ಶಕ್ತಿಯಾಗಿ ನಿಂತು ಕೆಲಸ ಮಾಡುತ್ತಿದೆಯೆಂದು ಭಾವಿಸಿದ್ದೇನೆ.

ನಮ್ಮೂರಿನಲ್ಲಿ ಮಿಡಲ್ ಸ್ಕೂಲ್ ಮಾತ್ರ ಇದ್ದುದರಿಂದ ಎಲ್. ಎಸ್. ಪರೀಕ್ಷೆ ಮುಗಿಸಿದ ಮೇಲೆ ಹೈಸ್ಕೂಲು ವಿದ್ಯಾಭ್ಯಾಸಕ್ಕೆ ನಾನು ಮೈಸೂರಿಗೆ ಬರಬೇಕಾಯಿತು. ಹೊರಗಿನಿಂದ ಬಂದ ಜೈನ ಹುಡುಗರಿಗೆ ಅಂದು ಇದ್ದ ಒಂದೇ ಒಂದು ಆಶ್ರಯ ಸ್ಥಾನವೆಂದರೆ ಅದು ಎಂ. ಎಲ್. ಜೈನ ಬೋರ್ಡಿಂಗ್ ಹೋಮ್. ಇದು ತನ್ನ ಗತವೈಭವನ್ನೇನೂ ಕಳೆದುಕೊಂಡಿತ್ತು ನಿಜ. ಇದರ ಸ್ಥಾಪಕರಾದ ಎಮ್. ಎಲ್. ವರ್ಧಮಾನಯ್ಯನವರು ಇರುವವರೆಗೂ ಇಲ್ಲಿನ ವಿದ್ಯಾರ್ಥಿಗಳು ರಾಜಾತಿಥ್ಯವನ್ನು ಪಡೆಯುತ್ತಿದ್ದರಂತೆ. ಪ್ರತಿನಿತ್ಯ ಊಟವಾದ ಮೇಲೆ ಕುಡಿಯಲು ಹಾಲು, ವಾರಕ್ಕೊಮ್ಮೆ ಅಭ್ಯಂಜನ ಸ್ನಾನ ದೊರಕುತ್ತಿತ್ತು. ಲೌಕಿಕ ಶಿಕ್ಷಣದ ಜೊತೆ ಧಾರ್ಮಿಕ ಶಿಕ್ಷಣವನ್ನೂ ಕಡ್ಡಾಯವಾಗಿ ಕೊಡಲಾಗುತ್ತಿತ್ತು. ಇದರಿಂದ ವಿದ್ಯಾರ್ಥಿಗಳಲ್ಲಿ ಶಿಸ್ತಿನ ಜೀವನ ರೂಢಿಯಾಯಿತು. ಆಗ ಇಲ್ಲಿ ಓದಿದ ಅನೇಕರು ಸರ್ಕಾರದ ಉನ್ನತ ಹುದ್ದೆಗಳನ್ನು ಅಲಂಕರಿಸಿ ಈ ಸಂಸ್ಥೆಗೆ ಒಂದು ದೊಡ್ಡ ಗೌರವ ತಂದು ಕೊಟ್ಟಿದ್ದರು. ಆದರೆ ಶ್ರೀ ವರ್ಧಮಾನಯ್ಯನವರು ಸ್ವರ್ಗಸ್ಥರಾದ ಮೇಲೆ ಈ ಬೋರ್ಡಿಂಗಿನ ವ್ಯವಸ್ಥೆಯೂ ಏರುಪೇರಾಯಿತು. ಆದರೂ ಉಚಿತವಾಗಿ ಉಳಿಯಲು ಇಲ್ಲಿ ಅವಕಾಶ ದೊರಕುತ್ತಿತ್ತು. ವಿದ್ಯಾರ್ಥಿಗಳೇ ಕೂಡಿ ಊಟದ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದರು.

ಈ ಬೋರ್ಡಿಂಗಿನಲ್ಲಿ ಓದುವ ವಿದ್ಯಾರ್ಥಿಗಳ ಹಾಗೂ ನಗರದ ಶ್ರಾವಕ ಶ್ರಾವಕಿಯರ ದರ್ಶನ ಮತ್ತು ಪೂಜೆಗಳಿಗಾಗಿ ಈ ಆವರಣದೊಳಗೇ ಶ್ರೀ ಪಾರ್ಶ್ವನಾಥ ಚೈತ್ಯಾಲಯವನ್ನು ನಿರ್ಮಾಣ ಮಾಡಲಾಗಿತ್ತು. ಇಲ್ಲಿಗೆ ಶಾಸ್ತ್ರಿಗಳು ಆಗಾಗ್ಗೆ ಬರುತ್ತಿದ್ದರು. ಈ ಬೋರ್ಡಿಂಗಿಗೂ ಶಾಸ್ತ್ರಿಗಳಿಗೂ ಅತ್ಯಂತ ನಿಕಟ ಸಂಪರ್ಕವಿತ್ತು. ವರ್ಧಮಾನಯ್ಯನವರ ಕಾಲದಲ್ಲಿ ಶ್ರೀ ನೇಮಿಸಾಗರ ವರ್ಣಿಗಳ ಜೊತೆ ಶ್ರೀ ಶಾಂತಿರಾಜ ಶಾಸ್ತ್ರಿಗಳು ಇಲ್ಲಿನ ವಿದ್ಯಾರ್ಥಿಗಳಿಗೆ ಜೈನಧರ್ಮದ ಪಾಠ ಹೇಳಿಕೊಡುತ್ತಿದ್ದರು. ಅಷ್ಟಾಹ್ನಿಕ. ಅನಂತನೋಂಪಿ, ದಶಲಕ್ಷಣ ಮೊದಲಾದ ವಿಶೇಷ ಪರ್ವದಿನಗಳಲ್ಲಿ ನಗರದ ಶ್ರಾವಕರೆಲ್ಲ ಬಸದಿಯಲ್ಲಿ ಕೂಡುತ್ತಿದ್ದರು. ಅವರಿಗೆ ಶಾಸ್ತ್ರಿಗಳು ಧರ್ಮೋಪದೇಶ ಹೇಳುತ್ತಿದ್ದರು. ಶಾಸ್ತ್ರಿಗಳ ಶಕ್ತಿಯನ್ನು ಬಲ್ಲ ಶ್ರೀ ವರ್ಧಮಾನಯ್ಯನವರು ಜನರಲ್ಲಿ ಸದಾ ಧಾರ್ಮಿಕ ಜಾಗೃತಿ ಉಂಟಾಗುವಂತೆ ಮಾಡಲು ಅವರನ್ನು ಬಳಸಿಕೊಂಡರು. ಅವರಿಗೂ ಸಂಪೂರ್ಣ ಆಶ್ರಯ ನೀಡಿ ಕವಿವರ ಕಾಮಧೇನುವಾದರು. ಆದರೆ ವರ್ಧಮಾನಯ್ಯನವರು 1926ರಲ್ಲಿ ದೈವಾಧೀನರಾದ ಮೇಲೆ ಈ ಬೋರ್ಡಿಂಗಿನೊಡನೆ ಶಾಸ್ತ್ರಿಗಳ ಸಂಪರ್ಕವೂ ಕಡಿಮೆಯಾಯಿತು. ಆದರೂ ಆಗಾಗ್ಗೆ ಬಂದು ಹೋಗುತ್ತಿದ್ದರು.

ನಾವು ಬೋರ್ಡಿಂಗಿನ ವಿದ್ಯಾರ್ಥಿಗಳೆಲ್ಲ ಕೂಡಿ 'ಜೈನ ಗೆಳೆಯರ ಕೂಟ' ಎಂಬ ಸಂಘವನ್ನು ಕಟ್ಟಿಕೊಂಡಿದ್ದೆವು. ಚರ್ಚಾಸ್ಪರ್ಧೆ, ಉಪನ್ಯಾಸ ಮೊದಲಾದ ಕಾರ್ಯಕ್ರಮಗಳನ್ನು ಇದರ ಆಶ್ರಯದಲ್ಲಿ ನಡೆಸುತ್ತಿದ್ದೆವು. ನಾನು ಈ ಕೂಟದ ಸಕ್ರಿಯ ಸದಸ್ಯನೊಬ್ಬನಾಗಿದ್ದೆ. ಎಷ್ಟೋ ಬಾರಿ ಶಾಸ್ತ್ರಿಗಳು ಈ ಕೂಟದ ಆಶ್ರಯದಲ್ಲಿ ಭಾಷಣ ಮಾಡಿದ್ದರು. ಹೀಗಾಗಿ ಅವರನ್ನು ಹತ್ತಿರದಿಂದ ತಿಳಿಯಲು ನನಗೆ ಅವಕಾಶ ದೊರಕುತ್ತಿತ್ತು. ಒಮ್ಮೆ ದೇಶಭೂಷಣ ಕುಲಭೂಷಣರೆಂಬ ಇಬ್ಬರು ಐಲಕರು ಬೋರ್ಡಿಂಗಿನಲ್ಲಿ ತಂಗಿದ್ದರು. ಅವರಿಗೆ ಪಾಠ ಹೇಳಿ ಕೊಡಲು ಶಾಸ್ತ್ರಿಗಳು ಆಗಾಗ್ಗೆ ಬರುತ್ತಿದ್ದರು. ಅವರಿಗೆ ಪಾಠ ಹೇಳಿ ಕೊಡುವಾಗ ನಾನೂ ಸಹ ಎಷ್ಟೋ ದಿವಸಗಳು ಅಲ್ಲಿ ಹೋಗಿ ಕುಳಿತುಕೊಳ್ಳುತ್ತಿದ್ದೆ. ತತ್ತ್ವಾರ್ಥಸೂತ್ರ, ಮೂಲಾಚಾರ, ಗೊಮ್ಮಟಸಾರ, ಪರಮಾತ್ಮಪ್ರಕಾಶ ಮೊದಲಾದ ಮಹಾನ್ ಗ್ರಂಥಗಳಿಗೆ ಕನ್ನಡ ವ್ಯಾಖ್ಯಾನ ಇರುವುದನ್ನು ತಿಳಿಸಿ ಅವುಗಳಿಂದ ಪಾಠ ಹೇಳಿಕೊಡುತ್ತಿದುದನ್ನು ಕಂಡಿದ್ದೆ. ಅವರ ಸಂಸ್ಕೃತ, ಪ್ರಾಕೃತ ಹಾಗೂ ಕನ್ನಡ ಭಾಷೆಗಳ ಪಾಂಡಿತ್ಯ ಕಂಡು ಬೆರಗಾದೆ. ಬಾಲಚಂದ್ರ ತತ್ತ್ವಾರ್ಥ ಸೂತ್ರದ ಮೇಲೆ ವಿದ್ವತ್ಪೂರ್ಣವಾದ ತತ್ತ್ವರತ್ನ ಪ್ರದೀಪಿಕೆ ಎಂಬ ಕನ್ನಡ ಟೀಕೆಯನ್ನು ಬರೆದಿದ್ದಾನೆ,

ಶಾಸ್ತ್ರಿಗಳು ಈ ಗ್ರಂಥವನ್ನು ಸಂಪಾದಿಸಿ ಪ್ರಕಟಣೆಗೆ ಸಿದ್ಧಮಾಡುತ್ತಿದ್ದರು. ಜೈನ ಧರ್ಮವನ್ನು ತಿಳಿಯ ಬೇಕಾದರೆ ಯಾವ ಯಾವ ಗ್ರಂಥಗಳನ್ನು ಓದಬೇಕೆಂದು ನಾನು ಶಾಸ್ತ್ರಿಗಳನ್ನು ಕೇಳಲಾಗಿ ಅವರು ತತ್ತ್ವಾರ್ಥ ಸೂತ್ರ ರತ್ನಕರಂಡಕಶ್ರಾವಕಾಚಾರ ಮತ್ತು ದ್ರವ್ಯ ಸಂಗ್ರಹಗಳನ್ನು ಆಮೂಲಾಗ್ರವಾಗಿ ಓದಿದರೆ ಸಾಕು ಇಡೀ ಜೈನ ದರ್ಶನದ ಸಾರ ತಿಳಿಯುತ್ತದೆ ಎಂದರು. ಅಂದಿನಿಂದ ಈ ಗ್ರಂಥಗಳು ನನ್ನ ನಿತ್ಯದ ಸ್ವಾಧ್ಯಾಯ ಗ್ರಂಥಗಳಾಗಿವೆ.

ಶಾಸ್ತ್ರಿಗಳ ಮನೆ ಇದ್ದದ್ದು ಮೈಸೂರು ವೀಣೆ ಶೇಷಣ್ಣನವರ ರಸ್ತೆಯಲ್ಲಿ. ಅದರ ಹೆಸರು ಶಾಂತಿನಿವಾಸ. ನಿಜಕ್ಕೂ ಶಾಂತಿಯೇ ಮೈವೆತ್ತು ನಿಂತ ನಿವಾಸ ಅದಾಗಿತ್ತು. ಅದು ಧರ್ಮ, ಸಾಹಿತ್ಯ ಮತ್ತು ಸಂಗೀತದ ತೌರುಮನೆಯಾಗಿತ್ತು. ಅನೇಕ ಧಾರ್ಮಿಕ ಚಟುವಟಿಕೆಗಳ ಕೇಂದ್ರವಾಗಿತ್ತು. ಅಲ್ಲಿ ಶ್ರುತ ಪಂಚಮಿ ದಿನದಂದು ಸಾಹಿತ್ಯ ಮತ್ತು ಸಂಗೀತದ ರಸದೌತಣವನ್ನು ಉಣಬಡಿಸು ತ್ತಿದ್ದರು. ನಾನೂ ಒಂದೆರಡು ಬಾರಿ ಈ ಶ್ರುತ ಪಂಚಮಿ ಕಾರ್ಯಕ್ರಮಕ್ಕೆ ಹೋಗಿದ್ದು ಈಗಲೂ ಚೆನ್ನಾಗಿ ಜ್ಞಾಪಕ ವಿದೆ. ಶಾಸ್ತ್ರಿಗಳ ಮನೆಯ ಹತ್ತಿರವೇ ನಾನು ಓದು ತ್ತಿದ್ದ ಬನುಮಯ್ಯನವರ ಹೈಸ್ಕೂಲು ಇದ್ದದ್ದು. ಆದ್ದರಿಂದ ನನಗೆ ಅಲ್ಲಿಗೆ ಹೋಗಲು ತುಂಬ ಹತ್ತಿರ ವಾಗುತ್ತಿತ್ತು. ಸಮಾರಂಭಕ್ಕೆ ಬಂದವರನ್ನೆಲ್ಲ ಅತ್ಯಂತ ಆದರದಿಂದ ಬರಮಾಡಿಕೊಳ್ಳುತ್ತಿದ್ದ ಅವರ ಸೌಜನ್ಯಗುಣ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿತ್ತು.

ಶ್ರೀ ಶಾಂತಿರಾಜಶಾಸ್ತ್ರಿಗಳ ಘನವಿದ್ವತ್ತನ್ನು ಕಂಡು ಅಂದಿನ ಮೈಸೂರು ದೊರೆಗಳಾದ ಶ್ರೀ ಜಯ ಚಾಮರಾಜ ಒಡೆಯರವರು 1941ರಲ್ಲಿ ಆಸ್ಥಾನ ಮಹಾ ವಿದ್ವಾನ್ ಪದವಿಯನ್ನು ಹಾಗೂ 1946ರಲ್ಲಿ ಪಂಡಿತರತ್ನ ಬಿರುದನ್ನು ದಯಪಾಲಿಸಿ ಗೌರವಿಸಿದರು. ಈ ಎರಡೂ ಸಂದರ್ಭಗಳಲ್ಲಿ ಮೈಸೂರಿನ ಜೈನ ಜನತೆ ಶಾಸ್ತ್ರಿ ಗಳಿಗೆ ಸನ್ಮಾನ ಮಾಡಿದ ಸಭೆಗಳನ್ನು ನೋಡುವ ಅವಕಾಶ ನನಗೆ ದೊರಕಿತ್ತು. ಪಂಡಿತರತ್ನ ಪದವಿ ಬಂದಾಗಲಂತೂ ನಾವು ಜೈನ ಬೋರ್ಡಿಂಗಿನ ವಿದ್ಯಾರ್ಥಿಗಳೆಲ್ಲ ಕೂಡಿ ನಮ್ಮ ಕೂಟದ ಅಧ್ಯಕ್ಷರಾದ ಶ್ರೀ ವೈ.ಜಿ. ಪದ್ಮರಾಜಯ್ಯ ನವರ ಅಧ್ಯಕ್ಷತೆಯಲ್ಲಿ ಒಂದು ಒಳ್ಳೆಯ ಕಾರ್ಯಕ್ರಮ ವನ್ನು ಏರ್ಪಡಿಸಿದ್ದೆವು. ಜೈನ ಮಿತ್ರಕೂಟದ ಸಕ್ರಿಯ ಸದಸ್ಯರಲ್ಲಿ ನಾನೊಬ್ಬನಾಗಿದ್ದುದರಿಂದ ಈ ಸಮಾರಂಭದ ವ್ಯವಸ್ಥೆಯಲ್ಲಿ ನನ್ನ ಪಾತ್ರವೂ ಇತ್ತು. ಅದೊಂದುಗಳಿಗೆ ಚೆನ್ನಾಗಿ ಓದಿ ಜ್ಞಾನವಂತರಾಗಬೇಕೆಂದೂ ದಿನಕ್ಕೆ 10-15 ನಿಮಿಷಗಳಾದರೂ ಸ್ವಾಧ್ಯಾಯ ಮಾಡಬೇಕೆಂದೂ ಹೇಳಿದರು. ಓದಿ ಜ್ಞಾನವಂತರಾದರೆ ಮಾತ್ರ ಸಾಲದು, ಉತ್ತಮ ಆಚಾರವಂತರೂ ಆಗಬೇಕೆಂದೂ, ಏಕೆಂದರೆ ಆಚಾರವೇ ಪರಮಧರ್ಮವಾಗಿದೆ ಎಂದರು. ಲೌಕಿಕ ಹಾಗೂ ಆಗಮಿಕ ವಿದ್ಯೆಯ ಗುರಿ ವ್ಯಕ್ತಿಯ ಶೀಲ ಮತ್ತು ನಡತೆಯನ್ನು ಸುಧಾರಿಸುವುದೇ ಆಗಿದೆ. ಆದ್ದರಿಂದ ವಿದ್ಯಾರ್ಥಿಗಳೆಲ್ಲ ಶೀಲ ಸಜ್ಜನಿಕೆಗಳನ್ನು ರೂಢಿಸಿಕೊಳ್ಳ ಬೇಕೆಂದು ಹರಸಿ ಹಾರೈಸಿದರು.

ಮೈಸೂರು ಮಹಾರಾಜ ಕಾಲೇಜಿನಲ್ಲಿ ನಾನು ಬಿ.ಎ. ಕಲಿಯುತ್ತಿದ್ದ ಕಾಲದಲ್ಲಿ ತರಗತಿಗಳಿಲ್ಲದ ವೇಳೆ ಯಲ್ಲಿ ಕಾಲೇಜಿನ ಹಿಂಭಾಗದಲ್ಲಿದ್ದ ಪ್ರಾಚ್ಯಪುಸ್ತಕ ಭಂಡಾರಕ್ಕೇ (ಒರಿಯಂಟಲ್ ಲೈಬ್ರರಿಗೆ) ಹೋಗಿ ಸಂಶೋಧನ ಗ್ರಂಥಗಳನ್ನು ಅವಲೋಕಿಸುತ್ತಿದ್ದೆ. ಬಿ.ಎ.,ಯಲ್ಲಿ, ನಾನು ಆರಿಸಿಕೊಂಡ ಐಚ್ಛಿಕ ವಿಷಯಗಳು ರಾಜ್ಯಶಾಸ್ತ್ರ, ಸಮಾಜಶಾಸ್ತ್ರ ಮತ್ತು ಮನಃಶಾಸ್ತ್ರಗಳಾ ದರೂ ಹೆಚ್ಚಿಗೆ ಓದಿದ್ದು ಧರ್ಮ, ಸಾಹಿತ್ಯ ಮತ್ತು ಸಂಶೋಧನೆಗಳಿಗೆ ಸಂಬಂಧಿಸಿದ ಕೃತಿಗಳನ್ನೇ. ಆದ್ದರಿಂದ ಈ ಗ್ರಂಥಗಳು ಎಲ್ಲೆಲ್ಲಿ ದೊರಕುತ್ತಿತ್ತೋ ಅಲ್ಲಿಗೆಲ್ಲ ಹೋಗಿ ಓದಿ ಬರುತ್ತಿದ್ದೆ. ಒಮ್ಮೆ ಪ್ರಾಚ್ಯ ಪುಸ್ತಕ ಭಂಡಾರದಲ್ಲಿ ಕುಳಿತು ಡಾ॥ ಎ. ಎನ್. ಉಪಾಧ್ಯೆಯರು ಸಂಪಾದಿಸಿ ಪ್ರಕಟಿಸಿದ ಆಚಾರ್ಯ ಕುಂದ ಕುಂದರ ಪ್ರವಚನ ಸಾರವನ್ನು ಓದುತ್ತಿದ್ದೆ. ಹಾಗೂ ಟಿಪ್ಪಣಿ ಯನ್ನೂ ಬರೆದುಕೊಳ್ಳುತ್ತಿದ್ದೆ. ಅಲ್ಲಿಯೇ ಸಂಶೋಧಕ ಸಹಾಯಕರಾಗಿ ಕೆಲಸಮಾಡುತ್ತಿದ್ದ ಶಾಸ್ತ್ರಿಗಳು ಇದನ್ನು ಗಮನಿಸಿದರು. ನನ್ನನ್ನು ಕರೆದು ಟಿಪ್ಪಣಿ ನೋಡಿದರು. ಸಂತೋಷಪಟ್ಟರು. ಉಪಾಧ್ಯೆಯವರ ಎಲ್ಲ ಪುಸ್ತಕ ಗಳನ್ನು ನೋಡುವಂತೆ ಹೇಳಿದರು. ಅಷ್ಟೇ ಅಲ್ಲ ತಾವೇ ಎದ್ದು ಹೋಗಿ ಅವರು ಸಂಪಾದಿಸಿದ ಮತ್ತೊಂದು ಪುಸ್ತಕ ಯೋಗೀಂದು ದೇವರ ಪರಮಾತ್ಮ ಪ್ರಕಾಶವನ್ನು ತಂದುಕೊಟ್ಟರು. ನಾನು ಡಾ॥ ಉಪಾಧ್ಯೆಯವರನ್ನು ತುಂಬ ಹೊಗಳಿದೆ, ನಮ್ಮ ಸಂಸ್ಕೃತ ಪಂಡಿತರೂ ಇವರ ಮಾರ್ಗವನ್ನೇ ಅನುಸರಿಸಿದರೆ ಎಷ್ಟು ಒಳ್ಳೆಯದು ಎಂದೆ. ಅದಕ್ಕೆ ಶಾಸ್ತ್ರಿಗಳು ನಕ್ಕು ತಮ್ಮ ಒಪ್ಪಿಗೆಯನ್ನು ಸೂಚಿಸಿ

ದರು. ಹೀಗೆ ಬೇರೆ ವಿದ್ವಾಂಸರಲ್ಲಿದ್ದ ಒಳ್ಳೆಯ ಗುಣವನ್ನು ಮೆಚ್ಚುವ ಸದ್ಗುಣ ಶಾಸ್ತ್ರಿಗಳಲ್ಲಿತ್ತು. ನಾನು ಮಾಡಿಕೊಂಡ ಟಿಪ್ಪಣಿಗಳ ಆಧಾರದ ಮೇಲೆ ಭ. ಕುಂದಕುಂದರು ಮತ್ತು ಪರಮಾತ್ಮ ಪ್ರಕಾಶ ಎಂಬ ಎರಡು ಲೇಖನಗಳನ್ನು ಸಿದ್ಧಮಾಡಿ ಶಾಸ್ತ್ರಿಗಳಿಗೆ ತೋರಿಸಿದೆ. ಅವರು ಅಮೂಲಾಗ್ರವಾಗಿ ಓದಿ ತಿದ್ದಿ ಸರಿಪಡಿಸಿ ಕೊಟ್ಟರು. ಅಷ್ಟೇ ಅಲ್ಲ ಮಂಗಳೂರಿನ ಶ್ರೀ ಪುಟ್ಟಸ್ವಾಮಿಯವರಿಗೆ ಪತ್ರ ಬರೆದು ಇವುಗಳನ್ನು ವಿವೇಕಾಭ್ಯುದಯದಲ್ಲಿ ಪ್ರಕಟಿಸುವಂತೆ ಮಾಡಿದರು. ನನ್ನಂಥ ಎಷ್ಟೋ ತರುಣರಿಗೆ ಬರೆಯಲು ಶಾಸ್ತ್ರಿಗಳು ಪ್ರೋತ್ಸಾಹ ನೀಡುತ್ತಿದ್ದರು.

ನನ್ನ ವಿದ್ಯಾಭ್ಯಾಸ ಮುಗಿದ ಮೇಲೆ ಚಾಮರಾಜನಗರದ ಮುನಿಸಿಪಲ್ ಹೈಸ್ಕೂಲಿನಲ್ಲಿ ಶಿಕ್ಷಕನಾಗಿ ಕೆಲಸಕ್ಕೆ ಸೇರಿಕೊಂಡೆ. ಅಲ್ಲಿ ಮೂರು ವರ್ಷಗಳು ಕೆಲಸ ಮಾಡಿದೆ. ಹೀಗಾಗಿ ನಾನು ಶಾಸ್ತ್ರಿಗಳನ್ನು ಈ ಮೂರು ವರ್ಷಗಳಲ್ಲಿ ಒಮ್ಮೆಯೂ ನೋಡಲಾಗಲಿಲ್ಲ. ಅವರೂ ಸಹ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದರು. ಧರ್ಮಸ್ಥಳ, ವೈನಾಡು ಇಲ್ಲೆಲ್ಲ ಅವರ ಶುಶ್ರೂಷೆ ನಡೆದರೂ ಗುಣಮುಖರಾಗಲಿಲ್ಲ. ಕೊನೆಗೆ ಮೈಸೂರಿನ ತಮ್ಮ ಸ್ವಗೃಹದಲ್ಲಿ ದಿನಾಂಕ 31–5–1952ರಲ್ಲಿ ಶಾಸ್ತ್ರಿಗಳು ಸಮಾ
ಮರಣದಿಂದ ಸ್ವರ್ಗಸ್ಥರಾಗಿ ಅಮರರಾದರು.

ನಾನು ಉಪಾಧ್ಯಾಯ ವೃತ್ತಿಯನ್ನು ಬಿಟ್ಟು
ಮೈಸೂರು ಸರ್ಕಾರದ ಲೆಕ್ಕ ಪತ್ರ ಇಲಾಖೆಗೆ ಕೆಲಸಕ್ಕೆ
ಸೇರಿಕೊಂಡೆ. ಮೈಸೂರಿನಲ್ಲಿದ್ದ ಇಲಾಖೆಯ ವಲಯ
ಕಛೇರಿಗೆ ದಿನಾಂಕ 20–6–1952 ಕ್ಕೆ ಕೆಲಸದ ಮೇಲೆ
ಹಾಜರಾದೆ. ನಾನು ಬಂದಾಗ ಶಾಸ್ತ್ರಿಗಳ ಮರಣ ಆ
ಇನ್ನೂ ಇಪ್ಪತ್ತು ದಿನಗಳಾಗಿತ್ತು. ಮೈಸೂರಿಗೆ ಬಂದ
ಮೇಲೆ ನಾನು ಮಾಡಿದ ಮೊದಲನೆಯ ಕೆಲಸವೆಂದರೆ ಆ
ಒಂಟಿಕೊಪ್ಪಲಿನಲ್ಲೇ ಇದ್ದ ನಮ್ಮೂರಿನವರೇ ಆದ ಶ್ರೀ
ಜೀವಂಧರಕುಮಾರ್ (ಶಾಸ್ತ್ರಿಗಳ ಮೊದಲನೇ ಅಳಿಯ)
ರವರನ್ನು ಕರೆದುಕೊಂಡು ಶಾಸ್ತ್ರಿಗಳ ಮನೆಗೆ ಹೋಗಿ
ಅವರಿಗೆ ಪರೋಕ್ಷವಾಗಿ ನನ್ನ ಶ್ರದ್ಧಾಂಜಲಿಯನ್ನು
ಅರ್ಪಿಸಿ ಬಂದದ್ದು.

ಹೀಗೆ 1934 ರಿಂದ 1952ರವರೆಗೂ ನಿರಂತರವಾಗಿ ಅವರ ಸಂಪರ್ಕವನ್ನು ಹೊಂದಿ ಅವರ ವ್ಯಕ್ತಿತ್ವದಿಂದ ನಾನು ತುಂಬ ಪ್ರಭಾವಿತನಾದೆ. ಅವರ ಸಾಹಿತ್ಯವಂತೂ ನನ್ನ ಜೀವನದುದ್ದಕ್ಕೂ ಪ್ರಭಾವವನ್ನು ಬೀರುತ್ತಲೇ ಬಂದಿದೆ. ●

ವ್ಯಕ್ತಿ ಚಿತ್ರ

ಮುಖಂ ಪ್ರಸನ್ನಂ ವಿಮಲಾ ಚ ದೃಷ್ಟಿಃ । ತಥಾನುರಾಗೋ ಮಧುರಾ ಚ ವಾಣೀ ।
ಸ್ನೇಹೋಧಿಕಸ್ಸಂಭ್ರಮ ದರ್ಶನಂ ಚ । ಸದಾನುರಕ್ತಸ್ಯ ಜನಸ್ಯ ಲಕ್ಷಣಂ ॥

(ವದನದಲ್ಲಿ ಪ್ರಸನ್ನತೆ, ಕಣ್ಣುಗಳ ನೋಟದಲ್ಲಿ ನಿರ್ಮಲತೆ, ಮನದಲ್ಲಿ ಒಲವು, ಮಾತಿನಲ್ಲಿ ಮಾಧುರ್ಯ, ಅತಿಥಿಗಳನ್ನು ಹೆಚ್ಚಿನ ಸ್ನೇಹದಿಂದಲೂ ಸಂಭ್ರಮದಿಂದಲೂ ಕಾಣುವುದು-ಇವು ಸಹೃದಯರೂ ಸರಸ ಸಜ್ಜನರೂ ಆದವರ ಲಕ್ಷಣ).

ಶಾಂತಿರಾಜ ಶಾಸ್ತ್ರಿಗಳ ದಿವ್ಯ ಸ್ಮರಣೆ ಅಂತರಂಗದಲ್ಲಿ ಅಂಕುರಿಸಿದಾಗಲೆಲ್ಲ ನನಗೆ ಈ ಆರ್ಯೋಕ್ತಿ ನೆನಪಾಗುತ್ತದೆ. ತಮ್ಮ ಬಳಿಗೆ ಯಾರೇ ಬರಲಿ, ಯಾವಾಗಲೇ ಬರಲಿ, ಅವರಿಗೆಲ್ಲ ಮೊಟ್ಟ ಮೊದಲಲ್ಲೇ ದೊರೆಯುತ್ತಿದ್ದುದು ಈ ಗೆಲುವಿನ ಮೊಗದಿಂದ ಕೂಡಿದ ಸ್ವಾಗತ. ಅನುಮಾನಕ್ಕೆ ಅವಕಾಶವಿಲ್ಲದ ಅಕಳಂಕವಾದ ದೃಷ್ಟಿ ಬೀರುತ್ತಿದ್ದರು. ಅಕ್ಕರೆಯಿಂದ ಕಾಣುತ್ತಿದ್ದರು. ಆಡುವ ನುಡಿಯಲ್ಲಿ ಸಿಹಿಯೂ ಸತ್ಯವೂ ಅಡಗಿರುತ್ತಿತ್ತು. ಅವ್ಯಾಜ ಸ್ನೇಹ, ಮನಸೆಳೆಯುವ ಸಡಗರ ತೋರುತ್ತಿದ್ದರು. ಮನೆಯಲ್ಲಿ ಅತಿಥಿಗಳು ಬಂದ ವೇಳೆಗೆ ಸಿದ್ಧವಾಗಿದ್ದ ಊಟ, ತಿಂಡಿ, ಹಾಲು, ಹಣ್ಣು ನೀಡಿ ಧನ್ಯರಾದಂತೆ ತಿಳಿಯುತ್ತಿದ್ದರು. ಸುಸಂಸ್ಕೃತನೆಂದು ಸಾರಲು ಮತ್ತೆ ಏನು ಲಕ್ಷಣಗಳು ಬೇಕು ?

—ಡಾ॥ ಹಂಪನಾ

ಪ್ರಮಾಣ ಪತ್ರ ಕೊಟ್ಟರು

— ಶ್ರೀ ಹೆಚ್. ಪಿ. ಬ್ರಹ್ಮಪ್ಪ, ಹಾಸನ

ಐವತ್ತೂರು ವರ್ಷಗಳ ಹಿಂದಿನ ನೆನಪುಗಳು ನೆನಪಿಸಿಕೊಂಡಾಗ ಮನಸ್ಸು ಪುಳಕಿತವಾಗುತ್ತೆ. ಗೌರವ ಭಕ್ತಿ-ಭಾವಗಳ ತೊರೆ ಹರಿಯುತ್ತದೆ.

ಪೂಜ್ಯ ಶಾಂತಿರಾಜಶಾಸ್ತ್ರಿಗಳವರ ಸಂಪಾದಕತ್ವ ದಲ್ಲಿ ಪ್ರಕಟವಾಗುತ್ತಿದ್ದ ಒಂದೇ ಒಂದು ಧಾರ್ಮಿಕ ಪತ್ರಿಕೆ "ವಿಶ್ವಬಂಧು". ತಂದೆಯವರು ಅದರಲ್ಲಿನ ಲೇಖನ ಗಳನ್ನು ಓದಿ ಮನನ ಮಾಡಿಕೊಂಡು, ಅಜ್ಜಿಯವರಲ್ಲಿ ನಿವೇದಿಸುತ್ತಿದ್ದರು. ಆ ಸಮಯದಲ್ಲಿ ಎಳೆಯವನಾದ ನನ್ನ ಮನಸ್ಸಿನ ಮೇಲೆ ಶಾಸ್ತ್ರೀಜೀಯವರ ಬಗ್ಗೆ ಒಂದು ರೀತಿಯ ಪೂಜ್ಯ ಭಾವನೆ ಅಂಕುರವಾಯಿತೆಂದರೆ ಆಶ್ಚರ್ಯವಲ್ಲ. ವಿಶ್ವಬಂಧು ಪತ್ರಿಕೆಗಳನ್ನು ಪುಸ್ತಕ ರೂಪದಲ್ಲಿ ಹೊಲಿದು ಕಾಪಾಡಿಕೊಂಡಿದ್ದರು.

1935ರ ಮಧ್ಯಭಾಗದಲ್ಲಿ ಕಾಲೇಜು ವಿದ್ಯಾಭ್ಯಾಸ ಕ್ಕಾಗಿ ಮೈಸೂರಿನ ಎಂ.ಎಲ್. ಜೈನ್ ಬೋರ್ಡಿಂಗ್ ಹೋಂ ಸೇರಿದ್ದೆ. ಅಲ್ಲಿಗೆ ಶಾಸ್ತ್ರಿಜೀಯವರು ಆಗಾಗ್ಗೆ ಆಗಮಿಸುತ್ತಿದ್ದರು. ಅವರ ದರ್ಶನ ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಕವಾಗಿರುತ್ತಿತ್ತು. ಸರಳವಾದ ಪಂಡಿ ತೋತ್ತಮರ ಉಡುಪು, ತಲೆಯ ಮೇಲೆ ಪೇಟ ಮುಖ ದಲ್ಲಿ ಜ್ಞಾನ ಜ್ಯೋತಿಯ ಕಾಂತಿ, ಅವರನ್ನು ಕಂಡ ಕೂಡಲೇ ಎಲ್ಲರೂ ತಲೆಬಾಗಿ ನಮಿಸುತ್ತಿದ್ದೆವು. ಪ್ರತಿ ಯೊಬ್ಬರನ್ನು ಆತ್ಮೀಯವಾಗಿ ವಿಚಾರಿಸಿ ಪರಿಚಯ ಮಾಡಿಕೊಳ್ಳುತ್ತಿದ್ದರು. ಅವರ ವಿನಯಶೀಲತೆ ಆದರ್ಶ ಪ್ರಾಯವಾಗಿರುತ್ತಿತ್ತು. ಅವರ ದರ್ಶನ ಲಾಭ ಪಡೆಯಲು ವಿದ್ಯಾರ್ಥಿಗಳೆಲ್ಲರೂ ಕುತೂಹಲದಿಂದ ಇರುತ್ತಿದ್ದರು.

1939ರಲ್ಲಿ ನಾನು ಬಿ.ಎ., ಪದವೀಧರನಾಗಿ ಮುಂದಿನ ವಿದ್ಯಾಭ್ಯಾಸವನ್ನು ನಿಲ್ಲಿಸಬೇಕಾಯಿತು. ಶಾಸ್ತ್ರೀಜೀಯವರ ದರ್ಶನ ಪಡೆದು ಆಶೀರ್ವಾದ ಪಡೆ ಯಲು ಅವರ ಮನೆಗೆ ಹೋದೆ. ಬೆಳಿಗ್ಗೆ 9–30ರ ಸಮಯ ಅವರು ಮಡಿ ಉಡುಪಿನಲ್ಲಿದ್ದರು. ನನ್ನ ಯೋಗಕ್ಷೇಮವನ್ನು ವಿಚಾರಿಸಿ ಮಹಡಿಯ ಮೇಲಿದ್ದ ದೇವರ ಮನೆಗೆ ಕರೆದುಕೊಂಡುಹೋದರು. ಆಗ ತಾನೆ ದಿನನಿತ್ಯದ ಪೂಜೆ ಮುಗಿಸಿದ್ದು ಎದ್ದು ಕಾಣುತ್ತಿತ್ತು. ಮಂಗಳಾರತಿಮಾಡಿ ಪ್ರಸಾದವನ್ನು ತುಂಬು ಹೃದಯ ದಿಂದ ಆಶೀರ್ವಾದ ಮಾಡುತ್ತಾ ದಯಾಪಾಲಿಸಿದರು. ನಾನು ರೋಮಾಂಚನಗೊಂಡು ನಮಸ್ಕರಿಸಿದೆ.

ಜೊತೆಯಲ್ಲಿ ಊಟಕ್ಕೆ ಕೂರಿಸಿಕೊಂಡರು. ಚೊಕ್ಕ ಭೋಜನವಾದ ನಂತರ ಆಗ ತಾನೆ ಪ್ರಿಂಟಾಗುತ್ತಿದ್ದ ಇನ್ನೂ ಬೈಂಡಿಂಗ್ ಆಗದೇ ಇದ್ದ "ಉತ್ತರ ಪುರಾಣದ" ಪ್ರತಿಯೊಂದನ್ನು ತಂದುಕೊಟ್ಟರು. ಮತ್ತು ಅವಶ್ಯಕತೆ ಬಿದ್ದರೆ ಉಪಯೋಗಿಸಿಕೊಳ್ಳಲು ತಿಳಿಸಿ ಒಂದು ಪ್ರಮಾಣ ಪತ್ರ (ಸರ್ಟಿಫಿಕೇಟ್)ನ್ನು ಕೊಟ್ಟು ಬೀಳ್ಕೊಟ್ಟರು. ಅದೇ ನನ್ನ ರಕ್ಷಾಪತ್ರ.

ನಂತರ ನನಗೆ ಅವರ ದರ್ಶನ ಭಾಗ್ಯವಾಗಲಿಲ್ಲ. ಅವರು ಅವಸಾನವಾದ್ದನ್ನು ಪತ್ರಿಕೆಯಲ್ಲಿ ಓದಿದಾಗ ಬಹಳ ದುಃಖವಾಯಿತು. ಅಶ್ರುತರ್ಪಣವನ್ನು ಅರ್ಪಿಸಿದೆ.

ಅವರಿಂದ ಪ್ರಾರಂಭಿಸಲ್ಪಟ್ಟ, ಈಗಲೂ ಪ್ರಕಟ ವಾಗುತ್ತಿರುವ ವಿವೇಕಾಭ್ಯುದಯಕ್ಕೆ ಚಂದಾದಾರನಾಗಿ ಮುಂದುವರಿಯುತ್ತಿದ್ದೇನೆ.

ಸಾಮಾನ್ಯರಿಗೂ ಅರ್ಥವಾಗುವಂತೆ ಗದ್ಯರೂಪ ದಲ್ಲಿ ಅರ್ಥ ವಿವರಣೆ ಕೊಟ್ಟು ಧಾರ್ಮಿಕ ಗ್ರಂಥಗಳನ್ನು ಪ್ರಕಟಪಡಿಸಿದವರಲ್ಲಿ ಶಾಸ್ತ್ರೀಜೀಯವರೇ ಮೊದಲಿಗರು. ಆಗಿನ ಕಾಲಕ್ಕೆ ಜನರಲ್ಲಿ ಧಾರ್ಮಿಕ ಭಾವನೆಗಳನ್ನು ಹೊಡೆದೆಬ್ಬಿಸಿ ರಾಜ್ಯಾದ್ಯಂತ ಧಾರ್ಮಿಕ ಸಮಾರಂಭ ಗಳಲ್ಲಿ ಭಾಗವಹಿಸಿ ಚಿರಸ್ಮರಣೀಯರಾಗಿದ್ದಾರೆ. ಜೀವನ ವಿಡೀ ತನುಮನ ಸವೆಸಿ ಯಾವ ತರಹವಾದ ಲೋಭಕ್ಕೂ, ಒಳಗಾಗದೇ ಧಾರ್ಮಿಕ, ಸಾಮಾಜಿಕ ಸಾಹಿತ್ಯದ ಸೇವೆ ಸಲ್ಲಿಸಿದ ಪಂಡಿತರತ್ನರಿಗೆ ನಾವುಗಳು ಯಾವ ರೀತಿ ಯಲ್ಲಿ ಅವರ ಋಣ ತೀರಿಸುತ್ತಿದ್ದೇನೆ ಎಂದು ಆತ್ಮಾವ ಲೋಕನ ಮಾಡಿಕೊಳ್ಳಬೇಕಾಗಿದೆ.

ಶಾಸ್ತ್ರೀಜೀಯವರ ಸ್ಮರಣೆಗೆ ನನ್ನ ಅನಂತ ನಮಸ್ಕಾರಗಳು. □

ದಿ. ಎತರ್ೂರು ಶಾಂತಿರಾಜ ಶಾಸ್ತ್ರಿಗಳು ನಾನು ಕಂಡಂತೆ

— ಶಿರ್ತಾಡಿ ಜಿನರಾಜಶಾಸ್ತ್ರಿ, ಉಜಿರೆ, ದ.ಕ.

ಶ್ರೀ ಕ್ಷೇತ್ರ ಶ್ರವಣಬೆಳುಗೊಳದ ಧರ್ಮಪೀಠಾಧಿಪತಿಗಳಾದ ಪೂಜ್ಯವರ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯಸ್ವಾಮೀಜಿ (ಸ್ವಸ್ತಿಶ್ರೀನೇಮಿಸಾಗರವರ್ಣಿಜಿ) ಅವರು ಪಟ್ಟಾಭಿಷಿಕ್ತರಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಪ್ರಯಾಣಿಸುವ ಸಂದರ್ಭದಲ್ಲಿ ಹಾಸನ ನಗರದ ಭಕ್ತಾದಿಗಳ ನಿವೇದನೆಯಂತೆ ಅಲ್ಲಿಗೆ ದಯಮಾಡಿಸಿದ್ದರು. ಸರ್ವಮತೀಯ ಜನಬಾಂಧವರು ಶ್ರೀಗಳವರ ಪ್ರವಚನಕ್ಕೆ ಬಂದಿದ್ದರು. ಶ್ರೀ ಶಾಂತಿರಾಜ ಶಾಸ್ತ್ರಿಗಳನ್ನು ಮೊತ್ತ ಮೊದಲು ನಾನು ಅಲ್ಲಿ ನೋಡಿದ್ದೆ. ಶಾಸ್ತ್ರಿಗಳ ಭಾಷಣ ಕೂಡಾ ಆ ಸಭೆಯಲ್ಲಿ ನಡೆದಿತ್ತು. 1929 ಫೆಬ್ರವರಿ 18 ಆ ದಿನಮಾನ. ಮೈಸೂರು ಜರಿಪೇಟಧಾರಿ ಪಂಚೆ ಕಚ್ಚೆ ಧರಿಸಿ ಉದ್ದನೆಯ ಕೋಟು ಅದರ ಮೇಲೆ ಕಾಶ್ಮೀರ ಶಾಲು ಹಾಕಿಕೊಂಡ, ಮುಖದಲ್ಲಿ ಪಾಂಡಿತ್ಯದ ಪ್ರತಿಭೆಯನ್ನು ಬೀರುವ, ವಿಶಾಲ ಲಲಾಟದಲ್ಲಿ ನಸುಕೆಂಪು ತಿಲಕಧಾರಣೆ ಮಾಡಿ ನಿಂತ ಶಾಸ್ತ್ರಿಗಳ ಭಾಷಣ ಸಹಸ್ರ ಸಂಖ್ಯೆಯಲ್ಲಿ ನೆರೆದ ಶ್ರೋತೃಗಳು ತಲೆದೂಗಿಸುವಂತಿತ್ತು. ಅವರ ಮನನೀಯ ವಕ್ತೃತ್ವ ನನ್ನ ಮನಸ್ಸಿನಲ್ಲಿ ಇಂದೂ ಮಿಂಚುತ್ತಿದೆ.

ಶ್ರೀ ಶಾಂತಿರಾಜ ಶಾಸ್ತ್ರಿಗಳು ಮಧ್ಯಪ್ರದೇಶದ ಗ್ವಾಲಿಯರ್ ಸ್ಟೇಟಿನ ಮೊರೇನಾ ಜೈನ ಮಹಾವಿದ್ಯಾಲಯಲ್ಲಿ ಆಗಮ, ವ್ಯಾಕರಣ ದರ್ಶನಶಾಸ್ತ್ರ, ನ್ಯಾಯಶಾಸ್ತ್ರ, ಕಾವ್ಯ ಅಲಂಕಾರ ಆದಿ ವಿಷಯಗಳನ್ನು ಅಧ್ಯಯನ ಮಾಡಿ ಪರಿಣತಿ ಹೊಂದಿದ ಶಾಸ್ತ್ರಿ, ನ್ಯಾಯತೀರ್ಥ ಪದವೀಧರರು. ತುಂಬಿದ ಕೊಡದಂತಿದ್ದ ಅವರು ಸುಮಾರು ಐದೂವರೆ ಅಡಿ ಎತ್ತರವಿರುವ ಬೆಳ್ಳನೆ ಸುಂದರ ಶರೀರ ಗಾತ್ರದವರಾಗಿ ಸಭಿಕರ ಮುಗ್ಧತೆಗೆ ಅವರ ಆ ವ್ಯಕ್ತಿತ್ವ ಕಾರಣವಾಗಿತ್ತು. ವಕ್ತೃತ್ವ, ಪಾಂಡಿತ್ಯ, ವ್ಯಕ್ತಿತ್ವ ಇವು ಜನಮನವನ್ನು ಆಕರ್ಷಿಸುವ ಸಾಧನಗಳು. ಶಾಸ್ತ್ರಿಗಳಲ್ಲಿ ಇವು ಮೂರು ಕೂಡಾ ಅರಳಿದ್ದವು. ಪ್ರತಿಭೆಯ ಬಲದಿಂದ ಪ್ರಸಾರಗೊಂಡು ಎಚ್ಚತ್ತವರನ್ನೂ ಮಲಗಿದವರನ್ನೂ ಚುರುಕುಗೊಳಿಸಲು ಸಮರ್ಥವಾಗಿ ಅವರು ಸಮಾಜ ಪ್ರಿಯರಾಗಿದ್ದರು.

ಪಾಂಡಿತ್ಯ ಪ್ರಸಾರಕ್ಕೆ ಆಧಾರವಾಗಿ ಸ್ವಂತ ವಿಶ್ವಬಂಧು ಪತ್ರಿಕೆಯನ್ನು ನಡಿಸಿಕೊಂಡು ಜನರಲ್ಲಿ ಮಾನಸಿಕ ಪ್ರಭಾವನೆಯನ್ನು ಮಾಡಿ ಜನಾನುರಾಗಿಗಳಾಗಿದ್ದರು. ಅವರ ಲೇಖನಿಯ ಶಕ್ತಿ ಜನಮನವನ್ನು ನುಗ್ಗುವ ಪ್ರಾಂಜಲ ಭಾಷೆಯಲ್ಲಿರುತ್ತಿತ್ತು. ಅಂದು ಮೈಸೂರು ಮಹಾರಾಜರಾಗಿದ್ದ ಕೃಷ್ಣರಾಜಒಡೆಯರ್ ಅವರವರೆಗೂ ಶಾಸ್ತ್ರಿಗಳ ಕರ್ತೃತ್ವಶಕ್ತಿಪ್ರಾಮಾಣಿಕವಾದ ಸಮಾಜ ಸೇವೆ, ಪರೋಪಕಾರ ಬುದ್ಧಿ, ರಾಜಭಕ್ತಿ ಪ್ರಸಾರಗೊಂಡಿತ್ತು. ಅಮೃತಂ ರಾಜ ಸಮ್ಮಾನಂ, ಎಂಬಂತೆ ಶಾಸ್ತ್ರಿಗಳಿಗೆ ಮಹಾರಾಜರು ಆಸ್ಥಾನ ಮಹಾ ವಿದ್ವಾನ್, ಪ್ರಶಸ್ತಿ ನೀಡಿ ಅವರ ವಿದ್ವನ್ಮಂಡಲದ ಖ್ಯಾತ ಸದಸ್ಯರನ್ನಾಗಿ ಮಾಡಿ ಜೈನ ಸಮಾಜವನ್ನೇ ಗೌರವಿಸಿದರು. ಈ ಗೌರವ ಪ್ರತಿಷ್ಠೆ ವಿದ್ಯಾವಂತರ ಪಾಂಡಿತ್ಯದ ಫಲವಾಗಿದೆ. ಅಂದು ಮೈಸೂರು ಮಹಾರಾಜರ ಆಸ್ಥಾನ ಪಂಡಿತ ಮಂಡಳಿಯಲ್ಲಿ ಜೈನ ಸದಸ್ಯರಿರಲಿಲ್ಲ. ಎತರ್ೂರು ಶಾಂತಿರಾಜಶಾಸ್ತ್ರಿಗಳು ಆ ರಿಕ್ತ ಸ್ಥಾನವನ್ನು ಭರ್ತಿ ಮಾಡಿದ ಮಹನೀಯರು. ಧರ್ಮ ಸಂಸ್ಕೃತಿಗಳ ಉನ್ನತಿ ಪ್ರತಿಭಾವಂತ ಪ್ರಾಜ್ಞರ ಅವಿರಾಮ ಶ್ರಮದಿಂದ ಪ್ರಸಾರಗೊಂಡು ಜನತೆಯಲ್ಲಿ ವಿಕಸಿತವಾದಾಗ ಕಾಣುತ್ತದೆ. ಶಾಸ್ತ್ರಿಗಳ ವಿಶ್ವಬಂಧು ಪತ್ರಿಕೆ ಸಮಾಜ ಬಂಧುಗಳ ಮನೆ ಮನೆ ತಲುಪಿ ಜೈನ ಧರ್ಮ, ಸಂಸ್ಕೃತಿ ಪ್ರಸಾರದ ಸ್ಥಿರ ಸುಭದ್ರ ಕಾರ್ಯವೆಸಗಿದೆ. ಇದರಿಂದ ಶಾಸ್ತ್ರಿಗಳ ಖ್ಯಾತಿಯು ಜನರ ವಿಶ್ವಾಸ ಪಾತ್ರವಾಯಿತು. ಆತ್ಮಾ ಪ್ರಭಾವನೀಯೋ ರತ್ನತ್ರಯ ತೇಜಸಾ ಸತತಮೇವ ದಾನತಪೋ ಜನ ಪೂಜಾ ವಿದ್ಯಾತಿಶಯೈಶ್ಚ ಜನಧರ್ಮಃ–ಉದಾರ ದಾನ, ಪಂಚಕಲ್ಯಾಣ ಆದಿ ಪೂಜಾ ವಿಧಾನ, ಕಠಿಣ ತಪಸ್ಸು

ಮತ್ತು ಜ್ಞಾನಾಂಗ ಪ್ರಸಾರ ಇವುಗಳು ಆತ್ಮ ಜಾಗೃತಿಯು ಮತ್ತು ಜಿನಧರ್ಮ ಪ್ರಭಾವನೆಯು ಮುಖ್ಯ ಅಂಗಗಳೆಂದು ಆಚಾರ್ಯಪ್ರವರ ಗುಣಬದ್ರರ ನಿರ್ದೇಶನವಾಗಿದೆ.

ಭಾಷಣ ಕಲೆ-1934ರಲ್ಲಿ ಸಾಲಿಗ್ರಾಮದ ಮಾನ್ಯ ಉಪಾಧ್ಯರ ನಾಗರಾಜಯ್ಯ ಅವರು ಅಲ್ಲಿಯ ಜಿನಾಲಯದ ಪಂಚಕಲ್ಯಾಣಗಳ ವಿಧಿ ವಿಧಾನಗಳನ್ನು ಬಹಳ ವಿಜೃಂಭಣೆಯಿಂದ ನೆರವೇರಿಸಿದ್ದರು. ಆ ಪಂಚಕಲ್ಯಾಣದ ಭಾಷಣಕಾರರಾಗಿ ಶ್ರೀ ಶಾಂತಿರಾಜ ಶಾಸ್ತ್ರಿಗಳು ಆಹ್ವಾನಿತರಾಗಿದ್ದರು. ಅವರ ಪಾಂಡಿತ್ಯ ಪೂರ್ಣ ನಿರರ್ಗಳ ಭಾಷಣ ವಿದ್ವಜ್ಜನರ ಮನಮೆಚ್ಚುಗೆ ಪಡೆದಿತ್ತು. ವಕ್ತಾ ಶತಸಹಸ್ರೇಷು_ಲಕ್ಷ ವಿದ್ವಾಂಸರಲ್ಲಿ ಒಬ್ಬ ಭಾಷಣಕಾರ ವಿದ್ವಾಂಸ ಲಭಿಸುವುದು ಎಂಬ ಮಾತು ಹೌದು, ಎಂಬ ಪ್ರಶಂಸೆ ಪಡೆದಿತ್ತು. ರತ್ನಾಕರ ವರ್ಣಿಯ ಶತಕತ್ರಯದಲ್ಲಿ ನಿರೂಪಿಸಿದ ಸಿದ್ಧಪರಮೇಷ್ಠಿ ಸ್ವರೂಪವನ್ನು ನಿರೂಪಿಸಿ ಸಿದ್ಧಾಲಯ ಮೂರುಗೇಣು ದೂರವೆಂಬಂತೆ ತೋರಿಸಿ "ಜೈನಶಾಸ್ತ್ರ ವಿಶಾರದ" ಪ್ರಶಸ್ತಿಯ ಸಾರ್ಥಕತೆ ಹಾಗೂ ಅರ್ಹತೆಯನ್ನು ನಿಜಗೊಳಿಸಿದ್ದರು.

ಶಾಸ್ತ್ರಿಗಳು ರಾಷ್ಟ್ರೀಯ ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸುತ್ತಿದ್ದರೆ ಒಬ್ಬ ರಾಷ್ಟ್ರನಾಯಕನ ಉನ್ನತ ಸ್ಥಾನಮಾನ ಪಡೆಯಬಹುದಿತ್ತು. ಆದರೆ ಧರ್ಮ ಜಾಗೃತಿಯಿಂದ ಆತ್ಮ ಸ್ವಾತಂತ್ರ್ಯಗಳಿಸುವಂತೆ ಜನ ಪ್ರೇರಣೆ ನೀಡುವಲ್ಲಿ ಸಮರ್ಥ ಸ್ಥಾನಮಾನ ಪಡೆದಿದ್ದರೆಂಬುದನ್ನು ಈ ಅವರ ಜನ್ಮಶತಾಬ್ದಿಯ ಉತ್ಸವ ಹೇಳುತ್ತದೆ.

1933 ನೇ ಇಸವಿಯ ಒಂದು ವಿಶೇಷ ಘಟನೆ ಶಾಸ್ತ್ರಿಗಳ ಜೀವನದ ಅವಿಸ್ಮರಣೀಯ ಸ್ಥಾನ ಪಡೆದಿದೆ. ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಪ್ರತಿ ವರ್ಷ ಜರಗುವ ಕಾರ್ತಿಕ ಮಾಸದ ಲಕ್ಷದೀಪೋತ್ಸವ ಸಮಯದಲ್ಲಿ ಸರ್ವ ಧರ್ಮ ಸಮ್ಮೇಳನ ಮತ್ತು ಸಾಹಿತ್ಯ ಸಮ್ಮೇಳನಗಳನ್ನು ನಡಿಸುವ ಉತ್ಸಾಹವು ಅಂದಿನ ಧರ್ಮಾಧಿಕಾರಿಗಳಾಗಿದ್ದ ಶ್ರೀಮಾನ್ ಮಂಜಯ್ಯ ಹೆಗ್ಗಡೆಯವರಲ್ಲಿ ಕೆರಳಿತು. ಹೆಗ್ಗಡೆಯವರು ಸಮಾಜ ಪ್ರೇಮಿಗಳೂ ಧರ್ಮ ಪ್ರೇಮಿಗಳೂ ಸಂಸ್ಕೃತಿ ಸಂರಕ್ಷಣಾಚತುರರೂ, ರಾಜಕಾರಣ ಪಟುಗಳೂ ಆಗಿದ್ದರು. ಪರಂಪರಾ ಘೋಷಣೆಯ ಜೊತೆಗೆ ಸರ್ವಧರ್ಮಗಳ ಸಾರಜ್ಞಾನದಿಂದ ಸಮಾಜದಲ್ಲಿ ಧರ್ಮ ಸಮನ್ವಯವನ್ನು ಪ್ರಸಾರ ಮಾಡಬೇಕೆಂಬ ವಿಶಾಲ ದೃಷ್ಟಿಯ ಕಾರ್ಯಸಾಧನೆಗೆ ಶಾಸ್ತ್ರಿಗಳು ಪ್ರಬುದ್ಧ ವಿಶಾಲ ಜ್ಞಾನದ ಕಾರ್ಯದರ್ಶಿಗಳಾಗಿ ಸ್ಥಾನ ಪಡೆದು ಮಾತನಾಡುವ ಮಂಜುನಾಥ ದೇವರೆಂದು ಅಭಿದಾನ ಪಡೆದಿದ್ದ ಹೆಗ್ಗಡೆಯವರ ಅನುಗ್ರಹಕ್ಕೆ ಪಾತ್ರರಾದರು.

ಶಾಸ್ತ್ರಿಗಳ ಕಾರ್ಯದಕ್ಷತೆಯಲ್ಲಿ ಅಖಿಲ ಕರ್ನಾಟಕದ ವಿವಿಧ ಮತ ಪರಿಣತರು, ಸಾಹಿತ್ಯ ಸೂರಿಗಳು, ವಿಜ್ಞಾನ ಪಂಡಿತರು, ಧರ್ಮ ಪೀಠಾಧಿಪತಿಗಳು, ಅಧಿಕಾರಿಗಳು ಶ್ರೀ ಕ್ಷೇತ್ರದಲ್ಲಿ ಜರಗುವ ಸಮ್ಮೇಳನಗಳಲ್ಲಿ ಭಾಗವಹಿಸುವ ನಿಟ್ಟಿನಲ್ಲಿ ಶ್ರೀ ಕ್ಷೇತ್ರದ ಪ್ರಶಸ್ತ ಕೀರ್ತಿ ವಿವಿಧ ರೂಪದಲ್ಲಿ ಜನಮನದಲ್ಲಿ ಸ್ಪಂದಿಸುವಂತೆ ಮಾಡುವ ಮಹಾಜ್ಞಾನ ಯಜ್ಞಕ್ಕೆ ಸಹಾಯಕ ಅಧ್ವರ್ಯುಗಳಾಗಿ ಶ್ರಮಿಸಿ ಅಖಿಲ ಕರ್ನಾಟಕದಲ್ಲಿ ಖ್ಯಾತ ವಿದ್ವನ್ಮಣಿ ಸ್ಥಾನ ಪಡೆದರು. ಈ ಮಹಾನ್ ಖ್ಯಾತಿಯು ಮೈಸೂರು ನೃಪತಿಗಳ ಶ್ರವಣಗಳಲ್ಲಿ ಪ್ರತಿಧ್ವನಿಸಿ ಶಾಸ್ತ್ರಿಗಳಿಗೆ "ಪಂಡಿತರತ್ನ", ವರಿಷ್ಠ ಪ್ರಶಸ್ತಿ ಅಪ್ರಾರ್ಥಿತವಾಗಿ ಲಭಿಸಿತು. ಅಮೃತಂ ಸಾಧು ಸಮ್ಮಾನಂ. ಶಾಸ್ತ್ರಿಗಳ ಚಿರಂತನ ಕೀರ್ತಿಗೆ ಅಮೃತಬಿಂದು ಪೋಷಕ-ಬಿಂದುವೆಂಬಂತೆ ಕರ್ಮಯೋಗಿ ಶ್ರೀಗಳವರ ಸಾನ್ನಿಧ್ಯದಲ್ಲಿ ಸ್ಥಾನ ಮೌಲ್ಯ ಪಡೆದಂತಾಯಿತ್ತು. ಸಹಸ್ರ ವರ್ಷಗಳ ನಂತರ ಚಾಮುಂಡರಾಯನು ಭಗವಾನ್ ಗೋಮಟೇಶ್ವರ ಮೂರ್ತಿ ಪ್ರತಿಷ್ಠೆಯ ದೆಸೆಯಿಂದ ಪ್ರಪಂಚದ ಜನ ಮನದಲ್ಲಿ ರಾರಾಜಿಸುತ್ತಿರುವಂತೆ ಶಾಸ್ತ್ರಿಗಳು ಧರ್ಮಾಭಿಮಾನಿಗಳ ಸಾಹಿತ್ಯಾಭಿಮಾನಿಗಳ ಹಾಗೂ ಸಮಸ್ತ ಕರ್ನಾಟಕದ ಜನತೆಯ ಹೃದಯದಲ್ಲಿ ವಿರಾಜಿಸಿದ್ದಾರೆಂದು ಇಂದಿನ ತಾ॥ 3-1-88ರ ಅವರ ಶತಾಬ್ದಿ ಮಹೋತ್ಸವ ಕರೆದು ಹೇಳುತ್ತದೆ. ಜೀವನವನ್ನು ಸಮಾಜಕ್ಕಾಗಿ ಅರ್ಪಿಸಿದಾಗ ಜನತೆಯಿಂದ ಈ ರೀತಿಯ ಗೌರವಾಭಿಮಾನದ ಪ್ರತಿಕ್ರಿಯೆ ಸಿಗುತ್ತದೆಂಬುದಕ್ಕೆ ಇದು ಸಾಕ್ಷಿಯಾಗಿದೆ.

ಶಾಸ್ತ್ರಿಗಳ ಅತಿಥಿ ಸತ್ಕಾರ ಮತ್ತು ಗೃಹಸ್ಥ ಜೀವನ-1940 ರಲ್ಲಿ ಶ್ರೀ ಶ್ರವಣ ಬೆಳಗೊಳದಲ್ಲಿ ಮಹಾಮಸ್ತಕಾಭಿಷೇಕ ಮಹೋತ್ಸವ ಭಗವಾನ್ ಗೋಮಟೇಶ್ವರ ಸ್ವಾಮಿಗೆ ಜರಗಿತ್ತು. ಅದರ ಉಳಿತಾಯ ಮೊಬಲಗನ್ನು ಧ್ರುವನಿಧಿಯಾಗಿರಿಸುವ ಸಮಿತಿಯಲ್ಲಿ ಪೂಜ್ಯ ಮಂಜಯ್ಯ ಹೆಗ್ಗಡೆಯವರೂ ಇದ್ದರು. ಬೆಂಗಳೂರಲ್ಲಿ ಸಮಿತಿಯ ಕಾರ್ಯ ಮುಗಿಸಿ ಮೈಸೂರು

ಮಾರ್ಗವಾಗಿ ಹಿಂದೆ ಬರುವ ಹೆಗ್ಗಡೆಯವರು ಶಾಂತಿರಾಜ ಶಾಸ್ತ್ರಿಗಳ ಆತಿಥ್ಯ ಸ್ವೀಕರಿಸುವ ನೆಲೆಯಲ್ಲಿ ನಾನು ಶಾಸ್ತ್ರಿಗಳನ್ನು ಮನಸ್ಸಿನಲ್ಲಿ ಉಳಿಸಿಕೊಂಡ ವಿಷಯವಿದು. ಆ ಸಮಯದಲ್ಲಿ ಶಾಸ್ತ್ರಿಗಳು ನಗರದ ಬಸುಮಯ್ಯ ರಸ್ತೆಯ ಸ್ವಂತ ಮನೆಯಲ್ಲಿದ್ದರು. ಹೆಗ್ಗಡೆಯವರು ಬಂದ ವಿಷಯವನ್ನು ಕಾರಿನಿಂದ ಇಳಿದು ಮುಂದಾಗಿ ತಿಳಿಸಲು ಅವರ ಮನೆಯ ಮಾಳಿಗೆಗೆ ಹೋದೆ. ವಿಷಯ ತಿಳಿಸಿದೆ. ಶಾಸ್ತ್ರಿಗಳು ಸಂತೋಷಭರಿತರಾಗಿ ಪತ್ನಿಯಲ್ಲಿ, ಹೌದೆ, ಧರ್ಮಸ್ಥಳದ ಹೆಗ್ಗಡೆಯವರು ಅನಿರೀಕ್ಷಿತರಾಗಿ ನಮ್ಮ ಮನೆಗೆ ದಯಮಾಡಿಸಿದ್ದಾರೆ. ಪತ್ನಿ: (ಸೌ. ಸುಭದ್ರಾ ದೇವಿ) ದೇವರು ಬಂದಂತಾಯ್ತು ನಮ್ಮ ಮನೆಗೆ. ಕರೆದುಕೊಂಡು ಮೇಲಕ್ಕೆ ಬನ್ನಿ (ಈ ಮಾತಿನಲ್ಲಿ ಪತಿಯೊಡನೆ ಜೊತೆಗೂಡಿ ಆದರ ಸತ್ಕಾರ ನಡಿಸುವ ಅಭಿಮಾನದ ಧ್ವನಿ ಚಿಮ್ಮುತ್ತಿರುವುದು ತೋರಿತು).

ಶಾಸ್ತ್ರಿಗಳು—ಆದರ ಸತ್ಕಾರ ಚೆನ್ನಾಗಿ ನಡಿಯಬೇಕಲ್ಲ.

ಪತ್ನಿ—ಚೆನ್ನಾಗಿ ನಡಿಸಬೇಕು. ಇಂಥವರು ನಮ್ಮಲ್ಲಿಗೆ ಬರುವುದು ಸಾಮಾನ್ಯವೇ? ನೀವು ಇದ್ದೀರಲ್ಲ.

ಇದು ಅಚ್ಚಾ ಗೃಹಿಣಿಯ ಹೃದಯದಿಂದ ಹೊರಟು ಬಂದ ಪ್ರಾಮಾಣಿಕ ಧ್ವನಿ. ಭಾರತೀಯ ಮಹಿಳೆ ಆತಿಥ್ಯದಲ್ಲಿ ಕೀರ್ತಿ ಪಡೆದವಳು. ಸಂತುಷ್ಟ ಗೃಹಿಣಿಯಿಂದ ಮನೆ ಬೆಳಗುವುದು. ಸದ್‌ಗೃಹಸ್ಥನ ಮನೆಯಲ್ಲಿ ನಡೆಯುವ ಆದರೋಪಚಾರದಲ್ಲಿ ಪತ್ನಿಯ ಪಾತ್ರ ಪ್ರಧಾನ. ಅವಳ ಶುದ್ಧ ತ್ರಿಕರಣ ಪತಿಯ ಜೀವನಕ್ಕಿರುವ ಕೀರ್ತಿಕಲಶ. ಪತಿಪತ್ನಿಯರ ಪ್ರೀತಿ ವಿಶ್ವಾಸದ ಸಮ್ಮಿಲನ ಅಪ್ಯಾಯಮಾನವಾಗಿ ಹೀಗೆ ದರ್ಶನ ನೀಡುತ್ತದೆ. ಧರ್ಮ ಅರ್ಥ ಮತ್ತು ಕಾಮಗಳಲ್ಲಿ ಮುಪ್ಪುರಿಗೊಂಡ ದಂಪತಿಗಳಿಗೆ ನರಲೋಕವೇ ನಾಕಲೋಕವಾಗುತ್ತದೆ ಎಂಬುದು ಸತ್ಯ. ಸತ್ಕುಲ, ಧರ್ಮಾಭಿಮಾನ, ಸಹಚರ ಮನೋವೃತ್ತಿ, ಉದಾರ ಚಿತ್ತ ಇವು ಸತ್ಕನ್ಯೆಗಿರುವ ಗುಣಗಳು. ಇಂಥವಳನ್ನು ಧಾರೆ ಎರೆದು ವಿವಾಹ ಬಂಧನಕ್ಕೊಳಪಡಿಸುವ ಮಾತಾಪಿತೃಗಳು ವರನಿಗೆ ಧರ್ಮ ಅರ್ಥ ಮತ್ತು ಕಾಮಗಳ ಆಶ್ರಮವನ್ನು ದಾನಮಾಡಿದಂತೆ, ಎಂಬ ಗೃಹಸ್ಥ ನೀತಿಯು ಶಾಸ್ತ್ರಿಗಳ ಮನೆಯಲ್ಲಿ ಕಾಣುತ್ತಿತ್ತು. ದಿ॥ ಪೂಜ್ಯ ಮಂಜಯ್ಯ ಹೆಗ್ಗಡೆ ಅವರನ್ನು ಚೆನ್ನಾಗಿ ಉಪಚರಿಸಿದರು. ಶಾಸ್ತ್ರೀ ದಂಪತಿಗಳು ತ್ರಿವರ್ಗಗಳನ್ನು ತಮ್ಮ ನಂತರ ಮುಂದುವರಿಸಿ ಬೆಳಗುವಂತೆ ನಾಲ್ಕು ಜನ ಪುತ್ರರನ್ನೂ, ನಾಲ್ಕು ಜನ ಪುತ್ರಿಯರನ್ನೂ ಪಳಗಿಸಿ ಸಮಾಜದ ಯೋಗ್ಯ ಸದಸ್ಯರನ್ನಾಗಿ ನೀಡಿರುತ್ತಾರೆ. ಧರ್ಮೇಚ ಅರ್ಥೇಚ ಕಾಮೇಚ ತ್ವಾಂ ಸಂಭಾವಯಾಮಿ, ಧರ್ಮ ಅರ್ಥ ಕಾಮಗಳಲ್ಲಿ ಪತ್ನಿಯಾಗಿರುವ ನಿನ್ನನ್ನು ಗೌರವ ಪೂರ್ವಕ ನಡಿಸಿಕೊಳ್ಳುತ್ತೇನೆ ಎಂಬ ವಿವಾಹ ಬಂಧನದ ಪ್ರಾಮಾಣಿಕ ಪ್ರತಿಜ್ಞೆಯನ್ನು ಚೆನ್ನಾಗಿ ಅನುಸರಿಸಿದ್ದಾರೆ. ಶಾಸ್ತ್ರಿಗಳ ಧರ್ಮಾನುಸರಣೆಯಲ್ಲಿ ಅವರ ಮಾತಾಪಿತೃಗಳಾದ ಧರಣಪ್ಪನವರು ಮತ್ತು ಚೆಲುವಮ್ಮನವರ ಸತ್‌ಸಂಸ್ಕಾರಗಳು ಮೂಡಿ ಬಂದಿದೆ. "ಸಜಾತೋ ಏನಜಾತೇನ ಯಾತಿ ವಂಶ –ಸಮುನ್ನತಿಂ" ಅನುವಂಶಿಕ ಕೀರ್ತಿ ವೃದ್ಧಿಗೆ ಪಾತ್ರನಾದ ಒಬ್ಬ ಸುಪುತ್ರನು ಹುಟ್ಟಿ ಬಂದರೂ ಸಾಕು. ಅನೇಕ ಪುತ್ರರು ಹುಟ್ಟಬೇಕಿಲ್ಲ ಎಂಬುದನ್ನು ಶ್ರೀ ಶಾಂತಿರಾಜ ಶಾಸ್ತ್ರಿಗಳು ಸಾರ್ಥಕ ಪಡಿಸಿದ್ದಾರೆಂದು ನನ್ನ ಅನಿಸಿಕೆಯಲ್ಲಿ ಸಮಾಜದ ಧ್ವನಿಯೂ ಬಿಂಬಿಸಿದೆ.

ಮಾನವ ಎಲ್ಲರಂತೆ ಜನಿಸಿ ತನ್ನ ಪುರುಷಾರ್ಥದಿಂದ ಅಂತಃಶಕ್ತಿಯನ್ನು ವಿಕಾಸಪಡಿಸಿ ಪರಾರ್ಥವೇ ಪರಮಾರ್ಥವೆಂದು ತಿಳಿದು ಧರ್ಮ ಸಂಘಟನೆ, ಸಮಾಜ ಪ್ರೇಮ, ಪರೋಪಕಾರ ಆದಿ ಸತ್ಕಾರ್ಯಗಳಲ್ಲಿ ತನ್ನನ್ನು ಅರ್ಪಿಸಿ ಕೃತಾರ್ಥನಾದವನು ಚಿರಂಜೀವಿಯಾಗುತ್ತಾನೆ. 1952 ನೇ ಇಸವಿಯಲ್ಲಿ ಸ್ವರ್ಗಸ್ಥರಾದ ಶಾಸ್ತ್ರಿಗಳ ಜನ್ಮ ಶತಾಬ್ದಿಯನ್ನು ತಾ॥ 3–1–88 ರಂದು ಅವರ ದಿವ್ಯ ಚೇತನಕ್ಕೆ ಪೂಜ್ಯಪರ ಕರ್ಮಯೋಗಿ ಭಟ್ಟಾರಕರಾದ ಚಾರುಕೀರ್ತಿಪಂಡಿತಾಚಾರ್ಯ ಸ್ವಾಮಿಗಳ ಸಾನ್ನಿಧ್ಯದಲ್ಲಿ ಸಮಾಜವು ಅಭಿಮಾನದಿಂದ ಗೌರವಾರ್ಪಣೆ ಮಾಡುತ್ತಿದೆ.

ನಿರ್ಮಲ ಹೃದಯವೇ ಪುಣ್ಯತೀರ್ಥ, ಉತ್ಕರ್ಷಕೆ ನೀತಿಯೇ ಸೋಪಾನ, ನೀತಿಯುತ ಬದುಕು ಬಂಗಾರದ ಬದುಕು, ಪರಮಾರ್ಥದ ಬದುಕಿಗೆ ಜಿನದೇವಶರಣಂ— ಇಂತಿದೆ ಶಾಸ್ತ್ರಿಗಳ ಜೀವನ ಮೌಲ್ಯ.*

* ಶ್ರವಣಬೆಳಗೊಳದಲ್ಲಿ ಮಾಡಿದ ಭಾಷಣದ ಸಾರ.

ಶತಾಬ್ದಿ ಉದ್ಘಾಟನಾ

ಸಮಾರಂಭದ ಭಾಷಣಗಳು



ಚಿತ್ರಗಳು



ನ್ಯಾಯಮೂರ್ತಿ ಆರ್.ಎಸ್. ಮಹೇಂದ್ರ : ವಸ್ತು ಪ್ರದರ್ಶನ ಉದ್ಘಾಟನೆ



ಶ್ರೀ ಚದುರಂಗ ಅವರಿಂದ ಶ್ರೀ ಶಾಸ್ತ್ರಿಗಳ ಜೀವನ ಕುರಿತ ಪುಸ್ತಕದ ಬಿಡುಗಡೆ



ಶ್ರೀ ಶಾಸ್ತ್ರಿಗಳ ಭಾವಚಿತ್ರ ಅನಾವರಣ ಶ್ರೀ [illegible]



ಶ್ರೀ ಎಸ್. ನಾಗಕುಮಾರ್ ಅವರಿಂದ ಶ್ರೀಗಳವರಿಗೆ ಫಲಪುಷ್ಪ ಸಮರ್ಪಣೆ



ಸನ್ಮಾನ್ಯ ಶ್ರೀ ಜಿ.ಹೆಚ್. ಆದಿರಾಜಯ್ಯ, ಬೆಂಗಳೂರು



ಶ್ರೀ ಎಸ್.ಜಿ. ವಸಂತರಾಜಯ್ಯ, ಬೆಂಗಳೂರು



ಶ್ರೀ ಎಂ.ಪಿ. ಧರ್ಮಪಾಲನ್, ವಯನಾಡ್



ಶ್ರೀ ಅ.ನಾ. ಚಂದ್ರಕೀರ್ತಿ, ಬೆಳಗಾವಿ



ಶ್ರೀ ರಾಮಚಂದ್ರ ಸ್ಯಾದ್ವಾದಿ, ತುಮಕೂರು



ಪ್ರೇಕ್ಷಕ ವರ್ಗದಲ್ಲಿ ಗಣ್ಯರು

ಕನ್ನಡ ಸಾಹಿತ್ಯಕ್ಕೆ ಎತ್ರ್ಜೂರು ಶಾಂತಿರಾಜಶಾಸ್ತ್ರಿಗಳ ಕೊಡುಗೆ

— ಡಾ. ಎಂ. ಎ. ಜಯಚಂದ್ರ

ಸಂಸ್ಕೃತ-ಪ್ರಾಕೃತ-ಕನ್ನಡ ವಿದ್ವಾಂಸರು, ಉತ್ತಮ ಅನುವಾದಕರು, ಕನ್ನಡ-ಸಂಸ್ಕೃತ ಗ್ರಂಥ ಸಂಪಾದನಾಕಾರರು, ಒಳ್ಳೆಯ ವ್ಯಾಖ್ಯಾನಕಾರರು, ಸ್ವಯಂ ಶ್ರೇಷ್ಠ ಭಾಷಣಕಾರರು, ಭಾಷಣ ಸಂಗ್ರಾಹಕರು, ಎರಡು ಪತ್ರಿಕೆಗಳ ಜನಕರು. ಆಗಮ ತಜ್ಞರು, ಸ್ತ್ರೀ ವಿದ್ಯಾಭ್ಯಾಸ ಪ್ರತಿಪಾದಕರು, ರಾಜಸೇವಾಸಕ್ತರು, ಸಮಾಜ ಸುಧಾರಕರು, ಜನಪರ ಮನೋಧರ್ಮದವರು—ಹೀಗೆ ಎ. ಶಾಂತಿರಾಜ ಶಾಸ್ತ್ರಿಗಳ ಬಹುಮುಖ ಪ್ರತಿಭೆಯನ್ನು ಸಂಕ್ಷಿಪ್ತವಾಗಿ ಪರಿಚಯಿಸಬಹುದು.

ಸಾಧನೆಯ ಮೈಲಿಗಲ್ಲುಗಳು

ದಕ್ಷಿಣ ಕನ್ನಡ ಜಿಲ್ಲೆಯ ಎತ್ರ್ಜೂರು ಎಂಬ ಸಣ್ಣ ಹಳ್ಳಿಯಲ್ಲಿ ರೈತಾಪಿ ಕುಟುಂಬದಲ್ಲಿ ಜನಿಸಿ, ಕಾರ್ಕಳ ಹಾಗೂ ಶ್ರವಣಬೆಳಗೊಳದಲ್ಲಿ ಪ್ರಾರಂಭಿಕ ವಿದ್ಯಾಭ್ಯಾಸ ಮಾಡಿ, ಉನ್ನತ ಶಿಕ್ಷಣವನ್ನು ಉತ್ತರ ಭಾರತದ ಮೊರೆನಾ ಹಾಗೂ ಕಲ್ಕತ್ತ ನಗರಗಳಲ್ಲಿ ಪಡೆದು, 'ನ್ಯಾಯತೀರ್ಥ' ಪದವಿಯನ್ನು ಸಂಪಾದಿಸಿದರು. ಅನಂತರ ಸಂಸ್ಥಾನದ ರಾಜಧಾನಿಯಾಗಿದ್ದ ಮೈಸೂರಿನಲ್ಲಿ ನೆಲಸಿ, ಅರಮನೆಯ ಮನ್ನಣೆಗೆ ಪಾತ್ರರಾಗಿ ಆಸ್ಥಾನ ವಿದ್ವಾನ್ (೧೯೨೫),ಆಸ್ಥಾನ ಮಹಾವಿದ್ವಾನ್ (೧೯೪೧), ಪಂಡಿತ ರತ್ನಂ(೧೯೪೭) ಎಂಬ ಬಿರುದಿಗೆ ಪಾತ್ರರಾದರು. ಗುರು ಮನೆಯಿಂದ 'ಜೈನ ಶಾಸ್ತ್ರ ವಿಶಾರದ' ಎಂಬ ಪ್ರಶಸ್ತಿಯನ್ನು ಪಡೆದರು. ಶ್ರೀ ಶಾಸ್ತ್ರಿಗಳು ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆಗಾಗಿ ೧೯೫೧ ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಅವರಿಗೆ ಸನ್ಮಾನ ಪತ್ರವನ್ನಿತ್ತು ಗೌರವಿಸಿತು. ಇವೆಲ್ಲ ಶಾಸ್ತ್ರಿಗಳ ಸಾಧನೆಯ ಕೆಲವು ಮೈಲಿಗಲ್ಲುಗಳಾಗಿವೆ.

ಅನುವಾದ ಗ್ರಂಥಗಳ ಕೊಡುಗೆ

'ಮಹಾ ಪುರಾಣ' ಗ್ರಂಥ ಶಾಸ್ತ್ರಿಗಳ ಅಚಾರ್ಯ ಕೃತಿಯಾಗಿದೆ. ಇದರಲ್ಲಿ ಆ ಮಹಾನ್ ಗ್ರಂಥದ ಪ್ರತಿಯೊಂದು ಸಂಸ್ಕೃತ ಶ್ಲೋಕಗಳನ್ನು ಕನ್ನಡ ಲಿಪಿಯಲ್ಲಿ ದೊಡ್ಡ ಅಕ್ಷರದಲ್ಲಿ ಕೊಟ್ಟು, ಅವುಗಳ ಕನ್ನಡ ಅನುವಾದವನ್ನು ನೀಡಿದ್ದಾರೆ. ಇದರಿಂದ ಪಂಡಿತ ಪಾಮರರಿಬ್ಬರಿಗೂ ಅನುಕೂಲವಾಗಿದೆ.

ಜೈನ ಸಂಸ್ಕೃತ ವಾಙ್ಮಯದಲ್ಲಿ 'ಮಹಾಪುರಾಣ'ಕ್ಕೆ ವಿಶಿಷ್ಟ ಸ್ಥಾನವಿದೆ. ಇದು ಜಿನಸೇನಾಚಾರ್ಯ ಹಾಗೂ ಗುಣಭದ್ರಾಚಾರ್ಯರಿಂದ ರಚಿತವಾದ ೨೦ ಸಾವಿರ ಶ್ಲೋಕ ಪ್ರಮಾಣದ ಮಹಾನ್ ಗ್ರಂಥ. ಪಾವಿತ್ರ್ಯತೆಯಲ್ಲಿ ರಾಮಾಯಣ ಮಹಾಭಾರತಗಳಿಗೆ ಸರಿಸಮಾನವಾದುದು. ಇದು ಜೈನಧರ್ಮದ ಆಗರವೂ ಹೌದು, ಜೈನ ಕಥಾ ಸಾಗರವೂ ಹೌದು. ೬೩ ಜನ ಶಲಾಕಾ ಪುರುಷರ ಕಥೆ, ಉಪಕಥೆ ಇದರಲ್ಲಿ ಅಡಕವಾಗಿದೆ. ಕ್ರಿ.ಶ. ೯ನೇ ಶತಮಾನದ ಕೃತಿ. ಈ ಮಹಾಪುರಾಣ ಗ್ರಂಥದ ರಚನೆಗೂ ಪೂರ್ವದಲ್ಲಿ ಕೂಚಿಭಟ್ಟಾರಕ, ಶ್ರೀನಂದಿಮುನಿ, ಕವಿಪರಮೇಷ್ಠಿಗಳು ತ್ರಿಷಷ್ಠಿ ಶಲಾಕಾ ಪುರುಷರ ಕಥೆಯನ್ನು ಕೃತಿಗಿಳಿಸಿದ್ದರು. ಆದರೆ ಈಗ ಅವರ ಗ್ರಂಥಗಳು ಉಪಲಬ್ಧವಿಲ್ಲ.

ಆದರೆ ೧೦ನೇ ಶತಮಾನದ ಶ್ರೀ ಗೊಮ್ಮಟೇಶ್ವರ ಮಹಾಶಿಲ್ಪ ಪ್ರತಿಷ್ಠಾಪಕನಾದ ಚಾವುಂಡರಾಯ ತ್ರಿಷಷ್ಠಿ ಶಲಾಕಾಪುರುಷರ ಕಥೆಯನ್ನು ಕನ್ನಡದಲ್ಲಿ ಹೇಳಿದ್ದಾನೆ. ಇದು 'ಚಾವುಂಡರಾಯ ಪುರಾಣ'ವೆಂದೇ ಪ್ರಸಿದ್ಧವಾಗಿದೆ. ಆದರಿದು 'ಮಹಾಪುರಾಣ'ದ ಅನುವಾದ ಗ್ರಂಥವಲ್ಲ. ಅದನ್ನೇ ವಿಶೇಷವಾಗಿ ಆಧರಿಸಿದ ಸಂಗ್ರಹ ಗ್ರಂಥ. ಈ ಹಿನ್ನೆಲೆಯಲ್ಲಿ ನೋಡಿದಾಗ, ಎ. ಶಾಂತಿರಾಜ ಶಾಸ್ತ್ರಿಗಳು, ಮಹಾಪುರಾಣವನ್ನು ಆಧುನಿಕ ಸಂಶೋಧಕರ ಅವಗಾಹನೆಗೆ ಯೋಗ್ಯವಾಗುವ ರೀತಿಯಲ್ಲಿ, ಎಲ್ಲಕ್ಕಿಂತ ಮಿಗಿಲಾಗಿ ಸಾಮಾನ್ಯ ಓದುಗರಿಗೆ

ಅರ್ಥವಾಗುವ ತಿಳಿಗನ್ನಡ ಗದ್ಯದಲ್ಲಿ ಅನುವಾದಿಸಿಕೊಟ್ಟು ಉಪಕರಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ.

ಈ ಅನುವಾದವನ್ನು ಆಧರಿಸಿ ಮುಂದೆ ಮಿರ್ಜಿ ಅಣ್ಣಾರಾಯ ಹಾಗೂ ಅವರ ಮಿತ್ರರು ಸೇರಿ 'ಮಹಾ ಪುರಾಣ ಸಾರ' ಎಂಬ ಗ್ರಂಥವನ್ನು ರಚಿಸಿದರು. ಅನಂತರ ಪ್ರೊ. ಜಿ. ಬ್ರಹ್ಮಪ್ಪನವರು ಮಹಾಪುರಾಣವನ್ನು ವಚನರೂಪದಲ್ಲಿ ನಿರೂಪಿಸಿದರು. ಅಲ್ಲದೆ 'ಮಕ್ಕಳ ಮಹಾಪುರಾಣ' ರಚನೆಗೊಳ್ಳುವ ಸೂಚನೆಗಳು ಕಂಡು ಬರುತ್ತಿವೆ. ಶಾಸ್ತ್ರಿಗಳ ಮಹಾಪುರಾಣ ಅನುವಾದ ಒಂದು ಹೊಸ ಪರಂಪರೆಯನ್ನೇ ಕನ್ನಡದಲ್ಲಿ ಹುಟ್ಟು ಹಾಕಿರುವುದನ್ನು ಯಾರಾದರೂ ನಿಚ್ಚಲವಾಗಿ ಗಮನಿಸ ಬಹುದಾಗಿದೆ.

ಇಂದು ರಾಷ್ಟ್ರಕವಿ ಕುವೆಂಪು ಅವರ ವಿಶ್ವಮಾನವ ಸಂದೇಶ ಲೋಕಪ್ರಿಯವಾಗಿದೆ. ಇದರ ಮೊದಲ ಸಂದೇಶ, 'ಮನುಷ್ಯಜಾತಿ ತಾನೊಂದೆ ವಲಂ'. ಇದು ಆದಿಕವಿ ಪಂಪನ ಆದಿಪುರಾಣದಲ್ಲಿ ಬರುವ ಮಾತು. ಆದರೆ ಇದು ವಾಸ್ತವವಾಗಿ ಪಂಪನ ವಚನವಲ್ಲ. ಮಹಾ ಪುರಾಣವಲ್ಲಿ ಬರುವ ಜಿನಸೇನಾಚಾರ್ಯರ, 'ಮನುಷ್ಯ ಜಾತಿರೇಕೈವ' ಎಂಬುದರ ಸುಂದರ ಅನುವಾದವಾಗಿದೆ. ಮಹಾಪುರಾಣದ ಒಂದು ಅಪೂರ್ವ ಸಂದೇಶ, ೧೦ನೇ ಶತಮಾನದ ಪಂಪಮಹಾಕವಿಯ ಕಾವ್ಯದಲ್ಲಿ ಅವತರಿಸಿ, ಅದು ೨೦ನೇ ಶತಮಾನದ ಮತ್ತೊಬ್ಬ ಮಹಾಕವಿಯ ಮೇಲೆ ಪ್ರಭಾವ ಬೀರಿ, ಅವರ ವಿಶ್ವಮಾನವ ಸಂದೇಶ ದಲ್ಲಿ ಪ್ರಥಮ ಸ್ಥಾನ ಸಂಪಾದಿಸಿರುವುದನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ, ಮಹಾಪುರಾಣದ ಹಾಗೂ ಅದರ ಕನ್ನಡ ಅನುವಾದದ ಹಿರಿಮೆ ಯಾರಿಗಾದರು ಸ್ವಯಂ ವೇದ್ಯವಾಗುವುದು.

ಈ ಮಹಾಪುರಾಣವೇ ಪಂಪನ ಆದಿಪುರಾಣವೇ ಮೊದಲಾದ ಕನ್ನಡ ಜೈನ ಪುರಾಣಗಳಿಗೆ, 3ನೇ ಮಂಗರಸನ ಜಯನೃಪ ಕಾವ್ಯ ಮೊದಲಾದ ಕಾವ್ಯಗಳಿಗೆ ತಲಕಾವೇರಿಯಾಗಿದೆ. ಇವುಗಳ ತೌಲನಿಕ ಅಧ್ಯಯನದ ಸಂದರ್ಭದಲ್ಲಿ ಶಾಸ್ತ್ರಿಗಳ ಅನುವಾದ ತುಂಬ ಉಪಯುಕ್ತ ವಾಗುವುದು. ಈ ದೃಷ್ಟಿಯಿಂದ ಶಾಸ್ತ್ರಿಗಳ 'ಮಹಾ ಪುರಾಣ ಕನ್ನಡ ಸಂಶೋಧಕರಿಗೆ ಅತ್ಯಗತ್ಯವಾದ ಪರಾಮರ್ಶನ ಗ್ರಂಥವಾಗಿದೆ.

ಶಾಸ್ತ್ರಿಗಳ ಮತ್ತೊಂದು ಮುಖ್ಯವಾದ ಅನುವಾದ ಗ್ರಂಥ-ಧರ್ಮಪರೀಕ್ಷೆ. ಇದರ ಕರ್ತೃ ಆಚಾರ್ಯ ಅಮಿತಗತಿ. ಜೈನಧರ್ಮದಲ್ಲಿ ಸಮ್ಯಕ್ತ್ವಕ್ಕೆ ತುಂಬ ಮಹತ್ವವಿದೆ. ಇದು ಲಭ್ಯವಾಗಬೇಕಾದರೆ ಮೂಢ ತ್ರಯಗಳನ್ನು-ದೇವಮೂಢ, ಶಾಸ್ತ್ರಮೂಢ, ಗುರು ಮೂಢಗಳನ್ನು ಬಿಡಬೇಕು. ಜೈನರು ಅಲ್ಪಸಂಖ್ಯಾತರು, ಅನ್ಯಧರ್ಮಿಯರ ಮಧ್ಯೆ ನೆಲೆಸಿದ್ದಾರೆ. ಇಂಥ ಶ್ರಾವಕ ರಲ್ಲಿ ಪ್ರಭಾವ ಬೀರಿರುವ ಮೂಢತ್ರಯವನ್ನು ಹೋಗ ಲಾಡಿಸುವ ದೃಷ್ಟಿಯಿಂದ ರಚಿತವಾಗಿರುವ ಗ್ರಂಥ, ಧರ್ಮಪರೀಕ್ಷೆ. ಅನೇಕ ಕಥೆಗಳ ಮಾಧ್ಯಮದಲ್ಲಿ ಕವಿ ಪರಮತ ವಿಡಂಬನೆ ಮಾಡಿ, ಸ್ವಮತ ಮಂಡನೆ ಮಾಡಿ ದ್ದಾನೆ. ಇಂಥ ಗ್ರಂಥವನ್ನು ಯಾವ ಯಾವ ದೃಷ್ಟಿ ಯಿಂದ ಅಧ್ಯಯನ ಮಾಡಬೇಕು ಎಂಬುದನ್ನು ಮುನ್ನುಡಿ ಯಲ್ಲಿ ಶಾಸ್ತ್ರಿಗಳು ಸೊಗಸಾಗಿ ಹೇಳಿದ್ದಾರೆ. ಆಜ್ಞಾ ಪ್ರಧಾನ ಮತ್ತು ಪರೀಕ್ಷಾಪ್ರಧಾನರ ಸ್ವರೂಪವನ್ನು ತಿಳಿಸಿ, ಪರೀಕ್ಷಾ ಪ್ರಧಾನ ದೃಷ್ಟಿಯಿಂದ ಧರ್ಮಪರೀಕ್ಷೆ ಯನ್ನು ಓದಬೇಕು ಎಂಬ ಸೂಚನೆ ಕೊಟ್ಟಿರುವುದು ಔಚಿತ್ಯಪೂರ್ಣವಾಗಿದೆ. ಏಕೆಂದರೆ ಒಂದು ಮತ ಅಥವಾ ಪಂಥ ಅಥವಾ ಪಕ್ಷದ ವಿಷಯಗಳನ್ನು ಮತ್ತೊಂದು ಮತ-ಪಂಥ-ಪಕ್ಷದವರು ವಿಡಂಬಿಸುವುದು ಸಹಜ. ಇಲ್ಲವೆ ಅದೇ ಮತ-ಪಂಥ-ಪಕ್ಷದ ವಿಚಾರವಂತರು ವಿಡಂಬಿಸುವ ಸಾಧ್ಯತೆಯೂ ಉಂಟು. ಇಂಥ ವಿಡಂಬನೆ ಯನ್ನು ಪರಿಶೀಲಿಸುವಾಗ ಪರೀಕ್ಷಾಪ್ರಧಾನ ದೃಷ್ಟಿ ಅತ್ಯಗತ್ಯ. ಇದರಿಂದ ಎರಡು ಪಕ್ಷದವರಿಗೂ ಕ್ಷೇಮ.

ಕನ್ನಡದಲ್ಲಿ ವೃತ್ತವಿಳಾಸ ಚಂಪೂ ಶೈಲಿಯಲ್ಲಿ 'ಧರ್ಮಪರೀಕ್ಷೆ' ಕಾವ್ಯವನ್ನು ರಚಿಸಿದ್ದಾನೆ. ಇದನ್ನೇ ಚಂದ್ರಸಾಗರವರ್ಣಿ ಸರಳ ಕನ್ನಡ ಗದ್ಯಕ್ಕೆ ರೂಪಾಂತರಿ ಸಿದ್ದಾನೆ. ಇವುಗಳೊಡನೆ ಅಮಿತಗತಿಯ ಧರ್ಮಪರೀಕ್ಷೆ ಯನ್ನು ಹೋಲಿಸಿ ನೋಡಬಹುದು. ಈ ತೌಲನಿಕ ಅಧ್ಯಯನಕ್ಕೆ ಶಾಸ್ತ್ರಿಗಳ ಅನುವಾದ ತುಂಬ ಸಹಕಾರಿ ಯಾಗಿದೆ.

ಶಾಸ್ತ್ರಿಗಳ ಮತ್ತೊಂದು ಉಪಯುಕ್ತ ಅನುವಾದ ಗ್ರಂಥ-ಸಮ್ಯಕ್ತ್ವ ಕೌಮುದಿ. ಇದು ಸಹ ಅನೇಕ ಕಥೆಗಳನ್ನು ಒಳಗೊಂಡ ಸಮ್ಯಕ್ತ್ವವನ್ನು ಪ್ರತಿಪಾದಿಸುವ ಗ್ರಂಥ. ಅಜ್ಞಾತ ಕವಿಯು ಈ ಸಂಸ್ಕೃತ ಗ್ರಂಥವನ್ನು, ಅದರಲ್ಲಿರುವ ಸುಭಾಷಿತ ಸದೃಶ ಸಂಸ್ಕೃತ ಶ್ಲೋಕ

ಹಾಗೂ ಪ್ರಾಕೃತ ಗಾಹೆಗಳನ್ನು ಅಳವಡಿಸಿಕೊಂಡು ಕನ್ನಡ ಗದ್ಯದಲ್ಲಿ ಭಾವಾನುವಾದ ಮಾಡಿದ್ದಾರೆ. ಇದು ಪ್ರಾರಂಭದಲ್ಲಿ ವಿವೇಕಾಭ್ಯುದಯ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬಂದು ಅನಂತರ ಪುಸ್ತಕ ರೂಪವನ್ನು ಹೊಂದಿತು. "ಉಪನ್ಯಾಸಗಳನ್ನು ಭಾಷಣಗಳನ್ನು ಮಾಡುವವರಿಗೂ ಜನರಂಜಕವಾಗಿ ಮಾತನಾಡಲಿಚ್ಛಿಸುವವರಿಗೂ" ಅನುಕೂಲವಾಗುವುದೆಂದು ಈ ಗ್ರಂಥದ ಭಾವಾನುವಾದದಲ್ಲಿ ಶ್ಲೋಕ–ಗಾಹೆಗಳನ್ನು ಉಳಿಸಿಕೊಂಡಿರುವುದಾಗಿ ಶಾಸ್ತ್ರಿಗಳು ಅಭಿಪ್ರಾಯ ಪಟ್ಟಿದ್ದಾರೆ.

ಕನ್ನಡದಲ್ಲಿ 3ನೇ ಮಂಗರಸ ಷಟ್ಪದಿಯಲ್ಲೂ, ಚಿಕ್ಕಮಲ್ಲಣ ಸಾಂಗತ್ಯದಲ್ಲೂ 'ಸಮ್ಯಕ್ತ್ವ ಕೌಮುದಿ' ಕಾವ್ಯವನ್ನು ರಚಿಸಿದ್ದಾರೆ. ಇವುಗಳೊಡನೆ ಸಂಸ್ಕೃತ ಕಾವ್ಯವನ್ನು ಹೋಲಿಸಿ ಅಧ್ಯಯನಮಾಡಲು ಶಾಸ್ತ್ರಿಗಳ ಈ ಅನುವಾದ ಅತ್ಯುಪಯುಕ್ತವಾಗಿದೆ.

ಕನ್ನಡ ಸಂಪಾದಿತ ಗ್ರಂಥಗಳ ಕೊಡುಗೆ

ಹರಿವಂಶಪುರಾಣವೆಂದು ಪ್ರಸಿದ್ಧವಾಗಿರುವ 3ನೇ ಮಂಗರಸನ ನೇಮಿಜಿನೇಶ ಸಂಗತಿ (೧೯೩೧), ಬಾಹುಬಲಿ ಕವಿಯ ನಾಗಕುಮಾರ ಚರಿತೆ (೧೯೩೩), ರತ್ನಾಕರ ವರ್ಣಿಯ ಶತಕತ್ರಯ (೧೯೨೨), ಪೊನ್ನನ ತ್ರೈಲೋಕ್ಯ ಚೂಡಾಮಣಿ ಸ್ತೋತ್ರ (೧೯೪೨), ಅಜ್ಞಾತ ಕವಿಯ ಯೋಗಾಮೃತ ಶತಕಂ (೧೯೫೦), ಚಂದ್ರಸಾಗರ ವರ್ಣಿಯ ಜಿನಭಕ್ತಿಸಾರ(೧೯೨೫),ಬಾಲಚಂದ್ರಮುನಿಯ ತತ್ತ್ವರತ್ನ ಪ್ರದೀಪಿಕೆ (೧೯೫೫) ಹಾಗೂ ಏಳು ನೋಂಪಿ ಕಥೆಗಳನ್ನು (೧೯೨೭,೧೯೩೮) ಸಂಪಾದಿಸಿಕೊಟ್ಟಿದ್ದಾರೆ. ಕನ್ನಡದಲ್ಲಿ ಗ್ರಂಥ ಸಂಪಾದನಾಶಾಸ್ತ್ರದ ಪ್ರಕಾರ ಗ್ರಂಥ ಸಂಪಾದನೆ ಮಾಡುವುದು ಇನ್ನೂ ಬಾಲ್ಯಾವಸ್ಥೆಯಲ್ಲಿರುವಾಗ ಇವರು ಕೆಲವು ಅಮೂಲ್ಯ ಕನ್ನಡ ಕಾವ್ಯಗಳನ್ನು ಸಂಪಾದಿಸಿಕೊಟ್ಟಿದ್ದಾರೆ. ಕನ್ನಡದ ಆದ್ಯ ಗ್ರಂಥ ಸಂಪಾದನಾಕಾರರಲ್ಲಿ ಶಾಸ್ತ್ರಿಗಳು ಸಹ ಒಬ್ಬರಾಗಿದ್ದಾರೆ.

ನೇಮಿಜಿನೇಶ ಸಂಗತಿ ಗ್ರಂಥಕ್ಕೆ ಸುಮಾರು ೨೦೦ ಪುಟಗಳಷ್ಟು ಕಥಾಸಾರವನ್ನೊಳಗೊಂಡ ಮುನ್ನುಡಿಯನ್ನು ಬರೆದಿದ್ದಾರೆ. ಅಂದು ಅವರು ಕವಿಯ ಕಾಲದ ಬಗ್ಗೆ ತಳೆದ ನಿಲುವು ಇಂದಿಗೂ ಮಾನ್ಯವಾಗಿದೆ.

ಶತಕತ್ರಯ, ತ್ರೈಲೋಕ್ಯ ಚೂಡಾಮಣಿ ಸ್ತೋತ್ರ, ಯೋಗಾಮೃತಂ ಮೊದಲಾದ ಕಂದ, ವೃತ್ತಗಳಿರುವ ಗ್ರಂಥಗಳು ಜನಸಾಮಾನ್ಯರಿಗೆ ತಲುಪಬೇಕೆಂಬ ಅಪೇಕ್ಷೆಯಿಂದ, ಜನಪರ ದೃಷ್ಟಿಯಿಂದ ಅವುಗಳಿಗೆ ಉತ್ತಮ ರೀತಿಯಲ್ಲಿ ಅರ್ಥವನ್ನು ಬರೆದು ಉಪಕರಿಸಿದ್ದಾರೆ. ಶಾಸ್ತ್ರಿಗಳ ಪರಿಶ್ರಮದಿಂದ ನೇಮಿಜಿನೇಶ ಸಂಗತಿ, ನಾಗಕುಮಾರ ಚರಿತೆ, ರತ್ನಾಕರನ ಶತಕತ್ರಯಗಳು ವಿಶೇಷವಾಗಿ ಜೈನ ಸಮಾಜದಲ್ಲಿ ಪರಿಚಿತವಾದುವು. ಈ ಕಾವ್ಯಕಥೆಗಳು ಜಾನಪದ ಕಥೆಗಳ ರೀತಿಯಲ್ಲಿ ಪ್ರಸಾರವಾಗತೊಡಗಿದವು.

ಪತ್ರಿಕೆಯ ಜನಕರು

ಎ. ಶಾಂತಿರಾಜಶಾಸ್ತ್ರಿಗಳು ವಾರ್ತೆಗೆ ಮೀಸಲಾದ 'ವಿಶ್ವಬಂಧು' (೧೯೨೩) ಎಂಬ ವಾರಪತ್ರಿಕೆಯನ್ನು, 'ವಿವೇಕಾಭ್ಯುದಯ' (೧೯೩೩) ಎಂಬ ಮಾಸಪತ್ರಿಕೆಯನ್ನು ಹುಟ್ಟುಹಾಕಿದರು. ಈ ಪತ್ರಿಕೆಗಳಿಗೆ ಅವರಿಟ್ಟಿರುವ ಹೆಸರಿನಿಂದಲೇ ಅವರ ಹೃದಯ ವೈಶಾಲ್ಯವನ್ನು ಅರಿಯಬಹುದಾಗಿದೆ. ಜೈನ ಸಮಾಜದಲ್ಲಿ ತುಂಬ ಗಣ್ಯರಾಗಿದ್ದ ಸಾಹುಕಾರ್ ವರ್ಧಮಾನಯ್ಯನವರು ನಿಧನರಾದಾಗ 'ವಿಶ್ವಬಂಧು' ಒಂದು ಉತ್ತಮ ವಿಶೇಷ ಸಂಚಿಕೆಯನ್ನು ಹೊರತಂದಿದೆ. 'ವಿವೇಕಾಭ್ಯುದಯ' ಅನೇಕ ಕೈಗಳನ್ನು ದಾಟಿ ಇಂದಿಗೂ ಮೂಡಬಿದಿರೆಯಿಂದ ಪ್ರಕಟವಾಗುತ್ತಿದೆ. ಈ ಪತ್ರಿಕೆಯ ಮೊದಲ ಕಿರಣದಲ್ಲೇ ಮಹಿಳೆಯರು ಈ ಪತ್ರಿಕೆಯನ್ನು ಓದಬೇಕು, ಅಷ್ಟೇ ಅಲ್ಲದೆ ಧೈರ್ಯವಾಗಿ ಲೇಖನಗಳನ್ನು ಬರೆದು ಕಳಿಸಬೇಕು ಎಂದು ವಿಜ್ಞಾಪಿಸಿಕೊಂಡಿದ್ದಾರೆ. ಅಲ್ಲದೆ ಪ್ರತಿ ಕಿರಣದಲ್ಲೂ ಕೆಲವು ಪುಟಗಳನ್ನು ಮಹಿಳೆಯರ ಬರಹಕ್ಕಾಗಿ ಕಾಯ್ದಿರಿಸುತ್ತಾ ಬಂದರು. ಇತರರಿಗೆ ಮೇಲ್ಪಂಕ್ತಿಯಾಗಲೆಂದು ಮೊದಲ ಸಂಚಿಕೆಯಲ್ಲೇ ತಮ್ಮ ಪತ್ನಿ ಹಾಗೂ ಪುತ್ರಿಯಿಂದ ಕಿರುಲೇಖನವನ್ನು ಬರೆಯಿಸಿ ಪ್ರಕಟಿಸಿದ್ದಾರೆ.

ಉತ್ತಮ ವಾಗ್ಮಿ, ಸಂಗೀತಜ್ಞ ಇತ್ಯಾದಿ

ಶಾಸ್ತ್ರಿಗಳು ಉತ್ತಮ ವಾಗ್ಮಿಗಳು. ಅನೇಕ ಸರ್ವಧರ್ಮ ಸಮ್ಮೇಳನಗಳಲ್ಲಿ, ಪಂಚಕಲ್ಯಾಣ ಸಮಾರಂಭಗಳಲ್ಲಿ, ಸಾರ್ವಜನಿಕ ಸಭೆಗಳಲ್ಲಿ ಚಿತ್ತಾಕರ್ಷಕವಾಗಿಯೂ ವಿಚಾರ ಪ್ರಚೋದಕವಾಗಿಯೂ ಭಾಷಣ ಮಾಡುತ್ತಿದ್ದರು. ಅನೇಕ ದೃಷ್ಟಾಂತ ಹಾಗೂ ಸುಭಾಷಿತಗಳ ಮೂಲಕ ವಿಷಯಗಳನ್ನು ಸ್ಪಷ್ಟಪಡಿಸುತ್ತಿದ್ದರು.

ಅನೇಕ ಭಾಷಣಕಾರರು ಉಪದೇಶಕರು ತಯಾರಾಗಿ ಜನರಿಗೆ ಮಾರ್ಗದರ್ಶನ ಮಾಡಬೇಕೆಂದು ಅವರು ಅಪೇಕ್ಷಿಸಿದ್ದರು. ಇಂಥವರಿಗೆ ಅನುಕೂಲವಾಗುವಂತೆ 'ಸಮ್ಯಕ್ತ್ವಕೌಮುದಿ'ಯನ್ನು ಸಿದ್ಧಪಡಿಸಿದ್ದರು. ಅವರು ಒಂದು ಭಾಷಣದಲ್ಲಿ ಬಳಸಿರುವ ದೃಷ್ಟಾಂತವೊಂದನ್ನು ಉದಾಹರಣಾರ್ಥವಾಗಿ ನೋಡಿ—

"ಒಂದು ಗಂಡು ಮಗುವು ಸ್ತನ್ಯಪಾನವನ್ನು ಮಾಡುವಾಗ ತಾಯಿಯ ಮತ್ತೊಂದು ಸ್ತನವನ್ನು ಮರ್ಧಿಸುವುದು. ಅದು ಪಾಪಿಯೆನ್ನುವಿರೋ ?

ಅದೇ ಮಗುವು ತನ್ನ ಹದಿನೆಂಟನೆಯ ವರ್ಷ ವಯಸ್ಸಿನಲ್ಲಿ ಯೌವನ ಮದೋನ್ಮತ್ತನಾಗಿ ತನ್ನ ತಾಯಿಯ ಸ್ತನವನ್ನು ಮರ್ಧಿಸಿದರೆ ಆಗ ನೀವುಗಳೇ ನೆನ್ನುವಿರಿ ? ಅವನು ಮಹಾಪಾಪಿಯೆನ್ನುವಿರಲ್ಲವೆ ? ಅದೇಕೆ ?

ಶೈಶವಾವಸ್ಥೆಯಲ್ಲಿ ದುಷ್ಟಭಾವನೆಯಿರಲಿಲ್ಲವೆಂದು ಯೌವನಾವಸ್ಥೆಯಲ್ಲಿ ಭಾವನೆಯು ಕೆಟ್ಟುದಾಗಿದ್ದಿತೆಂದೂ ಹೇಳುವಿರಲ್ಲವೆ ? ಈ ಉದಾಹರಣೆಯಿಂದಲೂ ನಮ್ಮಗಳಿಗೆ ದ್ರವ್ಯಹಿಂಸೆಗಿಂತಲೂ ಭಾವಹಿಂಸೆಯು ಕೆಟ್ಟುದೆಂದು ಸ್ಪಷ್ಟವಾಗುವುದು."

ಶಾಸ್ತ್ರಿಗಳು ಸಂಗೀತಜ್ಞರಾಗಿದ್ದರು. ಶ್ರುತ ಪಂಚಮಿಯ ದಿನ ವೀಣೆ ಸುಬ್ಬಣ್ಣ ಮೊದಲಾದ ಮಿತ್ರರಿಂದ ಸಂಗೀತಗೋಷ್ಠಿಗಳನ್ನು ಏರ್ಪಡಿಸುತ್ತಿದ್ದರು. ಅಲ್ಲದೆ 'ಜಿನಭಜನಸಾರ'ದ ಅನೇಕ ಗೀತೆಗಳಿಗೆ ಸ್ವರ ಪ್ರಸ್ತಾರ ಹಾಕಿ ಮುದ್ರಿಸಿದ್ದಾರೆ.

ಶಾಂತಿರಾಜಶಾಸ್ತ್ರಿಗಳಿಗೆ ಅಂದಿನ ಸುಪ್ರಸಿದ್ಧ ಕನ್ನಡ ಸಾಹಿತಿಗಳಾಗಿದ್ದ ಟಿ.ಎಸ್. ವೆಂಕಣ್ಣಯ್ಯ, ಬಿ. ಎಂ. ಶ್ರೀಕಂಠಯ್ಯ ಮೊದಲಾದವರ ಪರಿಚಯವಿತ್ತು. ಅವರ ಪ್ರಭಾವವೂ ಶಾಸ್ತ್ರಿಗಳ ಮೇಲೆ ಸ್ವಲ್ಪಮಟ್ಟಿಗೆ ಆಗಿದ್ದರೆ ಆಶ್ಚರ್ಯವಿಲ್ಲ. ತಮ್ಮ ಪತ್ರಿಕೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳಿಗೆ ಪ್ರಚಾರ ನೀಡುತ್ತಿದ್ದರು.

ಶಾಸ್ತ್ರಿಗಳ ದೃಷ್ಟಿ ಮತ್ತು ಸೃಷ್ಟಿ

ಉತ್ತಮ ಭಾಷಣಗಳು ವ್ಯರ್ಥವಾಗಬಾರದು, ಬಹುಕಾಲದವರೆಗೆ ಬಹು ಜನರಿಗೆ ಐತಿಹಾಸಿಕ ದಾಖಲೆಯಂತೆ ಮುಟ್ಟಬೇಕು ಎಂಬ ದೃಷ್ಟಿಯಿಂದ ಸ್ವಸ್ತಿಶ್ರೀ ನೇಮಿಸಾಗರ ವರ್ಣಿಗಳ ಹಾಗೂ ಆಚಾರ್ಯ ಶಾಂತಿಸಾಗರ ಮುನಿಗಳ ಉಪದೇಶಗಳನ್ನು ಲಿಪಿಬದ್ಧಗೊಳಿಸಿದ್ದಾರೆ. ತಮ್ಮ ಕೆಲವು ಭಾಷಣಗಳನ್ನು ಸಹ ಬರಹಕ್ಕಿಳಿಸಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ.

ಶಾಸ್ತ್ರಿಗಳು ಧರ್ಮ–ಸಾಹಿತ್ಯದ ತತ್ಕಾಲೀನ ಅಗತ್ಯಗಳನ್ನು ಹಾಗೂ ದೂರದ ಅಗತ್ಯವನ್ನು ಗಮನಿಸಿ ಗ್ರಂಥರಚನೆ ಮಾಡಿದ್ದಾರೆ. ಅವರು ಸಂಶೋಧಕರನ್ನು ಸಹ ತಮ್ಮ ದೃಷ್ಟಿಯಲ್ಲಿಟ್ಟುಕೊಂಡಿದ್ದಂತೆ ಕಂಡು ಬರುವುದು.

ತೀರ್ಥಂಕರರ ವಾಣಿಯನ್ನು ಹಿಂದೆ ಬರೆದಿಡುವ ಪದ್ಧತಿಯಿರಲಿಲ್ಲ. ಅಂದು ಅದು ಶಕ್ಯವೂ ಇರಲಿಲ್ಲ. ಕಾಲದೋಷದಿಂದ ಬರಬರುತ್ತ ಮುನಿ ಜನರ ಧಾರಣ ಶಕ್ತಿಯು ಕುಂಟಿತವಾಗುತ್ತಾ ಬಂದು ಶ್ರುತಜ್ಞಾನ ಸಂಕ್ಷೇಪವಾಗತೊಡಗಿತು. ಇದನ್ನು ಕಂಡ ಮುನೀಶ್ವರರು ತಮಗೆ ತಿಳಿದ ಶ್ರುತಜ್ಞಾನವನ್ನು ಲಿಪಿಬದ್ಧಗೊಳಿಸಿ, ಅದನ್ನು ಜೇಷ್ಠ ಶುದ್ಧ ಪಂಚಮಿಯ ದಿವಸ ಸಂಘವನ್ನು ಸೇರಿಸಿ ಪೂಜಿಸಿದರು. ಅಂದಿನಿಂದ ಆ ದಿನ ಶ್ರುತ ಪಂಚಮಿಯೆಂಬ ಪವಿತ್ರ ಪರ್ವ ತಿಥಿಯಾಗಿ ಪರಿಗಣಿಸಲ್ಪಟ್ಟಿತು. ಈ ಶ್ರುತಪಂಚಮಿ ಶಾಸ್ತ್ರಿಗಳಿಗೆ ತುಂಬ ಪ್ರಿಯವಾದ ಪರ್ವ. ಈ ದಿನಗಳಲ್ಲಿ ಸಂಗೀತ ಗೋಷ್ಠಿಗಳನ್ನು ಸಭೆಗಳನ್ನು ಏರ್ಪಡಿಸುತ್ತಿದ್ದರು. ಇಂಥದೊಂದು ಶ್ರುತಪಂಚಮಿಯಂದೇ ತಮ್ಮ "ವಿವೇಕಾಭ್ಯುದಯ" ಪತ್ರಿಕೆಯನ್ನು ಪ್ರಾರಂಭಿಸಿದರು. ಶ್ರುತಜ್ಞಾನದ ಆರಾಧಕರಾದ ಶಾಸ್ತ್ರಿಗಳು, "ಗ್ರಂಥ ರಕ್ಷಣೆ ಧರ್ಮರಕ್ಷಣೆಗೆ ಶ್ವಾಸಕೋಶ"–ಎಂದು ನಂಬಿದ್ದರು. ಈ ನಂಬಿಕೆಯಿಂದಲೇ ಅವರು ಸಾಹಿತ್ಯ ಸೇವೆಯನ್ನು ಧರ್ಮಸೇವೆಯನ್ನು ತಮ್ಮ ಕೊನೆ ಉಸಿರಿನವರೆಗೂ ಮಾಡುತ್ತಾ ಬಂದರು.

ಸಾಹಿತಿ–ಕಲಾವಿದರಿಗೆ, ವಿಜ್ಞಾನಿಗಳಿಗೆ ತಮ್ಮ ತಮ್ಮ ಕ್ಷೇತ್ರದಲ್ಲಿ ಮುನ್ನಡೆಯಲು ಸಜ್ಜನರಾದ ಪೋಷಕರ ಅಗತ್ಯವುಂಟು. ಈ ದೃಷ್ಟಿಯಿಂದ ಶಾಸ್ತ್ರಿಗಳು ಪುಣ್ಯವಂತರು. ಸ್ವಸ್ತಿಶ್ರೀ ನೇಮಿಸಾಗರ ವರ್ಣಿಯವರು, ಮೈಸೂರಿನ ಸಾಹುಕಾರ ವರ್ಧಮಾನಯ್ಯನವರು, ಮೈನಾಡಿನ ಕೃಷ್ಣೇಗೌಡರು, ಧರ್ಮಸ್ಥಳದ ಮಂಜಯ್ಯ ಹೆಗ್ಗಡೆಯವರು ಹಾಗೂ ಇತರರು ಶಾಸ್ತ್ರಿಗಳ ಸಾಹಿತ್ಯಿಕ

ಧಾರ್ಮಿಕ ಚಟುವಟಿಕೆಗೆ ಒತ್ತಾಸೆಯಾಗಿ ನಿಂತರು. ಇಂಥ ಪೋಷಕರಿಂದಲೇ ಶಾಸ್ತ್ರಿಗಳ ಗ್ರಂಥ ರಚನಾ ಪ್ರತಿಭೆ ಪೂರ್ಣವಾಗಿ ವಿಕಸಿತವಾಗಲು ಸಾಧ್ಯವಾಯಿತು.

ಎ. ಶಾಂತಿರಾಜ ಶಾಸ್ತ್ರಿಗಳು ನೂರಕ್ಕೆ ನೂರರಷ್ಟು ಧಾರ್ಮಿಕರು. ಧರ್ಮದ ಮಾಧ್ಯಮದಲ್ಲೇ ಕನ್ನಡ ಸರಸ್ವತಿಯ ಆರಾಧನೆ ಮಾಡಿದ್ದಾರೆ. ಅವರು ತಮ್ಮ ಪ್ರತಿಯೊಂದು ಕಾರ್ಯದಲ್ಲೂ ಪಂಡಿತ ಪಾಮರರನ್ನು ದೃಷ್ಟಿಯಲ್ಲಿಟ್ಟುಕೊಂಡಿದ್ದರು. ಕನ್ನಡ ಸಾರಸ್ವತ ಲೋಕ ಹಾಗೂ ಕನ್ನಡ ಜೈನ ಸಮಾಜ ಅನೇಕ ದೃಷ್ಟಿಗಳಿಂದ ಅವರಿಗೆ ಋಣಿಯಾಗಿದೆ. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅವರಿಗೊಂದು ವಿಶಿಷ್ಟ ಸ್ಥಾನವಿದೆ. ●

ವ್ಯಕ್ತಿ ಚಿತ್ರ

ಶ್ರೀ ಶಾಂತಿರಾಜ ಶಾಸ್ತ್ರಿಯವರು ಹಳೆಯ ಸಂಪ್ರದಾಯಗಳನ್ನೆಲ್ಲ ವೇದವಾಕ್ಯವೆಂದು ಹಿಂದು ಮುಂದು ನೋಡದೆ ತವಕಗೊಂಡು ಇತರರಿಗೆ ಬೋಧಿಸತಕ್ಕವರಲ್ಲ. ಸಾಹಿತ್ಯ ಮೊದಲಾದಶಾಸ್ತ್ರಗಳು ಆತ್ಮನ, ದೇವರ, ತತ್ತ್ವಗಳ ಮತ್ತು ಧರ್ಮ ಶಾಸ್ತ್ರದ ಅಧೀನ ಇರಬೇಕೆಂದು ತಿಳಿಯುವವರಲ್ಲದೆ ಸಾಹಿತ್ಯಕ್ಕೆ ಧರ್ಮವು ಅಧೀನವೆಂದು ತಿಳಿಯುವವರಲ್ಲ. ಆದರೂ ಲೋಕದ ಶಾಂತಿಗೆ, ಜನರ ವೃದ್ಧಿಗೆ ತೊಡಕಾಗುವ ಧರ್ಮಕ್ಕೆ ಸಹಾಯಕರು ಅವರಲ್ಲ. ತನ್ನ ಧರ್ಮದಲ್ಲಿ ನಂಬಿಕೆಯುಳ್ಳವರಾದಾಗ್ಯೂ ಅನ್ಯಧರ್ಮ ತತ್ತ್ವಗಳನ್ನು ದ್ವೇಷಿಸತಕ್ಕ ಸ್ವಭಾವವು ಅವರಲ್ಲಿಲ್ಲ. ಅನ್ಯೋನ್ಯ ಮೈತ್ರಿಯು ಬೇರೆ ಧರ್ಮದವರಲ್ಲಿ ಬೇರೆ ನೆಲೆಗೊಳ್ಳಬೇಕೆಂಬ ಆಕಾಂಕ್ಷೆ ಅವರಲ್ಲಿದೆ. ಲೋಕದ ವಿವಿಧ ಧರ್ಮದ ಸಮಾನ ತತ್ತ್ವಗಳ ಪರಿಚಯ ಮಾಡಿಕೊಳ್ಳಲು ತುಂಬ ಸಾಹಸಪಡುವವರು ಅವರಾಗಿದ್ದಾರೆ. ವಿರೋಧಾಭಿಪ್ರಾಯವನ್ನು ಚುರುಕಾಗಿ ಖಂಡಿಸಿ ನುಡಿಯುವವರಾದಾಗ್ಯೂ ಕಾರಣದೊರೆತರೆ ಅನ್ಯಪಕ್ಷದವರ ಪ್ರೇಮವನ್ನು ಹಿತವನ್ನೂ ಬಯಸತಕ್ಕವರು. ತಾನು "ಜೈನಶಾಸ್ತ್ರಿ, ಅನ್ಯಧರ್ಮದವರೊಡನೆ ಬೆರೆತರೆ ತನ್ನಧರ್ಮಕ್ಕೆ ಹಾನಿ" ಎಂದು ಭಾವಿಸಿ "ತಮ್ಮಷ್ಟಕ್ಕೆ ತಾವೇ" ಎಂಬ ಸಂಕುಚಿತ ಭಾವನೆಯು ಇವರಿಗಿಲ್ಲ. ಎಲ್ಲ ಮತದ ಪಂಡಿತರುಗಳ ಸ್ನೇಹದಲ್ಲಿಯೂ ಸಂಘದಲ್ಲಿಯೂ ಇರಲು ತುಂಬ ಪ್ರೇಮವುಳ್ಳವರು. ಆದರೂ ಮಿತಿಮೀರಿದ ಸುಧಾರಕರಲ್ಲ. ಕಾಲಸ್ಥಿತಿಗನುಸರಿಸಿ ಸಮಾಜ ಸುಧಾರಣೆಯೆಂಬುದನ್ನೂ ಶಾಂತಿ ಸ್ಥಾಪನೆಯಿಂದಲೇ ಜನಾಂಗದ ವೃದ್ಧಿಯು ನೆಲೆಸಿರುವುದೆಂಬುದನ್ನೂ ಚೆನ್ನಾಗಿ ನಂಬತಕ್ಕವರು. ಶಾಸ್ತ್ರಿಯವರಾಗಿ ಬರೇ ಧರ್ಮಶಾಸ್ತ್ರದ ಜ್ಞಾನ ಮಾತ್ರ ಉಳ್ಳವರಲ್ಲ. ಆಧುನಿಕ ವಿಚಾರಗಳಲ್ಲಿಯೂ ತಕ್ಕ ಅನುಭವವುಳ್ಳವರು.

— ಶ್ರೀ ಡಿ. ಮಂಜಯ್ಯ ಹೆಗ್ಗಡೆ, ಎಂ. ಎಲ್. ಸಿ.
ಧರ್ಮಸ್ಥಳ
(೧೯೩೭)

ಎತ್ತೂರು ಶಾಂತಿರಾಜ ಶಾಸ್ತ್ರಿ ಅವರ ಮಹಾಪುರಾಣ

— ಪಂ. ಪ. ನಾಗರಾಜಯ್ಯ, ಮೈಸೂರು

'ಮಹಾಪುರಾಣ'ವು ಸಂಸ್ಕೃತ ಸಾಹಿತ್ಯದಲ್ಲಿ ಒಂದು ಮೇರು ಕೃತಿ. ಇದು ಈ ಉತ್ತಮೋತ್ತಮ ಸ್ಥಾನವನ್ನು ಪಡೆದಿರುವುದಾದರೂ ಸಾಹಿತ್ಯ ಚರಿತ್ರಕಾರರಲ್ಲಿ ಇದಕ್ಕೆ ಸಲ್ಲಬೇಕಾದ ಮಾನ್ಯತೆ ಸಿಕ್ಕಿಲ್ಲ ಎಂದರೆ ತಪ್ಪಾಗದು; ಕಾರಣ ಇದು ಒಂದು ಧಾರ್ಮಿಕ ಕೃತಿ ಎಂಬುದಾಗಿರ ಬಹುದೆ? ಇದರಲ್ಲಿ ಮಹಾ ಕಾವ್ಯದ ಲಕ್ಷಣಗಳೆಲ್ಲವೂ ತುಂಬಿ ತುಳುಕುತ್ತಿವೆ. ಕವಿತಾಚಾತುರ್ಯ, ಅರ್ಥ ಗಾಂಭೀರ್ಯ, ಪದಲಾಲಿತ್ಯ ರಸಾಲಂಕಾರ ಸೌಷ್ಠವ ಮೊದಲಾದ ಕಾವ್ಯಗುಣಗಳಿಂದ ಜೈನ ಪುರಾಣ ಗ್ರಂಥ ಗಳಲ್ಲಿ ಇದು ಅದ್ವಿತೀಯವಾದುದು. ನೀತಿಬೋಧೆ, ವೈರಾಗ್ಯ, ತತ್ತ್ವವಿಚಾರ, ಸಂಸಾರ ಸ್ವರೂಪ ಮೊದ ಲಾದ ವಿಷಯಗಳು ಬಹಳ ಚೆನ್ನಾಗಿ ನಿರೂಪಿಸಲ್ಪಟ್ಟಿವೆ.

"ಜೈನ ಪುರಾಣಗಳಲ್ಲೆಲ್ಲ 'ಮಹಾಪುರಾಣ'ವು ದೊಡ್ಡದಾದ ಗ್ರಂಥವಾಗಿಯೂ ಜೈನರಿಗೆ ಬಹಳ ಆದರಣೀಯವಾಗಿಯೂ ಇರುತ್ತದೆ. ಇದು ಕಾವ್ಯಕ್ಕೆ ಕಾವ್ಯ, ಪುರಾಣಕ್ಕೆ ಪುರಾಣ. ಇದರ ಉದ್ದಕ್ಕೂ ಧರ್ಮ ಪ್ರಧಾನವಾಗಿದ್ದು, ಕಾವ್ಯ ಆನುವಂಶಿಕವಾಗಿ ಬರುತ್ತದೆ ಯಾದರೂ ಅಲ್ಲಲ್ಲಿ ಕಾವ್ಯ ಪ್ರಮುಖವಾಗಿ ಧರ್ಮಗೌಣ ವಾದ ರಸಾರ್ದ್ರ ಭಾಗಗಳೂ ಇವೆ. ಒಂದರ್ಥದಲ್ಲಿ ಮಹಾಭಾರತಕ್ಕೆ ಹೊಯ್‌ಕಯ್ ಆಗಿ ಹತ್ತಿರ ಬರುವ ಕೃತಿ ಈ "ಮಹಾಪುರಾಣ". ಈ ಗ್ರಂಥವನ್ನು ಕುರಿತು ಒಬ್ಬ ಕವಿಯು, 'ಯದಿ ಸಕಲ ಕವೀಂದ್ರಪ್ರೋಕ್ತ ಸೂಕ್ತ ಪ್ರಚಾರ ಶ್ರವಣ ಸರಸಚೇತಾಸ್ತ್ವ ಮೇವಂ ಸಖೇಸ್ಯಾಃ। ಕವಿವರ ಜಿನಸೇನಾಚಾರ್ಯವಕ್ತ್ರಾರ ವಿಂದ ಪ್ರಣಗದಿತ ಪುರಾಣಾಕರ್ಣನಾಭ್ಯರ್ಣ ಕರ್ಣಃ'— 'ಎಲೈ ಮಿತ್ರನೆ, ನೀನು ಎಲ್ಲಾ ಕವಿಶ್ರೇಷ್ಠರು ಹೇಳಿದ ಸುವಚನಗಳನ್ನೂ ಕೇಳಿ ಸರಸ ಹೃದಯವುಳ್ಳವನಾಗ ಬೇಕಾದರೆ ಕವಿಶ್ರೇಷ್ಠರಾದ ಜಿನಸೇನಾಚಾರ್ಯರ ಮುಖ ಕಮಲದಿಂದ ಹೇಳಲ್ಪಟ್ಟ ಪುರಾಣವನ್ನು ಕೇಳುವುದಕ್ಕೆ ಸಮೀಪವಾದ ಕಿವಿಗಳುಳ್ಳವನಾಗು' ಎಂದು ಹೊಗಳಿರು ತ್ತಾನೆ.

'ಇಪ್ಪತ್ತನಾಲ್ಕುಮಂದಿ ತೀರ್ಥಂಕರರೂ ಹನ್ನೆರಡು ಮಂದಿ ಚಕ್ರವರ್ತಿಗಳೂ ಒಂಭತ್ತು ಮಂದಿ ಬಲಭದ್ರರೂ ಒಂಭತ್ತು ಮಂದಿ ನಾರಾಯಣರೂ ಒಂಭತ್ತು ಮಂದಿ ಪ್ರತಿನಾರಾಯಣರೂ ಸೇರಿ ಅರವತ್ತಮೂರು ಮಂದಿ ಪ್ರಸಿದ್ಧ ಪುರುಷರ (ತ್ರಿಷಷ್ಠಿಶಲಾಕಾ ಪುರುಷರ) ಚರಿತ್ರೆ ಯನ್ನು ಪ್ರತಿಪಾದಿಸುವುದರಿಂದ ಈ ಗ್ರಂಥಕ್ಕೆ 'ಮಹಾ ಪುರಾಣ'ವೆಂದು ಹೆಸರು ಬಂದಿರುವುದು." ಈ ಮಹಾ ಪುರಾಣವನ್ನು ಋಷಿಗಳು ಹೇಳಿರುವುದರಿಂದ ಇದು ಪ್ರಮಾಣವಾಗಿಯೂ ಸತ್ಯವಾಗಿಯೂ ಇದೆ. ಆದುದರಿಂದ ಆತ್ಮ ಕಲ್ಯಾಣವನ್ನು ಇಚ್ಛಿಸುವವರು ಇದನ್ನು ನಂಬ ಬೇಕು. ಇದರಲ್ಲಿ ಪೂರ್ವಪುರಾಣವೆಂದೂ, ಉತ್ತರ ಪುರಾಣವೆಂದೂ ಎರಡು ಭಾಗಗಳಿರುತ್ತವೆ. ಪೂರ್ವ ಪುರಾಣದಲ್ಲಿ ಶ್ರೀ ವೃಷಭಸ್ವಾಮಿಯೆಂಬ ಪ್ರಥಮ ತೀರ್ಥಂಕರರ ಮತ್ತು ಭರತನೆಂಬ ಪ್ರಥಮ ಚಕ್ರವರ್ತಿಯ ಚರಿತ್ರೆಗಳು ಬಹಳ ವಿಸ್ತಾರವಾಗಿ ವರ್ಣಿಸಲ್ಪಟ್ಟಿವೆ. ಮಿಕ್ಕ ಅರವತ್ತೊಂದು ಮಂದಿ ಮಹಾಪುರುಷರ ಚರಿತ್ರೆ ಗಳು ಉತ್ತರ ಪುರಾಣದಲ್ಲಿ ವರ್ಣಿಸಲ್ಪಟ್ಟಿವೆ. ಈ ಎರಡು ಪುರಾಣಗಳಲ್ಲಿಯೂ ಇನ್ನೂ ಅನೇಕ ಮಂದಿಯ ಚರಿತ್ರೆಗಳು ವರ್ಣಿಸಲ್ಪಟ್ಟಿದ್ದರೂ ಅವರೆಲ್ಲ ಶಲಾಕಾ ಪುರುಷರ ಗಣನೆಯಲಿಲ್ಲ. ಪೂರ್ವ ಪುರಾಣದಲ್ಲಿ ಹನ್ನೆರಡು ಸಾವಿರ ಶ್ಲೋಕಗಳೂ ಉತ್ತರ ಪುರಾಣದಲ್ಲಿ ಎಂಟು ಸಾವಿರ ಶ್ಲೋಕಗಳೂ ಇರುತ್ತವೆ.

ಈ ಮಹಾಪುರಾಣದ ಕರ್ತೃ ಭಗವಜ್ಜಿನ ಸೇನಾ ಚಾರ್ಯರು ಮತ್ತು ಗುಣಭದ್ರಾಚಾರ್ಯರು. ಪೂರ್ವ ಪುರಾಣದಲ್ಲಿ ನಲವತ್ತೆರಡು ಪರ್ವ (ಹತ್ತು ಸಾವಿರದ ಮೂರು ನೂರ ಎಂಭತ್ತು ಶ್ಲೋಕ) ಗಳಲ್ಲಿ ಪೂರೈಸಿ, ಉತ್ತರ ಪುರಾಣವನ್ನು ಪೂರ್ಣವಾಗಿ ಎಪ್ಪತ್ತೇಳು ಪರ್ವ

(ಎಂಟು ಸಾವಿರ ಶ್ಲೋಕ) ಗಳಲ್ಲಿ ರಚಿಸಿದರು. ಜಿನಸೇನರ ಕಾಲ ಕ್ರಿ.ಶ.ಸು. 753-838 ಎಂದು ಹೇಳಬಹುದಾಗಿದೆ. ಉತ್ತರ ಪುರಾಣವು ಕ್ರಿ. ಶ. 898ರಲ್ಲಿ ರಚಿತವಾದುದು. ಗುರು ಶಿಷ್ಯರ ಕವಿತೆಗಳಲ್ಲಿ ಗುರುವಿನದು 'ಕಳಿತ ಹಣ್ಣಿನಂತೆಯೂ', ಶಿಷ್ಯರದು 'ದೋರೆ ಹಣ್ಣಿನಂತೆಯೂ ನಾಳಿಕೇಳ ಪಾಕದಂತೆಯೂ' ಇರುವುದೆಂದು ಹೇಳಬಹುದು.

ಮಹಾಪುರಾಣವನ್ನು ಜಿನಸೇನರೇ ಸಂಪೂರ್ಣವಾಗಿ ರಚಿಸಲು ಉದ್ದೇಶಿಸಿದ್ದರೆಂಬುದು ಅವರ 'ಪುರಾಣಂ ಸಂಗ್ರಹಿಷ್ಯಾಮಿ ತ್ರಿಷಷ್ಟಿ ಪುರುಷಾಶ್ರಿತಂ' (1-19) ಎಂಬ ಮಾತಿನಿಂದ ವ್ಯಕ್ತವಾಗುತ್ತದೆ. ಜೈನರಲ್ಲಿ ಮೊತ್ತ ಮೊದಲು ಪುರಾಣವನ್ನು ರಚಿಸಿದವರು ಜಿನಸೇನಾಚಾರ್ಯರು ಎಂಬ ಮಾತನ್ನು ದೊರಕಿರುವ ಕೃತಿ ದೃಷ್ಟಿಯಿಂದ ಹೇಳಬಹುದಾದರೂ, 'ಸಪೂಜ್ಯಃ ಕವಿಭಿರ್ಲೋಕೇ ಕವೀನಾಂ ಪರಮೇಶ್ವರಃ ವಾಗರ್ಥ ಸಂಗ್ರಹಂ ಕೃತ್ಸ್ನಂ ಪುರಾಣಂ ಯಃ ಸಮಗ್ರಹೀತ್' (1-90) 'ಯಾರು ಶಬ್ದಾರ್ಥ ಸಂಗ್ರಹವುಳ್ಳ ಚತುರ್ವಿಂಶತಿ ಪುರಾಣವನ್ನು ಸಂಕ್ಷೇಪವಾಗಿ ರಚಿಸಿದರೋ ಅಂತಹ ಕವಿ ಪರಮೇಷ್ಠಿಗಳು ಲೋಕನಲ್ಲಿ ಕವಿಗಳಿಂದ ಪೂಜಿಸಲ್ಪಡುವುದಕ್ಕೆ ಯೋಗ್ಯರು' ಎಂದು ಹೇಳಿರುವುದರಿಂದ ಇದ. ಇವರಿಗೆ ಆಕರ ಗ್ರಂಥವಾಗಿದೆ ಎಂದು ಹೇಳಬಹುದಾಗಿದೆ ಇದು ಅಲ್ಲದೆ ಕೂಚಿ ಭಟ್ಟಾರಕ ಮೊದಲಾದವರು ಆ ದಿಕ್ಕಿನಲ್ಲಿ ಪ್ರಯತ್ನಶೀಲರಾಗಿದ್ದರೆಂದು ತಿಳಿಯ ಬಹುದಾಗಿದೆ. ಇವನ್ನೂ ಈ ಗುರುಶಿಷ್ಯರು ನೋಡಿರಬಹುದು.

ಇಂತಹ ಮೇರುಕೃತಿಯನ್ನು ಕನ್ನಡಕ್ಕೆ ಮೊದಲು ಕೊಟ್ಟವರೆಂದರೆ ಶ್ರವಣಬೆಳಗೊಳದಲ್ಲಿ ಗೋಮಟೇಶ್ವರನನ್ನು ಸ್ಥಾಪಿಸಿದ ಚಾಮುಂಡರಾಯರೇ. ಅವರು 'ತ್ರಿಷಷ್ಠಿ ಲಕ್ಷಣ ಮಹಾಪುರಾಣ' ಎಂಬ ಹೆಸರಿನಿಂದ ಕನ್ನಡ ಗದ್ಯರೂಪದಲ್ಲಿ ಹತ್ತನೆಯ ಶತಮಾನದ ಉತ್ತರಾರ್ಧದಲ್ಲಿ ರಚಿಸಿದರು. ಆದರೆ, ಇವರಿಗೆ ಆಕರ ಜಿನಸೇನ-ಗುಣಭದ್ರರ ಕೃತಿಯೊಂದೇ ಎಂದು ಹೇಳಲು ಬರುವುದಿಲ್ಲ, ಬೇರೊಂದು ಆಕರವೂ ಇದ್ದಿರಬಹುದೆಂಬುದಕ್ಕೆ ಇವರ ಶಾಂತಿತೀರ್ಥಂಕರ ಪುರಾಣವೇ ಒಂದು ಉದಾಹರಣೆ. ಆದುದರಿಂದ ಜಿನಸೇನ ಗುಣಭದ್ರರ 'ಮಹಾಪುರಾಣ'ವನ್ನು ಕನ್ನಡಕ್ಕೆ ಮೊಟ್ಟಮೊದಲು ಕೊಟ್ಟವರೆಂದರೆ ಶ್ರೀ ಎರ್ತೂರ ಶಾಂತಿರಾಜ ಶಾಸ್ತ್ರಿಗಳವರೇ. ಈ ಕಾರಣದಿಂದ ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ಶ್ರೀ ಶಾಸ್ತ್ರಿಗಳದು ಒಂದು ಮರೆಯಲಾಗದ ಹೆಸರು.

ಶ್ರೀ ಶಾಂತಿರಾಜ ಶಾಸ್ತ್ರಿಗಳು ಬದುಕಿ ಬಾಳಿದ ಕಾಲ ಈ ಶತಮಾನದ ಪೂರ್ವಾರ್ಧ. ಅದು ದೇಶದ ಸ್ವಾತಂತ್ರ್ಯ ಹೋರಾಟದ, ಕರ್ನಾಟಕ ಏಕೀಕರಣದ ಚಳುವಳಿಗಳ ಕಾಲ. ಕನ್ನಡನಾಡು ನುಡಿಗಳ ಬಗ್ಗೆ ಜನ ಜಾಗೃತಿ ಮೂಡುತ್ತಿದ್ದ ಕಾಲ, ನಾಡ ಜನರಲ್ಲಿ ಕನ್ನಡ ತನವನ್ನು ಎಚ್ಚರಿಸುತ್ತಿದ್ದ ಕಾಲ. ವಿದ್ವಾಂಸರಾದವರು ತಮ್ಮ ವಿದ್ವತ್ತಿನ ಫಲವನ್ನು ನಾಡಜನರಿಗೆ-ಜನಸಾಮಾನ್ಯರಿಗೆ ಜನ ಭಾಷೆಯಲ್ಲಿ ನೀಡಬೇಕೆಂದು ಭಾವಿಸುತ್ತಿದ್ದ ಕಾಲ. ಆಚಾರ್ಯ ಬಿ. ಎಂ. ಶ್ರೀ ಮೊದಲಾದವರು ಕರ್ನಾಟಕವನ್ನೆಲ್ಲಾ ಸಂಚರಿಸಿ ಕನ್ನಡ ನುಡಿ ತಲೆಯೆತ್ತುವ ಬಗೆಯನ್ನು ತಿಳಿಸುತ್ತಾ ಕನ್ನಡಿಗರಿಗೆ ಒಳ್ಳೆ ಸಾಹಿತ್ಯವನ್ನು ಕೊಡುತ್ತಿದ್ದ ಕಾಲ. ಕನ್ನಡವನ್ನುದ್ಧರಿಸಿದ ಮಹಾಪುರುಷರ ಕಾಲ. ಅರಮನೆಯ ಸರಸ್ವತಿ ಭಂಡಾರದಿಂದ ಅಷ್ಟಾದಶ ಪುರಾಣಗಳೇ ಮೊದಲಾದವು ಹೊಸಗನ್ನಡ ಗದ್ಯಾನುವಾದದೊಂದಿಗೆ ಪ್ರಕಟಣೆಗೆ ಸಿದ್ಧವಾಗುತ್ತಿದ್ದ ಕಾಲ. ಈ ಹೊತ್ತಿಗಾಗಲೇ ಮುಮ್ಮಡಿ ಕೃಷ್ಣರಾಜರ 'ವಾಣೀವಿಲಾಸ ಭಾರತ', ದೇವಶಿಖಾಮಣಿ ಅಳಸಿಂಗಾಚಾರ್ಯರ 'ರಾಮಾಯಣ, ಭಾರತ, ಭಾಗವತ'ಗಳು ಮುಳಿಯ ತಿಮ್ಮಪ್ಪಯ್ಯನವರ, 'ಆದಿ ಪುರಾಣದ ಕಥೆ,' ಕನ್ನಡ ಸಾಹಿತ್ಯ ಪರಿಷತ್ತಿನಿಂದ 'ಪಂಪ ಭಾರತದ ಕಥೆ,' 'ಪಂಪ ರಾಮಾಯಣದ ಕಥೆ' ಮುಂತಾಗಿ ಹಲವು ಕೃತಿಗಳು ಸಂಸ್ಕೃತ ಹಳಗನ್ನಡಗಳು ಬಾರದ ಜನರಿಗಾಗಿ ಹೊಸಗನ್ನಡ ಗದ್ಯದಲ್ಲಿ ಪ್ರಕಟವಾಗಿದ್ದವು. ಇಂತಹ ಕಾಲದಲ್ಲಿದ್ದ ಶ್ರೀ ಶಾಸ್ತ್ರಿಗಳವರು ರೂಢಿಯಾಗಿದ್ದ ಸಂಸ್ಕೃತ ವಿದ್ವಾಂಸರ ಮಡಿವಂತಿಕೆಯನ್ನು ಮರೆತು ಕನ್ನಡ ನುಡಿಯತ್ತ ತಿರುಗಿದುದು ಒಂದು ಅಪೂರ್ವ ಘಟನೆ. ಅವರ ಕಾಲಧರ್ಮ ಪ್ರಜ್ಞೆಗೆ ಇದೊಂದು ಶ್ರೇಷ್ಠ ನಿದರ್ಶನ. ಶಾಸ್ತ್ರಿಗಳ ಕೃತಿಗಳಲ್ಲಿ ಹೆಚ್ಚಿನವು ಹೊಸಗನ್ನಡ ಗದ್ಯಾನುವಾದಗಳೊಂದಿಗೆ ಪ್ರಕಟವಾಗಿರುವುವು. ಉದಾ: ಅನ್ಯಯೋಗ ವ್ಯವಚ್ಛೇದಿಕಾ, ದಶಲಕ್ಷಣಧರ್ಮ, ದಶಭಕ್ತಿ, ದ್ರವ್ಯಸಂಗ್ರಹ, ಪೂಜಾಸಾರಸಮುಚ್ಚಯ, ರತ್ನಕರಂಡಕ ಶ್ರಾವಕಾಚಾರ, ಶತಕತ್ರಯ ಮುಂತಾದವು.

ಈ ಎಲ್ಲ ಕೃತಿಗಳಿಗೆ ಕಿರೀಟಪ್ರಾಯವಾಗಿ ಪ್ರಕಟವಾದುದು ಅವರ 'ಮಹಾಪುರಾಣ'

ಇಪ್ಪತ್ತು ಸಾವಿರ ಶ್ಲೋಕಗಳುಳ್ಳ ಈ ಮೇರು ಕೃತಿಯನ್ನು 'ಕರ್ನಾಟಕ ಭಾವ ದೀಪಿಕಾ' ಎಂಬ ಹೆಸರಿನಿಂದ ಹೊಸಗನ್ನಡದಲ್ಲಿ ಭಾವಾರ್ಥವನ್ನು ಬರೆದು ಕನ್ನಡ ಜನತೆಗೆ ಮಹೋಪಕಾರವನ್ನು ಮಾಡಿರುತ್ತಾರೆ. ಜೈನರ ಪುರಾಣಗಳಲ್ಲೆಲ್ಲ 'ಮಹಾಪುರಾಣ'ವು ದೊಡ್ಡದಾದ ಗ್ರಂಥವಾಗಿಯೂ ಜೈನರಿಗೆ ಬಹಳ ಆದರಣೀಯವಾಗಿಯೂ ಇರುತ್ತದೆ. ಈ ಗ್ರಂಥವು ಸಂಸ್ಕೃತ ಭಾಷೆಯಲ್ಲಿರುವುದರಿಂದ ಸಂಸ್ಕೃತ ಪರಿಜ್ಞಾನವಿಲ್ಲದವರು ಈ ಗ್ರಂಥದ ಅತುಲ ಫಲವನ್ನು ಸ್ವಯಂಪರೀಕ್ಷಿಸಿ ಹೊಂದಲಾರದ ಜನರನ್ನು ಕಂಡು ಕನಿಕರಿಸಿ, ಇಂತಹ ಮಹೋಪಕಾರವನ್ನು ಮಾಡಿರುತ್ತಾರೆ. ಸರಳ ಹೊಸಗನ್ನಡದಲ್ಲಿ ಇದು ಬಂದುದರಿಂದ ಓದಬಲ್ಲ ಪ್ರತಿಯೊಬ್ಬರೂ ಓದಿ ಕೃತಾರ್ಥರಾಗ ಬಹುದಾಗಿದೆ. ಶ್ರೀ ಶಾಸ್ತ್ರಿಗಳ ಉದಾತ್ತ ಭಾವನೆಯ ಈ ಉಪಕಾರವನ್ನು ಕನ್ನಡತನದ ಯಾವ ಮಾನದಂಡದಿಂದ ತಾನೇ ಅಳೆದು ಬೆಲೆ ಕಟ್ಟಲಾದೀತು ? ಇಂತಹ ಧರ್ಮಗ್ರಂಥಗಳ ರಕ್ಷಣೆಯ ಬಗೆಗೂ ಶ್ರೀ ಶಾಸ್ತ್ರಿಗಳಿಗಿದ್ದ ಕಳಕಳಿ ಇದು–"ಆವುದೊಂದು ಸಮಾಜದ ಅಸ್ತಿತ್ವವು ಜಗತ್ತಿನಲ್ಲಿ ಚಿರಕಾಲವಿರಬೇಕಾದರೆ, ಅದರ ಅಖಂಡವಾದ ಸಾಹಿತ್ಯವು ಅವಿಚ್ಛಿನ್ನವಾಗಿರಬೇಕು. ಧರ್ಮಾವಲಂಬಿಗಳು ನಾಶವಾದರೂ ಧರ್ಮಬೋಧಕವಾದ ಸಾಹಿತ್ಯವು ನಿರಪಾಯವಾಗಿದ್ದರೆ, ಅದರ ಮಹಿಮೆಯಿಂದ ಮುಂದೆ ಮುಂದೆ ಹೊಸ ಹೊಸದಾಗಿ ಧರ್ಮಾವಲಂಬಿಗಳುಂಟಾಗಬಹುದು......ತನ್ನ ಧರ್ಮವು ಭೂಮಂಡಲದಲ್ಲಿ, ಅಜರಾಮರವಾಗಿರಬೇಕೆಂದು ಬಯಸುವ ಪ್ರತಿಯೊರ್ವ ಧರ್ಮಾಭಿಮಾನಿಯೂ ತನ್ನ ಧರ್ಮಸ್ಥಿರತೆಗೆ ಮೂಲ ಕಾರಣವಾದ ಸಾಹಿತ್ಯವು-ಗ್ರಂಥರಾಶಿಯು ಲೋಪವಾಗದಂತೆ ನೋಡಿಕೊಳ್ಳುವುದು ತನ್ನ ಆದ್ಯ ಕರ್ತವ್ಯವೆಂದು ಭಾವಿಸಬೇಕು" ಈ ಭಾವನೆಯನ್ನು ಪರಿಭಾವಿಸಿದಷ್ಟೂ ಅದರ ಬಗೆಗೆ ಎಂತಹ ಗೌರವ ಮೂಡುತ್ತದೆ!

ಕೃತಿಯ ಪ್ರಾರಂಭದಲ್ಲಿ 'ಶ್ರೀ ವೃಷಭಜಿನನಂಘ್ರಿಯ ಭಾವಿಸಿ ನಮಿಸೀಗ ಮುಂದದೆ ಪೊಸಗನ್ನಡದೊಳ್, ಪಾವನ ಪೂರ್ವ ಪುರಾಣದ ಭಾವಮನರಿವುವೆನು ವಿಪುಲ ಭಕ್ತಿಯ ಭರದಿಂ' ಎಂದು ವಿನೀತರಾಗಿ ವಿನಮ್ರರಾಗಿ ಪ್ರತಿಜ್ಞೆ ಮಾಡಿರುತ್ತಾರೆ. ಇಲ್ಲಿ 'ಪೂರ್ವ ಪುರಾಣದ' ಎಂದು ಮಾತಿದ್ದರೂ ಉತ್ತರ ಪುರಾಣದ ಪ್ರಾರಂಭದಲ್ಲಿ ಬೇರೆ ಪ್ರತಿಜ್ಞಾ ವಚನವಿಲ್ಲದುದರಿಂದ ಇದೇ ಇಡೀ ಕೃತಿಗೆ ಅನ್ವಯಿಸುವುದೆಂದು ಭಾವಿಸಬಹುದಾಗಿದೆ. ಜಿನಸೇನರ ಪ್ರಾರ್ಥನಾ ಪದ್ಯ 'ಶ್ರೀಮತೇ ಸಕಲಜ್ಞಾನ ಸಾಮ್ರಾಜ್ಯ ಪದಮೀಯುಷೇ ಧರ್ಮಚಕ್ರಭೃತೇ ಭರ್ತ್ರೇ ನಮಃ ಸಂಸಾರ ಭೀಮುಷೇ' ಎಂಬುದಕ್ಕೆ ಇಷ್ಟದೇವತೆಯ ವಿಶಿಷ್ಟನಾಮ ನಿರ್ದೇಶವನ್ನು ಮಾಡದೆ ಅನೇಕಾರ್ಥ ದ್ಯೋತಕಗಳಾದ ಪದಗಳನ್ನು ಸಂಯೋಜಿಸಿ ಮಂಗಲವನ್ನು ಮಾಡಿರುವುದರಿಂದ ಈ ಪದಗಳಿಂದ ಸೂಚಿತರಾಗುವ ಎಲ್ಲಾ ಇಷ್ಟ ದೇವತೆಗಳಿಗೆ ನಮಸ್ಕಾರವನ್ನು ಮಾಡುವುದು ಗ್ರಂಥಕರ್ತರ ಉದ್ದೇಶವಾಗಿರುವುದೆಂದು ಭಾವಿಸಿ ವೃಷಭಸ್ವಾಮಿಗೆ, ತೀರ್ಥಂಕರ ಕೇವಲಿಗಳಿಗೆ, ಪಂಚ ಪರಮೇಷ್ಠಿಗಳಿಗೆ, ಭರತೇಶ್ವರನಿಗೆ, ಬಾಹುಬಲಿ ಸ್ವಾಮಿಗೆ, ವೃಷಭಸೇನ ಗಣಧರನಿಗೆ ಎಂದು ಆರು ಬಗೆಯಾಗಿ ಅರ್ಥೈಸಿರುವುದನ್ನು ಕಂಡಾಗ ಶ್ರೀ ಶಾಸ್ತ್ರಿಗಳ ಪಾಂಡಿತ್ಯಕ್ಕೆ ಬೆರಗಾಗುತ್ತೇವೆ ! 'ಧರ್ಮಚಕ್ರಭೃತೇ' ಎಂಬ ಪದದಿಂದ ಚಕ್ರವರ್ತಿಗಳೂ 'ಸಂಸಾರಭೀಮುಷೇ' ಎಂಬ ಪದದಿಂದ ಸಮಸ್ತ ಬಲದೇವರುಗಳಿಗೂ ನಮಸ್ಕಾರ ಸಲ್ಲುತ್ತಿದೆಯಂತೆ !! ಈ ಪದ್ಯದಿಂದ ತ್ರಿಷಷ್ಠಿ ಶಲಾಕಾ ಪುರುಷರ ಕಥಾ ಸೂಚನೆಯೂ ಆಗುತ್ತದೆಯಂತೆ !!

ಸಂಸ್ಕೃತವನ್ನು ಕಲಿತವರು ಕನ್ನಡದಲ್ಲಿ ಬರೆಯುವುದೆಂದರೆ ಅದು ಕನ್ನಡ ಭಾಷಾ ಶೈಲಿಯ ಕೊಲೆ. ಆದರೆ ಶಾಸ್ತ್ರಿಗಳ ಕನ್ನಡ ಶೈಲಿ ಹಾಗಿರದೆ, ಸಂಸ್ಕೃತವನ್ನು ಆಧಾರವಾಗಿಟ್ಟುಕೊಂಡು ಬರೆಯುತ್ತಿರುವರೆಂದೂ ಅನ್ನಿಸದೆ ಸರಾಗವಾಗಿ ಓದಿಸಿಕೊಂಡು ಹೋಗುವ ಸರಳ ಶುದ್ಧ ಶೈಲಿಯ 'ಭಾವಾರ್ಥ'ವಾಗಿದೆ. ಮೂಲದ ಅರ್ಥವಾಗದ ಶಬ್ದಗಳನ್ನು ಕೈಬಿಟ್ಟು ಬರೆಯುವವರಿಗೆ ಒಂದು ಸುಲಭದದಾರಿ. ಶಾಸ್ತ್ರಿಗಳ ವಿದ್ವತ್ತು ಹಾಗೆ ವಿದ್ವತ್ಪ್ರಪಂಚಕ್ಕೆ–ಮೋಸ ಮಾಡುವಂತಹುದಲ್ಲ. ಹೀಗಾಗಿ ಮಹಾಪುರಾಣದ ಯಾವುದೊಂದು ಶಬ್ದಾರ್ಥವನ್ನೂ ಬಿಡದೆ ಸುಂದರವಾಗಿ ಭಾವಾರ್ಥವನ್ನು ಬರೆದಿರುತ್ತಾರೆ. ಉದಾ:

1. "ಕವಿ ಪ್ರಮಾದಜಾನ್ ದೋಷಾನಾಪಸ್ಯಾಸ್ಮಾತ್ಕಥಮೃತಾತ್। ಸಂತೋಗುಣಾನ್ ಜಿಘೃಕ್ಷಂತು ಗುಣಗೃಹ್ಯಾ ಹಿ ಸಜ್ಜನಾಃ" ಸತ್ಪುರುಷರು ಕವಿಯ ಪ್ರಮೋದದಿಂದುಂಟಾದ ದೋಷಗಳನ್ನೂ ಬಿಟ್ಟು ಈ

ಕಥೆಯೆಂಬ ಅಮೃತದಿಂದ ಗುಣಗಳನ್ನು ಗ್ರಹಣ ಮಾಡಲಿಚ್ಛಿಸಲಿ. ಸಜ್ಜನರು ಗುಣಗ್ರಾಹಿಗಳಲ್ಲವೆ ? (1-37)

2. "ಸುಭಾಷಿತ ಮಹಾರತ್ನ ಸಂಭೃತೇಸ್ಮಿನ್ಕಥಾಂಬುಧೌ, ದೋಷಗ್ರಹಾನನಾದೃತ್ಯ ಯತಧ್ವಂ ಸಾರ ಸಂಗ್ರಹೇ" – ಸುಭಾಷಿತಗಳೆಂಬ ಮಹಾರತ್ನಗಳಿಂದ ತುಂಬಿದ ಈ ಕಥೆಯೆಂಬ ಸಮುದ್ರದಲ್ಲಿ ದೋಷಗಳೆಂಬ ಕ್ರೂರ ಜಲಜಂತುಗಳನ್ನು ದೂರಮಾಡಿ ಸಾರವನ್ನು ಸಂಗ್ರಹ ಮಾಡುವುದರಲ್ಲಿ ಯತ್ನಿಸಿರಿ. (1–38)

3. "ಕಿಂಚಿದ್ಧಿತಂ ಪ್ರಿಯಂ ಚೋಕ್ತಂ ಕಿಂಚಿಚ್ಚ ಹಿತಮಪ್ರಿಯಂ ; ಕಿಂಚಿತ್ಪ್ರಿಯಂ ಸದಹಿತಂಪರಂ ಚಾಹಿತಮಪ್ರಿಯಂ" ಕೆಲವು ಮಾತು ಹಿತವೂ ಅಪ್ರಿಯವೂ ಆಗಿರುವುದು ; ಇನ್ನು ಕೆಲವು ಮಾತು ಪ್ರಿಯವಾಗಿದ್ದು ಅಹಿತವಾಗಿರುವುದು. ಮತ್ತು ಕೆಲವು ಮಾತು ಅಹಿತವೂ ಅಪ್ರಿಯವು ಆಗಿರುವುದು. (48–110)

ಮೂಲದೊಂದಿಗೆ ಭಾವಾರ್ಥವನ್ನು ನೋಡಿದ್ದಾಗಿದೆ. ಈ ಕೆಲವು ಭಾವಾರ್ಥಗಳಷ್ಟನ್ನೇ ನೋಡೋಣ.

1. ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಮಿತ್ರನಂತೆ ಹಿತವನ್ನು ಮಾಡುವ ಬಂಧುವು ಬೇರೆ ಯಾರೂ ಇಲ್ಲ. ಗುರುವಿಗೂ ಹೇಳತಕ್ಕುದಲ್ಲದ ಗುಟ್ಟಿಗಿಂತಲೂ ಹೆಚ್ಚು ಗುಟ್ಟಾದ ವಿಷಯವು ಮಿತ್ರನಿಗೆ ಹೇಳಲ್ಪಡುವುದು. ಪ್ರಾಣಗಳನ್ನೂ ಪರಿಗಣಿಸದೆ ಕಷ್ಟಸಾಧ್ಯವಾದ ಕಾರ್ಯಗಳನ್ನು ಮಿತ್ರರು ಸಾಧಿಸುತ್ತಾರೆ. ಈ ವಿಷಯದಲ್ಲಿ ಮಣಿಕೇತು ದೇವನ ಸ್ಫುಟವಾದ ದೃಷ್ಟಾಂತ. ಆದುದರಿಂದ ಇಂತಹ ಮಿತ್ರನನ್ನು ದೊರಕಿಸಬೇಕು. (48–142)

2. ಮತ್ತೊಂದು ಕಾಲದಲ್ಲಿ ಇದೇ ನಗರದಲ್ಲಿ ಮಹಾವೀರಸ್ವಾಮಿಯು ಆಹಾರದ ನಿಮಿತ್ತದಿಂದ ಪ್ರವೇಶಿಸಿದನು. ಅವನನ್ನು ಈ ಚಂದನೆಯು ಭಕ್ತಿಯಿಂದ ನೋಡಿ ಸರಪಣಿಯ ಬಂಧಮುಕ್ತಳಾಗಿಯೂ ಸರ್ವಾಭರಣಗಳಿಂದ ನೋಡಲ್ಪಡತಕ್ಕುದಾದ ದೇಹವುಳ್ಳವಳಾಗಿಯೂ ಅವುಗಳ ಭಾರದಿಂದಲೋ ಎನ್ನುವಂತೆ ಮಸ್ತಕದಿಂದ ಭೂತಲವನ್ನು ಸ್ಪರ್ಶಿಸಿ ಚೆನ್ನಾಗಿ ನಮಸ್ಕರಿಸಿ, ಇದಿರ್ಗೊಡು ವಿಧಿಪ್ರಕಾರವಾಗಿ ಭೋಜನ ಮಾಡಿಸಿ. (75–609)

3. ಶ್ರೇಣಿಕರಾಜನೇ, ಕೇಳು, ಜಂಬೂವೃಕ್ಷದಿಂದ ವಿಭೂಷಿತವಾದ ಭೂತಲದಲ್ಲಿ—ಇಲ್ಲಿ ಭರತಕ್ಷೇತ್ರದಲ್ಲಿ ಹೇಮಾಂಗದ ದೇಶದಲ್ಲಿ ರಾಜಪುರದ ದೊರೆಯೂ ಚಂದ್ರನಂತೆ ಎಲ್ಲರನ್ನೂ ಸಂತೋಷಪಡಿಸಿದವನೂ ಆದ ಸತ್ಯಂಧರ ಭೂಪಾಲನಿದ್ದನು. ಇವನಿಗೆ ಮತ್ತೊಬ್ಬಳು ವಿಜಯಲಕ್ಷ್ಮಿಯೋ ಎಂಬಂತೆ ವಿಜಯೆಯು ಮಹಾದೇವಿಯಾಗಿದ್ದಳು. ಸಮಸ್ತ ಕಾರ್ಯನಿಪುಣನಾದ ಕಾಷ್ಠಾಂಗಾರನೆಂಬುವನು ಮಂತ್ರಿಯಾಗಿದ್ದನು. ದೈವಬಾಧೆಗಳನ್ನು ನಾಶಮಾಡುವವನಾದ ರುದ್ರದತ್ತನೆಂಬ ಪುರೋಹಿತನಿದ್ದನು. (75)

4. ರಾಜನೇ, ಕೇಳು ಅತಿಥಿಯೂ ಗುಣಿಯೂ ಆದ ನಾನು ಭೋಜನಕ್ಕೋಸ್ಕರ ನಿನ್ನನ್ನು ಬೇಡುತ್ತೇನೆ. ನನ್ನನ್ನು ಭೋಜನಮಾಡಿಸು.

5. ಆತ್ಮಪ್ರಶಂಸೆಯೂ, ಪರನಿಂದೆಯೂ ಮರಣಕ್ಕಿಂತಾ ವಿಶೇಷವಾಗಿರುವುದಿಲ್ಲ ; ಮೃತ್ಯುವಿಗೆ ಸಮಾನಗಳೆಂದು ಭಾವವು.

6. ಪುಣ್ಯಗಳನ್ನು ಗಳಿಸದಿರುವವನು ರತ್ನಾಕರ (ಸಮುದ್ರ) ದಲ್ಲಿಯೂ ಉತ್ತಮ ರತ್ನವನ್ನು ಪಡೆಯುವುದಿಲ್ಲ.

7. ಈ ಮಹಾ ಪುರಾಣವೇ ಭಕ್ತಿಯುಳ್ಳ ಭವ್ಯರಿಂದ ವ್ಯಾಖ್ಯಾನ ಮಾಡತಕ್ಕುದೂ ಯಾವಾಗಲೂ ಕೇಳುವುದಕ್ಕೆ ಯೋಗ್ಯವೂ ಚಿಂತಿಸುವುದಕ್ಕೆ ಯೋಗ್ಯವೂ ಬರೆಸುವುದಕ್ಕೆ ಯೋಗ್ಯವೂ ಆಗಿರುತ್ತದೆ.

ಈ ಉದಾಹರಣೆಗಳನ್ನು ನೋಡುವಾಗ ಎಷ್ಟು ಸುಂದರ ಶೈಲಿ ಎಂಬುದು ಯಾರಿಗಾದರು ಮನವರಿಕೆಯಾಗದಿರದು. ಮೂಲಕ್ಕೆ ಆದಷ್ಟು ಮಟ್ಟಿಗೆ ಹತ್ತಿರವಾಗಿದ್ದಾರೆ. ಹಾಗಿದ್ದೂ ಕನ್ನಡ ಎಷ್ಟು ಸುಲಲಿತವಾಗಿದೆ, ಸರಳವಾಗಿದೆ ಎಂಬುದನ್ನು ಭಾವಿಸಿದಷ್ಟೂ ಶಾಸ್ತ್ರಿಗಳ ಬಗೆಗೆ ಹೆಚ್ಚು ಹೆಚ್ಚು ಗೌರವ ಮೂಡುತ್ತದೆ. ಇದು ಐವತ್ತು ವರ್ಷಗಳಷ್ಟು ಹಿಂದಿನ ಶೈಲಿ ಎಂದಾಗ ಇನ್ನೂ ಅಚ್ಚರಿ ಮೂಡುತ್ತದೆ. ಶ್ರೀ ಶಾಸ್ತ್ರಿಗಳು ತಮ್ಮ ಕಾಲದ ಇಂಗ್ಲಿಷ್ ಅಭ್ಯಾಸದ ಹಿನ್ನೆಲೆಯಲ್ಲಿ ಬರೆಯುತ್ತಿದ್ದವರ ಶೈಲಿಗೆ ಮಾರುಹೋಗದೆ, ಪರಂಪರೆಯಾಗಿ ಬಂದಿದ್ದ ಅಂದಿಗೆ ಶ್ರೇಷ್ಠವೆನಿಸಿದ್ದ ಶೈಲಿಯನ್ನು ಮೈಗೂಡಿಸಿಕೊಂಡ ಧೀಮಂತ ವ್ಯಕ್ತಿ.

ಮೂಲದಲ್ಲಿ ನಾಮಮಾತ್ರವಾಗಿರುವ ಕನಕಾವಲೀ ತಪಸ್ಸು, ಆಚಾಮ್ಲವರ್ಧನ ತಪಸ್ಸು, ಪರೀಕ್ಷಹ ಮುಂತಾದ ಪಾರಿಭಾಷಿಕ ಶಬ್ದಗಳನ್ನು ವಿವರಿಸಿರುತ್ತಾರೆ. ವ್ಯಾಕರಣ, ಛಂದಸ್ಸು, ಅಲಂಕಾರಗಳನ್ನು ಅಲ್ಲಲ್ಲಿ ಗುರುತಿಸಿರುತ್ತಾರೆ. ಇದು ಅವರ ತತ್ತ್ವಶಾಸ್ತ್ರ, ಸಾಹಿತ್ಯ ಶಾಸ್ತ್ರಗಳ ಪಾಂಡಿತ್ಯಕ್ಕೆ ನಿದರ್ಶನ.

ತೀರ್ಥಂಕರ ಪುರಾಣಗಳನ್ನು ಬರೆದ ಪಂಪಾದಿಗಳಿಗೂ ಚರಿತೆಗಳನ್ನು ಬರೆದ ಭಾಸ್ಕರ ಮುಂತಾದವರಿಗೂ ಈ ಮಹಾಪುರಾಣವು ಆಕರ ಗ್ರಂಥವಾಗಿದೆ. ಅಂತೆಯೇ ಈಚೆಗೆ ತೀರ್ಥಂಕರ ಪುರಾಣಗಳನ್ನೂ ಚರಿತೆಗಳನ್ನೂ ಮೂಲದೊಡನೆ ಹೋಲಿಸಿ ಬೆಲೆಕಟ್ಟುವ ಸಂಪಾದಕರಿಗೆ, ವಿಮರ್ಶಕರಿಗೆ, ಸಾಹಿತ್ಯ ಚರಿತ್ರಕಾರರಿಗೆ ಶ್ರೀ ಶಾಸ್ತ್ರಿಗಳ ಅನುವಾದವೇ ಆಕರವಾಗಿದೆ. ಈ ಅನುವಾದ ಬಾರದಿದ್ದರೆ ಇಂತಹ ಕೆಲಸ ಬಹುಪಾಲು ನಡೆಯುತ್ತಿದ್ದಿಲ್ಲವೆಂದೇ ಹೇಳಬೇಕು. ಈ ಕಾರಣದಿಂದಲೂ ಕನ್ನಡ ಸಾಹಿತ್ಯಲೋಕಕ್ಕೆ ಶ್ರೀ ಶಾಸ್ತ್ರಿಗಳ ಅನುವಾದ ಮಹೋಪಕಾರವಾಗಿದೆ.

'ಮನುಷ್ಯ ಜಾತಿ ತಾನೊಂದೆ ವಲಂ' (15–14) ಎಂಬುದು ಪಂಪನ ಮಾತು. ಅಲ್ಪದರಲ್ಲಿ ಕಲ್ಪವನ್ನು ಸೃಷ್ಟಿಸಿರುವ ಈ ಮಾತು ಪಂಪನದೇ ಎನ್ನುವ ಭ್ರಾಂತಿ ಕೆಲವರಿಗೆ. ಶ್ರೀಶಾಸ್ತ್ರಿಗಳ ಅನುವಾದವನ್ನು ಗಮನಿಸಿದ್ದಲ್ಲಿ ಇಂತಹ ಭ್ರಾಂತಿಗೆ ಅವಕಾಶವಿರುತ್ತಿರಲಿಲ್ಲ. ಇದರ ಮೂಲ ಮಹಾ ಪುರಾಣದಲ್ಲಿ ಹೀಗಿದೆ–ಮನುಷ್ಯ ಜಾತಿರೇಕೈವ ಜಾತಿನಾಮೋದಯೋದ್ಭವಾ. (38–45), ಜಾತಿ ಎಂಬ ನಾಮಕರ್ಮದ ಉದಯದಿಂದುಂಟಾದ ಮನುಷ್ಯ ಜಾತಿಯು ಒಂದೇ ಆಗಿರುತ್ತದೆ.

ಶ್ರೀ ಶಾಸ್ತ್ರಿಗಳಿಗೆ ಗೊಮ್ಮಟಸಾರ, ತತ್ತ್ವಶಾಸ್ತ್ರ, ಆಚಾರಶಾಸ್ತ್ರಗಳಲ್ಲಿದ್ದ ಪ್ರಕಾಂಡ ಪಾಂಡಿತ್ಯ ಈ ಅಗಾಧವಾದ ಸಾಹಿತ್ಯ ಸೇವೆಗೆ, ಇವೆಲ್ಲಕ್ಕೆ ಕಿರೀಟಪ್ರಾಯವಾದ ಮಹಾಪುರಾಣದ ಅನುವಾದ ಕಾರ್ಯಕ್ಕೆ ಪ್ರೇರಕ, ಪೋಷಕವಾಗಿದೆ.

ಸ್ವಾಧ್ಯಾಯ ಪ್ರೇಮಿಗಳಾದ ಜೈನ ಬಾಂಧವರಿಗೂ, ಸಾಹಿತ್ಯ ಪ್ರೇಮಿಗಳಾದ ಜೈನೇತರ ಬಾಂಧವರಿಗೂ ಸುಲಭ ಲಭ್ಯವಾಗುವಂತೆ ಜೈನ ಸಾಹಿತ್ಯಗ್ರಂಥರಾಶಿಯಲ್ಲಿ ಕಿರೀಟಮಣಿಯಾಗಿರುವ ಈ ಮಹಾ ಪುರಾಣವನ್ನು ವೈನಾಡಿನ ಜೈನ ಪುನೆತನಗಳಲ್ಲಿ ರತ್ನಪ್ರಾಯರಾಗಿದ್ದ ಧರ್ಮಾತ್ಮ ಮಣಿಯಂಗೂಡು ಶ್ರೀಮಾನ್ ಕೃಷ್ಣಯ್ಯ ಗೌಡರು ಪ್ರಕಟಿಸುವ ಸಂಕಲ್ಪ ಮಾಡಿದರು. ಪೂರ್ವ ಪುರಾಣವು ಪ್ರಕಟವಾದುದನ್ನು ಕಂಡು ಸಂತೋಷಪಟ್ಟರು. ಉತ್ತರ ಪುರಾಣವು ಮುದ್ರಣಕ್ಕೆ ಸಿದ್ಧಗೊಳ್ಳುವಷ್ಟರಲ್ಲಿ ಆ ಪುಣ್ಯಾತ್ಮರು ಕೀರ್ತಿಶೇಷರಾದುದರಿಂದ ಅವರ ಸುಪುತ್ರರು ಇದನ್ನು ಪ್ರಕಟಿಸಿ ತಮ್ಮ ತಂದೆಯವರ ಸಂಕಲ್ಪವನ್ನು ಪೂರ್ತಿ ಮಾಡಿದರು. ಗುಣಭದ್ರಾಚಾರ್ಯರು, ಜಿನಸೇನಾಚಾರ್ಯರ ಸಂಕಲ್ಪವನ್ನು ಪೂರ್ತಿ ಮಾಡಿದಂತೆ.

ಈ ಮುದ್ರಣದ ಪ್ರತಿಗಳು ಮುಗಿದಿದ್ದು, ಅದರ ಅಗತ್ಯವನ್ನು ಕಂಡುಕೊಂಡ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಹಂಪ. ನಾಗರಾಜಯ್ಯನವರು ಕರ್ನಾಟಕ ಸರ್ಕಾರದ ಉದಾರ ಸಹಾಯದಿಂದ ಮರುಮುದ್ರಣ ಮಾಡಿಸಿ ಓದುಗರ ಕೈಗಿತ್ತು ಉಪಕರಿಸಿರುತ್ತಾರೆ. ಆದರೆ ಈಗ ಪರಿಷತ್ತಿನ ಪ್ರತಿಗಳೂ ಮುಗಿದು ಹೋಗಿವೆ. ಮೂರನೇ ಮುದ್ರಣಕ್ಕಾಗಿ 'ಮಹಾಪುರಾಣ' ಕಾಯುತ್ತಿದೆ. ●

ವ್ಯಕ್ತಿ ಚಿತ್ರ

ಶಾಂತಿರಾಜಶಾಸ್ತ್ರಿಗಳು ಸಂಸ್ಕೃತದಲ್ಲಿ ಗಟ್ಟಿಗರು, ಉಭಯ ಭಾಷಾ ಪಂಡಿತರು. ಕನ್ನಡದಲ್ಲಿ ಅಕ್ಕರೆ, ಸಂಸ್ಕೃತದಲ್ಲಿ ಮಮತೆ. ಪ್ರಾಕೃತದಲ್ಲಿ ಪ್ರವೇಶ. ಸಂಸ್ಕೃತದ ಸಾಹಿತ್ಯೋಪಾಸಕರಾದವರೆ ಕನ್ನಡದ ಸಾಹಿತ್ಯಾರಾಧಕರು. ಸಂಸ್ಕೃತ ಭಾಷಾ ಸಾಹಿತ್ಯಗಳ ಗಾಢವಾದ ಪರಿಚಯ, ಆಳವಾದ ಅಭ್ಯಾಸ ಕನ್ನಡ ವಿದ್ವಾಂಸರಿಗೆ ಅತ್ಯಗತ್ಯವೆಂಬುದು ಅವರ ಖಚಿತವಾದ ಅಭಿಪ್ರಾಯ. ಅಂತೆಯೇ ಸಂಸ್ಕೃತದಲ್ಲಿ ಸಾರವತ್ತಾದುದನ್ನು ಕನ್ನಡಕ್ಕೆ ತಂದರು. ಮಹಾಪುರಾಣದಂಥ ಮೇರುಕೃತಿ ಅವರಿಂದಾಗಿ ಕನ್ನಡದಲ್ಲಿ ಕುಡಿತು.

—ಡಾ|| ಹಂಪನಾ

ಎತ್ತೂರು ಶ್ರೀ ಶಾಂತಿರಾಜ ಶಾಸ್ತ್ರಿಗಳ ಕನ್ನಡ ಸಾಹಿತ್ಯ

—ಶ್ರೀ ಎ. ಎಂ. ಆದಿರಾಜು, ಮೈಸೂರು

ಧರ್ಮ ಮತ್ತು ಸಾಹಿತ್ಯ ಪರಸ್ಪರ ಅವಲಂಬಿತವಾಗಿವೆ. ಧರ್ಮ ಪ್ರಸಾರ ಸಾಹಿತ್ಯ ಮಾಧ್ಯಮದ ಮೂಲಕ ಆಗುತ್ತದೆ. ಸಾಹಿತ್ಯ ಧರ್ಮದ ನೆಲೆಗಟ್ಟಿನ ಮೇಲೆ ಬೆಳೆಯುತ್ತದೆ. ಧರ್ಮದ ತಿರುಳನ್ನು ಪಡೆಯದೆ ರಚಿತವಾದ ಸಾಹಿತ್ಯ ಚಿರಂತನವಾಗಿ ನಿಲ್ಲಲಾರದು. ಜನರ ಮನಸ್ಸಿನಿಂದ ಶೀಘ್ರವಾಗಿ ಮರೆಯಾಗಿ ಹೋಗುತ್ತದೆ. ಇಂದಿನ ಧರ್ಮವಿಹೀನ ಸಾಹಿತ್ಯವೇ ಇದಕ್ಕೆ ಸಾಕ್ಷಿ. ಕನ್ನಡ ಸಾಹಿತ್ಯವು ತನ್ನ ಉಗಮ ಕಾಲದಿಂದ ಆಧುನಿಕ ಕಾಲದವರೆಗೆ (20ನೇ ಶತ) ಧರ್ಮದ ನೆಲೆಗಟ್ಟಿನ ಮೇಲೆ ರಚಿತವಾಗಿ ಬೆಳೆದು ಉಳಿದುಕೊಂಡು ಬಂದಿದೆ. ಪ್ರಾರಂಭಿಕ ಕನ್ನಡ ಸಾಹಿತ್ಯಕ್ಕೆ ಜೈನಧರ್ಮವೇ ಆಧಾರ. ಜೈನಕವಿಗಳಿಂದ ನಿರ್ಮಾಣಗೊಂಡ ಸಾಹಿತ್ಯವೇ ಕನ್ನಡ ಸಾಹಿತ್ಯದ ಸಿಂಹಪಾಲಾಗಿದೆ. ಜೈನರಾಜರುಗಳು ಕವಿಗಳಿಗೆ ಆಶ್ರಯ ನೀಡಿ ಪ್ರೋತ್ಸಾಹಿಸಿ ಕನ್ನಡ ಸಾಹಿತ್ಯ ನಿರ್ಮಾಣಕ್ಕೆ ಕಾರಣರಾದರು. ಕ್ರಿ. ಶ. 9 ನೇ ಶತಮಾನದಿಂದ 12 ನೇ ಶತಮಾನದವರೆಗೆ ನಿರ್ಮಾಣಗೊಂಡ ಕನ್ನಡ ಸಾಹಿತ್ಯ ಪೂರ್ಣವಾಗಿ ಜೈನಕವಿಗಳಿಂದ ನಿರ್ಮಾಣವಾಗಿ ಜೈನಧರ್ಮದ ಪ್ರಭಾವವನ್ನು ಪಡೆದಿದೆ. ಈ ಕಾಲದಲ್ಲಿದ್ದ ಪಂಪ, ರನ್ನ, ಪೊನ್ನ ಮೊದಲಾದ ಕವಿಗಳು ಜೈನಧರ್ಮೀಯರನ್ನಷ್ಟೇ ಅಲ್ಲದೆ ಇತರ ಮತಧರ್ಮದವರನ್ನೂ ತನ್ನ ಕೃತಿಗಳಿಂದ ಆಕರ್ಷಿಸಿದರು. ವಿದ್ವಜ್ಜನರ ಮನ್ನಣೆ ಗಳಿಸಿದರು. ಧರ್ಮ ಪ್ರಭಾವನೆಯ ಜೊತೆಗೆ ಸಾಹಿತ್ಯ ಕ್ಷೇತ್ರದಲ್ಲೂ ಉತ್ತುಂಗಕೀರ್ತಿಯನ್ನು ಪಡೆದರು.

ಈ ಕಾಲದ ಕನ್ನಡ ಸಾಹಿತ್ಯ ಪೂರ್ಣವಾಗಿ ಸಂಸ್ಕೃತ ಭಾಷೆ, ಸಂಸ್ಕೃತ ಛಂದಸ್ಸು, ಸಂಸ್ಕೃತ ಕಾವ್ಯಗಳ ಪ್ರಭಾವಕ್ಕೊಳಪಟ್ಟಿತ್ತು. ಅರಮನೆ ಗುರುಮನೆಗಳಲ್ಲಿ ಮನ್ನಣೆಗಳಿಸಿಕೊಂಡಷ್ಟು ಜನಸಾಮಾನ್ಯರನ್ನು ಆಕರ್ಷಿಸಲು ಸಾಧ್ಯವಾಗಲಿಲ್ಲ. ಇದಕ್ಕೆ ಕಾರಣ ಕ್ಲಿಷ್ಟವಾದ ಸಂಸ್ಕೃತಮಯಂವಾದ ಕನ್ನಡ ಸರಳವಾಗಿ ಓದಲು ಅರಿತುಕೊಳ್ಳಲು ಸಾಧ್ಯವಾಗದ ಚಂಪೂಮಾರ್ಗ ಇತ್ಯಾದಿ ಅಂಶಗಳು ಕಾರಣವಾಗಿರಬಹುದು. 12–13ನೇ ಶತಮಾನದಲ್ಲಿ ಕನ್ನಡ ನಾಡಿನಲ್ಲಿ ಶಿವಶರಣರಿಂದ ವೀರಶೈವ ಧರ್ಮದ ಪ್ರಭಾವ ಹೆಚ್ಚಾಗಿ ವಚನ ಸಾಹಿತ್ಯ ಸಮೃದ್ಧವಾಗಿ ರಚನೆಯಾಯಿತು. ಇದೇ ವೇಳೆಗೆ ರಾಜಾಶ್ರಯವೂ ಕುಂಠಿತವಾಗತೊಡಗಿತು. ಈ ಕಾರಣಗಳಿಂದ ಜೈನ ಸಾಹಿತ್ಯ ರಚನೆ ಇಳಿಮುಖವಾಗಲಾರಂಭಿಸಿತು.

ಈ ಅಂಶಗಳನ್ನು ಗಮನಿಸಿದ ಜೈನಕವಿಗಳು ಜನಸಾಮಾನ್ಯರಿಗೆ ಸರಳವಾಗಿ ಅರ್ಥವಾಗುವಂತೆ ಧಾರ್ಮಿಕ ವಿಚಾರಗಳು ತಲುಪುವಂತಹ ಮಾರ್ಗದ ಅವಶ್ಯಕತೆಯನ್ನು ಅರಿತುಕೊಂಡರು. ಸರಳವಾದ ಹಾಡುಗಬ್ಬದಲ್ಲಿ, ಜಾನಪದ ಧಾಟಿಯಲ್ಲಿ ಆಡುನುಡಿಯಲ್ಲಿ ಕಾವ್ಯರಚನೆ ಮಾಡಬೇಕಾದ ಅಗತ್ಯವನ್ನು ಕಂಡುಕೊಂಡರು. ಮೂರನೆಯ ಮಂಗರಸ, ರತ್ನಾಕರವರ್ಣಿ, ಬಾಹುಬಲಿ ಮೊದಲಾದ ಕವಿಗಳು ಸರಳ ಶೈಲಿಯಲ್ಲಿ ಕನ್ನಡ ಛಂದಸ್ಸಿನಲ್ಲಿ ಕಾವ್ಯರಚನೆಗೆ ತೊಡಗಿ ಜನಪ್ರಿಯರಾದರು. ಇವರ ಕಾವ್ಯಗಳು ಸಾಮಾನ್ಯ ಜನರನ್ನು ಆಕರ್ಷಿಸುವಲ್ಲಿ ಯಶಸ್ಸನ್ನು ಗಳಿಸಿದವು.

19–20ನೇ ಶತಮಾನದ ವೇಳೆಗೆ ಜೈನ ಧಾರ್ಮಿಕ ಸಾಹಿತ್ಯ ನಿರ್ಮಾಣ ಹೆಚ್ಚು ಕಡಿಮೆ ಪೂರ್ಣಸ್ಥಗಿತಗೊಂಡಿತು. ಜೈನಧರ್ಮದ ಪ್ರಭಾವವೂ ಇಳಿಮುಖವಾಗಿಯೇ ಇತ್ತು. 20ನೇ ಶತಮಾನದಲ್ಲಿ ಎತ್ತೂರು ಶ್ರೀ ಶಾಂತಿರಾಜಶಾಸ್ತ್ರಿಗಳು ಜೈನ ಧಾರ್ಮಿಕ ಸಾಹಿತ್ಯ ಕ್ಷೇತ್ರದಲ್ಲಿ ಧ್ರುವತಾರೆಯಂತೆ ಕಂಗೊಳಿಸಿದರು. ಸ್ವತಃ ಪ್ರತಿಭಾನ್ವಿತರೂ ವಿದ್ವಾಂಸರೂ ಆದ ಅವರು ನೂತನ ಸಾಹಿತ್ಯ ನಿರ್ಮಾಣಕ್ಕಿಂತ ಸಮೃದ್ಧವಾಗಿರುವ ಜೈನ ಸಾಹಿತ್ಯವನ್ನು ಜನಸಾಮಾನ್ಯರಿಗೆ ತಲುಪಿಸುವ ಅಗತ್ಯ

ವನ್ನು ಮನಗಂಡರು. ಅವರೇ ತಿಳಿಸಿದಂತೆ, 'ಸಾಕಷ್ಟು ಸುಂದರವಾದ ಕಲಾ ನೈಪುಣ್ಯದಿಂದ ಕಂಗೊಳಿಸುವ ಸುಂದರ ದೇವಾಲಯುಗಳಿರುವಾಗ ಹೊಸ ದೇವಾಲಯು ಗಳ ನಿರ್ಮಾಣ ಬೇಕಿಲ್ಲ; ಪುರಾತನ ದೇವಾಲಯುಗಳನ್ನೇ ಜೀರ್ಣೋದ್ಧಾರ ಮಾಡುವುದುು ಪುಣ್ಯಕಾರ್ಯ; ಮಹಾ ಮಹಿಮರಾದ ಪೂರ್ವಾಚಾರ್ಯರ ಗ್ರಂಥರತ್ನಗಳನ್ನು ಪ್ರಕಾಶಪಡಿಸಿ ಜನತೆಗೆ ಪ್ರಯೋಜನಕರವಾಗುವಂತೆ ಮಾಡುವ ಕಾರ್ಯ ಶ್ರೇಯಸ್ಕರವಾದುದು' ಎಂದು ಹೇಳಿದ್ದಾರೆ. ಶ್ರೀ ಶಾಸ್ತ್ರಿಗಳ ಈ ಅಭಿಪ್ರಾಯದ ಪರಿಣಾಮವೇ ಶಾಸ್ತ್ರಗ್ರಂಥಗಳ, ಸಾಹಿತ್ಯ ಕೃತಿಗಳ ಸಂಪಾದನೆ ಪ್ರಕಟಣೆ ಇತ್ಯಾದಿ ಕಾರ್ಯಗಳು ಅವರಿಂದ ನಡೆದವು. ಮಹಾಪುರಾಣದಂತಹ ಮಹೋನ್ನತ ಕೃತಿಯು ಕನ್ನಡಿಗರಿಗೆ ಲಭ್ಯವಾದದ್ದು ಶಾಸ್ತ್ರಿಗಳ ಈ ಆಲೋಚನೆಯ ಪರಿಣಾಮದಿಂದಲೇ ಎಂದು ಹೇಳ ಬಹುದು. ಕನ್ನಡಿಗರಿಗೆ ಕನ್ನಡ ಕೃತಿಗಳನ್ನು ಪರಿಚಯಿಸ ಬೇಕೆಂಬ ಉದ್ದೇಶದಿಂದ ಜನಪ್ರಿಯತೆ ಗಳಿಸಿದ ಮೂರನೆಯ ಮಂಗರಸನ ನೇಮಿಜಿನೇಶಸಂಗತಿ, ಬಾಹು ಬಲಿಯ ನಾಗಕುಮಾರ ಚರಿತೆ, ರತ್ನಾಕರವರ್ಣಿಯ ಶತಕತ್ರಯಗಳನ್ನು ಸರಳ ಗದ್ಯಾನುವಾದದೊಂದಿಗೆ ಸಂಪಾದಿಸಿ ಪ್ರಕಟಿಸಿದರು.

ಹದಿನಾರನೇ ಶತಮಾನದಲ್ಲಿದ್ದ ಕಲ್ಲಹಳ್ಳಿಯ ಮೂರನೆಯ ಮಂಗರಸನ ನೇಮಿಜಿನೇಶ ಸಂಗತಿಯು ಇಪ್ಪತ್ತೆರಡನೆಯ ತೀರ್ಥಂಕರರಾದ ನೇಮಿನಾಥ ಸ್ವಾಮಿಯ ಕತೆ. ಹರಿವಂಶ ಮತ್ತು ಕುರುವಂಶಗಳ ಚರಿತ್ರೆಯನ್ನೊಳಗೊಂಡಿರುವ ಕಾವ್ಯ. ವೈದಿಕ ಸಾಹಿತ್ಯ ದಲ್ಲೂ ಈ ಕತೆ ಇದೆ. ಹರಿವಂಶಪುರಾಣವೆಂಬ ಹೆಸರೂ ಇದೆ. ಕನ್ನಡದಲ್ಲಿ ಚಾವುಂಡರಾಯ, ನೇಮಿಚಂದ್ರ, ಕರ್ಣಪಾರ್ಯರು ಇದೇ ಕತೆಯನ್ನೊಳಗೊಂಡ ಕಾವ್ಯರಚನೆ ಮಾಡಿದ್ದಾರೆ. ಕನ್ನಡದಲ್ಲಿ ಇದು ಅತಿ ಜನಪ್ರಿಯತೆ ಯನ್ನು ಪಡೆದಿರುವ ಕತೆಯಾಗಿದೆ. ಮಂಗರಸರು ವಿಸ್ತಾರವಾದ ಕಾವ್ಯವನ್ನು ಜನಸಾಮಾನ್ಯರ ಹಾಡುಗಬ್ಬ ವಾದ ಸಾಂಗತ್ಯದಲ್ಲಿ ರಚಿಸಿದ್ದಾರೆ. ತೀರ್ಥಂಕರರ ಚರಿತ್ರೆ ದೇಸೀ ಛಂದಸ್ಸಿನಲ್ಲಿ ಮಂಗರಸನಿಂದಲೇ ಪ್ರಥಮವಾಗಿ ರಚಿತವಾಗಿದೆ. ಈತನ ಕಾವ್ಯಕ್ಕೆ ಚಾವುಂಡರಾಯ ಪುರಾಣ ಆಧಾರವಾಗಿದೆ. ನೇಮಿಚಂದ್ರನ ಕಾವ್ಯ ದಿಂದಲೂ ಸ್ವಲ್ಪಮಟ್ಟಿಗೆ ಪ್ರಭಾವಕ್ಕೊಳಗಾಗಿದ್ದಾನೆ ಮಂಗರಸ. ಮೂವತ್ತೈದು ಸಂಧಿಗಳಲ್ಲಿ ಹರಿದುಬಂದ ಈತನ ಕಾವ್ಯ ವಾಹಿನಿಯಲ್ಲಿ ಆಕರ್ಷಕ ಕಥಾನಿರೂಪಣೆ ಇದೆ. ವಿಭಿನ್ನ ಸ್ವಭಾವದ ವ್ಯಕ್ತಿ ಚಿತ್ರಣಗಳು ಜೀವಂತ ವೆನಿಸುವಷ್ಟು ಸಹಜವಾಗಿ ಮೂಡಿಬಂದಿವೆ. ಈತನ ಸಾಂಗತ್ಯ ಪದ್ಯಗಳಲ್ಲಿ ಅಲ್ಲಲ್ಲಿ ಅಂತ್ಯ ಪ್ರಾಸದ ಲಾಲಿತ್ಯ ವನ್ನು ಕಾಣಬಹುದು.

ಉದಾ : ತೀವಿಹವಲ್ಲಿ ವಕುಳ ನಾಗ ಚಂಪಕ
ಬಾವನ್ನ ಬೇಲ ಬಾಳೆ ತಿಲಕ
ದೇವದಾರು ದಾಡಿಮ ಜಂಬು ಕುರವಕ
ಮಾವು ಮಂದಾರವಶೋಕ (1-65)

ಕಥನ ಕಲೆ, ಶೈಲಿ, ಲಾಲಿತ್ಯ, ಮಿತವಾದ ವರ್ಣನೆ ಗಳಿಂದ ಸಾಂಗತ್ಯ ಕೃತಿಗಳಲ್ಲಿ ಈ ಕಾವ್ಯ ಪ್ರಾಮುಖ್ಯತೆ ಯನ್ನು ಪಡೆದಿದೆ.

ಸುಮಾರು 16ನೇ ಶತಮಾನದಲ್ಲಿ ಶೃಂಗೇರಿಯ ಲ್ಲಿದ್ದ ಬಾಹುಬಲಿ ಕವಿಯಿಂದ ನಾಗಕುಮಾರ ಚರಿತೆ ರಚಿತವಾಗಿದೆ. ನೇಮೀಶ್ವರ ತೀರ್ಥಂಕರರ ಮೋಕ್ಷ ಗಮನಾನಂತರ ಭಾರತ ವರ್ಷದಲ್ಲಿ ಕೀರ್ತಿಶಾಲಿಯಾಗಿ ಬಾಳಿ, ಮುಕ್ತಿ ಸಂಪಾದಿಸಿದ ನಾಗಕುಮಾರನೆಂಬ ಪುಣ್ಯ ಪುರುಷನ ಕತೆ. ಕನ್ನಕಪುರದ ದೊರೆ ಜಯಂಧರ, ಆತನ ರಾಣಿ ಪೃಥ್ವೀದೇವಿಯ ಪುತ್ರ ನಾಗಕುಮಾರ. ಈತನು ಸಕಲ ವಿದ್ಯಾ ಪ್ರವೀಣ. ತನ್ನ ಪ್ರಾವೀಣ್ಯತೆ ಯಿಂದ ಅನೇಕ ರಾಜರನ್ನು ಗೆದ್ದು ಕೊನೆಗೆ ವೈರಾಗ್ಯ ಹೊಂದಿ ಕೇವಲಿಯಾಗಿ ಮುಕ್ತಿ ಹೊಂದುತ್ತಾನೆ.

ಸಾಂಗತ್ಯದಲ್ಲಿರುವ ಈ ಕೃತಿ ಮೂವತ್ತೆರಡು ಸಂಧಿಗಳಲ್ಲಿ ರಚನೆಯಾಗಿದೆ. ಕೊನೆಯ ಮೂರು ಸಂಧಿ ಗಳನ್ನು ಬಾಹುಬಲಿಯ ಮರಣಾನಂತರ ವರ್ಧಮಾನ ನೆಂಬ ಕವಿ ರಚಿಸಿದ್ದಾನೆ. ಆಲಂಕಾರಿಕ ಭಾಷೆ, ವ್ಯಂಗ್ಯೋಕ್ತಿ ಇವನ ಕಾವ್ಯದಲ್ಲಿಲ್ಲ. ಹೇಳಬೇಕಾದ್ದನ್ನು ನೇರವಾಗಿ ಸ್ಪಷ್ಟವಾದ ಮಾತುಗಳಲ್ಲಿ ಹೇಳುತ್ತಾನೆ. ತನ್ನ ಕಾವ್ಯದ ಶ್ರೇಷ್ಠತೆ ವಾಚ್ಯಾರ್ಥದಿಂದಲೇ, ತನ್ನ ಕಾವ್ಯವು ಪುಣ್ಯ, ಸತ್ಯಂಗಳಿಗೆ ಸುಕ್ಷೇತ್ರ, ರಸಿಕರ ಕರ್ಣ ರಸಾಯನ ಎಂದು ಕವಿಯೇ ಹೇಳಿಕೊಂಡಿದ್ದಾನೆ. ಇದರಲ್ಲಿ ಅತಿಶ ಯೋಕ್ತಿ ಏನಿಲ್ಲ. ಈತನಿಗೆ 'ಕವಿರಾಜಹಂಸ', 'ಸಂಗೀತ ಸುಧಾಬ್ಧಿ ಚಂದ್ರಮ' ಎಂಬ ಬಿರುದುಗಳಿದ್ದವು.

ಮೂಡಬಿದ್ರೆಯ ರತ್ನಾಕರ ವರ್ಣಿಯ ರತ್ನಾಕರ ಶತಕ, ಅಪರಾಜಿತೇಶ್ವರ ಶತಕ ಮತ್ತು ತ್ರಿಲೋಕ ಶತಕಗಳು 'ಶತಕತ್ರಯಾ' ಎಂಬ ಹೆಸರಿನೊಂದಿಗೆ ಶ್ರೀ ಶಾಸ್ತ್ರಿಗಳಿಂದ ಗದ್ಯಾನುವಾದದೊಂದಿಗೆ ಸಂಪಾದಿಸಲ್ಪಟ್ಟು ಪ್ರಕಟಗೊಂಡಿದೆ. ಪ್ರತಿಯೊಂದು (ಕಂದ ವೃತ್ತಗಳು) ಶತಕಗಳೂ ನೂರಾ ಇಪ್ಪತ್ತೆಂಟು ಪದ್ಯಗಳಿಂದ ಕೂಡಿವೆ. ರತ್ನಾಕರ ಶತಕ ಮತ್ತು ಅಪರಾಜಿತೇಶ್ವರ ಶತಕಗಳಲ್ಲಿ ಕವಿ ವೈರಾಗ್ಯ, ನೀತಿ, ಅಧ್ಯಾತ್ಮ ವಿಚಾರಗಳನ್ನು ಹೇಳಿದ್ದಾನೆ. ತ್ರಿಲೋಕ ಶತಕದಲ್ಲಿ ಲೋಕದ ವರ್ಣನೆ ಇದೆ. ಈ ಮೂರೂ ಶತಕಗಳಲ್ಲಿ ವಿಷಯ ನಿರೂಪಣೆ, ಸಾಹಿತ್ಯಿಕ ಅಂಶಗಳಲ್ಲಿ ಉತ್ತಮವಾದುದು ರತ್ನಾಕರ ಶತಕ. ಇದೇ ಕವಿಯ ಭರತೇಶ ವೈಭವ ಕಾವ್ಯದ ಜೀವಾಳವಾಗಿರುವ ತ್ಯಾಗ-ಭೋಗಗಳ ಸಮನ್ವಯ ಬೀಜರೂಪವಾಗಿ ರತ್ನಾಕರ ಶತಕದ ಪದ್ಯಗಳಲ್ಲಿ ಕಂಡುಬರುತ್ತದೆ. ಈತನ ಮಾತು ಹರಿತವಾದುದು. ಧರ್ಮ ಪ್ರತಿಪಾದನೆ, ಧರ್ಮ ಜಿಜ್ಞಾಸೆಗಳಲ್ಲಿ ಸ್ವತಂತ್ರಮನೋವೃತ್ತಿಯನ್ನು ಅಭಿವ್ಯಕ್ತಗೊಳಿಸುತ್ತಾನೆ.

ಈ ಮೇಲ್ಕಂಡ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದ ಶ್ರೀ ಶಾಸ್ತ್ರಿಗಳ ಕಾರ್ಯ ಮಹತ್ತರವಾದುದು. ಅವರ ವಿದ್ವತ್ತು, ಪ್ರತಿಭೆ, ಕಾರ್ಯಕ್ಷಮತೆಯ ಅರಿವು ನಮಗಾಗುತ್ತದೆ. ಗ್ರಂಥ ಸಂಪಾದನಾ ಕಾರ್ಯ ವಿಧಾನ ಗೊತ್ತಿರದಿದ್ದ ಕಾಲದಲ್ಲಿ ಶಾಸ್ತ್ರಿಗಳು ಈ ಗ್ರಂಥಗಳನ್ನು ಸಂಪಾದಿಸುವ ಕಾರ್ಯಮಾಡಿದ್ದಾರೆ. ಈಗಿನ ವಿಶ್ವ ವಿದ್ಯಾನಿಲಯಗಳ ವಿದ್ವಾಂಸರು ಶಾಸ್ತ್ರೀಯವಾಗಿ ಸಂಪಾದನಾ ಕಾರ್ಯ ಕೈಗೊಳ್ಳುವ ರೀತಿಯಲ್ಲಿ ಶಾಸ್ತ್ರಿಗಳು ಕೃತಿ ಸಂಪಾದನೆ ಮಾಡಿದ್ದಾರೆ. ಹಲವು ಓಲೆಗರಿ ಪ್ರತಿಗಳನ್ನು ಆಧರಿಸಿ, ವಿಭಿನ್ನ ಪಾಠಗಳನ್ನು ಪರಿಶೀಲಿಸಿ ತಮ್ಮ ವಿದ್ವತ್ತು ಪ್ರತಿಭೆಯ ಮೂಲಕ ಶುದ್ಧ ಪಾಠಗಳನ್ನು ನಿರ್ಣಯಿಸಿದ್ದಾರೆ. ಪಾಠಾಂತರಗಳನ್ನು ಅಡಿ ಟಿಪ್ಪಣಿಯಲ್ಲಿ ಕೊಟ್ಟು ಅಭ್ಯಾಸಿಗಳಿಗೆ ಅನುಕೂಲ ಮಾಡಿದ್ದಾರೆ. ತ್ರಿಲೋಕ ಶತಕದಲ್ಲಿ ಉಳಿದೆರಡು ಶತಕಗಳಿಂದ ಒಂದು ಪದ್ಯ ಹೆಚ್ಚಾಗಿರುವುದನ್ನು ಗಮನಿಸಿ ಕವಿಯ ಆಶಯಕ್ಕೆ ವಿರೋಧವಾಗಿರುವ ಎಂಬತ್ತನೆಯ ಪದ್ಯವನ್ನು ಪ್ರಕ್ಷಿಪ್ತ ಎಂದು ಗುರುತಿಸಿದ್ದಾರೆ. ಅಡಿ ಟಿಪ್ಪಣಿಯಲ್ಲಿ ಪಾರಿಭಾಷಿಕ ಪದಗಳಿಗೆ ಅರ್ಥಗಳನ್ನು ನೀಡಿ ಓದುಗರಿಗೆ ಸುಲಭ ಗ್ರಾಹ್ಯವಾಗುವಂತೆ ಮಾಡಿದ್ದಾರೆ. ಈ ರೀತಿ ಗ್ರಂಥ ಸಂಪಾದನಾ ಕಾರ್ಯ ವಿಧಾನವನ್ನು ಪ್ರಾಯೋಗಿಕವಾಗಿ ಮಾಡಿ ತೋರಿಸಿದ್ದಾರೆ. ಶಾಸ್ತ್ರಿಗಳ ಈ ಕಾರ್ಯ ಗ್ರಂಥ ಸಂಪಾದನಾ ಕಾರ್ಯದಲ್ಲಿ ನಿರತರಾಗಿರುವ ಸಂಶೋಧಕ ವಿದ್ವಾಂಸರಿಗೆ ಮಾರ್ಗದರ್ಶಿಯಾಗಿದೆ.

ಕವಿಗಳ ಕಾಲನಿರ್ಣಯ ವಿಚಾರದಲ್ಲಿ ಶಾಸ್ತ್ರಿಗಳು ಕೇವಲ ಆಯಾಯ ಕಾವ್ಯಗಳ ಕವಿಗಳ ಹೇಳಿಕೆಯನ್ನೇ ಸ್ವೀಕರಿಸಿಲ್ಲ. ಏಕೆಂದರೆ ಕೆಲವು ವೇಳೆ ಲಿಪಿಕಾರ ತನ್ನ ಕೈಚಳಕ ತೋರಿಸಿ ತನ್ನ ಕಾಲವನ್ನೇ ಬರೆಯುವ ಪ್ರಸಂಗಗಳೂ ಇರುತ್ತವೆ. ಆದ್ದರಿಂದ ಇತರ ಐತಿಹಾಸಿಕ ಆಧಾರಗಳನ್ನು ಪರಿಶೀಲಿಸಿದ್ದಾರೆ. ಇತರ ಕವಿಗಳ ಹೇಳಿಕೆಯನ್ನು ಗಮನಿಸಿದ್ದಾರೆ. ಮಂಗರಸನ ಕಾಲದ ವಿಚಾರವಾಗಿ ಮೈಸೂರು ಪ್ರಾಂತದ ಅರಸು ಮನೆತನಗಳ ಇತಿಹಾಸವನ್ನು ಸಂಶೋಧನಾತ್ಮಕವಾಗಿ ಅಭ್ಯಸಿಸಿದ್ದಾರೆ. ಕಲ್ಲಹಳ್ಳಿಯ ಶಾಸನವನ್ನು (16ನೇ ಶತ) ಪರಿಶೀಲಿಸಿದ್ದಾರೆ. ಅಲ್ಲದೆ ಮಂಗರಸನು ರಾಜನಾಗಿದ್ದ ಪ್ರದೇಶದಲ್ಲಿ ಆ ಕಾಲದಲ್ಲಿ ನಿರ್ಮಾಣವಾದ ದೇವಾಲಯಗಳಿಗೆ ಸಂಬಂಧಪಟ್ಟ ಮಾಹಿತಿಗಳನ್ನು ಅಭ್ಯಾಸ ಮಾಡಿದ್ದಾರೆ. ಇವೆಲ್ಲವುಗಳ ಆಧಾರದ ಮೇಲೆ 16ನೇ ಶತಮಾನದ ಪ್ರಾರಂಭದಲ್ಲಿ ಮಂಗರಸನು ಕೃತಿ ರಚನೆ ಮಾಡಿದ್ದಾನೆ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಇದರ ಜೊತೆಗೆ ಮೈಸೂರು ಅರಸು ಮನೆತನಗಳಲ್ಲಿ ಜೈನ, ವೈಷ್ಣವ ಮತ್ತು ಶೈವ ಮತ ಸಂಪ್ರದಾಯದ ಅನುಸರಣೆ ಇರುವುದನ್ನು ಗುರುತಿಸಿದ್ದಾರೆ. ಇದು ಸಂಶೋಧಕರಿಗೆ ಆಸಕ್ತಿ ಹುಟ್ಟಿಸುವ ಅಂಶವಾಗಿದೆ.

ಬಾಹುಬಲಿಯ ಕಾಲವಿಚಾರ ನಿರ್ಣಯದಲ್ಲಿ ಕಾರ್ಕಳದ ಭೈರವರಸರ ಇತಿಹಾಸ ಮತ್ತು ಶೃಂಗೇರಿಯ ಪೀಠಾಧಿಪತಿಗಳ ಚರಿತ್ರೆಯನ್ನು ಅಭ್ಯಸಿಸಿದ್ದಾರೆ. 16ನೇ ಶತಮಾನದ ಕೊನೆಯಲ್ಲಿ ನೃಸಿಂಹ ಭಾರತಿಗಳು ಪೀಠಾಧಿಪತಿಗಳಾಗಿದ್ದಾಗ ಕಾರ್ಕಳದ ಭೈರವರಸನು ಕಾರ್ಕಳದಲ್ಲಿ ಅವರಿಗೆ ದೇವಾಲಯವನ್ನು ಕಟ್ಟಿಸಿಕೊಟ್ಟ ವಿಚಾರವನ್ನು ಗುರುತಿಸಿದ್ದಾರೆ. ಆ ಕಾಲದಲ್ಲಿಯೇ ಬಾಹುಬಲಿಯು ಶೃಂಗೇರಿಯಲ್ಲಿದ್ದನು. ಭೈರವರಸನ ಆಶಯದಂತೆ ನಾಗಕುಮಾರ ಚರಿತೆಯನ್ನು ಬರೆದನೆಂದು ಅಭಿಪ್ರಾಯಪಟ್ಟಿದ್ದಾರೆ. ಇತರ ಐತಿಹಾಸಿಕ ಆಧಾರಗಳಿಂದಲೂ ಈ ಅಭಿಪ್ರಾಯ ಸಮಂಜಸವಾಗಿದೆ ಎಂಬುದು ಗೊತ್ತಾಗುತ್ತದೆ.

ರತ್ನಾಕರವರ್ಣಿಯ ಕಾಲವನ್ನು 16ನೇ ಶತಮಾನದ ಮಧ್ಯಭಾಗವೆಂದು ನಿರ್ಣಯಿಸಿದ್ದಾರೆ. ಈ ವಿಚಾರದಲ್ಲಿ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ರತ್ನಾಕರ ವರ್ಣಿಯ ರತ್ನಾಕರ ಶತಕದ ಬಗ್ಗೆ ಭಿನ್ನಾಭಿಪ್ರಾಯವಿದೆ. ಅದು ಅನ್ಯ ಕವಿಕೃತ ಎಂದು ಸಾಹಿತ್ಯ ಚರಿತ್ರೆಕಾರರು ಅಭಿಪ್ರಾಯಪಡುತ್ತಾರೆ. ಶ್ರೀ ಶಾಸ್ತ್ರಿಗಳು ರತ್ನಾಕರ ಶತಕ ರತ್ನಾಕರನದ್ದೇ ಎಂದು ಪ್ರತಿಪಾದಿಸುತ್ತಾರೆ. ಈ ಅಭಿಪ್ರಾಯಕ್ಕೆ ಪೂರಕವಾಗಿ ದೇವಚಂದ್ರನ ರಾಜಾವಳೀ ಕಥೆಯಲ್ಲಿನ ಉಲ್ಲೇಖವನ್ನು ಆಧರಿಸುತ್ತಾರೆ. ರತ್ನಾಕರನು ನಿರ್ದಿಷ್ಟವಾದ ಅಂಕಿತನಾಮವನ್ನು ಇಟ್ಟುಕೊಂಡಿಲ್ಲ. ಇತರ ಶತಕಗಳಲ್ಲಿ, ಭರತೇಶ ವೈಭವದಲ್ಲಿ ರತ್ನಾಕರಾಧೀಶ್ವರಾ ಎಂಬ ಅಂಕಿತವಿಲ್ಲ. ಕೆಲವೆಡೆಗಳಲ್ಲಿ ನಿರಂಜನ ಸಿದ್ಧ, ಚಿದಂಬರ ಪುರುಷ ಎಂಬ ಹೆಸರುಗಳು ಬರುತ್ತವೆ. (ಕ್ರಿ.ಶ. 126–127) ಇವೂ ನಿಯತವಾಗಿ ಬಳಕೆಯಾಗಿಲ್ಲ. ಅಲ್ಲದೆ ಬರವಣಿಗೆಯ ಶೈಲಿ, ವಿಚಾರ ಪ್ರತಿಪಾದನೆಯ ರೀತಿ ಕವಿಯ ಮನೋಧರ್ಮ ಪದ್ಯಗಳಲ್ಲಿ ಪ್ರತಿಪಾದಿತವಾಗಿರುವ ಬಗೆಗಳಿಂದ ರತ್ನಾಕರ ಶತಕದ ಕರ್ತೃವೂ ರತ್ನಾಕರವರ್ಣಿಯೇ ಎಂಬುದು ಶಾಸ್ತ್ರಿಗಳ ಸ್ಪಷ್ಟ ಅಭಿಪ್ರಾಯವಾಗಿದೆ.

ಶ್ರೀ ಶಾಸ್ತ್ರಿಗಳು ತಾವು ಸಂಪಾದಿಸಿದ ಕಾವ್ಯಗಳಿಗೆ ಮೂಲ ಕಾವ್ಯದೊಂದಿಗೆ ಸರಳ ಗದ್ಯಾನುವಾದವನ್ನು ಕೊಟ್ಟಿದ್ದಾರೆ. ಕಥಾ ಮಾಧ್ಯಮದ ಮೂಲಕ ಕ್ಲಿಷ್ಟವಾದ ಧಾರ್ಮಿಕ ವಿಚಾರಗಳನ್ನು ಅರಿತುಕೊಳ್ಳಲು ಪದ್ಯಕ್ಕಿಂತ ಗದ್ಯವೇ ಪ್ರಭಾವಶಾಲಿಯಾದುದು ಎಂಬ ಅರಿವು ಅವರಿಗಿತ್ತು. ಸರಳವಾದ ಕನ್ನಡದಲ್ಲಿ ಆಕರ್ಷಕ ಶೈಲಿಯಲ್ಲಿರುವ ಇವರ ಗದ್ಯ ಸಾಮಾನ್ಯ ಓದುಗರಿಗೆ ಸುಲಭ ಗ್ರಾಹ್ಯವೂ, ಕಾವ್ಯಾಭ್ಯಾಸಿಗಳಿಗೆ ಸಹಾಯಕವೂ ಆಗಿದೆ. ಇಂದು ವಿಶ್ವವಿದ್ಯಾನಿಲಯಗಳು ಪ್ರಕಟಿಸುವ ಹಳಗನ್ನಡ ಗ್ರಂಥಗಳಿಗೆ ಗದ್ಯಾನುವಾದ ನೀಡುವ ಪದ್ಧತಿಯನ್ನು ಕಂಡಾಗ ಶಾಸ್ತ್ರಿಗಳು ನೀಡಿರುವ ಗದ್ಯಾನುವಾದ ಎಷ್ಟು ಉಪಯುಕ್ತ ಎನ್ನುವುದು ನಮಗೆ ಅರಿವಾಗುತ್ತದೆ.

ನೇಮಿಜಿನೇಶ ಸಂಗತಿಯಲ್ಲಿ ಕೆಲವು ಮುಖ್ಯ ಸಂದರ್ಭಗಳಲ್ಲಿ ವರ್ಣಚಿತ್ರಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. (ಉದಾ : ದೇವಕಿಯ ಕನಸು ಜಿನಬಾಲಕನನ್ನು ಪಾಂಡುಕ ಶಿಲೆಗೆ ಕರೆದೊಯ್ಯುವಿಕೆ ಇತ್ಯಾದಿ) ಪ್ರಾಯಶಃ ಇದರ ಉದ್ದೇಶ ಮಕ್ಕಳಲ್ಲೂ ಕಥಾಸಕ್ತಿಯನ್ನುಂಟುಮಾಡಿ ಅವರ ಮನಸ್ಸಿಗೆ ಸುಲಭ ಗ್ರಾಹ್ಯವಾಗುವಂತೆ ಮಾಡುವುದೇ ಆಗಿದೆ ಎಂದು ಊಹಿಸಬಹುದು.

ಈ ರೀತಿ ಶಾಸ್ತ್ರಿಗಳು ಮೇಲಿನ ಮೂರು ಕನ್ನಡ ಕೃತಿಗಳನ್ನು ಸಂಪಾದಿಸಿ ಪರಿಷ್ಕರಿಸಿ ಪ್ರಕಟಿಸಿರುವ ಕಾರ್ಯದಲ್ಲಿ ಅವರ ಸಂಶೋಧನಾ ಪರಿಣತಿ, ಧಾರ್ಮಿಕ ಜ್ಞಾನಸಂಪತ್ತು, ಸಾಹಿತ್ಯ ಪ್ರತಿಭೆ, ಗ್ರಂಥ ಸಂಪಾದನಾ ಕಾರ್ಯ ಪರಿಜ್ಞಾನ, ವಿವೇಚನಾ ಸಾಮರ್ಥ್ಯ ಇತ್ಯಾದಿ ಗುಣಗಳನ್ನು ನಾವು ಅರಿಯಬಹುದು. ಎಲ್ಲಕ್ಕಿಂತ ಮಿಗಿಲಾಗಿ ಜನಸಾಮಾನ್ಯರನ್ನು ತಲುಪಬೇಕೆಂಬ ದೃಷ್ಟಿಯಿಂದ ಮಾಡಿದ ಗದ್ಯಾನುವಾದ ಮತ್ತು ಹೆಚ್ಚು ಜನಪ್ರಿಯವಾದ ಕೃತಿಗಳನ್ನು ಗುರುತಿಸಿ ಅವುಗಳನ್ನು ಸಂಪಾದಿಸಿ ಪ್ರಕಟಪಡಿಸಿರುವುದು ಮೆಚ್ಚತಕ್ಕ ಅಂಶವಾಗಿವೆ. ಈ ರೀತಿಯ ತಮ್ಮ ಕಾರ್ಯದಿಂದ ಶಾಸ್ತ್ರಿಗಳು ಜನಪ್ರಿಯತೆಯನ್ನೂ ಪುಣ್ಯವನ್ನೂ ಸಂಪಾದಿಸಿದ್ದಾರೆ. ಇದು ಶಾಸ್ತ್ರಿಗಳಿಂದ ಕನ್ನಡಿಗರಿಗೆ, ಕನ್ನಡ ಸಾಹಿತ್ಯಕ್ಕೆ ಸಂದ ಸೇವೆಯಾಗಿದೆ.

ಸತ್ಯ-ಸಾಕ್ಷಿ

ಮನುಷ್ಯನು ಸಾಕ್ಷಿಯಿಲ್ಲದೆ ಸತ್ಯವನ್ನು ನುಡಿಯಬಾರದು. ಹಾಗೆ ನುಡಿದರೆ ಜನರು, ಸುಳ್ಳು ಹೇಳಿದವರನ್ನು ಪೀಡಿಸುವಂತೆ ಪೀಡಿಸುವರು.

ಸಾಕ್ಷಿಯು ಅಸತ್ಯವನ್ನೂ ಸತ್ಯವೆಂದು ಹೇಳಿದರೆ ಜನರು ನಂಬುತ್ತಾರೆ. ಹಾಗಲ್ಲದಿದ್ದರೆ ವಂಚಕರು ಲೋಕವನ್ನೆಲ್ಲ ವಂಚಿಸುವುದು ಹೇಗೆ ?

—ಧರ್ಮಪರೀಕ್ಷೆ (೪–೨೭, ೨೮)

ಶ್ರೀ ಶಾಸ್ತ್ರಿಗಳ ತತ್ತ್ವಗ್ರಂಥಗಳು - ಒಂದು ಪರಿಚಯ

— ಶ್ರೀಮತಿ ಶಾಂತಾ ಸನ್ಮತಿಕುಮಾರ್

ಎತ್ತೂರು ಶ್ರೀ ಶಾಂತಿರಾಜಶಾಸ್ತ್ರೀಜೀಯವರ ಜನ್ಮ ಶತಮಾನೋತ್ಸವದ ಈ ಶುಭ ಸಂದರ್ಭದಲ್ಲಿ ಅವರ ತತ್ತ್ವ-ಗ್ರಂಥಗಳ ಬಗ್ಗೆ ಮಾತನಾಡುವ ಒಂದು ಅವಕಾಶ ದೊರತಿರುವುದು ನನ್ನ ಸೌಭಾಗ್ಯವೆಂದು ಭಾವಿಸುತ್ತೇನೆ. ನಾನು ಅವರನ್ನು ನೋಡದೇ ಇದ್ದರೂ ಅವರ ಗ್ರಂಥಗಳು ಅವರನ್ನು ನೋಡಿರುವಂತೆ ಹಾಗು ಚಿರಪರಿಚಿತರಾಗಿರುವಂತೆ ಮಾಡಿವೆ. ವಿದ್ವಾನ್, ಆಸ್ಥಾನ್ ವಿದ್ವಾನ್, ಪಂಡಿತರತ್ನ ಮುಂತಾದ ಬಿರುದಾವಳಿಗಳಿಂದ ಕೂಡಿದ ಶಾಸ್ತ್ರೀಜೀಯವರು ಅಷ್ಟೇ ಸರಳ ಹೃದಯದವರಾಗಿದ್ದರೂ ಕೂಡ ಧರ್ಮದ ವಿಷಯವಾಗಿ ಧರ್ಮಕ್ಕೆ ವಿರುದ್ಧವಾದ ವಿಷಯಗಳಿದ್ದಲ್ಲಿ ಅವರು ಯಾರೇ ಆಗಿರಲಿ ಖಂಡಿಸಿ ಅವರ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸಿ ಸರಿಯಾದ ರೀತಿಯಲ್ಲಿ ಧರ್ಮದ ಪ್ರತಿಪಾದನೆಯನ್ನು ಮಾಡುತ್ತಿದ್ದರು. ಉದಾಹರಣೆಗೆ ಹೇಳುವುದಾದರೆ ಜಿ. ಪಿ. ರಾಜರತ್ನಂರವರು ಬರೆದ "ಗೌತಮಬುದ್ಧ" ಎಂಬ ಪುಸ್ತಕದಲ್ಲಿ ಅವರು ತೀರ್ಥಂಕರರ ಮೇಲೆ ಮಾಡಿದ ದೋಷಾರೋಪಣೆಯನ್ನು ಕಂಡು ಅದನ್ನು ಖಂಡಿಸಿದಲ್ಲದೆ ಆ ಪುಸ್ತಕವು ಪಠ್ಯ ಪುಸ್ತಕವಾಗುವುದನ್ನು ತಪ್ಪಿಸಿ ಬಹಳ ಉಪಕಾರ ಮಾಡಿದ್ದಾರೆ.

ಚಿಕ್ಕಂದಿನಿಂದಲೂ ಶಾಸ್ತ್ರೀಜೀಯವರಿಗೆ ಧರ್ಮದ ಮೇಲೆ ಇದ್ದ ಅಭಿಮಾನ ಒಡೆದು ಮೂಡಲು ಅವರ ಜೀವನದ ರೂವಾರಿಯಾಗಿ ಅಂದು ಶ್ರವಣಬೆಳಗೊಳದ ಸ್ವಸ್ತಿಶ್ರೀ ನೇಮಿಸಾಗರ ವರ್ಣಿಗಳು ನಿಲ್ಲಲು, ಬಾಲಕ ಶಾಂತಿರಾಜಶಾಸ್ತ್ರಿಗಳು ತಮ್ಮ ಬಾಲ್ಯದ ವಿದ್ಯಾಭ್ಯಾಸವನ್ನು ಈ ಪವಿತ್ರವಾದ ಶ್ರವಣಬೆಳಗೊಳ ಕ್ಷೇತ್ರದಲ್ಲಿ ಮುಗಿಸಿ, ಮುಂದೆ ನ್ಯಾಯತೀರ್ಥವನ್ನೂ ಸಹ ಅವರ ಸಹಾಯದಿಂದಲೇ ಮುಗಿಸಿ ಶಾಂತಿರಾಜಶಾಸ್ತ್ರಿಗಳಾಗಿ ಕನ್ನಡನಾಡಿಗೆ ಕೀರ್ತಿಶೇಷರಾದರು. ಅಂತಹ ಶಾಸ್ತ್ರೀಜೀಯವರನ್ನು ತಯಾರು ಮಾಡಿದ ಈ ಕ್ಷೇತ್ರದಲ್ಲಿಯೇ ಇಂದು ಅವರ ಈ ಜನ್ಮಶತಮಾನೋತ್ಸವ ನಡೆಯುತ್ತಿರುವುದು ನಿಜವಾಗಿಯೂ ಸಂತೋಷಕರವಾದ ಸಂಗತಿಯಾಗಿದ್ದು, ಈ ಕಾರ್ಯವನ್ನು ಈ ಕ್ಷೇತ್ರದಲ್ಲಿ ನಡೆಸಲು ಸ್ವಸ್ತಿಶ್ರೀ ಚಾರುಕೀರ್ತಿಭಟ್ಟಾರಕರು ಕಾರಣರಾಗಿರುವುದು ಕಳಸವಿಟ್ಟಂತಾಗಿದೆ. ಇಂತಹ ಶುಭ ಸಂದರ್ಭದಲ್ಲಿ ನನಗೆ ಕೊಟ್ಟ ವಿಷಯ ತತ್ತ್ವ ಗ್ರಂಥಗಳು :

ಅವರ ಹಲವಾರು ಗ್ರಂಥಗಳಲ್ಲಿ ಮುಖ್ಯವಾಗಿ ತತ್ವಕ್ಕೆ ಸಂಬಂಧಪಟ್ಟ ಗ್ರಂಥಗಳೆಂದರೆ :

1) ತತ್ತ್ವಾರ್ಥಸೂತ್ರ 2) ತತ್ವರತ್ನಪ್ರದೀಪಿಕೆ 3) ದ್ರವ್ಯಸಂಗ್ರಹಃ 4) ಧರ್ಮಪರೀಕ್ಷೆ 5) ದ್ವಾದಶಾನುಪ್ರೇಕ್ಷೆ 6) ಮಹಾಪುರಾಣ 7) ಅನ್ಯಯೋಗ ವ್ಯವಚ್ಛೇದಿಕಾ.

ಮಹಾಪುರಾಣ

ಇದು ಪುರಾಣ ಗ್ರಂಥವಾದರೂ ಇದರಲ್ಲಿಯೂ ತತ್ವದ ಪ್ರತಿಪಾದನೆ ಇರುವುದರಿಂದ ನಾನು ಇಲ್ಲಿ ಆ ಗ್ರಂಥವನ್ನೂ ತೆಗೆದುಕೊಂಡಿದ್ದೇನೆ. ಇದು ತ್ರಿಷಷ್ಟಿ ಶಲಾಕಾ ಪುರುಷರ ಚರಿತೆಯನ್ನು ಹೇಳುವ ಗ್ರಂಥವಾದರೂ ಆ ಪುರುಷರ ಜೀವನದ ಏಳುಬೀಳುಗಳನ್ನು ಕುರಿತು ಎಚ್ಚರಿಸಲು ಅವರಿಗೆ ಸಂದರ್ಭಾನುಸಾರವಾಗಿ ತತ್ವಗ್ರಂಥವೂ ಆಗಿದೆ. ಪುರಾಣ ಗ್ರಂಥವೂ ಆಗಿದೆ. ಇದರಲ್ಲಿ ತತ್ವ ಪ್ರತಿಪಾದನೆ ಮಾಡಿದ ವಿಷಯಗಳು ಬೇಕಾದಷ್ಟಿದ್ದರೂ ಇಲ್ಲಿ ಉದಾಹರಣೆಗೆ ಆದಿನಾಥರಿಂದ ಭರತನಿಗೆ ಅವರ ಪ್ರಶ್ನೆಗೆ ಉತ್ತರವಾಗಿ ತತ್ವಗಳನ್ನು ವಿಸ್ತಾರವಾಗಿ ಹೇಳುವ ಪ್ರಸಂಗವನ್ನು ಗಮನಿಸಬಹುದು. (ಸುಮಾರು 30 ಶ್ಲೋಕಗಳಲ್ಲಿ ಪುಟ 661 ರಲ್ಲಿ ಶ್ಲೋಕ 108, 109, 110 ಈ ಶ್ಲೋಕಗಳಲ್ಲಿ.)

ಜೀವದ ಗುಣ ಹಾಗು ಅದರ ಉತ್ಪತ್ತಿ ವಿನಾಶ, ಉತ್ಪತ್ತಿ ವಿನಾಶಗಳಲ್ಲಿ ಸ್ಥಿರವಾಗಿರುವ ವಸ್ತುವಿನ ಉತ್ಪತ್ತಿ, ವ್ಯಯ, ಧ್ರೌವ್ಯ ಈ ಮೂರು ಲಕ್ಷಣವುಳ್ಳ ಆತ್ಮನ ಪ್ರತಿಪಾದನೆಯನ್ನು ಮಾಡುವ ತತ್ವಜ್ಞಾನದ ವಿಷಯವನ್ನು ಜೈನಶಾಸ್ತ್ರ ವಿಶಾರದರಾದ ಶಾಸ್ತ್ರೀಜೀಯವರು ಕನ್ನಡ ಭಾಷೆಯಲ್ಲಿ ಅತ್ಯಂತ ಮನೋಹರವಾಗಿ

ಮನೋಜ್ಞವಾಗಿ ನ್ಯಾಯಬದ್ಧವಾಗಿ ಸಿದ್ಧಂತಾನುಸಾರ ವಿವರಣೆ ನೀಡಿದ್ದಾರೆ. ಇವರ ಕೃತಿ ಶ್ರೇಣಿಯಲ್ಲಿ ಈ ಮಹಾಕೃತಿಯು ಮೇರುಕೃತಿಯಾಗಿ "ಕರ್ಣಾಟಕಭಾವ ದೀಪಿಕಾ" ಎಂಬ ಹೆಸರಿನಿಂದ ಸರಳವಾಗಿ ಸುಂದರವಾಗಿ ಹೊಸಗನ್ನಡದಲ್ಲಿ ಭಾವಾರ್ಥವನ್ನೊಳಗೊಂಡು ಪ್ರಥಮ ಬಾರಿಗೆ ಹೊರಬಂದದ್ದಲ್ಲದೆ ಇದು ಕನ್ನಡ ಜನತೆಗೆ ಅತ್ಯಂತ ಉಪಯುಕ್ತವಾದ ಗ್ರಂಥವಾಗಿದೆ. ಈ ಗ್ರಂಥದಲ್ಲಿ ಕವಿಚಾತುರ್ಯ, ಅರ್ಥಗಾಂಭೀರ್ಯ, ಪದಲಾಲಿತ್ಯ, ರಸಾಲಂಕಾರ ಸೌಷ್ಠವ, ಮೊದಲಾದ ಕಾವ್ಯದ ಲಕ್ಷಣ ತುಂಬಿ ತುಳುಕುತ್ತಿದೆ. ನೀತಿಬೋಧೆ, ವೈರಾಗ್ಯ, ತತ್ತ್ವ ವಿಚಾರ, ಸಂಸಾರ ಸ್ವರೂಪ, ಮುಕ್ತಿಸ್ವರೂಪ, ಕರ್ಮ ಸ್ವರೂಪ, ಲೋಕಸ್ವರೂಪ, ಮೊದಲಾದವುಗಳು ಬಹಳ ಚೆನ್ನಾಗಿ ನಿರೂಪಿಸಲ್ಪಟ್ಟಿವೆ. ಶ್ರಮಣಸಂಸ್ಕೃತಿಯ ಮಹಾಪುರುಷರ ಪರಂಪರಾಗತ ಇತಿಹಾಸವಾಗಿದ್ದು ಇವುಗಳೆಲ್ಲ ತುಲನಾತ್ಮಕ ಅಭ್ಯಾಸಕ್ಕೆ ತುಂಬ ಸಹಕಾರಿಯಾಗಿವೆ. ಅಲ್ಲದೆ ಮಹತ್ತ್ವಪೂರ್ಣವಾದ ಭೌಗೋಳಿಕ ಸಂಗತಿಗಳೂ ಇವೆ. ಅದರಿಂದ ಇದೊಂದು ಮಹತ್ತ್ವಪೂರ್ಣಗ್ರಂಥವಾಗಿದೆ. ಶಾಸ್ತ್ರೀಜೀಯವರು ಮೂಲಕ್ಕೆ ಧಕ್ಕೆ ಬರದಂತೆ ಸುಂದರವಾಗಿ ಭಾವಾರ್ಥವನ್ನು ಬರೆದಿರುವ ಇವರ ವೈಶಿಷ್ಟ್ಯಪೂರ್ಣವಾದ ವಿದ್ವತ್ತು ಸ್ತುತ್ಯಾರ್ಹವಾಗಿದೆ. ಈ ಗ್ರಂಥವು ಧಾರ್ಮಿಕ ಹಾಗೂ ಸಾಂಸ್ಕೃತಿಕ ಮಹತ್ವದ ಸಂಗತಿಗಳ ಅಧ್ಯಯನಕ್ಕೆ ಆಕರವಾಗಿದೆ. ಇಂತಹ ಮಹಾಗ್ರಂಥದ ಅನುವಾದದ ಆವಶ್ಯಕತೆ ಕನ್ನಡಕ್ಕೆ ಇದ್ದ ಕಾಲದಲ್ಲಿ ಇದನ್ನು ಶಾಸ್ತ್ರೀಜೀಯವರು ತಿಳಿಗನ್ನಡಕ್ಕೆ ಅನುವಾದಿಸಿ ಮಹದುಪಕಾರ ಮಾಡಿದ್ದಾರೆ.

ತತ್ತ್ವಾರ್ಥ ಸೂತ್ರ

ಇದು ಉಮಾಸ್ವಾಮಿಗಳ ಗ್ರಂಥವಾಗಿದ್ದು ಇದನ್ನು ಸಂಸ್ಕೃತದಲ್ಲಿ ಶಾಸ್ತ್ರೀಜೀಯವರು, ಸಂಶೋಧನೆ ಮಾಡಿ ಸಂಪಾದಿಸಿದ ಗ್ರಂಥವಾಗಿದ್ದು ಈ ಗ್ರಂಥವು ನನಗೆ ಸಿಗದೆ ಇದ್ದ ಕಾರಣ ಈ ಗ್ರಂಥದ ಬಗ್ಗೆ ಹೆಚ್ಚಿನ ವಿಷಯ ತಿಳಿಸಲು ಅಸಮರ್ಥಳು. ಈ ಗ್ರಂಥದ ವ್ಯಾಖ್ಯಾನ ಗ್ರಂಥವೇ "ತತ್ತ್ವರತ್ನಪ್ರದೀಪಿಕೆ" ಎಂಬ ಗ್ರಂಥವಾಗಿದೆ. ಈ ತತ್ತ್ವಾರ್ಥಸೂತ್ರದ ಸುಖಬೋಧೆಯೆಂಬ ಸಂಸ್ಕೃತ ಟೀಕಾಸಹಿತವಾದ ಪುಸ್ತಕದ ವಿದ್ವತ್ಪೂರ್ಣವಾದ ಮುನ್ನುಡಿಯು ವಿದ್ವಾಂಸರ ಮೆಚ್ಚುಗೆಗೆ ಪಾತ್ರವಾಗಿದೆ. ಅನೇಕ ಸಂಸ್ಕೃತ ಗ್ರಂಥಗಳನ್ನು ಕನ್ನಡಕ್ಕಿಳಿಸಿದ ಧೀಮಂತ ವ್ಯಕ್ತಿಗಳಿವರು.

ತತ್ತ್ವರತ್ನಪ್ರದೀಪಿಕೆ :

ಈ ಗ್ರಂಥವು ದುರ್ದೈವದಿಂದ ಶಾಸ್ತ್ರೀಜೀಯವರ ಅವಸಾನದ ಸುಮಾರು 2 ವರ್ಷಗಳ ನಂತರ ಪ್ರಕಟವಾದ ಗ್ರಂಥವಾಗಿದೆ. ಇದು ಮೈಸೂರು ಯುನಿವರ್ಸಿಟಿಯ ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್‌ರವರ ಪ್ರಕಟಣೆಯಾಗಿದೆ. ಈ ಗ್ರಂಥದ ಮೂಲ ಕರ್ತೃಗಳು ಬಾಲಚಂದ್ರ ಮುನಿಗಳು. ಕ್ರಿ.ಶ. 1150ರ ಸುಮಾರಿನವರು ಇವರೆಂದು ತಿಳಿದು ಬರುತ್ತದೆ. ಇವರ ಟೀಕೆಯೊಂದಿಗೆ ಕನ್ನಡದಲ್ಲಿ ತತ್ತ್ವಾರ್ಥಸೂತ್ರವು ಅಚ್ಚಾಗಿರುವುದು ಇದೇ ಮೊದಲು. ತತ್ತ್ವಾರ್ಥಸೂತ್ರವು ಜೈನವೇದವೆಂದರೂ ತಪ್ಪಾಗಲಾರದು. ಜೈನವೇದದ ಅಭ್ಯಾಸವನ್ನು ಮಾಡಬೇಕೆಂದಿರುವವರಿಗೆ ಅದರಲ್ಲಿಯೂ ಕನ್ನಡ ಮಾತ್ರ ಬಲ್ಲವರಿಗೆ ಇಂತಹ ಗ್ರಂಥದ ಅವಶ್ಯಕತೆ ಬಹಳ ಇತ್ತು. ಅಲ್ಲದೆ ಇದಕ್ಕಿಂತ ಹೆಚ್ಚಾಗಿ 12ನೇ ಶತಮಾನದ ಕನ್ನಡಭಾಷೆಯ ಸ್ವರೂಪವನ್ನು ತಿಳಿಯಬೇಕೆನ್ನುವವರಿಗೆ ಈ ಗ್ರಂಥವು ಬಹಳ ಸಹಕಾರಿಯಾಗಿದೆ, ಎಂದರೂ ತಪ್ಪಾಗಲಾರದು. ಇದು ಹಳಗನ್ನಡದ ಗ್ರಂಥವಾಗಿದೆ. ಇದರಲ್ಲಿ

ಅಲ್ಪಾಕ್ಷರಂ ಸಂದಿಗ್ಧಂ ಸಾರವದ್ಗೂಢನಿರ್ಣಯಂ।
ನಿರ್ದೋಷಂ ಹೇತುಮತ್ತಥ್ಯಂ ಸೂತ್ರ
ಮಿತ್ಯುಚ್ಯತೇ ಬುಧೈಃ ॥

ಅಂದರೆ, ಅಲ್ಪಾಕ್ಷರಮುಂ ಅಸಂದೇಹಮುಂ, ಸಾರಮುಳ್ಳುದುಂ, ಪಲವುಂ ಪದಾರ್ಥಂಗಳನ್ನೊಳಗೊಂಡುಂ ಅತೀವಮನವದ್ಯಮುಂ, ಸ್ವರವ್ಯಂಜನ ಪದಚ್ಯುತ್ಯಾದಿದೋಷರಹಿತಮುಂ, ನೈಮಿತ್ತಿಕಮುಂ, ತಥ್ಯಮರ್ಥಸೂಚಕಮುಂ, ಅರ್ಥೋತ್ಪತ್ತಿನಿಮಿತ್ತಮುಂ ಅಪ್ಪುದು ಸೂತ್ರಮೆಂಬುದು, ಅದಂ ವಿವರಿಸುವುದು ವೃತ್ತಿಗ್ರಂಥಂ; ಅದರ ಮೊದಲೊಳ್ ಆಚಾರ್ಯ ಪರಂಪರೆಯಿಂ ಬಂದ ಗಾಹೆ,—

ಹೀಗೆ ಗಾಹೆ ಸೂತ್ರ, ಟೀಕೆಯನ್ನೊಳಗೊಂಡ ಈ ಗ್ರಂಥವು ತತ್ತ್ವದ ನಿರೂಪಣೆಯನ್ನು ಅತ್ಯಂತ ವಿಷದವಾಗಿ ತತ್ತ್ವಾರ್ಥ ಸೂತ್ರಕ್ಕೆ ಬರೆದ ಗ್ರಂಥವಾಗಿದೆ. ಅಲ್ಲಲ್ಲಿ ಗೊಮ್ಮಟಸಾರ ಜೀವಕಾಂಡದ ಗಾಹೆಗಳನ್ನೂ ಕೊಡಲಾಗಿದೆ. ಪುಟ 85ರಲ್ಲಿ ಬಂಧಮೋಕ್ಷಕ್ಕೆ ಕಾರಣವಾದ ಭಾವಗಳ ನಿರೂಪಣೆ ಸರಳವಾಗಿ ಚಿಕ್ಕದಾಗಿ ಚೊಕ್ಕದಾಗಿ ನಿರೂಪಣೆಗೊಂಡಿದೆ. ಹಾಗೆಯೇ ಪುಟ 88ರಲ್ಲಿಯ

ಗಾಹೆಯು ಲೆಕ್ಕದ ಮೂಲಕ ಸುದೃಷ್ಟಿಯ ವಿವರಣೆಯನ್ನು ಬಹಳ ಚೆನ್ನಾಗಿ ಮಾಡಲಾಗಿದೆ. ಈ ಎಲ್ಲ ಶ್ಲೋಕಗಳನ್ನು ಇಲ್ಲಿ ಲೇಖನ ವಿಸ್ತಾರದ ಭಯದಿಂದಾಗಿ ಬರೆಯದೆ ಪುಟ ಸಂಖ್ಯೆಯನ್ನು ಮಾತ್ರ ಕೊಡುತ್ತಿದ್ದೇನೆ. ಇದೇ ರೀತಿ ಇದರಲ್ಲಿ ಎಲ್ಲ ವಿಷಯಗಳೂ ನಮಗೆ ಸವಿಸ್ತಾರವಾಗಿ ತತ್ವರೂಪವಾಗಿ ದೊರೆಯುವ ಗ್ರಂಥ ಇದೊಂದೇ ಆಗಿದೆ. ಇಂತಹ ಗ್ರಂಥವನ್ನು ಶಾಸ್ತ್ರೀಜೀಯವರು ತಮ್ಮ ವಿದ್ವತ್ತಿನಿಂದ ಸಂಶೋಧನೆ ಮಾಡಿ ಸಂಪಾದಿಸಿದ್ದಲ್ಲದೆ ಇದಕ್ಕೆ ತಮ್ಮ ಪಾಂಡಿತ್ಯಪೂರ್ಣವಾದ ಮುನ್ನುಡಿಯನ್ನು ಬರೆದು ಅದರಲ್ಲಿ ಉಮಾಸ್ವಾಮಿಯವರ ವಿಸ್ತೃತ ಪರಿಚಯವನ್ನು ಉಲ್ಲೇಖಿಸಿದ್ದಾರೆ.

ಈ ಗ್ರಂಥದ ಕರ್ತೃಗಳಾದ ಬಾಲಚಂದ್ರ ಮುನಿಗಳು ಈ ಗ್ರಂಥವನ್ನು ಕುಮುದಚಂದ್ರ ಭಟ್ಟಾರಕರಿಗಾಗಿ ಬರೆದುದಾಗಿ ಪ್ರತಿಯೊಂದು ಅಧ್ಯಾಯದ ಕೊನೆಯಲ್ಲೂ ಹೇಳಿದ್ದಾರೆ. ಕನ್ನಡಕ್ಕೆ ಇಂತಹ ಅಮೂಲ್ಯವಾದ ಕಾಣಿಕೆಯಾದ ಈ ಗ್ರಂಥವನ್ನು ಸಂಶೋಧನೆ ಮಾಡಿ ಕನ್ನಡ ಜನತೆಗೆ ನೀಡಿದ ಕೀರ್ತಿ ಶಾಸ್ತ್ರೀಜೀಯವರಿಗೆ ಸಲ್ಲತಕ್ಕದ್ದಾಗಿದೆ. ತತ್ವಾರ್ಥಸೂತ್ರಕ್ಕೆ ಅನೇಕ ವ್ಯಾಖ್ಯಾನಕಾರರು ವ್ಯಾಖ್ಯಾನ ಮಾಡಿದ್ದರೂ ಅವೆಲ್ಲವೂ ಸಂಸ್ಕೃತದಲ್ಲಿದ್ದು ಈ "ತತ್ವರತ್ನಪ್ರದೀಪಿಕೆ"ಯು ಮೊದಲಬಾರಿಗೆ ಕರ್ನಾಟಕ ಭಾಷೆಯಲ್ಲಿ ವ್ಯಾಖ್ಯಾನಗೊಂಡ ಗ್ರಂಥವಾಗಿದೆ.

ದ್ರವ್ಯಸಂಗ್ರಹ :

ಜೈನ ಸಿದ್ಧಾಂತ ರೀತಿಯಾಗಿ ಲೋಕದಲ್ಲಿ ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ, ಕಾಲಗಳೆಂಬ 6 ವಸ್ತುಗಳು ಮೂಲ ದ್ರವ್ಯವಾಗಿರುವುದರಿಂದ ಲೋಕದಲ್ಲಿರುವ ಸಮಸ್ತ ವಸ್ತು ತತ್ವಗಳೂ ಈ ಆರರಲ್ಲೇ ಅಡಕವಾಗಿರುವುದರಿಂದ ಇದಕ್ಕೆ ಜೈನ ಸಿದ್ಧಾಂತದಲ್ಲಿ ಷಡ್‌ದ್ರವ್ಯಗಳೆಂಬ ಸಂಜ್ಞೆ ಇದೆ. ಇದರ ಭೇದ, ಪ್ರಭೇದಗಳು ಈ ಗ್ರಂಥದಲ್ಲಿ ಸಂಕ್ಷೇಪವಾಗಿ ಸಂಗ್ರಹಿಸಲ್ಪಟ್ಟಿರುವುದರಿಂದ ಇದಕ್ಕೆ ದ್ರವ್ಯಸಂಗ್ರಹವೆಂಬ ಹೆಸರು ಅನ್ವರ್ಥವಾಗಿದೆ. ಇದು ಜೈನೇತರರಿಗೂ ತತ್ವವನ್ನು ಸುಲಭವಾಗಿ ಬೋಧಿಸುವ ಗ್ರಂಥವಾಗಿದೆ. ತತ್ವದ ವಿಷಯಗಳನ್ನು ಹೊಸಗನ್ನಡದಲ್ಲಿ ಪ್ರಕಟಿಸಿದ ಮೊದಲ ಗ್ರಂಥವಾಗಿದೆ. ಈ ಗ್ರಂಥದ ಮೂಲ ಕರ್ತೃಗಳು ಶ್ರೀ ನೇಮಿಚಂದ್ರಾಚಾರ್ಯರು. ಇದು ಮಾಗಧಿ ಭಾಷೆಯಲ್ಲಿ 58 ಗಾಥೆಯಲ್ಲಿ ಸಂಸ್ಕೃತದ ಛಾಯೆಯೊಡನೆ ಬರೆದ ಗ್ರಂಥವಾಗಿದೆ. ಈ ಗ್ರಂಥಕ್ಕೆ ಶಾಸ್ತ್ರೀಜೀಯವರು ಅನ್ವಯಾರ್ಥ ಹಾಗು ತಾತ್ಪರ್ಯಾರ್ಥಗಳನ್ನು ಬರೆದು ಕನ್ನಡದ ಜನತೆಗೆ ಮಹದುಪಕಾರವನ್ನು ಮಾಡಿದ್ದಾರೆ. ಈ ಗ್ರಂಥದಲ್ಲಿ ಷಡ್‌ದ್ರವ್ಯ, ಪಂಚಾಸ್ತಿಕಾಯ, ಸಪ್ತ ತತ್ವ, ನವಪದಾರ್ಥಗಳೆಂಬ ಜೈನ ಸಿದ್ಧಾಂತದ 27 ಮುಖ್ಯ ತತ್ವಗಳೂ, ವ್ಯವಹಾರ ನಿಶ್ಚಯ ಮೋಕ್ಷ ಮಾರ್ಗವೂ, ರತ್ನತ್ರಯಗಳೂ, ಪಂಚಪರಮೇಷ್ಠಿಗಳ ಸ್ವರೂಪವೂ, ಪಂಚನಮಸ್ಕಾರಮಂತ್ರ, ಧ್ಯಾನಧ್ಯೇಯ ಮೊದಲಾದ ವಿಷಯಗಳೂ ಇವೆ. ತಾತ್ಪರ್ಯಾರ್ಥದಲ್ಲಿ ಅವಶ್ಯವಿದ್ದಲ್ಲಿ ವಿಸ್ತಾರವಾಗಿ ತಿಳಿಸಿ ಜನಸಾಮಾನ್ಯರಿಗೆ ತಿಳಿಯುವಂತೆ ಬರೆದಿದ್ದಾರೆ. ಇದರ 2ನೇ ಪದ್ಯದಲ್ಲಿ—

ಜೀವೋ ಉವಓಗಮಓ ।
ಅಮುತ್ತಿ ಕತ್ತಾ ಸದೇಹ ಪರಿಮಾಣೋ ।
ಭೋತ್ತಾ ಸಂಸಾರತ್ಥೋ ।
ಸಿದ್ಧೋ ಸೋ ವಿಸ್ಸಸೋಡ್ಢಗಈ ॥

ಈ ಮೇಲಿನ ಪದ್ಯದಲ್ಲಿ ಜೀವದ 9 ಗುಣಗಳನ್ನು ವಿವರಿಸಿ ಚಾರ್ವಾಕ ಸಾಂಖ್ಯಾದಿ ಮತಗಳ ಭ್ರಾಂತಿಯನ್ನು ನಿವಾರಣೆಮಾಡಲು 9 ಅಧಿಕಾರಗಳಿಂದ ಜೀವ ದ್ರವ್ಯವನ್ನು ವರ್ಣಿಸಲು ಕಾರಣವಾಗಿ ಮೊದಲನೆಯದಾಗಿ ಜೀವಸ್ವರೂಪವರ್ಣನೆಗೆ ಸಂಬಂಧಪಟ್ಟ ಗಾಹೆಯಲ್ಲಿ—

ತಿಕ್ಕಾಲೇ ಚದುಪಾಣಾ ।
ಇಂದಿಯಬಲಮಾಉ ಆಣಪಾಣೋ ಯ ।
ವವಹಾರಾ ಸೋ ಜೀವೋ ।
ಣಿಚ್ಚಯಣಯದೋ ದು ಚೇದಣಾಜಸ್ಸ ॥

ಎಂಬುದರಿಂದ ಪ್ರಾರಂಭವಾಗಿ ಧ್ಯಾನದ ಲಕ್ಷಣದವರೆಗೆ ಸರಳವಾಗಿ ಸುಂದರವಾಗಿ ಕನ್ನಡದಲ್ಲಿ ತಾತ್ಪರ್ಯವೃತ್ತಿಯು ಶಾಸ್ತ್ರೀಜೀಯವರಿಂದ ಮೂಡಿ ಬಂದಿದೆ.

ಧರ್ಮ ಪರೀಕ್ಷೆ :

ಇದು ಶ್ರೀ ಅಮಿತಗತ್ಯಾಚಾರ್ಯರಿಂದ ರಚಿಸಲ್ಪಟ್ಟ ಗ್ರಂಥವಾಗಿದ್ದು ಇದು ಇಬ್ಬರು ಮಿತ್ರರಿಗೆ ಸಂಬಂಧಿಸಿದ ಕಥೆಯಾಗಿದ್ದು ಅವರಲ್ಲಿ ಒಬ್ಬ ಸಮ್ಯಗ್ ದೃಷ್ಟಿ ಒಬ್ಬ ಮಿಥ್ಯಾದೃಷ್ಟಿಯಾಗಿದ್ದು, ಮಿಥ್ಯಾದೃಷ್ಟಿ ಸ್ನೇಹಿತನನ್ನು ಸಮ್ಯಗ್‌ದೃಷ್ಟಿಯನ್ನಾಗಿ ಮಾಡಲು ಪ್ರಯತ್ನಿಸುವ ಸಂದರ್ಭದಲ್ಲಿ ತತ್ವ ಪ್ರತಿಪಾದನೆಯನ್ನು

ಮಾಡಲು ಅನೇಕ ವಿಷಯುಗಳು ಇವರಲ್ಲಿ ಬಂದು, ಆ ವಿಷಯುಗಳ ಮೂಲಕ ತತ್ವದ ಪ್ರತಿಪಾದನೆಗೆ ಕಾರಣ ವಾಗುವುದರಿಂದ ಇವೂ ಒಂದು ತತ್ವಗ್ರಂಥವೇ ಎಂದು ಭಾವಿಸಿ ಇಷ್ಟು ಮಾತ್ರ ಇಲ್ಲಿ ಉಲ್ಲೇಖಿಸಿದ್ದೇನೆ. ಇದೂ ಸಹ ಕನ್ನಡದಲ್ಲಿ ಮಿಥ್ಯಾ ಮತವನ್ನು ಖಂಡಿಸಿ ನಿರೂಪಣೆ ಮಾಡಿದ ಉತ್ತಮವಾದ ಕನ್ನಡ ಗ್ರಂಥವಾಗಿದೆ.

ದ್ವಾದಶಾನುಪ್ರೇಕ್ಷೆ :

ಇದು ಶಾಸ್ತ್ರೀಜೀಯವರ ತತ್ವಗ್ರಂಥಗಳಲ್ಲಿ ಅತಿ ಕಿರುದಾದ ಗ್ರಂಥವಾಗಿದ್ದರೂ ಇದು ವಿವೇಕಿಯಾದ ಜೀವನಿಗೆ ಬಾರಿ ಬಾರಿಗೆ ಚಿಂತಿಸಬೇಕಾದ ವಿಷಯುವಾಗಿದೆ. ನಾನು ಯಾರು ? ಎಂತಹ ಗುಣವುಳ್ಳವನು ನಾನು ? ನಾನು ಎಲ್ಲಿರತಕ್ಕವನು ? ನಾನು ಪಡೆಯುಬೇಕಾದು ದೇನು ? ಆದಕ್ಕೆ ಸಾಧನ ಯಾವುದು ? ಎಂಬುದನ್ನು ಪ್ರತಿ ದಿನವೂ ಚಿಂತಿಸಿ ತನ್ನನ್ನು ತಾನು ಪ್ರಶ್ನಿಸಿ ತನ್ನಿಂದಲೇ ತಾನು ಉತ್ತರವನ್ನು ಪಡೆಯಲು ಕಾರಣ ವಾದ ಸಪ್ತ ತತ್ವಗಳನ್ನು ಮೆಲುಕು ಹಾಕುವುದೇ ಅನು ಪ್ರೇಕ್ಷೆಯಾಗಿದೆ. ಇದು 12 ಅನುಪ್ರೇಕ್ಷೆಗಳಿಂದ ಕೂಡಿದೆ. ಇವು 1. ಅನಿತ್ಯಾನುಪ್ರೇಕ್ಷೆ 2. ಅಶರಣಾನುಪ್ರೇಕ್ಷೆ 3. ಸಂಸಾರಾನುಪ್ರೇಕ್ಷೆ 4. ಏಕತ್ವಾನುಪ್ರೇಕ್ಷೆ 5. ಅನ್ಯತ್ವಾನುಪ್ರೇಕ್ಷೆ 6. ಅಶುಚಿತ್ವಾನುಪ್ರೇಕ್ಷೆ 7. ಆಸ್ರವಾನುಪ್ರೇಕ್ಷೆ 8. ಸಂವರಾನುಪ್ರೇಕ್ಷೆ 9. ನಿರ್ಜರಾನುಪ್ರೇಕ್ಷೆ 10. ಲೋಕಾನುಪ್ರೇಕ್ಷೆ 11. ಬೋಧಿ ದುರ್ಲಭಾನುಪ್ರೇಕ್ಷೆ 12. ಧರ್ಮಸ್ವಾಖ್ಯತತ್ವಾನು ಪ್ರೇಕ್ಷೆ ಹೀಗೆ ಚಿಂತನೆಗೆ ಅರ್ಹವಾದ 12 ಅನುಪ್ರೇಕ್ಷೆ ಗಳಾಗಿವೆ. ಅನುಪ್ರೇಕ್ಷೆಗಳನ್ನು ಸುಂದರವಾಗಿ ಬರೆದು ಶಾಸ್ತ್ರೀಜೀಯವರು ಈ ಗ್ರಂಥದ ಕೊನೆಯಲ್ಲಿ :

ನಿರುಪಮ ನಿರಾಪೇಕ್ಷ ನಿರ್ಭಯಃ ನಿರತಿಶಯ ನಿರ್ಮಾಯ ನಿಸ್ಪೃಹ।
ನಿರಜ ನಿರಹಂಕಾರ ನಿರ್ಮಲ ನಿತ್ಯ ನಿರ್ಲೇಪ ॥
ನಿರತ ನಿತ್ಯಾನಂದ ನಿರ್ಮದ । ನಿರಘ ನಿಷ್ಕಳ ನಿರ್ಮಲಾತ್ಮಕ ।
ನಿರಜ ನಿಜ ನಿಷ್ಕಾಮ ನಿಶ್ಚಲ ಕರುಣಸನಗೆಂದು ॥

ಎಂಬ ಶುಭ ಕಾಮನೆಯಿಂದ ಈ ಗ್ರಂಥವನ್ನು ಮುಗಿಸಿದ್ದಾರೆ. ಇದರಿಂದ ಶಾಸ್ತ್ರೀಜೀಯವರ ಮನಸ್ಸು ಎಂತಹದಾಗಿತ್ತು ಎಂಬುದನ್ನು ತಿಳಿಯಬಹುದಾಗಿದೆ.

ಅನ್ಯಯೋಗವ್ಯವಚ್ಛೇದಿಕಾ :

ಇದು ಹೇಮಚಂದ್ರಾಚಾರ್ಯ ವಿರಚಿತ ಗ್ರಂಥವಾಗಿದ್ದು ಈ ಗ್ರಂಥಕ್ಕೆ ಶಾಸ್ತ್ರೀಜೀಯವರು ಭಾವಾರ್ಥ ಪ್ರಕಾಶ ವ್ಯಾಖ್ಯೆಯೊಡನೆ ಪರಿಷ್ಕೃತ ಮಾಡಿದ್ದಾರೆ. ಪ್ರಸ್ತಾವನೆಯಲ್ಲಿ ಹೇಳಿರುವಂತೆ :—

ಪ್ರಚ್ಛನ್ನಃ ಖಲ್ವಯಮಘಮಯೈರಂಧಕಾರೈಃ ಸಮಂತಾತ್
ಪಂಥಾ ಮುಕ್ತೇಃ ಸ್ಥಪುಟಿತಗದಃ ಕ್ಲೇಶಗರ್ತೈರಗಾಧೈಃ ।
ತತ್ಕಸ್ತೇನ ವ್ರಜತಿಸುಖತೋದೇವಃ ತತ್ವಾವಭಾಸೀ
ಯದ್ಯಗ್ರೇಗ್ರೇನ ಭವತಿ ಭವದ್ಭಾರತೀರತ್ನದೀಪ ॥

ಎನ್ನುವಂತೆ ಈ ಗ್ರಂಥವು ವಸ್ತು ಸ್ವಭಾವರೂಪ ವನ್ನು ಪ್ರಕಾಶಪಡಿಸುವ ಜಿನೇಶ್ವರರ ವಚನವೆಂಬ ರತ್ನ ದೀಪವಾಗಿದೆ. ಇದು ನಿಜವಾಗಿ ನೋಡಿದರೆ ನ್ಯಾಯ ಗ್ರಂಥ. ಆದರೂ ಈ ಗ್ರಂಥದಲ್ಲಿ ನ್ಯಾಯಶಾಸ್ತ್ರ ರೀತಿ ಯಾಗಿ ತತ್ವ ವಿಮರ್ಶೆಯನ್ನು ಕೊನೆಯಲ್ಲಿ ಪುಟ 53 ರಿಂದ 72ರಲ್ಲಿ 21ನೇ ಪದ್ಯದಿಂದ 32ನೇ ಪದ್ಯದವರೆಗೆ ಮಾಡಿರುವುದರಿಂದ ಇದು ನ್ಯಾಯಗ್ರಂಥವೂ ಹೌದು ಹಾಗೂ ಅದನ್ನು ಪ್ರತಿಪಾದನೆ ಮಾಡಲು ತತ್ವವು ಬೇಕೇ ಬೇಕು. ಆದ್ದರಿಂದ ತತ್ವಗ್ರಂಥವೂ ಹೌದು ಎಂದರೆ ತಪ್ಪಾಗಲಾರದೆಂದು ಭಾವಿಸಿ ಈ ಗ್ರಂಥವನ್ನೂ ಅಳವಡಿಸಿಕೊಂಡಿದ್ದೇನೆ. ಇದರಲ್ಲಿ ಬರುವ ವಿಷಯು ನ್ಯಾಯಶಾಸ್ತ್ರ ರೀತಿಯಾಗಿ ತತ್ವವಿಮರ್ಶೆಗೆ ಒಳಗಾಗಿ ರುವುದರಿಂದ ಇದು ಜನ ಸಾಮಾನ್ಯರ ಮನಸ್ಸಿಗೆ ಹಿಡಿಯ ಲಾರದ ಗ್ರಂಥವಾಗಿದ್ದರೂ ಶಾಸ್ತ್ರೀಜೀಯವರು ಶ್ರಮ ವಹಿಸಿ ಸಾಧ್ಯವಾದಷ್ಟು ಸುಲಭರೀತಿಯಲ್ಲಿ ಬರೆದಿದ್ದು ನ್ಯಾಯಶಾಸ್ತ್ರರೀತಿಯಾಗಿ ತತ್ವವಿಮರ್ಶೆಯನ್ನು ಮಾಡು ವವರಿಗೆ ಇದು ಆಧಾರ ಗ್ರಂಥವಾಗಿದೆ, ಎಂದರೆ ತಪ್ಪಾಗ ಲಾರದು.

"ಜನರು ಯಥಾರ್ಥವಾದ ವಸ್ತುಸ್ವರೂಪವನ್ನು ವಿಚಾರಮಾಡಿ ತಿಳಿದು ಆತ್ಮಕಲ್ಯಾಣಾಭಿಮುಖರಾಗಲೆಂಬ ಸದುದ್ದೇಶದಿಂದ ಪೂರ್ವಾಚಾರ್ಯರ ವಚನಾನುಸಾರ ವಾಗಿ ನಾವು ಸೃಷ್ಟಿಕರ್ತೃತ್ವ ಮೊದಲಾದ ವಿಷಯು ಗಳನ್ನು ವಿಚಾರ ಮಾಡಿರುವುದೇ ಹೊರತಾಗಿ ಯಾವ ಮತವನ್ನೂ ಖಂಡನೆಮಾಡಿ ಮತಾವಲಂಬಿಗಳ ಮನ ನೋಯಿಸಲು ಬರೆದಿಲ್ಲ" ಎಂದು ಲೇಖಕರೇ ಹೇಳಿ ಕೊಂಡಿದ್ದಾರೆ. ಹೀಗೆ ಇದೂ ಒಂದೂ ತತ್ತ್ವವನ್ನೊಳ ಗೊಂಡ ಗ್ರಂಥವಾಗಿದೆ. ○

ಗ್ರಂಥಗಳ ಪರಿಚಯ





MAHAPURANAM

Dedicated and Presented at the Jaina Conference,
held at ShraVanabelgola on 26—2—1940.
to His Highness the Maharaja of Mysore.

To,

B. Krishnappa Esqr. M.A.

with the best compliments of

9-12-23 }
Mysore }

A. Shanthiraja Shastri

PALACE VIDWAN, NYAYATHEERTHA
A. Shanthiraja Shastry
EDITOR.
VIVEKABHYUDAYA

SHANTHINILAYA.
Mysore 1st July 1939

ಪ್ರಮಾಣಪತ್ರ.

ಹೆಚ್. ಪಿ. ಕೃಷ್ಣನು ಮೈಸೂರು ಎಂ. ಎಲ್. ಜೈನವಿದ್ಯಾರ್ಥಿನಿಲ-
ಯದ ವಿದ್ಯಾರ್ಥಿಯಾಗಿರುವುದರಿಂದ ಈತನನ್ನು ನಾನು ಚೆನ್ನಾಗಿ ಬಲ್ಲೆನು.
ಈತನು ಸದಾಚಾರಿಯೂ ವಿನಯಶೀಲನೂ ಮೇಧಾವಿಯೂ ಆದ ವಿದ್ಯಾರ್ಥಿ.
[illegible] ಉತ್ತೀ-
ರ್ಣನಾಗುತ್ತ ಬಂದಿದ್ದಾನೆ. ಎಲ್. ಎಸ್. ಮತ್ತು ಎಸ್. ಎಸ್. ಎಲ್. ಸಿ. ಪರೀ-
ಕ್ಷೆಗಳಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣನಾಗಿದ್ದಾನೆ. ಈ ವರುಷ
[illegible]
ಕ ವಿಷಯಗಳಲ್ಲಿ (optionals) ದ್ವಿತೀಯ ಶ್ರೇಣಿಯಲ್ಲಿ ಉತ್ತೀ-
ರ್ಣನಾಗಿದ್ದಾನೆ. ಈತನು ಮೈಸೂರಿನ ವಿದ್ಯಾರ್ಥಿನಿಲಯದ ವಿದ್ಯಾ-
ರ್ಥಿಗಳ ಸಂಘದ ಕಾರ್ಯದರ್ಶಿಯಾಗಿದ್ದು ದಕ್ಷತೆಯಿಂದ ಹಲವು
ಕಾಲ ಕೆಲಸ ಮಾಡಿದ್ದಾನೆ. [illegible]
[illegible]
[illegible]
[illegible]

A. Shanthiraja Shastry

ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿಗಳ ಇಂಗ್ಲಿಷ್ ಹಾಗೂ ಕನ್ನಡ ಹಸ್ತಲಿಪಿ

ಮಹಾಪುರಾಣ

—ಡಾ॥ ಹಂಪನಾ

ರಾಮಾಯಣ, ಮಹಾಭಾರತ, ಬೃಹತ್ಕಥಾ, ಮಹಾಪುರಾಣ—ಈ ನಾಲ್ಕು ಮಹಾಕೃತಿಗಳು ಭಾರತೀಯ ವಾಙ್ಮಯಕ್ಕೆ ಮೂಲ ಆಕರ. ವಾಲ್ಮೀಕಿ ರಾಮಾಯಣ, ವ್ಯಾಸಭಾರತ, ಗುಣಾಢ್ಯನ ಬೃಹತ್ಕಥೆಗೆ ಸಮತುಲ್ಯವಾದ ಸ್ಥಾನಮಾನ, ಹಿನ್ನೆಲೆ ಪರಂಪರೆ ಇರುವ ಉದ್ಘೃಕೃತಿ ಮಹಾಪುರಾಣ.

ಸಮಸ್ತ ಜೈನಗ್ರಂಥರಾಶಿಯಲ್ಲಿ ಮಹಾಪುರಾಣ ಮುಡಿಯ ಮಾಣಿಕ್ಯ. ಕರ್ನಾಟಕ ಮತ್ತು ಕನ್ನಡ ಸಾಹಿತ್ಯದೊಂದಿಗೆ ಅದಕ್ಕೊಂದು ಅವಿಭಾಜ್ಯ ಸಂಬಂಧ ವಿದೆ. 10ನೆಯ ಶತಮಾನದ ಅನಂತರ ರಚಿಸಿದ ಭಾರತೀಯ ಭಾಷೆಗಳಲ್ಲಿರುವ ಜೈನಪುರಾಣಗಳಿಗೆ ಮಹಾಪುರಾಣ ಮೂಲ ಮಾತೃಕೆ. ಕನ್ನಡ ಜೈನ ಕವಿಗಳಿಗೆ ಅದು ತಾಯಿಬೇರು, ತಲಕಾವೇರಿ. ಪಂಪ, ಪೊನ್ನ, ರನ್ನ, ಜನ್ನರಾದಿಯಾಗಿ ಅನೇಕ ಕನ್ನಡ ಕವಿಗಳು ಇದರಲ್ಲಿ ಈಸಾಡಿ ಕ್ರೀಡಿಸಿದ್ದಾರೆ. ಜೈನ ಪುರಾಣಗಳ ಪ್ರೇರಣೆ ಪರಿಕಲ್ಪನೆಗಳು ಬಂದಿರುವುದು ಮಹಾಪುರಾಣದಿಂದ. ಅಲ್ಲಿಯ ಪ್ರಮೇಯ ಪ್ರಕ್ರಿಯೆಗಳು ಇಲ್ಲಿ ಅನುರಣಿತ ವಾಗಿವೆ. ಅಲ್ಲಿಯ ಶೈಲಿ ಅಲಂಕಾರ ಪರಿಭಾಷೆ ಒಟ್ಟು ಚೌಕಟ್ಟು ಕನ್ನಡ ಕವಿಗಳಿಗೆ ಮೇಲ್ಪಂಕ್ತಿಯಾಯಿತು. ಮಹಾಪುರಾಣದ ಋಣಭಾರದಿಂದ ಕನ್ನಡ ಜೈನ ಪುರಾಣಗಳು ಜಗ್ಗಿವೆಯೋ ಹೊರತು ಮಹಾಪುರಾಣ ಸೂರೆ ಹೋಗಿಲ್ಲ. ಅದು ಮೊಗೆ ಮೊಗೆದಷ್ಟೂ ಮುಗಿಯದ ಅಕ್ಷಯ ಕಾವ್ಯ. ಮಹಾಪುರಾಣ ಕಾವ್ಯಕ್ಕೆ ಕಾವ್ಯ, ಪುರಾಣಕ್ಕೆ ಪುರಾಣ. ಅದರ ಉದ್ದಕ್ಕೂ ಧರ್ಮ ಪ್ರಧಾನ, ಕಾವ್ಯ ಆನುಷಂಗಿಕ ; ಅಲ್ಲಲ್ಲಿ ಕಥೆ–ಕಾವ್ಯ ಪ್ರಮುಖವಾಗಿ ಧರ್ಮ ಗೌಣವಾದ ರಸಾರ್ದ್ರಭಾಗಗಳೂ ಇವೆ.

9ನೆಯ ಶತಮಾನದ ಮೇರುಕೃತಿ ಮಹಾಪುರಾಣ ಸಂಸ್ಕೃತದಲ್ಲಿದೆ. ಮಹಾಪುರಾಣವೆಂಬುದು ಅದರ ಗ್ರಂಥ ಗಾತ್ರದಿಂದಾಗಿ ರೂಢಿಗೆ ಬಂದ ಜನಪ್ರಿಯ ಹೆಸರು. ತ್ರಿಷಷ್ಟಿ ಶಲಾಕಾಪುರುಷ ಚರಿತೆ ಎಂಬುದು ಅದರ ನಿಜ ನಾಮಧೇಯ. ಜಿನಸೇನ–ಗುಣಭದ್ರರೇ ಅಲ್ಲದ ಚಾವುಂಡರಾಯ, ಪುಷ್ಪದಂತ ಮೊದಲಾದವರು ಆ ಹೆಸರನ್ನು ಬಳಸಿರುತ್ತಾರೆ. ಜೈನರಿಗೆ ಆದರಣೀಯವಾಗಿರುವ ಮಹಾಪುರಾಣದಲ್ಲಿ ಎರಡು ಭಾಗಗಳಿವೆ, ೨೦ ಸಾವಿರ ಶ್ಲೋಕಗಳಿವೆ. ಮೊದಲನೆಯ ಭಾಗಕ್ಕೆ ಪೂರ್ವಪುರಾಣವೆಂದೂ, ಎರಡನೆಯ ಭಾಗಕ್ಕೆ ಉತ್ತರಪುರಾಣವೆಂದೂ ಅಡ್ಡ ಹೆಸರು. ಪೂರ್ವಪುರಾಣದಲ್ಲಿ ೧೨ ಸಾವಿರ ಮತ್ತು ಉತ್ತರ ಪುರಾಣದಲ್ಲಿ 8 ಸಾವಿರ ಶ್ಲೋಕಗಳಿವೆ.

ಈ ಇಡೀ ಬೃಹತ್‌ಕೃತಿಯನ್ನು ಜಿನಸೇನಾಚಾರ್ಯನು ಬರೆಯಲು ತೊಡಗಿ 10,380 ಶ್ಲೋಕಗಳನ್ನು ರಚಿಸಿ ವಿಧಿವಶನಾದನು. ಜಿನಸೇನಾಚಾರ್ಯನ ಪ್ರಿಯ ಶಿಷ್ಯ ಗುಣಭದ್ರಾಚಾರ್ಯನು ಪೂರ್ವಪುರಾಣದಲ್ಲಿ ಉಳಿದ 1620 ಶ್ಲೋಕಗಳನ್ನೂ, ಉತ್ತರ ಪುರಾಣದ 8 ಸಾವಿರ ಶ್ಲೋಕಗಳನ್ನೂ ಬರೆದು ಪೂರೈಸಿದನು. ಪೂರ್ವ ಪುರಾಣವನ್ನು ಆದಿಪುರಾಣವೆಂದೂ ಕರೆಯುವರು. ಪೂರ್ವಪುರಾಣ (ಆದಿಪುರಾಣ) ಜಿನಸೇನನ ಅಗಾಧಶಾಸ್ತ್ರ ಜ್ಞಾನ–ಲೋಕಜ್ಞಾನದೊಂದಿಗೆ ಕಾವ್ಯಶಕ್ತಿಯನ್ನೂ ಪ್ರತಿಬಿಂಬಿಸುತ್ತದೆ. ಇದು ಭಾರತೀಯ ಜೀವನದ ಒಂದು ವಿಶ್ವಕೋಶ. ಆ ಕಾಲದ ರಾಜಕೀಯ ಆರ್ಥಿಕ ಸಾಮಾಜಿಕ ಸಾಂಸ್ಕೃತಿಕ ವಿಷಯಗಳಿಗೆ ಈ ಮಹಾಪುರಾಣ ದಿಕ್ಸೂಚಿ.

ನಿರಂತರವೂ ದೀರ್ಘವೂ ವ್ಯಾಪಕವೂ ಆದ ಚಾರಿತ್ರಿಕ–ಸಾಂಸ್ಕೃತಿಕ ಮಹತ್ವವಿರುವ ಮಹಾಪುರಾಣ ಕೂಡ ಶೂನ್ಯದಿಂದ ರೂಪಗೊಳ್ಳಲಿಲ್ಲ. ಅದು ತನಗಿಂತ ಹಿಂದೆ ರಚಿತವಾಗಿದ್ದ, ಸಮಾನ ವಸ್ತುವನ್ನೊಳಗೊಂಡ ಗ್ರಂಥಗಳ ಮುಂದುವರಿಕೆಯಾಗಿದೆ. ಶ್ರಮಣ ಸಂಸ್ಕೃತಿಯ

ಕೆನೆಯಂತಿರುವ ಮಹಾಪುರಾಣ ಪರಂಪರೆಯ ಸಿದ್ಧತೆಯನ್ನು ಚಾವುಂಡರಾಯ ದಾಖಲಿಸಿದ್ದಾನೆ :

ವಿರಚಿಸಿದರ್ ಮುನ್ನೆ ಮಹಾ
ಪುರಾಣಮಂ ನೆಗಳ್ದ ಕೂಚಿಭಟ್ಟಾರಕರುಂ
ಪರಮಶ್ರೀ ನಂದಿ ಮುನೀ
ಶ್ವರರುಂ ತದನಂತರಂ ಜಿನಾಗಮ ತಿಲಕರ್ ॥

ಇಲ್ಲಿ ಚಾವುಂಡರಾಯ ಕೊಟ್ಟಿರುವ ಮಾಹಿತಿ ಪರಿಭಾವನಾರ್ಹ. ಮಹಾಪುರಾಣಕ್ಕೊಂದು ಕ್ರಮಪ್ರಾಪ್ತ ಪರಂಪರೆಯಿದೆ. ಕೂಚಿಭಟ್ಟಾರಕರು, ನಂದಿಮುನೀಶ್ವರರು, ಕವಿಪರಮೇಶ್ವರರು, ಜಿನಸೇನ–ಗುಣಭದ್ರರು, ಪುಷ್ಪದಂತ ಕವಿ, ಚಾವುಂಡರಾಯ–ಹೀಗೆ ಕ್ರಮವಾಗಿ ಅದನ್ನು ಬರೆದಿದ್ದಾರೆ. ಇವರಲ್ಲಿ ಮೊದಲ ಮೂವರು ಬರೆದ ಮಹಾಪುರಾಣಗ್ರಂಥ ಇಂದಿನವರೆಗೂ ದೊರೆತಿಲ್ಲ. ಉಪಲಬ್ಧವಾಗಿರುವ ಪ್ರಥಮ ಮಹಾಪುರಾಣವೆಂದರೆ ಮಹರ್ಷಿಗಳಾದ ಜಿನಸೇನ–ಗುಣಭದ್ರರದು. ತ್ರಿಷಷ್ಟಿ ಶಲಾಕಾಪುರುಷ ಸಂಬಂಧವಾದ ಕಥೆ ಕಲ್ಪನೆಗಳನ್ನು ಒಂದು ಬೃಹತ್ ಕಾವ್ಯದ ಬಂಧಕ್ಕೆ ಅಳವಡಿಸಿದ ಹಿರಿಮೆ ಮಹಾಪುರಾಣಕಾರರದು. ಪರಂಪರೆಯ ಹರಿಕಾರನಾಗಿ ಮಹಾಪುರಾಣ ಮಾಡಿರುವ ಪರಿಣಾಮ ಅವಿಸ್ಮರಣೀಯವಾದುದು.

ಮಹಾಪುರಾಣ ಸಂಬಂಧವಾದ ಇಡೀ ಕಲ್ಪನೆ–ಕೊಡುಗೆ ಕರ್ನಾಟಕದ್ದು. ಅದರ ಬೇರುಗಳೆಲ್ಲೊ ಪ್ರಾಚೀನ ಪ್ರಾಕೃತ ಆಗಮ ಸಾಹಿತ್ಯದಲ್ಲಿವೆ ; ಅದರ ಕಾಂಡ ಕೊಂಬೆಗಳು ಕರ್ನಾಟಕದಲ್ಲಿವೆ. ಮಹಾಪುರಾಣದ ರಚನೆ ಅಂಕುರಿಸಿದ್ದು ಮಳಖೇಡ (ಮಾನ್ಯಖೇಟ)ದಲ್ಲಿ, ಅದು ಪಲ್ಲವಿಸಿದ್ದು ಬಂಕಾಪುರದಲ್ಲಿ. ಗುಲ್ಬರ್ಗ ಜಿಲ್ಲೆಯ ಸೇಡಂ ತಾಲೂಕಿನಲ್ಲಿರುವ ಮಳಖೇಡವೂ, ಧಾರವಾಡ ಜಿಲ್ಲೆಯ ಶಿಗ್ಗಾಂವಿ ತಾಲೂಕಿನಲ್ಲಿರುವ ಬಂಕಾಪುರವೂ ಇಂದು ಜೈನಕುರುಹುಗಳನ್ನು ಬಹುವಾಗಿ ಕಳೆದುಕೊಂಡಿವೆ. ಆದರೆ ಈ ಎರಡೂ ಕಡೆಯಲ್ಲಿ ಹುಟ್ಟಿದ ಮಹಾಪುರಾಣಗ್ರಂಥ ಚೈತ್ಯಾಲಯ ಅಳಿಯದೆ ಉಳಿದು ಬಂದಿದೆ. 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂಬ ಲಕ್ಷಣಕ್ಕೆ ಇದೊಂದು ಲಕ್ಷ್ಯವಾಗಿದೆ. ಮಹಾಪುರಾಣದ ಪ್ರಭಾವ ಕಾವ್ಯಗಳಲ್ಲಿ ಶಾಸನಗಳಲ್ಲಿ ಶಿಲ್ಪ ಚಿತ್ರಕಲೆಯಲ್ಲಿ, ಆಚಾರ್ಯ ಪರಂಪರೆಯಲ್ಲಿ ಕೆನೆಕಟ್ಟಿದೆ. ಚಾವುಂಡರಾಯ ಪುರಾಣ, ವಡ್ಡಾರಾಧನೆ ಮತ್ತು ಕೆಲವು ಟೀಕು ವೃತ್ತಿ ವ್ಯಾಖ್ಯಾನಗಳಲ್ಲಿ ಮಹಾಪುರಾಣದ ಶ್ಲೋಕಗಳು ಉದಾಹೃತವಾಗಿವೆ.

ಮಹಾಪುರಾಣದ ಪವಿತ್ರತೆ, ನಿಮಿತ್ತವನ್ನು ನೋಡುವ ವಿಧಾನ ಕುರಿತು ಜಿನಸೇನಾಚಾರ್ಯನ ವಿವರಣೆ : "ಈ ಪುರಾಣವನ್ನು ಋಷಿಗಳು ಹೇಳಿರುವುದರಿಂದ ಇದು ಪ್ರಮಾಣವೂ ಸಂಪೂರ್ಣವಾಗಿ ಸತ್ಯವೂ ಆಗಿರುತ್ತದೆ. ಆದುದರಿಂದ ಆತ್ಮಕಲ್ಯಾಣವನ್ನು ಇಚ್ಛಿಸುವವರು ಇದನ್ನು ನಂಬಬೇಕು, ಅಧ್ಯಯನ ಮಾಡಬೇಕು, ಧ್ಯಾನಿಸಬೇಕು. ಈ ಪುರಾಣವು ಪುಣ್ಯದಾಯಕವೂ ಪವಿತ್ರವೂ ಉತ್ತಮವಾದ ಮಂಗಲ ಸ್ವರೂಪವೂ ಆಯುಷ್ಯವರ್ಧಕವೂ ಕೀರ್ತಿಯನ್ನುಂಟು ಮಾಡುವುದೂ ಸ್ವರ್ಗದಾಯಕವೂ ಆಗಿರುತ್ತದೆ. ಈ ಪುರಾಣವನ್ನು ಪೂಜಿಸುವವರಿಗೆ ದುಃಖ ಶಾಂತಿಯೂ ಸಂದೇಹ ನಿವಾರಣೆಗೋಸುಗ ಪ್ರಶ್ನೆ ಮಾಡುವವರಿಗೆ ಆನಂದವೂ ಪುಷ್ಟಿ–ಜ್ಞಾನವೃದ್ಧಿಯೂ ಓದುವವರಿಗೆ ಕ್ಷೇಮವೂ ಆರೋಗ್ಯವೂ ಕೇಳುವವರಿಗೆ ಕರ್ಮ ನಿರ್ಜರೆಯೂ ಆಗುವುವು. ಈ ಪುರಾಣ ಪೂಜನ, ಪೃಚ್ಛನಾ, ಪಠನ, ಶ್ರವಣಾದಿಗಳಿಂದ ದುಃಸ್ವಪ್ನಗಳ ನಾಶವೂ ಸುಸ್ವಪ್ನಗಳ ವೃದ್ಧಿಯೂ ನಿಮಿತ್ತ ಶಕುನವನ್ನು ನೋಡುವವರಿಗೆ ಇಷ್ಟಫಲ (ಶುಭಾಶುಭ ಶಕುನ ಫಲ) ಪ್ರಾಪ್ತಿಯೂ ಉಂಟಾಗುವುವು. ಇಂತಹ ಪವಿತ್ರ ಗ್ರಂಥವು ಮನೆಯಲ್ಲಿರುವುದು ಮಂಗಲಕರವೆಂದು ಭಾವಿಸಿ ಅನೇಕರು ಇದನ್ನು ತಮ್ಮ ಮನೆಗಳಲ್ಲಿಟ್ಟುಕೊಂಡು ಪೂಜಿಸುತ್ತಿರುವರು." (ಅನು: ಶಾಂತಿರಾಜ ಶಾಸ್ತ್ರಿಗಳದು) ಈ ವಿವರಣೆಯಲ್ಲಿ ಮಹಾಪುರಾಣಕ್ಕೆ ಅತೀಂದ್ರಿಯ ಮಹಿಮೆಯಿದೆಯೆಂದು ತೋರಿಸುವುದಕ್ಕಾಗಿ ವಸ್ತುಸ್ಥಿತಿಯನ್ನು ಬಹುವಾಗಿ ಉತ್ಪ್ರೇಕ್ಷಿಸಲಾಗಿದೆ.

ರಾಮಾಯಣ–ಮಹಾಭಾರತಗಳಿಗೆ ಹೊಯ್‌ಕಯ್ ಆಗಿ ಹತ್ತಿರ ಬರುವ ಮಹಾಪುರಾಣ ಕುರಿತ ಸಮಗ್ರ ವಿಮರ್ಶೆ ಕನ್ನಡದಲ್ಲಿ ಇನ್ನೂ ತನಕ ಆಗಿಲ್ಲ. ಸಾಹಿತ್ಯಕ ಸಾಂಸ್ಕೃತಿಕ ಚಾರಿತ್ರಿಕ ಮಾನವಿಕ ಸೈದ್ಧಾಂತಿಕ ಅಧ್ಯಯನ ನಿರತ ಸಂಶೋಧಕರಿಗೆ ಅದು ಕನ್ನೆನೆಲ ; ವಿಮರ್ಶಕರಿಗೆ ಹಸಿರು ನಿಶಾನೆ ಬೀಸುತ್ತಿದೆ. ಆ ದಿಕ್ಕಿನಲ್ಲಿಡುವ ವಿದ್ವಾಂಸರ ಒಂದೊಂದು ಹೆಜ್ಜೆಯೂ ಜಲಚಿಹ್ನೆಯಾಗಿ ಉಳಿಯುತ್ತದೆ. ಶಾಲಾ ಕಾಲೇಜು ವಿಶ್ವವಿದ್ಯಾನಿಲಯಗಳಲ್ಲಿ ಮಹಾಪುರಾಣಕ್ಕೆ ದಿವ್ಯ ನಿರ್ಲಕ್ಷ್ಯವನ್ನು

ತೋರಲಾಗುತ್ತಿದೆ. ಇನ್ನಾದರೂ ಸಂಸ್ಕೃತ ಹಿಂದಿ ಮತ್ತು ತತ್ವಶಾಸ್ತ್ರ ವಿಭಾಗ–ಇಲಾಖೆಗಳಲ್ಲಿ ಮಹಾಪುರಾಣವನ್ನು ಕಲಿಸುವ ಅಗತ್ಯವಿದೆ. ಪಠ್ಯವಾಗಿಯೂ ಪರಾಮರ್ಶನ ಸಾಹಿತ್ಯ ಕೃತಿಯಾಗಿಯೂ ಅದನ್ನು ನಿಗದಿಪಡಿಸುವುದು ಉಪಯುಕ್ತ. ಪ್ರಾಕೃತ ಭಾಷಾ–ಸಾಹಿತ್ಯ ಕಲಿಕೆಯನ್ನು ಅದರಲ್ಲಿಯೂ ಅರ್ಧಮಾಗಧಿ ಗ್ರಂಥ ಬೋಧನೆಯನ್ನು ಕಳೆದ 35 ವರ್ಷಗಳಲ್ಲಿ ಕ್ರಮೇಣ ಮೂಲೆಗೆ ತಳ್ಳಿದ್ದು ದುರ್ದೈವ. ಅದರೊಂದಿಗೆ ಸಂಸ್ಕೃತದಲ್ಲಿರುವ ಜೈನ ಸಾಹಿತ್ಯ ಕೃತಿಗಳನ್ನೂ ವ್ಯವಸ್ಥಿತವಾಗಿ ಪಠ್ಯದ ಚೌಕಟ್ಟಿನಿಂದಾಚೆಗೇ ತಳ್ಳುತ್ತಾ ಬರಲಾಗಿದೆ. ಈ ಒತ್ತರಿಸುವಿಕೆ ಹಾಗೂ ಉಪೇಕ್ಷೆಯನ್ನು ನಾವು ನಿರ್ಲಕ್ಷಿಸುವಂತಿಲ್ಲ.

ಈ ಎಲ್ಲ ಹಿನ್ನೆಲೆಯಲ್ಲಿ ಎತ್ತೂರು ಶಾಂತಿರಾಜ ಶಾಸ್ತ್ರಿಗಳ ಸೇವೆಯನ್ನು ತೂಕ ಹಾಕಬೇಕು. ಕನ್ನಡ ಜೈನ ಪುರಾಣಗಳಿಗೂ ಪ್ರಾಕೃತ ಪುಷ್ಪದಂತನ ಮಹಾಕಾವ್ಯಕ್ಕೂ ಈ ಮಹಾಪುರಾಣವೇ ಪ್ರೇರಕ ಪೂರಕ ಮಹಾ ಪೋಷಕ ಎಂಬುದು ಶಾಸ್ತ್ರಿಗಳಿಗೆ ಚೆನ್ನಾಗಿ ಮನವರಿಕೆಯಾಗಿತ್ತು. ಪಂಪನಿಂದ ಹಂಪನಾವರೆಗೆ ಮಹಾಪುರಾಣದ ಹೆಜ್ಜೆ ಗುರುತುಗಳನ್ನು ನೋಡಿದರೆ, ಮಹಾಪುರಾಣದ ಜ್ಞಾನ ಪರಿಶ್ರಮಗಳು ಜೈನ ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಎಷ್ಟೊಂದು ಮಹತ್ವದ್ದೆಂದು ಅರಿವಾದೀತು. ಸಂಸ್ಕೃತ ಭಾಷಾಜ್ಞಾನದ ಕೊರತೆಯಿರುವ ಕನ್ನಡ ಬಲ್ಲವರಿಗೆ ಮಹಾಪುರಾಣವನ್ನು ಕನ್ನಡಿಸಿ ಕೊಡಬೇಕೆಂಬ ವಿಚಾರವಾಗಿ ಈ ಮೊದಲು ಯೋಚಿಸಿದ ಆದ್ಯರು ಬ್ರಹ್ಮಸೂರಿ ಪದ್ಮರಾಜ ಪಂಡಿತರು. ಸುಮಾರು 26 ಗ್ರಂಥಗಳನ್ನು ರಚಿಸಿ-ಪ್ರಕಟಿಸಿ, ಗ್ರಂಥ ಸಂಪಾದನೆ –ಪ್ರಕಟಣೆ ಕ್ಷೇತ್ರದಲ್ಲಿ ಅಗಾಧ ಸೇವೆಯನ್ನು ಸಲ್ಲಿಸಿದ ಈ ಬಿ. ಪದ್ಮರಾಜ ಪಂಡಿತರು ಕಳೆದ ಶತಮಾನದ ಅಂತ್ಯದಲ್ಲಿ ಜಿನಸೇನನ ಪೂರ್ವಪುರಾಣ ಅರ್ಧದಷ್ಟನ್ನು ಮಾತ್ರ ಎರಡು ಭಾಗಗಳಲ್ಲಿ,ಭಾಗ-೧(1896), ಭಾಗ-೨(1897) ಕನ್ನಡ ಭಾಷಾಂತರದೊಂದಿಗೆ ಹೊರತಂದರು. ಸಂಸ್ಕೃತದಲ್ಲಿ ಘನ ವಿದ್ವಾಂಸರೂ, ಜೈನ ಸಿದ್ಧಾಂತದಲ್ಲಿ ನಿಷ್ಣಾತರೂ, ಕನ್ನಡದಲ್ಲಿ ಪ್ರಕಾಂಡ ಪಂಡಿತರೂ ಆಗಿದ್ದ ಪದ್ಮರಾಜ ಪಂಡಿತರಿಂದ ಸಮಗ್ರ ಮಹಾಪುರಾಣದ ಕನ್ನಡ ಅನುವಾದ ಕಾರ್ಯಯೋಜನೆ ಕೈಗೂಡದೆ ಅರ್ಧಕ್ಕೇ ನಿಂತುಹೋಯಿತು. ಕೆಲಸತಂದಿ ಮುಟ್ಟದೆ ಹೋದರೂ ಮಹಾಪುರಾಣವನ್ನು ಕನ್ನಡಕ್ಕೆ ಪರಿವರ್ತಿಸುವ ಮಹಾ ಸಾಹಸ ಕಾರ್ಯಕ್ಕೆ ಮೊದಲ ಗುದ್ದಲಿಪೂಜೆ ಆದದ್ದು ಪದ್ಮರಾಜ ಪಂಡಿತರಿಂದ ಎಂಬ ಸಂಗತಿ ನೆನಪಿಡಬೇಕಾದ್ದು.

ಪದ್ಮರಾಜ ಪಂಡಿತರು ಪ್ರಯತ್ನಿಸಿ ನಿಲ್ಲಿಸಿದ ಕಾರ್ಯವನ್ನು ಅವರಾದ 40 ವರ್ಷಗಳ ತರುವಾಯ ಕೈಗೆತ್ತಿಕೊಂಡು ಆರಂಭದಿಂದ ಅಂತ್ಯದವರೆಗೆ ಪರಿಷ್ಕಾರವಾಗಿ ಯಶಸ್ವಿಯಾಗಿ ಕೈಗೂಡಿಸಿದವರು ಶಾಂತಿರಾಜ ಶಾಸ್ತ್ರಿಗಳು. ಪ್ರೊ. ಕೆ. ಜಿ. ಕುಂದಣಗಾರರಿಗೂ ಇಂಥದೊಂದು ಹೊಳಹು ಇತ್ತೆಂದು ಡಾ॥ ಆ. ನೇ. ಉಪಾಧ್ಯೆ ತಿಳಿಸಿದ್ದಾರೆ. ಪಂಪನ ಆದಿಪುರಾಣವನ್ನೂ ಹಸ್ತಿಮಲ್ಲನ ಪೂರ್ವಪುರಾಣವನ್ನೂ ಸಂಪಾದಿಸಿಕೊಟ್ಟ ಪ್ರೊ. ಕೆ. ಜಿ. ಕುಂದಣಗಾರರ ವಿದ್ವತ್ತಿಗೆ ಇದೇನೂ ಅಸಾಧ್ಯವಾಗಿರಲಿಲ್ಲ. ಅದೇಕೊ ಕುಂದಣಗಾರರು ಈ ಭಾಷಾಂತರಕ್ಕೆ ತೊಡಗಲಿಲ್ಲ. ಈ ನಡುವೆ ಡಿ. ಎ. ಬೋಗಾರ ಮತ್ತು ಮಿರ್ಜಿ ಅಣ್ಣಾರಾಯರು ಮಹಾಪುರಾಣ (ಕಥಾ) ಸಾರವನ್ನು ವಿಸ್ತೃತ ಪೀಠಿಕೆ ಪರಿಶಿಷ್ಟಗಳ ಸಹಿತ ಸಿದ್ಧಪಡಿಸಿ ಪ್ರಕಟಿಸಿದರು (1962). ಅದರಲ್ಲಿ ಮೂಲ ಶ್ಲೋಕಗಳನ್ನು ಕೊಟ್ಟಿಲ್ಲ. ಕೇವಲ ತಿಳಿಗನ್ನಡದಲ್ಲಿ ವಿಸ್ತಾರವಾಗಿಯೇ ಮೂಲಕಥೆಯನ್ನು ಅನುವಾದಿಸಿ ಕೊಡಲಾಗಿದೆ. ತೀರ ಇತ್ತೀಚೆಗಷ್ಟೇ ಹುಂಚದ ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯ ಸ್ವಾಮಿಗಳವರ ಉದಾರ ಕೃಪಾಶ್ರಯದಿಂದ ಪ್ರೊ. ಜಿ. ಬ್ರಹ್ಮಪ್ಪನವರು 'ಮಹಾಪುರಾಣ' ಗದ್ಯಾನುವಾದವನ್ನು ಆಮೂಲಾಗ್ರ–ಸಮಗ್ರವಾಗಿ ಹೊರತಂದಿದ್ದಾರೆ (1986). ಹಾಗೆ ನೋಡುವುದಾದರೆ ಇಡೀ ಭಾರತೀಯ ಭಾಷೆಗಳಲ್ಲಿಯೇ ಮಹಾಪುರಾಣವನ್ನು ಅನುವಾದಿಸುವ ಪ್ರಪ್ರಥಮ ಪ್ರಯತ್ನ ನಡೆದದ್ದು ಕನ್ನಡದಲ್ಲಿ. ಚಾವುಂಡರಾಯನೇ ಅದರ ಮೊದಲ ಅನುವಾದಕ (1978). ಅವನದು ಮುಕ್ತಾನುವಾದ. ಚಾವುಂಡರಾಯನ ತರುವಾಯ ಇಡೀ ಕನ್ನಡ ಸಾಹಿತ್ಯದಲ್ಲಿ ಮಹಾಪುರಾಣವನ್ನು ಪೂರ್ತಿಯಾಗಿ ಕನ್ನಡಕ್ಕೆ ಪರಿವರ್ತಿಸಿದ ಭಗೀರಥ ಎತ್ತೂರು ಶಾಂತಿರಾಜಶಾಸ್ತ್ರಿಗಳು (1933–40). ಆದಿ ಪಂಪನೂ, ಪಂಪಪೂರ್ವದಲ್ಲಿ ಗುಣವರ್ಮಾದಿಗಳೂ ಮಹಾಪುರಾಣದ ಭಾಗಗಳಿಗೆ ಲಗ್ಗೆಹತ್ತಿದರೇ ಹೊರತು ಸಮಗ್ರ ಕೃತಿಗಲ್ಲ. ಆದರೆ ಚಾವುಂಡರಾಯನು ಪ್ರಾಯಃ

ಮಹಾಕವಿ ರನ್ನನ ಮಾರ್ಗದರ್ಶನದಲ್ಲಿ, ಸಾವಿರ ವರ್ಷಗಳ ಹಿಂದೆ, ಅಂದಿನ ಕನ್ನಡ ಭಾಷೆಗೆ ಬದಲಾಯಿಸುವ ಸಾಹಸ ಮಾಡಿದನು. ಚಾವುಂಡರಾಯನ ಅದೃಷ್ಟವೆಂದರೆ, ಅಂದು ಆತನ ಕಣ್ಮುಂದೆ ಕೂಚಿ ಭಟ್ಟಾರಕ, ಶ್ರೀನಂದಿ ಮುನೀಶ್ವರ, ಕವಿಪರಮೇಷ್ಠಿ ಮತ್ತು ಜಿನಸೇನ-ಗುಣಭದ್ರರ ವಿರಚಿತ ನಾಲ್ಕೂ ಮಹಾಪುರಾಣಗಳಿದ್ದವು. ಅವೆಲ್ಲದರ ಕಥಾಸಾರವನ್ನು ಅಳವಡಿಸಿ, ಜಿನಸೇನ–ಗುಣಭದ್ರರ ಕೃತಿಯನ್ನು ಕೇಂದ್ರವಾಗಿರಿಸಿ ಒಂದು ಮುಕ್ತ ಗದ್ಯಾನುವಾದ ಗ್ರಂಥವನ್ನು ಕನ್ನಡದಲ್ಲಿ ಬರೆದ ಕೀರ್ತಿ, ಅಗ್ರತಾಂಬೂಲ ಚಾವುಂಡರಾಯನದು.

ಶಾಂತಿರಾಜಶಾಸ್ತ್ರಿಗಳದು ಇನ್ನೂ ಒಂದು ಹೆಜ್ಜೆ ಮುಂದುವರಿದ ಕೆಲಸ. ಇವರು ಮೂಲ ಶ್ಲೋಕಗಳೊಂದಿಗೆ 'ಕರ್ಣಾಟಕ ಭಾವದೀಪಿಕಾ ವ್ಯಾಖ್ಯಾ' ರಚಿಸಿದ್ದಾರೆ. ಶಾಸ್ತ್ರಿಗಳ ಅನುವಾದ ಸಂಸ್ಕೃತ ಶಬ್ದಕ್ಕೆ ಕನ್ನಡ ಶಬ್ದ ಇಟ್ಟ ಮಕ್ಕಿಕಾಮಕ್ಕಿಯಲ್ಲ. ಅವರು ಮೂಲ ಗ್ರಂಥದ ಮಹತ್ವ-ಪರಂಪರೆ, ಜೈನಧರ್ಮ ಸಾಹಿತ್ಯದಲ್ಲಿ ಅಡಕ್ಕಿರುವ ಅದ್ವಿತೀಯ ಸ್ಥಾನ–ಈ ಹಿನ್ನೆಲೆ ಬಲ್ಲ ಜ್ಞಾನಿ. ಸ್ವಯಂ ಆ ಮುಖ್ಯಧಾರ್ಮಿಕ ಪ್ರವಾಹದಲ್ಲಿ ಬೆಳೆದು ಬಂದವರು. ಅವರಿಗಿದ್ದ ವಿದ್ವತ್ತು ಪ್ರೌಢತಮವಾದದ್ದು. ಸಂಸ್ಕೃತ–ಪ್ರಾಕೃತ–ಕನ್ನಡ ಈ ತ್ರಿಭಾಷಾ ಪ್ರಾವೀಣ್ಯ ಮತ್ತು ಶಾಸ್ತ್ರ ಶುದ್ಧಿ ಅವರಿಗಿದ್ದ ಬಲ. ತಾವು ವ್ಯಾಖ್ಯಾನಿಸಲೆಂದು ಕೈಗೆತ್ತಿಕೊಂಡ ಗ್ರಂಥ ಎಷ್ಟು ಗಹನ ಹಾಗೂ ಕಷ್ಟಸಾಧ್ಯ, ಸವಾಲುಗಳನ್ನು ಒಡ್ಡುವಂತಹುದು ಎಂಬ ಅರಿವಿದೆ : "ಕನ್ನಡದಲ್ಲಿ ಭಾವಾರ್ಥವನ್ನು ಬರೆಯಿಸಿ ಕನ್ನಡ ನಾಡಿನ ಎಲ್ಲಾ ಜೈನ ಬಂಧುಗಳಿಗೂ ಇದು ಸುಲಭ ಲಭ್ಯವಾಗುವಂತೆ ಮಾಡಬೇಕೆಂದು ...ಪರ್ಯಾಲೋಚಿಸಿ ಈ ಮಹತ್ಕಾರ್ಯವನ್ನು ನಮಗೆ ವಹಿಸಿದರು. ಇದು ನಮ್ಮ ಅಲ್ಪಬುದ್ಧಿಗೆ ಬಹುಶ್ರಮ ಸಾಧ್ಯವಾದ ಕಾರ್ಯ. ಇದನ್ನು ನಮಗಿಂತ ಹೆಚ್ಚಿನ ವಿದ್ವಾಂಸರಿಗೆ ವಹಿಸಿದ್ದರೆ ಬಹಳ ಚೆನ್ನಾಗಿ ಆಗುತ್ತಿದ್ದಿತು. ನಮ್ಮ ಮಂದಬುದ್ಧ್ಯನುಸಾರವಾಗಿ ಈ ಗ್ರಂಥಕ್ಕೆ ಕರ್ಣಾಟಕ ಭಾವದೀಪಿಕೆಯೆಂಬ ಚಿಕ್ಕದಾದ ವ್ಯಾಖ್ಯೆಯನ್ನು ಬರೆದು......ಪೂರ್ಣಗ್ರಂಥವನ್ನು ಸಮಾಜದ ಮುಂದಿಟ್ಟಿರುವೆವು. ಈ ಗ್ರಂಥವು ಸಮಾಜಕ್ಕೆ ಉಪಕಾರಕವೂ ಬಹುಕಾಲದವರೆಗೆ ಇರತಕ್ಕುದೂ ಆಗಿರುವುದರಿಂದ ನಮ್ಮ ಜೀವನ ಯಾತ್ರೆಯಲ್ಲಿ ನಮ್ಮ ಶಕ್ತಿಗೆ ಇದೊಂದು ದೊಡ್ಡ ಕೆಲಸವೆಂದು ಭಾವಿಸಿ ಶ್ರಮವಹಿಸಿರುತ್ತೇವೆ."

ಶಾಸ್ತ್ರಿಗಳು ಕೇವಲ ನೀರಸ ಅನುವಾದಕರಲ್ಲ. ಅವರದು ಪಂಡಿತಪ್ರಿಯವಾದ ಪಂಡಿತ ಪ್ರಚುರ ಶಿಷ್ಟ ಶೈಲಿ. ದೀರ್ಘವಾಕ್ಯಗಳನ್ನು ಬಳಸುತ್ತಾರೆ. ಈ ಹೊತ್ತಿನ 1989ರ ಘಟ್ಟದಲ್ಲಿ ನಿಂತ ಕನ್ನಡ ಭಾಷೆಯ ನಡಿಗೆಗೆ ಹೊಂದಿಕೆಯಾಗದೆ ಬಿಡುವ ರಚನೆಯೂ ಅಲ್ಲಲ್ಲಿ ಉಂಟು. ಆದರೆ ಅವರ ಹೊಸಗನ್ನಡ ಶೈಲಿ ಅಡೆತಡೆಗಳಿಲ್ಲದೆ ಸಮತಲದಲ್ಲಿ ಹರಿಯುವ ನದಿಯಂತೆ ಸಲಿಲವಾಗಿ ಮುಂದುವರಿಯುತ್ತದೆ. ಎಲ್ಲೂ ಅದು ಲಾಘವಗೊಳ್ಳುವುದಿಲ್ಲ, ಹ್ರಸ್ವವಾಗುವುದಿಲ್ಲ, ಗಾಂಭೀರ್ಯ ಬಿಟ್ಟುಕೊಡುವುದಿಲ್ಲ. ಮೂಲ ಭಾವನೆಯ ಪ್ರತಿಪಾದನೆಗೆ ಅನುಕೂಲವಾಗುವಂತೆ ಒಮ್ಮೊಮ್ಮೆ ಮೂರು ನಾಲ್ಕು ಸಂಸ್ಕೃತ ಶ್ಲೋಕಾರ್ಥವನ್ನು ಒಟ್ಟಿಗೆ ತೆಗೆದುಕೊಂಡು ಒಟ್ಟು ಸಾರಾಂಶವನ್ನು ಕೊಡುವುದುಂಟು. ಶಾಸ್ತ್ರಿಗಳು ಅನುವಾದದೊಂದಿಗೆ ಗ್ರಂಥ ಸಂಪಾದನೆ ಕಾರ್ಯವನ್ನೂ ಏಕಕಾಲದಲ್ಲಿ ಸಮರ್ಥವಾಗಿ ನಿರ್ವಹಿಸಿದ್ದಾರೆ. ಗ್ರಂಥ ಸಂಪಾದಕನ ಗುರುತರ ಹೊಣೆಯರಿತು ಓಲೆಗರಿ ಗ್ರಂಥಗಳನ್ನೂ ಮುದ್ರಿತ ಮರಾಠಿ ಭಾಷೆಯ ಪ್ರತಿಯನ್ನೂ ತುಲನಾತ್ಮಕ ದೃಷ್ಟಿಯಿಂದ ಪಠನಮಾಡಿ ಪಾಠಾಂತರಗಳನ್ನೂ ಟಿಪ್ಪಣಿಗಳನ್ನೂ ಕೊಟ್ಟಿರುತ್ತಾರೆ. ಜತೆಗೆ ಪೂರ್ವಪುರಾಣಕ್ಕೂ–ಉತ್ತರಪುರಾಣಕ್ಕೂ ಬೆಲೆಯುಳ್ಳ ಮುನ್ನುಡಿ ಕೂಡ ಬರೆದಿದ್ದಾರೆ. ಈ ಎಲ್ಲ ಕಾರಣಗಳಿಗಾಗಿ ಮಹಾಪುರಾಣಕ್ಕೆ, ಶಾಸ್ತ್ರಿಗಳ ಅನುವಾದಕ್ಕೆ(ವ್ಯಾಖ್ಯೆಗ) ಐತಿಹಾಸಿಕ ಮಹತ್ವವಿದೆ. ಕನ್ನಡದಲ್ಲಿ ಪಾರಂಪರಿಕ ಜ್ಞಾನ ಪಡೆದ ಶಾಸ್ತ್ರಿಗಳ ಸಂಪ್ರದಾಯವೂ ಶಾಸ್ತ್ರ ಸಾಹಿತ್ಯದ ನೈರಂತರ್ಯವೂ ಕಡಿದು ಹೋಗದಂತೆ ಕಾಪಾಡಿದವರು ಎತ್ತೂರು ಶಾಂತಿರಾಜ ಶಾಸ್ತ್ರಿಗಳು.

ಕನ್ನಡದಲ್ಲಿಯೂ ನೇಮಿಜಿನೇಶ ಸಂಗತಿ (ಹರಿವಂಶ), ನಾಗಕುಮಾರ ಚರಿತೆ, ಸಮ್ಯಕ್ತ್ವಕೌಮುದಿ, ನೋಂಪಿಯ ಕಥೆಗಳು ಮೊದಲಾದ ಕಾವ್ಯಗಳನ್ನು ಶಾಸ್ತ್ರೋಕ್ತವಾಗಿ ಸಂಪಾದಿಸಿ ಕೊಟ್ಟಿರುವ ಎ. ಶಾಂತಿರಾಜ ಶಾಸ್ತ್ರಿಗಳವರ ಸೇವೆಯನ್ನು ದುರುದ್ದೇಶದಿಂದ ಗುರುತಿಸಿ ದಾಖಲಿಸದೆ ಕೈಬಿಟ್ಟಿರುವುದನ್ನು 'ಮಣಿಹ' ಎಂಬ ಗ್ರಂಥದಲ್ಲಿ ಕಾಣಬಹುದು. ಕನ್ನಡಕ್ಕೆ ಸೇವೆ ಸಲ್ಲಿಸಿದ ಗ್ರಂಥ

ಸಂಪಾದನಾಕಾರರನ್ನು ಪರಿಚಯಿಸುವ ವಿಭಾಗದಲ್ಲಿ ಈ 'ಮಣಿಹ' ಎಂಬ ಗ್ರಂಥವನ್ನು ಸಿದ್ಧಪಡಿಸಿದ ಜಾಣರು ಶಾಂತಿರಾಜ ಶಾಸ್ತ್ರಿಗಳನ್ನೂ, ಬಿ. ಪದ್ಮರಾಜ ಪಂಡಿತರನ್ನೂ ಜೈನರೆಂಬ ಜಾತಿ ಕಾರಣಕ್ಕಾಗಿ ಕೈಬಿಟ್ಟು ಅನ್ಯಾಯವೆಸಗಿರುತ್ತಾರೆಂಬ ಗುಮಾನಿಗೆ ಕಾರಣವಾಗಿದೆ. ಇಲ್ಲವಾದರೆ ಇವರಿಗಿಂತ ಕಡಿಮೆ ಕೆಲಸ ಮಾಡಿದ ಒಬ್ಬಿಬ್ಬರನ್ನು ಪರಿಚಯಿಸಿ ಇಷ್ಟು ಅಗಾಧವಾದ ಕೆಲಸ ಮಾಡಿದ ಗ್ರಂಥ ಸಂಪಾದನಪ್ರಾಜ್ಞರನ್ನು ಉಪೇಕ್ಷಿಸಿದ್ದಕ್ಕೆ ಕಾರಣವೇ ಇಲ್ಲ ; ಈ ಬಗೆಯ ನಿರ್ಲಕ್ಷ್ಯವನ್ನು ಅಹಿಂಸಾವಾದಿಗಳಾದ ಜೈನರು ಹೇಗೊ ಸಹಿಸಿಕೊಳ್ಳುತ್ತಾರೆಂಬ ತಾತ್ಸಾರ ಬುದ್ಧಿ ಒಳ್ಳೆಯದಲ್ಲ. ಅವರು ಹೆಸರಿಸದೆ ಹೋದ ಮಾತ್ರಕ್ಕೆ ಶಾಸ್ತ್ರಿಗಳ ಸೇವೆಯ ಮಹತ್ವ ತಗ್ಗುವುದೂ ಇಲ್ಲ.

ಧರ್ಮದ ಪ್ರಯೋಜನ

ಪಶ್ಯ ಧರ್ಮತರೋರರ್ಥಃ ಫಲಂ ಕಾಮಸ್ತು ತದ್ರಸಃ ।
ಸ ತ್ರಿವರ್ಗಸ್ತ್ರಯಸ್ಯಾಸ್ಯ ಮೂಲಂ ಧರ್ಮಕಥಾಶ್ರುತಿಃ ॥

ನೋಡು, ಧರ್ಮವೆಂಬ ವೃಕ್ಷಕ್ಕೆ ಅರ್ಥವು ಫಲವಾಗಿದೆ. ಕಾಮವಾದರೋ ಆ ಫಲದ ರಸವಾಗಿದೆ. ಅಂದರೆ, ಧರ್ಮದಿಂದ ಅರ್ಥಪ್ರಾಪ್ತಿಯಾಗುತ್ತದೆ. ಅರ್ಥದಿಂದ ಕಾಮವು ಪ್ರಾಪ್ತವಾಗುತ್ತದೆ. ಈ ಧರ್ಮಾರ್ಥಕಾಮಗಳೇ ತ್ರಿವರ್ಗವಾಗಿದೆ. ಈ ತ್ರಿವರ್ಗಕ್ಕೆ ಧರ್ಮ ಕಥಾ ಶ್ರವಣವೇ ಮೂಲವಾಗಿದೆ.

ಧರ್ಮಾದರ್ಥಶ್ಚ ಕಾಮಾಶ್ಚ ಸ್ವರ್ಗಶ್ಚೇತ್ಯವಿಗಾನತಃ ।
ಧರ್ಮಃ ಕಾಮಾರ್ಥಯೋಃ ಸೂತಿರಿತ್ಯಾಯುಷ್ಮನ್ನಿನಿಶ್ಚಿನು ॥

ಧರ್ಮದಿಂದ ಅರ್ಥವೂ ಕಾಮವೂ ಸ್ವರ್ಗವೂ ಉಂಟಾಗುತ್ತವೆ. ಇದು ನಿರ್ವಿವಾದ ವಿಷಯವಾಗಿದೆ. ಆಯುಷ್ಮಂತನೇ ! ಅರ್ಥ ಕಾಮಗಳಿಗೆ ಧರ್ಮವೇ ಉತ್ಪತ್ತಿಸ್ಥಾನವೆಂದು ನಿಶ್ಚಯವಾಗಿ ತಿಳಿ.

ಧರ್ಮಾರ್ಥೀ ಸರ್ವಕಾಮಾರ್ಥೀ ಧರ್ಮಾರ್ಥೀ ಧನಸೌಖ್ಯವಾನ್ ।
ಧರ್ಮೋ ಹಿ ಮೂಲಂ ಸರ್ವಾಸಾಂ ಧನರ್ದ್ಧಿಸುಖಸಂಪದಾಂ ॥

ಧರ್ಮವನ್ನು ಇಚ್ಛಿಸುವವನು ಎಲ್ಲಾ ಸುಖದಾಯಕ ಪದಾರ್ಥಗಳನ್ನು ಇಚ್ಛಿಸುವವನು. ಧರ್ಮವನ್ನು ಇಚ್ಛಿಸುವವನೇ ಐಶ್ವರ್ಯಸುಖವುಳ್ಳವನು. ಸಮಸ್ತ ಪ್ರಕಾರವಾದ ಧನ, ಋದ್ಧಿ, ಸುಖ, ಸಂಪತ್ತು ಇವುಗಳಿಗೆ ಧರ್ಮವೇ ಮೂಲವಾಗಿದೆ.

ಧರ್ಮಃ ಕಾಮದುಘಾ ಧೇನುರ್ಧರ್ಮಶ್ಚಿಂತಾಮಣಿರ್ಮಹಾನ್ ।
ಧರ್ಮಃ ಕಲ್ಪತರುಃ ಸ್ಥೇಯಾನ್ ಧರ್ಮೋಯಂ ನಿಧಿರಕ್ಷಯಃ ॥

ಧರ್ಮವು ಇಚ್ಛಿಸಿದುದನ್ನು ಕೊಡುವ ಕಾಮಧೇನುವಾಗಿದೆ. ಧರ್ಮವು ಮಹಾಚಿಂತಾಮಣಿರತ್ನವಾಗಿದೆ. ಧರ್ಮವು ಸ್ಥಿರವಾದ ಕಲ್ಪವೃಕ್ಷವಾಗಿದೆ. ಧರ್ಮವು ನಾಶವಾಗದಿರುವ ನಿಧಿಯಾಗಿದೆ.

ಪಸ್ಯ ಧರ್ಮಸ್ಯ ಮಹಾತ್ಮ್ಯಂ ಯೋಪಾಯಾತ್ಪರಿರಕ್ಷತಿ ।
ಯತ್ರ ಸ್ಥಿತಂ ನರಂ ದೂರಾನ್ನಾತಿಕ್ರಾಮಂತಿ ದೇವತಾಃ ॥

ಧರ್ಮದ ಮಹಿಮೆಯನ್ನು ನೋಡು. ಧರ್ಮವು ಅಪಾಯದಿಂದ ತಪ್ಪಿಸಿ ಮನುಷ್ಯನನ್ನು ಕಾಪಾಡುತ್ತದೆ. ಧರ್ಮವನ್ನು ಆಶ್ರಯಿಸಿದ ಮನುಷ್ಯನನ್ನು ದೇವತೆಗಳು ಕೂಡ ಬಾಧೆಪಡಿಸುವುದಿಲ್ಲ.

ಸ ಧರ್ಮೋ ವಿನಿಪಾತೇಭ್ಯೋ ಯಸ್ಮಾತ್ಸಂಧಾರಯೇನ್ನರಂ ।
ಧತ್ತೇ ಚಾಭ್ಯುದಯಸ್ಥಾನೇ ನಿರಪಾಯಂ ಸುಖೋದಯೇ ॥

ಅಂತಹ ಧರ್ಮವು ಮನುಷ್ಯನನ್ನು ವಿಪತ್ತುಗಳಿಂದ ತಪ್ಪಿಸಿ ಅವಿನಾಶಿಯಾದ ಮೋಕ್ಷಸುಖದಲ್ಲಿರಿಸುತ್ತದೆ.

—ಮಹಾಪುರಾಣ
(೧. ೩೧–೩೫, ೩೭)

ಜಿನಸೇನಾಚಾರ್ಯರ ಕಾವ್ಯಜಿಜ್ಞಾಸೆ

— ಡಾ॥ ಸಿ. ಪಿ. ಕೃಷ್ಣಕುಮಾರ್

೧

ಜಿನಸೇನಾಚಾರ್ಯರ 'ಪೂರ್ವಪುರಾಣ'ವೊಂದು ಪುರಾಣವಾಗಿಯೂ ದಟ್ಟವಾದ ಕವಿತಾಸ್ಪರ್ಶವನ್ನು ಪಡೆದು ಕೊಂಡಿರುವ ಕೃತಿ. ಪಂಪ ಹೇಳುವ ಧರ್ಮ-ಕಾವ್ಯ ಧರ್ಮಗಳ ಮಿಲನವನ್ನು ಅದರಲ್ಲಿ ಎದುರುಗೊಳ್ಳುತ್ತೇವೆ. ಪಂಪ ಪ್ರಧಾನವಾಗಿ ಕವಿ ; ಜಿನಸೇನರು ಪ್ರಧಾನವಾಗಿ ಪುರಾಣಕಾರರು. ಆದರೆ ಕವಿ ಹೃದಯವಿಲ್ಲದವರಲ್ಲ, ಅರಸಿಕರಲ್ಲ. ಯಾವುದೇ ಒಂದು ಪುರಾಣ 'ಪೂರ್ವಪುರಾಣ'ದಷ್ಟು ರಸಸ್ಯಂದಿಯಾಗಿರುವುದು ವಿರಳ. (ಈ ಮಾತನ್ನು ಗುಣಭದ್ರಾಚಾರ್ಯರ 'ಉತ್ತರಪುರಾಣ'ದ ಬಗ್ಗೆ ಹೇಳುವುದು ಸಾಧ್ಯವಿಲ್ಲ) ಪಂಪ ತನ್ನ 'ಆದಿಪುರಾಣ'ದಲ್ಲಿ ಎಷ್ಟೋ ಕಡೆ ಜಿನಸೇನರನ್ನು ಅನುವಾದಿಸುವ ಕೆಲಸವನ್ನಷ್ಟೆ ಮಾಡುತ್ತಾನೆಂಬುದು ಗಮನಾರ್ಹ.

ಜಿನಸೇನರಲ್ಲಿ ಕಾವ್ಯ ಮಾತ್ರವಲ್ಲ, ಕಾವ್ಯಮಿಮಾಂಸೆಯೂ ಉಂಟು. 'ಪೂರ್ವಪುರಾಣ'ದ ಆರಂಭದಲ್ಲಿ ಕವಿ, ಕಾವ್ಯ ಸಂಬಂಧವಾದ ಎಷ್ಟೋ ವಿಚಾರಗಳು ಬಂದಿವೆ; ಅವುಗಳಲ್ಲಿ ಕೆಲವು ಸಾಂಪ್ರದಾಯಿಕ, ಮತ್ತೆ ಕೆಲವು ನೂತನ. ಹಳೆಯ ವಿಷಯಗಳನ್ನು ಜಿನಸೇನರು ಹೊಸ ರೀತಿಯಲ್ಲಿ ಹೇಳುವುದೂ ಉಂಟು. ಕಾವ್ಯಾದಿಯಲ್ಲಿ ಕಾವ್ಯತತ್ತ್ವವನ್ನು ವಿವೇಚಿಸುವ ಕನ್ನಡ (ಜೈನ) ಕವಿಗಳ ಪ್ರವೃತ್ತಿಗೆ ಜಿನಸೇನರೆ ಪ್ರೇರಕವೆಂದು ತೋರುತ್ತದೆ. ಈ ಪ್ರವೃತ್ತಿ ಅವರಿಗಿಂತ ಹಿಂದೆ ಸಂಸ್ಕೃತದಲ್ಲಿ ಅಷ್ಟಾಗಿ ಕಂಡುಬರುವುದಿಲ್ಲ ಎನ್ನಬೇಕು.

'ಪೂರ್ವಪುರಾಣ' ಮತ್ತು 'ಉತ್ತರಪುರಾಣ'— ಎರಡೂ ಸೇರಿ ಮಹಾಪುರಾಣ—ಕನ್ನಡ ಜೈನ ಪುರಾಣಗಳಿಗೆಲ್ಲ ಆಕರವೆಂಬುದು ಪ್ರಸಿದ್ಧವಾದ ಸಂಗತಿ. ಎಂದರೆ, ಒಂದರ್ಥದಲ್ಲಿ ಕನ್ನಡ(ಜೈನ)ವಾಙ್ಮಯದ ಗಂಗೋತ್ರಿಯೆ ಆಗಿದೆ, ಮಹಾಪುರಾಣ. ಜಿನಸೇನರ ಈ ಉಕ್ತಿ ಇಡಿ ಪ್ರಾಚೀನ ಕನ್ನಡ ಸಾಹಿತ್ಯ ಪರಂಪರೆಯನ್ನು ನಿರ್ದೇಶಿಸಿದಂತೆ ತೋರುತ್ತದೆ :

> ಧರ್ಮಾನುಬಂಧಿನೀ ಯಾ ಸ್ಯಾತ್‌ಕವಿತಾ ಸೈವ ಶಸ್ಯತೇ ।
> ಶೇಷಾ ಪಾಪಾಸ್ರವಾಯೈವ ಸುಪ್ರಯುಕ್ತಾಪಿ ಜಾಯತೇ ॥
> ಕೇಚಿನ್ಮಿಥ್ಯಾದೃಶಃ ಕಾವ್ಯಂ ಗ್ರಥ್ನಂತಿ ಶ್ರುತಿಪೇಶಲಂ ।
> ತತ್ತ್ವಧರ್ಮಾನುಬಂಧಿತ್ವಾನ್ನ ಸತಾಂ ಪ್ರೀಣನಕ್ಷಮಂ ॥
> (೧. ೬೩. ೬೪)

(ಯಾವ ಕವಿತೆಯು ಧರ್ಮಸಂಬಂಧಿಯಾಗಿದೆಯೋ ಅದೇ ಪ್ರಶಂಸನೀಯವಾದುದು ; ಬಾಕಿ ಕವಿತೆಯು ಚೆನ್ನಾಗಿ ರಚಿಸಲ್ಪಟ್ಟಿದ್ದರೂ ಪಾಪಾಸ್ರವಕ್ಕೇ ಕಾರಣವು. ಕೆಲವು ಮಿಥ್ಯಾದೃಷ್ಟಿಗಳು ಕಿವಿಗಳಿಗಿಂಪಾದ ಕಾವ್ಯವನ್ನು ರಚಿಸುತ್ತಾರೆ. ಅದು ವಿಶೇಷವಾಗಿ ಅಧರ್ಮವನ್ನುಂಟುಮಾಡುವುದರಿಂದ ಸತ್ಪುರುಷರನ್ನು ಸಂತೋಷಪಡಿಸುವುದಕ್ಕೆ ಸಮರ್ಥವಾದುದಲ್ಲವು).

ಇಲ್ಲಿ ಜಿನಸೇನರು ಕಾವ್ಯದ ಶಿವಮೌಲ್ಯಕ್ಕೆ ಒತ್ತು ಕೊಟ್ಟಿದ್ದಾರೆ ; ಸೌಂದರ್ಯಮೌಲ್ಯವನ್ನು ಅಲ್ಲಗಳೆದಿಲ್ಲ. ಆದರೆ ಶಿವಬಾಹಿರವಾದ ಸೌಂದರ್ಯ ಅಪಾಯಕರವಾಗಬಹುದು ಎಂಬುದು ಅವರ ನಿಲುವು. ಕನ್ನಡ ಕವಿಗಳಿಗೂ ಇದೇ ಮೇಲ್ಪಂಕ್ತಿ.

ಕವಿಗೆ ಪಾಂಡಿತ್ಯ ಬೇಕು. (ಪುರಾಣ ರಚನೆ ಮಾಡುವವನಿಗಂತೂ ಬಹುಜ್ಞತೆ ಅತ್ಯಗತ್ಯ) ಆದರೆ ಪಾಂಡಿತ್ಯ, ಪ್ರತಿಭೆಗಳಿಲ್ಲದೆ ಕಾವ್ಯನಿರ್ಮಾಣ ಮಾಡುವವರ ಪಾಡು ಎಂಥದು, ಅವರು ಹೇಗೆ ಕೃತಿಚೌರ್ಯದಲ್ಲಿ ತೊಡಗುತ್ತಾರೆ ಎಂಬುದನ್ನು ಜಿನಸೇನರು ಸ್ವಾರಸ್ಯಪೂರ್ಣವಾದ ಹೋಲಿಕೆಗಳ ಮೂಲಕ ನಿರೂಪಿಸುತ್ತಾರೆ :

> ಅವ್ಯುತ್ಪನ್ನತರಾಃ ಕೇಚಿತ್ಕವಿತ್ವಾಯ ಕೃತೋದ್ಯಮಾಃ ।
> ಪ್ರಯಾಂತಿ ಹಾಸ್ಯತಾಂ ಲೋಕೇ ಮೂಕಾ ಇವ ವಿವಕ್ಷವಃ ॥

ಕೇಚಿದನ್ಯವಚೋಲೇಶಾನಾದಾಯ ಕವಿಮಾನಿನಃ ।
ಛಾಯಾಮಾರೋಪಯಂತ್ಯನ್ಯಾಂ ವಸ್ತ್ರೇಷ್ವಿವ
ವಣಿಗ್ಬ್ರುವಾಃ ॥
ಸಂಭೋಕ್ತುಮಕ್ಷಮಾಃ ಕೇಚಿತ್ಸ್ವರಸಾತ್ ಕೃತಿಕಾಮಿನೀಂ ।
ಸಹಾಯಾನ್ಯಾಮಯಂತೇನ್ಯಾನಕಲ್ಯಾ ಇವ ಕಾಮುಕಾಃ ॥
ಕೇಚಿದನ್ಯ ಕೃತೈರರ್ಥೈಃ ಶಬ್ದೈಶ್ಚ ಪರಿವರ್ತಿತೈಃ ।
ಪ್ರಸಾರಯಂತಿ ಕಾವ್ಯಾರ್ಥಾನ್ಪ್ರತಿ ಶಿಷ್ಟ್ಯೇವ ವಾಣಿಜಾಃ ॥
(೧. ೬೫–೬೭)

(ಅವ್ಯುತ್ಪನ್ನರು ಕೆಲವರು ಕವಿತೆಯನ್ನು ಮಾಡುವುದಕ್ಕೆ ಪ್ರಯತ್ನಪಟ್ಟು, ಮಾತನಾಡಲಿಚ್ಛಿಸುವ ಮೂಗರಂತೆ, ಲೋಕದಲ್ಲಿ ಹಾಸ್ಯಕ್ಕೆ ಪಾತ್ರರಾಗುತ್ತಾರೆ. ಬೇರೆ ಅಂಗಡಿಗಳಿಂದ ಬಟ್ಟೆಗಳನ್ನು ತಂದಿಟ್ಟುಕೊಂಡು ಮಾರುವವರು ತಾವೂ ವರ್ತಕರೆಂದು ಹೇಳಿಸಿಕೊಳ್ಳುವಂತೆ, ತಾವು ಕವಿಗಳೆಂದು ಅಹಂಕಾರಪಡುವ ಕೆಲವರು ಬೇರೆಯವರ ಕವಿತೆಯ ಸ್ವಲ್ಪಭಾಗವನ್ನು ತೆಗೆದುಕೊಂಡು ಬೇರೆ ತಾತ್ಪರ್ಯವನ್ನು ಕಲ್ಪಿಸುತ್ತಾರೆ. ಕೆಲವರು ಸ್ವಸಾಮರ್ಥ್ಯದಿಂದ ಕವಿತೆಯೆಂಬ ಕಾಮಿನಿಯನ್ನು ಸಂಭೋಗಿಸಲಸಮರ್ಥರಾಗಿ, ರೋಗಿಗಳಾದ ಅಥವಾ ಪುಂಸ್ತ್ವರಹಿತರಾದ ಕಾಮುಕರಂತೆ ಅನ್ಯರ ಸಹಾಯವನ್ನಿಚ್ಛಿಸುತ್ತಾರೆ.[1] ವ್ಯಾಪಾರಿಗಳು ಮಾರಾಟಕ್ಕೆ ಸಾಮಾನುಗಳನ್ನು ತಂದು ಅದಕ್ಕೆ ಸದೃಶವಾದ ಬೇರೆ ಪದಾರ್ಥಗಳನ್ನು ಸೇರಿಸಿ ರೂಪಾಂತರ ಮಾಡಿ ಮಾರುವಂತೆ ಕೆಲವು ಕವಿಗಳು ಬೇರೆಯವರ ಕವಿತೆಯ ಅರ್ಥಗಳನ್ನೂ ಶಬ್ದಗಳನ್ನೂ ಬದಲಾಯಿಸಿ ಕಾವ್ಯಾರ್ಥಗಳನ್ನು ಪ್ರಸಿದ್ಧಪಡಿಸುತ್ತಾರೆ).

ಕೃತಿಚೌರ್ಯ ತಪ್ಪು, ಆದರೆ ಪೂರ್ವ ಮಹಾಕವಿಗಳ ಪ್ರಭಾವ ದೂಷ್ಯವೇನೂ ಅಲ್ಲ ಎಂದು ಜಿನಸೇನರ ಅಭಿಮತ. ಅದು ಅವಶ್ಯವೂ ಹೌದು ಎಂದು ಅವರು ಸೊಗಸಾಗಿ ಹೇಳುತ್ತಾರೆ :

ಪ್ರಯಾನ್ಮಹತಿ ವಾಙ್ಮಾರ್ಗೇ ಖಿನ್ನೋರ್ಥಗಹ ನಾಟನ್ನೈಃ ।
ಮಹಾಕವಿತರುಚ್ಛಾಯಾಂ ವಿಶ್ರಾಮಾಯಾಶ್ರಯೇತ್ಕವಿಃ ॥
(೧.೧೦೨)

(ವಚನವೆಂಬ ದೊಡ್ಡ ಮಾರ್ಗದಲ್ಲಿ ಹೋಗುವವನೂ ಅರ್ಥವೆಂಬ ಅರಣ್ಯದಲ್ಲಿ ಸಂಚಾರಮಾಡಿ ಖಿನ್ನನಾದವನೂ ಆದ ಕವಿಯು ವಿಶ್ರಮಿಸುವುದಕ್ಕೋಸ್ಕರ ಮಹಾಕವಿಗಳೆಂಬ ವೃಕ್ಷಗಳ ನೆರಳನ್ನಾಶ್ರಯಿಸಬೇಕು).

ಕಾವ್ಯದಲ್ಲಿ ಶಬ್ದ–ಅರ್ಥಗಳ ಅನುರೂಪದಾಂಪತ್ಯವಿರಬೇಕೆಂದು ಜಿನಸೇನರ ಅಭಿಪ್ರಾಯ. ಅರ್ಥಗಾಂಭೀರ್ಯ, ಶಬ್ದಸೌಷ್ಠವ ಎರಡನ್ನೂ ಕವಿತೆ ಒಳಗೊಂಡಿರಬೇಕು :

ಕೇಚಿದ್ವರ್ಣೋಜ್ಜ್ವಲಾಂ ವಾಣೀಂ ರಚಯಂತ್ಯರ್ಥ
ದುರ್ಬಲಾಂ ।
ಜಾತುಷೀ ಕಂಠಿಕೇವಾಸೌ ಛಾಯಾಮ್ಯಚ್ಛತಿ ನೋಚ್ಚಿಖಾಂ ॥
ಕೇಚಿದರ್ಥಮಪಿ ಪ್ರಾಪ್ಯ ತದ್ಯೋಗ್ಯಪದಯೋಜನೈಃ ।
ನಸತಾಂಪ್ರೀಣನಾಯಾಲಂ ಲುಬಾ ಲಬ್ಧಶ್ರಿಯೋ ಯಥಾ ॥
(೧. ೬೯, ೭೦)

(ಕೆಲವರು ಸುಂದರವಾದ ಅಕ್ಷರಗಳನ್ನುಳ್ಳ ವಚನವನ್ನು ರಚಿಸುತ್ತಾರೆ. ಅದರಲ್ಲಿ ಅರ್ಥಗಾಂಭೀರ್ಯವಿರುವುದಿಲ್ಲ. ಇದು ಅರಗಿನ ಮಣಿಗಳಿಂದ ಮಾಡಿದ ಕಂಠಾಭರಣದಂತೆ, ಉತ್ಕೃಷ್ಟವಾದ ಶೋಭೆಯನ್ನು ಹೊಂದುವುದಿಲ್ಲ. ಕೆಲವರು ಅರ್ಥವನ್ನು ಹೊಂದಿದರೂ ಅದಕ್ಕೆ ಯೋಗ್ಯವಾದ ಪದ ಸಂಯೋಜನೆಯಿಲ್ಲದಿರುವುದರಿಂದ, ದಾನ ಪೂಜಾದಿಗಳನ್ನು ಮಾಡದೆ ಹಣವನ್ನು ಗಳಿಸಿಟ್ಟ ಲೋಭಿಗಳಂತೆ, ಸತ್ಪುರುಷರನ್ನು ಸಂತೋಷಪಡಿಸಲಾರರು).

ಮಹತ್ವಾಕಾಂಕ್ಷೆಯಿಂದ ಕಾವ್ಯವನ್ನಾರಂಭಿಸಿ, ಆಮೇಲೆ ಅದನ್ನು ನಿರ್ವಹಿಸಲಾರದೆ ತೊಳಲುವವರಿಗೆ ಜಿನಸೇನರು ಕೊಡುವ ಉಪಮಾನ ಸ್ವೋಪಜ್ಞವಾಗಿದೆ :

ಯಥೇಷ್ಟಂ ಪ್ರಕೃತಾರಂಭಾಃ ಕೇಚಿನ್ನಿರ್ವಹಣಾಕುಲಾಃ ।
ಕವಯೋ ಬತ ಸೀದಂತಿ ಕರಾಕ್ರಾಂತ ಕುಡುಂಬಿವತ್ ॥
(೧. ೭೧)

(ಕೆಲವು ಕವಿಗಳು ಕವಿತೆಯನ್ನು ಯಥೇಚ್ಛವಾಗಿ ಪ್ರಾರಂಭಿಸಿ ನಿರ್ವಹಿಸಲಸಮರ್ಥರಾಗಿ, ಕೃಷೀವಲನು ಕಂದಾಯವನ್ನು ಕೊಡಲಾರದೆ ದುಃಖಪಡುವಂತೆ, ದುಃಖಪಡುತ್ತಾರೆ)

ಭಾರಿ ಜಮೀನು ಮಾಡಿ, ಕಂದಾಯ ಕಟ್ಟುವುದಕ್ಕೇ ಹಣವಿಲ್ಲದವನು ಕೃಷಿಯನ್ನೇನು ಮಾಡಿಯಾನು ? ಕವಿಗೆ ತನ್ನ ಇತಿಮಿತಿಗಳು ತಿಳಿದಿರಬೇಕು.

---

1. ಇದು ಅಷ್ಟೇನೂ ಉಚಿತವಾದ ಹೋಲಿಕೆಯಲ್ಲ. ಇಂಥ ಅನೌಚಿತ್ಯಗಳನ್ನು ಮುಂದೆ ಕನ್ನಡ ಕವಿಗಳೂ ಎಸಗಿದರೆ ಆಶ್ಚರ್ಯವೇನು ?

ಕುಕವಿತ್ವವನ್ನು ಜಿನಸೇನರು ಖಂಡಿಸುವುದು ಹೀಗೆ :

ಅಪ್ರವಾಶಮತಾನ್ಯನ್ಯೇ ಕವಯಃ ಪೋಷಯಂತ್ಯಲಂ ।
ಕುಕವಿತ್ವಾದ್ವರಂ ತೇಷಾವಕವಿತ್ವಮುಪಾಸಿತಂ ॥ (೧.೭೨)

(ಇನ್ನು ಕೆಲವು ಕವಿಗಳು ಮಿಥ್ಯಾಮತಗಳನ್ನು ಹೆಚ್ಚಾಗಿ ಪುಷ್ಟೀಕರಿಸುತ್ತಾರೆ. ಅಂತಹ ವಿಷಯಗಳನ್ನು ವರ್ಣಿಸಿ ಅವರು ಕುಕವಿಗಳೆಂದು ಹೇಳಿಸಿಕೊಳ್ಳುವುದಕ್ಕಿಂತಲೂ ಕವಿತೆಯನ್ನು ಮಾಡದಿರುವುದು ಲೇಸು)[2]

ಕಾವ್ಯದ ಪ್ರಯೋಜನವೇನು ? ಅನ್ಯರನ್ನು ಮೆಚ್ಚಿಸುವುದಲ್ಲ ಎನ್ನುತ್ತಾರೆ, ಜಿನಸೇನರು. ಅವರ ದೃಷ್ಟಿಯಲ್ಲಿ ಆತ್ಮತೃಪ್ತಿ ಮತ್ತು ಸಮಷ್ಟಿಯ ಶ್ರೇಯಸ್ಸು ಕಾವ್ಯದ ಧ್ಯೇಯ :

ಪರೇತುಷ್ಯಂತು ವಾ ಮಾ ವಾ ಕವಿಃ ಸ್ವಾರ್ಥಂ ಪ್ರತೀಹತಾಂ।
ನ ಪರಾರಾಧನಾಚ್ಛ್ರೇಯಃ ಶ್ರೇಯಃ ಸನ್ಮಾರ್ಗದೇಶನಾತ್ ॥
(೧-೭೬)

(ಅನ್ಯರು ಸಂತೋಷಪಡಲಿ ಅಥವಾ ಪಡದಿರಲಿ, ಕವಿಯು ತನ್ನ ಪ್ರಯೋಜನವನ್ನಿಚ್ಛಿಸಬೇಕು. ಶ್ರೇಯಸ್ಸು ಬೇರೆಯವರನ್ನು ಸಂತೋಷಪಡಿಸುವುದರಿಂದಲ್ಲ, ಅದು ಸನ್ಮಾರ್ಗವನ್ನುಪದೇಶ ಮಾಡುವುದರಲ್ಲಿದೆ).

ಮಮ್ಮಟನ ಪಟ್ಟಿಯಲ್ಲಿ ಬರುವ "ಯಶಸೇ, ಅರ್ಥಕೃತೇ" ಎಂಬ ಪ್ರಯೋಜನಗಳು ಜಿನಸೇನರಿಗೆ ಸಮ್ಮತವಲ್ಲ, ಉಳಿದವನ್ನು ಬಹುಶಃ ಅವರು ಒಪ್ಪುತ್ತಾರೆ. 'ಸ್ವಾರ್ಥಂ' ಎಂಬ ಅವರ ಮಾತಿಗೆ ವಿಶೇಷಾರ್ಥ ಕಲ್ಪಿಸಬೇಕು.

ಕಾವ್ಯದ ಬಗೆಗಿರುವ ಭಿನ್ನಾಭಿಪ್ರಾಯಗಳನ್ನು ಜಿನಸೇನರು ಹೀಗೆ ಚೆನ್ನಾಗಿ ಸಂಗ್ರಹಿಸುತ್ತಾರೆ :

"ಪ್ರಾಚೀನ ಕವಿಗಳ ಅಭಿಪ್ರಾಯಗಳೂ ನವೀನ ಕವಿಗಳ ಅಭಿಪ್ರಾಯಗಳೂ ಬೇರೆಬೇರೆಯಾಗಿವೆ. ಅವನ್ನೆಲ್ಲಾ ಅನುಸರಿಸಿ ಕವಿತೆಯನ್ನು ಮಾಡಲು ಯಾರು ಸಮರ್ಥರು ? ಕೆಲವರು ಉತ್ತಮವಾದ ಶಬ್ದಗಳನ್ನಪೇಕ್ಷಿಸುತ್ತಾರೆ. ಕೆಲವರು ಅರ್ಥಚಮತ್ಕಾರವನ್ನಿಚ್ಛಿಸುತ್ತಾರೆ. ಕೆಲವರು ಸಮಾಸ ಹೆಚ್ಚಾಗಿರುವುದನ್ನಪೇಕ್ಷಿಸುತ್ತಾರೆ. ಇನ್ನು ಕೆಲವರು ವಿರಳವಾದ ಪದಸಮೂಹವನ್ನಿಚ್ಛಿಸುತ್ತಾರೆ. ಕೆಲವರು ಮೃದುವಾದ ಕವಿತೆಯನ್ನಿಚ್ಛಿಸುತ್ತಾರೆ. ಬೇರೆಯವರು ಶ್ಲೇಷಯುಕ್ತವಾದ ಕವಿತ್ವವನ್ನಪೇಕ್ಷಿಸುತ್ತಾರೆ. ಕೆಲವರು ಮಧ್ಯಮಸ್ಥಿತಿಯ ಕವಿತೆಯನ್ನಿಚ್ಛಿಸುತ್ತಾರೆ. ಇನ್ನು ಕೆಲವರ ಅಭಿರುಚಿಯು ವಿಲಕ್ಷಣವಾಗಿಯೇ ತೋರುತ್ತಿದೆ. ಹೀಗೆ ಭಿನ್ನಾಭಿಪ್ರಾಯಗಳಿರುವುದರಿಂದ ಪ್ರಾಜ್ಞರನ್ನು ಆರಾಧಿಸು (ಸಂತೋಷಪಡಿಸು)ವುದು ಬಹಳ ಕಷ್ಟ" (೧. ೭೭-೮೦)

ಇದು ಜಿನಸೇನರ ಕಾವ್ಯಲಕ್ಷಣೀಕರಣ :

ಕವೇರ್ಭಾವೋಥವಾ ಕರ್ಮ ಕಾವ್ಯಂ ತಜ್ಞೈರ್ನಿರುಚ್ಯತೇ ।
(೧. ೯೪)

(ಕವಿಯು ಕವಿತೆಯನ್ನು ಮಾಡುವ ಶಕ್ತಿಯು ಅಥವಾ ಶಬ್ದಾರ್ಥ ರಚನಾರೂಪವಾದ ಕಾರ್ಯವು ಕಾವ್ಯವೆಂದು ಕವಿತೆಯನ್ನು ತಿಳಿದವರು ಹೇಳುತ್ತಾರೆ).

ಒಳ್ಳೆಯ ಕಾವ್ಯದ ಸ್ವರೂಪವನ್ನೂ ಮಹಾಕವಿಯ ಅರ್ಹತೆಯನ್ನೂ ಹೀಗೆ ಹೇಳಲಾಗಿದೆ :

ತತ್ಪ್ರತೀತಾರ್ಥಮಗ್ರಾಮ್ಯಂ ಸಾಲಂಕಾರಮನಾಕುಲಂ ॥
ಕೇಚಿದರ್ಥಸ್ಯ ಸೌಂದರ್ಯಮಪರೇ ಪದಸೌಷ್ಠವಂ ।
ವಾಚಾಮಲಂಕ್ರಿಯಾಂ ಪ್ರಾಹುಸ್ತದ್ದ್ವಯಂ ನೋ ಮತಂ
ಮತಂ ॥ (೧. ೯೫, ೯೬)

(ಕಾವ್ಯವು ಪ್ರಸಿದ್ಧವಾದ ಅರ್ಥವುಳ್ಳುದೂ ಗ್ರಾಮ್ಯವಲ್ಲದುದೂ ಅಲಂಕಾರಯುಕ್ತವೂ ರಸಾಲಂಕಾರಗಳಿಂದ ಸಂಕುಚಿತವಲ್ಲದುದೂ ಆಗಿರಬೇಕು. ಕೆಲವರು ಕವಿಯ ವಾಕ್ಯಗಳಿಗೆ ಸುಂದರವಾದ ಅರ್ಥವು ಅಲಂಕಾರವೆಂದೂ ಬೇರೆಯವರು ವಿದ್ವಾಂಸರ ಮನಸ್ಸಿಗೆ ಸಂತೋಷವನ್ನುಂಟುಮಾಡುವ ಪದಗಳು ಅಲಂಕಾರವೆಂದೂ ಹೇಳುತ್ತಾರೆ. ಈ ಎರಡು ಅಭಿಪ್ರಾಯಗಳೂ ನಮಗೆ ಸಮ್ಮತವು).

ಜಿನಸೇನರ ಪ್ರಕಾರ, ಇದು ಮಹಾಕಾವ್ಯದ ಲಕ್ಷಣ :

ಮಹಾಪುರಾಣ ಸಂಬಂಧಿ ಮಹಾನಾಯಕಗೋಚರಂ ।
ತ್ರಿವರ್ಗಫಲಸಂದರ್ಭಂ ಮಹಾಕಾವ್ಯಂ ತದಿಷ್ಯತೇ ॥
(೧. ೯೯)

(ಬಹುಪ್ರಾಚೀನವಾದ ಇತಿಹಾಸ ಮೊದಲಾದ ವಿಷಯಗಳುಳ್ಳುದೂ ತೀರ್ಥಂಕರರು ಮೊದಲಾದ ಮಹಾಪುರುಷರ ವರ್ಣನೆಯುಳ್ಳುದೂ ಆದ ಕಾವ್ಯವು ಮಹಾಕಾವ್ಯವೆನಿಸುವುದು). ಈ ಲಕ್ಷಣೀಕರಣ ಸ್ವಲ್ಪಮಟ್ಟಿಗೆ ವಿಶಿಷ್ಟವಾಗಿದೆ ಎನ್ನಬೇಕು.

2. ಇಲ್ಲಿ ಭಾಮಹನ 'ಕಾವ್ಯಾಲಂಕಾರ'ದ ಉಕ್ತಿಯೊಂದು (೧,೧೨) ನೆನಪಾಗುತ್ತದೆ.

ಜಿನಸೇನರ ಪ್ರಶ್ನೆಯೊಂದು ಅಪೂರ್ವವಾಗಿದೆ :

> ಶಬ್ದರಾಶಿರಪರ್ಯಂತಃ ಸ್ವಾಧೀನೋರ್ಥಃ ಸ್ಫುಟಾ ರಸಾಃ ।
> ಸುಲಭಾಶ್ಚ ಪ್ರತಿಚ್ಛಂದಾಃ ಕವಿತ್ವೇ ಕಾ ದರಿದ್ರತಾ ॥
> (೧.೧೧೧)

(ಲೋಕದಲ್ಲಿ ಶಬ್ದರಾಶಿಯು ಅಪರಿಮಿತವಾಗಿದೆ. ಅರ್ಥವು ಸ್ವಾಧೀನವಾಗಿದೆ. ಶೃಂಗಾರಾದಿ ರಸಗಳು ಸ್ಪಷ್ಟವಾಗಿವೆ. ಪ್ರತಿರೂಪಗಳು ಸುಲಭವಾಗಿವೆ. ಹೀಗಿರುವಾಗ ಕವಿತೆಗೇನು ಬಡತನ ?)[3]

"Poetry of the earth is never dead" ಎಂಬ ಇಂದಿನ ಘೋಷಣೆಗೆ ಪೋಷಕವಾಗಿದೆ, ಜಿನಸೇನಾಚಾರ್ಯರ "ಕವಿತೆಗೇನು ಬಡತನ ?" ಎಂಬ ಪ್ರಶ್ನೆ. ಜಿನಸೇನರು ಪುರಾಣ ಕವಿಯಾಗಿಯೂ ಎಷ್ಟೋ ಅಂಶಗಳಲ್ಲಿ ಅರ್ವಾಚೀನರಾಗಿ ಕಾಣುತ್ತಾರೆ.

೨

ಎ. ಶಾಂತಿರಾಜಶಾಸ್ತ್ರಿಯವರು ಮಹಾಪುರಾಣವನ್ನು ಕನ್ನಡಿಸಿ, ಕನ್ನಡಿಗರಿಗೆ ಮಹೋಪಕಾರ ಮಾಡಿದ್ದಾರೆ. ಕನ್ನಡ ಜೈನಕವಿಗಳು ತಮ್ಮ ತೀರ್ಥಂಕರ ಪುರಾಣಗಳಲ್ಲಿ ಮಹಾಪುರಾಣವನ್ನು ಹೇಗೆ ಉಪಯೋಗಿಸಿಕೊಂಡಿದ್ದಾರೆಂಬುದನ್ನು ತಿಳಿಯಲು ನಮಗಿರುವ ಏಕೈಕ ಸಾಧನ, ಶಾಸ್ತ್ರಿಗಳ ಕೃತಿಯೇ (ಅದು ಮೂಲಶ್ಲೋಕಗಳನ್ನೂ ಕನ್ನಡ ಲಿಪಿಯಲ್ಲಿ ಒಳಗೊಂಡಿರುವುದು ಅತ್ಯಂತ ಉಪಾದೇಯ). ಆದ್ದರಿಂದ, ತೌಲನಿಕ ಅಧ್ಯಯನಕ್ಕೆ ಅದೊಂದು ದೊಡ್ಡ ಕೊಡುಗೆಯಾಗಿದೆ. ಅದು ಅನುವಾದ, ವ್ಯಾಖ್ಯಾನ, ಗ್ರಂಥಸಂಪಾದನೆ ಮೂರೂ ಆಗಿರುವುದೊಂದು ವಿಶೇಷ.

ಮಹಾಪುರಾಣವನ್ನು ಭಾಷಾಂತರಿಸುವುದಷ್ಟೆ ಶಾಸ್ತ್ರಿಗಳ ಉದ್ದೇಶವಲ್ಲ ; 'ಕರ್ನಾಟಕ ಭಾವದೀಪಿಕಾ' ಎಂಬ ವ್ಯಾಖ್ಯಾನವನ್ನು ಬರೆಯುವುದು ಅವರ ವಿವಕ್ಷೆ. ಆದರೂ ಅವರ ಕೃತಿ ಸಾರತಃ ಭಾಷಾಂತರವೇ. ಅಲ್ಲಲ್ಲಿ ಭಾಷ್ಯವೂ ಬಂದಿದ್ದರೆ, ಅದು ಶಾಸ್ತ್ರಿಗಳ ಮೂಲೋದ್ದೇಶಕ್ಕೆ ಅನುಗುಣವಾಗಿಯೇ ಇದೆ. ಬಹಳ ಕಡೆ ಅವರು ಮೂಲದಿಂದ ಏನನ್ನೂ ಬಿಡದೆ, ಮೂಲಕ್ಕೆ ಏನನ್ನೂ ಸೇರಿಸದೆ ಅನುವಾದಿಸುತ್ತಾರೆ; ವಿವರಣೆ ಕೆಲವು ಕಡೆ ಮಾತ್ರ ಕಾಣಿಸಿಕೊಳ್ಳುತ್ತದೆ.[4] ಎರಡು ಉದಾಹರಣೆಗಳನ್ನು ಮಾತ್ರ ನೋಡಬಹುದು.

> ತ್ವದ್ವಚೋವಿಸ್ತರೇ ಕೃತ್ಸ್ನಂ ವಸ್ತುಬಿಂಬಂ ಮಯೇಕ್ಷಿತಂ ।
> ತ್ರೈಲೋಕ್ಯ ಶ್ರೀಮುಖಾಲೋಕಮಂಗಲಾಬ್ದತಲಾಯಿತೇ ॥
> (೧. ೧೬೫)

ಎಂಬುದನ್ನು ಹೀಗೆ ಯಥಾವತ್ತಾಗಿ ಅನುವಾದಿಸಲಾಗಿದೆ. "ಮೂರು ಲೋಕದ ಲಕ್ಷ್ಮಿಯ ಮುಖವನ್ನು ನೋಡುವುದಕ್ಕೆ ಮಂಗಲಮಯವಾದ ಕನ್ನಡಿಯಂತಿರುವ ನಿನ್ನ ವಿಸ್ತಾರವಾದ ವಚನದಲ್ಲಿ ಪ್ರತಿಬಿಂಬಿಸಿದ ಎಲ್ಲಾ ವಸ್ತುವನ್ನೂ ನಾನು ನೋಡಿದೆನು". ಆದರೆ ಮುಂದಿನ ಶ್ಲೋಕದ ಅನುವಾದ ವ್ಯಾಖ್ಯಾನಾತ್ಮಕವಾಗಿ ವಿಸ್ತೃತವಾಗಿದೆ :

> ವೃಷಭಕವಿಭಿರ್ಯಾತಂ ಮಾರ್ಗಂ ವಯಂ ಚ ಕಿಲಾಧುನಾ ।
> ವ್ರಜಿತುಮನಸೋ ಹಾಸ್ಯಂ ಲೋಕೇ ಕಿಮನ್ಯದತಃ ಪರಂ ॥
> (೧. ೨೦೫)

"ಕವೀಶ್ವರರು ಹೋದ ಮಾರ್ಗದಲ್ಲಿ ಈಗ ನಾವೂ (ಜಿನಸೇನಾಚಾರ್ಯರೂ) ಹೋಗಬೇಕೆಂಬ ಮನಸ್ಸುಳ್ಳವರಾಗಿದ್ದೇವೆ. ಲೋಕದಲ್ಲಿ ಇದಕ್ಕಿಂತಲೂ ಹಾಸ್ಯಾಸ್ಪದವಾದುದು ಬೇರೆ ಯಾವುದು ? ಮಹಾಕವಿಗಳು ವರ್ಣಿಸಿದ ಪುರಾಣವನ್ನು ತನ್ನಂತಹ ಅಲ್ಪನು ವರ್ಣಿಸುವುದು ಹಾಸ್ಯಕರವಾದುದೆಂದು ಭಾವವು".

ಒಮ್ಮೊಮ್ಮೆ ಭಾಷಾಂತರ ತುಸು ಅತೃಪ್ತಿಕರವೆನಿಸಬಹುದು ; ನಿದರ್ಶನಕ್ಕೆ 'ಅವ್ಯುತ್ಪನ್ನಾಃ' ಎಂಬುದನ್ನು 'ಮೂರ್ಖರು' ಎಂದು ಕನ್ನಡಿಸಿರುವುದು. ಇದು ತಪ್ಪಲ್ಲ, ಆದರೆ ಸಂದರ್ಭಕ್ಕೆ ಪೂರ್ತಿ ಹೊಂದಿಕೊಳ್ಳುವುದಿಲ್ಲ. ಇಂಥವೆಲ್ಲ ತೀವ್ರ ದೋಷಗಳಾಗಲಾರವು.

ಶಾಸ್ತ್ರಿಗಳ ಅನುವಾದ ಒಟ್ಟಿನಲ್ಲಿ ಸಮರ್ಪಕ ಮತ್ತು ಶ್ಲಾಘ್ಯವಾಗಿದೆ. ಅದು 'ಮಕ್ಕಿ ಕಾ ಮಕ್ಕಿ'

---

3. 'ಪ್ರತಿರೂಪ' ಎಂಬ ಮಾತು ಕುತೂಹಲಕಾರಿಯಾಗಿದ್ದು, ಟಿ. ಎಸ್. ಎಲಿಯಟ್‌ನ 'objective correlative' (ವಸ್ತು ಪ್ರತಿರೂಪ)ದ ಪರಿಕಲ್ಪನೆಯನ್ನು ಜ್ಞಾಪಿಸುತ್ತದೆ. (ಈ ಬಗ್ಗೆ ಬೇರೊಂದೆಡೆ ವಿವೇಚಿಸಲಾಗಿದೆ. ನೋಡಿ : 'ಸಾಧನೆ' ೧೪. ೪, ಪು. ೧೫೦).

4. ಇದುವರೆಗೆ ನೋಡಿದ ಜಿನಸೇನರ ಕಾವ್ಯಮೀಮಾಂಸೆಯ ಅನುವಾದ ಶಾಸ್ತ್ರಿಗಳದೇ.

ಭಾಷಾಂತರವಲ್ಲ: ಉದಾಹರಣೆಗೆ, "ಅನನ್ಯ ಶಾಸನಾ ಮೇನಾಂ ನ ಮೇನೇ ಭರತಾವನಿಂ" ಎಂಬುದನ್ನು "ಈ ಭಾರತ ಭೂಮಿಯು ಬೇರೆಯವರಿಂದ ಆಳಲ್ಪಟ್ಟದೆಂದು ತಿಳಿದನು" ಎಂದು ಅನುವಾದಿಸಿರುವುದು. (ಮೂಲದಲ್ಲಿ ಎರಡು ನಿಷೇಧಗಳಿವೆ). ವಾಕ್ಯರಚನೆ ಅಲ್ಲಲ್ಲಿ ಇನ್ನಷ್ಟು ಸರಳವಾಗಿರಬಹುದಿತ್ತು. ಆದರೆ ಈ ಬರವಣಿಗೆ ಅರ್ಧ ಶತಮಾನಕ್ಕೂ ಹಿಂದಿನದೆಂಬುದನ್ನು ಮರೆಯಬಾರದು.

ಎ. ಶಾಂತಿರಾಜಶಾಸ್ತ್ರಿಯವರ ಸಾಹಿತ್ಯ ಸಮುದಾಯಕ್ಕೆ ಸಮ್ಮೇದ ಶಿಖರ ಪ್ರಾಯವಾಗಿದೆ, ಮಹಾಪುರಾಣದ ಕನ್ನಡ ಅವತಾರ. "ಇದು ನಮ್ಮ ಅಲ್ಪಬುದ್ಧಿಗೆ ಬಹುಶ್ರಮ ಸಾಧ್ಯವಾದ ಕಾರ್ಯ......ನಮ್ಮ ಮಂದ ಬುದ್ಧ್ಯನುಸಾರವಾಗಿ...."ಎಂಬ ವಿನಯ ಮತ್ತು ವಿನೇಯ ಭಂಗಿಯಲ್ಲಿ, "ಇದಂ ಪುಣ್ಯಮಿದಂ ಪೂತಮಿದಂ ಮಾಂಗಲ್ಯಮುತ್ತಮಂ" ಎನಿಸುವಂತಹ ಕೃತಿರತ್ನವನ್ನು ಕನ್ನಡಿಗರಿಗೆ ಕೊಟ್ಟ ಶಾಸ್ತ್ರಿಯವರು ದಿಟವಾಗಿ ಮಹಾನುಭಾವರು, ನಮ್ಮ ಕೃತಜ್ಞತೆಗೆ ಭಾಜನರು. □

ವಸ್ತು ವಿವೇಚನೆ

ಒಂದು ಮತವು, "ವಸ್ತು ಸ್ವರೂಪವು ಈ ರೀತಿಯಾಗಿದೆ" ಎಂದು ಹೇಳಿದಾಗ, ಇನ್ನೊಂದು ಮತವು, "ವಸ್ತು ಸ್ವರೂಪವು ಹಾಗಿದೆಯೆಂದು ಹೇಳಿದರೆ ಇಂತಹ ದೋಷವು ಬರುವುದರಿಂದ ವಸ್ತು ಸ್ವರೂಪವು ಹಾಗಿಲ್ಲ, ಹೀಗಿದೆ"—ಎಂದು ಹೇಳುವುದು ಖಂಡನೆಯಾದರೆ ಒಬ್ಬನು ಹೇಳಿದ ಮಾತಿಗೆ ಮತ್ತೊಬ್ಬನು ಪ್ರತಿಮಾತನ್ನಾಡಬಾರದೆಂದು ಹೇಳಿದಂತಾಯಿತು. ಹಾಗಾದರೆ ಚರ್ಚಿಸಿ ಯಥಾರ್ಥವಾದ ವಸ್ತು ಸ್ವರೂಪವನ್ನು ತಿಳಿದು ಆತ್ಮ ಕಲ್ಯಾಣವನ್ನು ಮಾಡಿಕೊಳ್ಳುವ ಬಗೆ ಹೇಗೆ?

ಒಂದು ಸಭೆಯಲ್ಲಿ ಸಭಿಕರು ಒಂದು ಪ್ರಕೃತ ವಿಷಯದಲ್ಲಿ ಬೇರೆಬೇರೆ ಅಭಿಪ್ರಾಯವನ್ನು ಪ್ರಕಾಶಪಡಿಸಿ ಚರ್ಚಿಸಿದರೆ ಒಬ್ಬರಿಗೊಬ್ಬರು ಖಂಡನೆಮಾಡಿಕೊಂಡರೆಂದರ್ಥವೇ? ಹಾಗೆ ಮಾಡುವುದು ದೋಷವಾದರೆ ಒಬ್ಬ ಸಭಿಕನು ಹೇಳಿದ ಒಂದು ವಿಷಯದಲ್ಲಿ ಬೇರೆಯವರು ಸಾಧಕಬಾಧಕಗಳನ್ನು ಹೇಳದೆ ಸುಮ್ಮನಿದ್ದು ಒಪ್ಪಿಕೊಳ್ಳಬೇಕೆಂದು ಸಿದ್ಧವಾಗುವುದು. ಹಾಗಾದರೆ ಲೋಕ ವ್ಯವಹಾರವೇ ನಡೆಯಲಾರದು. ಹಾಗಲ್ಲ ಅಂತಹ ಸಂದರ್ಭದಲ್ಲಿ "ಖಂಡನೆ" ಎಂಬ ಶಬ್ದಕ್ಕೆ ಬದಲಾಗಿ "ವಸ್ತುವಿವೇಚನೆ" ಎಂಬ ಶಬ್ದವನ್ನು ಪ್ರಯೋಗಿಸಿದರೆ ಸರಿಯಾಗುವುದು.

ವಸ್ತುವಿವೇಚನೆಯನ್ನು ಮಾಡಿದರೆ ಜ್ಞಾನಿಗಳು ಪುನಃ ಅದರ ಮೇಲೆ ವಿಚಾರ ಮಾಡುವರಲ್ಲದೆ ಕೋಪದಲ್ಲಿ ಪರ್ಯವಸಾನವನ್ನು ಹೊಂದುವುದಿಲ್ಲ. ಒಂದು ವಿವೇಚನೆಯು ಸರಿಯಾಗಿ ತೋರಿದರೆ ಒಪ್ಪುವುದಕ್ಕೂ ಸರಿಯಾಗಿ ತೋರದಿದ್ದರೆ ಒಪ್ಪದಿರುವುದಕ್ಕೂ ನಮ್ಮಾತ್ಮನೇ ಸ್ವತಂತ್ರನು. ಯಾರ ನಿರ್ಬಂಧವೂ ಇಲ್ಲ. ಸಾವಧಾನದಿಂದ ವಿಚಾರಮಾಡದೆ, "ಮತಖಂಡನೆಯಾಯಿತು" ಎಂಬ ಅಪಾರ್ಥವನ್ನು ಕಲ್ಪಿಸಿಕೊಂಡು ವೈಷಮ್ಯದಿಂದ ತಮ್ಮ ಪರಿಣಾಮವನ್ನು ಕೆಡಿಸಿಕೊಳ್ಳುವುದು ಜ್ಞಾನಿಗಳ ಕರ್ತವ್ಯವಲ್ಲ. ಪರಸ್ಪರ ಪ್ರೇಮದಿಂದುಂಟಾಗುವ ಆನಂದವು ವೈಷಮ್ಯದಿಂದಾಗಲಾರದು.

ಎ. ಶಾಂತಿರಾಜಶಾಸ್ತ್ರಿಗಳು
ಅನ್ಯಯೋಗವ್ಯವಚ್ಛೇದಿಕಾ ಮುನ್ನುಡಿ
(೧೯೨೩)

ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿಗಳವರ 'ಧರ್ಮಪರೀಕ್ಷೆ'

(ಅಮಿತಗತ್ಯಾಚಾರ್ಯರ ಸಂಸ್ಕೃತಕಾವ್ಯದ ಗದ್ಯಾನುವಾದ)

— ಡಾ॥ ಕೆ. ರಾಘವೇಂದ್ರರಾವ್

ಎತ್ತೂರು ಶಾಂತಿರಾಜಶಾಸ್ತ್ರಿಗಳವರು ಶ್ರೇಷ್ಠ ವಿದ್ವಾಂಸರೂ, ಬಹು ಭಾಷಾ ವಿಶಾರದರೂ ಆಗಿದ್ದರು. ಇವರು 50ಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ. ಇವೆಲ್ಲವೂ ಹೆಚ್ಚಾಗಿ ಜೈನಧರ್ಮ, ನೀತಿ, ಸ್ತೋತ್ರ, ಸಿದ್ಧಾಂತ–ಮೊದಲಾದ ಸಾಹಿತ್ಯಕ್ಕೆ ಮೀಸಲಾಗಿವೆ. ಇವು 12 ಪುಟಗಳಿಂದ ಹಿಡಿದು 3000ಕ್ಕೂ ಹೆಚ್ಚು ಪುಟಗಳ ವರೆಗೂ ಇವೆ. ಇವರ ಮೇರು ಕೃತಿ ಆಚಾರ್ಯ ಜಿನಸೇನ-ಗುಣಭದ್ರರಿಂದ ವಿರಚಿತವಾದ 'ಮಹಾಪುರಾಣ' ಇಪ್ಪತ್ತು ಸಾವಿರ ಸಂಸ್ಕೃತ ಶ್ಲೋಕಗಳುಳ್ಳುದ್ದನ್ನು ಸರಳ ಕನ್ನಡ ಭಾಷೆಯಲ್ಲಿ ಅನುವಾದಿಸಿದ್ದಾರೆ. ಜೈನ ಸಾಹಿತ್ಯಾಭ್ಯಾಸಿಗಳಿಗೆ ಈ ಕೃತಿಯೊಂದು ಆಕರ ಗ್ರಂಥವಾಗಿರುತ್ತದೆ.

ಇವರು ಸಂಸ್ಕೃತ, ಪ್ರಾಕೃತ, ಕನ್ನಡ–ತ್ರಿಭಾಷಾ ಪಂಡಿತರಲ್ಲದೆ ಹಿಂದೀ ಭಾಷೆಯನ್ನೂ ಕರಗತ ಮಾಡಿಕೊಂಡವರು. ಇವರ ಈ ಭಾಷಾ ಪಾಂಡಿತ್ಯವು ಕನ್ನಡ ಸಾಹಿತ್ಯಕ್ಕೂ ಕನ್ನಡ ಜನಕ್ಕೂ ಮಹೋಪಕಾರವನ್ನುಂಟು ಮಾಡಿತು. ಸಂಸ್ಕೃತ ಪ್ರಾಕೃತ ಭಾಷೆಗಳಲ್ಲಿರುವ ಹಲವಾರು ಗ್ರಂಥಗಳು ಇವರಿಂದ ಅನುವಾದಿತವಾಗಿ, ಕನ್ನಡ ಸಾಹಿತ್ಯ ಭಂಡಾರವನ್ನು ತುಂಬಿದುವು. ಇವರಿಂದ ಕನ್ನಡ ಸಾಹಿತ್ಯ ಶ್ರೀಮಂತವಾಯಿತು. ಕನ್ನಡ ಸಾಹಿತ್ಯ ಪರಿಷತ್ತು ಇವರು ರಚಿಸಿದ ಅಪಾರ ಸಾಹಿತ್ಯವನ್ನು ಗುರುತಿಸಿ ಗೌರವಿಸಿತು. ಅರಮನೆಯವರು 'ಪಂಡಿತರತ್ನ' ಎಂಬ ಬಿರುದನ್ನು ಕೊಟ್ಟು ಶಾಸ್ತ್ರಿಯವರನ್ನು ಗೌರವಿಸಿದರು.

ಶಾಂತಿರಾಜಶಾಸ್ತ್ರಿಗಳವರ ಹಲವಾರು ಅನುವಾದಿತ ಕೃತಿಗಳಲ್ಲಿ ಶ್ರೀ ಅಮಿತಗತ್ಯಾಚಾರ್ಯರ 'ಧರ್ಮಪರೀಕ್ಷೆ' ಒಂದು. ಇದರ ಕಥಾಸಾರ ಇಂತಿದೆ—

ವೈಜಯಂತಿಯೆಂಬ ನಗರದಲ್ಲಿ ಜಿತಶತ್ರುವೆಂಬ ವಿದ್ಯಾಧರ ದೊರೆ ಇದ್ದನು. ಇವನ ಹೆಂಡತಿ ವಾಯುವೇಗೆ. ಇವರಿಗೆ ಮನೋವೇಗನೆಂಬ ಮಗನಿದ್ದನು. ಪವನವೇಗನೆಂಬವನು ಇವನ ಸನ್ಮಿತ್ರ. ಇವನು ಪ್ರಿಯಾಪುರಿಯ ದೊರೆಯಾದ ವಿದ್ಯಾಧರ ರಾಜನ ಮಗ. ಇವರಿಬ್ಬರೂ ಅನ್ಯೋನ್ಯವಾದ ಸ್ನೇಹಿತರಾಗಿದ್ದರು. ಆದರೆ ಪವನವೇಗ ಜಿನಧರ್ಮವನ್ನು ನಂಬದೇಹೋದ. ಜಿನೇಶ್ವರನಿಗೆ ವಿರೋಧವಾಗಿ ವಾದಿಸಲು ಪ್ರಾರಂಭಿಸಿದ. ಇದು ಮನೋವೇಗನಿಗೆ ಹಿಡಿಸದಾಯಿತು. ತನ್ನ ಮಿತ್ರ ಕುಮಾರ್ಗಕ್ಕಿಳಿದನೆಂದು ವ್ಯಸನಪಟ್ಟ. ಅವನನ್ನು ಸದ್ಧರ್ಮಿಯನ್ನಾಗಿ ಮಾಡುವ ಸದವಕಾಶವೆಂದು ದೊರೆತೀತೆಂದು ಚಿಂತಿಸತೊಡಗಿದ.

ಒಂದು ಸಲ ಮನೋವೇಗನು 'ಜಿನಮತಿ' ಎಂಬ ಜೈನ ತಪಸ್ವಿಯನ್ನು ಭೇಟಿಮಾಡಿ, ತನ್ನ ಸ್ನೇಹಿತನನ್ನು ಸುಮಾರ್ಗಕ್ಕೆ ತರಲು ಹೇಗೆ ಸಾಧ್ಯವೆಂದು ಕೇಳಿದನು. ಅವರು "ನಿನ್ನ ಸ್ನೇಹಿತನನ್ನು ಪಾಟಲೀಪುತ್ರಕ್ಕೆ ಕರೆದುಕೊಂಡು ಹೋಗು. ಅಲ್ಲಿ ದೃಷ್ಟಾಂತಗಳ ಮೂಲಕ ಅನ್ಯಮತಗಳನ್ನು ಖಂಡಿಸಿ ಅವನ ಮನದ ಮಿಥ್ಯಾತ್ವವನ್ನು ಕಳೆಯಲು ಸಾಧ್ಯ, ಆಗ ಅವನ ಮನಸ್ಸು ಜಿನಧರ್ಮದ ಕಡೆ ಓಲುತ್ತದೆ" ಎಂದು ಹೇಳಿದರು. ಮಾರನೆಯ ದಿನವೇ ಸ್ನೇಹಿತನಾದ ಪವನವೇಗನು ದಾರಿಯಲ್ಲಿ ಸಿಕ್ಕುತ್ತಾನೆ. ಜಿನಮತಿಯತಿಗಳ ಅಪ್ಪಣೆಯಂತೆ ಇಬ್ಬರೂ ಪಾಟಲೀಪುತ್ರಕ್ಕೆ ಹೋಗುತ್ತಾರೆ. ಅಲ್ಲಿ ಬ್ರಹ್ಮ ಸಭೆಯಲ್ಲಿದ್ದ ಭೇರಿಯನ್ನು ಹೊಡೆದು, ಅಲ್ಲಿದ್ದ ಸಿಂಹಾಸನದಲ್ಲಿ ಕುಳಿತುಕೊಳ್ಳುತ್ತಾರೆ. ಅಲ್ಲಿಯ ಶಾಸ್ತ್ರಜ್ಞರಾದ ವಿಪ್ರರು ಬಂದು, "ಪಂಡಿತರಾದವರು ವಾದಾರ್ಥವಾಗಿ ಬಂದು, ಭೇರಿಯನ್ನು ಬಾರಿಸಿ, ವಾದದಲ್ಲಿ ಗೆದ್ದವರು ಮಾತ್ರ ಈ ಸಿಂಹಾಸನದಲ್ಲಿ ಕುಳಿತುಕೊಳ್ಳುವ ಪದ್ಧತಿ ಉಂಟು. ನೀವು ಯಾವ ಶಾಸ್ತ್ರ ಬಲ್ಲಿರೆಂದು" ಕೇಳುತ್ತಾರೆ. ಆಗ ಇವರು "ನಾವು ಯಾವ ಶಾಸ್ತ್ರವನ್ನು

ಅರಿಯೆವು. ಕುಳಿತುಕೊಳ್ಳುವ ಸ್ಥಳವೆಂದು ನಾವು ಕುಳಿತುಕೊಂಡೆವು" ಎಂದು ಹೇಳಿ ಸಿಂಹಾಸನದಿಂದ ಇಳಿಯುತ್ತಾರೆ. ಅನಂತರ ಆ ವಿಪ್ರರೊಡನೆ ವಾದ ಮಾಡಿ ಗೆಲ್ಲುತ್ತಾರೆ. ಹೀಗೆ ಆರು ದಿನಗಳವರೆಗೆ ನಿತ್ಯವೂ ವಿವಿಧ ವೇಷಗಳಲ್ಲಿ ಪಾಟಲೀಪುತ್ರಕ್ಕೆ ಹೋಗಿ, ಅಸಂಬದ್ಧ ಕಥೆಗಳನ್ನು ಹೇಳಿ, ಅವಕ್ಕೆ ಸಂವಾದಿಯಾದ ಭಾರತ, ಭಾಗವತ, ರಾಮಾಯಣ, ಪುರಾಣಗಳಲ್ಲಿಯ ಕಥೆಗಳನ್ನು ಜೋಡಿಸಿ, ವಾದಾರ್ಥಿಗಳಾದ ವಿಪ್ರರನ್ನು ಸೋಲಿಸುತ್ತಾರೆ. ಇಷ್ಟೆಲ್ಲ ವಾದಗಳನ್ನು ಅರಿತ ಪವನ ವೇಗನಿಗೆ ಜಿನಧರ್ಮದಲ್ಲಿ ವಿಶ್ವಾಸ ಉಂಟಾಗುತ್ತದೆ.

ಆಗ ಮನೋವೇಗನಿಗೆ ಸ್ನೇಹಿತನ ಬಗ್ಗೆ ಅಕ್ಕರೆ ಉಂಟಾಗುತ್ತದೆ. ಅವನು, ಜಿನಧರ್ಮದ ಬಗ್ಗೆ ಇನ್ನೂ ಕೆಲವು ವಿಷಯಗಳನ್ನು ತಿಳಿಸುತ್ತಾನೆ. ಜಿತೇಂದ್ರಿಗಳಾದ ಯತಿಗಳೇ ನಿಜವಾದ ಗುರುಗಳು. ಅಹಿಂಸೆ, ಸತ್ಯ, ಶುಚಿತ್ವ, ಶಾಂತಿ, ಶೀಲಗಳನ್ನು ಬೀರುವ ಧರ್ಮವೇ ಶ್ರೇಷ್ಠಧರ್ಮವು. ರಾಗರಹಿತನಾದ ಜಿನೇಶ್ವರನೇ ದೇವರು. ಕಾರಣಸಹಿತವಾದ ಮುಕ್ತಿಯನ್ನು, ಸಂಸಾರವನ್ನು ನಿರೂಪಿಸುವುದೇ ಶ್ರೇಷ್ಠ ಆಗಮವು. ಧರ್ಮವು, ಆರ್ಜವ, ಮಾರ್ದವ. ಸತ್ಯ, ತ್ಯಾಗ, ಶೌಚ, ಕ್ಷಮಾ, ತಪ, ಬ್ರಹ್ಮಚರ್ಯ, ಅಪರಿಗ್ರಹ. ಸಂಯಮಗಳೆಂದು ಹತ್ತು ವಿಧವಾಗಿದೆ. ಸಮ್ಯಕ್ತ್ವ, ಜ್ಞಾನ, ಚಾರಿತ್ರ, ತಪಸ್ಸುಗಳೆಂಬ ರತ್ನಗಳನ್ನು ನೀಡುವ ಈ ದೇವ, ಗುರು, ಧರ್ಮಾಗಮಗಳಲ್ಲದೆ ಮುಕ್ತಿಗೆ ಬೇರೆ ಸಾಧನವಿಲ್ಲ. ಹೀಗೆ ತಿಳಿಸಿದ ಮನೋವೇಗನ ಮಾತುಗಳು ಪವನವೇಗನನ್ನು ಶುದ್ಧಾತ್ಮನನ್ನಾಗಿ ಮಾಡಿದುವು. ಅನಂತರ ಇಬ್ಬರೂ ಜಿನಮತಿಯತಿಯ ಹತ್ತಿರ ಹೋದರು.

ಅವರು ಅಹಿಂಸಾ, ಸತ್ಯ, ಅಚೌರ್ಯ, ಬ್ರಹ್ಮಚರ್ಯ, ಅಪರಿಗ್ರಹ–ಎಂಬ ಐದು ಅಣುವ್ರತಗಳನ್ನೂ, ದಿಗ್ವ್ರತ, ದೇಶವ್ರತ, ಅನರ್ಥದಂಡವಿರತಿವ್ರತಗಳಾದ ಗುಣವ್ರತಗಳನ್ನು ಇಬ್ಬರಿಗೂ ಬೋಧಿಸುತ್ತಾರೆ. ಯತಿಗಳು ಬೋಧಿಸಿದ ತತ್ತ್ವಗಳನ್ನು ಪವನವೇಗನು ಕೇಳಿ, ಸಂತೋಷಹೊಂದಿ ಯತಿಗಳಿಗೆ ವಂದಿಸುತ್ತಾನೆ. ಅನಂತರ ಇಬ್ಬರೂ ಯತಿಗಳಿಂದ ಆಶೀರ್ವಾದ ಪಡೆದು ತಮ್ಮ ನಗರಕ್ಕೆ ತೆರಳುತ್ತಾರೆ. ಹೀಗೆ ಇದೊಂದು ಮನೋರಂಜಕವಾಗಿಯೂ, ಬೋಧಪರವಾಗಿಯೂ ಇರುವ ಕೃತಿ.

'ಧರ್ಮಪರೀಕ್ಷೆ' ಗ್ರಂಥದ ಮೂಲಕರ್ತೃ ಜಯರಾಮನೆಂದೂ, ಅವನು ತನ್ನ ಕೃತಿಯನ್ನು ಗಾಥಾ ಛಂದಸ್ಸಿನಲ್ಲಿ ಬರೆದನೆಂದೂ, ಅದನ್ನೇ ಹರಿಷೇಣನು (988) ಪದ್ಧತಿ ಛಂದಸ್ಸಿನಲ್ಲಿ ಬರೆದನೆಂದು ಕೆಳಗಿನ ಕಡವಕ[1]ದಿಂದ ತಿಳಿದು ಬರುತ್ತದೆ—

'ಘತ್ತಾ–ಜಾ ಜಯರಾಮೇಂ ಆಸಿ ವಿರಯಿಯ
ಗಾಯ–ಪಬಂಧಿಂ
ಸಾಹಮಿ ಧರ್ಮಪರಿಕ್ಖಸಾ ಪದ್ಧಡಿಯಾ ಬಂಧಿಂ'

ಜಯರಾಮನ 'ಧರ್ಮಪರೀಕ್ಷೆ' ಕಾಲಗರ್ಭದಲ್ಲಿ ಅಡಗಿದೆ. ಹರಿಷೇಣನ (988) 'ಧರ್ಮಪರೀಕ್ಷೆ'ಯಿಂದ ಜಯರಾಮನೇ ಈ ಗ್ರಂಥಕ್ಕೆ ಮೂಲ ಪುರುಷನೆಂದು ಮೇಲಿನ ಕಡವಕದಿಂದ ತಿಳಿದು ಬರುತ್ತದೆ. ಹರಿಷೇಣನ ಅಪಭ್ರಂಶದಲ್ಲಿರುವ 'ಧರ್ಮಪರೀಕ್ಷೆ' ಅಮಿತಗತ್ಯಾಚಾರ್ಯರ ಧರ್ಮಪರೀಕ್ಷೆಗಿಂತ 26 ವರ್ಷ ಮೊದಲಿನದು. ಇದರ ಕಥಾಸರಣಿ, ಗತಿ, ಸಂದರ್ಭ ಸನ್ನಿವೇಶಗಳು ಈ ವಿಷಯಗಳಲ್ಲಿಯೂ ಅಮಿತಗತಿಯ ಕೃತಿಯು ಸದೃಶತರವಾಗಿದೆ. ಎರಡೂ ಕಥೆಗಳ ಕಥಾ ಚೌಕಟ್ಟು, ಕಥೆಯಗತಿ ಒಂದೇ ಆಗಿದೆ. ಎರಡರ ಮನೋಭಾವನೆ ಒಂದೇ ಆಗಿದೆ. ಎರಡರ ಕಥಾ ನಿರೂಪಣೆಯೂ ಹೆಚ್ಚಾಗಿ ಏಕರೂಪದ್ದಾಗಿದೆ. ಆದರೂ ಕೆಲವು ಸಂದರ್ಭ ಸನ್ನಿವೇಶಗಳಲ್ಲಿ ವ್ಯತ್ಯಾಸಗಳನ್ನು ಕಾಣುತ್ತೇವೆ. ಹರಿಷೇಣನು 11 ಸಂಧಿಗಳಲ್ಲಿ ತನ್ನ ಗ್ರಂಥವನ್ನು ವಿಭಾಗಿಸಿದ್ದಾನೆ. ಅಮಿತಗತ್ಯಾಚಾರ್ಯರು 20 ಪರಿಚ್ಛೇದಗಳಲ್ಲಿ ತಮ್ಮ ಕೃತಿಯನ್ನು ವಿಂಗಡಿಸಿದ್ದಾರೆ. 8ನೆಯ ಸಂಧಿಯಲ್ಲಿ ಹರಿಷೇಣನು ಜಿನಧರ್ಮದ ರಾಮಾಯಣವನ್ನು ಕೆಲವು ಕಡವಕಗಳಲ್ಲಿ ಬರೆದಿದ್ದಾನೆ. ಆಚಾರ್ಯರು ಇದೆಲ್ಲವನ್ನೂ ಕೈಬಿಟ್ಟಿದ್ದಾರೆ. ರಾತ್ರಿಯ ಭೋಜನ ವಿವರಣವನ್ನು ಹರಿಷೇಣನು 11ನೆಯ ಸಂಧಿಯಲ್ಲಿ ಕೆಲವು ಸ್ಥಳೀಯ ಬಣ್ಣಗಳನ್ನು ಕೊಟ್ಟು ರಂಜನೆಯಾಗಿ ಮಾಡಿದ್ದಾನೆ. ಆದರೆ ಆಚಾರ್ಯರು 5ನೆಯ ಪರಿಚ್ಛೇದದಲ್ಲಿ ಕೆಲವು ತಾತ್ವಿಕ ಟೀಕೆಗಳೊಂದಿಗೆ ಅನ್ಯ ನಿಯಮಗಳನ್ನು ಕುರಿತು ನೀತಿಪರ ಉಪದೇಶಗಳನ್ನು ಈ ಸಂದರ್ಭದಲ್ಲಿ ಸೇರಿಸಿ

1. ಕಡವಕವೆಂದರೆ ಅಪಭ್ರಂಶದಲ್ಲಿ ಪದ್ಯದ ವಿಭಾಗಗಳು ಎಂದು.

ದ್ದಾರೆ. ಹೀಗೆ ಹಲವು ಸನ್ನಿವೇಶಗಳ ವ್ಯತ್ಯಾಸವನ್ನು ಎರಡೂ ಕೃತಿಗಳಲ್ಲಿ ಕಾಣುತ್ತೇವೆ.

ಅಮಿತಗತ್ಯಾಚಾರ್ಯರಿಗೆ ಸೂಕ್ತಿ ಮತ್ತು ಪ್ರಾಪಂಚಿಕ ಧೀಮಂತಿಕೆಯುಳ್ಳ ಸರಸವಾದ ನೀತಿ ಬೋಧನೆಯಲ್ಲಿ ವಿಶೇಷವಾದ ಆಸಕ್ತಿಯಿದೆ. ವೈಷಯಿಕ ಸುಖ, ಪ್ರಾಪಂಚಿಕ ಆಕರ್ಷಣೆಗಳನ್ನು ನಿಂದಿಸುವಲ್ಲಿ ವಿದಗ್ಧ ರಾಗಿದ್ದಾರೆ. ಆದರಿಂದ ಇವರು, ಜೈನಶ್ರಾವಕರು ಹಾಗು ಯತಿಗಳಿಗೆ ನಿಯತವಾದ ನಿಯಮಗಳನ್ನನುಸರಿಸಿ, ಜೀವನದ ಗುರಿಯನ್ನು ಪ್ರತಿಪಾದಿಸಲು ಪ್ರತಿಯೊಂದು ಸಂದರ್ಭವನ್ನೂ ಸೆರೆಹಿಡಿದಿಟ್ಟುಕೊಳ್ಳುತ್ತಾರೆ. ನೀರಸವೂ ಶುಷ್ಕವೂ ಆದ ಉಪದೇಶಾತ್ಮಕ ವಿವರಣೆಗಳಿಗೆ ಇವರು ಸರಳ ಶೈಲಿಯ ಉಡುಗೆಯನ್ನು ತೊಡಿಸಿದ್ದಾರೆ. ಇಂಥ ಸಂದರ್ಭದಲ್ಲಿ ಹರಿಷೇಣನ ಧರ್ಮಪರೀಕ್ಷೆಗಿಂತ ಅಮಿತ ಗತ್ಯಾಚಾರ್ಯರ ಧರ್ಮಪರೀಕ್ಷೆಯಲ್ಲಿ ಹೆಚ್ಚಿನ ವಿವರಗಳು ದೊರೆಯುತ್ತವೆ. ಕಥಾವಸ್ತು ಒಂದೇ ಆದರೂ ಇವ ರಿಬ್ಬರ ಉಪದೇಶ ಮತ್ತು ತತ್ತ್ವ ಸಂದೇಶಗಳಲ್ಲಿ ವ್ಯತ್ಯಾಸ ವುಳ್ಳವರಾಗಿದ್ದಾರೆ.

ಅಮಿತಗತ್ಯಾಚಾರ್ಯರ ಈ ಕಾವ್ಯ ಸಂಸ್ಕೃತ ಮಹಾ ಕಾವ್ಯಗಳ ಹಾಗೆ ಅಲಂಕಾರದಿಂದ ಶೋಭಿಸುತ್ತದೆ. ಇವರಿಗೆ ಶಬ್ದಗಳನ್ನು ಬಳಸುವಲ್ಲೂ, ಶೈಲಿಯಲ್ಲೂ ಸಂಪೂರ್ಣವಾದ ಪ್ರಭುತ್ವವಿದೆ. ಇವರ 'ಸುಭಾಷಿತ ಸಂದೋಹ'[3] ಎಂಬ ಕಾವ್ಯವು ಉತ್ತಮ ಶೈಲಿಗೆ ಮಾದರಿ ಯಾಗಿದೆ. ಇವರಿಗೆ ಸಂಸ್ಕೃತ ವ್ಯಾಕರಣ ಹಾಗು ಶಬ್ದ ಕೋಶಗಳಲ್ಲಿ ಹಿಡಿತವಿದೆ. ಅವುಗಳನ್ನು ಲೀಲಾಜಾಲವಾಗಿ ಬಳಸಿದ್ದಾರೆ. ಇವರ 'ಧರ್ಮಪರೀಕ್ಷೆ'ಯಲ್ಲಿ ಎಷ್ಟೋ ಪ್ರಾಕೃತ ಪದಗಳಿವೆ. ಕೆಲವು ಎಡೆಗಳಲ್ಲಿ ಸಂಸ್ಕೃತ ಪದ ಗಳನ್ನು ಬಳಸುವಲ್ಲಿಯೂ ಇಡಿ ಇಡಿಯಾಗಿ ಪ್ರಾಕೃತ ಪದಗಳನ್ನು ಬಳಸಿದ್ದಾರೆ. ಇವರ 'ಧರ್ಮಪರೀಕ್ಷೆ'ಯ ಕೆಲವು ಭಾಗಗಳಿಗೆ ಪ್ರಾಕೃತ ಭಾಷೆಯಲ್ಲಿರುವ 'ಧರ್ಮ ಪರೀಕ್ಷೆ'ಯೇ ಮೂಲವೆಂದು ಮಿರೋನೊ ಎನ್ನುವ ಜರ್ಮನ್ ಲೇಖಕನು ಒಂದು ನಿರ್ಣಯಕ್ಕೆ ಬಂದಿದ್ದಾನೆ. ಅಲ್ಲದೆ ಕೆಲವು ಕಥೆಗಳಂತೂ ಪ್ರಾಕೃತಮೂಲದಿಂದ ಬಂದವುಗಳಾಗಿವೆ. ಹೀಗೆ ಇವರು ಪ್ರಾಕೃತ ಮೂಲದ ಆಧಾರದಿಂದ ಈ ಗ್ರಂಥವನ್ನು ಬರೆದಿದ್ದಾರೆಂಬುದಕ್ಕೆ ಪ್ರಾಮಾಣ್ಯಗಳಿವೆ. ಸಂಸ್ಕೃತ ಭಾಷೆಯ ಪ್ರಭುತ್ವದಲ್ಲಿ ಇವರಿಗೆ ಆತ್ಮ ವಿಶ್ವಾಸವಿದ್ದಿತೆಂಬ ವಿಷಯವನ್ನು ನಾವು ಒಪ್ಪಬಹುದು. ಇವರು ಈ ಕೃತಿಯನ್ನು ಎರಡು ತಿಂಗಳಲ್ಲಿ ಮುಗಿಸಿರುವುದಾಗಿ ಅವರೇ ಹೇಳಿಕೊಂಡಿದ್ದಾರೆ. ಇವರ 'ಆರಾಧನಾ' ಗ್ರಂಥಕ್ಕೆ ಶಿವಾರ್ಯನ ಪ್ರಾಕೃತ 'ಆರಾಧನಾ' ಕೃತಿಯೂ ಇವರ 'ಪಂಚಸಂಗ್ರಹ'ಕ್ಕೆ ಮುಖ್ಯವಾಗಿ ಪ್ರಾಕೃತ 'ಪಂಚಸಂಗ್ರಹ'ವೂ ಆಧಾರ ವಾಗಿದೆ. ಇವುಗಳ ಹಾಗೆ ಅಮಿತಗತ್ಯಾಚಾರ್ಯರ 'ಧರ್ಮ ಪರೀಕ್ಷೆ'ಗೂ ಪ್ರಾಕೃತದ 'ಧರ್ಮಪರೀಕ್ಷೆ' ಮೂಲವಾಗಿರ ಬಹುದೆಂದು ಹೇಳಬಹುದು.

ಕಥೆಗಳ ಮೂಲಕ ಇತರ ಧರ್ಮಗಳನ್ನು ಪರೀಕ್ಷಿಸು ವುದು ಜೈನರಿಗೆ ಹೊಸದೇನು ಅಲ್ಲ. ಜೈನಧರ್ಮಕ್ಕೂ ವೈದಿಕ ಧರ್ಮಕ್ಕೂ ಮೊದಲಿನಿಂದಲೂ ತಿಕ್ಕಾಟವಿದ್ದೇ ಇದ್ದಿತು. ಏಳನೆಯ ಶತಮಾನದ ಹೊತ್ತಿಗೆ ಈ ಎರಡು ಧರ್ಮಗಳ ಘರ್ಷಣೆಯೂ ಅತಿರೇಕವಾಗಿತ್ತೆಂದು ತೋರು ತ್ತದೆ. ಇದಕ್ಕಾಗಿ ಜಿನದಾಸಗಣಿಯ (677) ನಿಶೀಥ ಚೂರ್ಣಿಯಲ್ಲಿರುವ 'ಧೂರ್ತಾಖ್ಯಾನ', ಹರಿಭದ್ರ ಸೂರಿಯ (750) 'ಧೂರ್ತಾಖ್ಯಾನ'ವೆಂಬ ಜೈನಮತಿಯ ಗ್ರಂಥಗಳು ಹುಟ್ಟಿದವೆಂದು ಕಾಣುತ್ತದೆ. ಈ ಗ್ರಂಥಗಳು ವೈದಿಕ ಧರ್ಮವನ್ನು ಇದಕ್ಕೆ ಸಂಬಂಧಪಟ್ಟ ಸ್ಮೃತಿ, ಪುರಾಣ, ಭಾಗವತ, ಭಾರತ, ರಾಮಾಯಣಗಳನ್ನು ಅಸಂಬದ್ಧ ಕಥೆಗಳೊಡನೆ ಹೋಲಿಸಿ, ವಿಡಂಬನಾತ್ಮಕ ವಾಗಿಯೂ ತರ್ಕಬದ್ಧವಾಗಿಯೂ ಖಂಡಿಸಿವೆ. ಈ ಎರಡೂ ಗ್ರಂಥಗಳು ಪ್ರಾಕೃತ ಭಾಷೆಯಲ್ಲಿವೆ. ಬಹುಶಃ ಪ್ರಾಕೃತದಲ್ಲಿರುವ ಈ ಧೂರ್ತಾಖ್ಯಾನಗಳು ಈ 'ಧರ್ಮ ಪರೀಕ್ಷೆ'ಯ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿವೆ ಯೆಂದು ತೋರುತ್ತದೆ. ಧೂರ್ತಾಖ್ಯಾನದಲ್ಲಿರುವ ಆಶ್ಚರ್ಯಕರವಾದ ಕೆಲವು ಕಥೆಗಳನ್ನು 'ಧರ್ಮಪರೀಕ್ಷೆ' ಯಲ್ಲಿಯೂ ಕಾಣುತ್ತೇವೆ. ಅಲ್ಲದೆ ಅಲ್ಲಿ ಉದಾಹರಣೆ ಗಳಿಗೆ ಕೊಟ್ಟ ಕೆಲವು ಪುರಾಣ ಕಥೆಗಳು ಇಲ್ಲಿಯೂ

---

2. Edited in Kavyamala No. 32. Edited with German Translation by R. Sehmidt; Lepzig 1908.
3. Die Dharma Pariksha des Amitagati.

ಕಾಣಿಸಿಕೊಳ್ಳುತ್ತವೆ. ಹೀಗಾಗಿ ಈ ಇಬ್ಬರೂ ಪುರಾಣಗಳ ಮೇಲೆ ಮಾಡಿದ ದಾಳಿಯು ಸಂಪೂರ್ಣವಾಗಿ ನಿಸ್ಸಂದಿಗ್ಧವೂ ಧ್ವನಿಪೂರ್ಣವೂ ಆಗಿದೆ. ಆದರೆ ಹರಿಷೇಣ ಅಮಿತಗತಿಯರ 'ಧರ್ಮಪರೀಕ್ಷೆ'ಯಲ್ಲಿ ಇದು ವಾಚ್ಯವೂ ಉಗ್ರವೂ ಆಗಿದೆ. ಇಬ್ಬರೂ ಪುರಾಣಗಳನ್ನು ಖಂಡಿಸುವುದಲ್ಲದೆ, ಹೆಚ್ಚು ಪ್ರಮಾಣದ ಜೈನ ವೇದಾಂತಗಳನ್ನೂ, ಸ್ವಮತಾಭಿಮಾನವನ್ನೂ, ನೀತಿಯನ್ನೂ ಬೋಧಿಸಲು ಪ್ರಯತ್ನಿಸಿದ್ದಾರೆ. ಜಿನದಾಸಗಣಿ, ಹರಿಭದ್ರರು ವಿನೋದದಿಂದಲೇ ಪುರಾಣ ಕಥೆಗಳ, ದಂತ ಕಥೆಗಳ ರಚನೆಯನ್ನು ಭಂಗಗೊಳಿಸಿದ್ದಾರೆ. ಹರಿಷೇಣ ಅಮಿತಗತ್ಯಾಚಾರ್ಯರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ಅವರು ಜೈನಧರ್ಮದ ಬೋಧನೆಗಳನ್ನು ಭದ್ರವಾಗಿ ನಿಲ್ಲಿಸಲು ಹೊರಟಿದ್ದಾರೆ. ಈ ರೀತಿಯಾಗಿ ಈ ಇಬ್ಬರು ಧರ್ಮ ಪರೀಕ್ಷಕಾರರು ತಮ್ಮ ಕೃತಿಗಳಲ್ಲಿ ಜೈನಧರ್ಮದ ಮೇಲ್ಮೆಯನ್ನು ಮೆರೆಸಿದ್ದಾರೆ.

'ಧರ್ಮಪರೀಕ್ಷೆ'ಯನ್ನು ಈ ಇಬ್ಬರಲ್ಲದೆ ಇನ್ನೂ ಹಲವಾರು ಜನರು ವಿವಿಧ ಭಾಷೆಗಳಲ್ಲಿ ಬರೆದಿದ್ದಾರೆ[4] ಪ್ರಾಕೃತ, ಅಪಭ್ರಂಶ, ಸಂಸ್ಕೃತ, ಕನ್ನಡ, ಮರಾಠಿ, ಹಿಂದಿ, ಗುಜರಾತಿ—ಮೊದಲಾದ ಭಾಷೆಗಳಲ್ಲಿ ಇದರ ಅನುವಾದವಾಗಿದೆ. ಜರ್ಮನ್ ಭಾಷೆಯಲ್ಲಿಯೂ ಇದರ ಅಧ್ಯಯನವಾಗಿದೆ. ವೃತ್ತವಿಲಾಸನೆಂಬ ಕನ್ನಡದ ಕವಿ (1360) ಮೊತ್ತ ಮೊದಲು ದೇಶೀ ಭಾಷೆಯಲ್ಲಿ ಈ 'ಧರ್ಮಪರೀಕ್ಷೆ ಯನ್ನು ಕಾವ್ಯ ರೂಪದಲ್ಲಿ ರಚಿಸಿದ್ದಾನೆ. ಇದರ ಅಧ್ಯಯನವೂ ತೌಲನಿಕವಾಗಿ ಕನ್ನಡದಲ್ಲಿ ಆಗಿದೆ.[5]

ಅನುವಾದ ಕಾರ್ಯದಲ್ಲಿ ಪಳಗಿದ ಶಾಂತಿರಾಜಶಾಸ್ತ್ರಿಗಳವರು ಅಮಿತಗತ್ಯಾಚಾರ್ಯರ 'ಧರ್ಮಪರೀಕ್ಷೆ'ಯನ್ನು ಸರಳಸುಲಭ ಕನ್ನಡಭಾಷೆಯಲ್ಲಿ ಅನುವಾದಿಸಿದ್ದಾರೆ. (1938). ಈಗ ಈ ಕೃತಿಯು ಮೂರನೆಯ ಪ್ರಕಟನೆಯನ್ನೂ ಕಂಡಿದೆ. ಇದರಿಂದ ಇದರ ಘನತೆ ಎಷ್ಟೆಂಬುದು ಗೊತ್ತಾಗುತ್ತದೆ. ಅಮಿತಗತ್ಯಾಚಾರ್ಯರು ತಮ್ಮ 'ಪ್ರಶಸ್ತಿ' ಭಾಗದಲ್ಲಿ ಒಂದು ಮಹತ್ವವಾದ ವಿಷಯವನ್ನು ಹೀಗೆ ತಿಳಿಸಿದ್ದಾರೆ.

"ನ ಬುದ್ಧಿಗರ್ವೇಣ ನಪಕ್ಷಪಾತತೋ
ಮಯಾನ್ಯಶಾಸ್ತ್ರಾರ್ಥ ವಿವೇಚನಂ ಕೃತಂ ।
ಮಮೈಷಧರ್ಮಃಶಿವಸೌಖ್ಯದಾಯಕಂ
ಪರೀಕ್ಷಿತುಂಕೇವಲ ಮುತ್ಥಿತಃ ಶ್ರಮಃ" ॥

'ಈ ಕೃತಿಯಲ್ಲಿ ಅನ್ಯಶಾಸ್ತ್ರ, ಧರ್ಮಗಳ ಅಭಿಪ್ರಾಯಗಳನ್ನು ವಿಚಾರಿಸಿದುದು ನನ್ನ ಬುದ್ಧಿಗರ್ವದಿಂದಾಗಲಿ, ಸ್ವಧರ್ಮಪಕ್ಷಪಾತದಿಂದಾಗಲಿ ಅಲ್ಲ. ನನ್ನ ಪ್ರಯತ್ನವು ಕೇವಲ ಶಿವಸೌಖ್ಯದಾಯಕವಾದ ಧರ್ಮವನ್ನು ಕೊಡುವ ಯಥಾರ್ಥ ಧರ್ಮದ ಪರೀಕ್ಷೆ ಮಾಡುವುದಾಗಿದೆ'ಎಂದಿದ್ದಾರೆ ಅಮಿತಗತ್ಯಾಚಾರ್ಯರು. ವಿಷಯಗಳನ್ನು ಗ್ರಹಣ ಮಾಡುವವರಲ್ಲಿ ಆಜ್ಞಾ ಪ್ರಧಾನರೆಂದೂ, ಪರೀಕ್ಷಾ ಪ್ರಧಾನರೆಂದೂ ಎರಡು ಬಗೆಗಳುಂಟು. ಶಾಸ್ತ್ರದಲ್ಲಿ ಹೇಳಿರುವ ವಿಷಯಗಳನ್ನು ವಿಮರ್ಶೆಮಾಡದೆ ಶಾಸ್ತ್ರಾಜ್ಞೆಯೇ ಮುಖ್ಯವೆಂದು ನಂಬುವವರು ಆಜ್ಞಾಪ್ರಧಾನರೆಂದೂ, ಶಾಸ್ತ್ರೋಕ್ತ ವಿಷಯಗಳನ್ನು ನಿಷ್ಪಕ್ಷಪಾತದಿಂದ ಪರೀಕ್ಷಿಸಿ, ಬೇಡವಾದ ಅಭಿಪ್ರಾಯಗಳನ್ನೂ ಕೈಬಿಟ್ಟು, ಬೇಕಾದ ವಿಷಯಗಳನ್ನು ಗ್ರಹಿಸುವವರಿಗೆ ಪರೀಕ್ಷಾ ಪ್ರಧಾನರೆಂದೂ ಹೆಸರು. ಆಜ್ಞಾಪ್ರಧಾನರಿಗಿಂತ ಪರೀಕ್ಷಾ ಪ್ರಧಾನರೇ ಶ್ರೇಷ್ಠರೆಂದು ಹೇಳುವುದುಂಟು. ಆದ್ದರಿಂದ ಅಮಿತಗತ್ಯಾಚಾರ್ಯರು ಪರಮತಗಳ ವಿಷಯಗಳನ್ನು ಈ ಗ್ರಂಥದಲ್ಲಿ ಉದ್ಧೃತ ಮಾಡಿ ನಿಷ್ಪಕ್ಷಪಾತಿಗಳಾದ ವಿಮರ್ಶಕರೇ ವಿಮರ್ಶಿಸಲೆಂದು ಹೇಳಿದ್ದಾರೆ. ಇದರ ಅನುವಾದಕರಾದ ಶಾಂತಿರಾಜಶಾಸ್ತ್ರಿಗಳವರೂ ಇದೇ ಉದ್ದೇಶದಿಂದ ಈ ಕೃತಿಯನ್ನು ಅನುವಾದಿಸಿದ್ದಾರೆ. ಅಲ್ಲದೆ ಸ್ವಧರ್ಮಪಕ್ಷಪಾತದಿಂದಾಗಲಿ, ಪಾಂಡಿತ್ಯದ ಗರ್ವದಿಂದಾಗಲಿ ಇವರು ಈ ಗ್ರಂಥವನ್ನು ಸ್ವತಃ ಅನುವಾದಿಸಲು ಹೋಗಲಿಲ್ಲವಂತೆ. 'ಮಂಡ್ಯದ ಶ್ರೀ ನಂಜಪ್ಪಗೌಡರು ಮೊದಲಾದ ಕೆಲವು ಒಕ್ಕಲಿಗ ಮಹಾಶಯರು ಶ್ರೀ ಬಿದಿರೆ ಪಾಯಿಸಾಗರ ಸ್ವಾಮಿಗಳವರೂ ಈ ಗ್ರಂಥವನ್ನು ಅನುವಾದಿಸಿಕೊಡಬೇಕೆಂದು ಕೇಳಿಕೊಂಡರಂತೆ. ಆಗ 'ಉತ್ತರ ಪುರಾಣ' ಪ್ರಕಾಶನ ಕಾರ್ಯವನ್ನು ನಿಲ್ಲಿಸಿ, ಮಧ್ಯದಲ್ಲಿ ಇದನ್ನು ಅನುವಾದಿಸಿದ್ದೇನೆಂದು ಹೇಳಿದ್ದಾರೆ. ಇದು ಶಾಸ್ತ್ರಿಗಳವರ ನಮ್ರತೆ ಹಾಗು ಸಜ್ಜನಿಕೆಯನ್ನು ಸೂಚಿಸುತ್ತದೆ.

---

4. ಜಿನರತ್ನಕೋಶ (ಪ್ರೊ. ಎಚ್. ಡಿ. ವೇಲಂಕರ್) ಪು. 189–190 ನೋಡಿ.

5. ವೃತ್ತವಿಲಾಸನ ಧರ್ಮಪರೀಕ್ಷೆ–ಒಂದು ತೌಲನಿಕ ಅಧ್ಯಯನ. ಡಾ॥ ಕೆ. ರಾಘವೇಂದ್ರರಾವ್.

ಶಾಂತಿರಾಜಶಾಸ್ತ್ರಿಗಳವರ ಧರ್ಮಪರೀಕ್ಷೆಯ ಅನುವಾದ ಕಾರ್ಯವು ಹೃದ್ಗತವಾದುದೂ ಸಮರ್ಪಕವಾದುದಾಗಿದೆ. ಇದರ ಸರಳ ಸುಬೋಧ ಗದ್ಯಭಾಷೆಯು ಮನೋಜ್ಞವನ್ನುಂಟು ಮಾಡುತ್ತದೆ. ಇವರ ಈ ಅನುವಾದವನ್ನು ಉದ್ದಕ್ಕೂ ಓದಿಕೊಂಡು ಹೋದಾಗ, ಮೂಲಕಾವ್ಯವನ್ನು ಓದಿದಷ್ಟು ಸಂತೋಷವಾಗುತ್ತದೆ. 1921 ಪದ್ಯಗಳುಳ್ಳ ಈ ಗಂಥವನ್ನು 20 ಪರಿಚ್ಛೇದಗಳಲ್ಲಿ ವಿಂಗಡಿಸಲಾಗಿದೆ. ಮೂಲವನ್ನು ಇಟ್ಟುಕೊಂಡು ಓದಲು ಅಲ್ಲಿಯ ಪದ್ಯಸಂಖ್ಯೆಗಳನ್ನು ತಿಳಿಸಿ ಅನುಕೂಲ ಮಾಡಿಕೊಟ್ಟಿದ್ದಾರೆ. ಇಲ್ಲಿ ಮೂಲದ ಕೆಲವು ಶ್ಲೋಕಗಳನ್ನು ತಿಳಿಸಿ ಶಾಸ್ತ್ರಿಗಳವರು ಮಾಡಿದ ಅನುವಾದ ಗದ್ಯವನ್ನು ಉದಾಹರಿಸಲಾಗಿದೆ—

ಭಿಲ್ಲವರ್ತ್ಮಮತಂ ಪಾಪಂ ಶರೀರೀಪಥಿಕೋಜನಃ
ಹಸ್ತೀಮೃತ್ಯುಃ ಸರಸ್ತಂಬೊ ಜೀವಿತಂ ಕೂಪಕೋಭವಃ
ನರಕೋಽಜಗರಃ ಪಕ್ಷೌ ಮೂಷಿಕಾವಾಸಿತೇತರೌ
ಕಷಾಯಾಃಪನ್ನಗಾಃಪ್ರೋಕ್ತಾವ್ಯಾಧಯೋ ಮಧುಮಕ್ಷಿಕಾಃ
ಮಧುಸೂಕ್ಷ್ಮಕಣಸ್ವಾದೋಭೋಗ ಸೌಖ್ಯಮುದಾಹೃತಂ
ವಿಭಾಗಮಿತಿ ಜಾನೀಹಿ ಸಂಸಾರೇ ಸುಖದುಃಖಯೋಃ

(ಅಮಿತ. ಧ. ಪ. ಪರಿ. 2, ಶ್ಲೋಕ 19-21)

ಗದ್ಯಾನುವಾದ—ಉದಾಹರಣೆಯಂಲ್ಲಿ ಹೇಳಿರುವ ಬೇಡರ ದಾರಿಯು ಪಾಪವೆಂದೂ ಪಥಿಕನು ಸಂಸಾರಿ ಜೀವನೆಂದೂ ಮೃತ್ಯುವು ಆನೆಯೆಂದೂ ಬಿಳಲು ಜೀವಿತವೆಂದೂ ಬಾವಿಯು ಭವವೆಂದೂ ಹೆಬ್ಬಾವು ನರಕವೆಂದೂ ಕಪ್ಪುಬಿಳಿಯಿಲಿಗಳು ಕೃಷ್ಣಶುಕ್ಲಪಕ್ಷಗಳೆಂದೂ ನಾಲ್ಕು ಹಾವುಗಳು ಕ್ರೋಧಮಾನ ಮಾಯಾ ಲೋಭಗಳೆಂಬ ನಾಲ್ಕು ಕಷಾಯಭಾವಗಳೆಂದೂ ಜೇನುನೊಣಗಳು ವ್ಯಾಧಿಗಳೆಂದೂ ಜೇನುತುಪ್ಪದ ಸಣ್ಣ ಹನಿಯ ಆಸ್ವಾದವು ಭೋಗ ಸುಖವೆಂದೂ ತಿಳಿಯಬೇಕು. ಸಂಸಾರದಲ್ಲಿ ಸುಖದುಃಖಗಳ ವಿಭಾಗವನ್ನು ಈ ಉದಾಹರಣೆಯಲ್ಲಿ ಹೇಳಿರುವಂತೆ ತಿಳಿ. (ಅನುವಾದ-ಧ.ಪ.ಪರಿ.2. 19-21).

ಇನ್ನೊಂದು ಸಂದರ್ಭ ಇಂತಿದೆ—

ವಿಶುದ್ಧ ಪಕ್ಷೀ ಜಲಧೇರುಪೇತೋ ಕದಾಚನಾಪೃಚ್ಛ್ಯತ
ದುರ್ದುರೇಣ
ಕಿಯಾನ ಸೌಭದ್ರ ಸ ಸಾಗರಸ್ತೇ ಜಗಾದ ಹಂಸೋ
ನಿತರಾಂ ಗರಿಷ್ಠಃ
ಪ್ರಸಾರ್ಯ ಬಾಹೂಪುನರೇವ ಮೂಚೇ ಭದ್ರಾಂಬು
ರಾಶಿಃ ಕಿಮಿಯಾನಸ್ಯಾತ್
ಅವಾಚಿ ಹಂಸೇನ ತರಾಂ ಮಹಿಷ್ಠಃಸಪ್ರಾಹ ಕೂಪಾದಪಿ
ಕಿಂ ಮದೀಯಾತ್

'ಅಮಿತ ಧ.ಪ.ಪರಿ. 10,95-96)

ಗದ್ಯಾನುವಾದ—ಒಂದಾನೊಂದು ಕಾಲದಲ್ಲಿ ಸಮುದ್ರನಿವಾಸಿಯಾದ ರಾಜಹಂಸಪಕ್ಷಿಯನ್ನು ನೋಡಿ ಒಂದು ಕಪ್ಪೆಯು 'ಅಯ್ಯಾ! ನೀನು ಎಲ್ಲಿ ವಾಸಮಾಡುತ್ತಿ?' ಎಂದು ಕೇಳಿತು. ಅದಕ್ಕೆ ಹಂಸವು 'ನಾನು ಸಮುದ್ರದಲ್ಲಿ ವಾಸಮಾಡುತ್ತೇನೆ' ಎಂದು ಹೇಳಿತು. ಆಗ ಕಪ್ಪೆಯು 'ನಿನ್ನ ಆ ಸಮುದ್ರವು ಎಷ್ಟು ದೊಡ್ಡದಾಗಿದೆ?' ಎಂದು ಕೇಳಿತು. ಅದಕ್ಕೆ ಹಂಸವು 'ಬಹಳ ದೊಡ್ಡದಾಗಿದೆ' ಎಂದು ಹೇಳಿತು. (೯೫)

ಆಗ ಆ ಕಪ್ಪೆಯು ಕೈಗಳನ್ನು ಪಸರಿಸಿ 'ಅಯ್ಯಾ! ಸಮುದ್ರವು ಇಷ್ಟಿರಬಹುದೋ?' ಎಂದು ಪುನಃ ಕೇಳಿತು. ಅದಕ್ಕೆ ಹಂಸವು 'ಬಹಳ ದೊಡ್ಡದು' ಎಂದು ಹೇಳಿತು. ಆಗ ಕಪ್ಪೆಯು 'ನನ್ನ ಬಾವಿಗಿಂತ ದೊಡ್ಡದೋ?' ಎಂದು ಕೇಳಿತು. (೯೬)

ಇಲ್ಲಿಯ ಅನುವಾದ ಕಾರ್ಯ ಎಷ್ಟು ಸೂಕ್ತವಾದುದೆಂದು ಬೇರೆ ಹೇಳಬೇಕಾಗಿಲ್ಲ. ಸಂಸ್ಕೃತವನ್ನರಿಯದವರಿಗೆ ಮೂಲ ಕಾವ್ಯವನ್ನು ಓದಿದಷ್ಟೇ ವಿಷಯಗ್ರಹಣವೂ, ಸಂತೋಷವೂ ಉಂಟಾಗುತ್ತದೆ. ಎಲ್ಲಿಯೂ ಕ್ಲಿಷ್ಟತೆ ಕಾಣಬರುವುದಿಲ್ಲ. ಸರಳ ಸುಲಭಗತಿಯಿಂದ ಕೂಡಿದ ಇವರ ಗದ್ಯಶೈಲಿಯು ಹೃದಯಂಗಮವಾಗಿದೆ. ಶಾಸ್ತ್ರಿಗಳವರು ಈ ಕಾವ್ಯವನ್ನು 51 ವರ್ಷಗಳ ಹಿಂದೆ ಅನುವಾದಿಸಿ ಕನ್ನಡಿಗರಿಗೆ ಮಹದುಪಕಾರಮಾಡಿದ್ದಾರೆ.

ಭಾರತೀಯ ಸಾಹಿತ್ಯದಲ್ಲಿಯೇ ಇದೊಂದು ಉತ್ತಮ ದರ್ಜೆಯ ವಿಡಂಬನಾತ್ಮಕ ಕಾವ್ಯವಾಗಿದೆ. ಪುರಾಣಧರ್ಮಗಳಲ್ಲಿ ಶ್ರದ್ಧೆಯುಳ್ಳವರಿಗೆ ಇಂಥ ಕೃತಿಗಳ ಕಹಿ ಮಾತುಗಳು ಚುಚ್ಚುತ್ತವೆ. ಆದರೆ ಇಂಥ ಭಾವಾವೇಶಕ್ಕೆ ಒಳಗಾಗದ ಭಾರತೀಯ ಸಾಹಿತ್ಯದ ವಿದ್ಯಾರ್ಥಿಗೆ ಅವು ಅಂಥ ಪರಿಣಾಮವನ್ನೇನೂ ಹೆಚ್ಚು ಮಾಡಲಾರವು.

●

ಸಮ್ಯಕ್ತ್ವಕೌಮುದಿ-ಒಂದು ವಿವೇಚನೆ

— ಡಾ॥ ಸಾ. ಶಿ. ಮರುಳಯ್ಯ

ವಿಘ್ನೌಘಾಃ ಪ್ರಲಯಂ ಯಾಂತಿ ಶಾಕಿನೀ
ಭೂತ ಪನ್ನಗಾಃ ।
ವಿಷಂ ನಿರ್ವಿಷತಾಂ ಯಾತಿ ಸ್ತೂಯಮಾನೇ
ಜಿನೇಶ್ವರೇ ॥

[ಜಿನೇಶ್ವರನನ್ನು ಸ್ತೋತ್ರ ಮಾಡಿದರೆ ವಿಘ್ನ ಪರಂಪರೆಗಳೂ ಶಾಕಿನಿಭೂತ ಸರ್ಪ ಮೊದಲಾದವುಗಳೂ ದೂರವಾಗುತ್ತವೆ. ವಿಷವು ನಿರ್ವಿಷವಾಗುವುದು]

ಸಮ್ಯಕ್ತ್ವಕೌಮುದಿ ಪು. ೯೨.

ಕೊಲಲಾಗದೆಂಬ ಜೈನಮತವೆನ್ನ
ತಲೆಯ ಮೇಲಿರಲಿ

—ಸರ್ವಜ್ಞ

ಸಮುದಾಯವನ್ನು ಸನ್ಮಾರ್ಗಕ್ಕೆ ತರುವಲ್ಲಿ ಮತ ಧರ್ಮದ್ದು ಅತ್ಯಂತ ಮಹತ್ವದ ಪಾತ್ರ. ಅದು ವ್ಯಕ್ತಿಯ ವ್ಯಕ್ತಿತ್ವದ ವಿಕಾಸಕ್ಕೆ ಯೋಗ್ಯ ಆವರಣವನ್ನು ನಿರ್ಮಿಸುತ್ತದೆ. ಅವನ ಹರಿವ ಮನಕ್ಕೆ ಸಂಯಮದ ಕಡಿವಾಣ ಹಾಕುವುದಲ್ಲದೆ, ಅವನ ಆತ್ಮಾನುಭೂತಿಗೂ ಅದು ಅನುವಾಗುತ್ತದೆ. ಸಂಸಾರ ಸಾಗರದಲ್ಲಿ ಮುಳುಗುತ್ತಿರುವ ಜೀವಿಯನ್ನೂ ಕಡೆ ಹಾಯಿಸುವ ದೋಣಿಯಾಗುತ್ತದೆ. ಅವನನ್ನು ಕತ್ತಲೆಯಿಂದ ಬೆಳಕಿನೆಡೆಗೆ ಕೊಂಡೊಯ್ಯಲು ಸಮೆದ ಸುಂದರ ಹಾಗೂ ಬಂಧುರ ಸೋಪಾನವೂ ಆಗುತ್ತದೆ. ಆದ್ದರಿಂದ ಧರ್ಮ ದೊಡ್ಡದು. ಅದರಲ್ಲೂ ಜೀವ ದಯೆಯನ್ನು ತನ್ನ ಜೀವ ಜೀವಾಳವಾಗಿಸಿ ಕೊಂಡಿರುವ ವಿಶ್ವಶಾಂತಿ, ವಿಶ್ವ ಸಾಮರಸ್ಯ, ವಿಶ್ವಕಲ್ಯಾಣ ಸಾಧನವೆನಿಸಿದ 'ಜಿನಧರ್ಮ' ಧರ್ಮಗಳಲ್ಲಿ ಧರ್ಮ, ಶ್ರೇಷ್ಠಧರ್ಮ, ಅದು ಜಾತಿ ಎಂಬ ಸಂಕುಚಿತಾರ್ಥದಲ್ಲಿ ನಿಂತಿಲ್ಲ, ಮಾನವೀಯ ಮೌಲ್ಯಗಳನ್ನೊಳಗೊಂಡ ವಿಶ್ವಮಾನವ ಧರ್ಮವಾಗಿದೆ. ದೇವತ್ವಕ್ಕೂ ಮೀರಿದ, ಕಲ್ಪದಾಚೆಗೂ ವ್ಯಾಪಕವಾದ ಸಮವಸರಣದ ಮಹಾಮಂಟಪದ ಮಧ್ಯದಲ್ಲಿ, ಗಂಧಕುಟಿಯ ಸಹಸ್ರದಲ ಪದ್ಮಪೀಠದ ಮೇಲೆ ನಾಲ್ವೆರಳೆತ್ತರದಲ್ಲಿ ಮಂಡಿಸುವ ತಪೋಮುದ್ರಿತ ಮಹಾಮೂರ್ತಿ ಜಿನಸ್ವಾಮಿಯ ಆದಿಬ್ರಹ್ಮತ್ವವನ್ನು ಸಿದ್ಧಿಸಿಕೊಳ್ಳುವ ಮಹದ್ದರ್ಶನವನ್ನು ಬೆಳಗುತ್ತದೆ ಜೈನಧರ್ಮ. ಜೀವ ಅಜೀವದ ಹಲವಾರು ಆವರಣಗಳಲ್ಲಿ ಅಥವಾ ಸಂಸಾರದ ಮಿಥ್ಯಾಜ್ಞಾನ ಮೊದಲಾದ ಸುವರ್ಣ ಸಂಕೋಲೆಗಳಲ್ಲಿ ಸಿಕ್ಕಿಬಿದ್ದು, ನಾಯಾಗಿ, ನರಿಯಾಗಿ, ಹುಳುವಾಗಿ, ಉಡವಾಗಿ, ದೇವ, ಮಾನವ, ತಿರ್ಯಕ್, ನಾರಕ; ಎಂಬ ಚತುರ್ಗತಿಯಲ್ಲಿ ಸುತ್ತಿಸುತ್ತಿ ತೊಳಲಿ, ಬಳಲಿ, ಯಾವುದೋ ಒಂದು ಭವ, ಮತ್ತಾವುದೋ ಒಂದು ಕಲ್ಪ ಹೀಗೆಲ್ಲ ಅಲೆದಲೆದು ಭವಭವಕ್ಕೂ ತನ್ನನ್ನಾವರಿಸಿರುವ ಕಾಮಾದಿ ಕಲ್ಮಶಗಳನ್ನು ಪದರ ಪದರವಾಗಿ ಹಾವು ಪೊರೆ ಬಿಟ್ಟಂತೆ ಕಳೆದುಕೊಂಡು, ಕಡೆಗೆ ಪರಿಶುದ್ಧ ಪರಂಜ್ಯೋತಿಯಾಗಿ ಪರತತ್ತ್ವವನ್ನು ಪ್ರಚುರಪಡಿಸುತ್ತಾ, ಮುಕ್ತಿದಾಯಿಯೂ, ಮಹಾಶಕ್ತಿಯೂ, ದಿವ್ಯವಿಭೂತಿಯೂ ತಾನಾಗುತ್ತದೆ. ಜ್ಯೋತಿಗೆ ಎಣ್ಣೆ ಮತ್ತು ಬತ್ತಿಗಳ ಅಗತ್ಯ ಇದ್ದರೆ, ಈ ಪರಂಜ್ಯೋತಿಗೆ ಅವುಗಳ ನೆರವು ಬೇಕಾಗುವುದಿಲ್ಲ. ಸ್ವಯಂಜ್ಯೋತಿಯಾದ ತಾನು ತನಗೆ ತಾನೇ ಬೆಳಗುತ್ತದೆ.

ಹೀಗಾಗುವ ಜೀವಕ್ಕೆ ಪಾಪಪುಣ್ಯಗಳ ಲೇಪ ಇರಕೂಡದು. ಅವೆರಡರಲ್ಲಿ ಯಾವುದಿದ್ದರೂ ಜೀವನಿಗೆ ಮುಕ್ತಿ ಇಲ್ಲ. ಮೋಕ್ಷದ ಮಹಾಫಲದಿಚ್ಛೆ ಇದ್ದರೆ ಜೀವ ಅವೆರಡರಿಂದಲೂ ದೂರವಾಗಬೇಕು. ಸಮ್ಯಕ್ ದರ್ಶನ, ಸಮ್ಯಕ್‌ಜ್ಞಾನ ಮತ್ತು ಸಮ್ಯಕ್‌ಚಾರಿತ್ರ ಎಂಬ ರತ್ನತ್ರಯಗಳನ್ನು ಸಾಧಿಸಿ, ಶುಕ್ಲಧ್ಯಾನದಲ್ಲಿ ಪರಿಣಾಮ ಪಡೆಯಬೇಕು. ಕಾಲಲಬ್ಧಿ ಪ್ರಾಪ್ತವಾದಾಗ ಪಕ್ವವಾದ ಹಣ್ಣು ತಾನಾಗಿಯೇ ತೊಟ್ಟು ಕಳಚಿ ಬೀಳು

ವಂತೆ, ಆ ಭವ್ಯಾತ್ಮ, ತನ್ನ ಸಹಜ ಸ್ವರೂಪವನ್ನು ಪಡೆದು, ಅನಂತಜ್ಞಾನಾದಿಗಳಿಂದ ಬೆಳಗುತ್ತ ಶಾಶ್ವತ ಮೋಕ್ಷ ಸುಖದಲ್ಲಿ ನೆಲೆಗೊಳ್ಳುತ್ತದೆ. ಈರುಳ್ಳಿಯ ಸಿಪ್ಪೆಗಳನ್ನು ಒಂದಾದಮೇಲೊಂದರಂತೆ ಬಿಚ್ಚುತ್ತಾ ಹೋದರೆ ಕಡೆಯಲ್ಲಿ ಏನೂ ಉಳಿಯುವುದಿಲ್ಲ. ಅಂತಾಗುವುದೇ ಜೈನಧರ್ಮದ ಚರಮಸ್ಥಿತಿ. ಆದಿಯಲ್ಲಿ ಚೈತನ್ಯ ಸ್ವರೂಪವಾದ, ಚಿರಂತನವಾದ ಆತ್ಮವು ಅನಂತಜ್ಞಾನ, ಅನಂತದರ್ಶನ, ಅನಂತವೀರ್ಯ, ಅನಂತಸುಖಗಳಿಂದ ಕೂಡಿದ್ದು, ವಿಶ್ವವೆಲ್ಲಾ ತಾನಾಗಿದ್ದು, ಆ ಜೀವದ ಸಂಪರ್ಕದಿಂದ ಕರ್ಮಶೃಂಖಲೆಗಳಲ್ಲಿ ಸಿಕ್ಕಿದ್ದು ಮತ್ತೆ ಭವ ಭವಗಳಲ್ಲಿ ಬಿಡುಗಡೆ ಹೊಂದುತ್ತಾ ಕಡೆಯಲ್ಲಿ ತನ್ನ ಮೊದಲಿನ ನಿರ್ವಿಕಾರ ಸ್ವರೂಪದಿಂದ ಅರ್ಹತ್ ಪದವಿಯನ್ನು ಪಡೆದು ಜಿನನಾಗುತ್ತದೆ. ಚತುರ್ಗತಿಗಳಲ್ಲಿ ತೊಳಲುವ ಜೀವ ಜನ್ಮಜನ್ಮಕ್ಕೂ ತನ್ನನ್ನಾವರಿಸಿರುವ ಕಾಮದ ಕಾಳಿಕೆಯನ್ನು ನೀಗಿಕೊಂಡು ಪರಿಶುದ್ಧವಾಗುತ್ತಾ ಆಸನ್ನಭವ್ಯ ಅಥವಾ ಭವ್ಯತ್ವಕ್ಕೇರಿದ ಕೂಡಲೆ ಒಂದು ಗ್ರಹದ ಪಥವನ್ನು ದಾಟಿ ಮತ್ತೊಂದು ಗ್ರಹವನ್ನು ಸಮೀಪಿಸಿದಂತೆಲ್ಲಾ ಆ ಗ್ರಹದ ಆಕರ್ಷಣೆ ಹೆಚ್ಚುವಂತೆ ಕಾಮಭ್ರಮೆ ಕಡಿಮೆಯಾಗಿ, ಮೋಕ್ಷದ ಹಂಬಲ ಪ್ರಬಲವಾಗುತ್ತದೆ.

ಹೀಗೆ ಅನರ್ಹ ಅರ್ಹಂತನಾಗುವ, ಜೀವ–ಜಿನನಾಗುವ ಆತ್ಮದ ಅದ್ಭುತ, ಅಮೋಘ ವಿಕಾಸ ಸ್ವರೂಪವುಳ್ಳದ್ದು ಜೈನಧರ್ಮ. ಈ ಧರ್ಮದಲ್ಲಿ ಹಿಂದೆಯೇ ಹೇಳಿದಂತೆ ಸಮ್ಯಕ್‌ದರ್ಶನ, ಸಮ್ಯಕ್‌ಜ್ಞಾನ ಮತ್ತು ಸಮ್ಯಕ್‌ಚಾರಿತ್ರವೆಂಬ ರತ್ನತ್ರಯಗಳು ಅತ್ಯಂತ ಮಹತ್ವದವುಗಳು. ಅವುಗಳಲ್ಲಿ ಸಮ್ಯಕ್‌ದರ್ಶನಕ್ಕೆ ಪೂಜ್ಯಪೀಠ ಮೀಸಲಿದೆ. ಇದರ ಮೂಲ ಅರ್ಥ ನಂಬಿಕೆ, ಧರ್ಮದಲ್ಲಿ ನಂಬಿಕೆ, ದೈವದಲ್ಲಿ ನಂಬಿಕೆ, ಜೀವನಲ್ಲಿ ನಂಬಿಕೆ, ಭಾವದಲ್ಲಿ ನಂಬಿಕೆ, ಇಹ–ಪರಗಳಲ್ಲಿ, ಬಂಧನ–ಮೋಕ್ಷಗಳಲ್ಲಿ, ಆಮುಷ್ಮಿಕ ಆಧ್ಯಾತ್ಮಗಳಲ್ಲಿ, ಒಟ್ಟಿನಲ್ಲಿ ಸೃಷ್ಟಿಯ ಸಕಲ ಚರಾಚರಗಳಲ್ಲಿ ವಿಶೇಷ ನಂಬಿಕೆ, ವಿಶ್ವಾಸ, ಮೈತ್ರಿ ಮೊದಲಾದುವುಗಳನ್ನು ಬೆಳೆಸಿಕೊಳ್ಳುವ ಆಸ್ತಿಕ ಮನೋಧರ್ಮವೇ ಸಮ್ಯಕ್‌ದರ್ಶನ. ಈ ದರ್ಶನ ಶುದ್ಧಿಯನ್ನು ಜೈನಾಗಮಗಳು 'ಸಮ್ಯಕ್ತ್ವ' ಎಂದು ಕರೆಯುತ್ತವೆ. ಈ ಸಮ್ಯಕ್ತ್ವವನ್ನು ಪ್ರತಿಪಾದಿಸುವ ಅಕ್ಷರರೂಪೀ ಅಭಿವ್ಯಕ್ತಿಯೇ **'ಸಮ್ಯಕ್ತ್ವ ಕೌಮುದಿ'.** ಶುಕ್ಲಪಕ್ಷದ ಕೌಮುದಿ ಕಣ್‌ಮನಗಳಿಗೆ ಆನಂದ ಆಹ್ಲಾದಗಳನ್ನು ಉಂಟುಮಾಡಿದರೆ ಜಗತ್ಪ್ರಸಿದ್ಧ ಸಮ್ಯಕ್ತ್ವ ಕೌಮುದಿ ಮುಮುಕ್ಷುಗಳ ಮನೋಭೂಮಿಕೆಯನ್ನು ಸುಪ್ರಸನ್ನಗೊಳಿಸುತ್ತದೆ. ಇದು ಭವರೋಗ ಭೈಷಜ ; ಆತ್ಮಾನುಬೋಧಿ. ಇಂತಹ ದರ್ಶನ ದ್ಯುತಿಯನ್ನು ಮಾತಿನ ಮಾಧ್ಯಮದಲ್ಲಿ ಸೆರೆಹಿಡಿದು, ಮೋಕ್ಷಾನುವರ್ತಿಗಳ ಮಡಿಲಿಗಿರಿಸಿದ್ದಾರೆ ಶ್ರೀ ಶಾಂತಿರಾಜ ಶಾಸ್ತ್ರಿಗಳು.

'ಸಮ್ಯಕ್ತ್ವಕೌಮುದಿ' ಎಂಬ ಅಜ್ಞಾತ ಕವಿಯ ರಚನೆಯೊಂದಿದೆ ಸಂಸ್ಕೃತದಲ್ಲಿ. ಕನ್ನಡದಲ್ಲೂ ಸುಮಾರು ಹದಿನೈದನೆಯ ಶತಮಾನದ್ದೆಂದು ಹೇಳುವ ಮಂಗರಸನ ಷಟ್ಪದಿ ಛಂದಸ್ಸಿನ ರಚನೆಯೊಂದಿದೆ. ಆದರೆ ಪ್ರಸ್ತುತದಲ್ಲಿ ಶಾಸ್ತ್ರಿಗಳು ಸುಭಗ, ಸುಂದರ, ಸುಲಲಿತ, ಮನೋಹರ, ಹೃದ್ಯ, ಗದ್ಯದಲ್ಲಿ ಸಮ್ಯಕ್ತ್ವಕೌಮುದಿಯನ್ನು ಹರಹಿದ್ದಾರೆ. ಅಲ್ಲಲ್ಲಿ ನೂರಾರು ಸಂಸ್ಕೃತ ಶ್ಲೋಕಗಳೂ, ಅವುಗಳ ಕನ್ನಡ ಗದ್ಯಾನುವಾದವೂ ಇದ್ದು ಓದುಗರಿಗೆ ಒಂದು ಬಗೆಯ ರುಚಿ ಕೊಡುತ್ತದೆ. ಇಲ್ಲಿನ ರಚನೆ ತತ್ವ ಎಲ್ಲಿಯೂ ತತ್ವವಾಗಿ ಬರದೆ ಕಾವ್ಯಾಂಶಗಳನ್ನೊಳಗೊಂಡು ಕಮನೀಯವಾಗಿ ಕಂಡರಿಸಲ್ಪಟ್ಟಿದೆ. ಹಲವಾರು ನೀತಿವಾಕ್ಯಗಳೂ, ತತ್ವ ಶ್ಲೋಕಗಳೂ, ಸಂಗ್ರಹ ಯೋಗ್ಯವೂ, ಅಧ್ಯಯನ–ಅನುಷ್ಠಾನಯುಕ್ತವೂ ಆದವುಗಳಾಗಿವೆ. ಉದಾಹರಣೆಗೆ–

ನ ಕ್ರೋಧಿನೋ ವಾಜ್ಞಶಠಸ್ಯ ಮಿತ್ರಂ
ಕ್ರೂರಸ್ಯ ನ ಸ್ತ್ರೀ ಸುಖಿನೋ ನ ವಿದ್ಯಾ ।
ನ ಕಾಮಿನೋ ಹ್ರೀರಲಸಸ್ಯ ನ ಶ್ರೀಃ
ಸರ್ವಂತು ನ ಸ್ಯಾದನವಸ್ಥಿತಸ್ಯ ॥

ಕ್ರೋಧಿಗೆ ಒಳ್ಳೆಯ ಮಾತಿಲ್ಲ, ದುಷ್ಟನಿಗೆ ಮಿತ್ರನಿಲ್ಲ, ಕ್ರೂರನಿಗೆ ಸ್ತ್ರೀಯು ಸಲ್ಲಳು, ಸುಖಿಗೆ ವಿದ್ಯೆಯು ಬಾರದು, ಕಾಮುಕನಿಗೆ ಲಜ್ಜೆಯಿಲ್ಲ, ಸೋಮಾರಿಗೆ ಸಂಪತ್ತಿಯಿಲ್ಲ, ಅವ್ಯವಸ್ಥಿತ ಚಪಲಚಿತ್ತವುಳ್ಳವನಿಗೆ ಯಾವುದೂ ಇಲ್ಲ.

ಇಂತಹ ನಿತ್ಯ ಸತ್ಯ ಪ್ರತಿಪಾದಕ ವಾಕ್ಯಗಳ ತಾತ್ವಿಕಬೋಧನೆಯ ಗಣಿಯಾಗಿದೆ ಕನ್ನಡ ಸಮ್ಯಕ್ತ್ವ ಕೌಮುದಿ. ಅಂತೆಯೇ ಇದು ಮೂಲ ಸಂಸ್ಕೃತ ಕೃತಿಯ

ಕನ್ನಡೀಕರಣವೂ ಅಲ್ಲ. ಕನ್ನಡ ಭಾಮಿನೀ ಕೃತಿಯ ಗದ್ಯಾನುವಾದವೂ ಅಲ್ಲ. ಅವೆರಡನ್ನೂ ಗರ್ಭೀಕರಿಸಿ ಕೊಂಡು ಆವಿರ್ಭವಿಸಿದ ವಿನೂತನ ಗದ್ಯರಚನೆ. ಇದು ಒಂದು ಕಥಾಗುಚ್ಛ, ಒಂದು ಮೂಲಕಥೆಗೆ ಹತ್ತಾರು ಉಪಕಥೆಗಳು ಹೆಣೆದುಕೊಂಡಿವೆ. ಎಲ್ಲ ಕಡೆಗಳಲ್ಲೂ ಕಾವ್ಯ ಇದೆ, ತತ್ತ್ವ ಇದೆ. ದರ್ಶನದ ದ್ಯುತಿಯೂ ಬೆಳಗಿದೆ. ಕೃತಿಕಾರರ ಕಲೆಗಾರಿಕೆ ಮೆಚ್ಚುವಂಥದು. ಅವರ ಶೈಲಿಯಷ್ಟೆ ಚೆಲುವುಳ್ಳದ್ದು. ಮೂಲಕಥೆಯ ಕಥಾಕಲ್ಪನೆ ಇಲ್ಲಿ ಅದು ಬದಲಾಗಿಲ್ಲ. ಗೌತಮ ಗಣ ಧರರು ಶ್ರೇಣಿಕ ಮಹಾರಾಜನಿಗೆ ಕೌಮುದೀ ಕಥೆ ಹೇಳಿದ ರೆಂದು ಆರಂಭವಾಗುವ ಈ ಕೃತಿಗೆ ನೂರಾರು ಬಳ್ಳಿಗಳು, ಕುಡಿಗಳು ಮೂಡಿ ಬೆಳೆದಿವೆ. ಅಲ್ಲಲ್ಲಿ ಒಂದರೊಳಗೊಂದು ಹೆಣೆದುಕೊಂಡಿವೆ. ಉದಿತೋದಯ ಮಹಾರಾಜನ ಕಥೆಯ ಜೊತೆಯಲ್ಲಿ ಯಮದಂಡನ ನಿಷ್ಠೆಯ ಕಥೆ, ಅವನ ಕಥೆಯೊಡನೆ ಕಥನವಾಗುವ ಉಪಕಥೆಗಳು; ಮುಖ್ಯವಾಗಿ ಅರ್ಹದ್ದಾಸನ ಪತ್ನಿಯರಾದ ಮಿತ್ರಶ್ರೀ, ಚಂದನಶ್ರೀ, ವಿಷ್ಣುಶ್ರೀ, ನಾಗಶ್ರೀ, ಪದ್ಮಲತೆ, ಕನಕಲತೆ, ವಿದ್ಯುಲ್ಲತೆಯರು ಹೇಳುವ ಕಥೆಗಳು ಮನೋಜ್ಞವಾಗಿವೆ. ಧರ್ಮೋಪದೇಶ ಶುಷ್ಕ ಧರ್ಮ ಪಠಣವಾಗದೆ, ಕಥಾರೂಪದಲ್ಲಿ ಪ್ರತಿಪಾದಿತ ವಾಗಿದೆ. ಓದುಗರನ್ನು ಆಕರ್ಷಿಸಿ, ಒಲಿಸಿ, ನಲಿಸಿ, ತತ್ತ್ವೋಪದೇಶ ಮಾಡುತ್ತವೆ. ಅಂತ್ಯದಲ್ಲಿ ಕುಂದಲ ತೆಯ ವೈರಾಗ್ಯ ಮತ್ತು ಸ್ವರ್ಗಪ್ರಾಪ್ತಿ ಧರ್ಮಾಶ್ರಯೀ ಪುರುಷರಿಗೆ ಪ್ರಾಪ್ತವಾದ ಸರ್ವಾರ್ಥಸಿದ್ಧಿಯೆಂಬ ಸ್ವರ್ಗ ಎಲ್ಲವೂ ಹೃದಯಂಗಮವಾಗಿ ಚಿತ್ರಿತವಾಗಿವೆ. ಇಂತಹ ಕಥನರೂಪೀ ಕೈವಲ್ಯ ಕೃತಿಗೆ ಎಂದೆಂದಿಗೂ ಆಸ್ತಿಕ ಲೋಕದಲ್ಲಿ ಸದಾ ಸ್ವಾಗತವಿದೆ.

ಬಾಳು ಎಂಬುದು ಭಗವಂತನ ಒಂದು ಅಮೂಲ್ಯ ಕೊಡುಗೆ. ಅದನ್ನು ಧರ್ಮ ಪರಾಯಣತೆಯ ಮೂಲಕ ಸಾರ್ಥಕಪಡಿಸಿಕೊಂಡ ಪುಣ್ಯಜೀವ ಶ್ರೀ ಶಾಂತಿರಾಜ ಶಾಸ್ತ್ರಿಗಳವರದು. ಅವರು ಜಿನಧರ್ಮ ದೀಪಕರಾಗಿ ಬೆಳಗಿದ ಭವ್ಯಾತ್ಮರು, ಯೋಗಿಪ್ರವರರೂ ಹೌದು. ಅವರ ವಾಙ್ಮಯ ತಪಸ್ಸು ಫಲಿಸಿ 'ಸಮ್ಯಕ್ತ್ವಕೌಮುದಿ' ಯಂತಹ ಸಾರ್ಥಕ ಸಾಹಿತ್ಯವನ್ನಿತ್ತುದರಿಂದಾಗಿ ಅವರ ಬಾಳು ಧನ್ಯ ; ಮಾನ್ಯ !

ವ್ಯಕ್ತಿಚಿತ್ರ

''ನೀವು ಯಶೋವಂತರೂ ಸಮಾಜಗೌರವ ಪಾತ್ರರೂ ಆದ ವಿದ್ವನ್ಮಣಿಗಳಾಗಿರುವುದು ನಮಗೆ ಅತ್ಯಂತ ಸಂತೋಷ ದಾಯಕವಾಗಿರುತ್ತದೆ."

ಶ್ರೀಮದಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ
ಸ್ವಾಮಿಗಳವರು, ಶ್ರವಣಬೆಳಗೊಳ (1933)

''ಸ್ವಾಮಿ, ಧರ್ಮ ಉಳಿಯಬೇಕಾದರೆ, ಬೆಳೆಯಬೇಕಾದರೆ, ಧರ್ಮವನ್ನು ಸಮರ್ಪಕವಾಗಿ ತಾವೂ ನಡೆಸಿ, ಅದನ್ನೇ ಇತರರಿಗೂ ಬೋಧಿಸಿ ಜನ್ಮ ಸಾರ್ಥಕಮಾಡಿಕೊಳ್ಳುವಂತಹ ಪುಣ್ಯಶಾಲಿಗಳು, ಧರ್ಮ ಜ್ಞಾನ ವೈರಾಗ್ಯ ಮಾರ್ಗದಲ್ಲಿ ಸಮಾಜವನ್ನು ಮುನ್ನಡೆಸಬಲ್ಲ ಕರ್ಮವೀರರು ಎಲ್ಲೆಲ್ಲಿಯೂ ಪ್ರತಿದಿನವೂ ನಮಗೆ ಕಾಣಸಿಗಬೇಕು. ಅಂತಹ ವಿರಳವಾದ ಮಹಾನುಭಾವರಲ್ಲಿ ತಾವೊಬ್ಬರು."

ಡಿ. ಮಂಜಯ್ಯ ಹೆಗ್ಗಡೆಯವರು
ಧರ್ಮಸ್ಥಳ

''ನೀವು ನಮಗೆ ಸಮರ್ಪಿಸಿದ 'ಮಹಾಪುರಾಣ' ಗ್ರಂಥವು ಆ ತೀರ್ಥಂಕರರ ಜೀವನವೃತ್ತಗಳ ಕನ್ನಡ ಅನುವಾದ ವಾಗಿದೆ. ಈ ಗ್ರಂಥವು ನಮ್ಮ ಸಂಸ್ಥಾನದ ವಿದ್ವಾಂಸರಾದ ಪಂಡಿತ ಶ್ರೀ ಶಾಂತಿರಾಜ ಶಾಸ್ತ್ರಿಯವರ ಪರಿಶ್ರಮದಿಂದ ರಚಿತವಾಗಿ ಅಪಾರ ಧನವ್ಯಯದಿಂದ ಮೈಸೂರಿನಲ್ಲಿ ಮುದ್ರಿತವಾಗಿದೆ. ಈ ಅನುವಾದಿತ ಗ್ರಂಥದಿಂದ ಕರ್ನಾಟಕ ಪ್ರಾಂತದ ನಿಮ್ಮ ಸಹಧರ್ಮಿ ಬಂಧುಗಳ ಸಮಕ್ಷಮದಲ್ಲಿ ಜೈನ ಧರ್ಮದ ಒಂದು ವಿಶಾಲ ಜ್ಞಾನಭಂಡಾರವು ತೆರೆಯಲ್ಪಟ್ಟಿರುವುದು ನಮಗೆ ಸಂತೋಷಕರವಾದ ವಿಷಯವಾಗಿದೆ."

ಮೈಸೂರು ಸಂಸ್ಥಾನದ ಶ್ರೀ ಮನ್ಮಹಾರಾಜರವರಾದ
ನಾಲ್ವಡಿ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹಾದುರ್ (1940)

ಚತುರ್ವಿಂಶತಿತೀರ್ಥಂಕರಾರಾಧನಾ

— ಡಾ॥ ಎಂ. ಡಿ. ವಸಂತರಾಜ್

ಲೋಕವಿಶ್ರುತ ದಿವಂಗತ ಪಂಡಿತರತ್ನ ಎ. ಶಾಂತಿ ರಾಜ ಶಾಸ್ತ್ರಿಗಳವರ ಜೈನಸಾಹಿತ್ಯ ಪ್ರಕಾಶನದ ಸ್ತುತ್ಯ ಕಾರ್ಯದ ಮೂಲಕ ಪ್ರಕಾಶಕಂಡ ಅನೇಕಾನೇಕ ಕೃತಿ ಗಳಲ್ಲಿ 'ಚತುರ್ವಿಂಶತಿ ತೀರ್ಥಕರಾರಾಧನಾ' ಗ್ರಂಥವೂ ಒಂದು.

ಶ್ರಾವಕವರ್ಗಕ್ಕೆ ಅವಶ್ಯಕವೆನಿಸಿ ಹೇಳಲಾಗಿರುವ ಅಥವಾ ವಿಧಾಯಕವಾಗಿರುವ ಷಟ್ಕರ್ಮಗಳಲ್ಲಿ ಮೊದಲನೆಯದು ದೇವಪೂಜೆ. ಇದು ಪ್ರಧಾನವಾಗಿ ಎರಡು ಪ್ರಕಾರವಾಗಿದೆ: 1. ಭಾವ ಪೂಜೆ ಮತ್ತು ದ್ರವ್ಯಪೂಜೆ. ನಮನ, ವಂದನೆ, ಗುಣಚಿಂತನೆ, ಗುಣ ಸ್ತುತಿ, ಅರ್ಚನೆ–ಇವೇ ಮುಂತಾದುವೆಲ್ಲವೂ ಪೂಜೆಯ ಅಂಶಗಳು. ಇವುಗಳಲ್ಲಿ ಯಾವುದಾದರೂ ಸರಿಯೆ, ಇಲ್ಲವೆ ಎಲ್ಲವೂ ಸೇರಿದಂತಾದರೂ ಸರಿಯೆ, ಭಾವಾತ್ಮಕ ವಾಗಿ ನಡೆದಲ್ಲಿ ಅದು ಭಾವಪೂಜೆ ಎನಿಸುವುದು. ಆದರೆ ಈ ಭಾವಪೂಜೆ, ನಿಜವೆಂದರೆ ವಿರಕ್ತರಿಗೆ, ಇಲ್ಲವೆ ಮನಸ್ಸನ್ನು ವಿರಕ್ತಸ್ಥಿತಿಗೆ ತಂದುಕೊಳ್ಳಬಲ್ಲವರಿಗೆ ಸಾಧ್ಯ ವಾಗುವುದು. ಹೀಗಲ್ಲದೆ ಸಾಂಸಾರಿಕ ಝಂಝಾಟದಲ್ಲಿ ಸಿಲುಕಿರುವವರಿಗೆ ಆಲಂಬನದ ಮೂಲಕ ಪೂಜೆ ಸಾಧ್ಯ ವಾಗುವುದಿಲ್ಲ, ಈ ಆಲಂಬನ ಮನ ಮತ್ತು ವಚನ ಗಳಲ್ಲದೆ ದ್ರವ್ಯವನ್ನು ಆಧಾರವಾಗಿ ಹೊಂದಿರುವುದು. ಈ ಕಾರಣದಿಂದ ಇದು ದ್ರವ್ಯಪೂಜೆ ಎನಿಸಿಕೊಂಡಿದೆ. ಪ್ರಕೃತ ಜೈನಮತದೃಷ್ಟಿಯಿಂದ ಪೂಜೆಯ ಉದ್ದೇಶ ವನ್ನು ಅರ್ಥಮಾಡಿಕೊಳ್ಳಬೇಕಾಗುವುದು. ಜೈನೇತ ರರಲ್ಲಿ ಬಹುತರವಾಗಿ ಸಾಂಸಾರಿಕವಾದ ಅಭೀಪ್ಸೆಗಳ ಸಿದ್ಧಿಗಾಗಿ ದೇವತೆಗಳ ಪೂಜೆ ನಡೆಸುವರು. ಆ ದೇವತೆಗಳು ಆ ಪೂಜೆಯಿಂದ ಪ್ರಸನ್ನರಾಗಿ ಇಷ್ಟಾರ್ಥಗಳನ್ನು ಕೊಡುವರೆಂಬುದು ನಂಬಿಕೆ. ಆದರೆ ಜೈನಧರ್ಮೀಯರು ಈ ರೀತಿಯಿಂದ ಐಹಿಕ ಅಭೀಷ್ಟ ಸಿದ್ಧಿಗಾಗಿ ಜಿನೇಂದ್ರನ ಪೂಜೆ ನಡೆಸುವುದಲ್ಲ; ಜಿನೇಂದ್ರನ ಇಂತಹ ಪೂಜೆಯ ಉದ್ದೇಶವನ್ನು ಸ್ವಾಮಿಸಮಂತಭದ್ರರು ಸ್ವಯಂಭೂ ಸ್ತೋತ್ರದಲ್ಲಿ ಈ ಮುಂದಿನಂತೆ ನಿರೂಪಿಸಿದ್ದಾರೆ–

> ನ ಪೂಜಯಾರ್ಥಸ್ತ್ವಯಿ ವೀತರಾಗೇ
> ನ ನಿಂದಯಾನಾಥ ವಿವಾಂತ ವೈರೇ ।
> ತಥಾಪಿ ತೇ ಪುಣ್ಯಗುಣಸ್ಮೃತಿರ್ನಃ
> ಪುನಾತು ಚಿತ್ತಂ ದುರಿತಾಂಜನೇಭ್ಯಃ ॥

'ಸ್ವಾಮಿಯೆ! ನೀನು ಸಂಗರಹಿತನು ಯಾವುದರಲ್ಲಿಯೂ ನೀನು ಸಂಸಕ್ತನಾಗುವುದಿಲ್ಲ, ಇಂತಹ ನಿನ್ನಲ್ಲಿ ಪೂಜೆ ಯಿಂದಾಗುವ ಪ್ರಯೋಜನವಾವುದೂ ಇಲ್ಲ; ಹೀಗೆಯೇ, ವೈರ ದ್ವೇಷ, ಶತ್ರುತ್ವ ಎಂಬಂತಹುವು ನಿನ್ನಿಂದ ದೂರ ವಾಗಿ ಹೊರಹಾಕಲ್ಪಟ್ಟಿವೆ, ಇಂತಹ ನಿನ್ನಲ್ಲಿ ನಿಂದೆಯಿಂದ ಯಾವ ಪರಿಣಾಮವೂ ಆಗುವುದಿಲ್ಲ; ಹೀಗಿದ್ದರೂ ನಿನ್ನ ಪುಣ್ಯಪ್ರದಗುಣಗಳ ಸ್ಮರಣೆಯು ನನ್ನ ಚಿತ್ತವನ್ನು ದುಃಖದಾಯಕವಾದ ಪಾಪಕಲಂಕದಿಂದ ಪವಿತ್ರ ಗೊಳಿಸಲಿ, (ಚಿತ್ತದ ಕಲಂಕ ನಿವಾರಣೆಯ ಪೂರ್ವಕ ಮೂಡುವ ಪುಣ್ಯದಿಂದ ತಾವಾಗಿಯೇ ಕಷ್ಟಕಾರ್ಪಣ್ಯಗಳು ದೂರವಾಗಿ ಸುಖಸಂಪತ್ತಿಗಳ ಸಿದ್ಧಿಯಾಗುವುದೆಂಬ ಅಭಿ ಪ್ರಾಯವಿದೆ).

ಶ್ರಾವಕವರ್ಗಕ್ಕೆ ಪೂಜೆಮಾಡುವ ವಿಧಿ ವಿಧಾನ ಗಳನ್ನು ತಿಳಿಸುವ ಶಾಸ್ತ್ರಗ್ರಂಥಗಳಿವೆ. ಇವುಗಳಲ್ಲಿ ಒಂದು 'ಚತುರ್ವಿಂಶತಿ ತೀರ್ಥಕರಾರಾಧನಾ' ಗ್ರಂಥ. ಆರಾಧನಾ ಎಂದರೆ ಪೂಜೆ ಎಂದೇ ಅರ್ಥ. ಆದರೆ ವಿಶೇಷ ಪ್ರಕಾರದ ಪೂಜೆ, ಅಥವಾ ಅರ್ಚನೆ ಎಂಬ ಅರ್ಥದಲ್ಲಿ ರೂಢಿ ಹೊಂದಿದೆ. ಇಪ್ಪತ್ತನಾಲ್ಕು ತೀರ್ಥಂಕರರ ಆರಾಧನೆ ಈ ಗ್ರಂಥದ ವಸ್ತು ಎಂಬುದು ಗ್ರಂಥದ ಹೆಸರಿನಿಂದಲೇ ಸೂಚಿತ ವಾಗುವುದು. ನಿಜವೆಂದರೆ ಇದು ಗ್ರಂಥದ ಕೇಂದ್ರ ಅಥವಾ ಮೂಲೋದ್ದೇಶದ ವಿಷಯ. ಇಪ್ಪತ್ತ ನಾಲ್ಕು ತೀರ್ಥಂಕರರ ಆರಾಧನೆಯಲ್ಲದೆ ಈ ಆರಾಧನೆಯ

ಪೂರಕವಾದ ಇತರ ಅಂಶಗಳೂ ಇದರಲ್ಲಿ ಸೇರಿವೆ. ಆರಾಧನೆ ನಡೆಸುವ ಮುನ್ನ ಕೆಲವು ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಮನಶುದ್ಧಿ, ವಚನ ಶುದ್ಧಿ, (ಮೌನ ; ಎಂದರೆ ಪೂಜೆಗೆ ಸಂಬಂಧಿಸಿದ ವಿಷಯಗಳಲ್ಲದೆ ಇತರ ವಿಷಯಗಳನ್ನು ಕುರಿತಂತೆ ಮೌನ ಎಂದು ತಿಳಿಯಬೇಕಾಗಿದೆ.)ಶರೀರ ಶುದ್ಧಿ,ಕ್ರಿಯಾಶುದ್ಧಿ, (ಪೂಜಾಸ್ಥಾನ) ಭೂಶುದ್ಧಿ, ಪೂಜಾದ್ರವ್ಯ ಶುದ್ಧಿ, ಇವೇ ಮುಂತಾದ ಶುದ್ಧಿಗಳನ್ನು ಪೀಠಿಕೆಯಾಗಿ ಮಂತ್ರಪೂರ್ವಕ ನಡೆಸಬೇಕಾಗುವುದು. ಈ ಪೀಠಿಕೆಯು ಮಂಗಲಾಷ್ಟಕ ಪಠನಪೂರ್ವಕ ಪ್ರಾರಂಭವಾಗಿ ಸಂಧ್ಯಾವಂದನೆ, ಜಿನಾಲಯ ಸ್ತುತಿ, ಈರ್ಯಾಪಥಶುದ್ಧಿ ಸಕಲೀಕರಣ, ದರ್ಶನ ಸ್ತುತಿ, ಮಹಾಪುಣ್ಯಾಹವಾಚನ ಜಿನಯಜ್ಞದೀಕ್ಷಾವಿಧಾನ, ಸಿದ್ಧಾರ್ಚನೆ, ಮಹರ್ಷಿಪರ್ಯುಪಾಸನ, ಯಜ್ಞ ದೀಕ್ಷಾವಿಧಾನ, ಭೂಮಿಶೋಧನ, ಮಂಡಪ ಪ್ರತಿಷ್ಠಾವಿಧಾನಗಳೊಡನೆ ಕೊನೆಯಾಗುತ್ತದೆ. ಈ ಬಳಿಕ ಆರಾಧನೆಯು ಪ್ರತ್ಯೇಕವಾಗಿ ಅರ್ಹದಾದಿ ನವದೇವತೆಗಳ ಅರ್ಚನೆ, ಪ್ರತ್ಯೇಕ ಅಷ್ಟಕಮಂತ್ರಪಾಠಗಳೊಡನೆ ಪ್ರಾರಂಭವಾಗುತ್ತದೆ. ಇದರ ಬಳಿಕ ಒಟ್ಟಾಗಿ ಭೂತ ಕಾಲದ ಚತುರ್ವಿಂಶತಿ ತೀರ್ಥಂಕರರ, ವರ್ತಮಾನಕಾಲ ಚತುರ್ವಿಂಶತಿ ತೀರ್ಥಂಕರರ ಮತ್ತು ಭವಿಷ್ಯತ್ಕಾಲ ತೀರ್ಥಂಕರರ ಅಷ್ಟಕ ಮಂತ್ರಪಾಠಸಹಿತ ನಡೆಯುವುದು. ಈ ಬಳಿಕ ಬಿಡಿ ಬಿಡಿಯಾಗಿ ವೃಷಭಾದಿ ಮಹಾವೀರಾಂತ್ಯ ವರ್ತಮಾನಕಾಲ ಚತುರ್ವಿಂಶತಿ ತೀರ್ಥಂಕರರ ಅರ್ಚನೆ ಪ್ರತ್ಯೇಕ ಅಷ್ಟಕ ಸಹಿತ ನಡೆಯುವುದು. ದಕ್ಷಿಣ ಭಾರತದಲ್ಲಿ ಬಾಹುಬಲಿಜಿನ–ಗೋಮಟೇಶ್ವರನ ಪೂಜೆ ವಿಶೇಷ ಪ್ರಚಾರದಲ್ಲಿದೆಯಾಗಿ ಚತುರ್ವಿಂಶತಿ ತೀರ್ಥಂಕರರ ಆರಾಧನೆಯ ಬಳಿಕ ಗ್ರಂಥದಲ್ಲಿ ಬಾಹುಬಲಿ ಸ್ವಾಮಿಯ ಆರಾಧನೆಯಿದೆ. ಇದರ ಬಳಿಕ ಶ್ರುತಪೂಜೆ, ಗಣಧರ ಪೂಜೆ, ಯಕ್ಷ, ಯಕ್ಷಿಯರೇ ಮುಂತಾದ ದೇವದೇವತೆಗಳ ಅರ್ಚನೆ, ಕೊನೆಯದಾಗಿ ಲೋಕಕಲ್ಯಾಣಾರ್ಥವಾದ ಶಾಂತಿಮಂತ್ರ ಪಾಠದೊಡನೆ ಗ್ರಂಥಸಮಾಪ್ತಿಯಾಗುತ್ತದೆ.

ಆರಾಧನೆ ಎಂದರೆ ಸಾಧಾರಣಾರ್ಥದಲ್ಲಿ ಪೂಜೆಯೆಂದೂ ಮತ್ತು ಪೂಜೆಯು ವಂದನೆ, ಸ್ನಪನಾದಿ ಕ್ರಿಯೆಗಳನ್ನು ಒಳಗೊಂಡಿರುವುದೆಂದೂ ಹಿಂದೆ ಹೇಳಿದೆ. ಪೂಜೆಯನ್ನು ಪ್ರಧಾನವಾಗಿ ನಿತ್ಯಪೂಜೆ ಮತ್ತು ವಿಶೇಷಪೂಜೆ ಎಂದು ಎರಡು ಪ್ರಕಾರವಾಗಿ ಗಣನೆಮಾಡಲಾಗಿರುವುದು ಕಂಡು ಬರುತ್ತದೆ. ಇದಲ್ಲದೆ ಪೂಜೆಯಲ್ಲಿ ಪ್ರಧಾನವಾಗಿ ಎರಡು ಅಂಗಗಳಿವೆ. 1) ಅಭಿಷೇಕಪೂಜೆ ಮತ್ತು 2) ಅಷ್ಟವಿಧಾರ್ಚನಾ ಪೂಜೆ. ನಿತ್ಯಪೂಜಾಸಂದರ್ಭದಲ್ಲಿ ಕ್ರಿಯೆಗಳು ಸಂಗ್ರಹಾತ್ಮಕವಾಗಿ ನಡೆಯುತ್ತವೆಯಾದರೆ ವಿಶೇಷ ಪೂಜೆಗಳಲ್ಲಿ ವಿಸ್ತೃತವಾಗಿ ನಡೆಯುತ್ತವೆ. ಉದಾಹರಣೆಯಾಗಿ ನಿತ್ಯಪೂಜೆಯು ಅಭಿಷೇಕ ಪೂಜೆಯಲ್ಲಿ ಜಲ, ಕ್ಷೀರ (ಹಾಲು) ಮತ್ತು ಗಂಧಾಭಿಷೇಕಗಳಷ್ಟರಿಂದಲೇ ಅಭಿಷೇಕಪೂಜೆ ನಡೆಸುವ ರೂಢಿ ವಿಶೇಷವಾಗಿ ಕಂಡುಬರುತ್ತದೆ. ಹೀಗೆಯೇ ಅಷ್ಟವಿಧಾರ್ಚನೆಯಲ್ಲಿ ಅಷ್ಟವಿಧದ್ರವ್ಯಗಳನ್ನು ಒಂದೇ ಮಂತ್ರ ಪಠಣಪೂರ್ವಕ ಅರ್ಚನೆ ಮಾಡುವ ರೂಢಿಯಿದೆ. ಆದರೆ ನಂದೀಶ್ವರ ಅಷ್ಟಾಹ್ನಿಕಾದಿ ವಿಶೇಷ ಪೂಜಾಸಂದರ್ಭಗಳಲ್ಲಿ ಕನಿಷ್ಠ ಮಿತಿಯಿಂದ ಪಂಚ ಅಭಿಷೇಕ ದ್ರವ್ಯಗಳಿಂದ ಅಭಿಷೇಕ ಪೂಜೆ ನಡೆಸಲಾಗುವುದು. ಹೀಗೆಯೇ ಅರ್ಚನಾ ಪೂಜೆಯು ಅಷ್ಟದ್ರವ್ಯಾರ್ಚನೆಯಲ್ಲಿ ಪ್ರತಿಯೊಂದು ದ್ರವ್ಯವನ್ನೂ ಒಂದೊಂದು ಮಂತ್ರ ಪಠಣಪೂರ್ವಕ ಅರ್ಚನೆ ಮಾಡಲಾಗುವುದು. ಈ ಎರಡನೆ ಪ್ರಕಾರದ ಪೂಜೆಯು 'ಆರಾಧನಾ' ಎಂಬ ಹೆಸರನ್ನು ರೂಢಿಗತವಾಗಿ ಹೊಂದಿದೆ. ಚತುರ್ವಿಂಶತಿ ತೀರ್ಥಕರಾರಾಧನಾ ಗ್ರಂಥದಲ್ಲಿಯಾಗಲಿ, ಅಥವಾ ಇತರ ಯಂತ್ರಾರಾಧನಾ ಗ್ರಂಥಗಳಲ್ಲಿಯಾಗಲಿ ಅಭಿಷೇಕಪೂಜೆಯ ಬಗ್ಗೆ ಹೇಳಿಲ್ಲವಾದರೂ ಅಷ್ಟವಿಧಾರ್ಚನಾ ಆರಾಧನೆಯ ಮುನ್ನ ಅಭಿಷೇಕ ಪೂಜೆಯನ್ನು ಆಚರಿಸಬೇಕೆಂಬ ನಿಯಮವಿದೆ. ಯಂತ್ರಾರಾಧನೆಗಳಲ್ಲಿ ಒಂದೊಂದು ಯಂತ್ರಕ್ಕೆ ಸಾಧಾರಣವಾಗಿ ಕನಿಷ್ಠ ಮಿತಿಯಿಂದ ಒಬ್ಬೊಬ್ಬ ತೀರ್ಥಂಕರನ ಆರಾಧನೆ ಪ್ರಾಧಾನ್ಯತೆಯಿಂದ ನಿಯತವಾಗಿ ಇದ್ದೇ ಇರುತ್ತದೆ. ಉದಾಹರಣೆಯಾಗಿ ಕಲಿಕುಂಡ ಯಂತ್ರಾರಾಧನೆ ಪಾರ್ಶ್ವನಾಥ ತೀರ್ಥಂಕರ, ವಜ್ರಪಂಜರ ಯಂತ್ರಾರಾಧನೆ ಚಂದ್ರಪ್ರಭ ತೀರ್ಥಂಕರರ ಪ್ರಾಧಾನ್ಯತೆಯುಳ್ಳವಾಗಿವೆ. ಹೀಗಿದ್ದರೂ ಸಾಧಾರಣವಾಗಿ ಪ್ರಾರಂಭಕ್ಕೆ ಅರ್ಹದಾದಿ ನವದೇವತೆಗಳ ಸಮಷ್ಟಿಯಾಗಿ ಚತುರ್ವಿಂಶತಿ ತೀರ್ಥಂಕರರ ವೃಷಭ ತೀರ್ಥಂಕರನ ಹಾಗೂ ಆರಾಧಕರ ವಿಶೇಷ ಭಕ್ತಿ ಮಾನ್ಯತೆಯ ಇತರ ತೀರ್ಥಂಕರರ ಆರಾಧನೆಯನ್ನೂ ಈ ಯಂತ್ರಾರಾಧನೆಗಳಲ್ಲಿ ಮಾಡುವುದುಂಟು. ದಕ್ಷಿಣ ದೇಶದ ಜೈನರಿಗೆ ಅನಂತನಾಥನೋಂಪಿ (ವ್ರತ)

ಆಚರಣೆಯು ಹೆಚ್ಚು ಪರಿಚಿತವಿದೆ. ಇವರಲ್ಲಿ ಅನಂತನಾಥ ತೀರ್ಥಂಕರನ ಆರಾಧನೆಯು ಮುನ್ನ ವೃಷಭಾದಿ ವಿಮಲ ತೀರ್ಥಂಕರ ಪರ್ಯಂತರಾದ ಹದಿಮೂರು ತೀರ್ಥಂಕರರ ಆರಾಧನೆಮಾಡಿ ಆ ಬಳಿಕ ಅನಂತನಾಥ ತೀರ್ಥಂಕರನ ಆರಾಧನೆಯನ್ನು ವಿಶಿಷ್ಟಪ್ರಕಾರದಿಂದ ನಡೆಸಲಾಗುವುದು. ಈ ರೀತಿಯಿಂದ ಇಪ್ಪತ್ತನಾಲ್ಕು ತೀರ್ಥಂಕರರ ಆರಾಧನೆಯನ್ನು ಸಮಗ್ರವಾಗಿವುಳ್ಳದ್ದಾದ ಗ್ರಂಥವೊಂದರ ಅವಶ್ಯಕತೆಯನ್ನು ಅರಿತುಕೊಳ್ಳಬಹುದು. ಪ್ರತಿ ತೀರ್ಥಂಕರನ ಆರಾಧನೆಯ ಅಷ್ಟವಿಧಾರ್ಚನೆಯಲ್ಲಿ ಕಂಡುಬರುವ ಸಮಾನ ವಿಧಾನಗಳು ಮುಂದಿನಂತಿವೆ; ೧) ಆಹ್ವಾನ ಮಂತ್ರ–ಈ ಮಂತ್ರವನ್ನು ಹೇಳಿ ಆಹ್ವಾನ, ಸ್ಥಾಪನೆ ಮತ್ತು ಸನ್ನಿಧೀಕರಣ ಕ್ರಿಯೆಗಳನ್ನು ಮಾಡಲಾಗುವುದು; ಇದರ ಬಳಿಕ ಜಲ, ಗಂಧ, ಅಕ್ಷತ, ಪುಷ್ಪ, ಚರು, ದೀಪ, ಧೂಪ, ಫಲ, ಈ ಎಂಟು ದ್ರವ್ಯಗಳಿಂದ ಪ್ರತ್ಯೇಕವಾದ ಒಂದೊಂದು ಮಂತ್ರ ಪಠಣಪೂರ್ವಕ ಅರ್ಚನೆ ಮಾಡಲಾಗುವುದು. ಈ ಎಂಟು ದ್ರವ್ಯಗಳ ಅರ್ಚನೆಯ ಬಳಿಕ ಅರ್ಘ್ಯ, ಶಾಂತಿಧಾರೆ, ಮತ್ತು ಪುಷ್ಪಾಂಜಲಿಗಳ ಅರ್ಚನೆಯಾಗುವುದು. ಅನಂತರ ಸ್ತೋತ್ರ, ಜಯಮಾಲಾರ್ಘ್ಯ, ಆಶೀರ್ವಾದ ಮತ್ತು ಭವಾವಳಿಪಾಠ ಮತ್ತು ನಮಸ್ಕಾರ ಕ್ರಿಯೆಗಳಿವೆ. ಈ ಕ್ರಮವು ಎಲ್ಲ ತೀರ್ಥಂಕರರ ಆರಾಧನೆಯಲ್ಲಿಯೂ ಸಮಾನ ರೀತಿಯಾಗಿದೆ.

ಚತುರ್ವಿಂಶತಿ ತೀರ್ಥಂಕರ ಆರಾಧನೆಯ ರಚನೆ ಯಾರಿಂದಾಯಿತು ಎಂಬುದು ಪರಿಶೀಲನಾರ್ಹವಾಗಿದೆ. ಇದೇ ಗ್ರಂಥದ ಮುನ್ನುಡಿಯಲ್ಲಿ (ಪುಟ 6) "ಈ ೨೪ ತೀರ್ಥಂಕರ ಆರಾಧನಾ ಗ್ರಂಥವನ್ನು ವೇದೋರ್ಬಲಿ ಜಿನದಾಸಶಾಸ್ತ್ರಿಗಳವರ ತಂದೆಯವರಾದ ವೇ. ಬ್ರಂಹಸೂರಿಶಾಸ್ತ್ರಿಗಳವರು ವೀರನಿರ್ವಾಣ ಶಕ ೨೩೯೮ಕ್ಕೆ (೧೮೭೦ನೇ ಇಸವಿ) ಸರಿಯಾದ ಆಂಗೀರಸ ನಾಮಸಂವತ್ಸರದ ಚೈತ್ರ ಶುದ್ಧ ಪಂಚಮೀ ದಿವಸ ರಚಿಸಿ ಪೂರ್ತಿಮಾಡಿದರೆಂದು ಅವರ ಒಂದು ಪದ್ಯದಿಂದ ಗೊತ್ತಾಗುತ್ತದೆ" ಎಂದು ಗ್ರಂಥಪ್ರಕಾಶಕರಾದ ಶ್ರೀ ಸರಾಫ್ ಪದ್ಮರಾಜಯ್ಯನವರು ಹೇಳಿದ್ದಾರೆ. ವೇ.ಬ್ರಂಹಸೂರಿಶಾಸ್ತ್ರಿಗಳವರು ಹೆಸರಾಂತ ಪ್ರಕಾಂಡ ಪಂಡಿತರಾಗಿದ್ದರು. ಶ್ರವಣಬೆಳಗುಳದ ಶಾಸನಗಳನ್ನು ಪ್ರತಿ ಲಿಪಿ ಮಾಡಿ ಸಂಗ್ರಹ ಮಾಡುವ ಕಾರ್ಯದಲ್ಲಿ ಈ ಪಂಡಿತ ಪ್ರವರರಿಂದಾದ ಸಹಾಯವನ್ನು ಮಾನ್ಯ ಬಿ. ಎಲ್. ರೈಸ್‌ರವರು ಪ್ರಶಂಸಿದ್ದಾರೆ.[1] ಮೂಡಬಿದರೆಯಲ್ಲಿ ೧೮೯೦ನೇ ಇಸವಿ ಸಮಯದಲ್ಲಿ ಷಟ್ಖಂಡಾಗಮ–ಧವಲಾ ಗ್ರಂಥವನ್ನು ಪ್ರತಿಲಿಪಿ ಮಾಡು ಕಾರ್ಯ ನಡೆಸಿದ ಶ್ರೇಯ ಇವರದು. ಇಂತಹ ದಕ್ಷಿಣ ಭಾರತದ ಸಂಸ್ಕೃತ ಪ್ರಾಕೃತ ವಿದ್ವಾಂಸರಲ್ಲಿ ಅಗ್ರೇಸರರೆಂದು ಖ್ಯಾತಿಭಾಜನರಾಗಿದ್ದ ಇವರಿಂದ ಚತುರ್ವಿಂಶತಿ ತೀರ್ಥಕರಾರಾಧನಾ ಗ್ರಂಥದ ರಚನೆಯಾಯಿತೆಂದು ಹೇಳಿರುವುದನ್ನು ಅಮಾನ್ಯ ಮಾಡಲಾಗುವುದಿಲ್ಲವೆಂಬುದು ನಿಜ; ಆದರೆ ಇಪ್ಪತ್ತನಾಲ್ಕು ತೀರ್ಥಂಕರರೆಲ್ಲರ ಆರಾಧನಾ ಪಾಠಗಳೆಲ್ಲವೂ ಇವರೊಬ್ಬರಿಂದಲೇ ರಚಿತವಾದುವೆ ? ಎಂಬುದು ಮಾತ್ರ ವಿಚಾರಾರ್ಹವಾಗುತ್ತದೆ; ಕೆಲವರು ತೀರ್ಥಂಕರರ ಆರಾಧನೆಗಳಲ್ಲಿ ಜಯಮಾಲೆಯ ಅನಂತರದಲ್ಲಿ ಬರುವಗತ್ಯಾಗಳಲ್ಲಿ ಆಯಾಯ ತೀರ್ಥಕರರ ಆರಾಧನಾ ಮಂತ್ರ ಪಾಠಗಳ ರಚನಕಾರರು ತಮ್ಮ ತಮ್ಮ ಹೆಸರುಗಳನ್ನು ಪರ್ಯಾಯವಾಗಿ ಸೂಚಿಸಿರುವುದನ್ನು ಗುರುತಿಸಬಹುದು. ಉದಾಹರಣೆಯಾಗಿ ಶಾಂತಿತೀರ್ಥಕರಾರಾಧನಾಗತ್ಯಾದಲ್ಲಿ, ಧರ್ಮಭೂಷಣ, ಮಲ್ಲಿತೀರ್ಥಂಕರನ ಆರಾಧನಾಗತ್ಯಾದಲ್ಲಿ, ದೇವೇಂದ್ರಕೀರ್ತಿ ಇತ್ಯಾದಿಯಾಗಿ ರಚನಕಾರರ ಹೆಸರುಗಳನ್ನು ಗುರುತಿಸಬಹುದು. ಹೀಗೆಯೆ ಗೋಮಟೇಶ್ವರ ಬಾಹುಬಲಿ ಸ್ವಾಮಿಯ ಆರಾಧನಾಸ್ತೋತ್ರ ಪದ್ಯ ೧೧ ರಲ್ಲಿ 'ಬ್ರಹ್ಮಸೂರಿ' ಎಂಬ ಹೆಸರನ್ನು ಗುರುತಿಸಬಹುದಾಗಿದೆಯಾದ್ದರಿಂದ ಈ ಬಾಹುಬಲಿ ಆರಾಧನಾ ಮಂತ್ರಪಾಠವು ಬ್ರಹ್ಮಸೂರಿ ಶಾಸ್ತ್ರಿಗಳಿಂದ ರಚಿತವಾಗಿದೆಯೆಂದು ಗುರುತಿಸಬಹುದು.[2] ಇದರಂತೆ ಬ್ರಹ್ಮಸೂರಿಶಾಸ್ತ್ರಿಯವರು ತಮ್ಮ ಕಾಲದಲ್ಲಿ ಉಪಲಬ್ಧವಿದ್ದ ಆರಾಧನಾಮಂತ್ರಗಳನ್ನು ಸಂಕಲನ ಮಾಡಿ ಅವುಗಳ ಜೊತೆಗೆ ತಮ್ಮ ರಚನೆಗಳನ್ನು ಸೇರಿಸಿ ಚತುರ್ವಿಂಶತಿ ತೀರ್ಥಕರಾಧನಾಗ್ರಂಥವನ್ನು ರೂಪಿಸಿರುವರೆಂದು ಹೇಳಬಹುದಾಗಿದೆ.[3]

---

1. ನೋಡಿ : ಶ್ರವಣಬೆಳಗುಳದ ಶಾಸನ ಪುಸ್ತಕ—ಬಿ. ಎಲ್. ರೈಸ್. ಸಂಪಾದಿತ.
2. ಪುಸ್ತಕ ವಿಷಯದ ಬಗ್ಗೆ ಗಮನಾರ್ಹವಾದ ಒಂದು ಅಂಶವಿದೆ. ಸುಮಾರು 135 ವರ್ಷಗಳ ಹಿಂದೆ ಬರೆಯಲಾಗಿರುವ ಒಂದು ಕೈಬರಹದ ಆರಾಧನಾ ಪುಸ್ತಕವಿದೆ. ಅದರಲ್ಲಿ ಚತುರ್ವಿಂಶತಿ ತೀರ್ಥಂಕರ ಆರಾಧನೆಯ ಮಂತ್ರ ಪಾಠಗಳಿವೆ. ಆದರೆ ಬಾಹುಬಲಿಸ್ವಾಮಿಯ ಆರಾಧನಾ ಮಂತ್ರ ಪಾಠವಿಲ್ಲ.
3. ಈ ವಿಷಯದ ಬಗ್ಗೆ 'ಸನ್ಮತಿ' ಪತ್ರಿಕೆಯಲ್ಲಿ ಒಂದು ವಿಸ್ತೃತ ಲೇಖನ ಪ್ರಕಟವಾಗಿದೆ.

ಕರ್ನಾಟಕದಲ್ಲಿ ಜೈನಧಾರ್ಮಿಕ ಗ್ರಂಥಗಳ, ಶಾಸ್ತ್ರ ಗ್ರಂಥಗಳ ಪುನರುತ್ಥಾನ ಪದೇ ಪದೇ ನಡೆದಿದೆ. ಇತ್ತೀಚೆಗೆ ಆಗಿರುವ ಇಂತಹ ಪುನರುತ್ಥಾನ ಕಾರ್ಯದ ವಿಶಿಷ್ಟ ಶ್ರೇಯಸ್ಸು ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿಗಳ ವರದ್ದಾಗಿದೆ. ಜೈನ ಧಾರ್ಮಿಕ ಗ್ರಂಥಗಳು, ಶಾಸ್ತ್ರ ಗ್ರಂಥಗಳು ಬಹುತರವಾಗಿ ಸಂಸ್ಕೃತ ಮತ್ತು ಪ್ರಾಕೃತ ಭಾಷೆಯವಾಗಿವೆಯೆಂಬುದು ತಿಳಿದ ವಿಷಯ. ಆದ್ದರಿಂದ ಸಂಸ್ಕೃತ—ಪ್ರಾಕೃತ ಭಾಷೆಗಳಲ್ಲಿ ಪ್ರೌಢಪಾಂಡಿತ್ಯ ಹೊಂದಿರುವುದು ಮಾತ್ರವಲ್ಲದೆ ಜೈನಸಿದ್ಧಾಂತ, ನ್ಯಾಯ ಇವೇ ಮುಂತಾದ ಪ್ರಕಾರಗಳಲ್ಲಿ ಉತ್ತಮ ವಿದ್ವತ್ಸಂಪನ್ನತೆ ಹಾಗೂ ಕನ್ನಡ ಭಾಷೆಯ ವಿಜ್ಞತೆ ಹೊಂದಿದವರಿಂದ ಮಾತ್ರ ಈ ಪುನರುತ್ಥಾನ ಕಾರ್ಯವು ಸಾಧ್ಯವಾಗುವುದು. ಇಷ್ಟು ಮಾತ್ರವಲ್ಲ, ಎಂತಹ ವಿಘ್ನಗಳು ಎದುರಾದರೂ ಅವುಗಳನ್ನು ಗಣನೆಗೆ ತಂದುಕೊಳ್ಳದೆ ತಾವು ಕೈಗೊಂಡ ಕಾರ್ಯವನ್ನು ಮುನ್ನಡೆಸುವ ಅದಮ್ಯ ಉತ್ಸಾಹ ಮತ್ತು ಯತ್ನ ಶೀಲತೆಯೂ ಬೇಕು. ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿಗಳವರು ಈ ಎಲ್ಲ ಗುಣಗಳಿಂದ ಮಂಡಿತರಾಗಿದ್ದರು. ಆದ್ದರಿಂದಲೇ ದಿಗಂಬರ ಜೈನ ಧರ್ಮೀಯರ ಮಹಾ ಮೇರು ಕೃತಿಯಾದ ಭಗವಜ್ಜಿನಸೇನಾಚಾರ್ಯರ–ಗುಣ ಭದ್ರಚಾರ್ಯರ ಮಹಾಪುರಾಣದ ಸಮಗ್ರ ಕನ್ನಡ ಅನುವಾದವನ್ನು ಇವರು ಕರ್ನಾಟಕಕ್ಕೆ ಕೊಡುಗೆಯಾಗಿ ಇತ್ತರು. ಶ್ರೀ ಶಾಸ್ತ್ರಿಗಳವರದು ಬಹುಮುಖ ಪ್ರತಿಭೆ. ಆದ್ದರಿಂದಲೇ ಜೈನ ಧರ್ಮದ ಎಲ್ಲ ಪ್ರಕಾರದ ಅನೇಕಾನೇಕ ಗ್ರಂಥಗಳ ಪುನರುತ್ಥಾನ ಇವರಿಂದಾಯಿತು. ಇವರ ಸಂಪಾದನೆಯಲ್ಲಿ ಪುಸ್ತಕರೂಪದಿಂದ ಧರ್ಮಾಭಿಮಾನಿಗಳ ಕೈಸೇರಿದ ಚತುರ್ವಿಂಶತಿ ತೀರ್ಥಕರ ಆರಾಧನಾಗ್ರಂಥವು, ಭಾಷೆ ಶುದ್ಧಿ, ಮಂತ್ರ ಶುದ್ಧಿ, ಮಂತ್ರಪ್ರಯೋಗ ನಿರ್ದೇಶನ, ಇವೇ ಮುಂತಾದ ಅಗತ್ಯಗಳ ಪೂರೈಕೆಯೊಡನೆ ಈ ಪ್ರಕಾರದ ಗ್ರಂಥಗಳಲ್ಲಿ. ತನ್ನ ಅಗ್ರಗಣ್ಯ ಮಾನ್ಯತೆಯನ್ನು ಪಡೆದು ಆದರಣೀಯವಾಗಿ ಉಳಿದಿದೆ. □

ಕ್ಷೇಮಂ ಸರ್ವಪ್ರಜಾನಾಂ ಪ್ರಭವತು ಬಲವಾನ್ ಧಾರ್ಮಿಕೋ ಭೂಮಿಪಾಲಃ
ಕಾಲೇ ಕಾಲೇ ಚ ಸಮ್ಯಗ್ವರ್ಷತು ಮಘವಾ ವ್ಯಾಧಯೋ ಯಾಂತು ನಾಶಂ ।
ದುರ್ಭಿಕ್ಷಂ ಚೋರಮಾರೀ ಕ್ಷಣಮಪಿ ಜಗತಾಂ ಮಾಸ್ಮಭೂಜ್ಜೀವಲೋಕೇ
ಜೈನೇಂದ್ರಂ ಧರ್ಮಚಕ್ರಂ ಪ್ರಭವತು ಸತತಂ ಸರ್ವಸೌಖ್ಯಪ್ರದಾಯಿ ॥

ಸಮಸ್ತ ಪ್ರಜೆಗಳಿಗೆ ಕ್ಷೇಮವಾಗಲಿ. ದೊರೆಯು ಬಲಿಷ್ಠನೂ ಧಾರ್ಮಿಕನೂ ಆಗಲಿ. ದೇವೇಂದ್ರನು ಕಾಲ ಕಾಲದಲ್ಲಿ ಚೆನ್ನಾಗಿ ಮಳೆಯನ್ನು ಸುರಿಸಲಿ. ರೋಗಗಳು ನಾಶವನ್ನು ಹೊಂದಲಿ. ಲೋಕಗಳಿಗೆ ದುರ್ಭಿಕ್ಷವೂ ಚೋರರೂ ಮಾರಿಯೂ ಕ್ಷಣಕಾಲವೂ ಉಂಟಾಗದಿರಲಿ. ಜೀವಲೋಕದಲ್ಲಿ ಜಿನೇಶ್ವರ ಸಂಬಂಧವಾದ ಧರ್ಮಚಕ್ರವು ಯಾವಾಗಲೂ ಎಲ್ಲರಿಗೂ ಸೌಖ್ಯವನ್ನುಂಟು ಮಾಡುವುದಾಗಲಿ.

—ದಶಭಕ್ತಿ

ಶತಕತ್ರಯ

— ಶ್ರೀ ಜಿ. ಜಿ. ಮಂಜುನಾಥನ್

ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್ ವತಿಯಿಂದ ಶ್ರೀಮಾನ್ ಶಾಸ್ತ್ರಿಗಳ ಜನ್ಮ ಶತಾಬ್ದಿ ಅಂಗವಾಗಿ ರತ್ನಾಕರ ವಿರಚಿತ ಶತಕತ್ರಯ ಪುನರ್ಮುದ್ರಣಗೊಂಡಿದೆ. 1922, 1941, 1962 ಮತ್ತು 1988ನೆಯ ಇಸವಿಗಳಲ್ಲಿ ಈ ಕೃತಿ ಪ್ರಕಟಗೊಂಡಿದ್ದು ಜನಪ್ರಿಯವಾಗಿದೆ. ಇದಾದನಂತರ 1962ರಲ್ಲಿ ಪ್ರೊ|| ಜಿ. ಬ್ರಹ್ಮಪ್ಪನವರು ರತ್ನಾಕರನ ಶತಕ ಸಾಹಿತ್ಯ ಎನ್ನುವ ಕೃತಿಯನ್ನು ಹೊರತಂದಿದ್ದಾರೆ. ಶ್ರೀಮಾನ್ ಎ. ಆರ್. ನಾಗರಾಜ್ ಅವರು ರತ್ನಾಕರ ಶತಕ ಮತ್ತು ಅಪರಾಜಿತೇಶ್ವರ ಶತಕಗಳನ್ನು 1981ರಲ್ಲಿ ಎರಡು ಸಂಪುಟಗಳಲ್ಲಿ ತಂದಿದ್ದಾರೆ. ಈ ಮೂರೂ ಆವೃತ್ತಿಗಳಲ್ಲಿ ಕಂಡುಬರುವ ಸಮಾನ ಅಂಶವೆಂದರೆ ಒಂದೇ ಪಾಠ ಪರಿಷ್ಕರಣವನ್ನು ಹೊಂದಿರುವುದು. ಎ. ಆರ್. ನಾಗರಾಜ್ ಅವರು ಮುದ್ರಣ ಚಿಹ್ನೆಗಳೂ ಸೇರಿದಂತೆ ಎ. ಶಾಂತಿರಾಜ ಶಾಸ್ತ್ರಿಗಳ ಪಾಠವನ್ನು ಅವಲಂಬಿಸಿದ್ದಾರೆ. ಪಾಠ ಪರಿಷ್ಕರಣದ ವಿಚಾರದಲ್ಲಿ ಪ್ರೊ|| ಜಿ. ಬ್ರಹ್ಮಪ್ಪನವರು ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ಅದೆಂದರೆ ಶಾಸ್ತ್ರಿಗಳು ಬಳಸಿರುವ ಮುದ್ರಣ ಚಿಹ್ನೆಗಳನ್ನು ಇವರು ಕೈ ಬಿಟ್ಟಿದ್ದಾರೆ. ಅಷ್ಟರಮಟ್ಟಿಗೆ ಇವರು ರತ್ನಾಕರನ ಶತಕ ಸಾಹಿತ್ಯದ ಮೂಲಪಾಠವನ್ನು ಸಮೀಪಿಸಿದ್ದಾರೆನ್ನಬಹುದು. ಅದಕ್ಕಾಗಿ ಅಭಿನಂದನೆಗಳು. ಇಷ್ಟು ಮಾತನ್ನು ಹೇಳುವ ಉದ್ದೇಶ ಇಷ್ಟೇ. ಈ ಮಹನೀಯರು ರತ್ನಾಕರನ ಶತಕತ್ರಯದ ಪಾಠವನ್ನು ಹಸ್ತಪ್ರತಿಗಳ ಸಹಾಯದಿಂದ ತಾವೇ ಪರಿಷ್ಕರಿಸಿದ್ದಾರೇನೋ ಎನ್ನುವ ಭ್ರಾಂತಿಯನ್ನುಂಟುಮಾಡಿದ್ದಾರೆ, ಶ್ರೀಮಾನ್ ಶಾಸ್ತ್ರಿಗಳ ಹೆಸರನ್ನು ಸೌಜನ್ಯಕ್ಕಾದರೂ ಹೇಳದೆ.

ಶತಕತ್ರಯದ ಮುನ್ನುಡಿಯಲ್ಲಿ ಶಾಸ್ತ್ರಿಗಳು ದೇವಚಂದ್ರನು ತನ್ನ ರಾಜಾವಳೀ ಕಥೆಯಲ್ಲಿ ಹೇಳಿರುವ ರತ್ನಾಕರನಿಗೆ ಸಂಬಂಧಿಸಿದ ಸಂಗತಿಗಳನ್ನು ಆಧರಿಸಿ ರತ್ನಾಕರನ ಜೀವಿತವನ್ನು ರೂಪಿಸಿದ್ದಾರೆ. ಅಲ್ಲಿ ಬರುವ ರತ್ನಾಕರನ ವೀರಶೈವ ದೀಕ್ಷೆಯ ಪ್ರಸಂಗವನ್ನು ಹೇಳಿರುವುದಲ್ಲದೆ ಸೋಮೇಶ್ವರನ ಶತಕವನ್ನು ರತ್ನಾಕರ ರಚಿಸಿರಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ಅದಕ್ಕೆ ಪೂರಕವಾಗಿ—

> ವರಸಮ್ಯಕ್ತ್ವ ಸುಧರ್ಮ ಜೈನಮತದೊಳ್ತಾಂ
> ಪುಟ್ಟಿಯಾದೀಕ್ಷೆಯಂ
> ಧರಿಸೀಸನ್ನುತ ಕಾವ್ಯಶಾಸ್ತ್ರಗಳನುಂ ನಿರ್ಮಾಣಮಂ
> ಮಾಡುತಂ
> ವರ ರತ್ನಾಕರಯೋಗಿಯೆಂದು ನಿರುತಂ ವೈರಾಗ್ಯಂ
> ಬಂದೇರಲಾಂ
> ಹರದೀಕ್ಷಾವ್ರತನಾದೆನೈ ಹರಹರ ಶ್ರೀ ಚೆನ್ನಸೋಮೇಶ್ವರಾ

ಎನ್ನುವ ಪದ್ಯವನ್ನು ಉದ್ಧರಿಸಿದ್ದಾರೆ. ಈ ಪದ್ಯವನ್ನು ರತ್ನಾಕರನೇ ಬರೆದನೆನ್ನುವುದಕ್ಕೆ ಸಂಶಯವಿದೆ. ರತ್ನಾಕರವರ್ಣಿಯ ಜೀವಿತದ ಏರು-ಪೇರುಗಳನ್ನು ಕಂಡವರು ಅವನ ಮಹತ್ವವನ್ನು ಅರಿತವರು ತಮ್ಮವನನ್ನಾಗಿ ಮಾಡಿಕೊಳ್ಳುವ ಪ್ರಯತ್ನವಿರಬಹುದೆಂದು ಭಾವಿಸಬಹುದಾಗಿದೆ. ಪ್ರಚಲಿತವಿರುವ ಇಂತಹ ಪ್ರಸಂಗವನ್ನೇ ಮಲೆಯೂರು ದೇವಚಂದ್ರ ದಾಖಲಿಸಿದ್ದಾನೆ. ಆದರೆ ಅದು ಅಬದ್ಧ ಎನ್ನುವುದಕ್ಕೆ "ವೀರಶೈವ ಶಾಸ್ತ್ರಂಗಳಂ ಬಸವಪುರಾಣಂ ಮೊದಲಾಗೆ ಮಾಡಿ" ಎನ್ನುವ ಮಾತು ಸಾಕ್ಷಿ.

ಶ್ರೀಮಾನ್ ಶಾಸ್ತ್ರಿಗಳು ದೇವಚಂದ್ರನ ಕಥೆಯನ್ನು ಉಲ್ಲೇಖಿಸಿದ್ದರೆ, ಎ.ಆರ್. ನಾಗರಾಜ್ ಅವರು ಅದರ ಜೊತೆಗೆ ಉಗ್ರಾಣಮಂಗೇಶರಾಯರು ಭರತೇಶವೈಭವದ ಪೀಠಿಕೆಯಲ್ಲಿ ಕೊಟ್ಟಿರುವ—ವಿರೋಧಿಗಳು ಅಡಗಿಸಿದ ವೇಶ್ಯೆಯ ಪ್ರಸಂಗದಿಂದ ಕೆರಳಿದ ರತ್ನಾಕರನು ಜಿನಧರ್ಮಕ್ಕೆ ತಿಲಾಂಜಲಿಯಿತ್ತು ಘಟ್ಟದ ಮೇಲಕ್ಕೆ ಹೋದ

ನೆಂದೂ ಅಲ್ಲಿ ಆನೆಯ ಮೇಲೆ ಮೆರೆಸುತ್ತಿದ್ದ ವೀರಶೈವ ಗ್ರಂಥವು ಅದಕ್ಕೆ ಅರ್ಹವಲ್ಲವೆಂದು ಈತನು ಭರತೇಶ ವೈಭವವನ್ನು ಬರೆದನೆಂದೂ ತಿಳಿಸುವ ಕಥೆಯನ್ನು ಉಲ್ಲೇಖಿಸಿದ್ದಾರೆ. ದೇವಚಂದ್ರನ ರಾಜಾವಳೀ ಕಥೆಯನ್ನು ಉಲ್ಲೇಖಿಸಿ ವಿಮರ್ಶಿಸುವ ಸಂದರ್ಭದಲ್ಲಿ ಅವರು ಅನಾಮತ್ತು ಶಾಸ್ತ್ರಿಗಳ ಬರಹವನ್ನು ಒಂದೆರಡು ಸಣ್ಣ ಪುಟ್ಟ ಮಾರ್ಪಾಟುಗಳೊಡನೆ ಅಳವಡಿಸಿಕೊಂಡಿರುವುದನ್ನು ನೋಡಬಹುದು—"ಈ ಉಲ್ಲೇಖದಿಂದ ರತ್ನಾಕರಾರ್ಯನು ಸೂರ್ಯವಂಶದ ಕ್ಷತ್ರಿಯ ಪುತ್ರನೆಂದೂ ಕ್ರಿಸ್ತಶಕ೧೬ನೆಯ ಶತಮಾನದ ಮಧ್ಯಕಾಲದಲ್ಲಿದ್ದನೆಂದೂ ಕನ್ನಡದಲ್ಲಿಯೂ ಸಂಸ್ಕೃತದಲ್ಲಿಯೂ ಅಧ್ಯಾತ್ಮವಿದ್ಯೆಯಲ್ಲಿಯೂ ನಿಪುಣನಾಗಿದ್ದನೆಂದೂ ಅವನಿಗೆ ಭೈರವರಸ ಒಡೆಯರ ಆಸ್ಥಾನದಲ್ಲಿ "ಶೃಂಗಾರ ಕವಿ" ಎಂಬ ಪ್ರಶಸ್ತಿಯು ಪ್ರಾಪ್ತವಾಗಿದ್ದಿತೆಂದೂ ಅವನು ಮೊದಲು ಭರತೇಶ್ವರ ಚರಿತ (ಭರತೇಶ ವೈಭವವನ್ನು) ರಚಿಸಿದನೆಂದೂ (ಶತಕತ್ರಯ ಮುನ್ನುಡಿ ii)

"ಮೇಲಿನ ಬರವಣಿಗೆಯಿಂದ ರತ್ನಾಕರನು ಸೂರ್ಯಕ್ಷತ್ರಿಯ ಕುಲದಲ್ಲಿ ಜನಿಸಿದವನೆಂದೂ, ಕ್ರಿಸ್ತಶಕ ೧೬ನೇ ಶತಮಾನದ ಮಧ್ಯಕಾಲದಲ್ಲಿ ಬಾಳಿದನೆಂದೂ ಪ್ರಾಕೃತ, ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಪಂಡಿತನಾಗಿದ್ದನೆಂದೂ ಆಧ್ಯಾತ್ಮ ವಿದ್ಯೆಯಲ್ಲಿ ನಿಪುಣನಾಗಿದ್ದನೆಂದೂ, ಕಾರ್ಕಳದ ಭೈರವರಸ ಒಡೆಯರ ಆಸ್ಥಾನ ಕವಿಯಾಗಿದ್ದು "ಶೃಂಗಾರ ಕವಿ" ಎಂಬ ಪ್ರಶಸ್ತಿ ಲಭ್ಯವಾಗಿತ್ತೆಂದೂ ತಿಳಿಯುತ್ತದೆ." (ಎ. ಆರ್. ನಾಗರಾಜ್–ರತ್ನಾಕರಶತಕದ ಕವಿ ಕಾವ್ಯವಿಮರ್ಶೆ).

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ 'ತುಳುವ ದೇಶದ ಮೂಡಬಿದರೆಯೊಳ್ ಸೂರ್ಯವಂಶದರಸನಾಗಿದ್ದ ದೇವರಾಜನ ಪುತ್ರಂಗೆ' ಎನ್ನುವಲ್ಲಿನ 'ದೇವರಾಜನ ಪುತ್ರ'—ರತ್ನಾಕರ ಎನ್ನುವ ಮಾತು ಶಾಂತಿರಾಜಶಾಸ್ತ್ರಿಗಳಲ್ಲಿ ಅನವಧಾನದಿಂದಲೋ ಅಚ್ಚುಮನೆಯಲ್ಲಿಯೋ ಬಿಟ್ಟುಹೋಗಿದೆ. ಶ್ರೀಮಾನ್ ಎ. ಆರ್. ನಾಗರಾಜ್ ಅವರು ಕೂಡ ಅದನ್ನು ಗುರುತಿಸಿಲ್ಲ ಎನ್ನುವುದನ್ನು, ಮುಂದುವರೆದು ಶಾಸ್ತ್ರಿಗಳು ಕವಿಚರಿತೆಕಾರರು ಭಿನ್ನರೆಂದು ಭಾವಿಸಿದ್ದ ರತ್ನಾಕರ ಮತ್ತು ಶೃಂಗಾರಕವಿ ಹಂಸರಾಜರು ಅಭಿನ್ನರೆಂದೂ 'ಶೃಂಗಾರ ಕವಿ ಹಂಸರಾಜ' ಎನ್ನುವುದು ರತ್ನಾಕರನಿಗೆ ಪ್ರಿಯವಾದ ಬಿರುದೆಂದೂ ಸರಿಯಾಗಿಯೇ ಪ್ರತಿಪಾದಿಸಿದ್ದಾರೆ.

"ರತ್ನಾಕರನು ರತ್ನಾಕರ ಶತಕದಲ್ಲಿ ವೈರಾಗ್ಯ ನೀತಿ ಆತ್ಮವಿಚಾರಗಳನ್ನು, ಅಪರಾಜಿತೇಶ್ವರ ಶತಕದಲ್ಲಿ ಅಧ್ಯಾತ್ಮ-ವೇದಾಂತ ವಿಚಾರವನ್ನೂ, ತ್ರಿಲೋಕಶತಕದಲ್ಲಿ ತ್ರಿಲೋಕಾಕೃತಿ-ಭೂಗೋಳವನ್ನು ಬಲು ಸೊಗಸಾಗಿ ನಿರೂಪಿಸಿದ್ದಾನೆ' (ಶತಕತ್ರಯ VII) 'ರತ್ನಾಕರನ ಕವಿತೆಯು ದ್ರಾಕ್ಷಾಪಾಕದಂತಿದೆ' ಎನ್ನುವ ಮಾತುಗಳು ರತ್ನಾಕರನ ಶತಕತ್ರಯಗಳ ಸ್ವರೂಪ ಮತ್ತು ಸತ್ವವನ್ನು ಅತ್ಯಂತ ಸಮರ್ಥವಾಗಿ ತಿಳಿಸುತ್ತದೆ. ಸೊಗಸಾದ ವಿಮರ್ಶೆಯಾಗಿದೆ."

ಇನ್ನು ಅವರು ರಚಿಸಿರುವ ಟೀಕೆಯನ್ನು ಕುರಿತು ಒಂದೆರಡು ಮಾತುಗಳು. ಶತಕತ್ರಯಗಳ ಬಗ್ಗೆ ಬಂದಿರುವ ಟೀಕಾ ಸಾಹಿತ್ಯವನ್ನೆಲ್ಲ ಸಮೀಕ್ಷಿಸಿದಾಗ ಕೂಡ ಶಾಂತಿರಾಜಶಾಸ್ತ್ರಿಗಳ ಟೀಕಿನ ಘನತೆ ಎದ್ದು ಕಾಣುತ್ತದೆ. ಇವರು ರಚಿಸಿರುವ ಟೀಕು ಸರಳ, ಸುಂದರ, ಪಾಂಡಿತ್ಯ ಪೂರ್ಣವಾಗಿವೆ. ಭವಾವಳಿಗಳಲ್ಲಿ ನಂಬಿಕೆ ಇರುವ ನನಗೆ ರತ್ನಾಕರವರ್ಣಿಯೇ ಮರುಹುಟ್ಟನ್ನು ಪಡೆದು ಬಂದು ಈ ಟೀಕುಗಳನ್ನು ಬರೆದಿರುವನೋ ಏನೋ ಎನ್ನಿಸುತ್ತಿದೆ. ಶಾಸ್ತ್ರಿಗಳು ಟೀಕನ್ನು ಬರೆಯುವಲ್ಲಿ ಮೂರು ಮಜಲುಗಳನ್ನು ಗುರುತಿಸಬಹುದಾಗಿದೆ. ಅವೆಂದರೆ—

1. ಶಬ್ದಕ್ಕೆ ಶಬ್ದ ಪ್ರತಿನಿಧಾನ
2. ಪಾರಿಭಾಷಿಕ ಶಬ್ದಗಳಿಗೆ ವಿವರಣೆ.
3. ಟೀಕು ಆದನಂತರ ಭಾವಸ್ಫುಟತೆಗಾಗಿ ತಮ್ಮದೆ ಆದ ವಿವರಣೆ–ಒಂದೆರಡು ಮಾತುಗಳಲ್ಲಿ.

೧. ಶಬ್ದಕ್ಕೆ ಶಬ್ದ ಪ್ರತಿನಿಧಾನಕ್ಕೆ ಒಂದು ಉದಾಹರಣೆ—

ದಾರಿದ್ರ್ಯಂ ಕವಿದಂದು ಪಾಯ್ದು ಪಗೆಗಳ್
ಸಂತೆಗೊಂಡಂದು ದು-
ರ್ವಾರ ವ್ಯಾಧಿಗಳೊತ್ತಿದಂದು ಮನದೊಳ್
ನಿರ್ವೇಗಮಕ್ಕುಂ ಬಳಿ-॥
ಕ್ಕಾರೋಗಂ ಕಳೆದಂದು ವೈರಿಲಯವಾದಂದರ್ಥ
ವಾದಂದಿದೇಂ
ವೈರಾಗ್ಯಂ ತಲೆದೋರದಂಡಿಸುವುದೋ !
ರತ್ನಾಕರಾಧೀಶ್ವರಾ ॥ ೨೫

ರತ್ನಾಕರಧೀಶ್ವರನೆ! ಬಡತನವು ಆವರಿಸಿಕೊಂಡ ಕಾಲದಲ್ಲಿಯೂ, ಶತ್ರುಗಳು ಮೇಲೆ ಬಿದ್ದು ತಾನು ಭಯ ಪಟ್ಟಾಗಲೂ, ಉಪಶಮನ ಮಾಡಲು ದುಸ್ಸಾಧ್ಯ ವಾದ ರೋಗಗಳು ಆಕ್ರಮಿಸಿದಾಗಲೂ ಮನಸ್ಸಿನಲ್ಲಿ ವೈರಾಗ್ಯವುಂಟಾಗುತ್ತದೆ; ಆಮೇಲೆ ಆ ವ್ಯಾಧಿಯು ಪರಿಹಾರವಾದಾಗ, ಶತ್ರುವು ನಾಶವಾದಾಗ, ದ್ರವ್ಯವು ಪ್ರಾಪ್ತವಾದಾಗ ಈ ವೈರಾಗ್ಯವು ಅಂಕುರಿಸದೆ ಏನು ಅವಿತುಕೊಳ್ಳುವುದೊ ‖೨೫‖

೨. ಪಾರಿಭಾಷಿಕ ಶಬ್ದಗಳಿಗೆ ವಿವರಣೆಗೆ ಒಂದು ಉದಾಹರಣೆ—

ಪ್ರಾಣಂ ಮಾನವಜನ್ಮಮಂ ಪಡೆದ
ಮೆಯ್ಯೊಳ್ನಿಚ್ಚಲುಂ ಪಂಚಕ-
ಲ್ಯಾಣಂ ಪಂಚಗುರುಸ್ತವಂ ಪರಮಶಾಸ್ತ್ರಂ
ಮೋಕ್ಷಸಂಧಾನ ಚಿ।
ತ್ರಾಣಂ ಚಿತ್ರಿನ ರತ್ನಮೂರಿವನಲಂಪಿಂ ಚಿಂತನಂ ಗೆಯ್ವನೇ
ಜಾಣಂ ಮತ್ತಿನ ಚಿಂತಕರ್ಮರುಳರ್ಕೈ!
ರತ್ನಾಕರಾಧೀಶ್ವರಾ ‖ ೧೮

ರತ್ನಾಕರಾಧೀಶ್ವರನೆ! ಗರ್ಭಾವತರಣ, ಜನ್ಮಾಭಿಷೇಕ, ಪರಿನಿಷ್ಕ್ರಮಣ, ಕೇವಲಜ್ಞಾನ, ನಿರ್ವಾಣ ಈ ಐದು ಕಲ್ಯಾಣಗಳು, ಅರಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ, ಸರ್ವಸಾಧು–ಈ ಪಂಚ ಪರಮೇಷ್ಠಿಗಳ ಸ್ತೋತ್ರವು, ಶ್ರೇಷ್ಠವಾದ ಶಾಸ್ತ್ರವು, ಮೋಕ್ಷವನ್ನುಂಟು ಮಾಡುವ ಆತ್ಮಸ್ವರೂಪರಕ್ಷಣೆಯು, ಆತ್ಮನ ಸಮ್ಯಗ್ದರ್ಶನಜ್ಞಾನ ಚಾರಿತ್ರಗಳೆಂಬ ಮೂರು ರತ್ನಗಳು–ಇವು ಮನುಷ್ಯ ಜನ್ಮವನ್ನು ಪಡೆದ ಶರೀರದಲ್ಲಿ ಯಾವಾಗಲೂ ಇರಬೇಕಾದ ಪ್ರಾಣಗಳು; ಇವುಗಳನ್ನು ಪ್ರೀತಿಯಿಂದ ಚಿಂತಿಸುವವನೇ ಚದುರನು; ಬೇರೆ ವಿಷಯದ ಚಿಂತನೆಯುಳ್ಳವರು ಹುಚ್ಚರು ‖೧೮‖

೩. ತಮ್ಮದೇ ಆದ ವಿವರಣೆಗೆ–ಒಂದೆರಡು ಮಾತಂಗಳಲ್ಲಿಸದಕ್ಕೆ ಒಂದು ಉದಾಹರಣೆ—

ಪುಲುವೀಡೊಳ್ಪಲವುಂ ಪಗಲ್ಪರದನಿರ್ದಾದಾಯಮಂ
ಪೆತ್ತು ಬಾ
ಳ್ಪಲೆಯುಳ್ಳೊಂದೆಡೆಗೆಯ್ದಲಾ ನೆಲೆಯುವರ್ನೋವಂತೆ
ಪಾಳ್ಮೆಯ್ಯೊಳಿ
ರ್ದೂಲವಿಂ ಪುಣ್ಯಮನೀ ಮನಂಗಳಿಸಿಕೊಂಡಾ ದೇವ
ಲೋಕಕ್ಕೆ ಪೋ
ಗಲೊಡಂ ನೋವರವಂಗೊ ನೋವು ತವಗೋ
ರತ್ನಾಕರಾಧೀಶ್ವರಾ ‖೧೫‖

ರತ್ನಾಕರಾಧೀಶ್ವರನೆ! ವರ್ತಕನು ಸಣ್ಣ ಮನೆಯಲ್ಲಿ ಬಹಳದಿವಸ ವಾಸವಾಗಿದ್ದು ಲಾಭವನ್ನು ಹೊಂದಿ ಬಾಳುವುದಕ್ಕೆ ಯೋಗ್ಯವಾದ ಸ್ಥಾನವುಳ್ಳ ಒಂದು ಮನೆಗೆ ಹೋಗಲು ಆ ಸಣ್ಣ ಮನೆಯ ಜನರು ದುಃಖ ಪಡುವ ಹಾಗೆ, ಈ ಮನವು–ಆತ್ಮನು ಹಾಳಾಗುವ ಶರೀರದಲ್ಲಿ ವಾಸಮಾಡಿ ಪ್ರೀತಿಯಿಂದ ಪುಣ್ಯವನ್ನು ಸಂಪಾದಿಸಿಕೊಂಡು ಆ ಸ್ವರ್ಗಲೋಕಕ್ಕೆ ಹೋದರೂ ಅವನ ಬಂಧುಗಳು ದುಃಖ ಪಡುತ್ತಾರೆ; ಆ ದುಃಖವು ಸ್ವರ್ಗಕ್ಕೆ ಹೋದ ಜೀವಾತ್ಮನಿಗೋ? ತಮಗೊ? ಒಬ್ಬ ವರ್ತಕನು ಒಂದು ಸಣ್ಣ ಬಾಡಿಗೆಯ ಮನೆಯಲ್ಲಿದ್ದು ಲಾಭವನ್ನು ಹೊಂದಿ ಬೇರೊಂದು ಮನೆಗೆ ಹೋದರೆ ಆ ಮನೆಯವರು ಮುಂದೆ ತಮಗೆ ಸಿಕ್ಕುವ ಬಾಡಿಗೆ ಹೋಯಿತೆಂದು ದುಃಖ ಪಡುವುದು ಹೇಗೆ ತಮಗೋಸ್ಕರವೋ, ಹಾಗೆಯೇ ಜೀವಾತ್ಮನು ಶರೀರದಲ್ಲಿದ್ದು ಪುಣ್ಯವೆಂಬ ಲಾಭವನ್ನು ಹೊಂದಿ ಸ್ವರ್ಗಕ್ಕೆ ಹೋದರೆ ಅವನ ಬಂಧುಗಳು ದುಃಖ ಪಡುವುದು ತಮ್ಮ ಸುಖಕ್ಕೆ ಕೊರತೆ ಬಂದಿತೆಂದಲ್ಲದೆ ಆ ಜೀವಾತ್ಮನಿಗೋಸ್ಕರವಲ್ಲವೆಂದು ಭಾವವು ‖೧೫‖

ಶಾಸ್ತ್ರಿಗಳು ಟೀಕನ್ನು ಬರೆಯುವಾಗ ಪೂರ್ವಶಾಸ್ತ್ರಗಳಿಗೆ ಬದ್ಧರಾಗಿದ್ದಾರೆ. ಅವರ ಪಾಂಡಿತ್ಯ ಅಂತಹ ಸಂದರ್ಭಗಳಲ್ಲಿ ಸ್ಫುಟವಾಗಿ ಎದ್ದು ತೋರುತ್ತದೆ. ಉದಾಹರಣೆಗೆ—

ತ್ರಿಜಗತ್ಸ್ವಾಮಿ ಜಿನೇಂದ್ರ ಸಿದ್ಧಶಿವಲೋಕಾರಾಧ್ಯ
ಸರ್ವಜ್ಞಶಂ–
ಭುಜಗನ್ನಾಥ ಜಗತ್ಪಿತಾಮಹ ಹರ ಶ್ರೀಕಾಂತ ವಾಣೀಶ ವಿ–
ಷ್ಣು ಜಿನಾನಂಗ ಜಿನೇಶ ಪಶ್ಚಿಮ ಸಮುದ್ರಾಧೀಶ್ವರಾ
-ಬೇಗದಿಂ
ನಿಜಮಂ ತೋರು ದಯಾಳುವೇ ತಳುವಿದೇಂ?
ರತ್ನಾಕರಾಧೀಶ್ವರಾ ‖೧೨‖

ಎನ್ನುವ ಪದ್ಯಕ್ಕೆ—ಮೂರುಲೋಕಕ್ಕೆ ಪ್ರಭುವೂ, ಜಿನೇಶ್ವರನೂ, ಸಿದ್ಧಿಯನ್ನು ಹೊಂದಿದವನೂ, ಸಿದ್ಧಕ್ಷೇತ್ರದಲ್ಲಿರುವ ಪೂಜ್ಯನೂ, ಸಮಸ್ತ ವಿಷಯವನ್ನು ತಿಳಿಯುವವನೂ, ಸುಖಕ್ಕೆ ಉತ್ಪತ್ತಿಸ್ಥಾನನೂ ಲೋಕಾಧಿಪತಿಯೂ, ಲೋಕಕ್ಕೆ ಪಿತಾಮಹನೂ, ಕರ್ಮವನ್ನು ನಾಶಮಾಡುವವನೂ, ಜ್ಞಾನಾದಿ ಸಂಪತ್ತುಗಳಿಗೆ ಸ್ವಾಮಿಯೂ, ಸರಸ್ವತಿಗೆ ಪ್ರಭುವೂ, ಜ್ಞಾನ ಮೂಲಕ ವ್ಯಾಪಕನೂ, ಕಾಮನನ್ನು ಜಯಿಸಿದವನೂ, ಕರ್ಮವನ್ನು

ಕೆಡಿಸುವವರಿಗೆ ಸ್ವಾಮಿಯೂ, ಪಶ್ಚಿಮ ಸಮುದ್ರಾಧಿಪತಿಯೂ ಆದ ರತ್ನಾಕರಾಧೀಶ್ವರನೇ ! ಶೀಘ್ರವಾಗಿ ಯಥಾರ್ಥವಾದ ಸ್ವರೂಪವನ್ನು ತೋರಿಸು ದಯಾಶೀಲನೆ ! ಇದೇಕೆ ಸಾವಕಾಶ ? ॥೧೨೬॥

ಇಲ್ಲಿ ಬರುವ ಭಗವದರ್ಹತ್ಪರಮೇಶ್ವರನ ನಾಮಭೇದಗಳಿಗೆ ಅರ್ಥಮಾಡುವಾಗ ಜಿನಸೇನರ ಪೂರ್ವ ಪುರಾಣ ಪರ್ವ ೨೧ ನ್ನು ಆಧರಿಸಿರುವುದನ್ನು ಕಾಣಬಹುದಾಗಿದೆ—

> ಜಿನೋಮೋಹಾರಿ ವಿಜಯಾದಾಪ್ತಃ ಸ್ಯಾದ್ವೀತ ಧೀಮಲಃ।
> ವಾಚಸ್ಪತಿರಸೌ ವಾಗ್ಭಿಃ ಸನ್ಮಾರ್ಗ ಪ್ರತಿಬೋಧನಾತ್
> ॥೨೫೯॥
> ಸ್ಯಾದರ್ಹನ್ನರಿ ಘಾತಾದಿ ಗುಣೈರಪರಗೋಚರೈಃ ।
> ಬುದ್ಧಸ್ತ್ರೈಲೋಕ್ಯ ವಿಶ್ವಾರ್ಥ ಬೋಧನಾದ್ವಿಶ್ವ ಭುದ್ವಿ ಭುಃ
> ॥೨೬೦॥
> ಸ ವಿಷ್ಣುಶ್ಚ ವಿಜಿಷ್ಣುಶ್ಚ ಶಂಕರೋಪ್ಯ ಭಯಂಕರಃ ।
> ಶಿವಃ ಸನಾತನಃ ಸಿದ್ಧೋಜ್ಯೋತಿಃ ಪರಮಮಕ್ಷರಂ ॥೨೬೧॥

ಈ ಸಂದರ್ಭದಲ್ಲಿ ಎ. ಆರ್. ನಾಗರಾಜ್ ಅವರು ಮಾಡಿರುವ—"ಈ ಶ್ಲೋಕ ರತ್ನಾಕರನ ಸರ್ವಧರ್ಮ ಸಮನ್ವಯ ದೃಷ್ಟಿಗೆ ಹಾಗೂ ಆತನ ಹೃದಯ ವೈಶಾಲ್ಯಕ್ಕೆ ಸಾಕ್ಷಿಯಾಗಿದೆ. ರತ್ನಾಕರ ಯಾವ ಮತವನ್ನು ಅವಹೇಳನ ಮಾಡದೆ ಸ್ವಮತದ ಮಹಿಮೆಯನ್ನು ಲೋಕಮೆಚ್ಚಿ ಒಪ್ಪುವಂತೆ ಸಾರಿದ ಸಮನ್ವಯಾಚಾರ್ಯ" ಎನ್ನುವಂತಹ ಹೇಳಿಕೆಗಳನ್ನು ಮಾಡುವ ಅವಶ್ಯಕತೆ ಇಲ್ಲವೆನ್ನಿಸುತ್ತದೆ.

ಈ ಟೀಕುಗಳಲ್ಲಿ ತಪ್ಪುಗಳೇ ಇಲ್ಲವೆಂದಲ್ಲ. ಅವು ಇವೆ. ಉದಾಹರಣೆಗೆ-ಮೃಗವಾದೊಡೆಯೆಚ್ಚು ಕೊಚ್ಚಿ. ಮೃಗವಾದರೆ ತುಪಾಕಿಯಿಂದ ಹೊಡೆದು ಕೊಚ್ಚಿ (ಅಪರಾಜಿತೇಶ್ವರ ಶತಕ-96). ಇಲ್ಲಿ 'ಎಚ್ಚು-ಬಾಣ ಪ್ರಯೋಗ' ಎಂದಿರುವುದನ್ನು ತುಪಾಕಿಯಿಂದ ಎಂದು ಮಾಡಿದ್ದಾರೆ. ಲೌಕಿಕಂ ಪೊಂಗಿರ್ದಗ್ಗಳ ನೇಮಿರತ್ನಕಂಮುನ್ನೇಂದು ಶ್ರೀ ಜಿನಾಚಾರ್ಯ ಕಾವ್ಯಂಗಳ್ಮಾಡವೆ ಮೋಹಮಂ ಮುಕುತಿಯಂ (ರತ್ನಕರಾಧೀಶ್ವರ ಶತಕ ೮೯) ಎನ್ನುವಲ್ಲಿ ಚಂದ್ರಪ್ರಭ ಚರಿತ್ರೆ ಬರೆದ ಅಗ್ಗಳ ಕವಿಯನ್ನು ಕುರಿತು ಹೇಳಿರುವ ಸಂದರ್ಭದಲ್ಲಿ ಅವರು ಅಗ್ಗಳ-ಶ್ರೇಷ್ಠ ಎಂದು ಅನುವಾದ ಮಾಡಿದ್ದಾರೆ. 'ಅಗ್ಗಳ-ಶ್ರೇಷ್ಠ' ಎನ್ನುವುದು ಪ್ರತಿಪದ ನಿಧಾನದಿಂದ ಉಂಟಾದ ದೋಷ. ಕೆಲವು ಬಾರಿ ಪ್ರತಿಪದ ನಿಧಾನ ಸಂದರ್ಭದಲ್ಲಿ ಸುಲಭವಾದ ಕನ್ನಡ ಶಬ್ದಗಳಿಗೆ ಸಂಸ್ಕೃತ ಶಬ್ದಗಳನ್ನು ಹಾಕುತ್ತಾರೆ. ಉದಾಹರಣೆಗೆ ಗೆಲ್ವನೇ-ಎನ್ನುವುದನ್ನು ಗೆಲ್ಲುತ್ತಾನೆಯೇ ಎಂದು ಮಾಡಬಹುದಿತ್ತು. ಆದರೆ ಜಯಿಸುವನೇ ಎಂದು ಮಾಡಿದ್ದಾರೆ ಕಾವನೊಳ್ಕಲಹವೆ (ರತ್ನಾಕರಾಧಿಶ್ವರ ಶತಕ 22) ಕಾಯುವವನಲ್ಲಿ ಅಥವಾ ಕಾಪಾಡುವವನಲ್ಲಿ ಜಗಳವೇ ಎಂದು ಮಾಡಬಹುದಾಗಿದ್ದ ಕಡೆ ರಕ್ಷಕನಲ್ಲಿ ಜಗಳವೇ ಎನ್ನುವಂತಹುದು ಕೂಡ ಅಂಥದ್ದೇ. ಪಗರಣದಾಟಮೆಂದು ಜಗಮಂ ಸಲೆ ನೋಡುತೆ (ಅಪರಾಜಿತೇಶ್ವರ-೧೧೫) ಎನ್ನುವಲ್ಲಿ ಜಗತ್ತನ್ನು ಕಲಹದ ಆಟವೆಂದು ಚೆನ್ನಾಗಿ ತಿಳಿದು ಎಂದು ಮಾಡಿದ್ದಾರೆ. ಹೊಸಗನ್ನಡದಲ್ಲಿನ ಹಗರಣವು ಪಗರಣ ಶಬ್ದದಿಂದ ಬಂದಿದ್ದು ಜಗಳ, ಗೊಂದಲ ಮುಂತಾದ ಅರ್ಥಗಳಿವೆ. ಆದರೆ ಪಗರಣ ಎಂಬುದಕ್ಕೆ ನಾಟಕ ಎನ್ನುವ ಅರ್ಥವಿದ್ದು ಅದನ್ನು ಶಾಸ್ತ್ರಿಗಳು ಬಳಸಬೇಕಿತ್ತು. ಪ್ರಸ್ತುತಕ್ಕೆ ಅದೇ ಸರಿಯಾದ ಅರ್ಥ. ಕುಮತಿ ಕಾಳ್ನುಡಿ ಕೀಳ್ನಡೇ (ಅಪರಾಜಿತೇಶ್ವರ ಶತಕ ೯೧) ಎನ್ನುವಲ್ಲಿ ಕುಮತಿ ಶಬ್ದಕ್ಕೆ ದುರ್ಬುದ್ಧಿ ಎಂದು ಹೇಳುತ್ತ ಕಾಳ್ನುಡಿ ಕೀಳ್ನಡೆಗಳಿಗೆ ದುರ್ವಚನ, ದುರಾಚಾರ ಎಂದು ಸಂಸ್ಕೃತ ಶಬ್ದಗಳನ್ನು ಬಳಸಿದ್ದರೂ ಅವು ಜನರಿಗೆ ಅರ್ಥವಾಗುವಂತಿದ್ದು ಸಾಧುವಾಗಿದೆ.

ಸಂಸ್ಕೃತ ಶಬ್ದಗಳಿಗೆ ಸೊಗಸಾದ ಕನ್ನಡ ಶಬ್ದಗಳನ್ನು ಬಳಸಿದ್ದಾರೆ-ಆಮ್ಲಮಂ ಸುರಿವರ್—ಹುಣಿಸೆ ಹುಳಿಯ ರಸವನ್ನು ಆಸ್ವಾದಿಸುತ್ತಾರೆ (ರತ್ನಾಕಧೀಶ್ವರ ಶತಕ ೮೮) ಚೇತೋಜಯನಾಗಬೇಕು-ಮನಸ್ಸನ್ನು ಜಯಿಸಿದವನಾಗಬೇಕು (ಅಪರಾಜಿತೇಶ್ವರ-೩) ಹಸ್ತಿರೋಗಂ (ರತ್ನಾಕರಾಧೀಶ್ವರಾ ೧೧೨) ಆನೆಗಜ್ಜಿ, ಉಪಹಾರಂ (ರತ್ನಾಕರಾಧೀಶ್ವರಾ ೧೦೧) ಕೈಗಾಣಿಕೆ, ನಾಸ್ತಿ ನಾಸ್ತಿ (ರತ್ನಾಕರಾಧೀಶ್ವರಾ-೯೪) ಇಲ್ಲ ಇಲ್ಲ ಇತ್ಯಾದಿ.

ಕೆಲವು ಸಲ ಮೂಲಕ್ಕಿಂತ ಭಿನ್ನವಾದ ಅರ್ಥಗಳಿವೆ. ಉದಾಹರಣೆಗೆ-'ನಿನ್ನೆನ್ನ ಚಿಂತನೆಗಳ್ನೋಡೆ ಘೃತಂಬೊಲೆಣ್ಣೆವೊಲಲಾ' (ರತ್ನಾಕರಾಧೀಶ್ವರಾ ೧೨) ವಿಚಾರ ಮಾಡಿದರೆ ನಿನ್ನ ವಿಷಯಕವಾದ ನನ್ನ ಚಿಂತನೆಗಳು ತುಪ್ಪದ ಹಾಗೂ ಎಣ್ಣೆಯ ಹಾಗೂ ಅಲ್ಲವೆ ? ಎಂದು ಮಾಡಿದ್ದಾರೆ. ಬಹುಶಃ ಇದು ನೀನು ಮತ್ತು ನಾನು ಚಿಂತನೆ ನಡೆಸುವುದನ್ನು ನೋಡಿದರೆ ತುಪ್ಪದ ಹಾಗೆ

ಎಣ್ಣೆಯ ಹಾಗೆ ಅಲ್ಲವೆ ? ಎಂದರೆ ನೀನು ನಡೆಸುವ ಚಿಂತನೆ ತುಪ್ಪದ ಹಾಗೆ ಬೆಲೆಯುಳ್ಳದ್ದೂ ನಾನು ನಡೆಸುವ ಚಿಂತನೆ ಎಣ್ಣೆಯಂಹಾಗೆ ಬೆಲೆಯಿಲ್ಲದ್ದು ಎಂದು ಅರ್ಥವಾಗುತ್ತದೆ. 'ಅದರಿನಾತ್ಮನೆ ತಾಂ ಪಗೆ ತಾನೆ ಬಂಧುವುಂ' (ಅಪರಾಜಿತೇಶ್ವರಾ ೮೧) ಎನ್ನುವಲ್ಲಿ ಮುದ್ರಿತಪ್ರತಿಯಲ್ಲಿ ಹಾಗಾದುದರಿಂದ ಆತ್ಮನೇ ತನಗೆ ತಾನು ಬಂಧುವು ಎಂದಿದೆ. ಇದು ಹಾಗಾದುದರಿಂದ ಆತ್ಮನೇ ಹಗೆ ತನಗೆ ತಾನು ಬಂಧುವು ಎಂದಿರಬೇಕು. 'ನಡೆದೆಂ ಚಿತ್ತತೆ ಬಂದವೊಲ್ನುಡಿದೆ ನಾಂ ಬಾಯ್ಗಿಚ್ಚೆ ಬಂದಂತೆ' (ರತ್ನಾಕರಾಧೀಶ್ವರಾ-೧೨೫) ನಾನು ಮನಸ್ಸಿಗೆ ಬಂದ ಹಾಗೇ ಮಾತನಾಡಿದೆನು ಎಂದಿದೆ. ಆದರೆ ನಾನು ಮನಸ್ಸಿಗೆ ಬಂದ ಹಾಗೆ ನಡೆದನು, ಬಾಯಿಗೆ ಇಚ್ಛೆ ಬಂದಂತೆ ಮಾತನಾಡಿದೆನು ಎಂದು ಆಗ ಬೇಕಿದೆ. ಬಹುಶಃ ಅಚ್ಚಿನ ಮನೆಯ ದೋಷವಿದಾಗಿರಬಹುದು. ಇಂತಹ ದೋಷಗಳು ಬೆರಳೆಣಿಕೆಯಷ್ಟಿರುವುದು ಶಾಸ್ತ್ರಿಗಳ ವಿದ್ವತ್ತಿನ ಗಾಢತೆಗೆ ಸಾಕ್ಷಿಯಾಗಿದೆ.

ಜೈನಶಾಸ್ತ್ರದ ಅಧ್ಯಯನ ಕರ್ನಾಟಕದಲ್ಲಿ ಈ ಅರವತ್ತು ವರ್ಷಗಳಲ್ಲಿ ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಮತ್ತು ಖಾಸಗಿಯಾಗಿ ನಡೆದು ಕೊಂಡು ಬಂದಿದೆ. ಜೈನಧರ್ಮದ ಸ್ವರೂಪವನ್ನು ತಿಳಿಸುವ ನೂರಾರು ಗ್ರಂಥಗಳು ಹೊರಬಂದಿವೆ. ಆದರೆ 1922 ರಲ್ಲಿ ಶಾಸ್ತ್ರಿಗಳು ಟೀಕಂಗಳನ್ನು ಹೊರತಂದ ಸಂದರ್ಭದಲ್ಲಿ ಅವರು ಅನುಸರಿಸಿದ ಮಾರ್ಗ ಆದರ್ಶಪ್ರಾಯವಾಗಿದೆ. ವಾಸ್ತವವಾಗಿ ೨೦ ನೆಯ ಶತಮಾನದ ಜೈನರು ಮತ್ತು ಜೈನೇತರರಿಗೆ ಶಾಸ್ತ್ರಿಗಳ ಟೀಕಾಸಾಹಿತ್ಯದಿಂದ ತುಂಬು ಪ್ರಯೋಜನವಾಗಿದೆ. ಶಾಸ್ತ್ರಿಗಳ ರತ್ನಾಕರನ ಶತಕ ತ್ರಯದ ಟೀಕು ಕರ್ನಾಟಕದಲ್ಲಿ ಜೈನ ಧರ್ಮದ ಅಧ್ಯಯನಕ್ಕೆ ಅಡಿಗಲ್ಲಾಗಿ ಪರಿಣಮಿಸಿತೆನ್ನಬಹುದು. ಇಂದಿಗೂ ನಡೆಯುತ್ತಿರುವ ಶತಕತ್ರಯದ ಅಧ್ಯಯನದ ಗತಿಯನ್ನು ನೋಡಿದರೆ ರತ್ನಾಕರಶತಕದ "ಪಿಡಿದಿರ್ದಾತನ ಕೈಗೆ ಸೂತ್ರವೆನಸುಂ ಸಿಲ್ಕಿರ್ದೊಡಂ ವ್ಯೋಮದೊಳ್ ನಡೆಗುಂ ಗಾಳಿಪಟಂ" ಎನ್ನುವ ಮಾತು ನೆನಪಿಗೆ ಬರುತ್ತದೆ. ಪ್ರೊ॥ ಜಿ. ಬ್ರಹ್ಮಪ್ಪ, ಎ. ಆರ್ ನಾಗರಾಜ್ ಮತ್ತು ಕಮಲಾ ಹಂಪನಾ ಮುಂತಾದವರು ಮುಂದು ವರಿಸಿರುವ ರತ್ನಾಕರನ ಶತಕಗಳ ಅಧ್ಯಯನ ಅಧ್ಯಾಪನಗಳು ಶ್ರೀಮಾನ್ ಎ. ಶಾಂತಿರಾಜ ಶಾಸ್ತ್ರಿಗಳ ಹಾದಿಯಲ್ಲೇ ಸಾಗಿರುವುದನ್ನು ಕಾಣಬಹುದಾಗಿದೆ. ಇದರಿಂದ ಅರ್ಥವಾಗುವುದೇನೆಂದರೆ ರತ್ನಾಕರನ ಶತಕ ಸಾಹಿತ್ಯಕ್ಕೆ ಎತರ್ೂರು ಶಾಂತಿರಾಜಶಾಸ್ತ್ರಿಗಳು ರಚಿಸಿರುವ ಟೀಕು ದೇಶಕಾಲಗಳನ್ನು ಮೀರಿನಿಲ್ಲುವ ಕಸುವುಳ್ಳದ್ದು ಎನ್ನುವುದು.

ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿ ಟ್ರಸ್ಟ್ ಅವರು ಜನ್ಮಶತಾಬ್ದಿ 1888-1988 ರ ಅಂಗವಾಗಿ ಅವರ ಎಲ್ಲ ಕೃತಿಗಳನ್ನೂ ಪ್ರಕಟಿಸಿ ಜೈನ ಧರ್ಮೀಯರಿಗೂ ಧರ್ಮಾಭಿಮಾನಿಗಳಿಗೂ ಮಹೋಪಕಾರ ಮಾಡಿದ್ದಾರೆ. ಅದಕ್ಕಾಗಿ ಜನತೆ ಟ್ರಸ್ಟ್‌ನವರಿಗೆ ಕೃತಜ್ಞವಾಗಿದೆ.

○

ಲಕ್ಷ್ಮೀರ್ದಾನಫಲಾ ಶ್ರುತ್ರಂ ಶಮಫಲಂ ಪಾಣಿಃ ಸುರಾರ್ಚಾಫಲಃ
ಚೇಷ್ಟಾ ಧರ್ಮಫಲಾ ಪರಾರ್ತಿ ಹರಣಾ ಕ್ರೀಡಾಫಲಂ ಜೀವಿತಂ ।
ವಾಣೀ ಸತ್ಯಫಲಾ ಜಗತ್ಸುಖಫಲಂ ಪ್ರೀತಿಃ ಪ್ರಭಾವೋನ್ನತಿಃ
ಭವ್ಯಾನಾಂ ಭವಶಾಂತಿ ಚಿಂತನಫಲಾ ಭೂತ್ಯೈ ಭವತ್ಯೇವ ಧೀಃ ॥

ಐಶ್ವರ್ಯಕ್ಕೆ ದಾನವು ಫಲ. ಶಾಸ್ತ್ರಕ್ಕೆ ಶಾಂತಿಯು ಫಲ. ಕೈಗೆ ದೇವರ ಪೂಜೆಯು ಫಲ. ಪರಪೀಡೆಯನ್ನು ನಾಶಮಾಡುವ ವ್ಯಾಪಾರಕ್ಕೆ ಧರ್ಮವು ಫಲ. ಜೀವಿತಕ್ಕೆ ಕ್ರೀಡೆಯು ಫಲ. ವಚನಕ್ಕೆ ಸತ್ಯವು ಫಲ. ಜಗತ್ತಿಗೆ-ಜನತೆಗೆ ಸುಖವು ಫಲ. ಪ್ರೀತಿಗೆ ತನ್ನ ಪ್ರಭಾವದ ಉನ್ನತಿಯು ಫಲ. ಭವ್ಯಾತ್ಮರ ಬುದ್ಧಿಗೆ ಭವಶಾಂತಿಯನ್ನು ಚಿಂತಿಸುವಿಕೆಯು ಫಲ. ಅಂತಹ ಬುದ್ಧಿಯು ಸಂಪತ್ತಿಗೆ ಕಾರಣವಾಗಿಯೇ ಆಗುವುದು.

—ಸಮ್ಯಕ್ತ್ವಕೌಮುದಿ

ದ್ರವ್ಯಸಂಗ್ರಹಃ ತಾತ್ಪರ್ಯವೃತ್ತಿ

— ಡಾ|| ಕಮಲಹಂಪನಾ

ದ್ರವ್ಯಾನುಯೋಗ ವಿಭಾಗಕ್ಕೆ ಸೇರಿದ ದ್ರವ್ಯ ಸಂಗ್ರಹಕ್ಕೆ ಸೇರಿದ ಜೈನ ಸಿದ್ಧಾಂತ ಸಾಹಿತ್ಯದಲ್ಲಿ ವಿಶಿಷ್ಟ ವಾದ ಸ್ಥಾನವಿದೆ. ಕೇವಲ ಮೂರು ಅಧಿಕಾರಗಳೂ 58 ಪ್ರಾಕೃತ ಭಾಷೆಯ ಗಾಹೆ (ಗಾಥೆ) ಗಳಿರುವ ಪುಟ್ಟ ಕೃತಿ ದ್ರವ್ಯ ಸಂಗ್ರಹ. ಇಷ್ಟು ಚಿಕ್ಕ ಗಾತ್ರದ ಪುಸ್ತಿಕೆಯ ಮಹತ್ವ ಮಾತ್ರ ದೊಡ್ಡದಿದೆ. ದ್ರವ್ಯಸಂಗ್ರಹ ಗ್ರಂಥ, ಜೈನಸಿದ್ಧಾಂತದ ಪ್ರವೇಶಿಕೆಯೂ ಹೌದು. ಇದಕ್ಕೆ ಜೈನ ಸಿದ್ಧಾಂತ ಸಂಗ್ರಹವೆಂಬ ವಿಶೇಷಣ ಒಪ್ಪುತ್ತದೆ. ಇದರಲ್ಲಿ ಆರು ದ್ರವ್ಯಗಳು (ಷಡ್ದ್ರವ್ಯ) ಐದು ಅಸ್ತಿಕಾಯಗಳು (ಪಂಚಾಸ್ತಿಕಾಯ) ಏಳು ತತ್ವಗಳು (ಸಪ್ತತತ್ವ) ಮತ್ತು ನವಪದಾರ್ಥಗಳೂ, ರತ್ನತ್ರಯಗಳೂ—ಇವನ್ನು ಸೂತ್ರ ಪ್ರಾಯವಾಗಿ ವರ್ಣಿಸಲಾಗಿದೆ. ಒಂದು ರೀತಿಯಲ್ಲಿ ಉಮಾಸ್ವಾತಿಯ ತತ್ವಾರ್ಥಸೂತ್ರ ಗ್ರಂಥದ ಇನ್ನೊಂದು ಮುಖ ದ್ರವ್ಯಸಂಗ್ರಹ. ಜೈನದರ್ಶನ ಜ್ಞಾನಪ್ರಾಪ್ತಿಗಾಗಿ ಪ್ರಯತ್ನಶೀಲರಾದವರ ಪಾಲಿಗೆ ತತ್ವಾರ್ಥಸೂತ್ರ ಮತ್ತು ದ್ರವ್ಯಸಂಗ್ರಹ ಎರಡು ಕೈಪಿಡಿಗಳು.

ಇಷ್ಟು ಮಹತ್ವದ ದ್ರವ್ಯಸಂಗ್ರಹದ ಕರ್ತೃ ನೇಮಿ ಚಂದ್ರಮುನಿಯೆಂದು ಹೇಳಲಾಗಿದೆ. "ಶ್ರವಣಬೆಳ್ಗೊಳ ದಲ್ಲಿ ಶ್ರೀ ಗೊಮಟೇಶ್ವರ ದಿವ್ಯಮೂರ್ತಿಯನ್ನು ಪ್ರತಿಷ್ಠೆ ಮಾಡಿಸಿ ಜಗದ್ವಿಖ್ಯಾತನಾದ ಶ್ರೀಮಚ್ಚಾವುಂಡರಾಯನ ಧರ್ಮ ಗುರುಗಳಾದ ಶ್ರೀಮನ್ನೇಮಿಚಂದ್ರಾಚಾರ್ಯರು ಈ ಗ್ರಂಥದ ಮೂಲಕರ್ತರಾಗಿರುತ್ತಾರೆ. ಪ್ರಾತಃ ಸ್ಮರಣೀಯರಾದ ಆ ಮಹನೀಯರು ತಮ್ಮ ಜನ್ಮದಿಂದ ಈ ದಕ್ಷಿಣ ಭಾರತ ವರ್ಷವನ್ನು ಪವಿತ್ರಮಾಡಿ ಈಗ್ಗೆ ಸುಮಾರು ಸಾವಿರ ವರ್ಷಗಳಾದುವು. ಆ ಪವಿತ್ರಾತ್ಮರು ಗೋಮಟಸಾರ, ತ್ರಿಲೋಕಸಾರ, ಲಬ್ಧಿಸಾರ ಮೊದಲಾದ ಪರಮಾದರಣೀಯ ಸಿದ್ಧಾಂತ ಗ್ರಂಥರತ್ನಗಳನ್ನು ರಚಿಸಿ ತತ್ವಜಿಜ್ಞಾಸುಗಳಿಗೆ ಪರೋಪಕಾರವನ್ನು ಮಾಡಿರುತ್ತಾರೆ. ಆ ಮಹಾತ್ಮರು ಮಾಲವ ದೇಶದ ಧಾರಾನಗರಾಧಿಪತಿ ಭೋಜರಾಜನ ಅಧೀನರಾಜನಾಗಿದ್ದ ಆಶ್ರಮನಗರದ ಶ್ರೀಪಾಲ ಮಂಡಲೇಶ್ವರನ ಕೋಶಾಧ್ಯಕ್ಷನಾಗಿದ್ದ ಭವ್ಯವರ ಪುಂಡರೀಕ ಸೋಮನೆಂಬ ರಾಜಶ್ರೇಷ್ಠಿ ಗೋಸ್ಕರ ಈ ದ್ರವ್ಯಸಂಗ್ರಹ ಗ್ರಂಥವನ್ನು ರಚಿಸಿರು ತ್ತಾರೆಂದು ಸುಮಾರು ಹದಿನಾರನೆಯ ಶತಮಾನದ ಮಧ್ಯ ಕಾಲದಲ್ಲಿದ್ದ ಶ್ರಿ ಬ್ರಹ್ಮದೇವ ಎಂಬುವರು ಬರೆದಿರುವ ಸಂಸ್ಕೃತ ವ್ಯಾಖ್ಯಾನದಿಂದ ತಿಳಿದು ಬರುತ್ತದೆ."—ಎಂಬು ದಾಗಿ ಎ. ಶಾಂತಿರಾಜಶಾಸ್ತ್ರಿಗಳು 'ಮುನ್ನುಡಿ'ಯಲ್ಲಿ ತಿಳಿಸಿದ್ದಾರೆ.

ಆದರೆ ದ್ರವ್ಯಸಂಗ್ರಹದ ಕರ್ತೃತ್ವ ವಿಚಾರದಲ್ಲಿ ವಿದ್ವಾಂಸರು ಭಿನ್ನಾಭಿಪ್ರಾಯ ಹೊಂದಿದ್ದಾರೆ. ನೇಮಿ ಚಂದ್ರಾಚಾರ್ಯ ಎಂಬ ಹೆಸರಿನವರು ಮೂರು ಶತಮಾನಗಳ ಅಂತರದಲ್ಲಿ ನಾಲ್ವರು ಆಗಿಹೋಗಿರುವಂತೆ ಕಂಡು ಬರುತ್ತದೆ :

1. ಚಾವುಂಡರಾಯನ ಗುರುಗಳಾದ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿ : 978.
   ಈ ಶ್ರೇಷ್ಠ ಆಚಾರ್ಯನು ಗೋಮಟಸಾರ, ತ್ರಿಲೋಕಸಾರ, ಕ್ಷಪಣಸಾರ— ಇವುಗಳನ್ನು ದ್ರವ್ಯ ಸಂಗ್ರಹವನ್ನೂ ರಚಿಸಿದನೆನ್ನಲಾಗಿದೆ.
2. ನಯನಂದಿಯ ಶಿಷ್ಯ ಮತ್ತು ವಸುನಂದಿಯ ಗುರು.
3. ಗೊಮ್ಮಟಸಾರಕ್ಕೆ 'ಜೀವತತ್ವ ಪ್ರದೀಪಿಕಾ' ಎಂಬ ಸಂಸ್ಕೃತ ಟೀಕೆಯನ್ನು ಬರೆದಿರುವ ಟೀಕಾಕಾರ.
4. ದ್ರವ್ಯಸಂಗ್ರಹ ರಚಿಸಿದವನೆನ್ನಲಾದ ನೇಮಿಚಂದ್ರಾ ಚಾರ್ಯ : 1068.
   ಈತನು ಲಘುದ್ರವ್ಯಸಂಗ್ರಹ ಹಾಗೂ ಬೃಹತ್ ದ್ರವ್ಯಸಂಗ್ರಹ ಎಂಬೆರಡು ಕೃತಿಗಳನ್ನು ಸಿದ್ಧಪಡಿಸಿರು ತ್ತಾನೆ.

ಅಂತೂ ಈ ಪುಸ್ತಕದ ಲೇಖಕರು ಯಾರು ಎಂಬ ವಿಚಾರದಲ್ಲಿ ಚರ್ಚೆಯಿದೆ. ಚಾವುಂಡರಾಯನ ಗುರುಗಳೇ ಮೂಲಲೇಖಕರು ಎಂಬೊಂದು ಅಭಿಪ್ರಾಯ ಪ್ರಚಲಿತವಾಗಿದೆ. ಪ್ರಕಾಂಡ ಪಂಡಿತರಾದ ಡಾ॥ ಹೀರಾಲಾಲ್ ಜೈನರೂ ಕೂಡಾ ಇದೇ ಅಭಿಪ್ರಾಯವನ್ನು 'ಭಾರತೀಯ ಸಂಸ್ಕೃತಿಗೆ ಜೈನಧರ್ಮದ ಕೊಡುಗೆ' (ಕನ್ನಡ ಅನುವಾದ ಮಿರ್ಜಿ ಅಣ್ಣಾರಾಯ, ಸೊಲ್ಲಾಪುರ, 1971) ಎಂಬ ಪುಸ್ತಕದಲ್ಲಿ ವ್ಯಕ್ತಪಡಿಸಿರುತ್ತಾರೆ.

ಜೈನಸಿದ್ಧಾಂತವೆಂಬ ಕವಾಟದ ಉದ್ಘಾಟನಕ್ಕೆ ಬಿಯ್ಯಗ (ಬೀಗದ) ದ ಕೈಯೆಂದು ಧಾರಾಳವಾಗಿ ಹೇಳಬಹುದಾದಷ್ಟು ಉಪಯುಕ್ತವಾಗಿರುವುದೀ ಗ್ರಂಥ ಎಂದು ಶಾಸ್ತ್ರಿಗಳು ಹೇಳುವ ದ್ರವ್ಯಸಂಗ್ರಹವು ಮಾಗಧೀ ಪ್ರಾಕೃತ ಭಾಷೆಯ ಗಾಥಾಗಳಿಂದ ಕೂಡಿದೆ. ಇದಕ್ಕೆ ಮೂಲ ಗಾಥೆಗಳನ್ನಿತ್ತು ಕನ್ನಡದಲ್ಲಿ ತಾತ್ಪರ್ಯವೃತ್ತಿಯನ್ನು ಬರೆದು ಉಪಕರಿಸಿದವರು ಶಾಸ್ತ್ರಿಗಳು. ಈ ಅನುವಾದ ಕಾರ್ಯದಲ್ಲಿ ತೊಡಗಲು ಅವರಿಗೆ ಒದಗಿ ಬಂದ ಪ್ರೇರಣೆಗಳನ್ನು ಸಕಾರಣವಾಗಿ ನಿವೇದಿಸಿಕೊಂಡಿದ್ದಾರೆ: "ಅನೇಕ ಜೈನೇತರ ಮಹಾಶಯರು ಕೂಡ ಪವಿತ್ರವೂ ವಿಲಕ್ಷಣವೂ ಆದ ಜೈನಮತದ ತತ್ವಗಳನ್ನು ತಿಳಿಯಬೇಕೆಂಬ ಕುತೂಹಲದಿಂದ ಕನ್ನಡದಲ್ಲಿ ಜೈನಮತತತ್ವಗಳನ್ನು ಸುಲಭವಾಗಿ ಬೋಧಿಸುವ ಯಾವುದಾದರೂ ಅಚ್ಚಾದ ಪುಸ್ತಕಗಳಿರುತ್ತವೆಯೇ ಎಂದು ನಮ್ಮನ್ನು ಕೇಳಿರುವುದುಂಟು. ಕನ್ನಡ ಪುರಾಣಗ್ರಂಥಗಳು ಕೆಲವು ಮುದ್ರಿತವಾಗಿರುತ್ತದಲ್ಲದೆ ತತ್ವವಿಷಯವನ್ನು ಬೋಧಿಸುವ ಇಂತಹ ಗ್ರಂಥ ವಾವುದೂ ಮುದ್ರಿತವಾಗಿಲ್ಲದಿದ್ದುದರಿಂದ ಈಗ್ಗೆ ಸುಮಾರು ಆರು ವರುಷಗಳಿಂದಲೂ ಈ ಪುಸ್ತಕವನ್ನು ಬರೆದು ಮುದ್ರಿಸಿ ಆತ್ಮಕಲ್ಯಾಣವನ್ನೂ ಜೈನಮತತತ್ವ ಜಿಜ್ಞಾಸುಗಳಿಗೆ ನಮ್ಮ ಕೈಲಾಗುವ ಈ ಸಹಾಯವನ್ನು ಮಾಡಬೇಕೆಂಬ ಪ್ರಬಲವಾದ ಇಚ್ಛೆಯಿದ್ದಿತಾದರೂ ಅದು ಅದಾವುದೋ ಕಾರಣದಿಂದ ಪೂರ್ತಿಯಾಗದಿದ್ದು ಈಗ ನೆರವೇರಿದುದಕ್ಕಾಗಿಯೂ ನಾವು ಕೈಗೊಂಡಿರುವ ವಿಶ್ವಬಂಧು ಪತ್ರಿಕಾ ಸಂಪಾದನ ಮತ್ತು ಮಹಾಪುರಾಣಾದಿ ಗ್ರಂಥ ಪ್ರಕಾಶನ ಕಾರ್ಯಗಳಲ್ಲಿ ಸೂಚೀಕಟಾಹ ನ್ಯಾಯದಂತೆ ಈ ಗ್ರಂಥಕ್ಕೆ ಅನ್ವಯಾರ್ಥ ತಾತ್ಪರ್ಯಾರ್ಥಗಳನ್ನೂ ಬರೆದು ಪ್ರಕಾಶಪಡಿಸುವ ಪುಣ್ಯವು ನಮಗೆ ಪ್ರಾಪ್ತವಾದುದಕ್ಕಾಗಿಯೂ ನಾವು ಬಹಳ ಸಂತೋಷಪಡುತ್ತೇವೆ"— ಹೀಗೆ ಶಾಸ್ತ್ರಿಗಳು ತಮ್ಮ ಧಾರ್ಮಿಕ ಅನುರಕ್ತಿಯೊಂದಿಗೆ ವಿನಯಪೂರ್ವಕ ಸಜ್ಜನಿಕೆಯನ್ನು ಪ್ರಕಟಿಸಿದ್ದಾರೆ.

ಶಾಸ್ತ್ರಿಗಳ ಈ ಕನ್ನಡ ತಾತ್ಪರ್ಯ ವೃತ್ತಿಯ ಪ್ರಥಮ ಆವೃತ್ತಿಯು 1927 ರಲ್ಲೂ, ದ್ವಿತೀಯ ಆವೃತ್ತಿಯು 1951ರಲ್ಲೂ ಆಗಿದ್ದು ಈಗ ಅವರ ಮಕ್ಕಳ ಮುಂದಾಳುತನದಲ್ಲಿ 1988ರಲ್ಲಿ ಮೂರನೆಯ ಮುದ್ರಣವಾಗಿದೆ. ಹೀಗೆ ಮೂರುಸಲ ಮುವ್ವತ್ತು ವರುಷಕ್ಕೊಮ್ಮೆ ಅದರ ಮರು ಮುದ್ರಣವಾಗಿರುತ್ತದೆ. ಹೀಗೆ ಮೂರುಸಲ ಅಚ್ಚಾಗಬೇಕಾದರೆ ಅದರಲ್ಲಿಯೂ ಇಂಥ ತೀರಾ ಮತೀಯ ಪರಿಭಾಷೆ ಮತ್ತು ವಸ್ತು ಇರುವ ಗ್ರಂಥ ಮೌಲಿಕವಾಗಿಯೇ ಇರಬೇಕೆಂದು ಊಹಿಸಬಹುದಾಗಿದೆ. ಕನ್ನಡ ತಾತ್ಪರ್ಯ ವೃತ್ತಿಯನ್ನು ಬರೆಯುವಾಗ ವೃತ್ತಿಕಾರರು ಬಹುಶ್ರಮಪಟ್ಟಿದ್ದಾರೆ. ಅವರು ದ್ರವ್ಯ ಸಂಗ್ರಹದ ಪ್ರಾಕೃತ ಪದ್ಯಗಳಿಗೆ ಕನ್ನಡ ಸಾರಾಂಶ ಕೊಡುವ ಕೆಲಸಕಷ್ಟೇ ಸೀಮಿತರಾಗಿಲ್ಲ: "ಮೂಲಗ್ರಂಥದಲ್ಲಿ ಉಕ್ತವಾಗಿರುವ ಸಂಕ್ಷಿಪ್ತ ವಿಷಯಗಳನ್ನು ತಾತ್ಪರ್ಯ ವೃತ್ತಿಯಲ್ಲಿ ನಾವು ಸ್ವಲ್ಪ ವಿಸ್ತರಿಸಿ ಬರೆಯುವಾಗ ಬೃಹದ್ದ್ರವ್ಯ ಸಂಗ್ರಹ ವ್ಯಾಖ್ಯಾ, ಭಾವನಾಸಾರ, ಗೋಮಟಸಾರ, ಸರ್ವಾರ್ಥಸಿದ್ಧಿ, ರಾಜವಾರ್ತಿಕ ಮೊದಲಾದ ಗ್ರಂಥಗಳ ಸಹಾಯವನ್ನು ಅಲ್ಲಲ್ಲಿ ಪಡೆದಿರುವುದರಿಂದ ಆ ಪೂಜ್ಯ ಗ್ರಂಥಕರ್ತರುಗಳಿಗೆ ನಾವು ಬಹಳ ಋಣಿಯಾಗಿರುತ್ತೇವೆ."

ಹಾಗೆಯೇ ಪ್ರತಿಯೊಂದು ಕಡೆಯೂ ಸಮಾನ ವಸ್ತು ವಿಷಯ—ವಿವರಣೆ ಬಂದಾಗ ಹೇಳಿದ್ದನ್ನೇ ಮತ್ತೆ ಹೇಳುವ ಪುನರಾವೃತ್ತಿಗೆ ಮತ್ತೆ ಅವಕಾಶವಾಗದಂತೆ ಎಚ್ಚರವಹಿಸಿರುವುದು ವಿಚಕ್ಷಣ ಬುದ್ಧಿಗೊಂದು ತಕ್ಕ ನಿದರ್ಶನವಾಗಿದೆ. ಒಂದೆಡೆಯಲ್ಲಿ ವಿಸ್ತರಿಸಿ ಬರೆದಿರುವುದನ್ನು ಉಳಿದೆಡೆಗಳಲ್ಲಿ ತೇಲಿಸಿದ್ದಾರೆ. ಪ್ರಾಕೃತ ಗಾಥೆಗಳಿಗೆ ಮೊದಲು ಸಂಸ್ಕೃತಛಾಯೆಯನ್ನು ಆಮೇಲೆ ಕನ್ನಡ ಅನ್ವಯಾರ್ಥವನ್ನೂ ಕೊಟ್ಟು ಅನಂತರ ಕನ್ನಡ ತಾತ್ಪರ್ಯ ಬರೆದಿದ್ದಾರೆ. ಇದು ಅವರು ಇಡೀ 58 ಪದ್ಯಗಳಿಗೂ ಅನುಸರಿಸಿರುವ ಕ್ರಮ. ಅನ್ವಯಾರ್ಥ ಪದ್ಧತಿಯು ಪ್ರಾಚೀನ ಜೈನ ಟೀಕಾಕಾರರಾದ ದಿವಾಕರಣಂದಿ ಅಧ್ಯಾತ್ಮೀ ಬಾಲಚಂದ್ರರ ರೀತಿಯನ್ನು ನೆನಪಿಗೆ ತರುವಷ್ಟು ಪರಂಪರಾನುಗತ ಮರ್ಯಾದೆಗೆ

ಅನುಗುಣವಾಗಿದೆ. ತಾತ್ಪರ್ಯವಂತೂ ಪ್ರತಿಪುಟವೂ ನೆನೆಯುವಷ್ಟು ವ್ಯವಸ್ಥಿತವಾಗಿದೆ. ಶಾಸ್ತ್ರಿಗಳಿಗೆ ಜೈನ ಸಿದ್ಧಾಂತ ವಿಷಯದಲ್ಲಿ ಇದ್ದ ಪ್ರೌಢಿಮೆ ಪ್ರಭುತ್ವ ಮತ್ತು ಅಗಾಧ ಜ್ಞಾನ ಎಷ್ಟೆಂಬುದಕ್ಕೆ ಇಲ್ಲಿ ನಿರೂಪಿಸಿರುವ ತಾತ್ಪರ್ಯ ವೃತ್ತಿಯು ಒಂದು ಪ್ರತ್ಯಕ್ಷ ಸಾಕ್ಷಿಯಾಗಿದೆ. ಜೊತೆಗೆ ಒಮ್ಮೊಮ್ಮೆ ತಮ್ಮ ತಾತ್ಪರ್ಯ ವೃತ್ತಿಯಲ್ಲಿ ಉದಾಹರಿಸಿ, ವಿವರಿಸಿ ಹೇಳಿದ ಮಾತುಗಳಿಗೆ ಬೇರೆ ಆಕರ–ಆಧಾರ ಯಾವುದೆಂಬುದು ಓದುಗರಿಗೂ ಮನವರಿಕೆಯಾಗಬೇಕೆಂಬ ಸದ್ಭಾವನೆ ಹಾಗೂ ವಿದ್ವಾಂಸ ಬುದ್ಧಿಯಿಂದ ಮೂಲ ಸಂಸ್ಕೃತಪದ್ಯ ಮತ್ತು ಪ್ರಾಕೃತ ಗಾಹೆಗಳನ್ನು ಅಡಿಟಿಪ್ಪಣಿಯಲ್ಲಿ ಕೊಟ್ಟಿದ್ದಾರೆ. ಉದಾಹರಣೆಗೆಂದು ಹೆಸರಿಸುವುದಾದರೆ ಮೂರನೆಯ ಮುದ್ರಣದ ಪುಸ್ತಕದಲ್ಲಿ 21, 28, 48, 57, 58, 61–ಮೊದಲಾದುವನ್ನು ನೋಡಬಹುದು. ಗೋಮ್ಮಟಸಾರದ ಎರಡು ಭಾಗಗಳಾದ ಜೀವಕಾಂಡ, ಕರ್ಮಕಾಂಡಗಳ ಆಧಾರವನ್ನು ವಿಶೇಷವಾಗಿ ಶಾಸ್ತ್ರಿಗಳು ಈ ಕನ್ನಡ ವೃತ್ತಿಯಲ್ಲಿ ಉಪಯೋಗಿಸಿದ್ದಾರೆ. 3, 5, 9, 12, 13 ಮೊದಲಾದ ಪ್ರಾಕೃತ ಗಾಹೆಗಳಿಗೆ ಶಾಸ್ತ್ರಿಗಳು ಇತ್ತಿರುವ ಕನ್ನಡ ತಾತ್ಪರ್ಯ ವೃತ್ತಿಯನ್ನು ಕೂಲಂಕಷವಾಗಿ ನೋಡಿದರೆ ಅವರ ಅರಿವಿನ ಆಳ–ಹರವು ಏನೆಂಬುದು ತಾನಾಗಿ ನಿಚ್ಚಳಗೊಳ್ಳುತ್ತದೆ. ಅವರಿಗೆ ಮೈಸೂರು ಮಹಾರಾಜರಿಂದ ಆಸ್ಥಾನ ಮಹಾವಿದ್ವಾನರೆಂಬ ಗೌರವ ಸಂದುದರ ಔಚಿತ್ಯ–ಸಾರ್ಥಕತೆ, ಇಂಥ ವ್ಯಾಖ್ಯಾನ ಗ್ರಂಥಗಳ ವಾಚನದಿಂದ ಚೆನ್ನಾಗಿ ಮನವರಿಕೆಯಾಗುತ್ತದೆ.

ಇವುಗಳಲ್ಲದೆ ದ್ರವ್ಯಸಂಗ್ರಹ ಗ್ರಂಥದ ಕಡೆಯಲ್ಲಿ ಒಂದು ಪರಿಶಿಷ್ಟವನ್ನು ಸಿದ್ಧಪಡಿಸಿರುತ್ತಾರೆ. ಈ ಪರಿಶಿಷ್ಟದಲ್ಲಿ ಮತ್ತಷ್ಟು ಪೂರಕ ಮಾಹಿತಿಯನ್ನಿತ್ತು ಗ್ರಂಥದ ಪಾಠಭಾಗದಲ್ಲಿನ ಪಾರಿಭಾಷಿಕ ಶಬ್ದಗಳಿಗೆ ಅಗತ್ಯವಾಗುವ ವಿವರಣೆಯನ್ನು ಸೇರಿಸಿದ್ದಾರೆ. ಒಟ್ಟಿನಲ್ಲಿ ಇದೊಂದು ಪರಿಶ್ರಮ ಪೂರ್ವಕವಾದ ವಿದ್ವತ್ ಕೆಲಸ. ಮೂರನೆಯ ಮುದ್ರಣಕ್ಕೆ ಆಶೀರ್ವಚನ ರೂಪದಲ್ಲಿ ಶ್ರವಣಬೆಳಗೊಳದ ಈಗಿನ ಚಾರುಕೀರ್ತಿ ಭಟ್ಟಾರಕರು ತುಂಬ ಸಮಂಜಸವಾಗಿ ಹೇಳಿರುವ ಅಭಿಪ್ರಾಯವನ್ನು ಓದುಗರೆಲ್ಲ ಒಪ್ಪಬಹುದು. "ಸ್ವರ್ಗೀಯ ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿಗಳವರು ತಮ್ಮ ಜೀವಿತಕಾಲದಲ್ಲಿ ಈ ಗ್ರಂಥದ ಪ್ರತಿಯೊಂದು ಗಾಥೆಗೂ ಅನ್ವಯಾನುಸಾರ ಅರ್ಥವನ್ನು ಬರೆದಿರುವುದಲ್ಲದೆ ಸರಳ ಸುಂದರ ಶೈಲಿಯಲ್ಲಿ ವಿಸ್ತಾರವಾದ ಭಾವಾರ್ಥವನ್ನು ಬರೆದು ಸಮಾಜಕ್ಕೆ ಮಹದುಪಕಾರವನ್ನು ಮಾಡಿರುತ್ತಾರೆ."

ಎತ್ತೂರು ಶಾಂತಿರಾಜಶಾಸ್ತ್ರಿಗಳ ಶತಮಾನೋತ್ಸವ ಕಾರ್ಯಕ್ರಮಗಳು ನಾಡಿನ ನಾನಾ ಕಡೆಗಳಲ್ಲಿ ನಡೆಯುತ್ತಿದ್ದು ಅದೇ ಸುಸಂದರ್ಭದಲ್ಲಿ ದ್ರವ್ಯಸಂಗ್ರಹದ ತೃತೀಯ ಆವೃತ್ತಿಯನ್ನು ಹೊರತಂದಿರುವ "ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್"ನವರು ಅಭಿನಂದನೆಗೆ ಅರ್ಹರು. ●

ಗೌರವಂ ಪ್ರಾಪ್ಯತೇ ದಾನಾನ್ನ ತು ದ್ರವ್ಯಸ್ಯ ಸಂಗ್ರಹಾತ್ ।
ಸ್ಥಿತಿರುಚ್ಚೈಃ ಪಯೋದಾನಾಂ ಪಯೋಧೀನಾಮಧೋಗತಿಃ ॥

ದ್ರವ್ಯವನ್ನು ದಾನಮಾಡುವುದರಿಂದ ಗೌರವವುಂಟಾಗುವುದಲ್ಲದೆ ಅದನ್ನು ಸಂಗ್ರಹಿಸಿಡುವುದರಿಂದಲ್ಲ. ಜಲದಾನವನ್ನು ಮಾಡುವ ಮೇಘಗಳಿರುವುದು ಮೇಲೆ. ನೀರನ್ನು ಕೂಡಿಡುವ ಕಡಲುಗಳಿಗೆ ಅಧೋಗತಿ.

—ಸಮ್ಯಕ್ತ್ವಕೌಮುದಿ

ಎ. ಶಾಂತಿರಾಜ ಶಾಸ್ತ್ರಿಗಳ ನೇಮಿಜಿನೇಶ ಸಂಗತಿ

—ಶ್ರೀ ಬಿ. ಎಸ್. ಸಣ್ಣಯ್ಯ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಉತ್ತಮ ಸ್ಥಾನವನ್ನು ಪಡೆದಿರುವ ಮೂವರು ಮಂಗರಸರಲ್ಲಿ ಕೊನೆಯವನು ಹೆಚ್ಚು ಪ್ರತಿಭಾಶಾಲಿಯಾಗಿದ್ದು ಹಲವಾರು ಉತ್ತಮ ಕೃತಿಗಳನ್ನು ರಚಿಸಿದ್ದಾನೆ. ಈತನ ಹೆಸರೇ ಸೂಚಿಸುವಂತೆ ವಿಜಯನಗರದಿಂದ ಬಂದ ಅರಸುಮನೆತನಕ್ಕೆ ಸೇರಿದವನೆಂದು ತಿಳಿದು ಬರುತ್ತದೆ. ಸಮ್ಯಕ್ತ್ವ ಕೌಮುದಿಯಲ್ಲಿ

ಕಲ್ಲಹಳ್ಳಿಯ ಮಹಾಪ್ರಭು ವಿಜಯಭೂವಧೂ
ವಲ್ಲಭನ ತನಂಜಾತ ಜಿನಪದಾಂಬುಜಭೃಂಗ
ನೆಲ್ಲ ಕಲೆಯಲ್ಲಿ ಬಲ್ಲಿದನು ಮಂಗರಸ ನಾನೀ ಕೌಮುದಿಯನು
(೧-೯)

ಎಂದು ಹೇಳಿಕೊಳ್ಳುವಂತೆ ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಕಲ್ಲಹಳ್ಳಿ ಎಂಬ ಗ್ರಾಮದವನು. ಕೃತಿಗಳಿಂದಲೇ ಲಭ್ಯವಿರುವಂತೆ ಈತನ ಕಾಲ ಕ್ರಿ ಶ. ೧೫೦೮.

ಜಿನಭಕ್ತ ಮಂಗರಸನಾನೀ ಮುಕ್ತಿ
ವನಿತೇಶ ನೇಮಿತೀರ್ಥಕರ
ವಿನುತ ಮಹಾ ಕಥನವ ಹಾಡುಗಬ್ಬದೊ
ಳನುಗೆಯ್ದ ತಾನದೆಂತೆನಲು (ನೇಮಿ. ೧-೪೨)

ಎಂದು ಹೇಳುವಂತೆ ಈತನು ಜೈನಮತೀಯನಾಗಿದ್ದು ಈ ಕೃತಿಯನ್ನು ಹಾಡುಗಬ್ಬದಲ್ಲಿ ರಚಿಸಿದ್ದಾನೆ.

ಶಾಸನವೊಂದರಲ್ಲಿ ದೊರೆಯುವಂತೆ ಮಂಗರಸನು ರಚಿಸಿರುವ ಕೃತಿಗಳೆಂದರೆ ೧) ಹರಿವಂಶ ಪುರಾಣ ಅಥವಾ ನೇಮಿಜಿನೇಶ ಸಂಗತಿ ೨) ರಾಮನ ಸಂಗೀತ ೩) ಪ್ರಭಂಜನ ಚರಿತೆ ೪) ಶ್ರೀಪಾಲ ಚರಿತೆ ೫) ಜಯನೃಪ ಕಾವ್ಯ ೬) ಸಮ್ಯಕ್ತ್ವ ಕೌಮುದಿ. ಪ್ರಕೃತ ನೇಮಿಜಿನೇಶ ಸಂಗತಿಯು ಹರಿವಂಶ ಕುರುವಂಶ ಕಥೆಗಳನ್ನೂ, ನೇಮಿತೀರ್ಥಂಕರರ ಭವಾವಳಿಯನ್ನೂ ಚಾರುದತ್ತ ಮೊದಲಾದ ವಿವಿಧ ಕಥೆಗಳನ್ನೂ ಒಳಗೊಂಡ ಉತ್ತಮ ಕಾವ್ಯವಾಗಿದೆ. ಇದು ಸಾಂಗತ್ಯದಲ್ಲಿ ರಚಿತವಾಗಿದ್ದು ಅತಿವಿಸ್ತಾರವಾದ ಹರಹನ್ನು ಪಡೆದಿದೆ. ಇದರಲ್ಲಿ ೩೫ ಆಶ್ವಾಸಗಳೂ ಸುಮಾರು ೫ ಸಾವಿರಕ್ಕೂ ಮೇಲ್ಪಟ್ಟು ಪದ್ಯಗಳೂ ಇವೆ. ಕವಿಯೇ ಹೇಳುವಂತೆ ಇದು ಹಾಡುಗಬ್ಬವಾಗಿದ್ದು ನಿರೂಪಣೆ ಸರಳವಾಗಿದೆ; ವರ್ಣನೆಗಳು ಜನಪ್ರಿಯವಾಗಿವೆ. ಈ ವರ್ಣನೆಗಳಲ್ಲಿ ಕವಿಯ ಕಲ್ಪನಾಶಕ್ತಿಯನ್ನು ಪ್ರತಿಭೆಯನ್ನೂ ಮನಗಾಣಬಹುದಾಗಿದೆ.

ಇಂತಹ ಒಂದು ಹಿರಿಯ ಕೃತಿ ಮೊದಲ ಬಾರಿಗೆ ಅಚ್ಚಾಗಿ ಹೊರಬಂದುದು ೧೯೩೧ರಲ್ಲಿ. ಇದನ್ನು ಸಂಪಾದಿಸಿದ ಶ್ರೀ ಎ. ಶಾಂತಿರಾಜ ಶಾಸ್ತ್ರಿಗಳು "ಇಂತಹ ಉದ್ಗ್ರಂಥವು ಈವರೆಗೆ ಮುದ್ರಣವಾಗದೆ ಇದರ ಪಠನ ಪಾಠನಾದಿಗಳು ಯಥೇಷ್ಟವಾಗಿ ನಡೆಯಲು ತಡೆಯಾಗಿದ್ದಿತು. ಮೈಸೂರಿನ ರಾಜ ಬಂಧುಗಳಾದ ಶ್ರೀಮಾನ್ ಕೆ. ಬಸವರಾಜ ಅರಸ್ ಎಂ.ಎ., ಎಲ್.ಎಲ್.ಬಿ. ಯವರು ಇದನ್ನು ಪರಿಶೋಧಿಸಿ ಮುದ್ರಣ ಮಾಡಿಸಬೇಕಾಗಿ ನನ್ನಲ್ಲಿ ಪ್ರಸ್ತಾವಿಸಲು ನಾನು ಇದರ ಮುದ್ರಣ ಕಾರ್ಯವನ್ನು ಕೈಗೊಂಡೆನು. ಈ ಗ್ರಂಥದ ಪ್ರಕಟನೆಗೆ ಶ್ರೀಮಾನ್ ಅರಸರವರ ಉತ್ಸಾಹ ಪ್ರೋತ್ಸಾಹಗಳೇ ಮೂಲಕಾರಣಗಳೆಂದು ಬೇರೆ ಹೇಳಬೇಕಾದುದಿಲ್ಲವು." ಎಂದು ಹೇಳುವಂತೆ ಅರಸು ಅವರೇ ಇದರ ಪ್ರಕಟನೆಗೆ ಮೂಲ ಕಾರಣಕರ್ತರಾಗಿದ್ದಾರೆ. ಇಷ್ಟು ಸುದೀರ್ಘವಾದ ಕಾವ್ಯವನ್ನು ಸಂಪಾದಿಸುವುದೂ ಪ್ರಕಟಿಸುವುದೂ ಅತ್ಯಂತ ದುಸ್ತರವಾದ ಕೆಲಸವೆಂಬುದು ನಿರ್ವಿವಾದ. ಇಂತಹ ಕೆಲಸ ಮಾಡಿದ. ಅದರಲ್ಲಿಯೂ ಕನ್ನಡ ಗ್ರಂಥಗಳಿಗೆ ಪುರಸ್ಕಾರವಿಲ್ಲದಿದ್ದ ಕಾಲದಲ್ಲಿ ಆದ ಈ ಕೆಲಸ ಸ್ತುತ್ಯಾರ್ಹವಾಗಿದೆ.

ಹಳಗನ್ನಡ ಕಾವ್ಯಗಳ ಸಂಪಾದನೆ ಇನ್ನೂ ಪ್ರಬುದ್ಧಸ್ಥಿತಿಗೆ ಬಾರದಿದ್ದಾಗಲೆ ಶ್ರೀಯುತ ಎ. ಶಾಂತಿರಾಜ ಶಾಸ್ತ್ರಿಗಳಂತಹ ಕೆಲವು ಪಂಡಿತರು ಈ ಹವ್ಯಾಸದಲ್ಲಿ ತೊಡಗಿದ್ದರು. ಗ್ರಂಥಸಂಪಾದನಾ ಶಾಸ್ತ್ರದ ರೀತಿ ನೀತಿಗಳೇ ನಿರೂಪಣೆಯೇ ಇಲ್ಲದಿದ್ದಾಗ ಆ ಕಾರ್ಯವನ್ನು ಶಾಸ್ತ್ರಿಗಳು ಉತ್ತಮವಾಗಿಯೇ ನಿರ್ವಹಿಸಿದ್ದಾರೆಂದು ಹೇಳಬಹುದು. ಹಲವಾರು ಹಸ್ತಪ್ರತಿಗಳ ಸಹಾಯದಿಂದ ಪಾಠಾಂತರಗಳನ್ನು ಗುರುತಿಸುವುದು, ಉತ್ತಮ ಪಾಠದ ಅಂಗೀಕಾರ, ಟಿಪ್ಪಣಿ, ಅರ್ಥಕೋಶ, ಗ್ರಂಥವಿಮರ್ಶೆ, ಕವಿಕಾವ್ಯವಿಚಾರ–ಮೊದಲಾದ ಎಲ್ಲದರ ಸಮೇತ ಸಂಪಾದಿತವಾಗಬೇಕಾದುದು ಸಾಮಾನ್ಯವಾದುದು.

ಐದಾರು ಹಸ್ತಪ್ರತಿಗಳನ್ನಿಟ್ಟುಕೊಂಡು ಗ್ರಂಥ ಪರಿಶೋಧನೆ ನಡೆದರೂ ಪಾಠಾಂತರಗಳನ್ನು ಕೊಟ್ಟಿರುವುದಿಲ್ಲ. ಕಾರಣ ಶಾಸ್ತ್ರಿಗಳೇ ಕಲ್ಲಹಳ್ಳಿಯ ಪ್ರತಿಯು ಬೇರೆ ಪ್ರತಿಗಳಿಗಿಂತ ಶುದ್ಧವಾಗಿದ್ದುದರಿಂದ, ಪಾಠಾಂತರಗಳನ್ನು ಇಟ್ಟುಕೊಂಡರೆ ಮುದ್ರಣಕಾರ್ಯ ಕುಂಠಿತವಾಗುತ್ತದೆಂದು ಬಿಟ್ಟಿರುವುದಾಗಿ ಹೇಳಿದ್ದಾರೆ. ಇಂತಹ ಒಂದು ದೊಡ್ಡ ಕಾವ್ಯವನ್ನು ಮತ್ತೆ ಮತ್ತೆ ಪ್ರಕಟಿಸುವುದು ಸಾಧ್ಯವಿಲ್ಲದಿರುವಾಗ ಪಾಠಾಂತರಗಳನ್ನೂ ಇಟ್ಟುಕೊಂಡಿದ್ದರೆ ಚೆನ್ನಾಗಿತ್ತೆಂದು ಹೇಳುವುದು ಸಾಮಾನ್ಯವಾಗಿದೆ. ಆದರೆ ಪಾಠಕ್ಲೇಶಗಳು ಅಷ್ಟಾಗಿ ಕಂಡುಬರದಿರುವುದು ಸಮಾಧಾನದ ಸಂಗತಿಯಾಗಿದೆ. ಕೆಲವೆಡೆ ಟಿಪ್ಪಣಿಗಳನ್ನು ಕೊಡಲಾಗಿದೆ. ಗ್ರಂಥರಚನೆ ಸರಳ ಶೈಲಿಯಲ್ಲಿರುವುದರಿಂದ ಅರ್ಥಕೋಶದ ಅವಶ್ಯಕತೆ ಕಂಡುಬಂದಿಲ್ಲದಿರಬಹುದು. ಮೇಲಾಗಿ ಇಡೀ ಕಾವ್ಯದ ಕಥಾಸಾರವನ್ನೇ ಆದಷ್ಟುಮಟ್ಟಿಗೆ ವಿಸ್ತಾರವಾಗಿಯೇ ಕೊಟ್ಟಿರುವುದು ಅರ್ಥಕೋಶದ ಅವಶ್ಯಕತೆಯನ್ನು ಕುಂಠಿತಗೊಳಿಸಿದೆ ಎನ್ನಬಹುದು. ಪದ್ಯಗಳನ್ನು ಓದಿ ಅರ್ಥಮಾಡಿಕೊಳ್ಳಲಾಗದ ಅಗಾಧ ಬಂಧುಗಳಿಗೆ ಈ ಕಥಾಸಾರ ತುಂಬಾ ಸಹಕಾರಿಯಾಗಿದೆ. ಹೀಗೆ ೫ ಸಾವಿರ ಪದ್ಯಗಳ ಸಾರವನ್ನು ಕೊಡುವುದೆಂದರೆ ತುಂಬಾ ಕಠಿಣವಾದ ಕೆಲಸವೆಂಬುದನ್ನು ಈ ರೀತಿಯ ಕೆಲಸ ಮಾಡಿದವರು ಮಾತ್ರ ಅರ್ಥಮಾಡಿಕೊಳ್ಳಬಲ್ಲರು. ಇದು ಶಾಸ್ತ್ರಿಗಳ ಒಂದು ಹಿರಿಯ ಕಾರ್ಯವೆಂದೇ ಗಣಿಸಬೇಕಾಗಿದೆ. ಅಷ್ಟು ವಿಸ್ತಾರವಾಗಿ ಅಲ್ಲವಾದರೂ ತಕ್ಕಮಟ್ಟಿನ ಕವಿಕೃತಿಗಳ ವಿಷಯವನ್ನೂ ಒದಗಿಸಿದ್ದಾರೆ. ಹೀಗೆ ಶಾಸ್ತ್ರಿಗಳ ಕಾರ್ಯ ನೇಮಿಜಿನೇಶ ಸಂಗತಿಯಲ್ಲಿ ಉತ್ತಮವಾಗಿ ನಡೆದಿದೆ ಎಂದು ಹೇಳಬಹುದು. ಇದು ೧೯೩೧ ರಲ್ಲಿಯೇ ನಡೆದುದು ಹಿರಿಯ ಸಾಧನೆಯಾಗಿದೆ.

□

'ವಿಶ್ವಬಂಧು'ವಿನ ಚರಿತ್ರೆ

ನಾವು ಶ್ರುತಪಂಚಮಿಯ ಶುಭದಿವಸ ಸಂಘದ ಹೆಸರಿನಲ್ಲಿ "ವಿಶ್ವಬಂಧು"ವನ್ನು ಪಕ್ಷ ಪತ್ರಿಕೆಯನ್ನಾಗಿ ಪ್ರಾರಂಭಿಸಿದೆವು. ಪತ್ರಿಕೆಯು ಒಂದು ವರ್ಷಕಾಲ ಸರಿಯಾಗಿ ನಡೆಯುತ್ತಿದ್ದುದನ್ನೂ ಖರ್ಚು ಕಳೆದು 90 ರೂಪಾಯಿಗಳ ಆದಾಯವಾಗಿದ್ದುದನ್ನೂ ಸುಮಾರು 300 ರೂಪಾಯಿಗಳು ಚಂದಾ ವಸೂಲಾಗಬೇಕಾಗಿದ್ದುದನ್ನೂ ತಿಳಿದು ಸಂತುಷ್ಟರಾಗಿ ಶ್ರೀಮಾನ್ ವರ್ಧಮಾನಯ್ಯನವರು ಆಗ ಸಂಘದ ಕೂಟದಲ್ಲಿ ರಿಕಾರ್ಡು ಮೂಲಕವಾಗಿ ಸಂಘದ ಪತ್ರಿಕೆಯನ್ನಾಗಿ ಅಂಗೀಕರಿಸಿದರು. ನಾವು ನಾಲ್ಕು ವರ್ಷಕಾಲ ಬೇರೆ ಮುದ್ರಣಾಲಯದಲ್ಲಿ ಅವರ ಸಮಯ ಸೌಕರ್ಯಗಳನ್ನನುಸರಿಸಿ ಪಕ್ಷ ಪತ್ರಿಕೆಯ ರೂಪದಿಂದಲೂ ಬಳಿಕ ನಾವು ಸ್ವಂತ ಮುದ್ರಣಾಲಯದ ವ್ಯವಸ್ಥೆಯನ್ನು ಮಾಡಿಕೊಂಡು ಎರಡು ವರ್ಷಕಾಲ ವಾರ ಪತ್ರಿಕೆಯ ರೂಪದಿಂದಲೂ ವಿಶ್ವಬಂಧುವನ್ನು ನಡೆಸಿದೆವು. ....

—ಎ. ಎಸ್. ಎಸ್. (೧೯೩೪)

ಜಿನಭಜನಸಾರ : ಒಂದು ಸಮೀಕ್ಷೆ

—ಶ್ರೀಮತಿ ಪ್ರೇಮಕುಮಾರಿ, ದಾವಣಗೆರೆ

ಪಂಡಿತ ರತ್ನ ಎ. ಶಾಂತಿರಾಜಶಾಸ್ತ್ರಿಗಳವರು ಆದರ್ಶ ಧಾರ್ಮಿಕ ಮಹಾಪುರುಷರು. ಸಂಸ್ಕೃತ, ಪ್ರಾಕೃತ ಮತ್ತು ಕನ್ನಡವೇ ಮೊದಲಾದ ಬಹುಭಾಷಾ ಪಂಡಿತೋತ್ತಮರಾಗಿ ಸಮಾಜ, ಸಾಹಿತ್ಯ ಮತ್ತು ಜಿನವಾಣೀ ಸೇವೆಗೇ ಜೀವನವನ್ನು ಮುಡಿಪಾಗಿಟ್ಟವರು. ಸುಸಂಸ್ಕೃತರೂ, ಸರಳರೂ, ಸದಾಚಾರಿಗಳೂ ಆಗಿದ್ದ ಅವರ ಸಾಹಿತ್ಯ ಸೇವೆ ಅಪಾರವಾದುದು, ಅತಿಶಯವಾದುದು. ಧರ್ಮ, ನೀತಿ, ಸ್ತೋತ್ರ, ಸಿದ್ಧಾಂತ ಆಚಾರ, ಪೂಜಾಪಾಠ ಮೊದಲಾದ ಕೃತಿಶ್ರೇಣಿಗಳಲ್ಲಿ ವಿಶಿಷ್ಟವಾದ ಮಹಾಪುರಾಣವೂ ಸೇರಿ ಐವತ್ತಕ್ಕೂ ಮೀರಿದೆ. ಶಾಂತಿರಾಜಶಾಸ್ತ್ರಿಗಳ ಕೃತಿಗಳಲ್ಲಿ ಸಂಗೀತ, ಸಾಹಿತ್ಯ, ತತ್ವಗಳ ಸುಮಧುರ ಸಮಾಗಮವಾದ ವಿಶಿಷ್ಟ ಕೃತಿ "ಜಿನ ಭಜನ ಸಾರ". ಸುವರ್ಣ ಪುಷ್ಪಕ್ಕೆ ಸುಗಂಧ ಬಂದಂತೆ, ಮಧುರಕರವಾದ ಸಾಹಿತ್ಯಕ್ಕೆ ತಕ್ಕಂತೆ ಸಂಗೀತ ಸಂಯೋಜನೆ ಅಮೋಘವಾಗಿದೆ. ಅದಕ್ಕೆ ತಕ್ಕ ರಾಗ ತಾಳಗಳ ಮೇಳದಿಂದ ಮಂಜುಳವಾಗಿದೆ. ಈ ಗ್ರಂಥ ಪಂಚಮ ಆವೃತ್ತಿ ಮುದ್ರಣವಾಗುತ್ತಿರುವುದೇ ಅದರ ಜನಪ್ರಿಯತೆಗೆ ಸಾಕ್ಷಿಯಾಗಿದೆ.

"ಜಿನ ಭಜನ ಸಾರ"ದ ಮುನ್ನುಡಿಯಲ್ಲಿ "ಓಂ" ಕಾರಕ್ಕೆ ಪ್ರಣವವೆಂದೂ, ಅದು ದೇವತಾ ವಾಚಕವೆಂದೂ, ಪಂಚಪರಮೇಷ್ಠಿಗಳನ್ನು ಸೂಚಿಸುವುದೆಂದೂ ಲೇಖಕರೇ ಹೇಳಿದ್ದಾರೆ. ಈ 'ಓಂ'ಕಾರದಿಂದ "ಸರಿಗಮಪದನಿ" ಎಂಬ ಸಪ್ತಸ್ವರಗಳು ಹುಟ್ಟಿವೆಯೆಂದೂ ಇವುಗಳನ್ನು ವಿಧವಿಧವಾಗಿ ಸಂಯೋಜಿಸುವುದರಿಂದ ಕೀರ್ತನೆಗಳು ಆಗುತ್ತವೆ ಎಂದೂ ಹೇಳಿದ್ದಾರೆ.

ದೇವರ ಸ್ತೋತ್ರ, ಭಜನೆಗಳಿಗೆ ಸಾಮಾನ್ಯವಾಗಿ ಕೀರ್ತನೆಗಳನ್ನು ಬಳಸುವುದುಂಟು. ಹೀಗೆ ರಾಗ ತಾಳ ಲಯಬದ್ಧವಾಗಿ ಹಾಡುವುದಕ್ಕೆ ಸಂಗೀತವೆಂದು ಹೆಸರು. ರಸಮಯವಾದ ಸಂಗೀತದ ಸಾಮರ್ಥ್ಯ ಅಪಾರವಾದುದು. ಅದನ್ನು ಆಲಿಸಿ ಶಿಶುಗಳೂ, ಪಶುಗಳೂ, ಸರ್ಪಗಳೂ, ಸಸಿಗಳೂ ನಲಿವುವು. ರಸಿಕರ ಹೃದಯವನ್ನು ಆರ್ದ್ರಗೊಳಿಸುವ ಕಲೆ ಗಾಯನಕ್ಕಿದೆ. ಅಷ್ಟೇಕೆ ಕಲ್ಲು ಕರಗುವುದು, ಉಗ್ರಫಣಿ ಸೋಲುವುದು, ಒಣ ಮರವು ಪಲ್ಲವಿಸುವುದು, ಜಿಂಕೆ ಸಿಲುಕುವುದು, ಪಶು ಮೋಹಿಪುದು, ನಿಲ್ಲದೆ ಅಳುವ ಎಳೆ ಮಸುಳೆ ಸಂತಸವನಯ್ವುದು, ಮುಗಿಲು ಒಲಿದು ಮಳೆಗರೆವುದು, ದೀಪ ಹೊತ್ತಿಕೊಳ್ಳುವುದು ಮುಂತಾದ ಮಾತುಗಳಿಂದ ಸಂಗೀತದ ಸಾಮರ್ಥ್ಯ ಅರಿವಾಗುವುದು.

ಜ್ಞಾನದ ಉಪಯೋಗವು ಅಶುಭ, ಶುಭ ಮತ್ತು ಶುದ್ಧಗಳೆಂದು ಮೂರು ಪ್ರಕಾರವಾಗಿದೆ. ಅಶುಭವು ಪಾಪಾಸ್ರವವಾಗಿಯೂ ಶುದ್ಧೋಪಯೋಗವು ಈ ಕಾಲದಲ್ಲಿ ಕಷ್ಟಸಾಧ್ಯವಾಗಿರುವುದರಿಂದ ಅವುಗಳನ್ನು ಬಿಟ್ಟು ಭಕ್ತಿಗೂ, ತತ್ವ ಪ್ರತಿಪಾದನೆಗೂ ಸಾಧನಗಳಾದ ಕೀರ್ತನೆ, ಪದ, ಹಾಡುಗಳನ್ನು ಈ ಗ್ರಂಥದಲ್ಲಿ ಸಂಗ್ರಹಿಸಿದ್ದೇನೆ ಎಂದಿದ್ದಾರೆ ಲೇಖಕರು.

ಮಂಗಳಾಚರಣೆಯಲ್ಲಿ ಸಂಸಾರದ ಚತುರ್ಗತಿಗಳನ್ನು ನಿವೃತ್ತಿ ಮಾಡಿಕೊಳ್ಳುವ ಸಲುವಾಗಿ ವೃಷಭಾದಿಯಾಗಿ ಮಹಾವೀರರವರೆಗಿನ ಎಲ್ಲಾ ಇಪ್ಪತ್ತನಾಲ್ಕು ತೀರ್ಥಂಕರರನ್ನು ಬಂದಿಸುತ್ತೇನೆ. ಮೂರು ಲೋಕಕ್ಕೆ ಸ್ವಾಮಿಯಾದವರೂ, ಗುಣಗಳ ಗಣಿಯೂ, ಮಹಾಮಹಿಮರೂ, ಮಾರಮದ ಸಂಹಾರಕರೂ, ರಾಗ ದ್ವೇಷ ರಹಿತರೂ ಆದ ಪರಮಾತ್ಮರು ನಮ್ಮನ್ನು ರಕ್ಷಿಸಬೇಕೆಂಬ ಪ್ರಾರ್ಥನೆ ಇದೆ. ಆದರೆ ಸ್ವಾಮಿಯು ನಿಮಿತ್ತ ಮಾತ್ರನಾಗಿರುವುದರಿಂದ, ಉಪಚಾರದಿಂದ ಇವು ವಿಶೇಷಣಗಳಾಗಿವೆ.

"ನಿನಗೆ ರಸವೊಂದೆ ಶಾಂತಮೆ ಜಿನೇಂದ್ರ"–ನನ್ನ ಮನಸ್ಸೂ ಅದರಲ್ಲಿಯೇ ತಲ್ಲೀನವಾಗಿ ಉಳಿದ ರಸಗಳನ್ನು ಕನಸಿನಲ್ಲಿಯೂ ನೆನೆಯದಂತೆ ಮಾಡೆನಗರುಹಾ, —ನಿನ್ನ ಗುಣ ಭೂಷಣಗಳನ್ನು ಎನಗೆ ದಯಪಾಲಿಸು, ನಾನೂ ಮೋಕ್ಷಲಕ್ಷ್ಮಿಯನ್ನು ಪಡೆಯುವೆನು. ನಿತ್ಯ ಸುಖವು ಆತ್ಮರೂಪವಾಗಿದೆ. ಅನಿತ್ಯ ಸುಖವು ಮೋಹರೂಪವಾಗಿದೆ ಎಂಬ ಸತ್ಯದ ವಿವೇಕ ಎನಗೆ ಉಂಟಾಗಲಿ. ನಾನೂ ಆತ್ಮ ಸಾಧನೆಯಲ್ಲಿ ಆಸಕ್ತನಾಗಿ ಮುಕ್ತನಾಗುವಂತಾಗಲಿ. ನನ್ನ ಸರ್ವಾಂಗಗಳು ಸದಾ ನಿನ್ನನ್ನು ಅರ್ಚಿಸುತ್ತಿರಲಿ, ಹೀಗೆ ವಿಧ ವಿಧವಾಗಿ ಪರಮಾತ್ಮನ ಗುಣಗಾನ ಮಾಡಿರುವುದನ್ನು ಸಂಗ್ರಹಿಸಿದ್ದಾರೆ.

ಅರ್ಹತ್ಪೂಜೆಯಿಂದ ಗ್ರಂಥ ಆರಂಭವಾಗುತ್ತದೆ. ಸರ್ವಜ್ಞರೂ ಪಾಪವೆಂಬ ದುಃಖವನ್ನು ದೂರ ಮಾಡಿದವರೂ ಮೂರು ಲೋಕಗಳಲ್ಲಿ ಹರಡಿದ ಕೀರ್ತಿಯುಳ್ಳವರೂ ಮನ್ಮಥನೆಂಬ ವೈರಿಯನ್ನು ನಾಲ್ಕು ಘಾತಿಕರ್ಮಗಳನ್ನು ನಾಶಮಾಡಿದವರೂ, ಮುಕ್ತಿ ಸಂಪತ್ತನ್ನು ವರಿಸಿದಂತಹ ದೇವೇಂದ್ರ ವಂದ್ಯಪಾದಗಳ ಕಲ್ಯಾಣ ಪೊಂದಿದ ಜಿನಪತಿಯು ಜಯಿಸಲಿ ಎಂಬ ಸಂಸ್ಕೃತದ ಮಂತ್ರದಿಂದ ಆಹ್ವಾನಿಸಿ, ಪವಿತ್ರವಾದ ಅಷ್ಟ ಮಂಗಳ ದ್ರವ್ಯಗಳನ್ನು ಸಂಗೀತದ ಮೂಲಕವಾಗಿ ಅರ್ಪಿಸುವುದಾಗಿದೆ ಇದಕ್ಕೆ ಅಷ್ಟವಿಧಾರ್ಚನೆಯೆಂಬ ಹೆಸರಿದೆ.

'ಮೋಹನರಾಗ ರೂಪಕತಾಳ'ದಲ್ಲಿ ಅಷ್ಟ ವಿಧಾರ್ಚನೆ ಹೀಗಿದೆ. "ಭಾವಜ ವಿಜಯನೆ ಪಾಲಿಸೆನ್ನನು। ಭವದೂರ ಜಿನನಾಯಕ ॥ಪ॥ ಭಾವಶುದ್ಧಿಯೊಳ್ ನಿನ್ನ, ಚರಣವ ಪೂಜಿಪೆ, ಭವ ಸಿಂಧೂತ್ತಾರಕನೇ ಶ್ರೀ ಜಿನ ಪತಿಯೇ ॥ಅ.ಪ॥

ಮನದಲ್ಲಿಯೇ ಜನಿಸುವ ಮೋಹವನ್ನು ಗೆದ್ದು, ಹುಟ್ಟು ಸಾವುಗಳನ್ನು ವಿರಾರಿದ ಸ್ವಾಮಿಯೇ, ನನ್ನ ಭವ ಸಾಗರವನ್ನು ದಾಟಿಸುವ ಜಿನಪತಿಯೇ, ನಿನ್ನ ಪಾದಗಳನ್ನು ಭಾವಶುದ್ಧಿಯಿಂದ ಪೂಜಿಸುವೆನು. ನನ್ನ ಪಾಪವೆಂಬ ಕೆಸರಿನ ನಾಶಕ್ಕಾಗಿ, ಪವಿತ್ರವಾದ ಜಲದಿಂದ ಪೂಜಿಪೆ. ಭವರೋಗ ವೈದ್ಯನಾದ ನಿನ್ನನ್ನು ಶ್ರೀಗಂಧದ ಸುಗಂಧದಿಂದ ಪೂಜಿಪೆ, ನನ್ನ ಭವದ ತಾಪಗಳನ್ನು ಕಳೆ. ಅಕ್ಷಯ ಸುಖನಿಧಿಯಾದ ಪರಮಾತ್ಮನಲ್ಲಿ ಮೋಕ್ಷ ನೀಡೆಂದು ಅಕ್ಷತೆಯಿಂದ ಪೂಜಿಪೆ. ಮೋಹನಾಶಕ್ಕಾಗಿ ಪುಷ್ಪದಿಂದ, ಕ್ಷುದ್ರೋಗ ನಿವಾರಣೆಗಾಗಿ ಕ್ಷೀರಾದಿ ಸಾರ ವಸ್ತುಗಳಿಂದ ನಿರ್ಮಿತ ಉತ್ತಮ ಚರುವನ್ನು ಅರ್ಪಿಸುವೆನು. ಜ್ಞಾನ ಪ್ರಕಾಶನೇ ನನ್ನ ಮೋಹಾಂಧಕಾರವನ್ನು ದೂರಮಾಡೆಂದು ದಿವ್ಯ ದೀಪವನ್ನು ಬೆಳಗುವೆನು. ಕ್ರೂರ ಕರ್ಮಗಳ ಬಹುಭಾರವನ್ನು ಕಳೆಯಲು ಭೂರಿ ಧೂಪದಿಂದ ಅರ್ಚಿಸುವೆನು. ಮೋಕ್ಷಫಲದ ಇಚ್ಛೆಯಿಂದ ಸುಲಲಿತ ಫಲಗಳನ್ನು ಅರ್ಪಿಸುವೆ. ವಿಶ್ವಪೂಜಿತನ ಪಾದಗಳಿಗೆ ಅಷ್ಟವಸ್ತುಗಳ ಅರ್ಘ್ಯವನ್ನು ನಿಷ್ಠೆಯಿಂದ ಬೆಳಗುವೆನು. ಸರ್ವಲೋಕಕೆ ಶಾಂತಿ ತುಷ್ಟಿ ಪುಷ್ಟಿಗಳನ್ನು ಸರ್ವೇಶ ಕರುಣಿಸೆಂದು, ಸರ್ವಜ್ಞನ ಪಾದಗಳಿಗೆ ಶಾಂತಿಧಾರೆ ಎರೆಯುವೆ. ಪರಿಮಳಿಸುವ ವರಪುಷ್ಪ ವೃಂದದಿಂದ ನಿಮ್ಮ ಪಾದಗಳನ್ನು ಪೂಜಿಸಿ ಅಮಿತಾನಂದವನ್ನು ಹೊಂದುವೆನು, ಎಂಬುದಾಗಿ ಉತ್ತಮ ವಸ್ತುಗಳನ್ನು ಅರ್ಪಿಸಬೇಕು. ಆ ಸಮಯದಲ್ಲಿ ತಕ್ಕ ಉತ್ತಮ ಭಾವನೆಗಳನ್ನು ಹೊಂದಿ ಲಯಬದ್ಧವಾದ ಸಾಹಿತ್ಯಕ್ಕೆ ರಾಗ ತಾಳ ಸಂಯೋಜನೆ ಮಾಡಿದಾಗ, ಪೂಜಿಸುವವರ, ನೋಡುವವರ, ಕೇಳುವವರ ಮನಸ್ಸು ಅದರಲ್ಲಿಯೇ ತಲ್ಲೀನವಾಗಿ, ಬಾಹ್ಯವನ್ನು ಮರೆತು ರಸಾನಂದ ಹೊಂದುವ ಪರಾಕಾಷ್ಠತೆಗೆ ಏರುವುದು. ಇದೇ ಸಂಗೀತ ಸಾಹಿತ್ಯದ ಸಮ್ಮಿಲನದ ಪರಮ ಫಲವಾಗಿದೆ. ಮೌನವಾಗಿ ಸಾಹಿತ್ಯವನ್ನು ಓದಿಕೊಂಡಾಗಲೂ ಸಂತೋಷವಾಗಬಹುದಾದರೂ ನಾದ ಮಾಧುರ್ಯ ಕೂಡಿಬಂದಾಗ ಭಾವನೆಗಳು ಜೀವಂತವಾಗಿ ಅನುಭವಗೋಚರವಾಗುವುವು. ಆದರೂ ಇಲ್ಲಿ ಒಂದು ಸೂಕ್ಷ್ಮವಿದೆ. ಪೂಜೆಯಲ್ಲಿ ಭಾವನೆಗಳದ್ದೇ ಪ್ರಾಧಾನ್ಯ, ದ್ರವ್ಯದ್ದಲ್ಲಿ ದ್ರವ್ಯ ಆಲಂಬನೆ ಮಾತ್ರ, ವಿಶುದ್ಧ ಪರಿಣಾಮದಂತೆ ಫಲ ದೊರೆಯುವುದು. ಪೂಜೆಯಲ್ಲಿ ಪರಮಾತ್ಮನಿಗೆ ಮಹತ್ತಾದುದನ್ನು ಅರ್ಪಿಸುವೆನೆಂದು ಭಾವಿಸಿದರೂ, ಅರ್ಚಿಸುವುದು ಸಾಂಕೇತಿಕವಾದ ದ್ರವ್ಯವಾಗಬಹುದು. ಪೂಜೆಯಲ್ಲಿ ಭಾವಕ್ಕೆ ಪ್ರಾಧಾನ್ಯತೆ ಇದ್ದರೂ, ಮನಸ್ಸಿನ ವಿಶೇಷ ಸ್ಥಿರತೆಗಾಗಿ ಅಷ್ಟ ದ್ರವ್ಯಗಳೂ ಕೂಡ ಆವಶ್ಯಕ ಅಂಗ ಎಂದು ಆಗಮದಲ್ಲಿಯೂ ಮನ್ನಿಸಲಾಗಿದೆ. ಆದರೆ ಯಾವುದು ಹಿಂಸಾಮೂಲವಾಗಿದೆಯೊ ಅದನ್ನು ತ್ಯಜಿಸುವಂತೆ ಎಚ್ಚರಿಸಲಾಗಿದೆ.

ಮುಂದೆ ಪ್ರಥಮ ಜಿನ ಜನನಿಯಾದ ಮರುದೇವಿಯವರ ಪೂಜೆ, ಸರಸ್ವತೀ ಪೂಜೆ, ಹಿಂದಿಯಲ್ಲಿ ಕನ್ನಡದಲ್ಲಿ

ಅಷ್ಟಕಗಳು, ಗಣಧರರ ಅಷ್ಟಕಗಳಿವೆ. ಅನಂತರದಲ್ಲಿ ಜಿನೇಶ್ವರರ ಕೀರ್ತನೆಗಳಿವೆ.

ಜೈನತತ್ವದಲ್ಲಿ "ಅಕರ್ತಾವಾದ" ಪ್ರಸಿದ್ಧವಾಗಿದ್ದರೂ, ದೇವರಲ್ಲಿ ಮೊರೆಯಿಡುವುದು ಬಿಟ್ಟಿಲ್ಲ. ವ್ಯಾವಹಾರಿಕ ಹೇಳಿಕೆಗಳು ಔಪಚಾರಿಕ ಎಂದು ತಿಳಿಯಬೇಕು. ಜಿನೇಶ್ವರರ ಗುಣಗಾನ ಮಾಡುತ್ತಾ ನನ್ನನ್ನು ರಕ್ಷಿಸು ಮೋಕ್ಷದೊಡೆಯ ಸುಕ್ಷೇಮವೀವುದು, ಈಕ್ಷಿಸುತ್ತೆನ್ನ ರಕ್ಷಿಸಯ್ಯಾ, ಜ್ಞಾನಮೂರ್ತಿ ನೀನು, ಜ್ಞಾನಹೀನನಾದ ದೀನನನ್ನು ಕಾಯೋ ದೇವ। ಎಂದು ಅನನ್ಯನಾಗಿ ವೀತರಾಗ ಪರಮಾತ್ಮನನ್ನು ಪ್ರಾರ್ಥಿಸುವುದಾಗಿದೆ. ನಾನಾವಿಧವಾಗಿ ಹಾಡಿ ಹೊಗಳಿ, ತನ್ನ ಅಲ್ಪತೆಗಳನ್ನು ಪಾರುಮಾಡಿ ಉದ್ಧರಿಸು ದೇವಾ ಎಂಬ ಸ್ತೋತ್ರಗಳಿವೆ. ಜೋಗುಳಗಳು 'ಕೀರ್ತನೆಗಳು', ದೇವರನಾಮಗಳು, ಸಾಮೂಹಿಕವಾಗಿ ಹಾಡುವ ಭಜನೆಗಳು, ಭಕ್ತಿಯ ಪರಾಕಾಷ್ಠತೆಗೇರಿಸುವ ಪದಗಳು, ಸ್ತುತಿಗಳು, ಶತಾಷ್ಟನಾಮ ಮಂತ್ರಗಳು, ಪಂಚಕಗಳು ಮುಂತಾಗಿ ಇವೆ. 'ಶ್ರವಣಬೆಳಗುಳ' ಎಂಬ ಹಾಡು ಹೀಗೆ ಆರಂಭವಾಗುವುದು. "ಎಷ್ಟು ದೂರ ಬೆಳಗುಳ ಬಂದೆ। ಇಷ್ಟರಲ್ಲೇ ಕಾಣುತ್ತಾ ಬಂದೆ॥ ಮುಟ್ಟಿ ಜಿನರ ಪಾದವ ಕಂಡೆ। ಪಾಪವೆಲ್ಲವ ಪರಿಹರಿಸೆಂದೆ॥ಪ॥ ಆದಿ ಚಕ್ರೇಶಾ ನನುಜಾನಂತೆ। ಕಾದಿ ಅಣ್ಣನ ಗೆಲಿದವನಂತೆ॥ ಸಾಧಿಸಿ ತಪವನ್ನು ಗೈದವನಂತೆ। ಆದಿನಾಥಗೆ ಪ್ರಿಯ ಕಂದಾನಂತೆ ॥ಅ.ಪ॥ ಆಡು ಮಾತಿನ, ಹೂವರಳುವಷ್ಟು ಕೋಮಲ ಶೈಲಿಯಲ್ಲಿ ಭಾವನೆಗಳು ಬಿಚ್ಚಿಕೊಳ್ಳುತ್ತವೆ. 'ಅತಿಕಾಂಕ್ಷೆ ಯಾವಂಗೆ ಅತಿಕ್ಲೇಶವಾತರಿಗೆ, "ಆರ ಸಿರಿ ಆರ ತನುಧನ ಪುತ್ರ ಮಿತ್ರರು। ಆರಿಗೂ ಸ್ಥಿರವಿಲ್ಲ ಸಂಸಾರದ ವಿಭವಾ ॥ಪ॥ ಚಾರು ಶ್ರೀ ಜಿನಮತವನಂಬು ಜೀವನೆ ನಿನಗೆ ಮತ್ತೊಂದು ಶರಣಿಲ್ಲವೈ ॥ ಇದಕ್ಕೆ ಅರ್ಥವನ್ನು ವಿವರಿಸಬೇಕೆ ? "ಅರಿಯಲಿಲ್ಲವಲ್ಲ–ಆತ್ಮನ ಮರೆದು ಕೆಟ್ಟರೆಲಾ"–ಆತ್ಮನ ಹಿತ ಚಿಂತನೆಯ ಭಾವಗಳು, ನೀತಿಯ ನೆಲೆಗಳು, ತನಗೆ ತಾನೆ ಅರಳಿವೆ. ನಿಜಕ್ಕೂ ತತ್ವ ಚಿಂತನೆಯ ಎಳೆ ಹಿಡಿದರೆ, ತಲ್ಲೀನತೆಗೆ ಎಳೆದೊಯ್ಯುತ್ತವೆ. ಪಂಚ ಕಲ್ಯಾಣ ಕೀರ್ತನೆಗಳು, ಓಕುಳಿ ಶೋಭಾನೆ, ಅನಂತನ ನೋಂಪಿಯ ಶೋಭಾನೆ, ಚಂದ್ರಪ್ರಭ ಸ್ವಾಮಿಯ ಆರತಿ ಶೋಭಾನೆ, ತ್ರಿಲೋಕ ಜಿನವಂದನಾ ಚರಿತೆ, ಆಶೀರ್ವಾದೋಪನ್ಯಾಸಗಳು, 'ಶ್ರುತಾವತಾರದ ಕಥೆ', ಶ್ರೀ ಜಿನ ಮುಖದೊಳುದಿಸಿದ ಶಾರದೆಯ ಸ್ತೋತ್ರಗಳು, ಮಂಗಳಾರತಿಗಳು, ಶತಾಷ್ಟನಾಮ ಸ್ತೋತ್ರಗಳು ಮುಂತಾದವು ಸುಂದರವಾಗಿವೆಯಲ್ಲದೆ ಆಯಾ ವಸ್ತುವಿನ ಭಾವಕ್ಕೆ ಅನುಗುಣವಾಗಿ ರಾಗ ತಾಳಗಳ ಸಮನ್ವಯದೊಂದಿಗೆ ಸೂಚಿತವಾಗಿದೆ. ಅದನ್ನು ಅನುಸರಿಸಿ ಹಾಡಿದಾಗ ವಿಷಯವು ಮನಸ್ಸನ್ನು ಆಕ್ರಮಿಸಿ ಆನಂದವಾಗುವುದು.

ಮುಂದೆ ಪ್ರಸಿದ್ಧವಾದ ಕೀರ್ತನೆಗಳ ಸ್ವರ ಸಂಯೋಗಕ್ಕೆ ತಕ್ಕಂತೆ ಸಾಹಿತ್ಯ ರಚಿಸಿ, ಸಂಗೀತ ಕ್ಷೇತ್ರದಲ್ಲಿ ಪ್ರಸಿದ್ಧವಾಗಿರುವಂತೆ "ರಾಗಾಲಾಪನೆ ಮಾಡಿ, ಕೀರ್ತನೆ ಹಾಡಿ, ಸ್ವರ ಹಾಕುವ" ರೀತಿಗನುಸಾರವಾಗಿ ಹಾಡಲು ಅನುಕೂಲವಾಗುವಂತೆ, ಕೀರ್ತನೆಗಳ ರಚನೆಯಿದೆ. ಉದಾ :- ಬಿಲಹರಿ ರಾಗದ "ಶ್ರೀ ಚಾಮುಂಡೇಶ್ವರಿ ಪಾಲಾಯಮಾಂ" ಎಂಬಂತೆ "ಶ್ರೀ ಜ್ವಾಲಾಮಾಲಿನಿ ಪಾಲಯಮಾಂ" ನವರಸ ಕರ್ಣಾಟಕದ "ದುರ್ಗಾದೇವಿ" ಎಂಬಂತೆ–"ಪದ್ಮಾದೇವಿ, ವೃಜನ ವಿಲಾಸಿನಿ", ಇತ್ಯಾದಿ–ಮಂಗಳಗಳು, ತತ್ವಪದಗಳು, ನೀತಿಪದಗಳು, ಕೊನೆಗೆ ಪರಮಾತ್ಮಸ್ತುತಿ ಬಹಳ ಸುಂದರವಾಗಿದೆ.

ಕರ್ಮಖರ್ದಮದೊಳಗದ್ದಿದವರನೆತ್ತಿ – ಧರ್ಮವಾರಿಯಮಿಾಯಲೆರದು। ನಿರ್ಮಲ ಮಾಡುವವರು ನೀನಲ್ಲದೆ ಮತ್ತಾರು ಇದ್ದಾರೆ। ವಿಷಯದ ಸೊಕ್ಕೆಂಬ ವಿಷವೇರಿದವರಿಗೆ, ಬೋಧತಂತ್ರದಿಂದ ವಿಷವಿಳಿಸಿ ಶಾಂತಿ ಮಾಡುವ ನಿರ್ವಿಷ ನೀನಲ್ಲದೆ ಮತ್ತಾರು. ಎಂಟು ಕರ್ಮಗಳೆಂಬ ಸರ್ಪಗಳೆಂದರ ಗಂಟಲೊಳು ಇರ್ದ ಜೀವರಿಗೆ, ಕಂಟಕವ ಹರಿಸಿ ಮುಕ್ತಿನೀವರುಂಟೆ ನೀವಲ್ಲದೆ ಸ್ವಾಮಿ। ಹುಟ್ಟೆಂಬ ಸಮುದ್ರದ ಸುಳಿಯಲ್ಲಿ ಸಿಕ್ಕಿ ಯಮನೆಂಬ ಮೊಸಳೆಯ ಬಾಯ್ಗೆ ಕವಳವಾದಾತ್ಮರ ಉದ್ಧರಿಸಿ. ಮೋಕ್ಷಕೋರುವ ದಕ್ಷ ನೀನಿಲ್ಲದುಂಟೇ। ಜಯ ಜಯ ತ್ರಿಭುವನರಾಧ್ಯನೆ ಲೋಕಕೆ, ಜಯ ಜಯ ನೀನೆ ಆಧಾರ, ಜಯ ಜಯ ಸಕಲ ಸುಖಾಂಬುಧಿ ಚಂದ್ರನೆ, ಜಯ ಜಯ ಗುಣಕೆ ನಿಧಾನ॥ ಜಯ ಜಯ ಸಮವಶರಣದಧಿನಾಥನೆ। ಜಯ ಜಯ ಮೋಕ್ಷವಲ್ಲನೆ। ಜಯ ಜಯ ಕರ್ಮಕಲಂಕ ವಿಮುಕ್ತನೆ ಜಯ ಜಯವೆಂದು ನುತಿಪೆನು '॥ ಅರ್ಥವನ್ನು ಭಾವಿಸುತ್ತಾ ಏಕಾಗ್ರವಾಗಿ ಹಾಡುವ ಕೇಳುವ ಎಲ್ಲರಿಗೆ ರೋಮಾಂಚನವಾಗುವುದು. ಜೀವದ ಗತಿ–ಸ್ಥಿತಿ–ಅದರ ಉದ್ಧಾರಕ್ಕೆ ಪರಮಾತ್ಮ

ನಿಗೇ ಶರಣಲ್ಲದೆ ಅನ್ಯಥಾ ಶರಣಂ ನಾಸ್ತಿ. ವೀತರಾಗ ಪರಮಾತ್ಮನ ಆದರ್ಶದಲ್ಲಿ ನಾವೂ ಆತ್ಮ ಸಾಧನೆಗೈದು ಮುಕ್ತರಾಗಬೇಕು. ಮೊಗ್ಗು ಬಿರಿದು ಹೂವಾಗುವಷ್ಟು ಸಹಜತೆಯಲ್ಲಿ ಭಾವನೆಗಳು ಮೂಡಿಬಂದಿವೆ. ಕೆದರಿ, ಕೆರಳಿ, ನರಳಿ, ಕಳವಳಗೊಂಡಿದ್ದ ಜೀವ ಮಿಂದು, ಮಂತ್ರಿಸಿದಂತೆ, ಮಾರ್ಗೊರ್ಳಿದು ಮೋಕ್ಷಗಾಮಿಯಾಗುವ ಮಜಲುಗಳನ್ನು ತೋರಿಸಿವೆ.

ಸಂಗೀತದ ಮೂಲಕ ಸ್ತೋತ್ರ ಪೂಜಾ ಎಂದು ಹಾಡುಗಳಿಗೆ ರಾಗ ತಾಳಗಳನ್ನು ಹೇಳಿದೆ. ಆದರೆ ಸಂಗೀತದ ಪ್ರವೇಶಕ್ಕೆ ದಾರಿ ಎಲ್ಲಿ? ಸಂಗೀತದ ಕ್ಷೇತ್ರ ವಿಸ್ತಾರವಾಗಿದೆ ನಿಜ. ಆ ಕ್ಷೇತ್ರದಲ್ಲಿ ಇಲ್ಲಿರುವ ಹಾಡುಗಳು ಪರಿಚಿತವಲ್ಲ–ಕೇಳಬರುವುದಿಲ್ಲ. ಅಲ್ಲಿ ಪ್ರವೇಶ ಪಡೆದು ಇದನ್ನು ರೂಢಿಸಿಕೊಳ್ಳಬೇಕು. ಅದಕ್ಕಾಗಿ ಪರಿಶಿಷ್ಟ ೧ರಲ್ಲಿ ಸಂಗೀತ ಪ್ರಪಂಚದ ಪ್ರವೇಶಕ್ಕೆ ಅನುಕೂಲವಾಗುವಂತೆ ಸಂಗೀತದ ಸ್ವರಗಳು (ಸರಳೆಗಳು), ಜಂಟಿಸ್ವರಗಳು, ಅಲಂಕಾರಗಳು, ಈ ಎಲ್ಲವೂ ಮಾಳವ ಗೌಳ ರಾಗ, ಚತುರಸ್ರ ಜಾತಿ ಆದಿತಾಳ. ಇವುಗಳನ್ನು ಅರಿತು ಅಭ್ಯಾಸ ಮಾಡಬೇಕು. ಅಥವಾ ಪಾಠ ಹೇಳಿಸಿಕೊಳ್ಳಬೇಕು. ಮುಂದೆ ಗೀತೆಗಳ ಆರಂಭದಿಂದ, ಅವುಗಳಿಗೆ ಜೈನ ಸಾಹಿತ್ಯ ರಚಿಸಿ ಕೊಟ್ಟಿರುವುದರಿಂದ, ಆ ಸ್ವರಗಳನ್ನು ಹೇಳಿಕೊಂಡು, ಶ್ರುತಿ ಬದ್ಧವಾಗಿ, ಅದಕ್ಕೆ ತಕ್ಕಂತೆ ಸಾಹಿತ್ಯ ಅಳವಡಿಸಿಕೊಂಡು ಹಾಡಬಹುದು. ಉದಾ:–

ಸರಿಮಾಗರಿ, ಸರಿಗರಿಸ । ರಿಮ ಪಧ ಮಪ, ದಪಮಗರಿಸ ॥
ಶಾಂತೀಶ್ವರ, ಭಜಕಜನಾ । ಸಂತೋಷದ ಕಲುಷ ರಹಿತ ॥

ಮುಂದೆ ಸ್ವರಜತಿಗಳು, ವರ್ಣಗಳು ಕೊನೆಗೆ "ಕೀರ್ತನೆಗಳು" ಮುಂತಾಗಿ ಸುಂದರವಾದ, ಪ್ರಸಿದ್ಧ ಕೀರ್ತನೆಗಳಿಗೆ ಸಾಹಿತ್ಯವನ್ನು ರಚಿಸಿಕೊಟ್ಟು ಉಪಕಾರ ಮಾಡಿದ್ದಾರೆ. ಇಷ್ಟು ಕಲಿತವರು ಮುಂದೆ ತಮ್ಮ ಮಾರ್ಗವನ್ನು ಸುಲಭವಾಗಿ ಕಂಡುಕೊಳ್ಳಬಹುದು. ಒಟ್ಟಿನಲ್ಲಿ ಸಂಗೀತದಲ್ಲಿ ಆಸಕ್ತಿ ಇದ್ದವರು "ಜಿನ ಭಜನಸಾರ"ವನ್ನು ಹಾಡಿಕೊಂಡು ಪುಣ್ಯ ಪಾತ್ರರಾಗಬಹುದು, ಆನಂದಿಸಬಹುದು. ಅಷ್ಟೇ ಏಕೆ ಅವರವರ ಭಾವನೆಗಳಿಗೆ ತಕ್ಕ ಫಲವನ್ನು ಹೊಂದುವರು.

ಪರಿಶಿಷ್ಟ ೨ರಲ್ಲಿ "ನಿರಂಜನ ಸ್ತುತಿ" ಇದೆ. 'ಪರಮ ಪರಂಜ್ಯೋತಿ, ಕೋಟಿ ಚಂದ್ರಾದಿತ್ಯ, ಕಿರಣ ಸುಜ್ಞಾನ ಪ್ರಕಾಶ,' ಎಂಬಂತೆ ಆರಂಭವಾಗಿ ಪರಮಾತ್ಮನ ಗುಣಗಳನ್ನು ಸರಳ ಸುಂದರ ಶೈಲಿಯಲ್ಲಿ ವರ್ಣಿಸುವ ಒಂದು ನೂರ ಅರವತ್ತು ಪದ್ಯಗಳಿವೆ.

ಪರಿಶಿಷ್ಟ ಮೂರರಲ್ಲಿ ಪಂಚ ನಮಸ್ಕಾರ ಸ್ತುತಿ. ಅರಿವಿಲ್ಲದ ಆಚರಣೆಯ ನಿಷ್ಫಲವನ್ನು ಸೂಚಿಸುವ ಹಾಡಿದ–ಯಾತ್ರೆಯ ಮಾಡಿದರೇನು ಫಲ?...ಯಂತ್ರ ಪ್ರಾಣ ಪ್ರತಿಷ್ಠಾ ಮಂತ್ರ, ಮತ್ತು ಸಮವಸರಣ ಚೂರ್ಣಿಕೆ ಇದೆ.

ಒಟ್ಟಿನಲ್ಲಿ 'ಜಿನ ಭಜನಸಾರ' ಹೇಗಿದೆ ಎಂದರೆ, ಸಕ್ಕರೆಯನ್ನು ಅಂಗೈಯಲ್ಲಿ ಹಿಡಿದು ಸಿಹಿಯೆಂದಂತೆ, ವರ್ಣನೆ ಗೀತ ಸ್ವಲ್ಪ ಸಕ್ಕರೆ ನಾಲಿಗೆಯ ಮೇಲಿಟ್ಟರೆ ಅನುಭವ ತಾನೇ ತಾನಾಗಿ ಆಗುವುದು. ಹಾಗೆಯೇ ಸಂಗೀತ ಸಾಹಿತ್ಯ ಸಮನ್ವಯವಲ್ಲದೆ ಭಕ್ತಿ ಶ್ರದ್ಧೆಗಳೂ ಕೂಡಿ ಬಂದರೆ, ರಸಾನಂದದ ಪರಾಕಾಷ್ಠತೆಯಾಗಬಹುದು. "ಜಿನಭಜನಸಾರ"ವನ್ನು ಪುನರಾವೃತ್ತಿ ಮಾಡಿಸಿ, ವಿಮರ್ಶಿಸಿದರಷ್ಟೇ ಸಾಲದು. "ಓದಿದ ನಾಟಕ ಅದರ ಬರಡಾದ ರೇಖೆ ಮಾತ್ರ" ಎಂದಂತೆ, ಭಾವ ಗೀತಾತ್ಮಕವಾದ "ಜಿನಭಜನಸಾರ"ವನ್ನು ಶ್ರದ್ಧಾ ಭಕ್ತಿಯುಳ್ಳ, ಸಂಗೀತವನ್ನು ಅರಿತವರಿಂದ ಹಾಡಿಸಿ, ಉತ್ತಮವಾಗಿ ಕ್ಯಾಸೆಟ್ ಮಾಡಿಸಿದರೆ, ಅದು ಪೂರ್ಣ ಸಾರ್ಥಕತೆ ಹೊಂದುವುದು, ಶಾಂತಿರಾಜ ಶಾಸ್ತ್ರಿಗಳವರ ಶ್ರಮ ಸಫಲವಾಗಿ, ಸಮಾಜಕ್ಕೆ ಸಲ್ಲುವ ಶಾಶ್ವತ ಸೇವೆಯಾಗುವುದು.

ಅಹಿಂಸಾ ಧರ್ಮ

ಲೋಕದಲ್ಲಿ ಅಹಿಂಸಾಧರ್ಮಕ್ಕಿಂತ ದೊಡ್ಡದಾದ ಧರ್ಮವಿಲ್ಲ. ಹಿಂಸೆಗಿಂತ ದೊಡ್ಡದಾದ ಅಧರ್ಮ–ಪಾಪವಿಲ್ಲ. ಅಹಿಂಸೆಯು ಧರ್ಮವಲ್ಲದಿರುವ ಪಕ್ಷದಲ್ಲಿ ಮತ್ತು ಹಿಂಸೆಯು ಅಧರ್ಮವಲ್ಲದಿರುವ ಪಕ್ಷದಲ್ಲಿ ಲೋಕದಲ್ಲಿ ಧರ್ಮಾ ಧರ್ಮಗಳೇ ಇಲ್ಲವೆನ್ನಬೇಕಾಗಿ ಬರುವುದು.

—ಎ. ಎಸ್. ಎಸ್.

ಅನ್ಯ-ಯೋಗ-ವ್ಯವಚ್ಛೇದಿಕಾ : ಒಂದು ಪರಿಚಯ

—ಡಾ|| ಪಿ. ಬಿ. ಬಡಿಗೇರ

ಜೈನಸಾಹಿತ್ಯ ಮೂಲತಃ ಪ್ರಾಕೃತ ಮತ್ತು ಅಪಭ್ರಂಶ ಭಾಷೆಗಳಲ್ಲಿ ರಚಿತವಾಗಿದೆ. ಜೈನದಾರ್ಶನಿಕ ಸಾಹಿತ್ಯವು ಮಾತ್ರ ಸಂಸ್ಕೃತದಲ್ಲಿ ವಿಪುಲವಾಗಿದೆ. ಪ್ರಾಕೃತ-ಅಪಭ್ರಂಶಗಳನ್ನು ಹೀಯಾಳಿಸುವ ಜೈನೇತರ ವಿದ್ವಾಂಸರಿಗೆ ಜೈನದರ್ಶನದ ಪರಿಚಯವಾಗಲೆಂದು ಜೈನಾಚಾರ್ಯರು ತಮ್ಮ ಗ್ರಂಥಗಳನ್ನು ಸಂಸ್ಕೃತದಲ್ಲಿ ಬರೆಯಲಾರಂಭಿಸಿದರು. ಇಂತಹ ಕಾರ್ಯಕ್ಕೆ ನಾಂದಿ ಹಾಕಿದವರೆಂದರೆ ಉಮಾಸ್ವಾಮಿಯವರು. ಇವರು ತಮ್ಮ ತತ್ವಾರ್ಥಸೂತ್ರವನ್ನು ಸಂಸ್ಕೃತದಲ್ಲಿ ರಚಿಸಿದ್ದಾರೆ. ಇದರ ಮೇಲೆ ಬರೆದ ವ್ಯಾಖ್ಯಾನವೂ ಸಂಸ್ಕೃತದಲ್ಲಿದೆ. ಜಿನಸೇನಾ ಚಾರ್ಯರು ತಮ್ಮ ಮಹಾಪುರಾಣವನ್ನು ಸಂಸ್ಕೃತದಲ್ಲಿಯೇ ಬರೆದರು. ಸಮಂತಭದ್ರ, ಅಕಲಂಕ, ಸಿದ್ಧಸೇನದಿವಾಕರ, ಹರಿಭದ್ರ, ಹೇಮಚಂದ್ರ ಮೊದಲಾದ ಆಚಾರ್ಯರು ತಮ್ಮ ಗ್ರಂಥಗಳನ್ನು ಸಂಸ್ಕೃತದಲ್ಲಿ ಬರೆದಿದ್ದಾರೆ. ಇವರಲ್ಲಿ ಹರಿಭದ್ರ ಮತ್ತು ಹೇಮಚಂದ್ರರು ಪ್ರಾಕೃತ, ಸಂಸ್ಕೃತ ಮತ್ತು ಅಪಭ್ರಂಶ ಭಾಷೆಗಳಲ್ಲಿ ತಮ್ಮ ಗ್ರಂಥಗಳನ್ನು ರಚಿಸಿದ್ದಾರೆ. ಹೇಮಚಂದ್ರ ಕಲಿಕಾಲಸರ್ವಜ್ಞನೆಂದು ಹೆಸರನ್ನು ಪಡೆದಿದ್ದಾನೆ. ಈತನು ಜೈನಸಾಹಿತ್ಯಕ್ಕೆ ಅಪಾರವಾದ ಕೊಡುಗೆಯನ್ನು ಕೊಟ್ಟಿದ್ದಾನೆ. ಪ್ರಾಕೃತ ವ್ಯಾಕರಣವನ್ನು "ಕುಮಾರಪಾಲಚರಿಯಂ" ಎಂಬ ಕಾವ್ಯ ರೂಪದಲ್ಲಿ ರಚಿಸಿದ್ದಾನೆ. ಅಪಭ್ರಂಶ ವ್ಯಾಕರಣವನ್ನು ಮೊಟ್ಟಮೊದಲು ರಚಿಸಿದವನು ಈತನೇ. ಕಾಶ್ಮೀರದಿಂದ ಸರಸ್ವತಿಯನ್ನು ಈತನು ಗುಜರಾತಕ್ಕೆ ಎಳೆದುಕೊಂಡು ಬಂದನೆಂದು ಹೇಳುತ್ತಾರೆ. ಹೇಮಚಂದ್ರನು ತತ್ತ್ವ ಜ್ಞಾನಿಯೂ, ಕವಿಯೂ, ವಿಮರ್ಶಕನೂ ಆಗಿದ್ದನು.

ಈತನು ರಚಿಸಿದ 'ಅನ್ಯಯೋಗವ್ಯವಚ್ಛೇದಿಕಾ' ಹರಿಭದ್ರಸೂರಿಯ ಷಡ್ದರ್ಶನ ಸಮುಚ್ಚಯವನ್ನು ಹೋಲುತ್ತದೆ. ಹೇಮಚಂದ್ರನು ಹರಿಭದ್ರಸೂರಿಯ ಎಲ್ಲ ಗ್ರಂಥಗಳನ್ನು ಚೆನ್ನಾಗಿ ಓದಿಕೊಂಡಿರಬೇಕು. ಷಡ್ದರ್ಶನ ಸಮುಚ್ಚಯದಂತೆಯೇ ತಾನೂ ಒಂದು ಗ್ರಂಥ ವನ್ನು ರಚಿಸಬೇಕೆಂಬ ಉದ್ದೇಶದಿಂದ ಅನ್ಯ-ಯೋಗ-ವ್ಯವ ಚ್ಛೇದಿಕೆಯನ್ನು ರಚಿಸಿದ್ದಾನೆ. ಅನ್ಯ ಮತಗಳಾದ ಸಾಂಖ್ಯ, ನ್ಯಾಯ, ವೈಶೇಷಿಕ, ಬೌದ್ಧ ಮತ್ತು ಚಾರ್ವಾಕ ದರ್ಶನಗಳು ಜೈನಮತದಿಂದ ಹೇಗೆ ಭಿನ್ನವಾಗಿವೆಯೆಂಬು ದನ್ನು ಎತ್ತಿ ತೋರಿಸುವುದೇ ಪ್ರಸ್ತುತ ಗ್ರಂಥದ ಉದ್ದೇಶ ವಾಗಿದೆ. ಹೇಮಚಂದ್ರನು ಇಲ್ಲಿ ಅನ್ಯಮತ ಖಂಡನೆ ಯನ್ನೂ ಸ್ವಮತ ಪ್ರಶಂಸೆಯನ್ನೂ ಮಾಡಿದ್ದಾನೆ. ಈತನು ಖಂಡನೆಗಾಗಿ ಖಂಡನೆ ಮಾಡಿಲ್ಲ. ಅನ್ಯಮತಗಳ ತತ್ವಗಳನ್ನು ಖಂಡಿಸುವಾಗ ಆಧಾರಗಳನ್ನು ಕೊಟ್ಟಿದ್ದಾನೆ.

ಪ್ರಸ್ತುತ ಗ್ರಂಥದಲ್ಲಿ ಹೇಮಚಂದ್ರನು ವೈಶೇಷಿಕರ ಪದಾರ್ಥಗಳು, ಸಾಂಖ್ಯರ ಪುರುಷ-ಪ್ರಕೃತಿಗಳ ಸಂಬಂಧ, ಗೌತಮನ ವೈರಾಗ್ಯಕಲ್ಪನೆ, ವೇದಾಂತಿಗಳ ದ್ವೈತ ಮತ್ತು ಹಿಂಸಾತತ್ವ, ಬೌದ್ಧರ ಕ್ಷಣಿಕವಾದ ಮತ್ತು ಚಾರ್ವಾಕರ ನಾಸ್ತಿಕತೆ ಮತ್ತು ಪ್ರಮಾಣ ಮೊದಲಾದವು ಗಳು ಜೈನರ ಸಿದ್ಧಾಂತಗಳಿಂದ ಹೇಗೆ ಭಿನ್ನವಾಗಿವೆಯೆಂಬು ದನ್ನು ತೋರಿಸಿಕೊಟ್ಟಿದ್ದಾನಲ್ಲದೆ, ಅವು ಹೇಗೆ ಮಿಥ್ಯಾ ವಾಗಿವೆಯೆಂಬುದನ್ನೂ ಸಿದ್ಧಪಡಿಸಿದ್ದಾನೆ. ಜೈನಧರ್ಮ ಯಥಾರ್ಥವಾದವನ್ನು ಬೆಂಬಲಿಸುತ್ತದೆ.

ಹೇಮಚಂದ್ರನ ಅಭಿಪ್ರಾಯದ ಮೇರೆಗೆ ಜೈನ ಧರ್ಮ ನಾಸ್ತಿಕವಲ್ಲ. ಅದಕ್ಕೆ ದೇವರಲ್ಲಿ ನಂಬಿಕೆಯಿದೆ; ಆದರೆ ದೇವರು ಸೃಷ್ಟಿಕರ್ತನಲ್ಲವೆಂದು ಹೇಳುತ್ತದೆ. ಇದಕ್ಕೆ ಪೂಜೆಯಲ್ಲಿ ಶ್ರದ್ಧೆಯಿದೆ. ಆದ್ದರಿಂದಲೇ ಜಿನ ಮಂದಿರಗಳನ್ನು ಕಟ್ಟಿ, ತೀರ್ಥಂಕರರ ಮೂರ್ತಿಗಳನ್ನು ಪೂಜಿಸುವುದು ಜೈನಸಾಂಪ್ರದಾಯವಾಗಿದೆ. ಆದ್ದರಿಂದ ಜೈನರಿಗೆ ತೀರ್ಥಂಕರರೇ ದೇವರು. ಬ್ರಹ್ಮ, ವಿಷ್ಣು, ಮಹೇಶ್ವರ ಮೊದಲಾದವರು ದೇವತೆಗಳು. ಅನ್ಯಮತ

ಗಳು ಈ ದೇವತೆಗಳಿಗೆ ಅಂಟಿಸಿದ ಅದ್ಭುತ ಗುಣವೈಶಿಷ್ಟ್ಯಗಳನ್ನು ಜೈನಧರ್ಮ ಒಪ್ಪುವುದಿಲ್ಲ.

ಜೈನರ ಪ್ರಮಾಣಸಿದ್ಧಾಂತ ಇತರ ಮತಗಳ ಸಿದ್ಧಾಂತಗಳಿಂದ ಭಿನ್ನವಾಗಿದೆ. ಜೈನರ ಪ್ರಮಾಣ ಸಿದ್ಧಾಂತವು ಪ್ರತ್ಯಕ್ಷ, ಪರೋಕ್ಷ ಮತ್ತು ಅನುಮಾನಗಳಿಂದ ಕೂಡಿದೆ. ಜೈನರು ಕ್ಷಣಿಕತ್ವವನ್ನು ಒಪ್ಪುತ್ತಾರೆ. ಆದರೆ ಬೌದ್ಧರ ಶೂನ್ಯವಾದ ಅಥವಾ ಕ್ಷಣಿಕವಾದ ಇವರ ವಿಚಾರದಿಂದ ತೀರ ಭಿನ್ನವಾಗಿದೆ. ಹಾಗೆಯೇ ವೈಶೇಷಿಕರ ಆರು ಪದಾರ್ಥಗಳು ಜೈನರ ಒಂಬತ್ತು ಪದಾರ್ಥಗಳಿಂದ ಭಿನ್ನವಾಗಿವೆ. ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ ಮತ್ತು ಸಮವಾಯಗಳು ವೈಶೇಷಿಕರ ಪದಾರ್ಥಗಳಾಗಿದ್ದರೆ, ಜೀವ, ಅಜೀವ, ಆಸ್ರವ, ಸಂವರ, ಬಂಧ, ನಿರ್ಜರೆ, ಮೋಕ್ಷ, ಪುಣ್ಯ ಮತ್ತು ಪಾಪಗಳು ಜೈನರ ಪದಾರ್ಥಗಳಾಗಿವೆ. ವೈಶೇಷಿಕರ ದ್ರವ್ಯ ಒಂದಾಗಿದ್ದರೆ, ಜೈನರ ದ್ರವ್ಯ ಆರು ವಿಧವಾಗಿದೆ. ವೈಶೇಷಿಕರ ಕರ್ಮಸಿದ್ಧಾಂತ ಜೈನರ ಕರ್ಮಸಿದ್ಧಾಂತದಿಂದ ಭಿನ್ನವಾಗಿದೆ. ವೇದಾಂತವು ಪ್ರತಿಪಾದಿಸುವ ಹಿಂಸಾತತ್ವ ಜೈನರ ಹಿಂಸಾತತ್ವದಿಂದ ತೀರ ಬೇರೆಯಾಗಿದೆ. ಹೇಮಚಂದ್ರನು ಈ ಎಲ್ಲ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು, ಪ್ರಸ್ತುತ ಗ್ರಂಥದಲ್ಲಿ ಅನ್ಯಮತದವರ ಅಭಿಪ್ರಾಯಗಳನ್ನು ಸ್ಥೂಲವಾಗಿ ಚರ್ಚಿಸಿ, ವಾಸ್ತವಿಕತೆಯಲ್ಲಿ ಅಚಲವಾದ ನಂಬಿಕೆಯನಿಟ್ಟ ಜೈನಧರ್ಮವು ಹೇಗೆ ಸರ್ವಶ್ರೇಷ್ಠವಾಗಿದೆಯೆಂಬುದನ್ನು ಎತ್ತಿತೋರಿಸಿದ್ದಾನೆ.

ಹೀಗೆ ಪ್ರಸ್ತುತ ಗ್ರಂಥವು ಜೈನ ಮತ್ತು ಅನ್ಯಮತಗಳನ್ನು ತೌಲನಿಕವಾಗಿ ತಿಳಿದುಕೊಳ್ಳಲು ಒಂದು ಕೈದೀಪಿಕೆಯಾಗಿದೆಯೆಂದು ಹೇಳಬಹುದು.

○

ಕರ್ಣಾಟಕ ಏಕೀಕರಣ

"ಇಂದಿನ ಸಮ್ಮೇಳನದ ಧ್ಯೇಯವಾದ 'ಕರ್ಣಾಟಕ ಏಕೀಕರಣ" ಎಂಬ ವಿಷಯವನ್ನು ಕುರಿತು ಕೆಲವು ಮಾತುಗಳನ್ನಾಡುವಂತೆ ತಾಯಿನುಡಿಯ ಮತ್ತು ತಾಯಿನಾಡಿನ ಅಭಿಮಾನವು-ಪ್ರೇಮವು ಪ್ರೇರಿಸುತ್ತಿರುವುದರಿಂದ ಉತ್ಸಾಹಿತನಾಗಿ ಬಂದು ಈ ವೇದಿಕೆಯಲ್ಲಿ ನಿಂತಿದ್ದೇನೆ. ....

ಪ್ರತ್ಯೇಕ ಪ್ರಾಂತಗಳಾಗಿ ಆಡಳಿತದ ಸೂತ್ರವನ್ನು ತಮ್ಮ ಕೈಯಲ್ಲಿ ಹಿಡಿದಿರುವ ಸಿಂಧ ಒರಿಸ್ಸಾ ಮೊದಲಾದ ಪ್ರಾಂತಗಳೊಡನೆ ನಮ್ಮ ಕರ್ಣಾಟಕ ಪ್ರಾಂತವನ್ನು ಕ್ಷೇತ್ರವಿಸ್ತಾರದ ದೃಷ್ಟಿಯಿಂದಲೂ ಜನಸಂಖ್ಯೆಯ ದೃಷ್ಟಿಯಿಂದಲೂ ಆರ್ಥಿತೋತ್ಪತ್ತಿಯ ದೃಷ್ಟಿಯಿಂದಲೂ ಹೋಲಿಸಿ ನೋಡಿದರೆ ಕೆಲವು ಪ್ರಾಂತಗಳಿಗೆ ಇದು ಸಮಾನವಾಗಿಯೂ ಬೇರೆ ಕೆಲವು ಪ್ರಾಂತಗಳಿಗಿಂತ ಅಧಿಕವಾಗಿಯೂ ಇರುವುದರಿಂದ ಇದು ಪ್ರತ್ಯೇಕ ಪ್ರಾಂತರಚನೆಗೆ ಸಂಪೂರ್ಣಾರ್ಹವಾಗಿದೆ. ಕರ್ಣಾಟಕ ಪ್ರಾಂತದಲ್ಲಿ, ಮೈಸೂರು ಸಂಸ್ಥಾನವನ್ನು ಬಿಟ್ಟು, ಒಟ್ಟು ಕನ್ನಡಿಗರ ಸಂಖ್ಯೆಯು ಸುಮಾರು ಎಂಬತ್ತೆರಡು ಲಕ್ಷವಿದೆ. ಮೈಸೂರು ಸಂಸ್ಥಾನದಲ್ಲಿ ಸುಮಾರು ಅರವತ್ತೈದು ಲಕ್ಷವಿದೆ. ಸಂಸ್ಥಾನೇತರ ಕರ್ಣಾಟಕ ಪ್ರಾಂತದಲ್ಲಿ ವಾರ್ಷಿಕೋತ್ಪತ್ತಿಯು ಸುಮಾರು ಎರಡು ಕೋಟಿ ಐವತ್ತೆಂಟು ಲಕ್ಷ ರೂಪಾಯಿಗಳಿರುತ್ತವೆ. ವ್ಯಯವು ಸುಮಾರು ಎರಡು ಕೋಟಿ ಹತ್ತು ಲಕ್ಷ ರೂಪಾಯಿಗಳವೆ. ಈ ಲೆಕ್ಕದಿಂದ ನಮ್ಮ ಕರ್ಣಾಟಕ ಪ್ರಾಂತದ ಉತ್ಪತ್ತಿಯಲ್ಲಿ ಖರ್ಚು ಕಳೆದು ಸುಮಾರು ನಾಲ್ವತ್ತೆಂಟು ಲಕ್ಷ ರೂಪಾಯಿಗಳ ಉಳಿತಾಯವಾಗಿ ಅದು ಇತರ ಪ್ರಾಂತಗಳಿಗೆ ಹಂಚಿಕೆಯಾಗುವುದು. ಕಷ್ಟಪಟ್ಟು ದುಡಿಯುವುದಕ್ಕೆ ನಮ್ಮ ಕರ್ಣಾಟಕ ಪ್ರಾಂತ. ಅದರ ಮಧುರಫಲವನ್ನು ತಿನ್ನುವುದಕ್ಕೆ ಇತರ ಪ್ರಾಂತಗಳು.

ಈ ಕುಂದು-ಕೊರತೆಗಳೆಲ್ಲ ದೂರವಾಗಬೇಕಾದರೂ ನೂತನ ರಾಜ್ಯಾಂಗ ವ್ಯವಸ್ಥೆಯ ಅಂದರೆ ಫೆಡರೇಶನಿನ ಉಪಯೋಗವು ಕನ್ನಡ ನಾಡಿಗಾಗಬೇಕಾದರೂ ಕರ್ಣಾಟಕದ ಏಕೀಕರಣವೊಂದೇ ಮಾರ್ಗವಲ್ಲದೆ ಬೇರೆ ಮಾರ್ಗವಿಲ್ಲ. ಕನ್ನಡನಾಡಿನ ಮತ್ತು ನುಡಿಯ ಅಭಿಮಾನಿಯಾದ ಪ್ರತಿಯೊಬ್ಬ ಕನ್ನಡಿಗನೂ ಈ ಧ್ಯೇಯವನ್ನಿಟ್ಟುಕೊಂಡು ಇದಕ್ಕಾಗಿ ದುಡಿಯಬೇಕು...."

—ಎ. ಶಾಂತಿರಾಜ ಶಾಸ್ತ್ರಿ (೧೯೩೭)

ಸಪ್ತ ಪರಮಸ್ಥಾನಗಳು—ಒಂದು ಸಮೀಕ್ಷೆ

— ಪ್ರೊ॥ ಜೀವಂಧರಕುಮಾರ ಹೋತಪೇಟ

ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿಗಳು, ಜೈನ ಸಾರಸ್ವತ ಲೋಕದ ಅನರ್ಘ್ಯರತ್ನ. ಜಿನಾಗಮದ ಭಂಡಾರವನ್ನು ಸೂರೆಗೈದು, ಪಂಡಿತರಿಗೂ, ಪಾಮರರಿಗೂ, ತಮ್ಮ ಲೇಖನ, ಭಾಷಣ ಹಾಗೂ ಗ್ರಂಥಗಳ ರೂಪದಲ್ಲಿ ಹಂಚಿ ಜ್ಞಾನದಾನ ಮಾಡಿದ ಮಹಾಚೇತನ. ಜಿನಸೇನಾಚಾರ್ಯ ಹಾಗೂ ಗುಣಭದ್ರಾಚಾರ್ಯ ವಿರಚಿತ ಮಹಾಪುರಾಣವು ಸೇರಿದಂತೆ ಸುಮಾರು 50ಕ್ಕಿಂತಲೂ ಹೆಚ್ಚು ಕೃತಿಗಳನ್ನು ರಚಿಸಿ ಜಿನಾಗಮದ ಮರ್ಮವನ್ನು ತಿಳಿಗನ್ನಡಕ್ಕೆ ತಂದ ಮಹಾಸಾಹಸಿ. ಪ್ರಾಚೀನ ಜೈನಾಚಾರ್ಯರು ಹಾಗೂ ಕವಿಗಳು ಪ್ರಾಕೃತ, ಸಂಸ್ಕೃತ, ಹಾಗೂ ಹಳಗನ್ನಡ ಭಾಷೆಗಳಲ್ಲಿ ಬರೆದ ಗ್ರಂಥಗಳಲ್ಲಿ ಅಡಗಿರುವ ಜೈನಾಗಮದ ವಿವಿಧ ಮುಖಗಳನ್ನು ಜನಸಾಮಾನ್ಯರಿಗಾಗಿ ತಿಳಿಗನ್ನಡದಲ್ಲಿ ಪರಿಚಯಿಸಿದ ಮಹಾನ್ ವ್ಯಕ್ತಿಗಳಲ್ಲಿ ಇವರು ಪ್ರಥಮರು.

ಜೈನದರ್ಶನವೆಂದರೆ ಮೋಕ್ಷ ಮಾರ್ಗ. ಆ ಮೋಕ್ಷ ಮಾರ್ಗಕ್ಕೆ ಅನೇಕ ಮೆಟ್ಟಿಲುಗಳು. ಆ ಮೆಟ್ಟಿಲುಗಳನ್ನು ಏರುವಂತೆ ಮಾಡಿರುವ ಕೃತಿಯೇ, ಜಿನಾಗಮಗಳಲ್ಲಿ ವರ್ಣಿತವಾಗಿರುವ ವಿಷಯುಗಳನ್ನೊಳಗೊಂಡ "ಸಪ್ತ ಪರಮಸ್ಥಾನಗಳು". ಪೂರ್ವಾಚಾರ್ಯ ಚರಣಾಬ್ಜ ಚಂಚರೀಕ"ನೆಂದು ತಮ್ಮನ್ನು ಗುರುತಿಸಿಕೊಂಡಿರುವ ಶಾಸ್ತ್ರಿಗಳು ಈ ಕೃತಿಯ ಮೂಲಕ ಜೈನದರ್ಶನದ ಸಾರವನ್ನು ಸೆರೆಹಿಡಿದಿದ್ದಾರೆ, ಓದುಗರನ್ನು ಮೋಕ್ಷಮಾರ್ಗದಲ್ಲಿ ನೆಲೆಗೊಳ್ಳುವಂತೆ ಮಾಡಿದ್ದಾರೆ. ಆಚಾರ್ಯರ ವಾಣಿಗೆ ಧಕ್ಕೆ ಬರದಂತೆ ಕೃತಿಯ ರಚನೆಯಾಗಿದೆ.

ಚೈತನ್ಯಮಯನಾದ ಜೀವನು ತನಗೆ ಆವೃತ್ತವಾಗಿರುವ ಕರ್ಮಾಣುಗಳ ಕವಚದಿಂದ ಬೇರೆಯಾಗಿ ಮುಕ್ತಿಯನ್ನು ಪಡೆಯಲು ನಿರಂತರ ಪುರುಷಾರ್ಥವನ್ನು ಮಾಡಬೇಕಾಗುತ್ತದೆ. ಆ ಮೋಕ್ಷ ಪುರುಷಾರ್ಥವನ್ನು ಭವ್ಯಜೀವಿಗಳು ಪಡೆಯಲಿ ಎನ್ನುವ ಸದುದ್ದೇಶದಿಂದ ಶ್ರೀ ಶಾಸ್ತ್ರಿಗಳು, ತಮ್ಮ "ಸಪ್ತ ಪರಮ ಸ್ಥಾನಗಳು" ಎನ್ನುವ ಕೃತಿಯನ್ನು ರಚಿಸಿದ್ದಾರೆ.

"ಸಪ್ತ ಪರಮ ಸ್ಥಾನಗಳು" ಎನ್ನುವ ಶಬ್ದ ಪುಂಜದ ಪ್ರಯೋಗವು ಜೈನ ಪುರಾಣಗಳಲ್ಲಿ, ನೋಂಪಿ ಕಥೆಗಳಲ್ಲಿ ಉಲ್ಲೇಖವಾಗಿದ್ದರೂ, ವಿವರಗಳು ದೊರಕುವುದಿಲ್ಲ. ಆ ಪರಮಸ್ಥಾನಗಳ ಸಂಪೂರ್ಣ ವಿವರಗಳನ್ನು ಜೈನಾಗಮದ ಚೌಕಟ್ಟಿನಲ್ಲಿ ಅರ್ಥೈಸಿ ಜನಸಾಮಾನ್ಯರಿಗೆ ತಿಳಿಯುವಂತೆ ಮಾಡಿರುವುದು ಶ್ರೀ ಶಾಸ್ತ್ರಿಗಳ ಶ್ರೇಷ್ಠತೆಯಾಗಿದೆ. ಜೈನಾಗಮ, ದರ್ಶನ, ತತ್ವಜ್ಞಾನ, ಅನೇಕಾಂತ ದೃಷ್ಟಿಕೋನ ಇವುಗಳನ್ನು ಮೈಗೂಡಿಸಿಕೊಂಡ ಶಾಸ್ತ್ರಿಗಳು ಜನಸಾಮಾನ್ಯರಿಗೆ ಸಪ್ತ ಪರಮ ಸ್ಥಾನಗಳನ್ನು ತಿಳಿಸಿ ಕೊಟ್ಟು ಮೋಕ್ಷಾರ್ಥಿಗಳಾಗುವಂತೆ ಮಾಡಿದ್ದಾರೆ.

ಸಂಸಾರೀಜೀವವು ತನಗಿಷ್ಟವಾದ ಮೋಕ್ಷ ಪುರುಷಾರ್ಥವನ್ನು ಸಾಧಿಸಲು ಸಪ್ತ ಪರಮ ಸ್ಥಾನಗಳ ಮೂಲಕ ಸಾಗಬೇಕು. ಅವುಗಳೆಂದರೇ, ಸಜ್ಜಾತಿ, ಸದ್ಗೃಹಸ್ಥತ್ವ ಪಾರಿವ್ರಾಜ್ಯ (ಮುನಿ ಪದವಿ), ಸುರೇಂದ್ರತ್ವ, ಸಾಮ್ರಾಜ್ಯ (ಚಕ್ರವರ್ತಿ ಪದವಿ), ಪರಮಾರ್ಹಂತ (ಅರ್ಹತ್ಪದವಿ) ಹಾಗೂ ನಿರ್ವಾಣಗಳಾಗಿವೆ.

ಈ ಸಪ್ತ ಪರಮ ಸ್ಥಾನಗಳಲ್ಲಿ ಸ್ತ್ರೀ, ಪುರುಷರಿಬ್ಬರೂ ಸಮಾನವಾಗಿ ಮೊದಲರೆಡು ಸ್ಥಾನಗಳನ್ನು ಪಡೆಯಬಹುದು. ಮುಂದಿನ ಪರಮ ಸ್ಥಾನಗಳ ಅಧಿಕಾರ ಪುರುಷನಿಗೆ ಮಾತ್ರ ಮೀಸಲು. ಆದ್ದರಿಂದ ಸ್ತ್ರೀ ಸಮ್ಯಗ್ದರ್ಶನದ ಮೂಲಕ ಸ್ತ್ರೀಪರ್ಯಾಯವನ್ನು ಛೇದಿಸಿ ಪುರುಷ ಭವವನ್ನು ತಾಳಿ ಮುಂದಿನ ಪರಮ ಸ್ಥಾನಗಳನ್ನು ಪಡೆಯಬಹುದು. ಎಲ್ಲ ಜೀವಿಗಳು ಈ ಎಲ್ಲ ಪರಮ ಸ್ಥಾನಗಳ ಮೂಲಕ ಸಾಗಲೇಬೇಕೆಂಬ ನಿಯಮವಿಲ್ಲಾ ಮೂರನೆಯ ಪದವಿಯಾದ ಮುನಿ ಪದವಿಯಿಂದ ನೇರವಾಗಿ ಸಪ್ತಮ ಪರಮ ಸ್ಥಾನವಾದ ಮೋಕ್ಷವನ್ನು ಅನೇಕ ಜೀವಿಗಳು ಹೊಂದುತ್ತವೆ. ಆದರೆ ಕೆಲವು ಜೀವಿಗಳು ಪುಣ್ಯ ವಿಶೇಷದಿಂದ ಸುರೇಂದ್ರತ್ವ, ಚಕ್ರವರ್ತಿತ್ವ ಹಾಗೂ ಅರ್ಹತ್ಪದವಿಗಳನ್ನು ಅನುಭವಿಸಿ ಮೋಕ್ಷ ಪಡೆಯುತ್ತವೆ.

ಸಮಯಸಾರ, ರತ್ನಕರಂಡಕ ಶ್ರಾವಕಾಚಾರ, ತತ್ವಾರ್ಥಸೂತ್ರ, ಸಾಗಾರ ಧರ್ಮಾಮೃತ, ಅನಾಗಾರ ಧರ್ಮಾಮೃತ, ದ್ರವ್ಯಸಂಗ್ರಹ, ಗೊಮ್ಮಟಸಾರ, ಶತಕತ್ರಯಂ ಮುಂತಾದ ಕೃತಿಗಳ ಸಾರವನ್ನು ಸಪ್ತ ಪರಮ ಸ್ಥಾನಗಳು ಎಂಬ ಈ ಕೃತಿಯ ಮೂಲಕ ಶಾಸ್ತ್ರಿಗಳು ಜನತೆಗೆ ನೀಡಿ ಮಹದುಪಕಾರವನ್ನು ಮಾಡಿದ್ದಾರೆ.

ಜೈನಧರ್ಮ ಜಾತಿಕುಲಗಳ ಮೇಲೆ ಅವಲಂಬಿತವಾದ ಧರ್ಮವಲ್ಲ. ಆದರೆ ಸಪ್ತ ಪರಮ ಸ್ಥಾನಗಳಲ್ಲಿ "ಸಜ್ಜಾತಿ"ಗೆ ಪ್ರಥಮ ಸ್ಥಾನ ದೊರಕಿರುವುದು ಆಶ್ಚರ್ಯವೆನಿಸಬಹುದು. ಆದರೆ ಜೈನಧರ್ಮ ಚಾರಿತ್ರ ಪ್ರಧಾನ ಧರ್ಮವಾದ್ದರಿಂದ ಸಜ್ಜಾತಿಯ ಅರ್ಥವನ್ನು ಶಾಂತ ಮನಸ್ಸಿನಿಂದ ಚಿಂತಿಸಬೇಕು. ತಂದೆ–ತಾಯಿಯ ವಂಶ ಪರಿಶುದ್ಧವಾಗಿರುವುದೇ 'ಸಜ್ಜಾತಿ'ಯಾಗಿದೆ. ಅಂದರೆ ದುರಾಚಾರಾದಿಗಳಿಂದ ವಂಶವು ಕಲುಷಿತವಾಗದಿರುವುದೇ ಅದರ ಪರಿಶುದ್ಧತೆಯಾಗಿದೆ. ಮೋಕ್ಷ ಪುರುಷಾರ್ಥವನ್ನು ಹೊಂದಲು ಜೀವನಿಗೆ ಪಾತ್ರತೆ ಬರಬೇಕಾದರೆ ಮನಃಶುದ್ಧಿ, ಆತ್ಮಬಲ, ಸದಾಚರಣೆ ಅವಶ್ಯ. ಇವುಗಳು ರೂಪಗೊಳ್ಳಲು ಸಜ್ಜಾತಿ ಅವಶ್ಯ. ಆದ್ದರಿಂದ ಮೋಕ್ಷ ಪುರುಷಾರ್ಥದ ಸಾಧನೆಯ ಮೊದಲ ಮೆಟ್ಟಿಲು ಎನ್ನುವ ನಗ್ನ ಸತ್ಯವನ್ನು ಶಾಸ್ತ್ರಿಗಳು ಸ್ಪಷ್ಟಪಡಿಸಿದ್ದಾರೆ.

ಸಜ್ಜಾತಿಯ ನಂತರ "ಸದ್ಗೃಹಸ್ಥತ್ವ" ಮೋಕ್ಷ ಪುರುಷಾರ್ಥದ ಎರಡನೆಯ ಪರಮಸ್ಥಾನವಾಗಿದೆ. ಕೇವಲ ಕುಟುಂಬದ ಉದರ ಪೋಷಣೆಗಾಗಿ ಹೋರಾಡುವವ ಗೃಹಸ್ಥನಾದರೆ ಆತನಿಗೆ ಸಂಸಾರ ಚಕ್ರದಿಂದ ಮುಕ್ತಿ ಇಲ್ಲಾ. ಗೃಹಸ್ಥ–ಸದ್ಗೃಹಸ್ಥನಾಗಬೇಕು. ಅಂದರೆ ಷಟ್ಕರ್ಮ ವ್ರತನಿಯಮಾದಿಗಳನ್ನು ಆಚರಿಸುತ್ತಾ ಗೃಹಸ್ಥಧರ್ಮವನ್ನು ಪಾಲಿಸುವುದೇ ಸದ್ಗೃಹಸ್ಥತ್ವವೆಂಬ ಎರಡನೆಯ ಪರಮ ಸ್ಥಾನವಾಗಿದೆ. ದೇವಪೂಜೆ, ಗುರುಸೇವೆ, ಶಾಸ್ತ್ರಪಠನ, ಸಂಯಮ, ತಪಸ್ಸು, ದಾನ ಈ ಆರು ಕ್ರಿಯೆಗಳನ್ನು ದಿನನಿತ್ಯ ಆಚರಿಸುವವನೆ ಸದ್ಗೃಹಸ್ಥನು. ಶಾಸ್ತ್ರಿಗಳು ಸದ್ಗೃಹಸ್ಥನಲ್ಲಿರಬೇಕಾದ ಈ ಲಕ್ಷಣಗಳನ್ನು ವಿವರಿಸುವಾಗ, ಆಚರಿಸಬೇಕಾದ ಕ್ರಿಯೆಗಳು, ತ್ಯಜಿಸಬೇಕಾದ ಸಪ್ತ ವ್ಯಸನಗಳು, ಮಧುತ್ಯಾಗ, ಪರಿಪಾಲಿಸಬೇಕಾದ ಪಂಚಾಣುವ್ರತಗಳು, ಮೂರು ಗುಣವ್ರತಗಳು, ನಾಲ್ಕು ಶಿಕ್ಷಾ ವ್ರತಗಳು, ಹಂತಹಂತವಾಗಿ ಸಾಗಬೇಕಾದ ಹನ್ನೊಂದು ನೆಲೆಗಳು, ಇವುಗಳ ವಿವರಗಳನ್ನು ನೀಡಿರುವ ಕ್ರಮ, ಅವರಿಗೆ ಜೈನಾಗಮಗಳ ಮೇಲಿದ್ದ ಪ್ರಭುತ್ವವನ್ನು ನಿರೂಪಿಸುತ್ತವೆ. ಸದ್ಗೃಹಸ್ಥನಾಗಿ ರೂಪಗೊಳ್ಳಲು ಅನುಸರಿಸಬೇಕಾದ ಮಾರ್ಗದ ಸರಳ ನಿರೂಪಣೆ ಓದುಗನ ಮೇಲೆ ಗಾಢವಾದ ಪ್ರಭಾವವನ್ನುಂಟು ಮಾಡಿ, ಪ್ರತಿಯೊಬ್ಬನು ತನ್ನಷ್ಟಕ್ಕೆ ತಾನೇ ಆತ್ಮಾವಲೋಕನ ಮಾಡಿಕೊಳ್ಳುವಂತೆ ಮಾಡಿದೆ. ಶಾಸ್ತ್ರಿಗಳಿಗೆ ಗೃಹಸ್ಥನನ್ನು ಸದ್ಗೃಹಸ್ಥನನ್ನಾಗಿ ಮಾಡಬೇಕೆನ್ನುವ ಕಳಕಳಿ ವ್ಯಕ್ತವಾಗುತ್ತದೆ.

ಸದ್ಗೃಹಸ್ಥನು ಎಷ್ಟೇ ವ್ರತ ನಿಯಮ ನಿಷ್ಠನಾದರೂ ಗೃಹಸ್ಥಾಶ್ರಮದಿಂದ ಮೋಕ್ಷವನ್ನು ಹೊಂದಲು ಸಾಧ್ಯವಿಲ್ಲಾ. ಆದ್ದರಿಂದ ಮೋಕ್ಷಗಾಮಿಯ ಮುಂದಿನ ಪರಮ ಸ್ಥಾನ ಪಾರಿವ್ರಾಜ್ಯ ಅರ್ಥಾತ್ ಮುನಿಪದವಿಯಾಗಿದೆ. ಈ ಪದವಿಯನ್ನು ಧಾರಣೆ ಮಾಡಿದ ಜೀವ ಧ್ಯಾನ ಹಾಗೂ ತಪದ ಶಕ್ತಿಯ ಪ್ರಭಾವದಿಂದ ಕರ್ಮದ ಉಪಶಮನ ಮಾಡುತ್ತಾ ಮುಂದಿನ ಪರಮ ಸ್ಥಾನಗಳ ಕಡೆಗೆ ಸಾಗಬಲ್ಲದು. ಮುನಿ ಪದವಿಯಲ್ಲಿ ಜೀವ ಪಂಚ ಮಹಾವ್ರತಗಳನ್ನು, ಪಂಚ ಸಮಿತಿಗಳನ್ನು, ಆರು ಅವಶ್ಯಕ ಕ್ರಿಯೆಗಳನ್ನು, ಲೋಚ, ಅಚೇಲತ್ವ, ಅಸ್ನಾನ, ಅದಂತಧಾವನ, ಸ್ಥಿತಿಭೋಜನ, ಏಕಾಶನ, ಭೂಶಯನವೆಂಬ ಒಟ್ಟು 28 ಮೂಲಗುಣಗಳನ್ನು ಪಾಲಿಸಬೇಕಾಗುತ್ತದೆ. ಹಸಿವೆ, ನೀರಡಿಕೆ, ಮುಂತಾದ 22 ವಿಧವಾದ ಬಾಧೆಗಳನ್ನು ಸಹಿಸುವ ಶಕ್ತಿಯನ್ನು ಹೊಂದಿರಬೇಕಾಗುತ್ತದೆ. ತ್ರಿಗುಪ್ತಿಗಳನ್ನು ಸಾಧಿಸಬೇಕು, ದಶಲಕ್ಷಣಧರ್ಮಗಳ ಪಾಲನೆ ಮಾಡಬೇಕು. ಆರು ಅಂತರಂಗ, ಆರು ಬಹಿರಂಗ ತಪಸ್ಸನ್ನು ಆಚರಿಸಬೇಕು. ಅನಾದಿಕಾಲದಿಂದ ಬೆಂಬಿಡದೆ ಬಂದ ಪ್ರಬಲ ಕರ್ಮ ಶತ್ರುವನ್ನು ಜಯಿಸಿ ಅಕ್ಷಯ ಮೋಕ್ಷ ಪುರುಷಾರ್ಥವನ್ನು ಪಡೆಯಲು ಈ ಮುನಿಧರ್ಮ ಪಾಲನೆಯಲ್ಲದೆ ಬೇರೆ ದಾರಿಯೇ ಇಲ್ಲಾ ಎನ್ನುವ ಕಠೋರ ಸತ್ಯವನ್ನು ಶಾಸ್ತ್ರಿಗಳು ತಿಳಿಸಿಕೊಡುವಾಗ ಜನಸಾಮಾನ್ಯರಿಗೆ ಅರ್ಥವಾಗದೇ ಇದ್ದ ಈ ತತ್ವಗಳನ್ನು ಬಹು ಸರಳ ನಿರೂಪಣೆ ಮಾಡುವಾಗ ಓದುಗರ ಹೃದಯವನ್ನು ಗೆಲ್ಲುವಲ್ಲಿ ಶಾಸ್ತ್ರಿಗಳು ಯಶಸ್ವಿಯಾಗಿದ್ದಾರೆ.

ಮೋಕ್ಷ ಸುಖದ ಮುಂದಿನ ಪರಮ ಸ್ಥಾನ ಸುರೇಂದ್ರತ್ವ, ಮೂರನೆಯ ಪರಮಸ್ಥಾನವಾದ ಮುನಿಪದವಿಯಿಂದಲೇ ಮೋಕ್ಷ ಪಡೆಯಬಹುದಾದರೂ, ಭವ ಪರಂಪರೆಯಲ್ಲಿ ವಿಶೇಷ ಪುಣ್ಯದಿಂದ ಉನ್ನತ ಪದವಿ

ಯಲ್ಲಿದ್ದು ಮುಕ್ತಿಯನ್ನು ಸಾಧಿಸುವುದು ಸರ್ವೋತ್ಕೃಷ್ಟವಾದ ಮಾರ್ಗವಾಗಿದೆ. ದೇವತೆಗಳಲ್ಲಿ ಭವನವಾಸಿ, ವ್ಯಂತರೀಕ, ಜ್ಯೋತಿಷ್ಕ, ಕಲ್ಪವಾಸಿಗಳೆಂದು ನಾಲ್ಕು ಬಗೆಯ ದೇವತೆಗಳಿದ್ದು, ಪ್ರತಿಯೊಂದು ವಿಭಾಗದ ಅಧಿಪತಿಗಳಿಗೆ ಸಾಮಾನ್ಯವಾಗಿ ದೇವೇಂದ್ರರೆಂದು ಕರೆಯುತ್ತಾರೆ. ಆದರೆ ಕಲ್ಪವಾಸಿ ದೇವತೆಗಳಲ್ಲಿರುವ ಸೌಧರ್ಮ, ಈಶಾನ ಮುಂತಾದ 12 ದೇವೇಂದ್ರರಿಗೆ ಸುರೇಂದ್ರರೆಂದು ಸಂಭೋದಿಸಲಾಗಿದ್ದು, ಸ್ವರ್ಗಲೋಕದ ಸಮಸ್ತ ಕಲ್ಪವಾಸಿ ದೇವತೆಗಳಿಗೆ ಅಧಿಪತಿಗಳಾಗಿರುವವರು ಸಾಗರೋಪಮ ಕಾಲದವರೆಗೆ ಅನುಪಮವಾದ ಸುಖವನ್ನು ಅನುಭವಿಸಿ, ಮುಕ್ತಿಸುಖವನ್ನು ಅನುಭವಿಸುವ ಅರ್ಹತೆ ಇರುವವರೇ ಈ ಸುರೇಂದ್ರರು. ಇವರಲ್ಲಿ ಸೌಧರ್ಮೇಂದ್ರ ಈಶಾನೇಂದ್ರರು ತೀರ್ಥಂಕರರ ಪಂಚ ಕಲ್ಯಾಣಗಳಲ್ಲಿ ಭಾಗವಹಿಸುವ ಅವಕಾಶವನ್ನು ಹೊಂದಿರುತ್ತಾರೆ. ದೇವೇಂದ್ರ ಹಾಗೂ ಸುರೇಂದ್ರರಲ್ಲಿರುವ ವ್ಯತ್ಯಾಸವನ್ನು ಶಾಸ್ತ್ರಿಗಳು ಬಹು ಸುಂದರವಾಗಿ ಗುರುತಿಸಿ ಸುರೇಂದ್ರತ್ವವು ಹೇಗೆ ನಾಲ್ಕನೆಯ ಪರಮಸ್ಥಾನವಾಗಿದೆ ಎಂದು ತಿಳಿಸಿದ್ದಾರೆ.

ಸಾಮ್ರಾಜ್ಯ ಪದವಿ ಅರ್ಥಾತ್ ಚಕ್ರವರ್ತಿತ್ವವೆಂಬ ಐದನೆಯ ಪರಮ ಸ್ಥಾನವು ಮನುಷ್ಯಗತಿಯಲ್ಲಿಯೇ ಪುಣ್ಯ ವಿಶೇಷದಿಂದಲೇ ಬರುವಂತಹ ಶ್ರೇಷ್ಠ ಪದವಿಯಾಗಿದೆ. ಷಟ್‌ಖಂಡಗಳಿಗೆ ಒಡೆಯನಾಗುವದು, ಅಪಾರ ಸೈನ್ಯಪಡೆ, 96 ಸಾವಿರ ಪತ್ನಿಯರೊಡನೆ ಸರಸಾಟ, ನವನಿಧಿಗಳ ಸ್ವರೂಪದ ವಿವರಣೆ. ಶಾಸ್ತ್ರಿಗಳು ಸಾಮಾನ್ಯರು ಅಂತಹ ಪುಣ್ಯ ವಿಶೇಷವನ್ನು ಹೊಂದಲು ಪ್ರತಿಯೊಂದು ಜೀವವು ಪ್ರಯತ್ನ ಮಾಡುವಂತೆ ಪ್ರೇರೇಪಣೆ ನೀಡಿದ್ದಾರೆ. ಇಂತಹ ಪದವಿಯನ್ನು ಹೊಂದಿ ಮುಕ್ತನಾಗುವುದು ಬಹು ದುರ್ಲಭ. ಆದರೆ ಕೆಲವು ಪುಣ್ಯಜೀವಿಗಳು ಈ ಪದವಿಯನ್ನು ಹೊಂದಿ, ಅನುಭವಿಸಿ, ಮೋಕ್ಷವನ್ನು ಹೊಂದುತ್ತಾರೆ.

ಪರಮಾರ್ಹಂತ ಅಥವಾ ಅರ್ಹತ್ಪದವಿಯು ಮೋಕ್ಷ ಪುರುಷಾರ್ಥದ ಸಾಧಕನಿಗೆ 6ನೇ ಪರಮಸ್ಥಾನವಾಗಿದೆ. ಜೀವನು ತಪೋಬಲದಿಂದ ಹಾಗೂ ಧ್ಯಾನಬಲದಿಂದ ತನಗೆ ಅಂಟಿರುವ ಕರ್ಮಗಳನ್ನು ನಾಶಮಾಡಿ ಸರ್ವಜ್ಞತ್ವ ಸರ್ವದರ್ಶಿತ್ವದಂತಹ ಗುಣಗಳನ್ನು ಪಡೆದುಕೊಳ್ಳುತ್ತಾನೆ. ಈ ಅವಸ್ಥೆಯೇ ಅರ್ಹತ್ಪದವಿಯಾಗಿದ್ದು, ಇದನ್ನು ಜೀವನು ಹೇಗೆ ಪಡೆಯುತ್ತಾನೆ ಎಂಬ ವಿಷಯವನ್ನು ಅನೇಕ ಗ್ರಂಥಗಳ ಅಧ್ಯಯನ ಮಾಡಿದರೂ ಅರ್ಥವಾಗುವದಿಲ್ಲ. ಆದರೆ ಶಾಸ್ತ್ರಿಗಳು ತಮ್ಮ ಪಾಂಡಿತ್ಯಪೂರ್ಣಜ್ಞಾನದಿಂದ ಆತ್ಮನಿಗೆ ಅಂಟಿರುವ ಘಾತಿ ಹಾಗೂ ಅಘಾತಿಕರ್ಮಗಳ ನಿರ್ಮೂಲನಾ ವಿಧಾನ ಹೇಗೆ ಸಾಗುತ್ತದೆ ಎಂಬ ವಿವರಗಳನ್ನು ನೀಡಿ ಮೋಕ್ಷಾರ್ಥಿ ಹೆಚ್ಚಿನ ವಿವರಗಳನ್ನು ತಿಳಿದುಕೊಳ್ಳಲು ಅಧ್ಯಯನ ಶೀಲನಾಗುವಂತೆ ಮಾಡಿದ್ದಾರೆ.

ನಿರ್ವಾಣ, ಅರ್ಥಾತ್ ಮುಕ್ತಿ, ಮೋಕ್ಷ ಪುರುಷಾರ್ಥ ಸಾಧಕನಿಗೆ ಕೊನೆಯದಾದ ಪರಮಸ್ಥಾನವಾಗಿದೆ. ಅರ್ಹತ್ಪದವಿಯಲ್ಲಿ ಪ್ರಬಲವಾದ ಕರ್ಮಗಳನ್ನು ನಾಶಮಾಡಿದ ಜೀವನು ಮುಂದೆ ತನ್ನಲ್ಲಿಯ ದುರ್ಬಲವಾದ ಕರ್ಮಗಳನ್ನು ನಾಶಪಡಿಸಿ, ಅನಂತವಾದ ಅನುಪಮವಾದ ಚಿದಾನಂದ ಸ್ವರೂಪವನ್ನು ಅನುಭವಿಸುವ ಮುಕ್ತಿಯನ್ನು ಜೀವನು ಪಡೆಯುತ್ತಾನೆ, ಈ ಸಪ್ತಮಸ್ಥಾನವನ್ನು ಪಡೆಯುವುದೇ ಪ್ರತಿ ಭವ್ಯಾತ್ಮನ ಗುರಿಯಾಗಿದೆ. 6ನೇ ಪರಮಸ್ಥಾನವಾದ ಅರ್ಹತ್ಪದವಿಯನ್ನು ಚೆನ್ನಾಗಿ ಅರಿತುಕೊಂಡರೆ, 7 ನೆಯದಾದ ನಿರ್ವಾಣ ಪದವಿಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾದ್ದರಿಂದ ಶಾಸ್ತ್ರಿಗಳು ಈ ಪರಮಸ್ಥಾನದ ವಿವರಣೆಯನ್ನು ಹೆಚ್ಚಾಗಿ ಮಾಡಿಲ್ಲ. ಅಲ್ಲದೇ ನಿರ್ವಾಣ ಅನುಭವ ಗಮ್ಯವಾದ ಅವಸ್ಥೆಯಾದ್ದರಿಂದ ಅದು ವರ್ಣನೆಗೆ ಸಿಗುವುದಿಲ್ಲ. ವರ್ಣನಾತೀತ ಸಿದ್ಧಪರಮೇಷ್ಠಿಯನ್ನು ಶಾಸ್ತ್ರಿಗಳು ತಾನೇ ಹೇಗೆ ವರ್ಣಿಸಬಲ್ಲರು ?

ಒಟ್ಟಾರೆ ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿಗಳು ತಮ್ಮ ಉಳಿದ ಗ್ರಂಥಗಳಲ್ಲಿ ಉಲ್ಲೇಖಿಸಿರುವ ಜೈನಾಗಮದ ಸೂಕ್ಷ್ಮವಿಚಾರಗಳನ್ನು, ಸರಳವಾಗಿ ತಮ್ಮ ಈ "ಸಪ್ತ ಪರಮಸ್ಥಾನಗಳು" ಎಂಬ ಕೃತಿಯಲ್ಲಿ ಮಾಡಿದ್ದಾರೆಂದರೆ ಅತಿಶಯೋಕ್ತಿ ಇಲ್ಲ. ಭವ್ಯ ಜೀವಿಗಳನ್ನು ಮೋಕ್ಷಮಾರ್ಗದೆಡೆಗೆ ಕರೆದುಕೊಂಡು ಹೋಗುವ ಪ್ರಯತ್ನವನ್ನು ಮಾಡಿದ್ದಾರೆ. ವಸ್ತು ನಿರೂಪಣೆಯಲ್ಲಿ ತಮ್ಮ ಸ್ವಂತಿಕೆಯಿಂದ ಮೆರೆದಿದ್ದಾರೆ. ಜಿನಾಗಮದ ಮರ್ಮವನ್ನು ಜನಸಾಮಾನ್ಯರೆಡೆಗೆ ತಂದ "ಪೂರ್ವಾಚಾರ್ಯ ಚರಣಾಬ್ಜಚಂಚರೀಕ"ರಾದ ಪಂಡಿತರತ್ನರಿಗೆ ಅವರ ಈ ಜನ್ಮ ಶತಾಬ್ದಿ ವರ್ಷದಲ್ಲಿ ಶತ ಶತ ನಮನಗಳು.

○

ಪರಮಾತ್ಮಬೋಧ-ಒಂದು ಅಧ್ಯಯನ

— ಶ್ರೀಮತಿ ಆಶಾ ಸಚ್ಚಿದಾನಂದ, ಮೈಸೂರು.

ದಿವಂಗತ ಎತ್ತೂರ್‌ರು ಶಾಂತಿರಾಜ ಶಾಸ್ತ್ರಿಗಳಿಂದ ಶಬ್ದಾರ್ಥ, ತಾತ್ಪರ್ಯ ಸಹಿತವಾಗಿ ರಚಿತವಾಗಿರುವ 'ಪರಮಾತ್ಮ ಬೋಧ' ಕೃತಿಯು ಗಾತ್ರದಲ್ಲಿ ಅತ್ಯಂತ ಚಿಕ್ಕದಾಗಿದ್ದರೂ, ಇಪ್ಪತ್ತು ನಾಲ್ಕು ಶ್ಲೋಕಗಳ ಶಬ್ದಾರ್ಥ, ತಾತ್ಪರ್ಯಗಳನ್ನು ಅಧ್ಯಯನ ಮಾಡಿದಾಗ ಅದರಲ್ಲಡಗಿರುವ ಹಿರಿದಾದ ಅರ್ಥಗಳು ಮನಸ್ಸಿಗೆ ಹೆಚ್ಚು ಹತ್ತಿರವಾಗುತ್ತದೆ. 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬ ನಾಣ್ಣುಡಿಯಂತೆ ಈ ಶ್ಲೋಕಗಳಲ್ಲಿ ಅಡಗಿರುವ ಅಧ್ಯಾತ್ಮ ವಿಷಯವು ಅತ್ಯಂತ ಬೋಧಪ್ರದ ವಾಗಿವೆ ಎಂಬುದಾಗಿ ಹೇಳಬಹುದು.

ದಿವಂಗತ ಶಾಸ್ತ್ರಿಗಳೇ ಈ ಗ್ರಂಥದ ಮುನ್ನುಡಿ ಯಲ್ಲಿ ಹೀಗೆ ಹೇಳಿದ್ದಾರೆ. "ಈ ಗ್ರಂಥವು ಆತ್ಮ ಹಿತಾಕಾಂಕ್ಷಿಗಳಾದ ಮುಮುಕ್ಷುಗಳು ಆತ್ಮ ಸ್ವರೂಪ ಜ್ಞಾನಭಂಡಾರವನ್ನು ತೆರೆದು ಪ್ರವೇಶಿಸುವುದಕ್ಕೆ ಚಿಕ್ಕ ಬೀಗದ ಕೈಯಂತಿದೆ."

ಈ ಕೃತಿಯು ವಿಷಯ ಸೌಷ್ಠವವು ಮುಖ್ಯವಾಗಿರು ವುದರಿಂದ ಇದನ್ನು ಯಾವಾಗ ಯಾರು ಮಾಡಿದರೆಂಬ ಬೋಧೆಯಾಗಲಿಲ್ಲವೆಂದರೆ ಬಾಧೆಯಿಲ್ಲ' ಎಂಬುದಾಗಿ ಹೇಳಿರುವ ಶಾಸ್ತ್ರಿಗಳ ಈ ಮಾತಿನಿಂದ ಗ್ರಂಥಕರ್ತೃವಿನ ಹೆಸರು, ಕಾಲ, ದೇಶಗಳ ಬಗ್ಗೆ ಯಾವುದೇ ಮಾಹಿತಿ ದೂರಕುವುದಿಲ್ಲ.

ಪ್ರತಿಯೊಂದು ಜೀವಿಯ ಮುಖ್ಯ ಉದ್ದೇಶ ವೇನೆಂದರೆ ಈ ಸಂಸಾರ ಬಂಧನದಿಂದ ಬಿಡುಗಡೆ ಹೊಂದಿ ಪರಮಾತ್ಮಾವಸ್ಥೆಯನ್ನು ಹೊಂದುವುದೇ ಆಗಿದೆ. ಅಂತಹ ಅವಸ್ಥೆಯ ಸ್ವರೂಪ, ಸಾಧನಗಳ ಜ್ಞಾನವನ್ನು ಪಡೆಯಬೇಕಾದದ್ದು ಪ್ರತಿಯೊಂದು ಜೀವಿಯ ಆದ್ಯ ಕರ್ತವ್ಯವಾಗಿದೆ. ಆ ದಿಸೆಯಲ್ಲಿ ಈ ಪುಟ್ಟ ಗ್ರಂಥವು ಅತ್ಯಂತಯುಕ್ತವಾದುದಾಗಿದೆ ಎಂದು ಹೇಳಬಹು ದಾಗಿದೆ.

ಇಂದಿನ ವೈಜ್ಞಾನಿಕಯುಗದಲ್ಲಿ ಅನೇಕ ಸಂಶೋಧನೆ ಗಳನ್ನು ನಡೆಸಿ ಹೊಸ ಹೊಸ ವಸ್ತುಗಳನ್ನು, ವಿಚಾರ ಗಳನ್ನು ಕಂಡುಹಿಡಿಯುತ್ತಿದ್ದಾರೆ. ಆಶ್ಚರ್ಯಕರವಾದ ಶಕ್ತಿ ಸಾಮರ್ಥ್ಯಗಳನ್ನು ಜಗತ್ತಿಗೇ ತೋರಿ ವಿಸ್ಮಯವನ್ನು ಉಂಟುಮಾಡುತ್ತಿದ್ದಾರೆ. ಇದು ಕೇವಲ ಜಡವಸ್ತು ಮತ್ತು ಭೌತಿಕ ವಸ್ತುಗಳಿಂದ ಉಂಟಾಗುವ ವಿಚಾರವೆಂದ ಮೇಲೆ ಇನ್ನು ಚೈತನ್ಯ ಸ್ವರೂಪಿಯಾದ ಆತ್ಮನಲ್ಲಿ ಇನ್ನೆಂತಹ ಮಿಗಿಲಾದ ಶಕ್ತಿ ಇರಬಹುದು ? ಅದನ್ನೇ ಪರಮಯೋಗಿಗಳು, ಸಾಧುಗಳು ಸಾಧಿಸಿದ್ದಾರೆ. ಅಂತಹ ಮಹಾನ್ ಯೋಗಿಗಳು, ಸಾಧುಗಳು ನಡೆದ ದಾರಿಯಲ್ಲಿ ಸಾಗಿ ಪ್ರತಿಯೊಂದು ಜೀವಾತ್ಮನೂ ಪರಮಾತ್ಮನಾಗಲು ಈ 'ಪರಮಾತ್ಮಬೋಧ'ದಂತಹ ಆಧ್ಯಾತ್ಮಿಕ ಗ್ರಂಥಗಳು ಸಹಕಾರಿಯಾಗಬಲ್ಲವು. ಆ ದಾರಿಯಲ್ಲಿ ಸಾಗುವ ಪ್ರಯತ್ನ ವನ್ನು ನಾವು ಮಾಡಬೇಕು.

ಅಂತಹ ಚೈತನ್ಯಸ್ವರೂಪಿ ಆತ್ಮನನ್ನು, ಪರಮಾತ್ಮ ನಾಗುವ ಸಾಮರ್ಥ್ಯವುಳ್ಳ ಶುದ್ಧಾತ್ಮನನ್ನು ನೋಡಲು ಯಾರಿಗೆ ಸಾಧ್ಯ ಎಂಬುದನ್ನು ಕೃತಿಯ ಮೊದಲ ಶ್ಲೋಕ ದಲ್ಲಿ ಹೀಗೆ ಹೇಳಿದ್ದಾರೆ—

> ಪರಮಾನಂದ ಸಂಯುಕ್ತಂ । ನಿರ್ವಿಕಾರಂ ನಿರಾಮಯಂ ।
> ಧ್ಯಾನಹೀನಾ ನ ಪಶ್ಯಂತಿ । ನಿಜದೇಹೇ ವ್ಯವಸ್ಥಿತಂ ॥೧॥

ಪರಮಾನಂದ ಸಂಯುಕ್ತನೂ, ವಿಕಾರರಹಿತನೂ, ನೀರೋಗಿಯೂ, ತನ್ನ ಶರೀರದಲ್ಲಿರುವವನೂ ಆದ ಪರಮಾತ್ಮನನ್ನು ಧ್ಯಾನವಿಲ್ಲದವರು ನೋಡಲು ಸಾಧ್ಯ ವಿಲ್ಲ.

'ಏಕಾಗ್ರ ಚಿಂತಾ ನಿರೋಧೋ ಧ್ಯಾನಂ' ಎಂಬು ದಾಗಿ ಉಮಾಸ್ವಾಮಿ ಆಚಾರ್ಯರು ತತ್ವಾರ್ಥಸೂತ್ರದಲ್ಲಿ ಅಪ್ಪಣೆ ಕೊಡುತ್ತಾರೆ. ಇಂತಹ ಧ್ಯಾನದಿಂದ ಮಾತ್ರ ಈ ದೇಹದಲ್ಲಿರುವ ಆತ್ಮನ ಸ್ವರೂಪವನ್ನು ತಿಳಿಯ

ಬಹುದು. ಧ್ಯಾನಹೀನರು ತಿಳಿಯಲಾರರು. ವಸ್ತುವಿನ ನಿಜವಾದ ಸ್ವರೂಪ ಜ್ಞಾನಕ್ಕೆ ನಿಶ್ಚಯ ನಯವೆಂದು ಹೇಳಿದ್ದಾರೆ. ಇದರಿಂದ ಆತ್ಮಸ್ವರೂಪವನ್ನು ಪೃಥಕ್ಕರಿಸಿ ವಿಚಾರ ಮಾಡುವುದಾದರೆ ಆತ್ಮನು ಪರಮಾನಂದ ಸ್ವರೂಪಿಯೂ, ನಿರ್ವಿಕಾರನೂ, ನೀರೋಗಿಯೂ ಆಗಿರುತ್ತಾನೆಂದು ಬೋಧೆಯಾಗುವುದು. ಇದೇ 'ಪರಮಾತ್ಮ ಬೋಧ' ಇಂತಹ ಪರಮಾತ್ಮನ ಗುಣ ಅಥವಾ ಸ್ವರೂಪಗಳಾದ ಅನಂತ ಚತುಷ್ಟಯಗಳನ್ನು ತಿಳಿಸಿ, ಮುಂದೆ ಶುದ್ಧ ಚೈತನ್ಯ ಲಕ್ಷಣವನ್ನು ಈ ಶ್ಲೋಕದಲ್ಲಿ ಸೊಗಸಾಗಿ ತಿಳಿಸುತ್ತಾರೆ.

ನಿರ್ವಿಕಾರಂ ನಿರಾಬಾಧಂ ಸರ್ವಸಂಗ ವಿವರ್ಜಿತಂ ।
ಪರಮಾನಂದ ಸಂಪನ್ನಂ ಶುದ್ಧ ಚೈತನ್ಯ ಲಕ್ಷಣಂ ॥೩॥

ಗಾಳಿಯಿಲ್ಲದ ಸ್ಥಳದಲ್ಲಿ ದೀಪದ ಜ್ವಾಲೆಯು ನಿರ್ವಿಕಾರವಾಗಿ ನೆಟ್ಟಗೆ ಉರಿಯುವಂತೆ, ಕರ್ಮ ಸಂಬಂಧವಿಲ್ಲದಿರುವ ಶುದ್ಧ ಚೈತನ್ಯ ಸ್ವರೂಪನಾದ ಪರಮಾತ್ಮನು ರಾಗದ್ವೇಷಾದಿ ಕಷಾಯಗಳಿಲ್ಲದವನೂ, ತನ್ನಿಂದ ಪರರಿಗೂ ಪರರಿಂದ ತನಗೂ ಬಾಧೆಯಿಲ್ಲದವನೂ, ಯಾವ ವಸ್ತುವಿನೊಡನೆಯೂ ಸಂಬಂಧವಿಲ್ಲದಿರುವ ನಿಷ್ಪರಿಗ್ರಹಿಯೂ, ಪರಮಾನಂದ ಸ್ವರೂಪಿಯೂ ಆಗಿರುತ್ತಾನೆ. ಇದೇ ಪರಮಾತ್ಮನ ಲಕ್ಷಣ.

ಇಂತಹ ಆನಂದಮಯವಾಗಿರುವ ಪರಮಾತ್ಮನ ಲಕ್ಷಣವನ್ನು ಯಾರು ತಿಳಿಯುತ್ತಾರೊ ಅವರು ನಿಜವಾದ ಪಂಡಿತರು. ಅಂತಹವರು ಪರಮಾನಂದ ಕಾರಣನಾದ ತನ್ನ ಆತ್ಮನನ್ನೇ ಸೇವಿಸುತ್ತಾರೆ. ಆತ್ಮಸ್ವರೂಪದಲ್ಲಿ ಮಗ್ನನಾಗುತ್ತಾರೆ.

ತಾವರೆ ಎಲೆಯ ಮೇಲಿನ ನೀರಿನಂತೆ, ಕೆಸರು ಮೆತ್ತಿರುವ ಸ್ಫಟಿಕದಂತೆ, ಈ ಆತ್ಮನು ಕರ್ಮಸಂಬಂಧದಿಂದ ಈ ಶರೀರದಲ್ಲಿದ್ದರೂ ಮೂಲ ಸ್ವಭಾವದಿಂದ ಅತ್ಯಂತ ನಿರ್ಮಲನಾಗಿರುತ್ತಾನೆ. ಈ ರೀತಿಯಾಗಿ ಭೇದ ವಿಜ್ಞಾನವನ್ನು ಭಾವಿಸುವುದರಿಂದ ಅದು ನಮ್ಮ ಕರ್ಮ ನಿರ್ಜರೆಗೆ ಕಾರಣವಾಗುತ್ತದೆ.

ಮುಂದಿನ ಶ್ಲೋಕದಲ್ಲಿ ಧ್ಯಾನದ ಮಹಿಮೆಯನ್ನು ಮತ್ತೆ ಹೀಗೆ ವಿವರಿಸುತ್ತಾರೆ.

ಆನಂದಂ ಬ್ರಹ್ಮಣೋ ರೂಪಂ ನಿಜದೇಹೇ ವ್ಯವಸ್ಥಿತಂ ।
ಧ್ಯಾನಹೀನಾ ನ ಪಶ್ಯಂತಿ ಜಾತ್ಯಂಧಾ ಇವ ಭಾಸ್ಕರಂ ॥೯॥

ಹುಟ್ಟು ಕುರುಡರು ಸೂರ್ಯನನ್ನು ನೋಡಲು ಹೇಗೆ ಸಾಧ್ಯವಿಲ್ಲವೋ ಹಾಗೆ ಧ್ಯಾನಹೀನರು ತಮ್ಮ ಶರೀರದಲ್ಲಿಯೇ ಅಡಗಿರುವ ಪರಮಾತ್ಮನ ಆನಂದರೂಪವನ್ನು ನೋಡುವುದಿಲ್ಲ.

ಮುನಿಗಳ ಅಂತರಿಕ ತಪಸ್ಸಿನ ಆರು ಭೇದಗಳಲ್ಲಿ ಕೊನೆಯದಾದ ಧ್ಯಾನದ ಮಹಿಮೆ, ಶಕ್ತಿಯನ್ನು ಇಲ್ಲಿ ಕೃತಿಕಾರರು ಮತ್ತೊಮ್ಮೆ ಒತ್ತಿ ಹೇಳಿದ್ದಾರೆ. ಧ್ಯಾನದಿಂದ ಅಸಾಧ್ಯವಾದುದು ಯಾವುದಿದೆ? ಆದ್ದರಿಂದಲೇ ಧ್ಯಾನವನ್ನು ಶ್ರೇಷ್ಠರಾದ ಮುನಿಗಳ ಅಭ್ಯಂತರ ತಪಸ್ಸಿನ ಒಂದು ಭೇದವನ್ನಾಗಿ ಪರಿಗಣಿಸಿದ್ದಾರೆ. ಸಮ್ಯಗ್ದರ್ಶನ, ಜ್ಞಾನ, ಚಾರಿತ್ರಗಳೆಂಬ ರತ್ನತ್ರಯವು ಯಾವ ಆತ್ಮರುಗಳಲ್ಲಿ ನೆಲೆಗೊಳ್ಳುವುದೋ ಅಂತಹ ಭವ್ಯಾತ್ಮರುಗಳು ಈ ಭವಬಂಧನದಿಂದ ಬಿಡಿಸಿಕೊಂಡು ಮುಕ್ತರಾಗಬಲ್ಲರು. ಅಂತಹವರಿಗೆ ಮಾತ್ರ ಆತ್ಮನ ಶುದ್ಧ ಸ್ವರೂಪವು ಗೋಚರವಾಗುವುದು. ಸ್ವಾನುಭೂತಿ ಉಂಟಾಗುವುದು.

ಆದ್ದರಿಂದಲೇ ಜೈನಧರ್ಮದಲ್ಲಿ ಮುನಿಗಳಿಗೆ ಶ್ರೇಷ್ಠ ಸ್ಥಾನವನ್ನು ನೀಡಲಾಗಿದೆ. ಇಂತಹ ಶ್ರೇಷ್ಠ ಮುನಿಗಳು ಶರೀರಾದಿ ಬಾಹ್ಯ ವಿಷಯಗಳಲ್ಲಿ ಮಮಕಾರವನ್ನು ತೊರೆದು ಆತ್ಮಾನಂದಾಮೃತವನ್ನು ಪಾನ ಮಾಡುವುದರಿಂದ ಸಕಲಕರ್ಮವನ್ನು ನಾಶಮಾಡಿ ಶೀಘ್ರವಾಗಿ ಮೋಕ್ಷವನ್ನು ಹೊಂದಿ ಶಾಶ್ವತ ಸುಖವನ್ನು ಪಡೆಯುತ್ತಾರೆ.

ಸಕಲ ಸಂಕಲ್ಪ ವಿಕಲ್ಪಗಳಿಂದ ಬಿಡಲ್ಪಟ್ಟಿರುವ ಈ ಪರಮಾತ್ಮ ತತ್ವವು ಆನಂದರೂಪವಾಗಿರುವುದು. ಯೋಗಿಯು ಸ್ವಭಾವದಲ್ಲಿ ಮಗ್ನನಾಗಿದ್ದು ಯಾವಾಗಲೂ ಚಿದಾನಂದಮಯವೂ, ಶುದ್ಧವೂ, ನಿರಾಕಾರವೂ, ರೋಗರಹಿತವೂ. ಅನಂತ ಸುಖಪರಿಪೂರ್ಣವೂ, ಸಕಲ ಪರಿಗ್ರಹಗಳಿಂದ ಬಿಡಲ್ಪಟ್ಟಿರುವುದೂ ಆದ ಆತ್ಮ ಸ್ವರೂಪವನ್ನು ತಾನೇ ತಿಳಿಯುತ್ತಾನೆ.

ಲೋಕಮಾತ್ರ ಪ್ರಮಾಣೋಯಂ ನಿಶ್ಚಯೇ ನ ಹಿ ಸಂಶಯಃ ।
ವ್ಯವಹಾರೇ ತನೂ ಮಾತ್ರಃ ಕಥಿತಃ ಪರಮೇಶ್ವರೈಃ ॥೧೪॥

ಇಂತಹ ಆತ್ಮನು ನಿಶ್ಚಯದಲ್ಲಿ ಲೋಕ ಪರಿಮಿತನಾಗಿದ್ದಾನೆ. ಈ ವಿಷಯದಲ್ಲಿ ಸಂಶಯ ಪಡಬೇಕಾದ್ದಿಲ್ಲ. ವ್ಯವಹಾರದಲ್ಲಿ ಮಾತ್ರ ಶರೀರ ಪರಿಮಿತಿಯನ್ನು

ಹೊಂದಿದ್ದಾನೆಂದು ತೀರ್ಥಂಕರ ಪರಮದೇವರು ಹೇಳಿದ್ದಾರೆ.

ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳ ಕೃತಿಯಾದ ದ್ರವ್ಯಸಂಗ್ರಹದ ಎರಡನೆಯ ಶ್ಲೋಕದಲ್ಲಿ ಬರುವ 'ಸದೇಹಪರಿಮಾಣೋ' ಎಂಬ ವಾಕ್ಯವನ್ನು ಇಲ್ಲಿ ನಾವು ಸ್ಮರಿಸಬಹುದು. ಶುಭಾಶುಭ ಕರ್ಮವಶದಿಂದಿ ಸ್ವೀಕರಿಸಿದ ಶರೀರ ಪ್ರಮಾಣದಲ್ಲಿ ಈ ಆತ್ಮನು ಇರುತ್ತಾನೆ.

ಮುಂದೆ ಅಂತಹ ಪರಬ್ರಹ್ಮ ಸ್ವರೂಪಿಯಾದ ಪರಮಾತ್ಮನ ವಿಶೇಷಣಗಳನ್ನು "ನಿರ್ವಿಕಲ್ಪ ಸಮಾಧಿಗೆ ಗೋಚರನಾಗುವವನೇ ಪರಬ್ರಹ್ಮನು. ಅವನೇ ಜಿನೇಶ್ವರನು. ಅವನೇ ಉತ್ಕೃಷ್ಟವಾದ ತತ್ವವು. ಅವನೇ ಪರಮಗುರುವು, ಅವನೇ ಉತ್ಕೃಷ್ಟವಾದ ಧ್ಯಾನವು. ಅವನೇ ಪರಮಾತ್ಮನೆಂಬುವನು, ಅವನೇ ಸಕಲಮಂಗಲ ಸ್ವರೂಪನು, ಅವನೇ ಸುಖಭಾಜನನು, ಅವನೇ ಶುದ್ಧ ಚಿದ್ರೂಪನು, ಅವನೇ ಪರಮಶಿವನು, ಅವನೇ ಪರಮಾನಂದ ಸ್ವರೂಪನು, ಅವನೇ ಸುಖವನ್ನು ಕೊಡುವವನು, ಅವನೇ ಪರಮ ಚೈತನ್ಯ ಸ್ವರೂಪನು, ಅನಂತಜ್ಞಾನ, ದರ್ಶನ, ಸುಖಾದಿಗುಣಗಳಿಗೆ ಸಮುದ್ರಪ್ರಾಯನೂ ಆಗಿರುತ್ತಾನೆ. ಇಂತಹ ಎಲ್ಲಾ ವಿಶೇಷ ವಾಚಕಗಳಿಗೆ ವಾಚ್ಯನು ಪರಮಾತ್ಮನೊಬ್ಬನೇ"—ಎಂಬುದಾಗಿ ಇಲ್ಲಿ ವಿವರಿಸಲಾಗಿದೆ.

ಹೀಗೆ ಭವ್ಯನಾದ ಪ್ರತಿಯೊಬ್ಬ ಜೀವಾತ್ಮನಲ್ಲೂ ಅರಿಹಂತನಾಗುವ ಯೋಗ್ಯತೆ ಇದೆ. ಆ ಅರ್ಹತ್ ಪರಮೇಶ್ವರನು ತನ್ನ ಶರೀರದ ಮಧ್ಯದಲ್ಲಿರುತ್ತಾನೆ. ಅಂದರೆ ತನ್ನ ಶರೀರದಲ್ಲಿರುವ ಆತ್ಮನೇ ಅರ್ಹತ್ಪರಮೇಶ್ವರನೆಂದು ತಿಳಿಯುವವನೇ ನಿಜವಾದ ಪಂಡಿತ, ಆತ್ಮಜ್ಞಾನಿ.

ತನ್ನನ್ನು ತಾನು ತಿಳಿಯದೆ ಬಾಹ್ಯ ವಿಷಯಗಳಲ್ಲಿ ಎಷ್ಟು ನಿಪುಣನಾದರೂ ಪ್ರಯೋಜನವಿಲ್ಲ. ತನ್ನ ಆತ್ಮನನ್ನು ತಾನು ಅರಿಯುವುದೇ ಮುಖ್ಯ ಎಂಬುದನ್ನು ಮತ್ತೆ ವಿವರಿಸುತ್ತಾರೆ.

ಆಕಾರ ರಹಿತಂ ಶುದ್ಧಂ ಸ್ವಸ್ವರೂಪವ್ಯವಸ್ಥಿತಂ ।
ಸಿದ್ಧಮಷ್ಟಗುಣೋಪೇತಂ ನಿರ್ವಿಕಾರಂ ನಿರಂಜನಂ ॥೨೦॥

ಅಂತಹ ಸಿದ್ಧ ಪರಮಾತ್ಮನು ಆಕಾರರಹಿತನೂ, ಶುದ್ಧನೂ ಸ್ವಸ್ವರೂಪದಲ್ಲಿರುವವನೂ, ಕ್ಷಾಯಿಕ ಸಮ್ಯಕ್ತ್ವ, ಜ್ಞಾನ, ದರ್ಶನ, ವೀರ್ಯ, ಸೂಕ್ಷ್ಮತ್ವ, ಅವಗಹನ, ಅಗುರು-ಲಘುತ್ವ, ಅವ್ಯಾಬಾಧತ್ವಗಳೆಂಬ ಎಂಟು ಗುಣಯುಕ್ತನೂ, ಕಾಮಕ್ರೋಧಾದಿ ಕಷಾಯ ರಹಿತನೂ, ನಿರಂಜನನೂ ಆಗಿದ್ದು ತನ್ನ ಶರೀರದ ಮಧ್ಯದಲ್ಲಿಯೇ ಇದ್ದಾನೆ.

ಉತ್ಕೃಷ್ಟವಾದ ಪರಮಾತ್ಮ ಸ್ವರೂಪವನ್ನು ಹೊಂದುವುದಕ್ಕಾಗಿ ಸ್ವಭಾವದಿಂದಲೇ ಆನಂದಮಯ ಚೈತನ್ಯರೂಪನಾದ ತನ್ನ ಆತ್ಮನು ಶುದ್ಧ ನಿಶ್ಚಯನಯದಿಂದ ಅರ್ಹತ್ಪರಮೇಷ್ಠಿಗಳಿಗೂ, ಸಿದ್ಧಪರಮೇಷ್ಠಿಗಳಿಗೂ ಸಮಾನನಾಗಿದ್ದಾನೆ ಎಂಬುದಾಗಿ ತಿಳಿಯುವ ಆತ್ಮನೇ ನಿಜವಾದ ಆತ್ಮಜ್ಞಾನಿ. ಅವನೇ ಪರಮಯೋಗಿ. ಅಂತಹವನಿಗೇ ಆತ್ಮಸಿದ್ಧಿ ಸಾಧ್ಯವಾಗುವುದು ಎಂಬುದಾಗಿ ಕೃತಿಕಾರರು ಅಪ್ಪಣೆ ಕೊಟ್ಟಿದ್ದಾರೆ.

ಈ ಚಿಕ್ಕ ಗ್ರಂಥದ ಶ್ಲೋಕಗಳಿಗೆ ಸುಲಭವಾದ ಭಾಷೆಯಲ್ಲಿ ತಾತ್ಪರ್ಯ, ಶಬ್ದಾರ್ಥಗಳನ್ನು ಬರೆದು, ಚಿಕ್ಕಮಕ್ಕಳೂ ಇದನ್ನು ಸುಲಭವಾಗಿ ಓದಲು ಸಾಧ್ಯವಾಗುವಂತೆ ಮಾಡಿದ್ದಾರೆ. ಅದರ ಉಪಯೋಗವನ್ನು ಪಡೆಯಲು ನಾವು ಪ್ರಯತ್ನಿಸಿದರೆ ಲೇಖಕರ ಶ್ರಮ ಸಾರ್ಥಕವಾದೀತು. ●

ಅಹಿಂಸಾ ಧರ್ಮ

ಅಹಿಂಸಾ ಧರ್ಮವು ಸಕಲ ಮತಶಾಸ್ತ್ರ ಸಮ್ಮತವಾದ ವ್ಯಾಪಕಧರ್ಮವಾಗಿದೆ.
ಇದಕ್ಕೆ ಧರ್ಮಸಾರ್ವಭೌಮನೆಂದೂ ಹೇಳಬಹುದು.

— ಎ. ಎಸ್. ಎಸ್.

ಜಿನಭಕ್ತಿಸಾರ

— ಪ್ರೊ॥ ಡಿ. ಲಿಂಗಯ್ಯ

ಪ್ರಾತಃ ಸ್ಮರಣೀಯರಾದ ಎತ್ತೂರು ಶಾಂತಿರಾಜ ಶಾಸ್ತ್ರಿಗಳು (೧೮೮೮–೧೯೫೨) ಜೈನ ಜನಸಮುದಾಯಕ್ಕೆ ಮರೆಯದ ಮಹನೀಯರಾಗಿದ್ದಾರೆ ; ಜೈನ ಸಮಾಜದ ಸರ್ವತೋಮುಖ ಏಳಿಗೆಗೆ ಹಲವು ರೀತಿಯಲ್ಲಿ ಶ್ರಮಿಸಿದ್ದಾರೆ ; ತಮ್ಮ ಅನುಪಮ ವ್ಯಕ್ತಿತ್ವದಿಂದ ಅಜರಾಮರರಾಗಿದ್ದಾರೆ. ಶಿಕ್ಷಣ ಪ್ರಚಾರ, ಸಾಹಿತ್ಯ ಪ್ರಸಾರ ಶ್ರೀ ಶಾಸ್ತ್ರಿಗಳ ಬದುಕಿನಲ್ಲಿ ಕಂಡುಬರುವ ಎರಡು ಪ್ರಮುಖ ಕ್ಷೇತ್ರಗಳು. ಶ್ರೀಯುತರು ಸ್ವಂತ ಪರಿಶ್ರಮ, ಸಾಧನೆಯಿಂದ ಸಾಹಿತ್ಯ ಕ್ಷೇತ್ರದಲ್ಲಿ ಅಪೂರ್ವವಾದ ಸೇವೆ ಸಲ್ಲಿಸಿದ್ದಾರೆ. ಜೈನ ಸಾಹಿತ್ಯ, ಆ ಮೂಲಕ ಕನ್ನಡ ಸಾಹಿತ್ಯ ಅವರಿಂದ ಶ್ರೀಮಂತಗೊಂಡಿದೆ.

ಸಂಸ್ಕೃತ ಭಾಷೆಯಲ್ಲಿ ಸೃಷ್ಟಿಯಾಗಿರುವ "ಮಹಾಪುರಾಣ" ಭಾರತೀಯ ಪುರಾಣಗಳಲ್ಲಿ ಮಕುಟ ಮಣಿ, ಪುರಾಣಕಾರರಿಗೆ ಅಕ್ಷಯ ನಿಧಿ ; ಸಾಹಿತಿ ಕಲಾವಿದರಿಗೆ ಸ್ಫೂರ್ತಿಯ ಸೆಲೆ. ಭಾರತದ ದೇಶೀಯ ಭಾಷೆಗಳು ಇದರಿಂದ ಪಡೆದಿರುವ ಉಪಯೋಗ ಅಷ್ಟಿಷ್ಟಲ್ಲ. ಇಂಥ ಪುರಾಣ ಗ್ರಂಥವನ್ನು ಎತ್ತೂರು ಶಾಂತಿರಾಜಶಾಸ್ತ್ರಿಗಳು ಕನ್ನಡ ಭಾಷೆಗೆ ಸೊಗಸಾಗಿ ಅನುವಾದಿಸಿ, ಸುಂದರವಾಗಿ ಪ್ರಕಟಿಸಿ ಮಹೋಪಕಾರ ಮಾಡಿದ್ದಾರೆ ; ಕನ್ನಡ ಸಾಹಿತ್ಯ ಸಮೃದ್ಧವಾಗಲು ಕಾರಣರಾಗಿದ್ದಾರೆ. ಶ್ರೀ ಶಾಸ್ತ್ರಿಗಳ ದೀರ್ಘಕಾಲದ ತಪಸ್ಸಿನ ಫಲವಾಗಿ ಈ ಮಹಾಪುರಾಣ ಕನ್ನಡ ಭಾಷೆಯಲ್ಲಿ ರೂಪುಗೊಂಡಿದೆ.

ಜೈನಧರ್ಮ, ತತ್ವ, ಆಚಾರ ವಿಚಾರಗಳಿಗೆ ಸಂಬಂಧಿಸಿದಂತೆ ಶ್ರೀ ಶಾಸ್ತ್ರಿಗಳು ಹಲವು ಲೇಖನಗಳನ್ನು ಬರೆದಿದ್ದಾರೆ ; ಹತ್ತಾರು ಕಡೆ ಉಪನ್ಯಾಸ ನೀಡಿದ್ದಾರೆ ; ಆ ಮೂಲಕ ತಮ್ಮ ವಿಚಾರಧಾರೆಯನ್ನು ಜನಸಾಮಾನ್ಯರಿಗೆ ಮುಟ್ಟಿಸಿದ್ದಾರೆ. ಇದರ ಪ್ರಚಾರ, ಪ್ರಸಾರಕ್ಕಾಗಿ ಸ್ವತಃ ಪತ್ರಿಕೆಗಳನ್ನು ('ವಿಶ್ವಬಂಧು', 'ವಿವೇಕಾಭ್ಯುದಯ') ಪ್ರಕಟಿಸಿದ್ದಾರೆ. ಹಲವು ಗ್ರಂಥಗಳನ್ನು ಪರಿಶೋಧಿಸಿ ಬೆಳಕಿಸಿದ್ದಾರೆ. ಸುಮಾರು ಐವತ್ತು ಗ್ರಂಥಗಳು ಶ್ರೀ ಶಾಸ್ತ್ರಿಗಳ ಶ್ರಮದಿಂದ ಕನ್ನಡಿಗರಿಗೆ ಲಭ್ಯವಾಗಿವೆ. ಅವುಗಳಲ್ಲಿ 'ಜಿನಭಕ್ತಿಸಾರ'ವೂ ಒಂದು. 'ಶ್ರೀ ಚಂದ್ರಸಾಗರ ವಿರಚಿತವಾದ ಜಿನಭಕ್ತಿಸಾರವು ಎಂಬ ಗ್ರಂಥವು ಎ. ಶಾಂತಿರಾಜಶಾಸ್ತ್ರಿ ನ್ಯಾಯತೀರ್ಥ ಇವರುಗಳಿಂದ ಪರಿಶೋಧಿಸಲ್ಪಟ್ಟು ಹೆಚ್. ಪಿ. ಪದ್ಮರಾಜಯ್ಯನವರಿಗಾಗಿ' ಮುದ್ರಣಗೊಂಡಿದೆ ಎಂದು ಎರಡನೇ ಮುದ್ರಣ (೧೯೨೫)ದಲ್ಲಿ ಸೂಚಿಸಿದೆ. ಹಲವು ಗ್ರಂಥಗಳಂತೆ ಕಣ್ಮರೆಯಾಗುತ್ತಿದ್ದ ಈ ಗ್ರಂಥವನ್ನು ಹುಡುಕಿ ಪ್ರಕಟಿಸಿದ ಎ. ಶಾಂತಿರಾಜಶಾಸ್ತ್ರಿಗಳ ಶ್ರಮ ಸಾರ್ಥಕವಾಗಿದೆ.

ಹಲವು ಹಸ್ತಪ್ರತಿಗಳನ್ನು ತಾಳೆನೋಡಿ ಈ ಗ್ರಂಥವನ್ನು ಸಂಪಾದಿಸಿರುವಂತೆ ಕಾಣುವುದಿಲ್ಲ. ಕೇವಲ ಒಂದೇ ಹಸ್ತಪ್ರತಿಯಿಂದ ಸಂಪಾದಿಸಿರುವಂತೆ ಕಾಣುತ್ತದೆ. ಹಾಗಾಗಿ, ಅಪೂರ್ಣ ಪದ್ಯ, ಪದದೋಷ ಉಳಿದುಕೊಂಡಿರುವಂತಿದೆ. ಶ್ರೀ ಶಾಸ್ತ್ರಿಗಳಿಗೆ ಸಿಕ್ಕಿರುವ ಹಸ್ತಪ್ರತಿಯ ಶುದ್ಧತೆಯ ಬಗೆಗೂ ಅನುಮಾನ ಉಂಟಾಗುತ್ತದೆ. 'ಜಿನಭಕ್ತಿಸಾರ'ವನ್ನು ಇನ್ನಷ್ಟು ಹಸ್ತಪ್ರತಿಗಳ ಸಹಾಯದಿಂದ, ವೈಜ್ಞಾನಿಕವಾಗಿ ಸಂಪಾದಿಸುವುದು ಅಗತ್ಯ.

'ಜಿನಭಕ್ತಿಸಾರ' ಗ್ರಂಥವನ್ನು ಚಂದ್ರಸಾಗರವರ್ಣಿ ಎಂಬ ಕವಿ ಬರೆದಿದ್ದಾನೆ. ಇವನು ಜೈನ ಕವಿ. ಹತ್ತೊಂಬತ್ತನೇ ಶತಮಾನದಲ್ಲಿ ಜೀವಿಸಿದ್ದವನು. ಇವನು ಜಿನಭಾರತ, ಜಿನರಾಮಾಯಣ ಮೊದಲಾದ ಸುಮಾರು ಐವತ್ತು ಗ್ರಂಥಗಳನ್ನು ಬರೆದಿದ್ದಾನೆ. ಈ ಕವಿಗೆ ಗೃಹಸ್ಥಾಶ್ರಮದಲ್ಲಿ ಬ್ರಹ್ಮಣಾಂಕ, ಮುದ್ದುಬ್ರಹ್ಮ ಮೊದಲಾದ ಹೆಸರುಗಳು ಇದ್ದವು. ಕಾಲಕ್ರಮದಲ್ಲಿ ಇವನಿಗೆ ಸಂಸಾರದಲ್ಲಿ ವೈರಾಗ್ಯಹುಟ್ಟಿತು. ಕೊಲ್ಲಾಪುರದ ಚಂದ್ರಪ್ರಭ ಚೈತ್ಯಾಲಯದಲ್ಲಿ ದೀಕ್ಷೆ ಪಡೆದ. ದೀಕ್ಷೆ ನೀಡಿದ ಗುರು ಲಕ್ಷ್ಮಿಸೇನ. ದೀಕ್ಷೆಯ ಅನಂತರ

'ಚಂದ್ರಸಾಗರವರ್ಣಿ' ಎಂಬ ಯತ್ಯಾಶ್ರಮದ ಹೆಸರು ಪಡೆದು, ಸೇನಗಣದ ಪರಂಪರೆಯ ಮುನಿಯಾದ. ಇವನು ಚಂದ್ರಪ್ರಭ ತೀರ್ಥಂಕರ ಸ್ವಾಮಿಯ ಭಕ್ತ. ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕು, ತೋವಿನ ಕೆರೆ (ಧರ್ಮಪುರಿ, ಧವರ್ಳಾಖ್ಯಪುರಿ) ಕವಿಯ ಹುಟ್ಟೂರು. ಈ ಕವಿ ಜಿನದೀಕ್ಷೆ ಪಡೆದ ಮೇಲೆ 'ಜಿನಭಕ್ತಿಸಾರ' ಗ್ರಂಥವನ್ನು ಬರೆದಿರುವಂತೆ ಕಾಣುತ್ತದೆ. ಕನಕದಾಸ ವಿರಚಿತ 'ಹರಿಭಕ್ತಿಸಾರ', ಚಂದ್ರಸಾಗರವರ್ಣಿಯ 'ಜಿನಭಕ್ತಿಸಾರ' ಗ್ರಂಥಕ್ಕೆ ಸ್ಫೂರ್ತಿ ನೀಡಿದೆ.

'ಜಿನಭಕ್ತಿಸಾರ' ಗ್ರಂಥ ಹೆಸರೇ ಸೂಚಿಸುವಂತೆ ಜಿನಭಕ್ತಿಯ ಗುಣಗಾನಕ್ಕೆ ಮೀಸಲಾಗಿದೆ. ಇದು ಭಾಮಿನಿ ಷಟ್ಪದಿಯಲ್ಲಿ ರಚನೆಯಾಗಿದೆ. ಇದರಲ್ಲಿ ೧೦೮ ಪದ್ಯಗಳಿವೆ. ಎಲ್ಲ ಪದ್ಯಗಳೂ 'ರಕ್ಷಿಸನವರತ' ಎಂದು ಮುಕ್ತಾಯವಾಗುತ್ತವೆ. ಇದನ್ನು ಧವರ್ಳಾಖ್ಯಪುರದ ಚಂದ್ರಪ್ರಭನ ವರದಿಂದ ದೀಕ್ಷಾಗುರುವಾದ ಲಕ್ಷ್ಮೀಸೇನರ ಭಕ್ತಿಯಲ್ಲಿ ರಚಿಸಿದೆ ಎಂದಿದ್ದಾನೆ ಕವಿ. 'ಜಿನಭಕ್ತಿಸಾರ'ದಲ್ಲಿ ಜಿನಭಕ್ತಿಯ ಅಗತ್ಯ, ಲೌಕಿಕ ಜೀವನದ ತೊಂದರೆ, ಮನುಷ್ಯ ದೌರ್ಬಲ್ಯ, ಸದ್ಗತಿಯ ದಾರಿ, ಸ್ತ್ರೀ ವ್ಯಾಮೋಹದ ಅಪಾಯ ಮೊದಲಾದವುಗಳ ಬಗೆಗೆ ಚಿಂತನೆ ನಡೆದಿದೆ. ಶ್ರೀ ಚಂದ್ರನಾಥಸ್ವಾಮಿಯ ಸ್ತುತಿಯೊಡನೆ ಗ್ರಂಥ ಪ್ರಾರಂಭವಾಗಿದೆ.

ಲೌಕಿಕ ಭೋಗಭಾಗ್ಯಗಳಲ್ಲಿ ರಮಿಸುವ ಮನಸ್ಸನ್ನು ಆಧ್ಯಾತ್ಮಿಕದ ಕಡೆಗೆ ಹೊರಳಿಸಿ, ಸರ್ವಸ್ವವನ್ನೂ ಜಿನನಿಗೆ ಅರ್ಪಿಸಿ, ಬದುಕುವ ಅರ್ಪಣಾಭಾವ ಹೆಚ್ಚು ಪದ್ಯಗಳಲ್ಲಿ ನಿಚ್ಚಳವಾಗಿ ವರ್ಣನೆಯಾಗಿದೆ. ಜಿನನ ಮಹತ್ತು, ಬೃಹತ್ತು, ನೊಂದ ಜೀವಕ್ಕೆ ಸಂಜೀವಿನಿ ನೀಡುವ ಸಾಮರ್ಥ್ಯ ಹಲವು ರೀತಿಯಲ್ಲಿ ಮೂಡಿದೆ.

ಹಲವು ತೆರದೊಳು ತೊಳಲಿ ಬಳಲುವ
ಕಲಿ ಸಂಸಾರಗಳ ಭಾವನೆ
ಯೊಲುಮೆಯಾಗುವ ತೆರದಿ ಭಜಿಸಲು ನಿಮ್ಮ ನಾಮಗಳ
ನಿಲದು ದುರ್ಮನಕಳುಕಿ ಮೋಹಿನಿ
ಗೆಲಲಶಕ್ಯವದಾಗಿ ಕಷ್ಟದಿ
ನಿಲಯನಾದನು ಚಂದ್ರನಾಥನೆ ರಕ್ಷಿಸನವರತ ೪

ಕವಿ ತಾನು ಜಿನದರ್ಶನ ಪಡೆದುಕೊಳ್ಳುವುದರ ಜೊತೆಗೆ, ಜನಸಾಮಾನ್ಯರು ಜಿನಾನುಭವ ಗಳಿಸಲು ನಿತ್ಯ ಪಠನಕ್ಕೆ ಅನುಕೂಲವಾಗುವಂತೆ ಈ ಗ್ರಂಥವನ್ನು ರಚಿಸಿರುವಂತೆ ಕಾಣುತ್ತದೆ. ವಸ್ತುಪ್ರತಿಪಾದನೆ, ರಚನೆ, ಶಬ್ದ ಬಳಕೆಯಲ್ಲಿ ಶ್ರೀಸಾಮಾನ್ಯರ ಒಲವು ಪ್ರಧಾನವಾಗಿದೆ.

ಮನುಷ್ಯ ಕಾರಣಾಂತರಗಳಿಂದ ಹಲವು ಕ್ಲೇಶಗಳಿಗೆ ತುತ್ತಾಗುತ್ತಾನೆ. ಅದರ ಬಿಡುಗಡೆಗೆ ದೈವ ಶರಣಾಗತಿ ಏಕೈಕ ಮಾರ್ಗ. ನಿರ್ಮಲವಾದ ಮನಸ್ಸು ಇಲ್ಲದಿದ್ದರೆ ಬದುಕು ನರಕ ಸದೃಶವಾಗುತ್ತದೆ, ಸ್ವಚ್ಛ ಮನಸ್ಸಿಗಾಗಿ ಕವಿ ಹೀಗೆ ಪ್ರಾರ್ಥಿಸಿದ್ದಾನೆ :

ಕಾಲದೋಷವೊ ಮೇಣು ಕರ್ಮದ
ಜಾಲ ನಡತೆಯೊ ಕುಟಿಲ ಮನಸಿನ
ಲೀಲೆಯೊ ಲೋಕರಿಗೆ ಸಹಜವೊ ಎನ್ನ ನಡವಳಿಯು
ಮೇಲಣಾಖ್ಯವೊ ನಿಮಿಷ ನಿರ್ಮಳ
ಕಾಲಗಾಣದೆ ತೊಳಗುತಿಹ ಮನ
ಕಾಲಯುವು ನೀನಾಗಿ ರಕ್ಷಿಸು ನಮ್ಮನನವರತ- ೭

ಒಮ್ಮೊಮ್ಮೆ ಮನಸ್ಸಿನ ಹಿತ ಯಾವುದು ? ಅಹಿತ ಯಾವುದು ? ಎಂಬುದು ತಿಳಿಯುವುದಿಲ್ಲ. ಹಿತವನ್ನು ಗ್ರಹಿಸುವುದೇ ಜಾಣ್ಮೆಯ ಲಕ್ಷಣ. ಮುಕ್ತಿಗೆ ಪೂರಕವಾಗುವ ವಿಷಯಗಳ ಮನನ ಅಗತ್ಯ. ಉಳಿದವುಗಳಿಂದ ದೂರವಿರುವುದು ಕ್ಷೇಮ. ಇತರರಲ್ಲಿ ದೋಷ ಹುಡುಕುವುದಕ್ಕಿಂತ ತನ್ನಲ್ಲಿರುವ ದೋಷಗಳನ್ನು ಅರಿತು ತಿದ್ದಿಕೊಳ್ಳುವುದು ಮುಖ್ಯ. ಸನ್ಮಾರ್ಗದಲ್ಲಿ ನಡೆಯಲು ದೇವರು, ಗುರು, ಶಾಸ್ತ್ರಗಳನ್ನು ಆಶ್ರಯಿಸಬೇಕು. ಮನುಷ್ಯರಲ್ಲಿ ಕಂಡುಬರುವ ಸಹಜ ಪ್ರವೃತ್ತಿಗಳು ಅಥವಾ ದೋಷಗಳು ಸುರರಲ್ಲೂ ಇತರ ಪ್ರಾಣಿ ಸಮುದಾಯಗಳಲ್ಲೂ ಉಂಟು. ಅವುಗಳ ವಿವರ ಹೀಗಿದೆ :

ಜರೆ ಜನನ ಮದ ರಾಗ ಸ್ವೇದವು
ಮರಣ ಕ್ಷುಧೆ ತೃಷೆ ರೋಗ ಮೋಹವು
ನಿರುತ ವಿಸ್ಮಯ ನಿದ್ರೆ ಖೇದವು ಖತಿಯು ಚಿಂತೆಗಳು
ವಿರಹ ವಿಷಯವು ಭಯಗಳೆಂಬವು
ಸುರನರಾದಿಗಳಲ್ಲಿ ದೋಷವು
ಹರಿಸಿರುವನವ ದೇವ ರಕ್ಷಿಸಲೆಮ್ಮನನವರತ. ೧೫

ಮನುಷ್ಯ ಜೀವನ ವಿಶಿಷ್ಟವಾದುದು ; ವಿಚಿತ್ರವಾದುದು. ನರಜೀವಿಗಳಿಗೆ ಹರ್ಷ ವಿರಸ ಉಂಟು. ಎಲ್ಲ ರೀತಿಯ ಅನುಭವವೂ ಈ ಜನ್ಮದಲ್ಲಿ ಆಗುತ್ತದೆ. ಲೌಕಿಕ ಸುಖಕ್ಕಿಂತ ಸಗ್ಗದ ಸುಖ ಕವಿಗೆ ಇಷ್ಟ. ಲೌಕಿಕ ಸುಖದಿಂದ ದೂರವಾದಷ್ಟೂ ಸ್ವರ್ಗ ಸುಖ ಹತ್ತಿರವಾಗುತ್ತದೆ. ಆದಕ್ಕಾಗಿ ಮನಸ್ಸಿನ ಸಿದ್ಧತೆ ಅಗತ್ಯ. ಜನ್ಮಾಂತರದಲ್ಲಿ ನಂಬಿಕೆ ಇರುವ ಈ ಕವಿಗೆ ಅರ್ಹಂತನನ್ನು ಭಜಿಸಿದರೆ ಅನಂತನಾಗುವ ನಂಬಿಕೆ. ಶ್ರೀ ಜಿನನೇ ಸರ್ವಸ್ವ ಎಂದು ಭಾವಿಸಿದ ಕವಿ, ಲೌಕಿಕ ಆಸೆಗಳಿಂದ ದೂರಬಂದು, ಪಾಪಪುಣ್ಯಗಳ ಅರಿವು ಪಡೆದು, ಜ್ಞಾನದ

ಕಡೆಗೆ ಮನಸ್ಸು ಹರಿಯಲು, ಜಿನನನ್ನು ಅರಿಯಲು ಹೀಗೆ ಹಾಡಿದ್ದಾನೆ.

ಧ್ಯಾನವಿಲ್ಲದ ಯೋಗಿ ಪತಿವ್ರತ
ಹೀನ ಮಾನಿನಿ ಸರಸ ಕವಿತ ವಿ
ಧಾನ ವಿಲ್ಲದ ಕವಿಯು ಧರ್ಮವಗರೆಯದಿಹ ಜನರು
ಮಾನವಿಲ್ಲದ ಮನ ಸುವ್ರತಗಳ
ನಾನದಂಗೆ ನಿರರ್ಥವಲ್ಲದ
ಲೇನು ಪಡದೇನರುಹ ರಕ್ಷಿಸು ನಮ್ಮನನವರತ. ೭೯

ಭಕ್ತಿ ವೈಯಕ್ತಿಕ. ಬಲ್ಲಂತೆ ಭಜಿಸುವುದೇ ಭಕ್ತರ ಕಾಯಕ. ಚಂದ್ರಸಾಗರವರ್ಣಿಯೂ ಇದಕ್ಕೆ ಹೊರತಲ್ಲ. 'ನಾಮ ಸಾಸಿರದೆಂಟು ಸಹಜದೊಳಾ ಮಹಾಸ್ತೋತ್ರದಲಿ ಬಲ್ಲನಿತಾ ಮನೋಹರದಿಂದ ಭಜಿಸುವೆ ಭಕ್ತವತ್ಸಲನೆ' ಎಂದಿದ್ದಾನೆ. ಸಂಸಾರ ನೀರಸ. ಅದನ್ನೇ ಜನ ಇಷ್ಟಪಡುತ್ತಾರೆ. ಇದು ಕೂಡದು. ಇದಕ್ಕಿಂತಲೂ ಶ್ರೇಷ್ಠವಾದ ದೈವ ಸಾಕ್ಷಾತ್ಕಾರವನ್ನು ಜನ ಒಲಿಯಬೇಕು ಎಂಬುದು ಕವಿಯ ಆಸೆ. ಮುಕ್ತಿಪ್ರಾಪ್ತಿಗಾಗಿ ಕವಿ ಹೀಗೆ ಬೇಡಿದ್ದಾನೆ:

ಬಾಳಿದೆನು ಇದುವರಿಗೆ ಮಾಯದ
ಬಾಳುವೆಯನತಿ ಹಿಂಸೆಯೊಳು ಸುಖ
ವಾಳುವಂದದಿ ಜ್ಞಾನಹೀನದೊಳಿನ್ನು ಯಿದರೊಳಗೆ
ತಾಳಲಾರೆನು ತೆಗೆದು ಮುಕ್ತಿಲಿ
ಹೂಳು ಹೂಳಲ್ಲದಲೆ ನಿನ್ಬಿಡು
ವಾಳು ನಾನಲ್ಲೆಂದು ರಕ್ಷಿಸುದೇವನನವರತ. ೯೩

ಹೀಗೆ ಕವಿ ಜಿನಭಕ್ತಿಯ ಹಿನ್ನೆಲೆಯಲ್ಲಿ ತನ್ನ ಲೋಕಾನುಭವವನ್ನು ಹಾಡಾಗಿಸಿದ್ದಾನೆ. ಕೊನೆಯ ಪದ್ಯಗಳಲ್ಲಿ ಸ್ವವಿಷಯ ಪ್ರಸ್ತಾಪಿಸಿದ್ದಾನೆ. ಈ ಗ್ರಂಥದ ಪಠನದಿಂದ ಆಗುವ ಉಪಯೋಗವನ್ನು ಸಾಂಪ್ರದಾಯಿಕವಾಗಿ ತಿಳಿಸಿದ್ದಾನೆ.

ಚಂದ್ರಸಾಗರವರ್ಣಿಯ ಕಾವ್ಯಶೈಲಿ ಸಾಮಾನ್ಯವಾದದ್ದು. ಈ ಕವಿಗೆ ಸ್ವತಂತ್ರ ಪ್ರವೃತ್ತಿ ಜಾಸ್ತಿ, ಸ್ವೇಚ್ಛಾ ಪ್ರವೃತ್ತಿಯೂ ಉಂಟು. ಇದರಿಂದ ಕಾವ್ಯ ರಚನೆಯಲ್ಲಿ ಲಾಭಕ್ಕಿಂತ ನಷ್ಟವೇ ಹೆಚ್ಚಾಗಿದೆ. ಭಾಷಾ ಶಾಸ್ತ್ರದ ಹಿನ್ನೆಲೆಯಲ್ಲಿ ಅಭ್ಯಾಸ ಮಾಡಲು ಯೋಗ್ಯನಾದ ಕವಿ ಈತ. ಡಾ|| ಹಂಪನಾಗರಾಜಯ್ಯನವರು "ಚಂದ್ರಸಾಗರವರ್ಣಿಯ ಕೃತಿಗಳು" (ಕ.ಸಾ.ಪ ಪ್ರಕಟಣೆ ೧೯೮೧) ಗ್ರಂಥದ 'ಪೀಠಿಕೆ'ಯಲ್ಲಿ ಈ ಕವಿಯ ಕಾವ್ಯ ಶಕ್ತಿಯ ಇತಿಮಿತಿಗಳ ಬಗೆಗೆ ಬರೆದಿರುವುದನ್ನು ಗಮನಿಸಬಹುದು.

ಚಂದ್ರಸಾಗರವರ್ಣಿ ತನ್ನ ಗ್ರಂಥದಲ್ಲಿ ಹಲವು ರೂಪಕಗಳನ್ನು ಕಲ್ಪಿಸಿದ್ದಾನೆ. ಆದರೆ ಇವುಗಳನ್ನು ಧ್ವನಿ ಪೂರ್ಣವಾಗಿ, ಅರ್ಥವತ್ತಾಗಿ ಬಳಸಿಕೊಂಡಿಲ್ಲ. ಒಂದೆರಡನ್ನು ಬಿಟ್ಟರೆ ಉಳಿದವು ಸಾಧಾರಣ ಮಟ್ಟದ ಸಾಂಪ್ರದಾಯಿಕ ರೂಪಕಗಳಾಗಿವೆ. ನೀತಿಬೋಧೆ ಪ್ರಧಾನವಾಗಿರುವ 'ಜಿನಭಕ್ತಿಸಾರ'ದಲ್ಲಿ ರೂಪಕಗಳ ಧ್ವನಿ ಪ್ರಚುರತೆಗೆ ಇತಿಮಿತಿಗಳಿವೆ.

ಚಂದ್ರಸಾಗರವರ್ಣಿ ಆಡುಮಾತುಗಳನ್ನು ವಿಶೇಷವಾಗಿ ಬಳಸುತ್ತಾನೆ. ಒಟ್ಟು ಶೈಲಿಯಲ್ಲಿ ಹಿತವಾಗಿ ಕಾಣದಿದ್ದರೂ ಕವಿಗೆ ಈ ಶೈಲಿ ಪ್ರಿಯವಾಗಿರುವಂತೆ ಕಾಣುತ್ತದೆ. 'ಜಿನಭಕ್ತಿಸಾರ'ದಲ್ಲಿ ಬಳಕೆಯಾಗಿರುವ ಕೆಲವು ಆಡುಮಾತುಗಳು ಹೀಗಿವೆ: ಕಾಯ್ಲಿ (ಕಾಯಲಿ), ರಕ್ಷಿಸಲಿ), ಜಿಷ್ಣು (ವಿಷ್ಣು), ಪುಣ್ಯಲದೆ (ಪುಣ್ಯವಲ್ಲದೆ), ಮುಕ್ತಿಲಿ (ಮುಕ್ತಿಯಲ್ಲಿ), ನಿನ್ಬಿಡು (ನಿನ್ನನ್ನು ಬಿಡು) ಇರಲ್ಯಾಕೆ (ಇರಲು ಯಾಕೆ).

'ಜಿನಭಕ್ತಿಸಾರ'ದಲ್ಲಿ ಅನುಭವ ಶ್ರೀಮಂತಿಕೆಯಿಂದ ಕೂಡಿದ ಕೆಲವು ಸೂಕ್ತಿಗಳು ಮೂಡಿವೆ. ಉದಾ: 'ಧ್ಯಾನ ಹೀನದೊಳೇನ ಗೈದರು ನೂನ,' 'ಜ್ಞಾನವೆಂಬುದೆ ಮುಕ್ತಿ ಬೀಜ,' 'ಒಲುಮೆಯಲ್ಲಕೆ ನಿಮ್ಮ ನಾಮಗಳೆ ಸಾಕು,' 'ದೇವಗುರು ಶಾಸ್ತ್ರಗಳೆ ಮುಕ್ತಿಯ ಕಾವಿಸುವವು.'

ಚಂದ್ರಸಾಗರವರ್ಣಿಗೆ ಶುದ್ಧಪದಗಳ ಸೃಷ್ಟಿ ಮತ್ತು ಬಳಕೆಯ ಬಗೆಗೆ ಎಚ್ಚರ ಕಡಮೆ ಅಥವಾ ಸ್ವೇಚ್ಛಾ ಪ್ರವೃತ್ತಿ ಹೆಚ್ಚು. ಕಾವ್ಯ ಬಂಧದಲ್ಲಿ ಪದ ಬಳಕೆಯ ಶಿಸ್ತನ್ನು ಕವಿ ಚೆನ್ನಾಗಿ ರೂಢಿಸಿಕೊಂಡಿಲ್ಲ. ಹಾಗಾಗಿ ಅಶುದ್ಧ ಪದಗಳ ಬಳಕೆ ಅತಿಯಾಗಿದೆ. ಮೂಲ ಹಸ್ತಪ್ರತಿಯಿಂದ ಪ್ರತಿಮಾಡುವಾಗಲೂ ಈ ಅಶುದ್ಧ ರೂಪಗಳು ಸೇರಿಕೊಂಡಿರಬಹುದು. ಕೆಲವು ಉದಾಹರಣೆಗಳನ್ನು ನೋಡಬಹುದು: ಸುಖಿ ಸಂಪಾದ್ಯ, ಅನದಲೆ (ಅನ್ನದಲೆ), ಕಾವಿಸು (ಕಾಣಿಸು), ತಹಕ (ತವಕ ?), ನಾನದಂಗೆ, ಉಪಮೆಲಿ (ಉಪಮೆಯಲ್ಲಿ), ಇತ್ಯಾದಿ.

ಚಂದ್ರಸಾಗರವರ್ಣಿಯ ಎಲ್ಲ ಕೃತಿಗಳ ಹಿನ್ನೆಲೆಯಲ್ಲಿ ಅಭ್ಯಾಸ ಮಾಡಿದರೆ ಕವಿಗೆ ಸಂಬಂಧಿಸಿದಂತೆ ಹಲವು ಸ್ವಾರಸ್ಯಕರವಾದ ವಿಷಯಗಳು ತಿಳಿಯುತ್ತವೆ. ಚಂದ್ರಸಾಗರವರ್ಣಿ ಜನಸಾಮಾನ್ಯರಿಗೆ ಹತ್ತಿರವಾಗುವ ಕವಿ. ಜಿನಭಕ್ತಿಸಾರ ಜಿನಭಕ್ತರಿಗೆ ಪ್ರಿಯವಾಗುವ ಗ್ರಂಥ. ○

ನಾರೀ ಕರ ದರ್ಪಣ: ಒಂದು ಪರಿಶೀಲನೆ

— ಡಾ॥ ವಿಜಯ ದಬ್ಬೆ, ಮೈಸೂರು.

ಸ್ತ್ರೀಯರನ್ನು ಕುರಿತ, ಸ್ತ್ರೀಸಂಬಂಧಿಯಾದ ಕೆಲವು ವಿಷಯಗಳನ್ನು ಸರಳವಾಗಿ, ಸ್ಪಷ್ಟವಾಗಿ ಹೇಳುವ ಪುಸ್ತಿಕೆ ಎರ್ತೂರು ಶಾಂತಿರಾಜಶಾಸ್ತ್ರಿಗಳ 'ನಾರೀ ಕರ ದರ್ಪಣ'. 1943ರಲ್ಲಿ ಮೊದಲ ಮುದ್ರಣ ಕಂಡ ಈ ಪುಸ್ತಿಕೆ ಹದಿಮೂರು ಕಿರು ವಿಭಾಗಗಳಲ್ಲಿ ಮಹಿಳೆಯರ ಬದುಕಿಗೆ ಸಂಬಂಧಿಸಿದ ಅನೇಕ ಸಂಗತಿಗಳನ್ನು ನಿರೂಪಿಸಿದೆ. ಈ ಕಿರು ಹೊತ್ತಿಗೆಯಲ್ಲಿ ನನ್ನ ಗಮನಕ್ಕೆ ಬಂದ ಕೆಲವು ರಚನಾತ್ಮಕ ಅಂಶಗಳನ್ನು ಇಲ್ಲಿ ಪ್ರಸ್ತಾಪಿಸುತ್ತೇನೆ.

ಪಂಪನಲ್ಲಿ ಸರಸ್ವತಿ ಅಂಬಿಕೆಯಾಗಿದ್ದರೂ ಸಾಮಾನ್ಯ ಬದುಕಿನಲ್ಲಿ ನಮ್ಮ ಅಂಬಿಕೆಯರು ಸರಸ್ವತಿಯ ಬಳಿ ಸುಳಿಯುವ ಹಾಗಿರಲಿಲ್ಲ. 'ಶ್ರೀದೇವಿ'ಯಂತೆ ಶಾಸ್ತ್ರಗಳನ್ನು 'ಮನಮೊಲ್ದು ಸಾಧಿಸು'ತ್ತಿದ್ದರೂ 'ವಿಜಯಕುಮಾರಿ ಚರಿತೆ'ಯ ವಿಜಯಕುಮಾರಿಯಂಥವರೂ ತಮ್ಮ ಗುರುಗಳಿಂದ 'ಮಾವಿನ ಪೂವು ಮಂಜಿಗೆ ಕೆಡುವಂದದಿ ಭಾವಕಿಯರ ನೋಟವಿಷಕೆ। ತೀವಿದ ವ್ರತ ಕೆಡುವುದು ಯತಿಜನಕಮ್ಮ ಕೋವಿದೆ ನೀ ಬರಬೇಡ' ಎನಿಸಿಕೊಳ್ಳಬೇಕಾಗುವ ಸಾಮಾಜಿಕ ಸಂದರ್ಭ ನಮ್ಮಲ್ಲಿ ಇತ್ತು. ಆಕೆಯ ಸ್ವಾಧ್ಯಾಯಕ್ಕೆ ಅನುಕೂಲವಾಗುವಂತೆ ವಿಜಯಕುಮಾರಿಯ ತಂದೆ ಬೇರೊಂದು ಮಂಟಪವನ್ನು ಕಟ್ಟಿಕೊಟ್ಟಂತೆ ಎಷ್ಟು ಜನಕ್ಕೆ ತಮ್ಮ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸದ ಅನುಕೂಲಗಳನ್ನು ಹಾಗೆ ಕಲ್ಪಿಸಿಕೊಡುವ ಅವಕಾಶವಿತ್ತು? ಮನಸ್ಸಿತ್ತು? ಅಂತೆಯೇ ಶ್ರೀದೇವಿಯ ಶಕ್ತಿಯಿದ್ದ ಎಷ್ಟೋ ವಿಜಯಕುಮಾರಿಯರ ಶಿಕ್ಷಣಾಸಕ್ತಿ, ಪ್ರತಿಭೆಗಳು ಚಿಗುರೊಡೆಯದೆ, ಹೇಳಹೆಸರಿಲ್ಲದಂತೆಹೋದವು. ಈ ಪರಿಸ್ಥಿತಿ ನಲವತ್ತಾರು ವರ್ಷಗಳ ಹಿಂದೆ ಶಾಸ್ತ್ರಿಗಳು 'ನಾರೀ ಕರ ದರ್ಪಣ'ವನ್ನು ಬರೆಯುವಾಗಲೂ ಉಳಿದಿತ್ತು. ಈಗಲೂ ಉಳಿದಿದೆ. ಇಂಥ ಪರಿಸ್ಥಿತಿಯಿಂದ ಸಮಾಜ ಮುಕ್ತವಾಗಬೇಕೆಂಬ ಅಭಿಪ್ರಾಯವುಳ್ಳ ಶಾಸ್ತ್ರಿಗಳು ಸ್ತ್ರೀವಿದ್ಯಾಭ್ಯಾಸದ ಬಗ್ಗೆ ಇಲ್ಲಿ ಮುಂದಿಟ್ಟಿರುವ ವಿಚಾರಗಳು ಅಂದಿನಂತೆ ಇಂದಿಗೂ ಪ್ರಸ್ತುತವಾಗಿವೆ. 'ಹೆಣ್ಣು ಮಕ್ಕಳು ತಮ್ಮ ಬಾಲ್ಯವನ್ನು ವಿದ್ಯಾವ್ಯಾಸಂಗದಲ್ಲಿಯೇ ಕಳೆಯುವುದಕ್ಕೆ ತಾಯಿತಂದೆಗಳು ಅನುಕೂಲತೆಯನ್ನು ಒದಗಿಸಬೇಕು. ಕೆಲವರು ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಗಮನ ಕೊಡುವುದಿಲ್ಲ. ಅದು ಸರಿಯಲ್ಲ. ಪಾರಮಾರ್ಥಿಕ ವಿಷಯವನ್ನು ಒತ್ತಟ್ಟಿಗಿಟ್ಟು ವ್ಯಾವಹಾರಿಕ ವಿಷಯವನ್ನು ಕುರಿತು ವಿಚಾರ ಮಾಡುವಾಗಲೂ ಗೃಹಜೀವನವೆಂಬ ಗಾಡಿಯು ಸರಿಯಾಗಿ ನಡೆಯಬೇಕಾದರೆ ಸ್ತ್ರೀ ಪುರುಷರೆಂಬ ಚಕ್ರಗಳೆರಡೂ ಸರಿಯಾಗಿರಬೇಕು. ಹಾಗಿಲ್ಲದೆ ಹೋದರೆ ಅಪಾಯವು ಸಂಭವಿಸಬಹುದು'. ಆ ಕಾಲದ ಅನೇಕರಂತೆ ಶಾಸ್ತ್ರಿಗಳೂ ಕುಟುಂಬ ಜೀವನದ ಹಾಗೂ ಮಕ್ಕಳ ಕಲ್ಯಾಣವನ್ನು ಗಮನದಲ್ಲಿಟ್ಟುಕೊಂಡು ಸ್ತ್ರೀವಿದ್ಯಾಭ್ಯಾಸದ ಅಗತ್ಯವನ್ನು ಪ್ರತಿಪಾದಿಸಿದರು. ಆಧುನಿಕ ಕಾಲದ ಈ ಮೊದಲ ಹಂತಗಳಲ್ಲಿ ಸ್ತ್ರೀ ವಿದ್ಯಾಭ್ಯಾಸಕ್ಕೆ ಕೊಟ್ಟ ಕಾರಣಗಳು ಏನೇ ಇರಲಿ ಸ್ತ್ರೀ ವಿದ್ಯಾಭ್ಯಾಸವನ್ನು ಬೆಂಬಲಿಸಿದ್ದು ಮುಖ್ಯವಾದ ಸಂಗತಿ. ಇಂಥ ಅನೇಕರ ಬೆಂಬಲ, ಒತ್ತಾಸೆಗಳಿಂದ ಹೆಚ್ಚುತ್ತಾ ಹೋಗುತ್ತಿರುವ ಸ್ತ್ರೀ ಶಿಕ್ಷಣದ ಅವಕಾಶಗಳಿಂದಾಗಿ ಮಹಿಳೆಯರು ಇಂದು ಹೊಸದೊಂದು ಯುಗವನ್ನು ಪ್ರವೇಶಿಸುವಂತಾಗಿದೆ. ಜ್ಞಾನದ ಬೆಳಕಿಗೆ ತಮ್ಮನ್ನು ಒಡ್ಡಿಕೊಳ್ಳುವಂತಾಗಿದೆ. ಸ್ತ್ರೀಯ ಎಲ್ಲ ಪ್ರಗತಿಗೂ ಈ ವಿದ್ಯಾಭ್ಯಾಸವೇ ಮೂಲವಾಗಿದೆ. ಸರಿಯಾದ ಶಿಕ್ಷಣವಷ್ಟೇ ಅವರು ಬದುಕಿನ ದುರಂತಗಳಿಂದ ತಪ್ಪಿಸಿಕೊಳ್ಳಲು ಪ್ರೇರಣೆ ನೀಡಬಲ್ಲುದಾಗಿದೆ. ಈ ದಿಕ್ಕಿನಲ್ಲಿ ಯೋಚಿಸು

ವಾಗ ಈ ಪುಸ್ತಿಕೆಯು ಸ್ತ್ರೀ ವಿದ್ಯಾಭ್ಯಾಸಕ್ಕೆ ಕೊಟ್ಟಿರುವ ಒತ್ತು ಅರ್ಥಪೂರ್ಣವಾಗಿದೆ.

ತಲೆಮಾರಿನಿಂದ ತಲೆಮಾರಿಗೆ ವಿಚಾರ, ನಂಬಿಕೆಗಳು ಬದಲಾದಂತೆಲ್ಲಾ ತಲೆಮಾರುಗಳ ನಡುವಿನ ಅಭಿಪ್ರಾಯಭಿನ್ನತೆಯೂ ಹೆಚ್ಚುತ್ತಾ ಹೋಗುತ್ತದೆ. ಒಬ್ಬ ಲೇಖಕ ತನ್ನ ಕಾಲದ, ತನ್ನ ವಿಚಾರ ನಂಬಿಕೆಗಳಿಗೆ ದನಿ ಕೊಟ್ಟಿರುತ್ತಾನೆ. ಆ ಎಲ್ಲ ಅಭಿಪ್ರಾಯಗಳೂ ಎಲ್ಲ ಕಾಲಕ್ಕೂ ಒಂದೇ ರೀತಿಯಲ್ಲಿ ಪ್ರಸ್ತುತವಾಗಬೇಕೆಂದು ನಾವು ಬಯಸಬಹುದು. ಆದರೆ ಹಾಗಾಗುವ ಸಂಭವ ಕಡಿಮೆ. ಆದರೆ ವಿಚಾರದ ಈ ಬಗೆಯ ಪ್ರಸ್ತುತತೆಯಷ್ಟೇ ಕೃತಿಯ ಮಹತ್ತ್ವವನ್ನು ಅಳಿಸುವುದಿಲ್ಲ. ಆ ಕಾಲದ ಮನೋಭಾವವನ್ನು ಅರಿಯುವಲ್ಲಿ ಅವು ಸಹಾಯ ಮಾಡುತ್ತದೆ. ಶಾಸ್ತ್ರಿಗಳು ಸ್ತ್ರೀಯರ ಉಡುಗೆ, ತೊಡುಗೆಯ ಬಗ್ಗೆಯೂ ಸ್ತ್ರೀಯರ ನಡಾವಳಿಗೆ ಸಂಬಂಧಿಸಿದಂತೆಯೂ ಹೇಳಿರುವ ಮಾತುಗಳನ್ನು ಮೇಲೆ ಸೂಚಿಸಿದ ದಿಕ್ಕಿನಲೇ ನೋಡುವುದು ಪ್ರಸ್ತುತವೆನಿಸುತ್ತದೆ. ಆ ಕಾಲಕ್ಕೆ ಸ್ತ್ರೀಯರು ಓರೆಬೈತಲೆ ತೆಗೆಯುವುದು, ಸೀರೆಯ ಸೆರಗಿಗೆ ಪಿನ್ ಹಾಕುವುದು ಸಿನೆಮಾಗಳಿಗೆ ಹೋಗುವುದು, ಬೀದಿಯಲ್ಲಿ ಒಂಟಿಯಾಗಿ ಹೋಗುವುದು ಕೂಡ ಶಿಷ್ಟಾಚಾರಕ್ಕೆ ದೂರವಾಗಿತ್ತು ಎಂಬುದನ್ನು ಶಾಸ್ತ್ರಿಗಳು ದಾಖಲಿಸುತ್ತಾರೆ.

"ಆರೋಗ್ಯ ರಕ್ಷಣೆ" ಎಂಬ ಶೀರ್ಷಿಕೆಯಡಿಯಲ್ಲಿ ಶಾಸ್ತ್ರಿಗಳು ಹೇಳಿರುವ ವಿಚಾರಗಳು ನಾಲ್ಕುದಶಕಗಳ ನಂತರ ಈಗಲೂ ಕಿಂಚಿತ್ತೂ ತಮ್ಮ ಪ್ರಸ್ತುತತೆಯನ್ನು ಕಳೆದುಕೊಳ್ಳುವುದಿಲ್ಲ. ಮನೆಯ ಒಳಗೆ ಮನೆಯ ಸುತ್ತ, ಆಹಾರದಲ್ಲಿ ಕಾಪಾಡಬೇಕಾದ ನೈರ್ಮಲ್ಯಾದಿಗಳು ನಮ್ಮ ಇಂದಿನ ಎಂದಿನ ಅಗತ್ಯ. ಆದ್ದರಿಂದ ಇಲ್ಲಿ ನಾವು ಕೈಬಿಡಬೇಕಾದ ವಿಚಾರಗಳೇನೂ ಇಲ್ಲ. ಆದರೆ ಸೇರಿಸಬೇಕಾದ ಒಂದು ಚಿಕ್ಕ ಮಾತಿದೆ. ಆಶೀರ್ವಚನದಲ್ಲಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಗಳು ಸರಿಯಾಗಿ ಹೇಳುವಂತೆ ಇಂದು 'ಆಧುನಿಕ ಮಹಿಳೆಯರ ಕಾರ್ಯವ್ಯಾಪ್ತಿ ವಿಶಾಲವಾಗುತ್ತಿದೆ. ಅಂತೆಯೇ ಅವರ ಹೊಣೆಗಾರಿಕೆಯೂ ಹೆಚ್ಚುತ್ತಿದೆ'. ಇಂಥ ಸಂದರ್ಭದಲ್ಲಿ ಮನೆಯ ಹೊರಗಿನ ದುಡಿಮೆಗೆ ಹೆಂಗಸು ಇಂದು ಹೆಗಲು ಕೊಟ್ಟಿರುವಂತೆ ಮನೆಯ ಆರೋಗ್ಯಕರ ವಾತಾವರಣವನ್ನು ಕಾಪಾಡುವಲ್ಲಿ ಗಂಡುಸು ಹೆಗಲು ಕೊಡುವುದು ಇಂದಿನ ತರ್ತು ಅಗತ್ಯಗಳಲ್ಲಿ ಒಂದಾಗಿದೆ.

ನಮ್ಮ ಹಿಂದಿನವರ, ಅದರಲ್ಲೂ ಸ್ತ್ರೀಯರ ಜೀವನಕ್ರಮ, ವಿಚಾರಗಳನ್ನು ವ್ಯವಸ್ಥಿತವಾಗಿ ತಿಳಿಯಲು ನಮ್ಮಲ್ಲಿ ಕ್ರಮವಾಗಿ ನಡೆದಿರುವ ದಾಖಲಾತಿಯ ಕೆಲಸ ತೀರ ಕಡಿಮೆ. ಇವತ್ತು ಎಷ್ಟೋ ರೂಢಿ-ವಿಚಾರಗಳು ಕಣ್ಮರೆಯಾಗುತ್ತಿವೆ! ಆಗಿವೆ. ಬದಲಾಗುತ್ತಿರುವ ಬದುಕಿನಲ್ಲಿ ಅದು ಸಹಜವೂ ಆಗಿದೆ. ಉಳಿದಿರುವುದನ್ನಾದರೂ ದಾಖಲುಗೊಳಿಸುವ ಅಗತ್ಯವಿದೆ. ಮುಖ್ಯವಾಗಿ ಎರಡು ಕಾರಣದಿಂದ ಇಂಥ ದಾಖಲಾತಿ ಅಗತ್ಯವಿದೆ: ಮೊದಲನೆಯದಾಗಿ ಆ ಜೀವನಕ್ರಮವನ್ನು ತಿಳಿಯಲು ಇವು ಸಹಾಯ ಮಾಡುತ್ತವೆ. ಎರಡನೆಯದಾಗಿ ಈ ರೂಢಿಗಳನ್ನು ಸೋಸಿ, ಒರೆಗೆ ಹಚ್ಚಿ ಇವತ್ತು ನಮಗೆ ಅಗತ್ಯವೆನಿಸುವಂಥವಿದ್ದರೆ ಅವುಗಳನ್ನು ಉಳಿಸಿಕೊಳ್ಳಬಹುದು. ಈ ಪುಸ್ತಿಕೆಯ 8, 9, 10ನೆಯ ವಿಭಾಗಗಳು ಈ ದೃಷ್ಟಿಯಿಂದ ಗಮನಾರ್ಹವಾಗಿವೆ. 7, 8, 9ನೆಯ ತಿಂಗಳುಗಳಲ್ಲಿ ಗರ್ಭಿಣಿಯರು ತೆಂಗಿನ ಎಳೆ ಹೊಂಬಾಳೆಯ ರಸವನ್ನು ಹಾಲಿನೊಂದಿಗೆ ಕುಡಿಯುವುದು, ಹುಟ್ಟಿದ ಮಗುವಿಗೆ ಕಸ್ತೂರಿ ಗೋರೋಜನವನ್ನು ದನದ ಹಾಲಿನಲ್ಲಿ ತೇದು ನೆಕ್ಕಿಸುವುದು, ಮಕ್ಕಳ ಶೀತ, ಕೆಮ್ಮು, ಮಲಬದ್ಧತೆ, ಜ್ವರ—ಮೊದಲಾದವುಗಳಿಗೆ ಹೇಳುವ ಮನೆಯ ಔಷಧೋಪಚಾರಗಳು ಇವೆಲ್ಲ ಕುತೂಹಲಕಾರಿಯಾದ ದಾಖಲೆಗಳು. ಈ ಬಗ್ಗೆ ತಿಳಿಯ ಬಯಸುವವರಿಗೆ ಇಂಥ ದಾಖಲೆಗಳು ತುಂಬ ಉಪಯುಕ್ತ.

ಶಾಸ್ತ್ರಿಗಳ ಜೀವನದ ಹಿನ್ನೆಲೆ, ಜೀವನ ಶೈಲಿಗಳನ್ನು ಗಮನಿಸಿದವರಿಗೆ ಅವರು ಪೂರ್ವಿಕರ ವಿಚಾರ, ನಡಾವಳಿಗಳನ್ನು ಬೆಂಬಲಿಸುವುದರಲ್ಲಿ, ಎತ್ತಿಹಿಡಿಯುವುದರಲ್ಲಿ ಅಸಹಜವಾದದ್ದೇನೂ ಕಾಣದಿರುವುದು ಸಹಜ. ಆದರೆ ಶಾಸ್ತ್ರಿಗಳ ವ್ಯಕ್ತಿತ್ವದಲ್ಲಿ ಹಿಂದಿನದನ್ನು ಗೌರವದಿಂದ ಕಾಣುವ ಗುಣವಿರುವಂತೆಯೇ ಅವುಗಳನ್ನು ಚಿಕಿತ್ಸಕ ಬುದ್ಧಿಯಿಂದ ಪರಿಶೀಲಿಸುವ ಗುಣವೂ ಇದೆ. ಕತ್ತಲ ಕೋಣೆಯಲ್ಲಿ ಮಗು—ಬಾಣಂತಿಯರನ್ನು ಇರಿಸುವುದನ್ನೂ, ಮಗು—ಬಾಣಂತಿಯರನ್ನು ಸುಡುವ ನೀರಿನಲ್ಲಿ ಸ್ನಾನ ಮಾಡಿಸುವುದನ್ನೂ ಶಾಸ್ತ್ರಿಗಳು ಖಂಡಿಸುತ್ತಾರೆ. ಮಕ್ಕಳಿಗೆ ಕೈಕಾಲು ಹಿಡಿದು ನಿರ್ಬಂಧದಿಂದ ಒಳಲೆಯಲ್ಲಿ ಹಾಲು ಕುಡಿಸುವ ವಿಧಾನವನ್ನು ಅವರು ಒಪ್ಪುವುದಿಲ್ಲ,

ಬದಲಿಗೆ 'ಸುಮಾರಾಗಿ ಬಿಸಿಯಾಗಿರುವ ಹಾಲನ್ನು ಸೀಸೆಗೆ ತುಂಬಿಸಿ ಅವರ ಬಾಯಿಗೆ ನಿಪ್ಪಲನಿಟ್ಟು ಚೀಪಿಸು ವುದೊಳ್ಳೆಯದು. ಆದರಿಂದ ಶಿಶುಗಳು ಬೇಕಾದಷ್ಟು ಹಾಲನ್ನು ಕುಡಿದು ಹೊಟ್ಟೆ ತುಂಬಿದಾಗ ತಾವಾಗಿ ಬಿಡುತ್ತವೆ' ಎನ್ನುತ್ತಾರೆ. ಹಲವು ವಿಚಾರಗಳಲ್ಲಿ ಶಾಸ್ತ್ರಿಗಳಿಗಿದ್ದ ಮುಕ್ತಮನಸ್ಸನ್ನು ಈ ಕೆಲವು ನಿದರ್ಶನಗಳು ತೆರೆದಿಡುತ್ತವೆ.

ಸಂಸಾರಿ ಜೀವಿಗಳಲ್ಲಿ ಸ್ತ್ರೀಲಿಂಗಿಗಳು ಪುಲ್ಲಿಂಗಿಗಳಿಗಿಂತ ಪಾಪಾಧಿಕ್ಯವುಳ್ಳವರು, ಉತ್ತರಜನ್ಮದಲ್ಲಿ ಸ್ತ್ರೀ ಪರ್ಯಾಯವನ್ನು ಬಿಟ್ಟು ಪುರುಷ ಪರ್ಯಾಯವನ್ನು ಪಡೆಯಲು ಸ್ತ್ರೀಯರು ಸತ್ಪ್ರಯತ್ನ ಮಾಡಬೇಕು, ಶುದ್ಧ ಧ್ಯಾನ ಪಡೆಯಲು ಸ್ತ್ರೀಯರಿಗೆ ಸಾಧ್ಯವಿಲ್ಲ–ಎಂಬಿವೇ ಮೊದಲಾದ ಅಭಿಪ್ರಾಯಗಳು ಶಾಸ್ತ್ರಿಗಳು ತಮ್ಮ ಪರಂಪರೆಯಿಂದ ಪಡೆದ ಅಭಿಪ್ರಾಯಗಳಾಗಿರುವುದರಿಂದ ಆ ಕುರಿತ ನನ್ನ ಅಭಿಪ್ರಾಯಗಳು ಬೇರೆಯಾಗಿದ್ದರೂ ಅದರ ಚರ್ಚೆಗೆ ಇದು ಸ್ಥಳವಲ್ಲ ಎಂದುಕೊಳ್ಳುತ್ತೇನೆ. ಈ ಅಂಶವನ್ನು ಬದಿಗಿಟ್ಟರೂ ಮೇಲೆ ಪ್ರಸ್ತಾಪಿಸಿದಂತೆ ಈ ಪುಸ್ತಿಕೆಯಲ್ಲಿ ಇಂದಿಗೂ ಪ್ರಸ್ತುತವಾಗುವ ಹಲವು ಅಂಶಗಳಿವೆ.

ಸಮತೆ

ಸಮಚಿತ್ತಮೆ ಪರಮ ಪದಂ । ಸಮಚಿತ್ತಮೆ ಸಕಲ ಸುಖದ ನಿಲಯಂ ಮತ್ತಂ
ಸಮಚಿತ್ತಮೆ ಮುಕ್ತಿ ಪಥಂ । ಸಮಚಿತ್ತದೆ ಕೂಡಿ ನೆಗಳ್ವ ತಪಮದು ಸಫಲಂ ॥

ಇಷ್ಟಾನಿಷ್ಟ ವಸ್ತುಗಳಲ್ಲಿ ಸಮಭಾವವೇ ಪರಮ–ಮೋಕ್ಷಪದವಿಯು. ಸಮಭಾವವೇ ಸಮಸ್ತ ಸುಖದ ವಾಸಸ್ಥಾನವು. ಸಮಭಾವವೇ ಮುಕ್ತಿಮಾರ್ಗವು. ಸಮಭಾವವುಳ್ಳವನಾಗಿ ಮಾಡುವ ತಪಸ್ಸು ಸಫಲವು.

ಸಮತೆಯದಿಲ್ಲದೆ ಯೋಗಂ । ಸಮನಿಸದದರಿಂದೆ ಸಮತೆವೇಳ್ಪುದು ಯೋಗಿ
ಸಮನಾಗಿ ನಡೆಯೆ ಯೋಗಂ । ಸಮನಿಸುಗುಂ ಸಮತೆ ಸಕಲ ಮೋಕ್ಷಾವಾಸಂ ॥

ಇಷ್ಟಾನಿಷ್ಟ ವಸ್ತುಗಳಲ್ಲಿ ಸಮಭಾವವಿಲ್ಲದಿದ್ದರೆ ಧ್ಯಾನವುಂಟಾಗದು. ಆದ್ದರಿಂದ ಯೋಗಿಯೇ ! ಸಮಭಾವವು ಬೇಕು. ಹಾಗೆ ಸಮಭಾವವುಳ್ಳವನಾಗಿ ವರ್ತಿಸಿದರೆ ಧ್ಯಾನವು ಪ್ರಾಪ್ತವಾಗುವುದು. ಸಮಭಾವವು ಸಮಸ್ತಮೋಕ್ಷದ ನೆಲೆವೀಡು.

ಸಮನಪ್ಪುದು ಸುಖದುಃಖದೆ । ಸಮನಪ್ಪುದು ಬಂಧುವೈರಿ ವರ್ಗದೆ ಪೆರತೇಂ ।
ಸಮನಪ್ಪುದು ಪೊನ್ಗಲ್ಲೊಳ್ । ಸಮನಪ್ಪುದು ಪುಣ್ಯಪಾಪದೊಳ್ಳೇಂ ಜೀವಾ ॥

ಎಲೈ ಜೀವನೇ ! ನೀನು ಸುಖದುಃಖಗಳಲ್ಲಿ ಸಮಭಾವನೆಯುಳ್ಳವನಾಗಿರಬೇಕು. ಬಂಧುವರ್ಗದಲ್ಲಿಯೂ ವೈರಿವರ್ಗದಲ್ಲಿಯೂ ಸಮಭಾವನೆಯುಳ್ಳವನಾಗಿರಬೇಕು. ಬೇರೇನು ? ಚಿನ್ನದಲ್ಲಿಯೂ ಕಲ್ಲಿನಲ್ಲಿಯೂ ಸಮಭಾವನೆಯುಳ್ಳವನಾಗಿರಬೇಕು. ಪುಣ್ಯಪಾಪಗಳಲ್ಲಿಯೂ ಸಮಭಾವನೆಯುಳ್ಳವನಾಗಿರಬೇಕು.

— ಯೋಗಾಮೃತ ಶತಕಂ

ಪಂಚಸ್ತೋತ್ರ-ಭಾವಪ್ರಕಾಶಿಕಾ

— ಪಂಡಿತ ಪ. ನಾಗರಾಜಯ್ಯ, ಮೈಸೂರು

ಭಾರತೀಯ ಸಾಹಿತ್ಯ ಪ್ರಪಂಚಕ್ಕೆ ಜೈನ ಸಾಹಿತ್ಯದ ಕೊಡುಗೆ ಅತಿಶಯವಾದುದು. ಭಗವಂತನ ಗುಣ ಕೀರ್ತನ ಮಾಡುವುದೇ ಸ್ತೋತ್ರದ ಉದ್ದೇಶ ಎಂಬ ಅಭಿಪ್ರಾಯವಿದೆ ; ಭಕ್ತ್ಯಾತ್ಮಕ ಪ್ರಕಾಶಕಗಳೆಂದೂ ಹೇಳಲಾಗುತ್ತದೆ ; ಸ್ತೋತ್ರವೆಂದರೆ ಇರುವ ಗುಣಗಳನ್ನು ಹೇಳುವುದು ಎಂದೂ ಹೇಳಲಾಗಿದೆ.

ಜೈನ ಮುನಿಗಳ ಆರು ಆವಶ್ಯಕ ಕ್ರಿಯೆಗಳಲ್ಲಿ ಚತುರ್ವಿಂಶತಿ ಸ್ತವವೂ ಒಂದಾಗಿದೆ. ಇದರಿಂದ ಮುನಿ ಸಂಘದ ವ್ಯವಸ್ಥೆಯು ಎಷ್ಟು ಪ್ರಾಚೀನವಾದುದೋ, ಅಷ್ಟೇ ಪ್ರಾಚೀನವಾದುದು ಈ ಸ್ತವ–ಸ್ತುತಿ–ಸ್ತೋತ್ರ ಪರಂಪರೆ. ಈ ಸ್ತೋತ್ರಗಳು ಸ್ವತಂತ್ರ ರಚನೆಗಳಾಗಿ ಮಾತ್ರವಲ್ಲದೆ, ಭಕ್ತಿಗಳ ರೂಪದಲ್ಲಿ ಪೂಜೆಗಳ ಜಯ ಮಾಲೆಗಳ ರೂಪದಲ್ಲಿ ಅನೇಕವಾಗಿ ದೊರೆಯುತ್ತವೆ. ಈ ಭಕ್ತಿಗಳ, ಜಯಮಾಲೆಗಳ ರೂಪದವನ್ನು ಹೊರತು ಪಡಿಸಿದರೂ ಐವತ್ತಕ್ಕೂ ಹೆಚ್ಚು ಸ್ತೋತ್ರಗಳನ್ನೇ ಗುರುತಿಸಬಹುದಾಗಿದೆ. ಇವು ಕಾವ್ಯಲಕ್ಷಣಗಳಿಂದ ಕೂಡಿ ಜೈನ ಸಾಹಿತ್ಯದಲ್ಲಿ ಗೀತ ಕಾವ್ಯದ ಸುಂದರ ಉದಾಹರಣೆಗಳಾಗಿವೆ. ಇವಲ್ಲದೆ ನೂರಕ್ಕೂ ಹೆಚ್ಚು ಸ್ತೋತ್ರಗಳು ಇರುವುದಾಗಿ ತಿಳಿಯುತ್ತದೆ.

ಈ ಸ್ತೋತ್ರಗಳಲ್ಲಿ ಕಾವ್ಯ ಪ್ರಧಾನವಾಗಿ, ಭಕ್ತಿ ಪ್ರಧಾನವಾಗಿ 'ಪಂಚಸ್ತೋತ್ರ' ಎಂದೇ ಪ್ರಸಿದ್ಧವಾಗಿರುವ ಐದು ಸ್ತೋತ್ರಗಳಿವೆ–ಅವೇ ಭಕ್ತಾಮರಸ್ತೋತ್ರ, ಕಲ್ಯಾಣ ಮಂದಿರ ಸ್ತೋತ್ರ, ಏಕೀಭಾವಸ್ತೋತ್ರ, ವಿಷಾಪಹಾರ ಸ್ತೋತ್ರ, ಜಿನಚತುರ್ವಿಂಶತಿಕಾ. ಭಕ್ತಾಮರ ಸ್ತೋತ್ರದ ಕರ್ತೃ ಮಾನತುಂಗಾಚಾರ್ಯ (೫–೬ ನೆಯ ಶತಮಾನ)ರು. ಪಂಚಸ್ತೋತ್ರಗಳಲ್ಲೇ ಬಹು ಲೋಕಪ್ರಿಯವಾಗಿರುವ ಇದು ಆದಿನಾಥ–ವೃಷಭ ತೀರ್ಥಂಕರರ ಸ್ತುತಿಯಾಗಿದೆ. ಇದರಲ್ಲಿ ೪೮ ಪದ್ಯಗಳು ಸಿಂಹೋನ್ನತಾ ಛಂದದಲ್ಲಿದೆ ; ತುಂಬ ಸುಂದರವಾದ ಉಪಮೆ, ರೂಪಕಗಳಿಂದ ಕೂಡಿದೆ. ಮಾನತುಂಗಾಚಾರ್ಯರು ಚಕ್ರೇಶ್ವರಿ ಮಹಾದೇವಿಯ ವರಪ್ರಸಾದದಿಂದ ಭೋಜರಾಜನಿಂದ ಬಂಧಮುಕ್ತರಾದ ಕಥೆ ಪ್ರಚಲಿತವಿದ್ದು ಇದು ಭಕ್ತಿಗೆ ಪ್ರೇರಕವೂ ಪೋಷಕವೂ ಆಗಿ ಪ್ರತಿಯೊಬ್ಬ ಶ್ರಾವಕನೂ ಇದನ್ನು ದಿನದಿನವೂ ಭಕ್ತಿಯಿಂದ ಪಠಿಸುವಂತೆ ಮಾಡಿದೆ. ಇಷ್ಟು ಜನಪ್ರಿಯವಾದ ಈ ಸ್ತೋತ್ರಕ್ಕೆ ೨೫ ಟೀಕೆಗಳಿರುವುದಾಗಿ ತಿಳಿಯುತ್ತದೆ. ಇದನ್ನು ಡಾ॥ ಯಾಕೋಬಿಯು ಸಂಪಾದಿಸಿ, ಜರ್ಮನ್ ಭಾಷೆಯಲ್ಲಿ ಅನುವಾದಿಸಿದ್ದಾನೆ. ಈ ಭಕ್ತಾಮರ ಸ್ತೋತ್ರಕ್ಕೆ ಸರಿಹೊಂದುವ, ಇಷ್ಟೇ ಜನಪ್ರಿಯವಾದ ಸ್ತೋತ್ರ ಕಲ್ಯಾಣ ಮಂದಿರ ಸ್ತೋತ್ರ. ಇದರ ಕರ್ತೃ ಕುಮುದಚಂದ್ರ ; ಸಿದ್ಧಸೇನ ದಿವಾಕರ (ಸು. ೬ ನೆಯ ಶತಮಾನ) ರ ಇನ್ನೊಂದು ಹೆಸರೇ ಇದಾಗಿರಬೇಕೆಂದು ಕೆಲವರು ತಿಳಿಯುತ್ತಾರೆ. ಕವಿಯು ಇದರಲ್ಲಿ ಪಾರ್ಶ್ವನಾಥನನ್ನು ಸ್ತುತಿಸಿ ಪದ್ಮಾವತಿ ಮಹಾದೇವಿಯ ವರಪ್ರಸಾದದ ಮಾಹಾತ್ಮ್ಯದಿಂದ ಪಾಂಡುರೋಗದ ಆಪತ್ಪರಿಹಾರವಾಗಿ ಬಂಗಾರದಂತೆ ಶರೀರವುಳ್ಳವನಾಗಿ ರಾಜಪೂಜಿತನಾದ ಕಥೆ ಇದರ ಜನಪ್ರಿಯತೆಗೆ ಕಾರಣವಾಗಿದೆ. ಇದರಲ್ಲಿ ೪೫ ಪದ್ಯಗಳಿವೆ. ಇದರ ಮೇಲೂ ಸು. ೨೫ ಟೀಕೆಗಳೂ ಛಾಯಾಸ್ತೋತ್ರಗಳೂ ಇರುವುದಾಗಿ ತಿಳಿಯುತ್ತದೆ. ಡಾ॥ ಯಾಕೋಬಿಯು ಇದನ್ನೂ ಸಂಪಾದಿಸಿ, ಜರ್ಮನ್ ಭಾಷೆಯಲ್ಲಿ ಅನುವಾದಿಸಿದ್ದಾನೆ. ವಿಷಾಪಹಾರ ಸ್ತೋತ್ರವನ್ನು ಧನಂಜಯ ಕವಿ (೭–೮ ನೆಯ ಶತಮಾನ) ರಚಿಸಿದ್ದಾನೆ. ಇದರಲ್ಲಿ ೪೦ ಪದ್ಯಗಳಿವೆ. ಹೆಸರೇ ಸೂಚಿಸುವಂತೆ ವಿಷ ನಿವಾರಣಾರ್ಥವಾಗಿ ಕವಿಯು ರಚಿಸಿದ ಸ್ತೋತ್ರವಾಗಿದೆ. ಇದರ ಮೇಲೆ ೨ ಟೀಕೆಗಳಿರುವುದಾಗಿ ತಿಳಿಯುತ್ತದೆ. ಏಕೀಭಾವ

ಸ್ತೋತ್ರವನ್ನು ವಾದಿರಾಜ ಕವಿ (೧೧ನೆಯ ಶತಮಾನ) ರಚಿಸಿದ್ದಾನೆ. ಇದರಲ್ಲಿ ೨೬ ಮಂದಾಕ್ರಾಂತ ಪದ್ಯಗಳಿವೆ. ಇದರಲ್ಲಿ ಭಕ್ತನ ಮನ ವಚನ ಕಾಯಗಳನ್ನು ಸ್ವಸ್ಥ ಮತ್ತು ಶುದ್ಧಗೊಳಿಸುವ ತೀರ್ಥಂಕರರ ವಿಶೇಷ ಗುಣ ಗಳನ್ನು ಸ್ತುತಿರೂಪದಿಂದ ವಿವರಿಸಿದೆ. ಈ ಸ್ತೋತ್ರದ ಮೇಲೆ ೩ ಟೀಕೆಗಳಿವೆ. ಜಿನ ಚತುರ್ವಿಂಶತಿಕಾ ಸ್ತೋತ್ರ ವನ್ನು ಭೂಪಾಲ ಕವಿ ರಚಿಸಿದ್ದಾನೆ. ಇದರಲ್ಲಿ ೨೬ ವಿವಿಧ ವೃತ್ತಗಳಿವೆ. ಇವೆಲ್ಲವೂ ಜಿನೇಂದ್ರ ಗುಣಸ್ತುತಿ ಗಳಾಗಿವೆ.

ಹೀಗೆ ಭಕ್ತಿಪ್ರಧಾನವೂ ಫಲಪ್ರದವೂ ಆದ ಈ ಸ್ತೋತ್ರಗಳನ್ನು ಶಾಸ್ತ್ರಿಗಳು ಕನ್ನಡದಲ್ಲಿ ಕೊಟ್ಟ ಕಾರಣವನ್ನು ಅವರ ಮಾತುಗಳಲ್ಲೇ ನೋಡಿ. "ಈ ಪಂಚ ಸ್ತೋತ್ರಗಳು ನಮ್ಮ ಜೈನಮತಸ್ಥರಿಗೆಲ್ಲಾ ಬಹಳ ಪೂಜ್ಯವಾದವುಗಳಾಗಿವೆ. ಅನೇಕರು ಬಹಳ ಶ್ರದ್ಧೆಯಿಂದ ಪ್ರತಿನಿತ್ಯವೂ ಪಠನ ಮಾಡುತ್ತಾರೆ. ಅನೇಕರು ಇದರಿಂದುಂಟಾಗುವ ಫಲವನ್ನು ಪಡೆದಿರುತ್ತಾರೆ. ಭಕ್ತಿ ರಸದಿಂದ ಭರಿತವಾದ ಈ ಸ್ತೋತ್ರಗಳನ್ನು ನೋಡಿ ಭಿನ್ನಮತೀಯರು ಕೂಡ ತಲೆ ತೂಗುತ್ತಾರೆ. ಆದರೆ ನಮ್ಮ ಸಮಾಜದಲ್ಲಿ ಅನೇಕರಿಗೆ ಸಂಸ್ಕೃತ ವಿದ್ಯೆಯು ಅಪರಿಚಿತವಾಗಿರುವುದರಿಂದ ಈ ಸ್ತೋತ್ರಗಳಲ್ಲಿ ಯಾವ ಅಮೃತವು ತುಂಬಿದೆಯೆಂದು ತಿಳಿಯಲಾರರು. ಅನೇಕರು ಅಶುದ್ಧ ಪ್ರತಿಗಳನ್ನಿಟ್ಟುಕೊಂಡು ಅಶುದ್ಧವಾಗಿಯೇ ಪಠಿಸುವರು. 'ನಹಿ ಮಂತ್ರೋಕ್ಷರನ್ಯೂನೋ ನಿಹಂತಿ ವಿಷವೇದನಾಂ' ಅಂದರೆ ವಿಷವನ್ನು ಪರಿಹರಿಸುವ ಮಂತ್ರದಲ್ಲಿ ಅಕ್ಷರವು ಹೆಚ್ಚು ಕಡಿಮೆಯಾಗಿದ್ದರೆ ವಿಷ ನಿವಾರಣೆಯಾಗುವುದಿಲ್ಲ. ಅದರಂತೆ ಅಶುದ್ಧವಾಗಿ ಪಠಿಸುವುದರಿಂದ ಹೆಚ್ಚಿನ ಫಲವುಂಟಾಗಲಾರದು. ಈ ನ್ಯೂನತೆಗಳನ್ನು ಹೋಗಲಾಡಿಸಿ, ಈ ಸ್ತೋತ್ರಗಳು ಎಲ್ಲರಿಗೂ ಉಪಯುಕ್ತವಾಗುವಂತೆ ವಿದ್ವಾನ್ ಮೇ॥ ಶ್ರೀನಿವಾಸಯ್ಯಂಗಾರ್ಯರ ಸಂಪೂರ್ಣ ಸಹಾಯದಿಂದ 'ಪಂಚಸ್ತೋತ್ರ ಭಾವ ಪ್ರಕಾಶಿಕಾ' ಎಂಬೀ ಪುಸ್ತಕವನ್ನು ಪ್ರಕಾಶಪಡಿಸಿದ್ದೇನೆ." ಇದು ಶಾಸ್ತ್ರಿಗಳ ಉದಾತ್ತದೃಷ್ಟಿ: ಜನಹಿತ ದೃಷ್ಟಿ. ಇದು ಎಲ್ಲ ಕಾಲಕ್ಕೂ ಸಲ್ಲುವಂತಹುದು; ಯಾರೂ ಮೆಚ್ಚುವಂತಹುದು.

ಶಾಸ್ತ್ರಿಗಳು ಎಲ್ಲ ಸ್ತೋತ್ರಗಳನ್ನೂ ಕನ್ನಡ ಲಿಪಿ ಯಲ್ಲಿ ಕೊಟ್ಟಿದ್ದಾರೆ. ಒಂದೊಂದಕ್ಕೂ-ಒಂದೊಂದು ಪದ್ಯಕ್ಕೂ 'ಭಾವ ಪ್ರಕಾಶಿಕೆ' ಎಂಬ ಹೆಸರಿನಿಂದ ಹೊಸ ಗನ್ನಡದಲ್ಲಿ ತಾತ್ಪರ್ಯವನ್ನು-ಭಾವಾರ್ಥವನ್ನು ಕೊಟ್ಟಿ ದ್ದಾರೆ. ಇದು ಕೆಲವಕ್ಕೆ ಸಂಗ್ರಹವಾಗಿದ್ದರೆ, ಹಲವಕ್ಕೆ ವಿಸ್ತಾರವಾಗಿದೆ. ಇದು ಮೂಲಕ್ಕೆ ಹತ್ತಿರವಾಗಿದ್ದು ತುಂಬ ಸುಂದರವಾಗಿದೆ ; ಓದುಗರ ಮನಮುಟ್ಟುವಂತಿದೆ. ಉದಾ. (ಸಂಗ್ರಹಕ್ಕೆ) : ೧. "ತುಭ್ಯಂ ನಮಸ್ತ್ರಿಭುವ ನಾರ್ತಿಹರಾಯ ನಾಥ । ತುಭ್ಯಂ ನಮಃ ಕ್ಷಿತಿತಲಾಮಲ ಭೂಷಣಾಯ । ತುಭ್ಯಂ ನಮಸ್ತೇ ಜಗತಃ ಪರಮೇಶ್ವ ರಾಯ। ತುಭ್ಯಂ ನಮೋ ಜಿನ ಭವೋದಧಿಶೋಷಣಾಯ" —"ಮೂರು ಲೋಕಗಳಲ್ಲಿರುವ ಸಮಸ್ತ ಸಂಸಾರ ದುಃಖ ಗಳನ್ನು ಪರಿಹರಿಸಿ ರಕ್ಷಿಸುವ ಸ್ವಾಮಿಯೇ! ತಮಗೆ ನಮಸ್ಕಾರವು. ಭೂಲೋಕದಲ್ಲಿ ನಿರ್ಮಲ ರತ್ನಾಭರಣ ದಂತೆ ಇರುವ ಸ್ವಾಮಿಯೇ ! ತಮಗೆ ನಮಸ್ಕಾರವು. ಮೂರು ಲೋಕಗಳಿಗೂ ಸರ್ವೋತ್ಕೃಷ್ಟ ಸ್ವಾಮಿಯೇ ! ತಮಗೆ ನಮಸ್ಕಾರವು. ಕರ್ಮ ಶತ್ರುಗಳನ್ನು ಜಯಿಸಿರುವ ಜಿನರಾಜನೇ ! ಅಪಾರವಾದ ಭವಪರಂಪರೆ ಎಂಬ ಸಮುದ್ರವನ್ನು ಒಣಗಿಸುವಂತಹ ತಮಗೆ ನಮಸ್ಕಾರವು" ೨. "ದೇವ ತ್ವದಂಘ್ರಿನಖಮಂಡಲದರ್ಪಣೇಸ್ಮಿ । ನ್ನರ್ಘ್ಯೇ ನಿಸರ್ಗರುಚಿರೇ ಚಿರದೃಷ್ಟವಕ್ತ್ರಃ । ಶ್ರೀಕೀರ್ತಿ ಕಾಂತಿ ಧೃತಿಸಂಗಮ ಕಾರಣಾನಿ । ಭವ್ಯೋದಕಾನಿಲಭತೇ ಶುಭಮಂಗಲಾನಿ"—"ಓ ಜಿನದೇವನೇ ! ಜಗತ್ಪೂಜ್ಯ ವಾಗಿಯೂ ಸ್ವಭಾವದಿಂದ ಕಾಂತಿಮಯವಾಗಿಯೂ ಥಳಥಳಿಸುತ್ತಿರುವ ತಮ್ಮ ಪಾದಗಳಲ್ಲಿರುವ ಉಗುರು ಗಳೆಂಬ ಮಂಡಲಾಕಾರವಾದ ಕನ್ನಡಿಯಲ್ಲಿ ಬಹಳಕಾಲ ಮುಖವನ್ನು ನೋಡಿಕೊಂಡ ಶ್ರೀಜಿನೇಂದ್ರ ಪಾದಕಮಲ ಗಳನ್ನು ನಮಸ್ಕರಿಸಿದ ಭವ್ಯಾತ್ಮನು ಕೀರ್ತಿ ಕಾಂತಿ ಮತ್ತು ಧೈರ್ಯ-ಇವುಗಳ ಪ್ರಾಪ್ತಿಗೆ ಕಾರಣವಾದಂತಹ ಯಾವ ಶುಭಮಂಗಳಗಳನ್ನು ಹೊಂದುವುದಿಲ್ಲ? ಸಮಸ್ತಮಂಗಳ ಗಳನ್ನೂ ಹೊಂದುತ್ತಾನೆಂದು ಭಾವವು.

ಈ 'ಪಂಚಸ್ತೋತ್ರ ಭಾವಪ್ರಕಾಶಿಕಾ'ವೇ ಇವರ ಮೊದಲ ಕೃತಿಯಾಗಿರಬಹುದೆ ಎನಿಸುತ್ತದೆ. ಇದಕ್ಕೆ ಕಾರಣಗಳು ಹೀಗಿವೆ—೧. ಈ ಕೃತಿಯ ಭಾವಪ್ರಕಾಶಿಕಾ ವನ್ನು ಬರೆಯಲು ತಮಗಿನ್ನೂ ಸಾಮರ್ಥ್ಯ ಸಾಲದೆಂದು ಭಾವಿಸಿದ ಇವರು, ಅನುಭವದ ಮೊದಲ ಹೆಜ್ಜೆಯಾಗಿ ವಿದ್ವಾನ್ ಮೇ. ಶ್ರೀನಿವಾಸಯ್ಯಂಗಾರ್ಯರ 'ಸಂಪೂರ್ಣ ಸಹಾಯವನ್ನು ಪಡೆದಿರುವುದು, ೨. ಅನುವಾದಕರು

ಆಗಿನ್ನೂ ಎ. ಶಾಂತಿರಾಜಶಾಸ್ತ್ರಿ ಆಗಿರದೆ ಎ. ಶಾಂತಿರಾಜಯ್ಯ ಆಗಿರುವುದು. ೩. ದೊರಕಿರುವ ಪುಸ್ತಕಗಳ ಪ್ರಕಾಶನ ವರ್ಷವೂ ಪೋಷಕವಾಗಿರುವುದು. ಇದು ಶಾಸ್ತ್ರಿಗಳ ಮೊದಲ ಕೃತಿ ಮಾತ್ರವಾಗಿರದೆ ಕನ್ನಡದಲ್ಲಿ ತಾತ್ಪರ್ಯಾರ್ಥದೊಡನೆ ಬಂದ ಸ್ತೋತ್ರ ಸಾಹಿತ್ಯ ಕೃತಿಗಳಲ್ಲೇ ಮೊದಲದೆಂದು ಭಾವಿಸಲವಕಾಶವಿದೆ.

ಮೊದಲ ಮುದ್ರಣದಲ್ಲಿ 'ಪಂಚಸ್ತೋತ್ರ ಭಾವ ಪ್ರಕಾಶಿಕಾ' ಆಗಿದ್ದುದು ಮರು ಮುದ್ರಣದಲ್ಲಿ 'ಭಕ್ತಾ-ಮರಾದಿ ಪಂಚಸ್ತೋತ್ರ ಭಾವಪ್ರಕಾಶಿಕಾ' ಎಂದಾಗಿದೆ. ಪಂಚಮಂತ್ರ ಎಂದರೆ ಅ ಸಿ ಆ ಉ ಸಾ ಎಂದಲ್ಲದೆ ಹೇಗೆ ಬೇರೆಯಲ್ಲವೋ, ಹಾಗೆಯೇ ಸ್ತೋತ್ರ ಸಾಹಿತ್ಯದಲ್ಲಿ ಪಂಚಸ್ತೋತ್ರ ಎಂದರೆ ಈ ಐದೇ ಅಲ್ಲದೆ ಬೇರೆಯಲ್ಲ. ಇದರಿಂದ 'ಭಕ್ತಾಮರಾದಿ' ಎಂಬ ಮಾತಿನ ಅಗತ್ಯವಿರಲಿಲ್ಲವೇನೋ ಎನಿಸುತ್ತದೆ.

ಶಾಸ್ತ್ರಿಗಳು ತಮ್ಮ ಸಾಹಿತ್ಯಸೇವೆಯ ಮೊದಲ ಕೆಲಸವಾಗಿ 'ಜೈನ ಮತಸ್ಥರಿಗೆಲ್ಲಾ ಬಹಳ ಪೂಜ್ಯವಾದ ಅನೇಕರು ಬಹಳ ಶ್ರದ್ಧೆಯಿಂದ ಪ್ರತಿನಿತ್ಯವೂ ಪಠನ ಮಾಡು'ವ, 'ಇದರಿಂದುಂಟಾಗುವ ಫಲವನ್ನು ಪಡೆದಿರು'ವ ಈ ಸ್ತೋತ್ರಸಾಹಿತ್ಯವನ್ನು ಕೊಟ್ಟಿರುವುದು ಅವರ ಜನಹಿತ ದೃಷ್ಟಿಗೆ ಒಳ್ಳೆಯ ನಿದರ್ಶನ; ಸ್ತುತ್ಯಾರ್ಹ ! ●

ಪ್ರಾಣಿದಯೆ

ಅಹಿಂಸಾಲಕ್ಷಣೋ ಧರ್ಮೋ ಹ್ಯ ಧರ್ಮಃ ಪ್ರಾಣಿನಾಂ ವಧಃ ।
ತಸ್ಮಾದ್ಧರ್ಮಾರ್ಥಿಭಿರ್ಲೋಕೇ ಕರ್ತವ್ಯಾ ಪ್ರಾಣಿನಾಂ ದಯಾ ॥

ಅಹಿಂಸೆಯೇ ಲಕ್ಷಣವಾಗಿರುವುದು ಧರ್ಮವು. ಪ್ರಾಣಿಗಳ ವಧೆಯು ಅಧರ್ಮವೇ ಆಗಿರುವುದು. ಆದುದರಿಂದ ಲೋಕದಲ್ಲಿ ಧರ್ಮವನ್ನಿಚ್ಛಿಸುವವರು ಪ್ರಾಣಿಗಳ ಮೇಲೆ ದಯೆಯನ್ನು ಮಾಡಬೇಕು.

ದಯಾ ಮಹಾನದೀ ತೀರೇ ಸರ್ವೇ ಧರ್ಮಾಸ್ತೃಣಾಂಕುರಾಃ ।
ತಸ್ಯಾಂ ಶೋಷಮುಪೇತಾಯಾಂ ಕಿಯನ್ನಂದಂತಿ ತೇ ಚಿರಂ ॥

ದಯೆಯೆಂಬ ದೊಡ್ಡ ಹೊಳೆಯ ದಡದಲ್ಲಿ ಇತರ ಸಕಲ ಧರ್ಮಗಳೂ ಹುಲ್ಲಿನ ಮೊಳಕೆಗಳಾಗಿರುತ್ತವೆ. ಆ ದಯೆಯೆಂಬ ಮಹಾನದಿ ಬತ್ತಿ ಹೋದರೆ ಆ ಮೊಳಕೆಗಳು ಎಷ್ಟು ಕಾಲದವರೆಗೆ ಬೆಳೆದಾವು ?

ಪರಮಾಣೋಃ ಪರಂ ನಾಲ್ಪಂ ನ ಮಹದ್ಗಗನಾತ್ಪರಂ ।
ಯಥಾ ಕಿಂಚಿತ್ತಥಾ ಧರ್ಮೋ ನಾಹಿಂಸಾ ಲಕ್ಷಣಾತ್ಪರಃ ॥

ಪರಮಾಣುವಿಗಿಂತ ಅಲ್ಪವೂ ಆಕಾಶಕ್ಕಿಂತ ದೊಡ್ಡದೂ ಆದ ವಸ್ತುವು ಹೇಗೆ ಇಲ್ಲವೋ ಹಾಗೆ ಅಹಿಂಸಾ ಲಕ್ಷಣವುಳ್ಳ ಧರ್ಮಕ್ಕಿಂತ ದೊಡ್ಡದಾದ ಧರ್ಮವು ಬೇರೆಯಿಲ್ಲ.

ಹೀಗೆ ಅಹಿಂಸಾ ಪರಮಧರ್ಮದ ಪರಮೋತ್ಕೃಷ್ಟತೆಯನ್ನು ಪ್ರತಿಪಾದಿಸುವ ಪ್ರಮಾಣಗಳು-ಆರ್ಷ ವಚನಗಳು ಅಸಂಖ್ಯಾತವಾಗಿರುತ್ತವೆ. ಇಂತಹ ಪವಿತ್ರವೂ ಲೋಕೋತ್ಕೃಷ್ಟವೂ ಆದ ಅಹಿಂಸಾ ಧರ್ಮಕ್ಕೆ ವಿರೋಧಿಯಾದುದು ಪ್ರಾಣಿ ಹಿಂಸೆಯೆಂದು ಬೇರೆ ಹೇಳಬೇಕಾಗಿಲ್ಲ. ಬೆಳಕಿಗೆ ವಿರೋಧಿಯಾದುದು ಕತ್ತಲೆಯೆಂದು ಹೇಳಬೇಕೇ ?

—ಎ. ಶಾಂತಿರಾಜ ಶಾಸ್ತ್ರಿ (೧೯೩೩)

ವಿವೇಕಾಭ್ಯುದಯದ ಪ್ರಥಮ ಸಂಚಿಕೆ-ಒಂದು ಸಮೀಕ್ಷೆ

— ಶ್ರೀಮತಿ ಜಿ. ಎಸ್. ವಸಂತಮಾಲಾ

ಈ ಯಾಂತ್ರಿಕ ಯುಗದಲ್ಲಿ ಮನುಷ್ಯನಿಗೆ ದೇವಾಲಯಕ್ಕೆ ಹೋಗುವುದಕ್ಕಾಗಲಿ, ಪುರಾಣಪ್ರವಚನಗಳನ್ನು ಕೇಳುವುದಕ್ಕಾಗಲಿ ಸಮಯಾವಕಾಶ ಸಿಗುವುದೇ ಕಷ್ಟ. ಹಾಗಾಗಿ ಧಾರ್ಮಿಕ ಸಂಸ್ಕಾರ ಕಡಿಮೆಯಾಗುತ್ತ ಬಂದಂತೆ, ಮನುಷ್ಯ ಮೋಸ, ಹಿಂಸೆ ಮುಂತಾದ ರಾಕ್ಷಸೀ ಗುಣಗಳ ಆಗರವಾಗುತ್ತಾನೆ. ಇಂಥ ರಾಕ್ಷಸೀ ಗುಣಗಳಿಂದ ದೂರವಾಗಬೇಕಾದರೆ ಧಾರ್ಮಿಕ ಸಂಸ್ಕಾರದ ಪ್ರಚೋದನೆ ಅತ್ಯವಶ್ಯಕವಾಗಿ ಬೇಕು. ಇಂಥ ಪ್ರಚೋದನೆಗಳಿಗೆ ಧಾರ್ಮಿಕ ಪತ್ರಿಕೆಗಳೇ ಅತ್ಯುತ್ತಮ ಮಾಧ್ಯಮ. ಈ ಎಲ್ಲ ಇತಿಮಿತಿಗಳನ್ನರಿತೇ ಆಸ್ಥಾನ ವಿದ್ವಾನ್, ನ್ಯಾಯತೀರ್ಥ, ಜೈನಶಾಸ್ತ್ರ ವಿಶಾರದ ಎ. ಶಾಂತಿರಾಜ ಶಾಸ್ತ್ರಿಗಳು ೧೯೩೩ ಜೂನ್ ತಿಂಗಳಿನ ಶ್ರುತ ಪಂಚಮಿಯಂದು 'ವಿವೇಕಾಭ್ಯುದಯಂ' ಎಂಬ ಧಾರ್ಮಿಕ ಪತ್ರಿಕೆಯನ್ನು ಪ್ರಾರಂಭಿಸಿದರು.

ಈ ಪತ್ರಿಕೆಯ ಪ್ರಾರಂಭೋತ್ಸವವು ಜೇಷ್ಠ ಶುದ್ಧ ಪಂಚಮಿಯ ದಿವಸ ಮೈಸೂರು ಮೋತಿಖಾನೆ ಲಕ್ಷ್ಮೀಪತಯ್ಯನವರ ಜೈನ ವಿದ್ಯಾರ್ಥಿನಿಲಯದಲ್ಲಿ ಶ್ರುತಪೂಜಾಪೂರ್ವಕವಾಗಿ ರಾಜಕವಿ ವಿಭೂಷಣ ಶ್ರೀಮಾನ್ ಎಚ್. ಲಿಂಗರಾಜರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಆದರೆ ಇದರ ಪ್ರಕಟಣೆಗೆ ಸರ್ಕಾರದ ಅನುಮತಿ ದೊರೆಯಲು ತಡವಾದುದರಿಂದ ಜೇಷ್ಠ-ಆಷಾಢ ಮಾಸಗಳ ಸಂಚಿಕೆಗಳನ್ನು ಸೇರಿಸಿ ಸಂಯುಕ್ತ ಕಿರಣದ ರೂಪದಲ್ಲಿ ೧೯೩೩ ಜುಲೈ ತಿಂಗಳಿನಂದು ಪ್ರಕಟವಾಯಿತು.

ಈ ಪತ್ರಿಕೆಗೆ ಶ್ರೀ ಶಾಂತಿರಾಜಶಾಸ್ತ್ರಿಗಳು ಸಂಪಾದಕರಾದರೆ, ಸಹಾಯಕ ಸಂಪಾದಕ ಮಂಡಲಿಯಲ್ಲಿ ಶ್ರೀಯುತರುಗಳಾದ ವಿ. ಲೋಕನಾಥ ಶಾಸ್ತ್ರಿ, ಮೂಡಬಿದರೆ; ಡಿ. ಪುಟ್ಟಸ್ವಾಮಿ, ಧರ್ಮಸ್ಥಳ; ಕೆ. ಭುಜಬಲಿ ಶಾಸ್ತ್ರಿ, ಆರಾ; ಟಿ. ಪಪ್ಪ ಇಜಾರಿ, ಹೊಸಪೇಟೆ; ಬಿ. ಪದ್ಮರಾಜಯ್ಯ, ಮೈಸೂರು; ಹಾಗೂ ವ್ಯವಸ್ಥಾಪಕರಾಗಿ ಎಂ. ನೇಮಿರಾಜ ಶಾಸ್ತ್ರಿಗಳಿದ್ದರು,

ವಾರ್ಷಿಕ ಚಂದಾದಾರರಲ್ಲಿ ಮೂರು ವರ್ಗಮಾಡಿದ್ದರು — ಸಾಮಾನ್ಯ ಚಂದಾದಾರರು, ಪೋಷಕರು, ಆಶ್ರಯದಾತರು. ಇವರಿಗೆ ಕ್ರಮವಾಗಿ ೨, ೫, ೧೫ರೂ. ಗಳನ್ನು ನಿಗದಿಗೊಳಿಸಿದ್ದರು.

"ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳು ವಿದ್ಯಾ-ಜ್ಞಾನಾಧಿದೇವತೆಯಾದ ಶಾರದಾದೇವಿಯ ಅಂಶಗಳೆಂದೂ ಪ್ರಯೋಜನಕಾರಿಗಳೆಂದೂ ಸಂಗ್ರಹಿಸಲ್ಪಡತಕ್ಕುವೆಂದೂ ತಿಳಿದು ಪ್ರತಿಯೊಂದು ಕಿರಣವನ್ನು ಜೋಪಾನ ಮಾಡಿಟ್ಟುಕೊಳ್ಳಿರಿ"—ಎಂದು ವಾಚಕರಿಗೆ ಸೂಚನೆಯನ್ನು ರಕ್ಷಾಪುಟದ ಒಳಬದಿಯಲ್ಲಿ ನೀಡಲಾಗಿದೆ. ಈ ಸೂಚನೆಯಿಂದ ಎಂಥ ಲೇಖನಗಳನ್ನು ಈ ಪತ್ರಿಕೆಯಲ್ಲಿ ಪ್ರಕಟಿಸಲು ಉದ್ದೇಶಿಸಿದ್ದರೆಂದು ತಿಳಿದು ಬರುತ್ತದೆ. ಅಲ್ಲದೆ, "ಸರ್ವ ಸಾಮಾನ್ಯ ಜನರಿಗೋಸ್ಕರ" ಈ ಪತ್ರಿಕೆಯ ಪ್ರಯತ್ನವಿರುವುದರಿಂದ ಲೇಖನದ ಭಾಷೆ ಶುದ್ಧವಾಗಿದ್ದು ಸರಳವಾಗಿರಬೇಕೆಂದು ಬರೆಹಗಾರರಲ್ಲಿ ವಿನಂತಿಸಿದ್ದಾರೆ.

ಪತ್ರಿಕೆಯ ಪ್ರಥಮ ಪುಟದ ಆರಂಭದಲ್ಲಿ ಈ ಕೆಳಗಿನ ಪದ್ಯವಿದೆ—

ಎಲ್ಲರ್ಬಗೆವುಗೆ ಬಗೆದಾ ।
ಸಲ್ಲಲಿತೋನ್ನತ ವಿವೇಕದೂರ್ಜಿತ ಫಲದಿಂ ।
ದುಲ್ಲಸದುರುತರ ಸುಖಮಂ ।
ನಿಲ್ಲದೆ ಪಡೆಯುತ್ತೆ ಬಾಳ್ವುದನಿಶಂ ಸೊಗದಿಂ ॥

ಶ್ರವಣಬೆಳ್ಗೊಳದ ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಗಳು ಆಶೀರ್ವದಿಸಿ ಕಳಿಸಿದ ಸಂದೇಶದಲ್ಲಿ ಪತ್ರಿಕೆಯ ಹೆಸರಿನ ಬಗ್ಗೆ ಹೀಗೆ ವಿವೇಚಿಸಿದ್ದಾರೆ—

"ವಿವೇಕಾಭ್ಯುದಯವೆಂಬ ಶಬ್ದವು ಬಹಳ ಗಂಭೀರವಾದ ಅರ್ಥವನ್ನೊಳಗೊಂಡಿದೆ. 'ವಿವೇಕ' ವೆಂದರೆ

ವಿಚಾರ ಅಥವಾ ಯಥಾರ್ಥಜ್ಞಾನವೆಂದರ್ಥವು. 'ಅಭ್ಯುದಯ'ವೆಂದರೆ ಸಮುನ್ನತಿ ಅಥವಾ ಉತ್ಪತ್ತಿಯೆಂದರ್ಥವು. 'ವಿವೇಕಾಭ್ಯುದಯ'ವೆಂಬ ಪವಿತ್ರವಾದ ನಾಮಧೇಯನ್ನು ಹೊಂದಿರುವ ಈ ಪತ್ರಿಕೆಯು ವಾಚಕರಲ್ಲಿ ಯಥಾರ್ಥಜ್ಞಾನದ ಉತ್ಪತ್ತಿ ಸಮುನ್ನತಿಗಳಿಗೆ ಕಾರಣವಾಗಿರುವುದೆಂದು ಭಾವಿಸುತ್ತೇವೆ."

ಸಂಪಾದಕರು ಸಹ ತಮ್ಮ ಸಂಪಾದಕೀಯದಲ್ಲಿ ಪತ್ರಿಕೆಯ ಹೆಸರಿನ ಬಗ್ಗೆ ಹೀಗೆ ಸಮಾಲೋಚಿಸಿದ್ದಾರೆ—

"ವಿವೇಕ+ಅಭಿ+ಉದಯ ಈ ಪದತ್ರಯದಲ್ಲಿರುವ ವಿವೇಕ ಪದಕ್ಕೆ ಧರ್ಮ ಅಧರ್ಮ, ಹೇಯ ಉಪಾದೇಯ ಮೊದಲಾದ ಸದಸದ್ವಿಷಯಗಳ ವಿವೇಚನರೂಪವಾದ ಸಮ್ಯಗ್ಜ್ಞಾನವೆಂದೂ, ಅಭಿಯೆಂಬ ಪದಕ್ಕೆ ಎಲ್ಲ ಕಡೆಗಳಿಂದ ಅಥವಾ ಚೆನ್ನಾಗಿಯೆಂದೂ, ಉದಯವೆಂಬ ಪದಕ್ಕೆ ಆವಿರ್ಭಾವವೆಂದೂ ಅರ್ಥವು. ಮೋಕ್ಷಕ್ಕೆ ನಿತ್ಯಸುಖಕ್ಕೆ ಸಾಧನಗಳಾದ ಭಕ್ತಿ, ಜ್ಞಾನ, ವೈರಾಗ್ಯ ಅಂದರೆ ಸಮ್ಯಗ್ದರ್ಶನ ಜ್ಞಾನ ಚಾರಿತ್ರಗಳಲ್ಲಿ ಈ ವಿವೇಕವು ಒಂದು ಸಾಧನವಾಗಿರುತ್ತದೆ. ಇಂತಹ ಜ್ಞಾನವನ್ನು ಕುರಿತೇ "ಜ್ಞಾನಂ ತ್ರೈಲೋಕ್ಯ ದುರ್ಲಭಂ" ಎಂದು ಋಷಿಗಳು ಹೇಳಿರುವುದಲ್ಲದೆ ಪಶುಪಕ್ಷಿ ಕ್ರಿಮಿ ಕೀಟಾದಿಗಳಲ್ಲಿರುವ ಸಾಮಾನ್ಯ ಜ್ಞಾನವನ್ನು ಕುರಿತಲ್ಲ. ಇಂತಹ ಜ್ಞಾನದ ಆವಿರ್ಭಾವರೂಪವಾದ ಕಾರ್ಯವು ಚೆನ್ನಾಗಿ ಯಾವ ಈ ಪತ್ರಿಕಾರೂಪವಾದ ಕಾರಣದಿಂದಾಗುವುದೋ "ಕಾರಣೇ ಕಾರ್ಯೋಪಚಾರಃ" ಎಂಬ ನ್ಯಾಯದಿಂದ ಈ ಪತ್ರಿಕೆಗೂ ನಾವು ವಿವೇಕಾಭ್ಯುದಯವೆಂಬ ಹೆಸರನ್ನೇ ಇಟ್ಟಿರುತ್ತೇವೆ."

ಈ ಪ್ರಥಮ ಸಂಯುಕ್ತ ಕಿರಣದ ೬೪ ಪುಟಗಳಲ್ಲಿ ಸುಮಾರು ೨೧ ಬರಹಗಳಿವೆ. ಅನೇಕ ಬರಹಗಳು ಹೊಸ ಪತ್ರಿಕೆಗೆ ಶುಭಕೋರುವ ಸಂದೇಶದ ರೂಪದಲ್ಲಿವೆ. ಅವುಗಳ ಕೆಲವು ಭಾಗಗಳು ಹೀಗಿವೆ—

"ಸಮಾಜದಲ್ಲಿ ಕೆಲವು ಮಾಸ ಪತ್ರಿಕೆಗಳು ಜನ್ಮಕ್ಕೆ ಬಂದು ಕೆಲವು ವರ್ಷಗಳಲ್ಲಿಯೇ ನಿಂತು ಹೋಗಿವೆ. ಪೂಜ್ಯ ಗುರುವರ್ಯರಾದ ವೇ॥ ಶಾಂತಿರಾಜಶಾಸ್ತ್ರಿಗಳಿಂದ ಜನ್ಮವೆತ್ತಿರುವ 'ವಿಶ್ವಬಂಧು'ವು ಮಾತ್ರ ಸದ್ಯಃ ಜೀವನಾವಸ್ಥೆಯಲ್ಲಿದೆ. ಈಗ ಕೆಲವು ಧರ್ಮಪ್ರೇಮಿಗಳಾದ ಪ್ರಸಿದ್ಧ ಮುಖಂಡರ ಹೆಚ್ಚಿನ ಪ್ರೋತ್ಸಾಹ ಮತ್ತು ಉತ್ಸಾಹದಿಂದಲೇ 'ವಿವೇಕಾಭ್ಯುದಯವು' ಜನ್ಮಕ್ಕೆ ಬಂದಿದೆ."

— ಮಾ. ವರ್ಧಮಾನ ಹೆಗ್ಗಡೆ

"ಪತ್ರಿಕಾರೂಪನಾದ ಉಪದೇಶಕನು ಏಕಕಾಲದಲ್ಲಿ ಹಲವು ಕಡೆಗಳಲ್ಲಿ ಬೋಧಿಸಬಲ್ಲನು." "ಪತ್ರಿಕೆಯಲ್ಲಿ ವಿಷಯ ಸೌಂದರ್ಯ, ಸಕಾಲಕ್ಕೆ ಪ್ರಕಟಿಸುವಿಕೆ ಈ ಎರಡು ವಿಷಯಗಳು ಅತಿಮುಖ್ಯವಾದುವು."

— ಶ್ರೀ ಲೋಕನಾಥಶಾಸ್ತ್ರಿ, ಮೂಡಬಿದರೆ.

"ವಿವೇಕ ಸಂಪನ್ನರಾದ ಪೂರ್ವಾಚಾರ್ಯರ ಜ್ಞಾನ ಭಂಡಾರವಾದ ಗ್ರಂಥರಾಶಿಯೂ ವಿವೇಕಪೂರ್ಣವಾದುದೇ ಆಗಿರುವುದು. ಆದುದರಿಂದ ನಮಗೆ ಪೂರ್ವಾಚಾರ್ಯರ ವಚನಗಳಲ್ಲಿ ದೃಢಶ್ರದ್ಧೆಯಿರಬೇಕು. ಲೋಕದಲ್ಲಿ ಪೂರ್ವಾಚಾರ್ಯರ ನುಡಿಗಳನ್ನು ಪ್ರಚಾರ ಮಾಡುವುದಕ್ಕೂ ವಿವೇಕವನ್ನುಂಟು ಮಾಡುವುದಕ್ಕೂ ವಿವೇಕಾಭ್ಯುದಯನ ಉದಯವು ಸಕಾಲದಲ್ಲಿ ಆಗಿರುವುದೆಂದು ನಮ್ಮ ಅಭಿಪ್ರಾಯವು."

— ಅರ್ಹದ್ದಾಸ ಪಾರ್ಶ್ವಸಾಗರವರ್ಣೀಜಿ,
ಇಂದೋರ್.

'ಸಮಗ್ರ ಭಾರತದಲ್ಲಿ ಜೈನಧರ್ಮವನ್ನು ಪ್ರಚಾರ ಮಾಡಿದ ಒಬ್ಬ ಮಹಾನ್ ಪ್ರಚಾರಕರು'–ಎಂಬ ಪ್ರಶಂಸೆಗೆ ಪಾತ್ರರಾದ ಸ್ವಾಮಿ ಸಮಂತಭದ್ರರ ಬಗ್ಗೆ ಶ್ರೀ ಕೆ. ಭುಜಬಲಿ ಶಾಸ್ತ್ರಿಗಳ ಲೇಖನ; 'ಸಾಹಿತ್ಯ ವಿಮರ್ಶೆ' ಎಂಬ ಶ್ರೀ ಎಂ. ಎಸ್. ಪದ್ಮನಾಭಶಾಸ್ತ್ರಿಗಳ ಒಂದು ಅನುವಾದ ಲೇಖನ; ೧೯೩೩ ಏಪ್ರಿಲ್ ೨೧ ರಂದು ಬೆಂಗಳೂರಿನಲ್ಲಿ ಮುಸ್ಲಿಂ ಹಾಲಿನಲ್ಲಿ ಜರುಗಿದ ಸರ್ವಧರ್ಮ ಸಮ್ಮೇಳನದಲ್ಲಿ ಶ್ರೀ ಎ. ಶಾಂತಿರಾಜ ಶಾಸ್ತ್ರಿಗಳು ಮಾಡಿದ ಎರಡು ಭಾಷಣದ ಸಾರಾಂಶ ಲೇಖನಗಳು–೧. ದೈವಭಾವನೆ, ೨. ತಮ್ಮ ಧರ್ಮಗ್ರಂಥವು ಜಗದ್ವ್ಯಾಪಕ ಧರ್ಮಗ್ರಂಥವೇ? ಈ ಮೇಲಿನ ಬರಹಗಳೆಲ್ಲ ಈ ಸಂಚಿಕೆಯ ಗಂಭೀರ ಲೇಖನಗಳಾಗಿವೆ.

ಶ್ರೀ ಶಾಂತಿರಾಜ ಶಾಸ್ತ್ರಿಗಳ ಭಾಷಣ ಲೇಖನದಲ್ಲಿ ಅನೇಕ ಸದ್ವಚನಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಅವಲೋಕಿಸಬಹುದಾಗಿದೆ—

"ದೇವರ ಹೆಸರು ಯಾವುದಾದರೂ ಜೈನರಿಗೆ ಸಮ್ಮತ. ಅವರಿಗೆ ದೇವರ ಗುಣವು ಮುಖ್ಯ."

"ಲೋಕದಲ್ಲಿ ತರತಮ ಭಾವದಿಂದ ತೋರುವ ವಸ್ತುಗಳಿಗೆಲ್ಲ, ನ್ಯಾಯಶಾಸ್ತ್ರಾನುಸಾರವಾಗಿ, ಒಂದು ಸ್ಥಾನದಲ್ಲಿ ವಿರಾಮವಿದ್ದೇ ತೀರಬೇಕು. ಸಣ್ಣ ಪುಟ್ಟ ಹೊಳೆಗಳಿಗೂ ನದಿಗಳಿಗೂ ವಿರಾಮಸ್ಥಾನವು ಸಮುದ್ರ. ಹಾಗೆಯೇ ಜೀವಾತ್ಮರುಗಳಲ್ಲಿ ಕಂಡುಬರುವ ಜ್ಞಾನಾದಿ

ಗುಣಗಳ ಪವಿತ್ರಾವಸ್ಥೆಯು ಪರಾಕಾಷ್ಠತೆಯು ಎಲ್ಲಿರುವುದೋ ಅವನೇ ದೇವರೆಂದು ತಿಳಿಯಬೇಕು."

"ಲೋಕದಲ್ಲಿ ಧರ್ಮವು ನಾನಾ ವಿಧವಾಗಿರುತ್ತದೆ. ಹಸಿದವನಿಗೆ ಅನ್ನವನ್ನು ಹಾಕುವುದೂ ಧರ್ಮ. ರೋಗಿಗೆ ಔಷಧವನ್ನು ಕೊಡುವುದು ಅಥವಾ ಕೊಡಿಸುವುದೂ ಧರ್ಮ. ಅಜ್ಞಾನಿಗಳಿಗೆ ಜ್ಞಾನಸದಾನವನ್ನು ಮಾಡುವುದೂ ಧರ್ಮ. ದೇವಾಲಯ, ವಿದ್ಯಾಲಯ, ವೈದ್ಯಾಲಯ, ಅನಾಥಾಲಯ, ಛತ್ರ ಮೊದಲಾದ ಧರ್ಮಾಲಯಗಳನ್ನು ಕಟ್ಟಿಸಿಕೊಡುವುದೂ ಧರ್ಮ. ಪರೋಪಕಾರವನ್ನು ಮಾಡುವುದೂ ಧರ್ಮ. ಭಯಭೀತವಾದ ಪ್ರಾಣಿಗೆ ಅಭಯದಾನವನ್ನು ಮಾಡುವುದೂ ಧರ್ಮ. ಹೀಗೆ ಧರ್ಮವು ಎಷ್ಟೋ ಭೇದಗಳುಳ್ಳದಾಗಿರುತ್ತದೆ. ಅಂದಮೇಲೆ ಈ ಭೇದಗಳೆಲ್ಲ ಯಾವುದರಿಂದ ಕವಲೊಡೆದವು, ಇವುಗಳ ಬುಡವಾವುದು ಎಂಬುದನ್ನು ನಾವು ಮುಖ್ಯವಾಗಿ ಪರಿಶೀಲಿಸಬೇಕು. ಆಗ ನಮಗೆ ಆ ಭೇದಗಳೆಲ್ಲ ಅಹಿಂಸಾ ಧರ್ಮದಿಂದ ಕವಲೊಡೆದಿರುತ್ತದೆಂದೂ ಎಲ್ಲ ಧರ್ಮಗಳಿಗೂ ಅಹಿಂಸಾ ಧರ್ಮವು ಬುಡ-ಮಾತೃಸ್ಥಾನವೆಂದೂ ಗೊತ್ತಾಗುವುದು. ಅನೇಕ ಉಪನದಿಗಳು ಮಹಾಗಂಗಾನದಿಯಲ್ಲಿ ಸೇರಿ ಸಮುದ್ರವನ್ನು ಹೊಂದುವಂತೆ ಸಕಲ ಧರ್ಮ ಭೇದಗಳು ಅಹಿಂಸಾ ಧರ್ಮದಲ್ಲಿ ಅಡಕವಾಗಿ ಕೈವಲ್ಯವನ್ನು ದೊರಕಿಸುತ್ತವೆ."

ತಮ್ಮ ಪತ್ರಿಕೆಯಲ್ಲಿ ಕೆಲವು ಪುಟಗಳನ್ನು ಮಹಿಳೆಯರ ಬರಹಗಳಿಗಾಗಿ ಮೀಸಲಿಡಲು ಸಂಪಾದಕರು ಇಚ್ಛಿಸಿರುವುದು ಕಂಡುಬರುತ್ತದೆ. ಆದ್ದರಿಂದಲೇ ತಮ್ಮ ಸಂಪಾದಕೀಯದಲ್ಲಿ, "ಈ ಪತ್ರಿಕೆಯಲ್ಲಿ ಪ್ರಕಟವಾಗುವ ವಿಷಯಗಳು ಸ್ತ್ರೀಯರಿಗೂ ಗ್ರಾಹ್ಯವಾಗಿರುವುದರಿಂದ ಅವರೂ ಈ ಪತ್ರಿಕೆಯನ್ನು ಸಾವಧಾನದಿಂದ ಅವಶ್ಯವಾಗಿ ಓದಬೇಕೆಂದೂ ಸ್ತ್ರೀಯರ ಲೇಖನಗಳಿಗೂ ಈ ಪತ್ರಿಕೆಯಲ್ಲಿ ಅವಕಾಶವು ಕೊಡಲ್ಪಡುವುದರಿಂದ ಅವರೂ ಅಂಜದೆ ಲೇಖನಗಳನ್ನು ಧಾರಾಳವಾಗಿ ಕಳುಹಿಸಿ ಕೊಡುತ್ತಾ ಸ್ತ್ರೀ ಸಮಾಜಕ್ಕೆ ಮಾರ್ಗದರ್ಶಕರಾಗಬೇಕೆಂದೂ ನಮ್ಮ ವಿಜ್ಞಾಪನೆ. ದುಷ್ಕಾರ್ಯಕ್ಕೆ ಅಂಜುವುದು ನ್ಯಾಯವಾಗಿರುವುದಲ್ಲದೆ ಸತ್ಕಾರ್ಯಕ್ಕಲ್ಲ. ವಿವೇಕಜ್ಞಾನವೆಂಬ ಚಿಂತಾಮಣಿಯು ಯಾರಿಗೆ ತಾನೆ ಬೇಡ ? ಸ್ತ್ರೀಯರಿಗೆ ಬೇಡವೆ ? ಸ್ತ್ರೀಯರು ಅಜ್ಞಾನವೆಂಬ ಕೂಪದಲ್ಲೇ ಬಿದ್ದಿದ್ದರೆ, ಪುರುಷ ಸಮಾಜಕ್ಕೆ ಸುಖವಿರುವುದೇ ? ಎಂದಿಗೂ ಇಲ್ಲ. ಹಾಗೆಂದ ಮೇಲೆ ಸ್ತ್ರೀಯರೂ ಜ್ಞಾನಾರ್ಜನೆಯನ್ನು ಮಾಡಿ ತಮ್ಮ ಆತ್ಮಕಲ್ಯಾಣವನ್ನು ಮಾಡಿಕೊಳ್ಳುವುದಕ್ಕೂ ಗೃಹಸ್ಥಾಶ್ರಮವು ಸುಸೂತ್ರವಾಗಿ ನಡೆಯುವುದಕ್ಕೂ ಅವರಿಗೆ ವಿದ್ಯಾಪ್ರೋತ್ಸಾಹವನ್ನು ಕೊಡುವುದು ವಿದ್ಯಾರಸಿಕರಾದ ಪುರುಷರ ಕರ್ತವ್ಯವಲ್ಲವೆ ?" ಎಂದು ಪ್ರಶ್ನಿಸಿದ್ದಾರೆ. ತಮ್ಮ ಧ್ಯೇಯವನ್ನು ಪ್ರಸ್ತುತ ಕಿರಣದಲ್ಲೆ ಕಾರ್ಯಗತಗೊಳಿಸಿದ್ದಾರೆ. ತಮ್ಮ ಮಡದಿ ಹಾಗೂ ಮಗಳಿಂದಲೇ ಕಿರುಬರಹಗಳನ್ನು ಬರೆಸಿ ಪ್ರಕಟಿಸಿದ್ದಾರೆ. ಅಲ್ಲದೆ ಸ್ತ್ರೀ ವಿದ್ಯಾಭ್ಯಾಸದ ಅವಶ್ಯಕತೆಯ ಬಗ್ಗೆ ಹಲವಾರು ಮಹನೀಯರ ಅಭಿಪ್ರಾಯಗಳನ್ನು ಕನ್ನಡಿಸಿರುವ ಪಂ. ಭುಜಬಲಿಶಾಸ್ತ್ರಿಯವರ ಪತ್ನಿ ಶ್ರೀಮತಿ ಗುಣವತಿದೇವಿ ಅವರ ಲೇಖನವನ್ನು ಪ್ರಕಟಿಸಿದ್ದಾರೆ.

ಈ ಪ್ರಥಮ ಕಿರಣದ ಕೊನೆಯ ಮೂರು ಪುಟಗಳನ್ನು 'ಜೈನ ಸಮಾಚಾರ ಪ್ರಪಂಚ'ಕ್ಕಾಗಿ ಮೀಸಲಿಟ್ಟಿದ್ದಾರೆ. ಈ ಶೀರ್ಷಿಕೆ ಅಡಿಯಲ್ಲಿ ದೇಶದ ಮೂಲೆ ಮೂಲೆಗಳಲ್ಲಿ ನಡೆಯುವ ಜೈನ ಸಮಾರಂಭಗಳ ವಾರ್ತೆಗಳಿವೆ.

ಒಟ್ಟಿನಲ್ಲಿ ವಿವೇಕಾಭ್ಯುದಯದ ಪ್ರಥಮ ಸಂಚಿಕೆ ಪತ್ರಿಕೆಯ ದೃಷ್ಟಿಯನ್ನು ಧೋರಣೆಯನ್ನು ಧ್ಯೇಯವನ್ನು ಪರಿಚಯಿಸುವಂತಿದೆ. ೧೯೩೩ರಲ್ಲಿ ಪ್ರಾರಂಭವಾದ ಈ ಪತ್ರಿಕೆ ೫೬ ವರ್ಷಗಳನಂತರವೂ ನಡೆದುಕೊಂಡು ಬರುತ್ತಿರುವ ಬಗ್ಗೆ ಹೆಮ್ಮೆಪಡಬಹುದಾಗಿದೆ.

ಕನ್ನಡ ಜೈನ ಪತ್ರಿಕಾ ಪ್ರಪಂಚದಲ್ಲಿ 'ವಿವೇಕಾಭ್ಯುದಯ'ದ ನೆಲೆ ಬೆಲೆಗಳೇನು ? ಇದು ಎಷ್ಟು ಜನ ಲೇಖಕರನ್ನು ಸೃಷ್ಟಿಸಿತು ? ಯಾವ ಯಾವ ವಿಷಯಗಳನ್ನು ಇದು ಬೆಳಕಿಗೆ ತಂದಿತು ? ಸಂಶೋಧನಾ ಕ್ಷೇತ್ರಕ್ಕೆ ಇದರ ಕೊಡುಗೆಯೇನು ? ಎಷ್ಟರಮಟ್ಟಿಗೆ ಸಾಮಾಜಿಕ ಜವಾಬ್ದಾರಿಯನ್ನು ಪೂರೈಸಿದೆ ? ಎಷ್ಟು ವಿಶೇಷ ಸಂಚಿಕೆಗಳನ್ನು ತಂದಿದೆ ? ಮೊದಲಾದ ಪ್ರಶ್ನೆಗಳಿಗೆ ನಾವು ಉತ್ತರ ಕಂಡುಕೊಳ್ಳಬೇಕಾಗಿದೆ. ಆದರೆ ಈ ವಿಷಯ ಪ್ರಸ್ತುತ ಲೇಖನದ ವ್ಯಾಪ್ತಿಗೆ ಮೀರಿದುದು. ಕನ್ನಡದ ಮೊದಲ ಜೈನ ಪತ್ರಿಕೆ ಯಾವುದು ? ಯಾವಾಗ ಪ್ರಾರಂಭವಾಯಿತು ? ಅವರ ಸ್ಥಾಪಕರು ಯಾರು ? ಈ ಮೊದಲಾದ ಭೂಗತ ವಿಷಯಗಳನ್ನು ಶೋಧಿಸಬೇಕಾಗಿದೆ. ಅತ್ತಕಡೆ ಸಂಶೋಧಕರ ಗಮನ ಹರಿಯಬೇಕಾಗಿದೆ.

□

'ವಿಶ್ವಬಂಧು'ವಿನ ವಿಶೇಷ ಸಂಚಿಕೆ-ಒಂದು ಪರಿಚಯ

— ಡಾ॥ ಬಿ. ಎಸ್. ಕುಲಕರ್ಣಿ, ಧಾರವಾಡ

ಮೈಸೂರು ಜೈನ ಎಜ್ಯುಕೇಶನ್ ಫಂಡ್ ಅಸೋಸಿಯೇಶನ್ನಿನ ಪಕ್ಷ ಪತ್ರಿಕೆ–ವಿಶ್ವಬಂಧು. ಇದರ ಸಂಪಾದಕರಾಗಿ ಕಾರ್ಯನಿರ್ವಹಿಸಿದವರೇ–ಅರಮನೆಯ ವಿದ್ವಾನ್, ಪಂಡಿತರತ್ನ ಎತರ್ಜೂರ ಶಾಂತಿರಾಜ ಶಾಸ್ತ್ರಿಗಳು. ಪ್ರಸ್ತುತ, ತಾ॥ 26–9–1926ರ ಸಂಪುಟ 3. ಸಂಚಿಕೆ 7–10. ಇದೇ "ವಿಶ್ವಬಂಧು"ವಿನ ವಿಶೇಷ ಸಂಚಿಕೆ. ಈ ವಿಶೇಷ ಸಂಚಿಕೆ, "ಪರೋಪಕಾರಕ್ಕಾಗಿಯೂ, ದೇಶಸೇವೆಗಾಗಿಯೂ ಸಮಾಜ ಸೇವೆಗಾಗಿಯು" ತಮ್ಮ ಸುಖ, ಸಂಪತ್ತುಗಳನ್ನು ಲೆಕ್ಕಿಸದೆ ದುಡಿದು ಅಜರಾಮರಾಗಿರುವರೆಂದು ಹೇಳಬಹುದಾದ, ಕತ್ತಲೆಯಲ್ಲಿದ್ದ ಜೈನ ಸಮಾಜಕ್ಕೆ, ಸೂರ್ಯನಂತೆ ಬೆಳಕು ತೋರಿಸಿ ಹೋದ ಮಹಾತ್ಮನೆಂದು ಹೊಗಳಿಸಿಕೊಂಡಿರುವ ಶ್ರೀಯುತ ಎಂ. ಎಲ್. ವರ್ಧಮಾನಯ್ಯನವರ ಸ್ಮಾರಕ ಸಂಚಿಕೆಯೂ ಇದೇ ಆಗಿದೆ.

ಕೇವಲ ಮೂವತ್ತೇಳು ವರುಷ ಬದುಕಿದ್ದರೂ, ಇಷ್ಟು ಅಲ್ಪಾವಧಿಯಲ್ಲಿ ಸತ್ವಯುತ ಆತ್ಮರು ಸ್ವಂತಕ್ಕೆ, ಸಮಾಜಕ್ಕೆ ದೇಶಕ್ಕೆ ಎಂತೆಂತಹ ಅಗಾಧ ಹಾಗೂ ಉಪಯುಕ್ತ ಕಾರ್ಯಗಳನ್ನು ಮಾಡಿ, ಬಡವರಿಗೆ ಬಲ್ಲಿದರಿಗೆ ಸ್ವ–ಪರಮತ ಬಂಧುಗಳಿಗೆ ಅಚ್ಚುಮೆಚ್ಚಿನವರಾಗಿ ಹೋಗಬಹುದೆಂಬುದನ್ನು ಪ್ರತ್ಯಕ್ಷ ತೋರಿಸಿ ಹೋದ ಮಹಾಪುರುಷ– ಶ್ರೀಯುತ ವರ್ಧಮಾನಯ್ಯನವರ ಬಹುಮುಖ ಪರಿಚಯವನ್ನೂ ಮಾಡಿದ, ಕನ್ನಡನಾಡಿನ ವಿದ್ವನ್ಮಣಿಗಳೆನಿಸಿದ್ದ ಹಲವಾರು ಪ್ರಮುಖರ ಲೇಖನಗಳು, ಪದ್ಯಗಳು ಈ ಸಂಚಿಕೆಯಲ್ಲಿವೆ.

ಆರಂಭದಲ್ಲಿ, ಸ್ವತಃ ಸಂಪಾದಕರೇ "ಜೈನ ಸಮಾಜದ 'ವರ್ಧಮಾನ' ರತ್ನಕಿರೀಟವು ಮಾಯವಾಯಿತು" ಎಂಬ ತಮ್ಮ ಲೇಖನದಲ್ಲಿ, ಮಾನ್ಯ ವರ್ಧಮಾನಯ್ಯನವರು ತೀರಿಹೋದುದಕ್ಕೆ ಸಂತಾಪವನ್ನು ತಮ್ಮದೇ ಆದ ಗಾಂಭೀರ್ಯದ ಶೈಲಿಯಲ್ಲಿ ವ್ಯಕ್ತಮಾಡಿ, ಅವರ ಜೀವನ ಚರಿತ್ರೆಯನ್ನು ಸಂಕ್ಷಿಪ್ತದಲ್ಲಿ ವಿವರಿಸಿದ್ದಾರೆ. "ಶ್ರೀಯುತ ವರ್ಧಮಾನಯ್ಯನವರ ಸ್ಮಾರಕ ಪದ್ಯಗಳು" ಎಂದು ಆಸ್ಥಾನ ವಿದ್ವಾನ್‌ರಾಗಿದ್ದ ವೇ. ಬಿ. ಎಂ. ಸಿದ್ದಲಿಂಗಶಾಸ್ತ್ರಿಗಳು ಬರೆದ ಒಂಭತ್ತು ಪದ್ಯಗಳಿವೆ. ಅವುಗಳಲ್ಲಿ ಒಂದನ್ನು ಇಲ್ಲಿ ಸ್ವಲ್ಪ ನೆನೆಯಬಹುದು.

> "ಧನದಿಂದಾನದಿಂದಂ...ನಿನಗಿನ್ನಾರ್ ಸಾಟಿಯಪ್ಪರ್
> ಪ್ರಣುತಪುರುಷರೊಳ್ ವರ್ಧಮಾನಾರ್ಯವರ್ಯಾ॥

(ಪುಟ–3, ಪದ್ಯ–13)

"ಜೈನಕುಲಭೂಷಣ ಶ್ರೀಯುತ ವರ್ಧಮಾನಯ್ಯನವರು" ಎಂಬ ಲೇಖನವನ್ನು ನಮಗೆಲ್ಲ ಪರಿಚಿತರಾಗಿದ್ದ ಹಾಗೂ ಪ್ರೀತಿಗೆ ಪಾತ್ರರಾದ ದಿ. ಕೆ. ಎಸ್. ಧರಣೇಂದ್ರಯ್ಯನವರು ಬರೆದಿದ್ದಾರೆ. ಆಗ ಅವರು ಎಂ. ಎ. ಪರೀಕ್ಷೆಗೆ ಓದುತ್ತಿದ್ದ, ವಿದ್ಯಾರ್ಥಿ ಆಗಿದ್ದರೋ ಏನೋ ಅವರು ತಮ್ಮ ಲೇಖನದಲ್ಲಿ ವರ್ಧಮಾನಯ್ಯನವರ ಗುಣಗಳನ್ನೂ ಹೇಳಿ, ಅವರು ನಡೆಯಿಸಿದ ಶ್ರವಣಬೆಳಗೊಳದ ಬಾಹುಬಲಿ ಮಸ್ತಕಾಭಿಷೇಕದ ವಿವರವಾದ ಪ್ರಸ್ತಾಪ ಮಾಡಿದ್ದಾರೆ. "ಶೋಕಸೂಚಕ ಪದ್ಯಪಂಚಕಂ" ಎಂದು ಐದು ಪದ್ಯಗಳನ್ನೂ ಬರೆದವರು, ಕನ್ನಡ ಸಾಹಿತ್ಯ ಚರಿತ್ರೆಯನ್ನು ಬರೆದು, ಮಹದುಪಕಾರ ಮಾಡಿಹೋದ, ರಾವ್ ಬಹದೂರ, ಆರ್. ನರಸಿಂಹಾಚಾರ್ಯರು, ಆ ಐದು ಪದ್ಯಗಳಲ್ಲಿ ಮೊದಲನೆ ಪದ್ಯ ಹೀಗಿದೆ:—

> "ದೀನರಮುತ್ತುವ ಮನ!....
> ಮಾನಿತಗುಣವರ್ಧಮಾನ ನಿನಗೆಣೆಯುಂಟೇ .. ॥"

(ಪದ್ಯ 1, ಪುಟ 24)

(ಅಕ್ಷಯ ಸಂವತ್ಸರವೆಂದರೂ ನಮ್ಮ ಪಾಲಿಗೆ ಕ್ಷಯವಾಗಿಯೇ ಪರಿಣಮಿಸಿತು. ಮಂಗಳವಾರವೆಂದರೂ ಅಮಂಗಳವಾಗಿಯೇ ಪರಿಣಮಿಸಿತು—ಆ ಶ್ರಾವಣ ಬಹುಳ ಪ್ರಥಮ ಎಂಬ ಉದ್ಗಾರದಿಂದಲೇ "ದುರ್ದಿನ"

ಎಂಬ ತಮ್ಮ ಲೇಖನವನ್ನು ಬರೆದವರು–ಕನ್ನಡಿಗರು ಎಂದೂ ಮರೆಯಲಾರದ ಶ್ರೀ ಹೆಚ್. ಚೆನ್ನಕೇಶವ ಅಯ್ಯಂಗಾರರು ! ವರ್ಧಮಾನಯ್ಯನವರ ಧರ್ಮಪರಿಪಾಲನೆ, ಅನ್ಯಮತಗಳ ಬಗ್ಗೆ ಸಹಿಷ್ಣುತೆ ಮೊದಲಾಗಿ, ಅವರ ವಿಶಾಲಹೃದಯದ ಪರಿಚಯವು ಈ ಲೇಖನದಲ್ಲಿ ಮೂಡಿಬಂದಿದೆ. ಶ್ರೀ ಸಾಲಿರಾಮಚಂದ್ರರಾಯರು "ಹಾ ! ಹಾ ! ವರ್ಧಮಾನಾ !!" ಎಂದು ಬರೆದ ನಾಲ್ಕು ಪದ್ಯಗಳಲ್ಲಿ ನಾಲ್ಕನೆಯ ಪದ್ಯ ಹಿಂಗಿದೆ—

''ಬಿರಗುವಡೆದಾಹೂವುಗಳನುಮ್ಮೆ। ಮರೆತುನೋಡುತ
ನಿಂತೆನನೀತರೊಳರರೆ ನಿರ್ದಯದೊಂದು ಕೋಣವು
ಬಂದು ಮೆಲ್ಲ್ಯಾಯ್ತು॥ ಇದುಕೋಡುಗಳಿಂದ ತಲೆ
ಯನು। ಹರಿದು ಚೆಲ್ಲಿತು ಹುಟ್ಟಿತಾರ್ತ—। ಸ್ವರವು
"ಹಾ! ಹಾ! ವರ್ಧಮಾನಾ !! ಎಂದು ನೆಲದಿಂದ !"

(ಪದ್ಯ 4, ಪುಟ 33)

ಶ್ರೀ ಚಂದಪ್ಪ ಟ್ರಸ್ಟ್ ಮತ್ತು ಸೆಕ್ರೆಟರಿ, ಜೈನಬ್ರಾಹ್ಮಣ ವಿದ್ಯಾರ್ಥಿ ನಿಲಯ, ಮೈಸೂರು, ಇವರು ವರ್ಧಮಾನಯ್ಯನವರ ನಿಧನ ಜೈನ ಸಮಾಜಕ್ಕೆ ತಂದ ದೌರ್ಭಾಗ್ಯವನ್ನು "ಜೈನ ಸಮಾಜದ ದೌರ್ಭಾಗ್ಯ" ಎಂಬ ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ. ಶ್ರೀ ಕೃಷ್ಣಸ್ವಾಮಿ ಶಾಸ್ತ್ರಿಗಳು ಮೈಸೂರು, ಅವರು ಸಂಸ್ಕೃತದಲ್ಲಿ ಬರೆದವರು "ಚರಮ ಪದ್ಯಗಳು" ಎಂಬವುಗಳಲ್ಲಿ ಮೊದಲನೆಯ ಪದ್ಯ ಹೀಗಿವೆ :—

ಜೈನಪಾದಪ ಸಂಜಾತಂ ವರ್ಧಮಾನಸುಮಂನರಂ।
ತದ್ಗುಣಾಕೃಷ್ಟಚೇತೋಭಿರ್ದೇವೈರ್ಹೃತಮಸಂಶಯಂ॥

(ಪದ್ಯ 1, ಪುಟ 38)

'ಮಂಕುತಿಮ್ಮನಕಗ್ಗ'ವನ್ನು ಬರೆದು, ಕನ್ನಡಿಗರ ಮಂಕುತನವನ್ನು ತಿದ್ದಿದ, ಘನವಿದ್ವಾಂಸರಾದ ಶ್ರೀ ಡಿ. ವಿ. ಗುಂಡಪ್ಪನವರು, "ಶ್ರೀಯುತ ವರ್ಧಮಾನಯ್ಯನವರು" ಎಂಬ ಲೇಖನ ಬರೆದು, ಬಹು ಮಾರ್ಮಿಕವಾಗಿ, ತೂಕಬದ್ಧವಾಗಿ, ವರ್ಧಮಾನಯ್ಯನವರ ಪರಿಚಯ ಮಾಡಿದ್ದಲ್ಲದೆ, ವರ್ಧಮಾನಯ್ಯನವರು ಸಾರ್ವಜನಿಕ ಹಿತಕ್ಕಾಗಿ ಇಟ್ಟುಕೊಂಡ ಯೋಚನೆಗಳನ್ನು ತಮ್ಮೆದುರು ಹೇಳಿದ್ದನ್ನು ಸೂಚಿಸಿ, ಆಗಿನ ಮೈಸೂರು ಸಂಸ್ಥಾನಕ್ಕೆ, ಒಳ್ಳೆ ದಿನಪತ್ರಿಕೆಯ ಆವಶ್ಯಕತೆಯನ್ನು ಸೂಚಿಸಿದ್ದನ್ನು ಹೇಳಿದ್ದಾರೆ. ಶ್ರೀ ವರ್ಧಮಾನಯ್ಯನವರ ಧರ್ಮಗುರುಗಳಾಗಿದ್ದ ಸ್ವಸ್ತಿಶ್ರೀ ನೇಮಿಸಾಗರ ವರ್ಣಿಜಿ, ಕಾರ್ಕಳ, ಅವರು ಬರೆದ "ದುರ್ದಿನಗಳು" ಎಂಬ ಲೇಖನದಲ್ಲಿ, ಸ್ವಾಮಿಜಿ, ವರ್ಧಮಾನಯ್ಯನವರ ಆತ್ಮಕಲ್ಯಾಣ ಬಯಸಿ, ಸಮಾಜಬಾಂಧವರಿಗೆ ಸಾಂತ್ವನ ಹೇಳಲು ಪ್ರಯತ್ನಿಸಿದ್ದಾರೆ.

"ಶ್ರೀಯುತ ಲೇಟ್ ವರ್ಧಮಾನಯ್ಯನವರು" ಎಂಬ ಲೇಖನವನ್ನು ಡಾಕ್ಟರ್ ಆರ್. ಶಾಮಾಶಾಸ್ತ್ರಿಗಳು, ಬಿ.ಎ., ಪಿ.ಹೆಚ್.ಡಿ., ಅವರು ಬರೆದ್ದಾರೆ. ಪ್ರತಿಭೆ, ಧರ್ಮಾಚರಣೆ, ಪರರ ಹಿತ ಮಾಡುವ ಗುಣಗಳಿಂದ ವಿರಾಜಮಾನರಾಗಿ, ಕೀರ್ತಿಶೇಷರಾದ ವರ್ಧಮಾನಯ್ಯನವರ ಪರಿಚಯ ಮಾಡಿ, ಸಾಂತ್ವನ ಹೇಳಿ, ಅವರ ವಂಶದ ಕುಡಿ ಅಭಿವೃದ್ಧಿ ಹೊಂದಲೆಂದು ಪ್ರಾರ್ಥಿಸಿದ್ದಾರೆ. "ಕರ್ನಾಟಕದ ಮಹಾಪುರುಷರು ಮತ್ತು ಜೈನಧರ್ಮಧ್ವಜರು" ಎಂಬ ತಮ್ಮ ಲೇಖನದಲ್ಲಿ ಶ್ರೀ ಶೇಷ. ಬಿ. ಪಾರಿಶವಾಡರು, ಶ್ರೀ ವರ್ಧಮಾನಯ್ಯನವರ ಗುಣಗಳನ್ನೂ ಸ್ಮರಿಸಿ, ಅವರು ಮಾಡಿದ ಉತ್ತಮ ಕಾರ್ಯಗಳನ್ನು ಮುಂದುವರಿಸಿಕೊಂಡು ಜೈನಧರ್ಮದ ಶ್ರೇಯಸ್ಸಿಗಾಗಿ ಪ್ರಯತ್ನಿಸುವುದವಶ್ಯವೆಂಬುದನ್ನು ಸೂಚಿಸಲು ಪ್ರಯತ್ನಿಸಿದ್ದಾರೆ.

ಶ್ರೀ ವರ್ಧಮಾನಯ್ಯನವರು ತೀರಿದಾಗ "ಮಧ್ಯಾಹ್ನದ ಸೂರ್ಯನು ಮರೆಯಾದನು" ಎಂದು ದುಃಖಿಸಿದ್ದಾರೆ–ಶ್ರೀ ಎಂ. ನೇಮಿರಾಜಶಾಸ್ತ್ರಿಗಳು, ಮೈಸೂರು. ವರ್ಧಮಾನಯ್ಯನವರು ನಡೆಯಿಸುತ್ತಿದ್ದ ಗೃಹಸ್ಥಜೀವನವನ್ನು ಪರಿಚಯಿಸಿ, ಅವರ ಸ್ಮಾರಕಗಳಾಗಿ, ಏನೇನು ಕಾರ್ಯ ನಡೆಯಬೇಕೆಂಬುದನ್ನು ಸೂಚಿಸಿದ್ದಾರೆ.

"ಜನಪದವೇ ದೇವನಿಲಯಂ, ಜನಪೂಜೆಯೇ ದೇವಪೂಜೆ" ಎಂಬ ತತ್ತ್ವವನ್ನು ಚೆನ್ನಾಗಿ ಅರಿತು, ದೈಹಿಕ ಸುಖವನ್ನು ಲೆಕ್ಕಿಸದೆ, ಸಮಾಜಸುಖಕ್ಕಾಗಿ ದುಡಿದ ಶ್ರೀ ವರ್ಧಮಾನಯ್ಯನವರ ಸ್ವಾರ್ಥ ತ್ಯಾಗವನ್ನು ಎಷ್ಟೆಂದು ಹೇಳುವುದು ?" ಎಂದು ಅಳಲಿದವರು–ಹರಪನಹಳ್ಳಿ, ಶ್ರೀ ಟಾಕಪ್ಪ ಇಜಾರಿಯವರು–ತಮ್ಮ "ದಿವಂಗತ ವರ್ಧಮಾನಯ್ಯನವರು" ಎಂಬ ಲೇಖನದಲ್ಲಿ!

ಶ್ರೀ ವರ್ಧಮಾನಯ್ಯನವರು ರಾಜರಲ್ಲೂ, ಅಧಿಕಾರಿಗಳಲ್ಲೂ, ಪ್ರಸಿದ್ಧ ವರ್ತಕರಲ್ಲೂ ವಿಶ್ವಾಸದಿಂದ ನಡೆದು ಬಂದವರೆಂಬುದನ್ನು ಬೆಂಗಳೂರಿನ ಶ್ರೀ ಟಿ. ಜಿ. ನಾಗರಾಜಯ್ಯನವರು ತಮ್ಮ ಲೇಖನ "ಶ್ರೀ ವರ್ಧಮಾನಯ್ಯನವರ ನಿಧನ" ಎಂಬ ಲೇಖನದಲ್ಲಿ ವಿವರಿಸಿದ್ದಾರೆ.

ಶಾಂತಿಶ್ರೀ

"ಶ್ರೀ ವರ್ಧಮಾನ ಚರಮಪದ್ಯಗಳು" ಎಂಬ ತಮ್ಮ ಹನ್ನೊಂದು ಪದ್ಯಗಳಲ್ಲಿ "ಅವಗಂ ಬಹುಜನರ ಜೀವವಂ ಸಲಹುತ್ತ...... ರಾಜಿಸುತ್ತಿರ್ದನಾ ವರ್ಧಮಾನಯ್ಯ" ಎಂದು ಅವರ ಗುಣಗಳನ್ನು ಹಾಡಿದ್ದಾರೆ–ಶ್ರೀ ಕೆ. ವೀರಣ್ಣನವರು, ಪ್ರಾ.ಸ್ಕೂಲ್, ಹಾಸನ.

"ಶ್ರೀಯುತ ಎಂ.ಎಲ್. ವರ್ಧಮಾನಯ್ಯನವರು" ಎಂಬ ತಮ್ಮ ಲೇಖನದಲ್ಲಿ, ಪಂಡಿತ ಎಂ. ಎಲ್ಲಪ್ಪನವರು, ವರ್ಧಮಾನಯ್ಯನವರ ಅಗಲುವಿಕೆಯ ಬಗ್ಗೆ ದುಃಖ ಗೊಂಡಿದ್ದಾರೆ.

ಶ್ರೀ ಕೆ. ಎಸ್. ಭುಜಬಲಯ್ಯನವರು, ಜೈನ್ ಬೋರ್ಡಿಂಗ್, ಮೈಸೂರು, ಅವರು "ಶ್ರೀ ವರ್ಧಮಾನಯ್ಯನವರ ಗುಣಗಾನ ಪದ್ಯಗಳು" ಎಂಬ ಹತ್ತು ಪದ್ಯಗಳನ್ನು ಬರೆದು, ಅವರ ಗುಣಗಾನ ಮಾಡಿದ್ದಾರೆ.

ಲೇಖನಗಳ ನಂತರ ಶ್ರೀವರ್ಧಮಾನಯ್ಯನವರು ನಿಧನರಾದ ಬಗ್ಗೆ, ಅವರ ಗುಣಗಾನ ಮಾಡಿ, ಅವರ ಆತ್ಮಕ್ಕೆ ಶಾಂತಿಕೋರಿ ಬಂದ ಹಲವು ಮಹನೀಯರು, ವೃತ್ತಪತ್ರಿಕೆಗಳು ಬರೆದ ಉಲ್ಲೇಖಗಳನ್ನು ಪ್ರಕಟಿಸಲಾಗಿದೆ. ಹಿಂದಿ, ಮರಾಠಿ, ಕನ್ನಡ, ಇಂಗ್ಲೀಷ್ ಎಲ್ಲ ವೃತ್ತಪತ್ರಿಕೆಗಳು ವರ್ಧಮಾನಯ್ಯನವರ ಪ್ರಶಂಸೆ ಮಾಡಿರುತ್ತವೆ. ಕೊನೆಗೆ, ಮೈಸೂರಿನ ಶ್ರೀಮನ್ಮಹಾರಾಜರವರು ತಮ್ಮ ಆಪ್ತ ಸಚಿವರ ಮೂಲಕ ಕಳಿಸಿದ ತಂತೀ ಸಮಾಚಾರ, ಮೈಸೂರು ಸಂಸ್ಥಾನದ ದಿವಾನರಾಗಿದ್ದ ಮಿ॥ ಮಿರ್ಜಾಸಾಹೇಬರು ಅವರಿಂದ ಬಂದ ಪತ್ರವನ್ನು ಪ್ರಕಟಿಸಲಾಗಿದೆ.

ಕೊನೆ ಪುಟದಲ್ಲಿ, ವರ್ಧಮಾನಯ್ಯನವರ ಪುತ್ರ ಶ್ರೀ ಸನತ್ಕುಮಾರ ಅವರು, ತಮ್ಮ ತಂದೆಯವರ ನಿಧನಕ್ಕೆ ದುಃಖ ಸೂಚಿಸಿ, ತಮ್ಮ ಕುಟುಂಬಕ್ಕೆ ಸಾಂತ್ವನ ಹೇಳಿದವರಿಗೆಲ್ಲ ಕೃತಜ್ಞತೆ ಸೂಚಿಸಿದ್ದನ್ನು ಪ್ರಕಟಿಸಲಾಗಿದೆ.

ಈ ಸಂಚಿಕೆಯಲ್ಲಿ ವರ್ಧಮಾನಯ್ಯನವರ ಜೀವನಕ್ಕೆ ಸಂಬಂಧಪಟ್ಟ ಫೋಟೋಗಳನ್ನು ಹಾಗೂ ಅವರ ಧರ್ಮಗುರುಗಳಾದ ಸ್ವಸ್ತಿಶ್ರೀ ನೇಮಿಸಾಗರ ವರ್ಣಿಜೀ ಅವರ ಫೋಟೋವನ್ನು ಪ್ರಕಟಿಸಲಾಗಿದೆ.

ಒಟ್ಟಿನಲ್ಲಿ, "ವಿಶ್ವಬಂಧು"ವಿನ ಈ ವಿಶೇಷ ಸಂಚಿಕೆ, ಈ ಪತ್ರಿಕೆಯ ಇತಿಹಾಸದಲ್ಲಿ ಮರೆಯಲಾರದ ಮೌಲಿಕ ಸಂಚಿಕೆಯಾಗಿ ನಿಲ್ಲುತ್ತದೆ. ನಾನು ಹುಟ್ಟಿ, ಅದೇ ಆಗ ಕಣ್ಣು ಬಿಡುತ್ತಿರುವಾಗ ಪ್ರಕಟಗೊಂಡ ಈ ಸಂಚಿಕೆ, ಆಗಲೇ ಕೇವಲ ಮೂವತ್ತೇಳು ಸಂವತ್ಸರ ಕಳೆದು, ಧರ್ಮಕ್ಕೆ, ಶಿಕ್ಷಣಕ್ಕೆ, ಸಮಾಜಕ್ಕೆ, ನಾಡಿಗೆ, ನುಡಿಗೆ–ಒಟ್ಟಿನಲ್ಲಿ–ಮಾನವ ಕುಲಕೋಟಿಗೆ ಅಮೂಲ್ಯ, ಅಮೋಘ ಸೇವೆ ಸಲ್ಲಿಸಿ, ಅಕಾಲದಲ್ಲಿ ಅಸ್ತಂಗತನಾದ "ಮಧ್ಯಾಹ್ನ ಸೂರ್ಯ"–ಶ್ರೀ ವರ್ಧಮಾನಯ್ಯನವರ ಘನ ವ್ಯಕ್ತಿತ್ವವನ್ನು ಮೂರ್ತೀಕರಿಸಿ, ಸಾಕ್ಷಾತ್ ನಮ್ಮೆದುರು ನಿಲ್ಲಿಸುವ ಲೇಖನಗಳನ್ನು, ವೃತ್ತಪತ್ರಿಕೆಗಳ ಸಂದೇಶಗಳನ್ನು ಹೊಂದಿ, ಅವುಗಳನ್ನು ಓದಿದಾಗ ಮನಸ್ಸು ಆ ಭವ್ಯ, ದಿವ್ಯ ಚೇತನವನ್ನು ನೆನೆಯುವಂತೆ ಮಾಡಿ, "ನಿನ್ನಂಗ ಬಾಳಾಕ, ನಿನ್ನಂಗ ಇರಾಕ" ಬೇಡಿಬಂದವದೇಕೋ "ವರ್ಧಮಾನಾ" ಎಂದು ತನ್ನಷ್ಟಕ್ಕೆ ತಾನೇ ಹಾಡುವಂತಾಗುತ್ತದೆ. ಇದರಂತೆ ಈಗಿನ ಪೀಳಿಗೆಯವರಿಗೂ ಸಹ ಚೇತೋಹಾರಿಯಾಗಿ ನಿಲ್ಲುವಂತಾಗಿದೆ.

ಇದಲ್ಲದೆ, ಆ ಕಾಲದ ವಿದ್ವಾಂಸರ ಪರಿಚಯವಾಗುವುದರ ಜೊತೆಗೆ, ಅವರವರ ಬರವಣಿಗೆಯ ಶೈಲಿಯ ವೈಶಿಷ್ಟ್ಯವನ್ನು ತಿಳಿಯಲು ಸಹಕಾರಿಯಾಗುತ್ತದೆ.

ಇಂತಹ ಉಪಯುಕ್ತ ಈ "ವಿಶ್ವಬಂಧು" ವಿಶೇಷ ಸಂಚಿಕೆ, ಓರ್ವ ಮಾನ್ಯ ಮಹಾ ಆತ್ಮಕ್ಕೆ ಶಾಂತಿಯನ್ನು ಕೋರುವ ಕಾರ್ಯವನ್ನು ಹಾಗೂ ಸಂಪಾದಕತ್ವವನ್ನು ಯಶಸ್ವಿಯಾಗಿ ನಿರ್ವಹಿಸಿದ ಪಂಡಿತ ಎ. ಶಾಂತಿರಾಜ ಶಾಸ್ತ್ರಿಗಳ ಕಿರೀಟದಲ್ಲಿ ಶೋಭಿಸುವ ತುರಾಯಿಯಾಗಿದೆಯೆಂದು ಸಂತೋಷದಿಂದ, ಹೆಮ್ಮೆಯಿಂದ ಹೇಳಲು ಅಡ್ಡಿಯಿಲ್ಲ. ●

'ಸಂಸಾರ ಛೇದ ಕಾರಣ ವಯಣಂ ಸುಹ ವಯಣಂ'
ಸಂಸಾರದ ಬಿಡುಗಡೆಗೆ ಕಾರಣವಾದ ವಚನವೇ ಶುಭ ವಚನ.

—ಆಚಾರ್ಯ ಶ್ರೀ ಕುಂದಕುಂದರು

ದ್ವಾದಶಾನುಪ್ರೇಕ್ಷೆ

— **ಶ್ರೀ ಕೆ. ಆರ್. ಶೇಷಗಿರಿ, ಮೈಸೂರು**

ದ್ವಾದಶಾನುಪ್ರೇಕ್ಷೆ ಎಂದರೆ ಹನ್ನೆರಡು ವಿಧವಾದ ಅನುಪ್ರೇಕ್ಷೆಗಳು. ಈ ಸಮಸ್ತ ಪದದಲ್ಲಿ ಅಡಗಿರುವ ಅನುಪ್ರೇಕ್ಷೆ ಎಂಬ ಶಬ್ದಕ್ಕೆ ಹುಡುಕುವುದು, ಚಿಂತಿಸುವುದು, ಅನುಚಿಂತನೆಗೈಯ್ಯುವುದು ಎಂಬ ಪರ್ಯಾಯ ಅರ್ಥಗಳಿವೆ. ಆ ಹನ್ನೆರಡು ವಿಧವಾದ ಅನುಪ್ರೇಕ್ಷೆಗಳು ಯಾವುವೆಂದರೆ ಅನಿತ್ಯ ಅಥವಾ ಅಧ್ರುವ, ಅಶರಣ, ಏಕತ್ವ, ಅನ್ಯತ್ವ, ಸಂಸಾರ, ಲೋಕ, ಅಶುಚಿತ್ವ, ಆಸ್ರವ, ಸಂವರ, ನಿರ್ಜರ, ಧರ್ಮ ಹಾಗೂ ಬೋಧಿದುರ್ಲಭ. ಕೊನೆಯ ಧರ್ಮಾನುಪ್ರೇಕ್ಷೆ, ಬೋಧಿದುರ್ಲಭಾನುಪ್ರೇಕ್ಷೆಗಳ ಕ್ರಮದಲ್ಲಿ ಅದಲು ಬದಲಾಗಿರುವುದುಂಟು. ಕೆಲವು ಗ್ರಂಥದಲ್ಲಿ ಧರ್ಮಾನುಪ್ರೇಕ್ಷೆಯು ಹನ್ನೆರಡನೆಯದಾಗಿ ಬರುತ್ತದೆ; ಆದರೆ ಇನ್ನೂ ಹಲವಾರು ಗ್ರಂಥಗಳಲ್ಲಿ ಬೋಧಿದುರ್ಲಭಾನುಪ್ರೇಕ್ಷೆ ಕಡೆಯಲ್ಲಿ ಬರುತ್ತದೆ. ಕನ್ನಡದಲ್ಲಿ ರಚಿತವಾಗಿರುವ ವಿಜಯಣ್ಣನ ದ್ವಾದಶಾನುಪ್ರೇಕ್ಷೆ ಗ್ರಂಥದಲ್ಲಿ ಬೋಧಿದುರ್ಲಭಾನುಪ್ರೇಕ್ಷೆ ಅಂತ್ಯದಲ್ಲಿ ಬಂದಿದೆ. ಒಟ್ಟಿನಲ್ಲಿ ಇದು ಮೊದಲು ಅದು ಕೊನೆ ಮುಖ್ಯವಲ್ಲ; ಮೊದಲ ಹನ್ನೊಂದು ಅನುಪ್ರೇಕ್ಷೆಗಳನ್ನು ರೂಢಿಸಿಕೊಂಡ ನಂತರವೇ ಬೋಧಿದುರ್ಲಭವನ್ನು ಪಡೆಯುವುದು. ಹಾಗಾಗಿ ವಿಜಯಣ್ಣನ ಕ್ರಮವನ್ನು ಅನುಮೋದಿಸಬಹುದು. ಹೀಗೆಯೇ ಪ್ರಾಕೃತ, ಸಂಸ್ಕೃತದ ಕೆಲವು ಕೃತಿಗಳಲ್ಲಿ ಬಂದಿದೆ. ಅನುಪ್ರೇಕ್ಷೆ ಎಂಬ ಶಬ್ದ ಜೈನರಿಗೆ ಬಹಳ ಪರಿಚಿತವಾದ ಪದವೆಂದು ಎಲ್ಲರಿಗೂ ತಿಳಿದಿದೆ.

ಅನುಪ್ರೇಕ್ಷೆಗಳ ವಿವರವನ್ನು ಕುರಿತು '**ದ್ವಾದಶಾನುಪ್ರೇಕ್ಷೆ**' ಎಂಬ ನಾಮಾಂಕಿತದಲ್ಲಿಯೇ 1936 ರಲ್ಲಿಯೇ ಬರೆದು ಅಚ್ಚು ಹಾಕಿಸಿದವರು ಆಸ್ಥಾನ ವಿದ್ವಾನ್ ಎರ್ತೂರು ಶಾಂತಿರಾಜಶಾಸ್ತ್ರೀ ಅವರು. ಜೈನ ಸಾಹಿತ್ಯವನ್ನು ಕರಗತಮಾಡಿಕೊಂಡು ಆ ಒಂದು ಚಿಕ್ಕ ಪುಸ್ತಕವನ್ನು ಸುಲಭ ಗ್ರಾಹ್ಯವಾಗುವಂತೆ ಬರೆದರು. ಶ್ರೀಯುತರು ಪ್ರಾಕೃತ, ಸಂಸ್ಕೃತಗಳಲ್ಲಿ ಪ್ರಕಾಂಡ ಪಂಡಿತರೆನಿಸಿದ್ದರಿಂದ ಕನ್ನಡದಲ್ಲಿ ಸರಳರೂಪದಲ್ಲಿ ಕಿರುಹೊತ್ತಿಗೆಯನ್ನು ಜೈನರಿಗೂ ಜೈನೇತರರಿಗೂ ಉಪಕಾರ ಮಾಡಿದ್ದಾರೆ. 1936ರಲ್ಲಿ ಮೊದಲ ಮುದ್ರಣ ಕಂಡ ಈ ಪುಸ್ತಕ 1950, 1967 ಮತ್ತು 1988ರಲ್ಲಿ ಮರುಮುದ್ರಣಗೊಂಡಿರುವುದನ್ನು ಗಮನಿಸಿದರೆ ಅದರ ಮಹತ್ವವನ್ನು ಪ್ರಕಾಶಪಡಿಸುತ್ತದೆ. ಕಳೆದ ವರ್ಷದ ಮುದ್ರಣಕ್ಕೆ ಶ್ರವಣಬೆಳಗೊಳದ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರು ಮುನ್ನುಡಿ ಬರೆದಿದ್ದಾರೆ. ಅನುಪ್ರೇಕ್ಷಾ ಎಂದರೇನು? ದ್ವಾದಶಾನುಪ್ರೇಕ್ಷೆಯ ವಿವರವೇನು ? ಎಂಬುದರ ಬಗೆಗೆ ನಾಲ್ಕು ಮಾತುಗಳನ್ನಾಡಿದ್ದಾರೆ. ಅನಿತ್ಯಾನುಪ್ರೇಕ್ಷೆಯ ಒಂದು ಅಂಶವನ್ನು ಉಲ್ಲೇಖಿಸಿದ್ದಾರೆ; ಆದರೆ ಉಳಿದ ಅನುಪ್ರೇಕ್ಷೆಗಳ ಅಂತರ್ಯವನ್ನು ತಿಳಿಯಬೇಕಾದರೆ ಈ ಗ್ರಂಥವನ್ನು ಆಸ್ಥೆಯಿಂದ ಪಠಿಸಬೇಕು.

ಮೊದಲ ಮುದ್ರಣದ ಪ್ರತಿಗೆ ಗ್ರಂಥಕರ್ತರಾದ ಶಾಂತಿರಾಜಶಾಸ್ತ್ರೀ ಅವರೇ ಮುನ್ನುಡಿ ಬರೆದಿದ್ದಾರೆ. ಆಗ ಈ ಪುಸ್ತಕ ಶಾಸ್ತ್ರದಾನವಾಗಿ ವಿತರಣೆಯಾದ ಅಂಶವನ್ನು ತಿಳಿಸಿದ್ದಾರೆ. ಶಾಸ್ತ್ರದಾನದ ವಿವರಣೆಯನ್ನು ಕೊಡುತ್ತಾ ಶ್ರೀಯುತರು ನಾಲ್ಕು ರೀತಿಯ ದಾನಗಳನ್ನು ಹೆಸರಿಸುತ್ತಾರೆ; ಆಹಾರದಾನ, ಅಭಯದಾನ, ಭೈಷಜ್ಯದಾನ ಹಾಗೂ ಶಾಸ್ತ್ರಜ್ಞಾನದಾನ. ಕೊನೆಯದಾದ ಶಾಸ್ತ್ರಜ್ಞಾನದಾನ ಅತ್ಯಂತ ಶ್ರೇಷ್ಠದಾನವೆಂದು ಸ್ಪಷ್ಟಪಡಿಸಿದ್ದಾರೆ. ಏಕೆಂದರೆ "ಆಹಾರದಾನದಿಂದ ಪಾತ್ರನಿಗೆ ತಾತ್ಕಾಲಿಕವಾದ ತೃಪ್ತಿಯುಂಟಾಗುವುದು, ಅದಕ್ಕಿಂತ ದೀರ್ಘಕಾಲದ ಅಧಿಕ ತೃಪ್ತಿಯು ಅಭಯದಾನದಿಂದಲೂ ಅದಕ್ಕಿಂತ ಭೈಷಜ್ಯದಾನದಿಂದಲೂ ಉಂಟಾಗುವುದು..

ಸಚ್ಛಾಸ್ತ್ರದಾನ ಮೂಲಕವಾದ ಸಮ್ಯಗ್ಜ್ಞಾನದಾನದಿಂದಾದರೋ ಜನ್ಮಪರ್ಯಂತ ತೃಪ್ತಿಯುಂಟಾಗಬಹುದು. 'ಜ್ಞಾನಂ ತ್ರೈಲೋಕ್ಯ ದುರ್ಲಭಂ' ಎಂದು ಪ್ರಶಂಸಿಸಲ್ಪಟ್ಟಿರುವ ಇಂತಹ ಜ್ಞಾನದ ಸಂಸ್ಕಾರವು ಭವಾಂತರಗಳಲ್ಲಿಯೂ ಉದ್ಯೋತಿತವಾಗಬಹುದು. ಇದು ಪಾತ್ರನಿಗೆ ಆತ್ಮಕಲ್ಯಾಣಕಾರಿಯಾಗಿದೆ. ಈ ವೈಶಿಷ್ಟ್ಯವು ಇತರ ದಾನಗಳಿಗೆ ಸಲ್ಲದು" (ಪುಟ. xii). ಹಾಗಾದರೆ ಈ ಜ್ಞಾನದಾನ ಮಾಡುವವನಿಗೆ ದೊರೆಯುವ ಫಲವೇನು ? "ಸತ್ಪರಿಣಾಮದಿಂದ ಶಾಸ್ತ್ರದಾನವನ್ನು ಮಾಡುವ ದಾತೃವಿಗೆ ಸತ್ಕೀರ್ತಿಯೂ ಪುಣ್ಯಫಲವೂ ಪ್ರಾಪ್ತವಾಗುತ್ತವೆಂದು ಹೇಳುವ ಮಾತು ಸರ್ವಸಾಮಾನ್ಯವಾಗಿದೆ. ಜ್ಞಾನವನ್ನು ಮಾಡುವ ಪುಣ್ಯಾತ್ಮರಿಗೆ ಈ ಎರಡೇ ಫಲಗಳಲ್ಲದೆ 'ಜ್ಞಾನವಾನ್ ಜ್ಞಾನದಾನೇನ' ಎಂದು ಹೇಳಲ್ಪಟ್ಟಿರುವಂತೆ ಭವಾಂತರದಲ್ಲಿ ಉತ್ತಮಜ್ಞಾನ ಪ್ರಾಪ್ತಿಯೂ ಆಗುವುದು. ಇದು ಪರಮಾಗಮದಲ್ಲಿ ವರ್ಣಿತವಾಗಿರುವ ವಸ್ತುಸ್ಥಿತಿ ಶುಷ್ಕ ಪ್ರಶಂಸೆಯಲ್ಲ" (ಪುಟ xii). ಶಾಸ್ತ್ರದಾನಕ್ಕೆ ಬಹುಶಃ ಜೈನ ಗ್ರಂಥಗಳಲ್ಲಿ ದ್ವಾದಶಾನುಪ್ರೇಕ್ಷೆಯಂತಹ ಕೃತಿಯಲ್ಲದೆ ಇನ್ನೊಂದು ಗ್ರಂಥವಿಲ್ಲ. ಸಮಾಜ–ಅದರೊಳಗಿರುವ ಮಾನವ ಜೀವಿಗಳು. ಕಾಲಕಾಲಕ್ಕೆ ಅವರು ಲೋಕದಲ್ಲಿ ಆಚರಿಸಬೇಕಾದ ಕಾರ್ಯ ನಡವಳಿಕೆ ಇವುಗಳನ್ನು ನೇರವಾಗಿ ವಿವರಿಸುತ್ತದೆ. ಇದರಲ್ಲಿ ಬರುವ ಉಪದೇಶಗಳನ್ನು ಅನುಸರಿಸುವುದು ಬಹು ಸುಲಭ. ಅನಾಯಾಸವಾಗಿ ಮನಸ್ಸಿಗೆ ನೇರವಾಗಿ ಮುಟ್ಟಿ, ತೀವ್ರಗತಿಯಲ್ಲಲ್ಲದಿದ್ದರೂ ನಿಧಾನವಾಗಿ ಸತ್ಕಾರ್ಯಗಳನ್ನೆಸಗುವಂತೆ ಪ್ರಚೋದಿಸುತ್ತದೆ. ಲೋಕದ ಸ್ಥಿತಿ, ಧರ್ಮ ಸ್ವರೂಪಗಳನ್ನು ಸವಿವರವಾಗಿ ತಿಳಿಸುತ್ತದೆ. ಜೀವನದ ಮೌಲ್ಯ, ಗುರಿಗಳನ್ನು ತಿಳಿದು ಅವನ್ನು ಹೇಗೆ ಸಾಧಿಸಬೇಕು ಎಂಬ ನಿರ್ದೇಶನ ನೀಡುತ್ತದೆ. ಇವಲ್ಲದೆ ಮಾನವನಿಗೆ ಇನ್ನೇನು ಬೇಕು ? ಗೃಹಸ್ಥನಾದರೆ ಸದ್ಗೃಹಸ್ಥನಾಗಿ, ಸನ್ಯಾಸಿಯಾದರೆ ಉತ್ತಮ ಸನ್ಯಾಸಿಯಾಗಿ ಬಾಳುವುದನ್ನು ತಿಳಿಸಿಕೊಡುತ್ತದೆ.

ದ್ವಾದಶ ಅನುಪ್ರೇಕ್ಷೆಗಳನ್ನು ವಿವರಿಸುವ ಗ್ರಂಥಗಳು ಪ್ರಾಕೃತ, ಸಂಸ್ಕೃತ, ಕನ್ನಡ ಭಾಷೆಗಳಲ್ಲಿವೆ. ಕುಂದಕುಂದಾಚಾರ್ಯರ ಬಾರಸ ಅಣುವೆಕ್ಖಾ, ವಟ್ಟಕೇರರ ಮೂಲಾಚಾರ, ಉದ್ಯೋತನ ಸೂರಿಯ ಕುವಲಯಾಮಾಲಾ, ಜಿನಸೇನ-ಗುಣಭದ್ರರ ಮಹಾಪುರಾಣ, ಸೋಮದೇವನ ಯಶಸ್ತಿಲಕ, ಅಮಿತಗತಿಯ ಉಪಾಸಕಾಚಾರ, ನೇಮಿಚಂದ್ರನ ಪ್ರವಚನ ಸಾರೋದ್ಧಾರ, ಶಿವಾರ್ಯನ ಭಗವತೀ ಆರಾಧನಾ, ಶುಭಚಂದ್ರನ ಕಾರ್ತಿಕೇಯಾನುಪ್ರೇಕ್ಷಾ ಟೀಕು, ಬಾಲಚಂದ್ರದೇವನ ತತ್ತ್ವರತ್ನಪ್ರದೀಪಿಕೆ ಮೊದಲಾದ ಕೃತಿಗಳು ಅನುಪ್ರೇಕ್ಷೆಯ ವಿವರವನ್ನು ನೀಡುತ್ತವೆ. ಕನ್ನಡದಲ್ಲಿ ಮುಖ್ಯವಾಗಿ ಬಂಧುವರ್ಮನ ಜೀವಸಂಬೋಧನಂ ವಿಜಯಣ್ಣನ ದ್ವಾದಶಾನುಪ್ರೇಕ್ಷೆ ಎಂಬ ಕೃತಿಗಳು. ಇತರ ಭಾಷೆಗಳಲ್ಲಿಯೂ ದ್ವಾದಶಾನುಪ್ರೇಕ್ಷಾಕೃತಿಗಳಿವೆಯೆಂದು ತಿಳಿದುಬರುತ್ತದೆ. ಉದಾ: ೧೫ನೆಯ ಶತಮಾನದಲ್ಲಿದ್ದ ಗುಣಕೀರ್ತಿಯ ದ್ವಾದಶಾನುಪ್ರೇಕ್ಷೆ ಎಂಬ ಗ್ರಂಥವು ಉಪಲಬ್ಧವಾಗಿದ್ದು ಅದು ಮರಾಠಿ ಭಾಷೆಯಲ್ಲಿದೆ (ಕಾರ್ತಿಕೇಯಾನುಪ್ರೇಕ್ಷೆ : ಸಂ. ಎ. ಎನ್. ಉಪಾಧ್ಯೆ, ಪುಟ ೩೦ ಅಡಿಟಿಪ್ಪಣಿ).

ಕುಂದಕುಂದನು ಸನ್ಯಾಸಿಗಳಿಗೂ ಸಂಸಾರಿಗಳಿಗೂ ಅನ್ವಯವಾಗುವಂತೆ ಅನುಪ್ರೇಕ್ಷೆಗಳ ವಿವರವನ್ನು ಹೇಳಿದ್ದರೆ ವಟ್ಟಕೇರನು ತತ್ತ್ವರೂಪದಲ್ಲಿ ತಿಳಿಸಿದ್ದಾನೆ. ಬಂಧುವರ್ಮನು ಅನೇಕ ಕಥೆಗಳನ್ನು ಹೇಳಿ ಅನುಪ್ರೇಕ್ಷೆಯನ್ನು ವಿವರಿಸಿದ್ದಾನೆ. ವಿಜಯಣ್ಣನು ತನ್ನದೇ ಆದ ವಿಶಿಷ್ಟಶೈಲಿಯಲ್ಲಿ ದೃಷ್ಟಾಂತಗಳ ಮೂಲಕ ಹೇಳಿದ್ದಾನೆ. ಸಂದರ್ಭಕ್ಕೆ ತಕ್ಕಂತೆ ಕಥೆಗಳನ್ನು ಸೂತ್ರರೂಪದಲ್ಲಿ ತಿಳಿಸಿದ್ದಾನೆ.

'ಅನಿತ್ಯಾ ಶರಣ ಸಂಸಾರೇಕತ್ವಾನ್ಯತ್ವಾ ಶುಚ್ಯಾಸ್ರವ ಸಂವರ ನಿರ್ಜರಾ ಲೋಕ ಬೋಧಿದುರ್ಲಭ ಧರ್ಮ ಸ್ವಾಖ್ಯಾತತ್ತ್ವಾನು ಚಿಂತನಮನುಪ್ರೇಕ್ಷಾ'– ಎಂದು ಒಂದೇ ವಾಕ್ಯದಲ್ಲಿ ಹಿಡಿದಿಟ್ಟಿರುವುದನ್ನು ಒಂದೆರಡು ಮಾತುಗಳಲ್ಲಿ ವಿವರಿಸಬಹುದು. ಅನಿತ್ಯ ಅಥವಾ ಅಧ್ರುವಾನುಪ್ರೇಕ್ಷೆ ಎಂದರೆ ಜಗತ್ತೇ ನಶ್ವರವೆಂದೆನಿಸಿದ ಮೇಲೆ ಅದರ ಮೇಲಿರುವ ವಸ್ತುಗಳು ಜೀವಿಗಳು ಈ ರೂಪ ಯೌವನ ಭೋಗ ಸುಖ ಮೊದಲಾದುವು ಮಿಂಚು ಹೊಳೆದು ಮಾಯವಾದಂತೆ ನಶ್ವರ ಎಂದು ಚಿಂತಿಸುವುದಾಗಿದೆ.

ಭವಾವಳಿಯಲ್ಲಿ ಅಲೆಯುತ್ತಿರುವ ಜೀವಕ್ಕೆ ಎಂದು ಆಯುಷ್ಯವು ಮುಗಿದು ಯಮನು ಒಯ್ಯುವಾಗ ಯಾರೂ ರಕ್ಷಿಸುವುದಿಲ್ಲ ಎಂದು ಚಿಂತಿಸುವುದು ಅಶರಣಾನುಪ್ರೇಕ್ಷೆ.

ಸಂಸಾರದ ಸುಳಿಗೆ ಸಿಕ್ಕಿ ಮುಳುಗೇಳುವ ಜೀವವು ನರಕ ತಿರ್ಯಕ್ ಮಾನವ ದೇವ ರೂಪವನ್ನು ತಾಳಿ ನರಕಾದಿ ಚತುರ್ಗತಿಗಳಲ್ಲಿ ಪರಿಭ್ರಮಿಸುವುದೇ ಸಂಸಾರಾನುಪ್ರೇಕ್ಷೆ.

ಪಾಪ ಪುಣ್ಯಗಳ ಫಲದಿಂದ ಒಂದು ಜೀವ ದುಃಖ, ಸುಖಗಳನ್ನು ಪಡೆಯುವಾಗ ತಾನು ಏಕಾಂಗಿ, ಇತರರಾರೂ ಬಿಡುಗಡೆಮಾಡಲು ಅಸಾಧ್ಯ ಎಂದು ಚಿಂತಿಸುವುದೇ ಏಕತ್ವಾನುಪ್ರೇಕ್ಷೆ.

ಪರವಸ್ತುಗಳಾವುವು ತನ್ನದಲ್ಲ, ಅಲ್ಲದೆ ಅವು ಸ್ಥಿರವಲ್ಲ ಎಂದು ತಿಳಿದು ಚಿಂತಿಸುವುದೇ ಅನ್ಯತ್ವಾನುಪ್ರೇಕ್ಷೆ.

ಈ ಶರೀರವು ಅತ್ಯಂತ ಅಶುಚಿಯಾದದ್ದು. ಇದು ಮಲಮೂತ್ರ ರಕ್ತ ಮಾಂಸ ಮಜ್ಜೆ ಅಸ್ಥಿಗಳಿಂದ ಕೂಡಿದ್ದು, ಆದರೆ ಅಶುಚಿತ್ವದ ಅಂದರೆ ಈ ದೇಹದ ಮೂಲಕವೇ ಉತ್ತಮ ಲೋಕವನ್ನು ಪಡೆಯುವ ಮನಸ್ಸು ಮಾಡಬೇಕು, ಹೀಗೆ ಚಿಂತಿಸುವುದೇ ಅಶುಚಿತ್ವಾನುಪ್ರೇಕ್ಷೆ.

ಜೀವಕ್ಕೆ ತನು ಮನ ವಚನಾದಿಗಳಿಂದ ನದೀ ಪ್ರವಾಹದಂತೆ ಸದಾ ಶುಭಾಶುಭಕರ್ಮಗಳು ಬಂದು ಸೇರುತ್ತಿರುವುದಕ್ಕೆ ಆಸ್ರವವೆಂದು ಕರೆವರು. ಮಿಥ್ಯಾತ್ವ ಯೋಗ ಕಷಾಯದಿಂದ ಅಶುಭದಾಸ್ರವವೂ ವ್ರತ, ನಿಯಮ, ಧರ್ಮಚಿಂತನೆಗಳಿಂದ ಶುಭದಾಸ್ರವವೂ ಜೀವಕ್ಕೆ ಒದಗುತ್ತದೆ. ಆಸ್ರವದಲ್ಲಿ ಜ್ಞಾನಾವರಣೀಯ, ದರ್ಶನಾವರಣೀಯ, ಅಸಾತವೇದನೀಯ, ಸಾತವೇದನೀಯ, ಮೋಹನೀಯ ಆಸ್ರವಗಳೆಂದು ಇನ್ನೂ ಹಲವಾರು ವಿಧಗಳುಂಟು. ಈ ತರಹದ ಆಸ್ರವಗಳು ಜೀವಕ್ಕೆ ಹಾನಿಮಾಡುವುದೆಂದು ಚಿಂತಿಸುವುದೇ ಆಸ್ರವಾನುಪ್ರೇಕ್ಷೆ.

ಜೀವಕ್ಕೆ ಸದಾ ಹರಿದು ಬರುವ ಆಸ್ರವವನ್ನು ತಡೆಯುವುದಕ್ಕೆ ಸನ್ಮಾರ್ಗದಲ್ಲಿ ನಡೆಯಬೇಕು ಎಂದು ಚಿಂತಿಸುವುದೇ ಸಂವರಾನುಪ್ರೇಕ್ಷೆ.

ಹೊಸದಾಗಿ ಹರಿದು ಬರುವ ಕರ್ಮವನ್ನು ತಡೆದು ಈಗಾಗಲೇ ಅಂಟಿರುವ ಕರ್ಮವನ್ನು ಹೋಗಲಾಡಿಸಿ ಕೊಳ್ಳುವುದೇ ನಿರ್ಜರಾನುಪ್ರೇಕ್ಷೆ.

ಒಂದೂವರೆ ಮದ್ದಳೆಯಾಕಾರದಲ್ಲಿ ಅಂದರೆ ಮೇರೆಯಿಲ್ಲದ ಆಕಾಶದ ನಡುವೆ ಒಬ್ಬ ಮನುಷ್ಯ ತನ್ನ ಕೈಗಳನ್ನು ಸೊಂಟದ ಮೇಲಿರಿಸಿ, ಕಾಲುಗಳನ್ನು ಪಸರಿಸಿ ನಿಂತಿರುವ ಆಕಾರದಂತೆ ಲೋಕವಿದೆ ಎಂದು ಭಾವಿಸುವುದು ಮತ್ತು ಈ ಲೋಕದ ಮಹತ್ವವನ್ನು ಚಿಂತಿಸುವುದೇ ಲೋಕಾನುಪ್ರೇಕ್ಷೆ.

ಧರ್ಮವು ನಿರ್ಮಲ ಸುಖಕ್ಕೆ ಸಹಕಾರಿಯಾದಲ್ಲಿ ಸದ್ಧರ್ಮವೆನಿಸುವುದು. ಧರ್ಮದಲ್ಲಿ ಸಾಗಾರ, ಅನಾಗಾರ ಧರ್ಮಗಳೆಂದು ಎರಡು ವಿಧ. ಮೊದಲನೆಯದು ಶ್ರಾವಕರಿಗೂ ಎರಡನೆಯದು ಯತಿಗಳಿಗೂ ಅನ್ವಯವಾಗುತ್ತದೆ. ಧರ್ಮವನ್ನು ಪಾಲಿಸುವವನು ಪಂಚಾಣುವ್ರತ, ಮೂರುಗುಣವ್ರತ, ನಾಲ್ಕು ಶಿಕ್ಷಾವ್ರತಗಳನ್ನು ಆಚರಿಸುತ್ತಾ ಧರ್ಮ ಚಿಂತನೆಯಲ್ಲಿ ತೊಡಗುವುದೇ ಧರ್ಮಾನುಪ್ರೇಕ್ಷೆ.

ಹನ್ನೆರಡನೆಯದಾದ ಬೋಧಿದುರ್ಲಭಾನುಪ್ರೇಕ್ಷೆ ಅನುಪ್ರೇಕ್ಷೆಗಳಲ್ಲಿ ಕಡೆಯದು ಆದರೆ ಮುಖ್ಯವಾದುದು. ಜೀವವು ಅನಂತಕಾಲ ನಿಗೋಧದಲ್ಲಿ ಚಲಿಸಿ ಮಾನವ ಜನ್ಮವನ್ನು ತಾಳುತ್ತದೆ. ಈ ಜೀವವು ಮೋಕ್ಷವನ್ನು ಹೊಂದಬೇಕಾದರೆ ತಪ. ಗುಣ, ಧರ್ಮ, ದಾನ, ಪೂಜೆ, ಶೀಲ. ವ್ರತಗಳನ್ನಾಚರಿಸಬೇಕು. ಈ ರೀತಿಯ ಆಚರಣೆ ಮಾನವನಿಗೆ ಮಾತ್ರ ಸಾಧ್ಯ. ಆದುದರಿಂದ ಅತ್ಯಂತ ದುರ್ಲಭವಾದ ಬೋಧಿಯನ್ನು ಪಡೆಯಬೇಕು. ಬೋಧಿ ಎಂದರೆ ಸಮ್ಯಗ್ದರ್ಶನ ಜ್ಞಾನ ಚಾರಿತ್ರ ಮೊದಲಾದ ಆತ್ಮ ಸ್ವಭಾವವನ್ನು ತಿಳಿಯುವುದು. ಬೋಧಿಯನ್ನು ಪಡೆಯಬೇಕೆಂದು ಚಿಂತಿಸುವುದೇ ಬೋಧಿದುರ್ಲಭಾನುಪ್ರೇಕ್ಷೆ.

ಮೇಲೆ ಹೇಳಿರುವ ವಿಷಯಗಳನ್ನೊಳಗೊಂಡಿರುವ ಶಾಸ್ತ್ರೀ ಅವರು ಚಿಕ್ಕ ಪುಸ್ತಕದಲ್ಲಿ ೪೨ ಪುಟಗಳು ಮಾತ್ರ ಇದ್ದರೂ ಅನುಪ್ರೇಕ್ಷೆಗಳ ಸ್ವರೂಪವನ್ನು ಸಾಕಷ್ಟು ವಿವರವಾಗಿಸಾರವತ್ತಾಗಿ ತಿಳಿಯಾದ ಕನ್ನಡ ಭಾಷೆಯಲ್ಲಿ ವಿವರಿಸಿದ್ದಾರೆ. ಸ್ವಭಾವತಃ ಜೈನಧರ್ಮಾನುಯಾಯಿಯಾದುದರಿಂದ ತಮ್ಮ ಅನುಭವಗಳನ್ನು ಅಲ್ಲಲ್ಲಿ ಸೇರಿಸಿರುವುದನ್ನು ಗ್ರಂಥದಲ್ಲಿ ಕಾಣಬಹುದು. ಜೈನ ಕಾವ್ಯಗಳಲ್ಲಿ ಅನುಪ್ರೇಕ್ಷೆಗೆ ಸಂಬಂಧಿಸಿದಂತೆ ಉಲ್ಲೇಖವಾಗಿರುವ ಪದ್ಯವನ್ನೋ ಪದ್ಯದ ಭಾಗವನ್ನೋ ತಮ್ಮ ಕೃತಿಯಲ್ಲಿ ಸಮಯಾನುಸಾರ ಸೇರಿಸಿ, ಅದರ ಬೆಲೆಯನ್ನು ಹೆಚ್ಚುವಂತೆ ಮಾಡಿದ್ದಾರೆ. ಪ್ರಾಕೃತ, ಸಂಸ್ಕೃತ ಕಾವ್ಯಗಳನ್ನಲ್ಲದೆ ಅನುಪ್ರೇಕ್ಷೆಗೆ ಸಂಬಂಧಿಸಿದಂತೆ ಕನ್ನಡದ

ಬಂಧುವರ್ಮ, ರತ್ನಾಕರವರ್ಣಿ, ವಿಜಯಣ್ಣರ ಕೃತಿಗಳನ್ನು ಅಭ್ಯಸಿಸಿದ್ದಾರೆ. ಅವರ ಈ ಕೃತಿಯನ್ನು ಓದುತ್ತಿದ್ದರೆ ವಿಜಯಣ್ಣನ ದ್ವಾದಶಾನುಪ್ರೇಕ್ಷೆಯ ಗದ್ಯಾನುವಾದದ ಕೃತಿಯೋ ಎಂದು ಭಾಸವಾಗುತ್ತದೆ. ಒಂದೆರಡು ಉದಾಹರಣೆಗಳಿಂದ ಸ್ಪಷ್ಟಪಡಿಸಬಹುದು.–

ವಿಜಯಣ್ಣನ ದ್ವಾದಶಾನುಪ್ರೇಕ್ಷೆ ಎಂಬ ಸಾಂಗತ್ಯ ಕೃತಿಯಲ್ಲಿ :

ಸುರ ನರೋರಗ ಯಕ್ಷಪತಿಗಳೈಶ್ವರ್ಯವು
ವರಮಣಿ ಮಾಡ ಗೃಹಗಳು
ಹಿರಿದು ಶಕ್ತಿಗಳಾರೋಗ್ಯ ಜವ್ವನ ರೂಪು
ಸುರಚಾಪದ ಶೋಭೆಯಂತೆ (೧-೩೩)

ವರರಾಜ್ಯಂ ಸುರಚಾಪ ಬಂಧುಜನಮುಂ ಸಂಧ್ಯಾರೇಣಂ ಮತ್ತವಾ
ಜಿ ರಥಂ ವಾರಣಮುಂ ಪದಾತಿನಿವಹಂ ಸ್ತ್ರೀಯರ್ಕಳುಂ ಪುತ್ರರುಂ
ವರ ಮೇಘಾಕೃತಿ ರೂಪು ಯೌವನ ಬಲಂ ವಿದ್ಯುಚ್ಛಳಂ
ನೋಳ್ಪಡಂ
ನಿರುತಂ ನಂಬಲು ಬೇಡ ಜೀವ ನಿನಗಂ ಸದ್ಧರ್ಮವೊಂದೇ
ಧ್ರುವಂ (೧-೪೧)

ಶಾಂತರಾಜಶಾಸ್ತ್ರೀ ಅವರ ಗದ್ಯ ಕೃತಿಯಲ್ಲಿ :

ದೇವೇಂದ್ರ ಧರಣೇಂದ್ರ ಚಕ್ರವರ್ತಿ ಮೊದಲಾದವರ ಸಂಪತ್ತಿಯೂ ಕಾಮನ ಬಿಲ್ಲಿನಂತೆ ಕ್ಷಣನಶ್ವರವಾದುದೆಂದ ಮೇಲೆ ಉಳಿದವರ ಸಂಪತ್ತಿಯು ದೀಪಶಿಖೆಯಂತೆ ಚಂಚಲವಾದುದೆಂದು ಹೇಳಬೇಕಾಗಿಲ್ಲ. ಈ ರೂಪ ಯೌವನ ಭೋಗ ಸುಖ ಮೊದಲಾದುವುಗಳು, ಮಿಂಚಿನಂತೆ ಅಸ್ಥಿರವಾಗಿರುವುವು. ಮನೆ ಮಠ ಮೊದಲಾದವು, ಮರಳಿನಿಂದ ಮಾಡಿದ ಕಟ್ಟಡದಂತೆ, ಉರುಳಿ ಬೀಳುವವು. ತಿಂದ ಆಹಾರವು ಅಜೀರ್ಣವಾದರೂ ಮೂಗಿನಲ್ಲಿ ನೀರು ತುಂಬಿದರೂ ನಡೆಯುವಾಗ ಮುಗ್ಗರಿಸಿದರೂ ಈ ಶರೀರವು ನೀರಿನ ಗುಳ್ಳೆಯಂತೆ ನಾಶವಾಗುವುದು. ಇದನ್ನು ಬಲು ಎಚ್ಚರಿಕೆಯಿಂದ ಕಾಪಾಡಿಕೊಂಡು ಇದರಲ್ಲಿ ಜೀವಾತ್ಮನು ಎಷ್ಟು ಕಾಲ ಬಾಳಿರುವನೋ ಅಷ್ಟೇ ಲಾಭವು. (ಪುಟ–6)

ವಿಜಯಣ್ಣನ ದ್ವಾದಶಾನುಪ್ರೇಕ್ಷೆಯ ೧–೩೬ನೆಯ ಪದ್ಯ :

ದಿಕ್ಕು ದಿಕ್ಕುಗಳಿಂದ ಬಂದೊಂದು ಮರದಲಿ
ಪಕ್ಷಿ ಕುಳಿತು ರಾತ್ರಿಯಲಿ
ದಿಕ್ಕಿನುದಯವಾಗೆ ತಮ್ಮ ತಮ್ಮ ದಿಕ್ಕಿಗೆ
ದೊಕ್ಕನೆ ಪೋಪಂತೆ ಕಾಣ.

ಶಾಂತರಾಜಶಾಸ್ತ್ರೀ ಅವರ ಕೃತಿಯಲ್ಲಿ :

ರಾತ್ರಿ ಕಾಲದಲ್ಲಿ ದಿಕ್ಕು ದಿಕ್ಕುಗಳಿಂದ ಬಂದು ಮರದಲ್ಲಿ ಕುಳಿತುಕೊಳ್ಳುವ ಹಕ್ಕಿಗಳು ಬೆಳಗಾದ ಮೇಲೆ ದಿಕ್ಕು ದಿಕ್ಕುಗಳಿಗೆ ಪೋಗುವಂತೆಯೂ ಬಂಧು-ಮಿತ್ರ-ಪುತ್ರಕಳತ್ರಾದಿಗಳು ತೊಲಗುವರು. (ಪುಟ 6–7)

ಒಟ್ಟಿನಲ್ಲಿ ಶಾಂತಿರಾಜಶಾಸ್ತ್ರೀ ಅವರ ದ್ವಾದಶಾನುಪ್ರೇಕ್ಷೆ ಎಂಬ ಗದ್ಯಕೃತಿ ಹೆಚ್ಚಾಗಿ ವಿಜಯಣ್ಣನ ದ್ವಾದಶಾನುಪ್ರೇಕ್ಷೆಯನ್ನೇ ಹೋಲುತ್ತದೆ ಎಂಬುದು ಮೇಲಿನ ಉದಾಹರಣೆಗಳಿಂದ ತಿಳಿದುಬರುತ್ತದೆ. ಈ ಕಿರುಹೊತ್ತಿಗೆ ಅನುಪ್ರೇಕ್ಷೆಗಳ ವಿಚಾರವನ್ನು ಸಾಕಷ್ಟು ವಿವರವಾಗಿ ಸರಳವಾಗಿದ್ದು ಜನಸಾಮಾನ್ಯರಿಗೆ ಸುಲಭಗ್ರಾಹ್ಯವಾಗುವಂತೆ ರಚಿತವಾಗಿದೆ. □

ಸತ್ವೇಷು ಮೈತ್ರೀಂ ಗುಣಿಷು ಪ್ರಮೋದಂ । ಕ್ಲಿಷ್ಟೇಷು ಜೀವೇಷು ಕೃಪಾಪರತ್ವಂ
ಮಾಧ್ಯಸ್ಥ ಭಾವಂ ವಿಪರೀತ ವೃತ್ತೌ । ಸದಾ ಮಮಾತ್ಮ ವಿದಧಾತು ದೇವ ॥

ಸ್ವಾಮಿಯೇ ! ನನ್ನ ಆತ್ಮನು ಯಾವಾಗಲೂ ಪ್ರಾಣಿಗಳಲ್ಲಿ ಮಿತ್ರಭಾವವನ್ನೂ ಗುಣವಂತರಲ್ಲಿ ಪ್ರೀತಿಯನ್ನೂ ದುಃಖ ಪಡುವ ಜೀವಗಳಲ್ಲಿ ದಯಾಭಾವವನ್ನೂ ವಿಪರೀತವ್ಯಾಪಾರವುಳ್ಳ–ದುಷ್ಟರಲ್ಲಿ ಮಾಧ್ಯಸ್ಥ ಭಾವವನ್ನು ಮಾಡಲಿ.

—ಪೂಜಾಸಾರಸಮುಚ್ಚಯದಿಂದ

ಇಷ್ಟೋಪದೇಶ

— ಶ್ರೀಮತಿ ಚಂಚಲಾಕಾಂತ್, ಮೈಸೂರು.

ಆಚಾರ್ಯ ಶ್ರೀ ಪೂಜ್ಯಪಾದರು, ಕ್ರಿ. ಶ. 5ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಜನಿಸಿ, ಜೈನಧರ್ಮವನ್ನು ಬೆಳಗಿದಂಥ ಮಹಾನುಭಾವರು. ಆಚಾರ್ಯ ಕುಂದ ಕುಂದರ ತರುವಾಯ, ತಮ್ಮ ಕೃತಿಗಳಿಂದಾಗಿ ಆಚಾರ್ಯ ಶ್ರೀ ಪೂಜ್ಯಪಾದರು ಜೈನಧರ್ಮೀಯರಲ್ಲಿ ಉನ್ನತ ಸ್ಥಾನವನ್ನು ಪಡೆದಿದ್ದಾರೆ. ಆಚಾರ್ಯ ಪೂಜ್ಯಪಾದರಿಂದಾಗಿ ಜೈನಸಂಸ್ಕೃತ ಸಾಹಿತ್ಯವು ತನ್ನ ಹಿರಿಮೆಯನ್ನು ಹೆಚ್ಚಿಸಿಕೊಂಡಿತು. ಪೂಜ್ಯಪಾದರು, ವ್ಯಾಕರಣ,ತತ್ತ್ವ, ಧ್ಯಾನ. ಯೋಗ ಮುಂತಾದ ವಿಷಯಗಳನ್ನು ಕುರಿತು ಕೃತಿರತ್ನಗಳನ್ನು ರಚಿಸಿದ್ದಾರೆ.

ಪ್ರಸ್ತುತ ಗ್ರಂಥವಾದ 'ಇಷ್ಟೋಪದೇಶ' ಕೃತಿಯು ಆಚಾರ್ಯ ಪೂಜ್ಯಪಾದರಿಂದ ರಚಿತವಾದುದಾಗಿದ್ದು ಸಂಸ್ಕೃತ ಭಾಷೆಯಲ್ಲಿದೆ. ಇಷ್ಟೋಪದೇಶವು ಐವತ್ತೊಂದು ಶ್ಲೋಕಗಳಿಂದ ಕೂಡಿದ ಉಪದೇಶ ಪರವಾದ ಚಿಕ್ಕ ಗ್ರಂಥವಾಗಿದೆ. ಇದರಲ್ಲಿ ಸಾಧಕನ ಭಾವನೆಗಳ ನಿರೂಪಣೆ ಇದೆ. ಆ ಭಾವನೆಗಳ ಮೂಲಕ ಇಂದ್ರಿಯಗಳನ್ನು ಸಾಂಸಾರಿಕ ವಿಷಯ ಭೋಗಗಳಿಂದ ವಿಮುಖಗೊಳಿಸಿ ಮನಸ್ಸನ್ನು ಆತ್ಮಧ್ಯಾನದಲ್ಲಿ ಪ್ರವೃತ್ತಗೊಳಿಸಲಾಗುತ್ತದೆ. ಇದರಿಂದಾಗಿ ಅಧ್ಯಾತ್ಮವೃತ್ತಿಯು ಜಾಗೃತಗೊಂಡು ತನ್ನ ದೇಹದ ಪರಿವೆಯೂ ಇಲ್ಲದಿರುವಂಥ ಅವಸ್ಥೆ ಪ್ರಾಪ್ತವಾಗುತ್ತದೆ. ಈ ಪ್ರಕಾರ ವ್ಯವಹಾರದಿಂದ ದೂರವಾಗಿ ಆತ್ಮಧ್ಯಾನದಲ್ಲಿ ನಿರತನಾಗಿರುವ ಯೋಗಿಗೆ ಪರಮಾನಂದವು ಪ್ರಾಪ್ತವಾಗುತ್ತದೆ.

ಇಷ್ಟೋಪದೇಶದಂತಹ ಅತ್ಯಂತ ಉಪಯುಕ್ತ ಗ್ರಂಥದ ಮಹತ್ವವನ್ನು ಮನಗೊಂಡ ಸನ್ಮಾನ್ಯ ಪಿತರ್ಾರು ಶ್ರೀ ಶಾಂತಿರಾಜ ಶಾಸ್ತ್ರಿಗಳು ಈ ಸಂಸ್ಕೃತ ಗ್ರಂಥಕ್ಕೆ ಅತ್ಯಂತ ಸರಳವಾದ ತಿಳಿಗನ್ನಡದಲ್ಲಿ, ಎಲ್ಲರಿಗೂ ತಿಳಿಯುವಂತೆ ಅರ್ಥವನ್ನು ಬರೆದಿದ್ದು, ಕನ್ನಡ ನಾಡಿನ ಅಧ್ಯಾತ್ಮವೃಂದಕ್ಕೆ ಮಹೋಪಕಾರವನ್ನು ಮಾಡಿದ್ದಾರೆ.

ಸನ್ಮಾನ್ಯ ಎತರ್ಾರು ಶ್ರೀ ಶಾಂತಿರಾಜಶಾಸ್ತ್ರಿಗಳು ಬಹುಮುಖ ಪ್ರತಿಭೆಯನ್ನು ಹೊಂದಿದ್ದಂತಹ ಅಪೂರ್ವ ವಿದ್ವನ್ಮಣಿಗಳಾಗಿದ್ದರು. ಅವರು ರಚಿಸಿರುವ ಕೃತಿರತ್ನಗಳೇ ಅವರ ಪ್ರತಿಭೆಯ ಪ್ರಕಾಶಕ್ಕೆ ಅಳತೆಗೋಲೆಂದು ಹೇಳಬಹುದು. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಅವರು ಕೃತಿಗಳನ್ನು ರಚಿಸಿದ್ದಾರೆ. ಈ ಎಲ್ಲ ಕೃತಿಗಳಲ್ಲಿ ಹರಿದು ಬಂದಿರುವ ಅವರ ಜ್ಞಾನಧಾರೆಯನ್ನು ಕಂಡು ನಾನು ಬೆರಗಾಗಿದ್ದೇನೆ. ಅವರ ಸಾಹಿತ್ಯ ರಚನೆಯ ಮೌಲ್ಯದ ಬಗ್ಗೆ ಚಿಂತಿಸಿದಾಗ, ನಮ್ಮ ತಲೆ ಗೌರವದಿಂದ ತಾನಾಗಿ ಬಾಗುತ್ತದೆ. ಅವರ ಕೃತಿಗಳ ವಿಷಯ ಎಷ್ಟು ಉನ್ನತವೋ ಅವರ ಭಾಷೆಯೂ ಅಷ್ಟೇ ಗಂಭೀರ. ಅತ್ಯಂತ ಉಚಿತವಾದ ಮಾತುಗಳಲ್ಲಿ ವಿಷಯವನ್ನು ಹೃದಯಕ್ಕೆ ಮುಟ್ಟುವ ಹಾಗೆ ಹೇಳುವ ಅವರ ಲೇಖನ ಕೌಶಲ್ಯ ಅದ್ವಿತೀಯ.

ಪ್ರಸ್ತುತ ಗ್ರಂಥವಾದ 'ಇಷ್ಟೋಪದೇಶ'ವು ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದೆನ್ನುವಂತೆ, 51 ಶ್ಲೋಕಗಳ ಚಿಕ್ಕ ಗ್ರಂಥವಾದರೂ ವಿಷಯದ ದೃಷ್ಟಿಯಿಂದ ಮಹತ್ವವಾದುದಾಗಿದೆ. ಸಂಸಾರದಲ್ಲಿ ಮುಳುಗಿರುವ ನಮ್ಮಂತಹ ಅಜ್ಞಾನಿ ಜೀವರಿಗೆ, ಅಧ್ಯಾತ್ಮದ ಅರಿವನ್ನುಂಟು ಮಾಡುವ ಇಷ್ಟೋಪದೇಶವು ದಾರಿದೀಪವಾಗಿದೆ. ಆತ್ಮನ ಉದ್ಧಾರವನ್ನೇ ಉದ್ದೇಶವಾಗಿರಿಸಿಕೊಂಡು ಆಚಾರ್ಯರು ಇಂತಹ ಕೃತಿಯನ್ನು ರಚಿಸಿದ್ದಾರೆ. ಪ್ರತಿಯೊಂದು ಜೀವಿಯ ಕಲ್ಯಾಣಕ್ಕೂ ಸಹ ಸೂಕ್ತ ಮಾರ್ಗದರ್ಶನವು ಈ ಕೃತಿಯಿಂದ ದೊರೆಯುವುದರಲ್ಲಿ ಸಂದೇಹವಿಲ್ಲ.

ಗ್ರಂಥದ ಪ್ರಾರಂಭವನ್ನು, ಸಕಲ ಕರ್ಮಗಳಿಂದ ದೂರನಾಗಿ ಸ್ವಭಾವದ ಪ್ರಾಪ್ತಿಯನ್ನು ಮಾಡಿಕೊಂಡಂತಹ ಆ ಪರಮಾತ್ಮನಿಗೆ ನಮಸ್ಕರಿಸುತ್ತಾ ಮಾಡಲಾಗಿದೆ. ಮಂಗಲಾಚರಣೆಯ ನಂತರ ಕರ್ಮಗಳಿಂದ ಆವರಿಸಲ್ಪಟ್ಟ

ಆತ್ಮನ ಸ್ಥಿತಿಯನ್ನು ಗಣಿಯಲ್ಲಿರುವ ಚಿನ್ನಕ್ಕೆ ಹೋಲಿಸಲಾಗಿದೆ. ಗಣಿಯಲ್ಲಿರುವ ಚಿನ್ನವು ಕಲ್ಲು ಮಣ್ಣುಗಳಿಂದ ಆವೃತವಾಗಿದ್ದು ಅಶುದ್ಧಾವಸ್ಥೆಯಲ್ಲಿರುತ್ತದೆ. ಬಂಗಾರವನ್ನು ಆವರಿಸಿರುವ ಅಶುದ್ಧವಸ್ತುಗಳನ್ನು ದೂರ ಮಾಡಿದಾಗ ಶುದ್ಧವಾದ ಚಿನ್ನವು ಗೋಚರವಾಗುವಂತೆ, ಅಶುದ್ಧ ಭಾವನೆಗಳಿಂದ ಆವೃತವಾದ ಆತ್ಮನ ನಿಜ ಸ್ವರೂಪವು ಪ್ರಕಟವಾಗಬೇಕಾದರೆ ಎಲ್ಲ ಅಶುದ್ಧ ಭಾವನೆಗಳೂ ದೂರವಾದರೆ ಮಾತ್ರ ಸಾಧ್ಯ.

ಅಶುದ್ಧ ಭಾವನೆಗಳನ್ನು ದೂರ ಮಾಡುವುದರ ಮೊದಲ ಹಂತವಾಗಿ, ಈ ಶರೀರವು ಆತ್ಮನಿಂದ ಭಿನ್ನವಾದುದಾಗಿದೆ. ಇಷ್ಟ ವಸ್ತು ಸಂಬಂಧದಿಂದ ನಾನು ಸುಖಿಯಾಗಿದ್ದೇನೆ, ಅನಿಷ್ಟ ವಸ್ತು ಸಂಬಂಧದಿಂದ ನಾನು ದುಃಖಿಯಾಗಿದ್ದೇನೆ ಎಂಬ ಭ್ರಮೆಯುಂಟಾಗುವುದಾದರೂ ವಸ್ತುಸ್ಥಿತಿ ಹಾಗಿಲ್ಲ. ಆತ್ಮನಿಗೂ ದೇಹಾದಿ ಪರವಸ್ತುಗಳಿಗೂ ತನ್ಮೂಲಕವಾದ ಸುಖದುಃಖಗಳಿಗೂ ಸಂಬಂಧವಿಲ್ಲ, ಶರೀರ, ಗೃಹ, ಧನ, ಪತ್ನಿ, ಪುತ್ರಾದಿ ವಸ್ತುಗಳು ಆತ್ಮನಿಂದ ಸಂಪೂರ್ಣ ಬೇರೆಯಾದುದಾಗಿವೆ ಎಂಬ ಭಾವನೆ ಮೂಡಬೇಕು. ಬೇರೆ ಬೇರೆ ದಿಕ್ಕುಗಳಿಂದ ಬಂದ ಪಕ್ಷಿಗಳು ರಾತ್ರಿಯಲ್ಲಿ ಮರದಲ್ಲಿ ತಂಗಿದ್ದು ಪ್ರಾತಃಕಾಲದಲ್ಲಿ ಚಿದುರಿಹೋಗುತ್ತವೆ. ಅದೇ ರೀತಿ ಒಂದು ಕುಟುಂಬದಲ್ಲಿನ ಬಂಧುಗಳು ಬೇರೆ ಬೇರೆ ಗತಿಗಳಿಂದ ಬಂದು ಜನಿಸಿದ್ದಾರೆ. ಆಯುಷ್ಯಾವಸಾನದಲ್ಲಿ ತಮ್ಮ ಕರ್ಮಾನುಸಾರವಾಗಿ ಬೇರೆ ಬೇರೆ ಗತಿಗಳಿಗೆ ಹೋಗುತ್ತಾರೆ ಎಂಬ ತಿಳುವಳಿಕೆ ಉಂಟಾಗಬೇಕು. ಅವರವರ ಪಾಪ ಪುಣ್ಯಗಳು ಮಾತ್ರ ಜೊತೆಯಲ್ಲಿ ಹೋಗುತ್ತವೆ. ಆತ್ಮಹಿತವನ್ನು ಬಯಸುವವನು ಭವಪರಂಪರೆಯ ದುಃಖಕ್ಕೆ ಕಾರಣವಾದ ಪರಪದಾರ್ಥ ಮೋಹವನ್ನು ತೊರೆದು ಸ್ವಾತ್ಮಾನುಭವ ಪರನಾಗಬೇಕು.

ವಿವೇಕಿಯಾದ ಮನುಷ್ಯನು ಪಾಪಕ್ಕೆ ಕಾರಣವಾದ ಭೋಗೋಪಭೋಗ ಸಾಮಗ್ರಿಯನ್ನು ದೊರಕಿಸುವುದಕ್ಕಾಗಿ ಉದ್ಯುಕ್ತನಾಗದೆ, ಅತ್ಯಂತ ಅಶುಚಿಮಯವಾದ ಈ ಶರೀರ ಪೋಷಣೆಗಾಗಿ ಧನಾರ್ಜನೆಯನ್ನು ಮಾಡಲು ಹೋಗದೆ, ಯಾವ ಕಾರ್ಯವು ಜೀವಕ್ಕೆ ಉಪಕಾರಕವಾಗಿರುವುದೋ ಅದನ್ನು ಮಾಡುತ್ತಾನೆ. ದೇಹಾತ್ಮ ಭೇದವಿಜ್ಞಾನಿಯಾದ ವಿವೇಕಿಯು ಸ್ವಾತ್ಮಹಿತಕಾಂಕ್ಷಿಯಾಗಿ, ದೇಹಕ್ಕೆ ಉಪಕಾರವಾಗುವ ಕಾರ್ಯಗಳನ್ನು ಬಿಟ್ಟು ಆತ್ಮೋಪಕಾರಿಗಳಾದ ಕಾರ್ಯಗಳಲ್ಲಿ ಆಸಕ್ತನಾಗಬೇಕು.

ಶರೀರದ ದೃಷ್ಟಿಯನ್ನು ಬಿಟ್ಟುಕೊಟ್ಟು, ಆತ್ಮಹಿತವನ್ನು ಸಾಧಿಸಬೇಕೆಂದು ಬಯಸುವುದಾದರೆ, ಆ ಸಾಧಕನು ಏನು ಮಾಡಬೇಕು ? ಮನಸ್ಸಿನ ಏಕಾಗ್ರತೆಯಿಂದ ಇಂದ್ರಿಯಗಳನ್ನು ಬಿಗಿಹಿಡಿದು ಜ್ಞಾನಿಯು ಆತ್ಮನಲ್ಲಿರುವ ಆತ್ಮನನ್ನು ಆತ್ಮನಿಂದಲೇ ಧ್ಯಾನಿಸಬೇಕು. ಹೀಗೆ ಧ್ಯಾನಿಯು ತನ್ನ ಆತ್ಮಧ್ಯಾನದಲ್ಲಿ ಲೀನನಾದಾಗ ಅವನಿಗೆ ಹೊಟ್ಟೆ ಹಸಿವು ಬಾಯಾರಿಕೆ ಮೊದಲಾದ ಬಾಹ್ಯಬಾಧೆಗಳ ಅನುಭವವಾಗುವುದಿಲ್ಲ. ಅದರಿಂದ ಹೊಸದಾಗಿ ಶುಭಾಶುಭ ಕರ್ಮಗಳ ಆಸ್ರವವು ತಡೆಯಲ್ಪಟ್ಟು ಇರುವ ಕರ್ಮಗಳ ನಿರ್ಜರೆಯು ಆಗುವುದು.

'ನಾನು, ನನ್ನದು' ಎಂಬ ಭಾವವನ್ನು ತೊರೆದಿರುವ ಜೀವನಿಗೆ ನಿಶ್ಚಿತವಾಗಿ ಕರ್ಮ ನಿರ್ಜರೆಯಾಗುವುದು. ರಾಗಭಾವದಿಂದ ಕರ್ಮಬಂಧವೂ ವೀತರಾಗ ಭಾವದಿಂದ ಕರ್ಮದ ಬಿಡುಗಡೆಯೂ ಆಗುವುದು. ಆದುದರಿಂದ ದೇಹಾದಿ ವಸ್ತುಗಳು ಪರವಿವೆ, ನನ್ನಿಂದ ಬೇರೆಯಾದುದಾಗಿವೆ. ನಾನು ಆ ವಸ್ತುಗಳಿಂದ ಬೇರೆಯಾಗಿದ್ದೇನೆ. ನನ್ನ ಶುದ್ಧ ಸ್ವರೂಪವಲ್ಲದೆ ನನ್ನದೆಂಬುದು ಯಾವುದೂ ಇಲ್ಲ ಎಂಬ ನಿರ್ಮಮತ್ವ ಭಾವನೆಯನ್ನು ಸರ್ವಪ್ರಯತ್ನದಿಂದ ಚಿಂತಿಸಬೇಕು.

ನನಗೆ ಮರಣವಿಲ್ಲ, ನನಗೆ ರೋಗವಿಲ್ಲ, ನಾನು ಬಾಲಕನೂ ಅಲ್ಲ, ವೃದ್ಧನೂ ಅಲ್ಲ ಈ ಅವಸ್ಥೆಗಳು ಪುದ್ಗಲದ್ದಾಗಿದೆ ಎಂದು ಅಧ್ಯಾತ್ಮಧ್ಯಾನಿಯು ಭಾವಿಸಿ ಅನಾದಿಯಿಂದಲೂ ಧನದೇಹಾದಿಗಳಲ್ಲಿರುವ ರೂಢ ಮೂಲ ಮೋಹವನ್ನು ದೂರ ಮಾಡುವನು. ಆತ್ಮ ಅನಾತ್ಮ ಭೇದವನ್ನು ತಿಳಿದು ಅನಾತ್ಮ ವಸ್ತುವಿನಿಂದ ನಿವೃತ್ತನಾಗಿ, ಆತ್ಮನಲ್ಲಿ ಪ್ರವೃತ್ತನಾಗಬೇಕೆಂದು ಬಯಸುವ ಭವ್ಯಾತ್ಮನು ಮೊದಲು ಈ ಭೇದ ವಿಜ್ಞಾನವನ್ನು ಗುರುವಿನ ಉಪದೇಶದಿಂದ ತಿಳಿಯಬೇಕು ಬಳಿಕ ಉಪದೇಶಾನುಸಾರವಾಗಿ ತಾನು ಅಭ್ಯಾಸ ಮಾಡಬೇಕು. ಆದರೆ ವಾಸ್ತವವಾಗಿ ವಿಚಾರ ಮಾಡುವುದಾದರೆ, ಗುರುವಿನ ಉಪದೇಶ ಒಂದು ಮಟ್ಟದವರೆಗೆ ಮಾತ್ರ ಕೊನೆಗೆ ಆತ್ಮನೇ ಆತ್ಮನಿಗೆ ವಾಸ್ತವವಾದ ಗುರುವು. ಇತರ ಗುರುವು ಕೇವಲ ನಿಮಿತ್ತ ಕಾರಣನಾಗಿರುವನು.

ತತ್ತ್ವದಲ್ಲಿ ನಿಶ್ಚಲ ಬುದ್ಧಿಯುಳ್ಳವನಾದ ಯೋಗಿಯು ಏಕಾಂತ ಸ್ಥಾನದಲ್ಲಿದ್ದು ತನ್ನ ಆತ್ಮನ ಸ್ವರೂಪವನ್ನು ತತ್ಪರತೆಯಿಂದ ಧ್ಯಾನಿಸಬೇಕು. ಆತ್ಮ ಸ್ವರೂಪದಲ್ಲಿ ಸ್ಥಿರವಾದ ಮನೋವೃತ್ತಿಯುಳ್ಳ ಯೋಗಿಯು ಮಾತನಾಡುತ್ತಿದ್ದರೂ ಮಾತನಾಡುವುದಿಲ್ಲ, ನಡೆಯುತ್ತಿದ್ದರೂ ನಡೆಯುವುದಿಲ್ಲ, ನೋಡುತ್ತಿದ್ದರೂ ನೋಡುವುದಿಲ್ಲ. ಆತ್ಮಧ್ಯಾನಿಯ ಇಂದ್ರಿಯಗಳು ಒಂದು ವೇಳೆ ಬಾಹ್ಯವಿಷಯಗಳಲ್ಲಿ ಪ್ರವರ್ತಿಸಿದರೂ ಅವನ ಚಿತ್ತವೃತ್ತಿಯು ಆತ್ಮ ಸ್ವರೂಪದಲ್ಲಿ ಲೀನವಾಗಿರುವುದೇ ಇದಕ್ಕೆ ಕಾರಣ.

ಆತ್ಮಧ್ಯಾನದಲ್ಲಿ ಆಸಕ್ತನೂ, ದೇಹಾದಿ ಪರವಸ್ತುಗಳಿಂದ ಭಿನ್ನನಾಗಿರುವವನೂ ಆದ ಯೋಗಿಗೆ, ಯೋಗದಿಂದ ಅಂದರೆ ನಿರ್ವಿಕಲ್ಪ ಸಮಾಧಿಯಿಂದ ಅನಿರ್ವಚನೀಯವಾದ ಪರಮಾನಂದವುಂಟಾಗುವುದು. ಆ ಆನಂದವು ಅನುಭವಿಸುವವರಿಗೆ ಮಾತ್ರ ಗೊತ್ತೇ ಹೊರತು ಮಾತಿನಲ್ಲಿ ಹೇಳಲಾಗದು.

ಸರ್ವಕರ್ಮಗಳಿಂದಲೂ ಬಿಡುಗಡೆಯಾಗಬೇಕೆಂದು ಬಯಸುವವರು ಆ ಜ್ಞಾನಜ್ಯೋತಿಯನ್ನು ಉತ್ಕೃಷ್ಟ ಜ್ಞಾನಿಗಳಲ್ಲಿ ಕೇಳಿ ತಿಳಿದುಕೊಳ್ಳಬೇಕು, ಬಯಸಬೇಕು. ಸ್ವಪರ ಪ್ರಕಾಶಕವಾದ ಆ ಜ್ಯೋತಿಯನ್ನು ಜ್ಞಾನದಿಂದ ನೋಡಬೇಕು.

ಜೀವವು ಬೇರೆ, ಪುದ್ಗಲವು ಬೇರೆ ಈ ಪ್ರಕಾರವಾಗಿ ತತ್ತ್ವಗಳ ಸಂಗ್ರಹವಾಗಿರುತ್ತದೆ. ಬೇರೇನಾದರೂ ಹೇಳಿದರೆ ಅದು ಇದೇ ತತ್ತ್ವದ ವಿಸ್ತಾರವಾಗುತ್ತದೆ. ಬೇರೆ ವರ್ಣನೆಗಳೇನೇ ಇದ್ದರೂ ಅವೆಲ್ಲ ಜೀವ ಪುದ್ಗಲ ತತ್ತ್ವದ ಮತ್ತು ಶುದ್ಧಾತ್ಮತತ್ತ್ವದ ವಿಸ್ತೃತ ವರ್ಣನೆಯೇ ಸರಿ.

ವಿವೇಕಿ ಪುರುಷನು ಈ 'ಇಷ್ಟೋಪದೇಶ' ಗ್ರಂಥವನ್ನು ಚೆನ್ನಾಗಿ ಅಧ್ಯಯನ ಮಾಡಿ ಆತ್ಮಜ್ಞಾನದಿಂದ ಮುಕ್ತಿಶ್ರೀಯನ್ನು ಹೊಂದುವನು.

ಈ 'ಇಷ್ಟೋಪದೇಶ' ಗ್ರಂಥದಲ್ಲಿ ಸಾಂಸಾರಿಕ ಸುಖ ಭೋಗಗಳನ್ನೇ ಸರ್ವಸ್ವವೆಂದು ನಂಬಿರುವ ಆತ್ಮರುಗಳನ್ನು ಎಚ್ಚರಿಸಿ, ಈ ಐಹಿಕ ಸುಖದ ಅಲ್ಪತೆಯನ್ನು ಚೆನ್ನಾಗಿ ತಿಳಿಸಿದ್ದಾರೆ. ಶರೀರದಿಂದ ಸಮಸ್ತ ಪರ ಪದಾರ್ಥಗಳ ಬಗೆಗಿನ ಮೋಹವನ್ನು ತೊರೆದು, ತನ್ನ ಆತ್ಮನನ್ನು ಭಾವಿಸಿ. ಚಿಂತಿಸಿ, ಧ್ಯಾನಿಸಿ ತನ್ನ ಸಹಜ ಸ್ವರೂಪವನ್ನು ಪ್ರಕಟಮಾಡಿಕೊಳ್ಳುವುದೇ ಪರಮ ಪುರುಷಾರ್ಥವಾಗಿದೆ. ಅದನ್ನು ಸಾಧಿಸುವುದೇ ನಮ್ಮೆಲ್ಲರ ಧ್ಯೇಯ ಗುರಿಯಾಗಬೇಕು ಎಂಬುದು ಆಚಾರ್ಯರ ಸಂದೇಶವಾಗಿದೆ. ತಮ್ಮ ಸರಳ ಸುಂದರ ಶೈಲಿಯಲ್ಲಿ ಸನ್ಮಾನ್ಯ ಶ್ರೀ ಎ. ಶಾಂತಿರಾಜಶಾಸ್ತ್ರಿಗಳು ನಮಗೆ ಅದನ್ನು ತಿಳಿಸಿಕೊಟ್ಟಿದ್ದಾರೆ. ○

ಹೇ ಧರ್ಮ ಮಾಂ ಪಾಲಯ

ಧರ್ಮಃ ಸರ್ವಸುಖಾಕರೋ ಹಿತಕರೋ ಧರ್ಮಂ ಬುಧಾಶ್ಚಿನ್ವತೇ
ಧರ್ಮೇಣೈವ ಸಮಾಪ್ಯತೇ ಶಿವಸುಖಂ ಧರ್ಮಾಯ ತಸ್ಮೈ ನಮಃ।
ಧರ್ಮಾನ್ನಾಸ್ತ್ಯ ಪರಃ ಸುಹೃದ್ಭವಭೃತಾಂ ಧರ್ಮಸ್ಯ ಮೂಲಂ ದಯಾ
ಧರ್ಮೇ ಚಿತ್ತಮಹಂ ದಧೇ ಪ್ರತಿದಿನಂ ಹೇ ಧರ್ಮ ಮಾಂ ಪಾಲಯ॥

ಚಾರಿತ್ರರೂಪವಾದ ಧರ್ಮವು ಸಮಸ್ತಸುಖಗಳಿಗೆ ಉತ್ಪತ್ತಿಸ್ಥಾನವೂ ಹಿತಕರವೂ ಆಗಿರುತ್ತದೆ. ವಿದ್ವಾಂಸರು ಧರ್ಮವನ್ನು ಸಂಚಯ ಮಾಡುತ್ತಾರೆ. ಧರ್ಮದಿಂದಲೇ ಮೋಕ್ಷಸುಖವು ಹೊಂದಲ್ಪಡುತ್ತದೆ. ಆ ಧರ್ಮಕ್ಕೆ ನಮಸ್ಕಾರವು. ಸಂಸಾರಿ ಜೀವಿಗಳಿಗೆ ಧರ್ಮಕ್ಕಿಂತ ಬೇರೆಯಾದ ಸ್ನೇಹಿತನಿಲ್ಲ. ಧರ್ಮಕ್ಕೆ ದಯೆಯು ಮೂಲವಾಗಿರುತ್ತದೆ. ನಾನು ಯಾವಾಗಲೂ ಧರ್ಮದಲ್ಲಿ ಚಿತ್ತವನ್ನಿಡುತ್ತೇನೆ. ಎಲೈ ಧರ್ಮವೇ! ನನ್ನನ್ನು ಕಾಪಾಡು.

—ದಶಭಕ್ತಿ (ಪುಟ ೭೩)

'ನೋಂಪಿಯ ಕತೆಗಳು' - ಒಂದು ಸಮೀಕ್ಷೆ

— ಡಾ॥ ಎಸ್. ಪಿ. ಪದ್ಮಪ್ರಸಾದ್, ಶಿವಮೊಗ್ಗ.

ಆಧುನಿಕ ಜೈನ ಲೇಖಕರಲ್ಲಿ ಅಗ್ರಶ್ರೇಣಿಯ ಪಂಡಿತ ಲೇಖಕರಾಗಿದ್ದ ದಿ॥ ಎ. ಶಾಂತಿರಾಜಶಾಸ್ತ್ರಿಗಳು ಸಂಪಾದಿಸಿದ ಗ್ರಂಥಗಳಲ್ಲಿ ಕೆಲವು ಪರಾಮರ್ಶನ ಗ್ರಂಥಗಳಾದರೆ, ಹಲವು ಶ್ರಾವಕರ ನಿತ್ಯೋಪಯೋಗಕ್ಕಾಗಿ ಸಿದ್ಧಪಡಿಸಿದಂಥವು. ಇನ್ನು ಕೆಲವು ಇದೇ ಶ್ರಾವಕರು ನಿರ್ದಿಷ್ಟ ಸಂದರ್ಭಗಳಲ್ಲಿ ಉಪಯೋಗಿಸಲೆಂದು ಸಂಪಾದಿಸಿದಂಥವು. 'ನೋಂಪಿಯ ಕತೆಗಳು' ಈ ಮೂರನೆಯ ಗುಂಪಿಗೆ ಸೇರುವ ಕಿರು ಪುಸ್ತಕಗಳಾಗಿವೆ.

ಪ್ರಸ್ತುತ ಪರಿಶೀಲನೆಗೆ ಒಳಪಟ್ಟಿರುವ ನೋಂಪಿಯ ಕತೆಗಳ ಪುಸ್ತಕಗಳು ಮೂರು :—

1) ಮೂರು ನೋಂಪಿಗಳ ಕಥೆಗಳು
   ಅ) ಸಹಸ್ರ ನಾಮದ ನೋಂಪಿಯ ಕಥೆ
   ಆ) ನಿರ್ದುಃಖ ಸಪ್ತಮಿ ನೋಂಪಿಯ ಕಥೆ
   ಇ) ದೀಪಾವಳಿ ನೋಂಪಿಯ ಕಥೆ

2) ನಿರ್ದುಃಖ ಸಪ್ತಮಿಯ ನೋಂಪಿಯ ಕಥೆ

3) ನಿತ್ಯಸುಖದ ನೋಂಪಿಯ ಕಥೆ ಮತ್ತು ಉಪಸರ್ಗ ನಿವಾರಣಾ ನೋಂಪಿಯ ಕಥೆ.

'ನಿರ್ದುಃಖ ಸಪ್ತಮಿಯ ನೋಂಪಿಯ ಕಥೆ' ಈ ಪಟ್ಟಿಯಲ್ಲಿ ಎರಡು ಬಾರಿ ಬಂದಿರುವುದನ್ನು ಗಮನಿಸಿದರೆ, ಒಟ್ಟು ಈ ಮೂರೂ ಗ್ರಂಥಗಳಲ್ಲಿ ಪರಿಶೀಲಿಸಲ್ಪಡಬೇಕಾದ ಕತೆಗಳ ಸಂಖ್ಯೆ ಕೇವಲ ಐದು ಆಗುತ್ತದೆ.

ಈ ಎಲ್ಲ ಪುಸ್ತಕಗಳೂ ಶಾಸ್ತ್ರದಾನಾರ್ಥ ಪ್ರಕಟವಾದವುಗಳು. ಆದ್ದರಿಂದ ನೋಂಪಿಯನ್ನು ಆಚರಿಸುವವರಿಗೆ ಎಷ್ಟು ಬೇಕೋ ಅಷ್ಟು ಮಾಹಿತಿ ಕೊಡುವ ಕಥಾಭಾಗ ಮಾತ್ರ ಇದರಲ್ಲಿದೆಯೇ ವಿನಾ ಶಾಸ್ತ್ರಿಗಳು ಈ ಯಾವುದರಲ್ಲೂ ದೊಡ್ಡ ಪ್ರಸ್ತಾವನೆ ಬರೆಯುವ ಗೋಜಿಗೆ ಹೋಗಿಲ್ಲ. ಗ್ರಂಥ ಪ್ರಕಾಶಕರ ಹಾಗೂ ಉಪಯೋಗಿಸುವ ಬಹುಮಂದಿಯ ದೃಷ್ಟಿಯಿಂದ ಅದು ಅಗತ್ಯವೂ ಇರಲಿಲ್ಲ.

ಈ ಎಲ್ಲ ಕತೆಗಳ ಸಂಪಾದನೆ ಅಚ್ಚುಕಟ್ಟಾಗಿ ನಡೆದಿದೆ. ಆ ದಿನಗಳಲ್ಲಿ ಕನ್ನಡದಲ್ಲಿ ಗ್ರಂಥ ಸಂಪಾದನಾ ಶಾಸ್ತ್ರ ಅಷ್ಟಾಗಿ ಬೆಳೆದಿರಲಿಲ್ಲವೆಂಬುದೂ, ದಿ॥ ಶಾಸ್ತ್ರಿಗಳು ಆ ಶಾಸ್ತ್ರವನ್ನು ಬೆಳೆಸಿದ ಆದ್ಯರಲ್ಲಿ ಒಬ್ಬರೆಂಬುದೂ ಕನ್ನಡ ವಿದ್ವತ್‌ಲೋಕ ಈಗ ಒಪ್ಪಿಕೊಂಡಿರುವ ವಿಷಯವಾಗಿದೆ. ಅವರು ಸ್ವೀಕರಿಸಿರುವ ಗ್ರಂಥಪಾಠದಲ್ಲಿಯಾಗಲೀ, ಮುದ್ರಣದಲ್ಲಿಯಾಗಲೀ ಎಲ್ಲಿಯೂ ದೋಷ ಕಂಡುಬಾರದಿರುವುದು (ಗ್ರಂಥಸಂಪಾದನೆ ಹಾಗೂ ಮುದ್ರಣ ಸೌಕರ್ಯ ಇಷ್ಟೊಂದು ಬೆಳೆದಿರುವ ಈ ದಿನಗಳಲ್ಲಿ) ಒಂದು ಅದ್ಭುತವೆಂದೇ ಹೇಳಬೇಕಾಗುತ್ತದೆ.

ಅಪರೂಪದ ಉದಾಹರಣೆ : ಈ ಐದು ಕತೆಗಳ ಪೈಕಿ ನಾಲ್ಕು ಶ್ರೇಣಿಕ ಮಹಾರಾಜ ಹಾಗೂ ರಾಣಿ ಚೇಳಿನಿಯವರಿಗೆ ಗಣಧರರು ಹೇಳಿದಂತೆ ಇವೆ. ಇದು ಸಾಮಾನ್ಯವಾಗಿ ಜೈನ ನೋಂಪಿಯ ಕತೆಗಳಲ್ಲಿ ಕಾಣುವ ಲಕ್ಷಣ (ನೋಡಿ :– 'ನೋಂಪಿಯ ಕತೆಗಳು' ಸಂ. ಡಾ॥ ಹಂಪನಾ ಪ್ರಸ್ತಾವನೆ) ತೀರಾ ಅಪರೂಪವಾಗಿ ಬೇರೆ ರಾಜರಿಗೆ ಈ ಕತೆ ಹೇಳಲ್ಪಟ್ಟಿರುವಂತೆ ಕಾಣಿಸಿರುವ ನಿದರ್ಶನಗಳೂ ಇವೆ.

ಅಂಥ ಅಪರೂಪದ ನಿದರ್ಶನಗಳಲ್ಲೊಂದು ಈ ಕತೆಗಳಲ್ಲಿದೆ. ಇಲ್ಲಿನ 'ನಿತ್ಯಸುಖದ ನೋಂಪಿಯ ಕತೆ' ಶ್ರೇಣಿಕ–ಚೇಳಿನಿಯರಿಗೆ ಹೇಳಲ್ಪಡುವುದಿಲ್ಲ. ಬದಲಾಗಿ ಚಂದ್ರಶೇಖರ – ಚಂದ್ರಲೇಖೆಯರಿಗೆ ಹೇಳಲ್ಪಟ್ಟಿದೆ. ಇದೊಂದು ಗಮನಿಸಬೇಕಾದ ವಿಚಾರ. ಇಂಥ ಅಪರೂಪದ ಕತೆಗಳ ಸಾಲಿಗೆ, ಅಧ್ಯಯನ ಮಾಡುವವರು ಶಾಸ್ತ್ರಿಗಳು ಸಂಪಾದಿಸಿದ ಈ ಕತೆಯನ್ನು ಸೇರಿಸಿಕೊಳ್ಳಬೇಕು. ಗ್ರಂಥ ಸಂಪಾದನಾ ಶಾಸ್ತ್ರದ ದೃಷ್ಟಿಯಿಂದ

ಆಸಕ್ತಿದಾಯಕವಾದ ಇನ್ನೊಂದು ಅಂಶ ಈ ಕತೆಗಳಲ್ಲಿ ಕಂಡುಬರುತ್ತದೆ. ಈ ಮೇಲಿನ ಪಟ್ಟಿಯಲ್ಲಿ 'ನಿರ್ದುಃಖ ಸಪ್ತಮಿ ನೋಂಪಿಯ ಕತೆ' ಎರಡು ಬಾರಿ ಬಂದಿದೆಯಷ್ಟೆ. ಸಾಮಾನ್ಯ ಓದುಗರ ದೃಷ್ಟಿಯಿಂದ ಇವೆರಡು ಆವೃತ್ತಿಗಳೂ ಒಂದೇ ಆದರೂ ಗ್ರಂಥ ಸಂಪಾದನಾ ಶಾಸ್ತ್ರವನ್ನು ಅಭ್ಯಾಸ ಮಾಡುವವರ ದೃಷ್ಟಿಯಲ್ಲಿ ಇವೆರಡು ಆವೃತ್ತಿಗಳೂ ಸ್ವಲ್ಪಮಟ್ಟಿಗೆ ಮಹತ್ವಪೂರ್ಣವಾಗಿದ್ದು ಹಸ್ತಪ್ರತಿ ಶಾಸ್ತ್ರ ಹಾಗೂ ಗ್ರಂಥ ಸಂಪಾದನಾ ಶಾಸ್ತ್ರದ ಕುರಿತು ಒಂದು ಸ್ವಾರಸ್ಯಕರ ಸಂಗತಿಯನ್ನು ಹೊರಗೆಡಹುತ್ತವೆ.

ಸ್ವಾರಸ್ಯ : 'ಮೂರು ನೋಂಪಿಯ ಕಥೆಗಳು' ಪುಸ್ತಕವು ಮೈಸೂರು ಸಂತೇಪೇಟೆಯ ಅಕ್ಕಿ ಅಂಗಡಿಯ ಪಿ. ಶ್ಯಾಮಣ್ಣ ಎಂಬುವರು ಅಚ್ಚುಹಾಕಿಸಿದ್ದು (ವರ್ಷ ನಮೂದಾಗಿಲ್ಲ). 'ನಿರ್ದುಃಖ ಸಪ್ತಮಿಯ ನೋಂಪಿಯ ಕತೆ' ಪ್ರತ್ಯೇಕವಾಗಿ 1938ರಲ್ಲಿ ಪ್ರಕಟವಾಗಿದೆ. ಇದನ್ನು ಪುತ್ತೂರಿನ ಕುಸುಮಾಜಮ್ಮನವರು ಪ್ರಕಟಿಸಿದರು.

ಈ ಎರಡೂ ಪಾಠಗಳನ್ನು ಗಮನಿಸಿದಾಗ 'ಮೂರು ನೋಂಪಿಯ ಕಥೆಗಳು' ಪುಸ್ತಕದಲ್ಲಿ ಸೇರಿರುವ 'ನಿರ್ದುಃಖ ಸಪ್ತಮಿ ನೋಂಪಿಯ ಕಥೆ'ಗೂ 1938ರಲ್ಲಿ ಪ್ರಕಟಿಸಿರುವ ಅದೇ ಕತೆಗೂ ಶ್ರೀ ಶಾಸ್ತ್ರಿಗಳು ಬೇರೆ ಬೇರೆ ಹಸ್ತಪ್ರತಿಗಳನ್ನು ಅವಲಂಬಿಸಿರುವುದನ್ನು ಕಂಡುಕೊಳ್ಳಬಹುದು. ಮೊದಲನೆಯ ಆವೃತ್ತಿಯಲ್ಲಿ ಕಂದಪದ್ಯಗಳನ್ನು ಬರೆಯಬೇಕಾದ ಕ್ರಮದಲ್ಲಿ ಬರೆಯದೆ ಉದ್ದಕ್ಕೂ ಪೂರ್ಣಸಾಲುಗಳಲ್ಲಿಯೇ ಅಚ್ಚುಮಾಡಲಾಗಿದೆ. ಆದರೆ ಅದು ಕಂದಪದ್ಯ ಎನ್ನುವುದನ್ನು ಸೂಚಿಸಲು ಈ ಸಾಲುಗಳನ್ನು ಆರಂಭ ಮಾಡುವ ಮೊದಲು ॥ ಕಂದ ॥ ಎಂದು ಬರೆಯಲಾಗಿದೆ. ಎರಡನೆಯ ಆವೃತ್ತಿಯಲ್ಲಿ ಹೀಗಿರದೆ ಕಂದ ಪದ್ಯಗಳನ್ನು ಅಚ್ಚುಮಾಡಬೇಕಾದ ರೀತಿಯಲ್ಲಿ ಅಚ್ಚುಮಾಡಲಾಗಿದೆ.

ಇದಕ್ಕೆ ಕಾರಣವನ್ನೂಹಿಸುವುದು ಸುಲಭ. ಮೊದಲನೆಯ ಆವೃತ್ತಿಗೆ ಶಾಸ್ತ್ರಿಗಳು ಅವಲಂಬಿಸಿದ ಹಸ್ತಪ್ರತಿಯಲ್ಲಿಯೂ ಹಾಗೆಯೇ ಇದ್ದಿರಬೇಕು. ಅದನ್ನು ಬದಲಿಸುವುದು ಸರಿಯಲ್ಲವಾದ್ದರಿಂದ ಶಾಸ್ತ್ರಿಗಳು ಅದನ್ನು ಹಾಗೆಯೇ ಉಳಿಸಿಕೊಂಡಿರಬೇಕು. ಅದೇ ಕತೆಯನ್ನು 1938ರಲ್ಲಿ ಮುದ್ರಿಸುವ ವೇಳೆಗೆ ಶಾಸ್ತ್ರಿಗಳಿಗೆ ಇನ್ನೊಂದು ಉತ್ತಮ ಹಸ್ತಪ್ರತಿ ದೊರೆತಿರಬೇಕು. ಶಾಸ್ತ್ರಿಗಳು ಅದನ್ನು ಸಮರ್ಥವಾಗಿ ಉಪಯೋಗಿಸಿಕೊಂಡಿದ್ದಾರೆ. ಇದೇ ಹಸ್ತಪ್ರತಿ ಅವರಿಗೆ 'ಮೂರು ನೋಂಪಿಯ ಕಥೆ'ಗಳನ್ನು ಸಂಪಾದಿಸುವಾಗ ಸಿಕ್ಕಿದ್ದಾದರೆ ಬಹುಶಃ ಅಲ್ಲಿಯೂ ಅದನ್ನೇ ಉಪಯೋಗಿಸಿಕೊಂಡು ಮೊದಲಿನ ಹಸ್ತಪ್ರತಿಗಳನ್ನು ಬದಿಗಿಡುತ್ತಿದ್ದರು.

ಉಪಯುಕ್ತ ಸ್ತೋತ್ರಗಳು : ಈ 'ನೋಂಪಿ ಕಥೆ'ಗಳ ಗುಚ್ಛದಲ್ಲಿ ಕೇವಲ ನೋಂಪಿಯ ಕತೆಗಳೇ ಅಲ್ಲದೆ ಎರಡು ಉಪಯುಕ್ತ ಸ್ತೋತ್ರಗಳೂ ಇವೆ. ಇವು ಇರುವುದು ಈ ಮೊದಲು ಪ್ರಸ್ತಾಪಿಸಿರುವ 1938ರ 'ನಿರ್ದುಃಖ ಸಪ್ತಮಿಯ ನೋಂಪಿ ಕಥೆ'ಯಲ್ಲಿ. ಈ ಗ್ರಂಥದ ಆರಂಭದಲ್ಲಿ 'ದರ್ಶನಸ್ತುತಿ'ಯೂ ಅನಂತರದಲ್ಲಿ 'ಅಕಲಂಕ ಸ್ತೋತ್ರ'ವೂ ಮುದ್ರಿಸಲ್ಪಟ್ಟಿವೆ. 'ಅಕಲಂಕ ಸ್ತೋತ್ರ'ವನ್ನು ಕುರಿತ ದಂತಕತೆ ಜೈನರಲ್ಲಿ ಪ್ರಸಿದ್ಧವಾದದ್ದು. (ಅಕಲಂಕ ಮುನಿ ಬೌದ್ಧರೊಡನೆ ವಾದ ಮಾಡುತ್ತಾ ಅವರು ತೆರೆಯ ಹಿಂದೆ ಅಡಗಿಸಿಟ್ಟಿದ್ದ, ತಾರಾಭಗವತಿಯನ್ನು ಆವಾಹಿಸಿದ್ದ ಸುರೆಯ ಗಡಿಗೆಯನ್ನು ಒದ್ದು ಕೆಡವಿದ್ದು.) ಆದರೆ ಮುದ್ರಿತರೂಪದಲ್ಲಿ ಇದು ಲಭ್ಯವಾಗುವ ಆಕರಗಳು ಕಡಿಮೆ. 12 ಸಂಸ್ಕೃತ ವೃತ್ತಗಳನ್ನೂ ಒಳಗೊಂಡಿರುವ ಈ ಸ್ತೋತ್ರ ಸಾಹಿತ್ಯ ದೃಷ್ಟಿಯಿಂದಲೂ ಮುಖ್ಯವಾದದ್ದು. ಜೈನರ ಮಂಗಲ ಶ್ಲೋಕಗಳಲ್ಲಿ ಒಂದಾದ "ಯೋ ವಿಶ್ವಂ ವೇದ ವೇದ್ಯಂ" ದೊರೆಯುವುದು ಇಲ್ಲಿಯೇ. ನೋಂಪಿಯ ಕತೆಗಳಿಗೂ ಇದಕ್ಕೂ ಸಂಬಂಧವಿಲ್ಲವಾದರೂ ಪೂಜಾರಂಭದಲ್ಲಿ ಪಠಿಸಲ್ಪಡುವ ಉಪಯುಕ್ತತೆಯ ದೃಷ್ಟಿಯಿಂದ ಶಾಸ್ತ್ರಿಗಳು ಇವನ್ನು ಇಲ್ಲಿ ಜೋಡಿಸಿರುಹುದೆನ್ನಿಸುತ್ತದೆ.

ನೋಂಪಿನ ದಿನಗಳು : ಈ ವಿವಿಧ ನೋಂಪಿಗಳ ಕತೆಗಳನ್ನಿಲ್ಲಿ ಸಂಗ್ರಹಿಸಬೇಕಾಗಿಲ್ಲ. ಆದರೆ ಮಾಹಿತಿಗಾಗಿ ಈ ವಿವಿಧ ನೋಂಪಿಗಳ ನಡೆಯುವ ದಿನಗಳನ್ನು ಪಟ್ಟಿ ಮಾಡಬಹುದು.

1. ಸಹಸ್ರನಾಮದ ನೋಂಪಿ—ಭಾದ್ರಪದ, ಆಶ್ವೀಜ ಆಷಾಢ, ಕಾರ್ತಿಕ, ಫಾಲ್ಗುಣ–ಇವುಗಳಲ್ಲಿ ಯಾವುದಾದರೊಂದು ಮಾಸದ ಯಾವುದಾದರೊಂದು ದಿನ. ರೋಗರುಜಿನಗಳು ಬಂದಿದ್ದಲ್ಲಿ ಅವುಗಳ ನಿವಾರಣೆಗಾಗಿ ಯಾವುದೇ ಮಾಸದ ಯಾವ ದಿನದಲ್ಲಾದರೂ ಆಚರಿಸುವುದು.

2. **ನಿರ್ದುಃಖ ಸಪ್ತಮಿ ನೋಂಪಿ :** ಭಾದ್ರಪದ ಶುದ್ಧ ಸಪ್ತಮಿ.

3. **ದೀಪಾವಳಿ ನೋಂಪಿ :** ಅಶ್ವೀಜ ಕೃಷ್ಣಪಕ್ಷದ ಚತುರ್ದಶಿ (ಉತ್ತರ ಭಾರತದಲ್ಲಿ ಕಾರ್ತಿಕ ಚತುರ್ದಶಿ).

4. **ನಿತ್ಯಸುಖದ ನೋಂಪಿ :** ಯಾವುದಾದರೊಂದು ನಂದೀಶ್ವರದ ಚತುರ್ದಶಿ.

5. **ಉಪಸರ್ಗ ನಿವಾರಣಾ ನೋಂಪಿ :** ಶ್ರಾವಣ ಮಾಸದ ಶುಕ್ಲ ತ್ರಯೋದಶಿ.

ದಿ॥ ಶಾಂತಿರಾಜ ಶಾಸ್ತ್ರಿಗಳು ತಮ್ಮ ಕಾಲದವರೆಗೆ ಲಭ್ಯವಿದ್ದ ಹಸ್ತಪ್ರತಿಗಳನ್ನು ಶ್ರಮದಿಂದ ಪರಿಶೋಧಿಸಿ ತಮ್ಮ ಕಲ್ಪನಾಶೀಲತೆಯಿಂದಲೇ ಗ್ರಂಥ ಪರಿಷ್ಕರಣೆಯ ನಿಯಮಗಳನ್ನು ರೂಪಿಸಿಕೊಂಡು ಗ್ರಂಥಗಳನ್ನು ಸಂಪಾದಿಸಿ ವಿದ್ವತ್ ಪ್ರಪಂಚಕ್ಕೂ ಸಾಮಾನ್ಯರಿಗೂ ಉಪಯುಕ್ತವಾಗುವ ಕೆಲಸ ಮಾಡಿದ್ದಾರೆ. ಅವರ ಕಾರ್ಯ ಪರಿಶುದ್ಧತೆ ಇಂದಿಗೂ ಆದರ್ಶಪ್ರಾಯವಾಗಿದೆ.

ಆದರೆ ಆ ದಿನಗಳಿಂದೀಚೆಗೆ ಗ್ರಂಥ ಸಂಪಾದನಾ ಶಾಸ್ತ್ರ ಸಾಕಷ್ಟು ಬೆಳೆದಿದೆ. ಹಸ್ತಪ್ರತಿ ಭಂಡಾರಗಳೂ ಹೆಚ್ಚಿವೆ. ಗ್ರಂಥಗಳನ್ನೂ ಕೇವಲ ಧಾರ್ಮಿಕ ದೃಷ್ಟಿಯಿಂದಷ್ಟೇ ಅಲ್ಲ, ವಿವಿಧ ಕೋನಗಳಿಂದ ಅಭ್ಯಸಿಸುವ ಕೆಲಸ ನಡೆದಿದೆ. ಈ ಎಲ್ಲ ಕಾರಣಗಳಿಂದ ಈ ನೋಂಪಿಯ ಕತೆಗಳನ್ನು ಪುನರ್ಮುದ್ರಿಸುವಾಗ ಯಾರಾದರೂ ವಿದ್ವಾಂಸರ ನೆರವು ಪಡೆದು ಈ ಕೆಳಕಂಡ ಮಾಹಿತಿಗಳನ್ನು ಟಿಪ್ಪಣಿಗಳ ರೂಪದಲ್ಲಿ ಉಪಷ್ಟಂಭಕವಾಗಿ ಸೇರಿಸುವುದು ಒಳಿತೆಂದು ನನ್ನ ಭಾವನೆ.

1) ಪ್ರತಿ ನೋಂಪಿಗೂ ಸಂಬಂಧಿಸಿದ ಓಲೆಗರಿ ಹಸ್ತ ಪ್ರತಿಗಳು ಯಾವ ಯಾವ ಭಂಡಾರದಲ್ಲಿವೆ ಎಂಬುದರ ಸೂಚಿ.

2) ಶ್ರೀ ಶಾಸ್ತ್ರಿಗಳು ಯಾವ ಹಸ್ತಪ್ರತಿಯನ್ನು ಅವಲಂಬಿಸಿದ್ದರು ಎಂಬ ಬಗ್ಗೆ ಅವರ ಟಿಪ್ಪಣಿಗಳು ಎಲ್ಲಿಯಾದರೂ ಲಭ್ಯವಿದ್ದರೆ, ಆ ಸೂಚನೆ.

ಇದಲ್ಲದೆ ಈ ಎಲ್ಲ ನೋಂಪಿ ಕತೆಗಳನ್ನೂ ಒಂದೇ ಸಂಪುಟವಾಗಿ ವಿಸ್ತೃತ ಪ್ರಸ್ತಾವನೆಯೊಡನೆ ಪ್ರಕಟಿಸುವುದು ಒಳಿತು. ಜೊತೆಗೆ ಶಾಸ್ತ್ರಿಗಳ ದಿನಚರಿ ಲಭ್ಯವಿದ್ದರೆ, ಅದನ್ನೂ ಸೂಕ್ತ ರೀತಿಯಲ್ಲಿ ಸಂಪಾದಿಸಿ ಪ್ರಕಟಿಸುವುದು, ಅವರ ಕೃತಿಗಳ ಮೌಲ್ಯಮಾಪನದ ದೃಷ್ಟಿಯಿಂದ ತುಂಬ ಉಪಯುಕ್ತವಾಗಬಹುದಾದ ಕೆಲಸ. □

ಜ್ಞಾನಿನೋಮೃತ ಸಂಗಾಯ ಮೃತ್ಯುಸ್ತಾಪಕರೋಪಿ ಸನ್ ।
ಆಮಕುಂಭಸ್ಯ ಲೋಕೇಸ್ಮಿನ್ ಭವೇತ್ಪಾಕ ವಿಧಿರ್ಯಥಾ ॥

— ಈ ಲೋಕದಲ್ಲಿ ಮಣ್ಣಿನ ಹಸಿಮಡಿಕೆಯನ್ನು ಬೆಂಕಿಯಲ್ಲಿ ಬೇಯಿಸಿದರೆ ಅದು ಅಮೃತದ ಸಂಬಂಧಕ್ಕೆ ಎಂದರೆ ನೀರನ್ನು ತುಂಬುವುದಕ್ಕೆ ಸಮರ್ಥವಾಗುವಂತೆ, ಮೃತ್ಯುವು ತಾಪ-ದುಃಖವನ್ನುಂಟು ಮಾಡುವುದಾದರೂ ಅದು ಆತ್ಮಜ್ಞಾನಿಗೆ ಅಮೃತದ ಸಂಬಂಧಕ್ಕೆ ಎಂದರೆ ಮುಕ್ತಿಯನ್ನು ಹೊಂದಿಸುವುದಕ್ಕೆ ಕಾರಣವಾಗುವುದು.

ವಿವರಣ — ಚಿನ್ನವನ್ನು ಪುಟಕಿಟ್ಟರೆ ಅದರಲ್ಲಿರುವ ಕಿಟ್ಟಕಾಲಿಕೆಗಳು ದೂರವಾಗಿ ಅದು ಶುದ್ಧ ಸುವರ್ಣವಾಗುವುದು. ಮಣ್ಣಿನ ಹಸಿಮಡಿಕೆಯನ್ನು ಸುಟ್ಟರೆ ಅದು ನೀರನ್ನು ತುಂಬುವುದಕ್ಕೆ ಯೋಗ್ಯವಾಗುವುದು. ಹಾಗೆಯೇ ಮೃತ್ಯುಕಾಲದಲ್ಲಿ ಆತ್ಮನಿಗೆ ಸಂತಾಪವಾಗುವುದಾದರೂ ಸಮ್ಯಗ್ದೃಷ್ಟಿಯಾದ ಅಂತರಾತ್ಮನು ಸಮಾಧಿಪೂರ್ವಕವಾಗಿ ದೇಹತ್ಯಾಗವನ್ನು ಮಾಡುವುದರಿಂದ ಅದು ಅವನಿಗೆ ಕ್ರಮೇಣ ಮುಕ್ತಿಯನ್ನು ದೊರಕಿಸಿಕೊಡುವುದಕ್ಕೆ ಸಹಕಾರಿಯಾಗುವುದು. ಕಷ್ಟವನ್ನು ಸಹಿಸಿದರೆ ತಾನೆ ಇಷ್ಟವು ದೊರೆಯುವುದು ?

—ಮೃತ್ಯುಮಹೋತ್ಸವ

ಶ್ರೀ ಜಂಬೂಸ್ವಾಮಿ ಚರಿತ

—ಶ್ರೀ ಅ. ನಾ. ಚಂದ್ರಕೀರ್ತಿ

ಸ್ವರ್ಗೀಯ ಶ್ರೀ ಎ. ಶಾಂತಿರಾಜಶಾಸ್ತ್ರಿಗಳವರು ತಮ್ಮ ಮುನ್ನುಡಿಯಲ್ಲಿ ತಿಳಿಸಿರುವಂತೆ ಇದೊಂದು ಅನುವಾದ ಗ್ರಂಥವಿದೆ. ಹಿಂದಿ ಭಾಷಾಂತರವನ್ನು ಶ್ರೀ ದೀಪಚಂದ್ ವರ್ಣಿಯವರು ಮೂಲ ಸಂಸ್ಕೃತ ಕೃತಿಯಿಂದ ಮಾಡಿರುವುದಾಗಿಯೂ ತಿಳಿಸಲಾಗಿದೆ. ಪುಸ್ತಕ 65 ಪುಟದ ಗಾತ್ರವಿದೆ.

ಈ ಗ್ರಂಥದ ಪ್ರಕಟಣೆ ಮೈಸೂರಿನಿಂದ ದಿನಾಂಕ 20-5-1935 ರಂದು ಆಗಿರುತ್ತದೆ. ಪ್ರಕಾಶನದ ವೃತ್ತಾಂತ ಬಹಳ ಉತ್ಸಾಹದಾಯಕವೂ ಅಂದಿನ ಧಾರ್ಮಿಕರ ನಿಸ್ಪೃಹ ತ್ಯಾಗದ ದ್ಯೋತಕವಾಗಿದೆ. ಬೆಂಗಳೂರಿನ ಜವಳಿ ಅಂಗಡಿ ಆರ್. ಬ್ರಹ್ಮಸೂರಯ್ಯನವರ ಸಹೋದರಿ ಶ್ರೀ ಕುಸುಮಾವತಮ್ಮನವರು ಧರ್ಮಕಾರ್ಯಕ್ಕೆ ಉಪಯೋಗಿಸಬೇಕೆಂದು ಅವರ ಅವಸಾನ ಕಾಲದಲ್ಲಿ ಬೆಂಗಳೂರಿನ ಧರ್ಮ ಪರಾಯಣೆ ಶ್ರೀಮತಿ ಬೊಮ್ಮಕ್ಕಮ್ಮನವರಲ್ಲಿ ಕೊಟ್ಟಿದ್ದ ಧರ್ಮ ದ್ರವ್ಯದಿಂದ ಇವರು ಮುದ್ರಣಕ್ಕೆ ಮುಂದಾಗಿರುತ್ತಾರೆ. ಕಾರಣ ಶ್ರೀ ಕುಸುಮಾವತಮ್ಮನವರು ಶಾಸ್ತ್ರಪಠನ ಶ್ರವಣಗಳಲ್ಲಿ ತುಂಬ ಆಸಕ್ತಿಯುಳ್ಳವರಾಗಿದ್ದರು. ಅವರ ಪುಣ್ಯ ಸ್ಮೃತಿಯಾಗಿ ಈ ಗ್ರಂಥ ಬೆಳಗುತ್ತಲಿದೆ.

ಜಂಬೂಸ್ವಾಮಿ ಈ ಅವಸರ್ಪಿಣೀ ಕಾಲದ ಕೊನೆಯ ಕೇವಲಿಗಳಾಗಿ ಮುಕ್ತರಾದರು. ಇವರ ಚರಿತ್ರೆಯನ್ನು ರಚಿಸಿರುವ ಕಾರಣವನ್ನು ಉಪಸಂಹಾರದಲ್ಲಿ ನಮೂದಿಸಲಾಗಿದೆ.

ಮಿಥ್ಯಾದೃಷ್ಟಿಗಳಾಗಿದ್ದ ಭಾವದೇವ ಭವದೇವ ಸಹೋದರರು ಯಾವ ಧರ್ಮವನ್ನು ಅವಲಂಬಿಸಿ ಅದರ ಪ್ರಭಾವದಿಂದ ಉತ್ತರೋತ್ತರ ಆತ್ಮೋನ್ನತಿಯನ್ನು ಹೊಂದಿ ಮೊದಲನೆಯ ಭಾವದೇವನು ಶ್ರೀ ಜಂಬೂಸ್ವಾಮಿ ಕೇವಲಿಯಾಗಿ ಲೋಕ ಪೂಜ್ಯನಾಗಿ ಮುಕ್ತಿ ಸಾಮ್ರಾಜ್ಯಕ್ಕೆ ಅಧಿಪತಿಯಾದನೋ ಎರಡನೆಯ ಭವದೇವನು ವಿದ್ಯುಚ್ಚರ ಮುನಿಯಾಗಿ ಲೋಕ ಪೂಜ್ಯನಾಗಿ ಮುಂದೆ ಕೈವಲ್ಯವನ್ನು ಪಡೆಯುವನಾಗಿರುವನೋ ಅಂತಹ ಪರಮ ಪವಿತ್ರ ಜೈನ ಧರ್ಮವನ್ನು ಆತ್ಮೋನ್ನತಿಕಾಂಕ್ಷಿಗಳೆಲ್ಲರೂ ಪರಿಪಾಲಿಸಿ ಶಾಶ್ವತವಾದ ಕೈವಲ್ಯ ಸುಖಕ್ಕೆ ಪಾತ್ರರಾಗಬೇಕೆಂಬುದೇ ಈ ಆದರ್ಶ ಪುಣ್ಯ ಚರಿತ್ರ ಲೇಖನದ ಮತ್ತು ಪ್ರಕಾಶನದ ಉದ್ದೇಶವಾಗಿರುತ್ತದೆ.

ಜಂಬೂಸ್ವಾಮಿ ಚರಿತದಲ್ಲಿ ಅನೇಕ ಕಥೆಗಳು ಹೆಣೆದುಕೊಂಡಿವೆ. ಇದರಲ್ಲಿ ಆಸಕ್ತಿಯನ್ನು ಸೆಳೆವ ಕೆಲವು ಘಟನೆಗಳಿವೆ. ಇದರಲ್ಲಿನ ಸಾಮಾಜಿಕ ಶಿಕ್ಷಣ ಮತ್ತು ಮನೋವೈಜ್ಞಾನಿಕ ಮಹತ್ವ ಉಲ್ಲೇಖನೀಯವಿದೆ.

ದುರದಂದ ಮಹಾರಾಜನಿಗೆ ತನ್ನ ಮಗ ಕಳ್ಳತನ ಮಾಡುತ್ತಿರುವ ವಿಚಾರ ತಿಳಿದು, ಮಗನನ್ನು ಕರೆಸಿ ಕಳ್ಳತನ ಬಿಡುವಂತೆ ಬೋಧಿಸುತ್ತಾನೆ. ಬದಲಾಗಿ ತನ್ನೆಲ್ಲ ಐಶ್ವರ್ಯ ಭೋಗಿಸಲು ಕೊಡುವುದಾಗಿ ತಿಳಿಸುತ್ತಾನೆ. ಅವನು ಕಳ್ಳತನ ಬಿಡಲು ಒಪ್ಪದಿದ್ದಾಗ ರಾಜ್ಯದಿಂದ ಹೊರ ಹಾಕಿಸುತ್ತಾನೆ.

ಜಿನಮತಿಯು ತನ್ನ ಮಗನು ಜಂಬೂಸ್ವಾಮಿಯು ಮರುದಿನ ದೀಕ್ಷಾಗ್ರಹಣ ಮಾಡುತ್ತಿರುವ ವಿಚಾರ ತಿಳಿಯುತ್ತಲೂ, ಮನೆಗೆ ಬಂದ ಆಗಂತುಕ ವಿದ್ಯುಚ್ಚರನಿಗೆ ತನ್ನೆಲ್ಲ ಐಶ್ವರ್ಯವನ್ನೂ ಕೊಂಡು ಹೋಗಲು ತಿಳಿಸುತ್ತಾಳೆ. ಕಳ್ಳನಾದರೂ ತಾನೊಮ್ಮೆ ಸ್ವಾಮಿಯನ್ನು ಮಾತನಾಡಿಸಿ ಸಂಸಾರಕ್ಕೆ ತರುವ ಪ್ರಯತ್ನ ಮಾಡುವುದಾಗಿಯೂ, ಅದು ಸಾಧ್ಯವಾಗದಿದ್ದಲ್ಲಿ ಅವರೊಂದಿಗೆ ದೀಕ್ಷೆ ಪಡೆಯುವುದಾಗಿ ಪಣತೊಟ್ಟು, ಪ್ರಯತ್ನಮಾಡಿ ಸೋತು ತಾನೂ ಮುನಿ ದೀಕ್ಷೆ ಪಡೆದು ಉತ್ತಮಗತಿಗೆ ಪ್ರಾಪ್ತನಾಗುತ್ತಾನೆ.

ಅನೇಕ ಧೀರತನದ ಕಥೆಗಳಲ್ಲಿ ಬಾಲಕನು ಮದವೇರ್ದ ಆನೆಯನ್ನು ಪಳಗಿಸುವ ಪ್ರಸಂಗ ಬರುತ್ತದೆ. ಇಲ್ಲಿ ವಿವರಿಸಲಾಗಿರುವಂತೆ ಅಂಗ ವಸ್ತ್ರವನ್ನು ಹೊಸೆದು, ಆನೆಯ ಮರ್ಮಸ್ಥಳಕ್ಕೆ ಹೊಡೆದು ಅದನ್ನು ಪಳಗಿಸುವ ವಿವರ ಅತ್ಯಂತ ವ್ಯಾವಹಾರಿಕವೆನಿಸುತ್ತದೆ.

ಒಂದೇ ದಿನ ರಾತ್ರಿ ಇದ್ದರೂ ಸಾಕು ಸ್ವಾಮಿಯನ್ನೇ ಮದುವೆಯಾಗಿ ಅವರನ್ನು ದೀಕ್ಷಾ ವಿಮುಖರನ್ನಾಗಿ ಮಾಡುವ ಪ್ರಯತ್ನವನ್ನು ವೈಶ್ಯ ಪುತ್ರಿಯರು ಪದ್ಮಶ್ರೀ, ಕನಕಶ್ರೀ, ವಿನಯಶ್ರೀ ಮತ್ತು ರೂಪಶ್ರೀಯರ ದೃಢಭಾವ ಮತ್ತು ಸ್ವಾಮಿಯನ್ನು ಒಪ್ಪಿಸಲು ಸಾಧ್ಯವಾಗದಾಗ ತಾವೂ ದೀಕ್ಷಿತರಾದ ಘಟನೆ ರಾಗ ಮತ್ತು ಸಮ್ಯಕ್ತ್ವದ ಕುರುಹಾಗಿವೆ.

ನವ ವಿವಾಹಿತನಾಗಿದ್ದ ಭವದೇವನಿಗೆ ಮುಲಾಜಿಗಾಗಿ ದೀಕ್ಷೆ ಪಡೆಯಬೇಕಾಗಿ ಬಂದ ಪ್ರಸಂಗ ಬೋಧಪ್ರದವಾಗಿದೆ. ವರ್ಷಗಳುರುಳಿದರೂ ಆತ ತನ್ನ ಪತ್ನಿಯನ್ನು ಕೂಡುವ ಆಸೆಯನ್ನು ಮನಸ್ಸಿನಲ್ಲಿ ಭಾವಿಸುತ್ತಾನೆ. ಇದಕ್ಕೆ ವ್ಯತ್ಯಾಸವಾಗಿ ಆತನ ಹೆಂಡತಿಯು ತನ್ನ ಪತಿ ಮುನಿ ದೀಕ್ಷೆಪಡೆದ ವಿಚಾರ ತಿಳಿಯುತ್ತಲೂ ತಾನೂ ವೈರಾಗ್ಯಪರಳಾಗಿ, ಆರ್ಯಿಕಾದೀಕ್ಷೆ ವಹಿಸಿ ಮನೆ ಸಂಪತ್ತನ್ನೆಲ್ಲ ವೆಚ್ಚಮಾಡಿ ಜಿನಾಲಯವನ್ನು ನಿರ್ಮಿಸಿ ಆತ್ಮಕಲ್ಯಾಣ ಸಾಧಿಸುತ್ತಾಳೆ. ಮುಂದೆ ಈ ಮುನಿಯ ಮನಸ್ಸಿನ ವಿಕಲ್ಪವನ್ನು ಕಳೆದು ಉತ್ತಮ ಗತಿಗೆ ಕಾರಣಳಾಗುತ್ತಾಳೆ.

ಪ್ರಾಸಂಗಿಕವಾಗಿ ದೀಕ್ಷೆ ಪಡೆದರೂ ಮುಂದೆ ದೃಢ ವಿಶ್ವಾಸದಿಂದ ಆತ್ಮಕಲ್ಯಾಣ ಸಾಧಿಸಲು ನೆರವಾಗಿರುತ್ತದೆ. ಬಾಹ್ಯದೃಷ್ಟಿಯಿಂದ ನೋಡಿದರೆ ಆಗ ತಾನೆ ಮದುವೆಯಾದವನಿಗೆ ದೀಕ್ಷೆಕೊಟ್ಟುದು ಅನ್ಯಾಯವೆನಿಸುತ್ತದೆ. ಸ್ಥಿರ ಆತ್ಮಕಲ್ಯಾಣದ ಮಾರ್ಗದಿಂದ ಹಾಗೂ ಮುನಿಗಳು ಅವಧಿಯಿಂದ ಈತ ಭವ್ಯನಾಗುವನೆಂಬುದನ್ನರಿತು ಕೊಟ್ಟಕಾರಣ ಈ ದೀಕ್ಷಾಪ್ರದಾನ ಸರ್ವೋತ್ತಮ ಉಪಕಾರವಾಗಿದೆ. ವಿದ್ಯುಚ್ಚರ ಚೋರನಾಗಿದ್ದ, ವೇಶ್ಯಾ ಲಂಪಟನೂ ಆಗಿದ್ದ. ಸ್ವಾಮಿಯೊಡನೆ ಚರ್ಚೆ ಮಾಡಿದ ನಂತರ ಧರ್ಮದಲ್ಲಿ ಸ್ಥಿರನಾದ, ದೀಕ್ಷಿತನಾದ. ಇದರಿಂದ ವ್ಯಕ್ತಿಯು ಸಕಾಲದಲ್ಲಿ ತನ್ನೆಲ್ಲ ದುಷ್ಕೃತ್ಯ ಮರೆಯಲು ಸನ್ನಿವೇಶ ಒದಗಿ ಬಂದಾಗ ಅವೆಲ್ಲವೂ ಜಾರಿ ಹೋಗುತ್ತವೆಂಬುದು ತಿಳಿಯುತ್ತದೆ.

ಪೂರ್ವಾಚಾರ್ಯರು ಜಾತಿಯಿಂದ ಜೈನರಲ್ಲದಿದ್ದರೂ ಭಾವವೇಗ, ಭವವೇಗರಿಗೆ ದೀಕ್ಷೆಯಿತ್ತದ್ದು ಮತ್ತು ಕಳ್ಳ, ವಿಷಯ ಲಂಪಟನಾದ ವಿದ್ಯುಚ್ಚರನಿಗೆ ದೀಕ್ಷೆಯಿತ್ತದ್ದು ಈ ಪ್ರಸಂಗಗಳಲ್ಲಿ ಅವರು ಜೀವಿಯ ಅರ್ಹತೆಯನ್ನರಿತು ಅವರಿಗೆ ದೀಕ್ಷೆಯಿತ್ತರು. ಜಾತಿ, ಕುಲ ಅಥವ ಹೊರ ನೋಟದ ಅವರ ಜೀವನಶೈಲಿಯನ್ನಲ್ಲ ಎಂಬುದನ್ನು ಸಾರುತ್ತವೆ.

ಗಣಧರರು ಶ್ರೇಣಿಕ ಮಹಾರಾಜನಿಗೆ ತಿಳಿಸಿದ ಕಥೆಯಲ್ಲಿ ಅವರ ನಂತರದ ಕೆಲವು ವರ್ಷಗಳಿಗೆ ಅಂತಿಮ ಕೇವಲಿಯಾದ ಜಂಬೂಸ್ವಾಮಿ ಗಂಧರ್ವನೊಡನೆ ಗುದ್ದಾಡಿ 'ಮಂಜು'ವನ್ನು ತಂದು ಶ್ರೇಣಿಕ ಮಹಾರಾಜನಿಗೆ ಮದುವೆ ಮಾಡಿದ ವಿಚಾರ ಕೌತುಕಮಯವೆನಿಸುತ್ತದೆ.

ಅಂಗಕೀಟವೆಂಬ ಪರ್ವತದ ನಿವಾಸಿಯಾದ ಗಗನಗತಿಯೆಂಬ ವಿದ್ಯಾಧರ ತಿಳಿಸುವ ಕೇರಲಪುರವೆಂಬ ಪಟ್ಟಣ ಮತ್ತು ಮೃಗಾಂಕನೆಂಬ ರಾಜನ ಪುತ್ರಿ ಮಂಜು ಎಂಬ ಹೆಸರುಗಳು ಕರ್ನಾಟಕದ ಮೈಸೂರು ಜಿಲ್ಲೆಯ ಕೇರಳಾಪುರವನ್ನು ನೆನಪಿಸುತ್ತವೆ. ರಾಜಕುಮಾರಿ 'ಮಂಜು ಕರ್ನಾಟಕದಲ್ಲಿ ಇಂದು ಪ್ರಚಲಿತ ನಾಮವಿದೆ. ಜಂಬೂಸ್ವಾಮಿಯ ಕಾಲದಲ್ಲೂ ಈ ಹೆಸರುಗಳು ಬಳಕೆಯಲ್ಲಿದ್ದವೆಂದರೆ ಕುತೂಹಲವುಂಟಾಗುತ್ತದೆ.

ಜಂಬೂದ್ವೀಪ, ಜಂಬೂವೃಕ್ಷ, ಜಂಬೂಸವಾರಿ ಮತ್ತು ಜಂಬೂಸ್ವಾಮಿ ಎಂಬಲ್ಲಿ ಬರುವ ಈ ಜಂಬೂ ಶಬ್ದದ ಬಗೆಗೆ ಹೆಚ್ಚಿನ ಅಧ್ಯಯನ ಹೊಸಬೆಳಕು ಅಗತ್ಯವಿದೆ. ಈ ಪದಕ್ಕೂ Jambo ಎಂಬುದಕ್ಕೂ ನಂಟಿದ್ದರೂ ಸಹ ಆಶ್ಚರ್ಯವಿಲ್ಲ.

ಕಥೆಯಲ್ಲಿ ಕಥೆ ಹೆಣೆದು ಧರ್ಮಬೋಧನೆಗೈಯುವ ಜಂಬೂಸ್ವಾಮಿ ಚರಿತದ ಪುನರ್ಮುದ್ರಣ ಅತ್ಯಂತ ಉಪಯುಕ್ತವಾಗುವದು. ●

ಸಜ್ಜನ ಚಿತ್ತವಲ್ಲಭ : ಒಂದು ಪರಿಚಯ

— ಶ್ರೀ ಜಲತ್ಕುನೂರ ಭೀ. ಪುಣಜಗೌಡ, ಬೆಳಗಾವಿ

ಶ್ರೀ ಎರ್ತೂರು ಶಾಂತಿರಾಜಶಾಸ್ತ್ರಿಯವರ ಅನೇಕ ಮೇರು ಕೃತಿಗಳಲ್ಲಿ ಒಂದಾದುದು "ಸಜ್ಜನ ಚಿತ್ತವಲ್ಲಭಃ". ಈ ಕೃತಿಯು ಸಂಸ್ಕೃತದಲ್ಲಿ ಮಲ್ಲಿಷೇಣಾಚಾರ್ಯರಿಂದ ವಿರಚಿತವಾದುದಾಗಿರುತ್ತದೆ. ಅದರ ಕನ್ನಡ ಅನುವಾದ ಶ್ರೀ ಶಾಂತಿರಾಜ ಶಾಸ್ತ್ರಿಯವರದಾಗಿರುತ್ತದೆ. ಮೊದಲು ಸಂಸ್ಕೃತ ಶ್ಲೋಕವನ್ನಿತ್ತು ಮೂಲಕ್ಕೆ ಚ್ಯುತಿಯಾಗದಂತೆ ಅದರ ಕನ್ನಡ ಅರ್ಥವನ್ನು ತಿಳಿಯಾದ, ಸರಳವಾದ ಅರ್ಥಗರ್ಭಿತ ಶೈಲಿಯಲ್ಲಿ ಅದರ ಕೆಳಗೇ ಇತ್ತಿರುವರು.

ಇದರಿಂದ ಮೂಲದಲ್ಲಿ ರಚಿಸಿದ ಮಲ್ಲಿಷೇಣಾಚಾರ್ಯರ ಘನ ಉದ್ದೇಶಕ್ಕೆ ಚಾಲನೆಯಿತ್ತಂತಾಗಿರುತ್ತದೆ. ಕೇವಲ ವಿದ್ವನ್ಮಣಿಗಳಿಗೆ ಮೀಸಲಾಗಿರಬೇಕಾದ ಕೃತಿಯನ್ನು ಸಾಮಾನ್ಯರವರೆಗೂ ಮುಟ್ಟಿಸಿದಂತಾಗಿರುತ್ತದೆ. ಸಂಸ್ಕೃತದ ಕಠಿಣವಾದ ಪದ ಸಮುಚ್ಚಯದ ಈ ಕೃತಿ ಕನ್ನಡೀಕರಿಸುವುದರಿಂದ ಮೂಲ ಉದ್ದೇಶ ಸಾಧನೆಯಲ್ಲಿ ಮೂಲ ಕೃತಿಗಿಂತಲೂ ಹೆಚ್ಚು ಸಫಲವಾಗಿರುತ್ತದೆ. ಒಂದು ಸಾಹಿತ್ಯ ಕೃತಿಯ ಸಫಲತೆ ಅದು ಎಷ್ಟು ಹೆಚ್ಚು ಜನರ ಬಾಳಿಗೆ ದಾರಿದೀಪವಾಯಿತೆಂಬುದನ್ನು ಆಧರಿಸಿರುತ್ತದೆ. ಈ ಪ್ರಕಾಶ ಶ್ರೀ ಶಾಂತಿರಾಜ ಶಾಸ್ತ್ರಿಯವರ ಕೃತಿ ತನ್ನ ಸಫಲತೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಸಾಧಿಸಿದೆಯೆಂಬುದರಲ್ಲಿ ಸಂಶಯವೇ ಇಲ್ಲ.

ಒಂದು ಭಾಷೆಯಿಂದ ಅದರಲ್ಲಿಯೂ ಸಂಸ್ಕೃತದಂತಹ ಕಠಿಣ ಭಾಷೆಯಿಂದ ಒಂದು ಕೃತಿಯನ್ನು ಕನ್ನಡಕ್ಕೆ ಅಳವಡಿಸುವುದು ಅಷ್ಟೊಂದು ಸುಲಭದ ಮಾತೇನೂ ಅಲ್ಲ. ಆ ಕಾರ್ಯ ಕೈಗೊಳ್ಳುವ ವ್ಯಕ್ತಿ ಸಂಸ್ಕೃತ ಭಾಷಾ ಪ್ರವೀಣನಾಗಿರಬೇಕು. ಮೇಲಾಗಿ ತರ್ಜುಮೆಗೊಳಿಸಬೇಕಾದ ಭಾಷೆಯ ಮೇಲೂ ಪ್ರಭುತ್ವವುಳ್ಳವನಾಗಿರಬೇಕು. ಶ್ರೀ ಶಾಂತಿರಾಜ ಶಾಸ್ತ್ರಿಯವರು ಸಂಸ್ಕೃತ ಭಾಷಾ ಪ್ರವೀಣರಾಗಿದ್ದರಲ್ಲದೇ ಕನ್ನಡದ ಮೇಲೂ ಅಷ್ಟೇ ಪ್ರಭುತ್ವ ಹೊಂದಿದವರಾಗಿದ್ದರು. ಅದರಿಂದಾಗಿಯೇ ಮಲ್ಲಿಷೇಣಾಚಾರ್ಯರು ಕ್ಲಿಷ್ಟ ಪದ ಸಮೂಹದ ಕೃತಿಯನ್ನು ಸರಳವಾದ ಕನ್ನಡಕ್ಕೆ ಅಳವಡಿಸಿ ಸಾದರಪಡಿಸಲು ಸಾಧ್ಯವಾಯಿತು.

"ಸಜ್ಜನಚಿತ್ತವಲ್ಲಭಃ" ಕೃತಿಯು ಶ್ರೀ ಶಾಂತಿರಾಜ ಶಾಸ್ತ್ರಿಯವರಿಂದ ಹತ್ತೊಂಬತ್ತನೂರಾ ನಲವತ್ತೆಂಟರಷ್ಟು ಮೊದಲೇ ಪ್ರಕಟಗೊಂಡದಾಗಿರುತ್ತದೆ. ಕೃತಿ ರಚನೆಯ ಸಮಯದಲ್ಲಿ ಶ್ರೀ ಶಾಸ್ತ್ರಿಗಳವರು ಅರವತ್ತು ವರುಷ ವಯಸ್ಸಿನವರಾಗಿದ್ದರು. ಈ ಪ್ರಬುದ್ಧ, ಪಕ್ವ, ಸಮಯದ ಜೀವನದ ಸಾರವನ್ನು ಅನುಭವದ ಕುಲುಮೆಯಿಂದ ಎತ್ತಿ ಎರಕ ಹೊಯ್ಯಲು ಸುಯೋಗ್ಯವಾದುದು. ವಿದ್ವನ್ಮಣಿಗಳಾದ ಜ್ಞಾನ, ಅನುಭವದ ಸಾಕಾರ ಮೂರ್ತಿಯಾದ ಶಾಸ್ತ್ರಿಯವರು ಸಮಯಕ್ಕೆ ಅನುಸಾರವಾಗಿಯೇ ಈ ಕೃತಿಯನ್ನು ರಚಿಸಿರುವರು. ಈ ಕೃತಿ (ಒಂದು ಜೀವಿ, ಒಂದು ಪ್ರಾಣಿ) ಒಬ್ಬ ಮನುಷ್ಯ ಮನುಷ್ಯನಾಗಿ ಯತಿಯಾಗಿ ಹೇಗೆ ಬಾಳಬೇಕು ಮತ್ತು ಬಾಳಿ ಮುಕ್ತಿಯನ್ನು ಪಡೆಯಬೇಕು ಎಂಬುದನ್ನು ತಿಳಿಸುತ್ತದೆ. ಅನುಭವವಿಲ್ಲದೇ ಉಪದೇಶ ನೀಡಲು ಸಾಧ್ಯವಿಲ್ಲ. ತಮ್ಮ ಜ್ಞಾನದ ಒರೆಗಲ್ಲಿನಿಂದ ಪರಾಮರ್ಶಿಸಿ ಈ ಕೃತಿಯನ್ನು ಶಾಸ್ತ್ರಿಯವರು ನಿರರ್ಗಳವಾಗಿ ರಚಿಸಿರುವರು. ಅದರಿಂದಾಗಿಯೇ ಕೃತಿಯು ಅಷ್ಟೊಂದು ಪರಿಣಾಮಕಾರಿಯಾಗುವ ರೀತಿಯಲ್ಲಿ ರೂಪುಗೊಂಡು ಬಂದಿರುತ್ತದೆ.

"ಸಜ್ಜನಚಿತ್ತವಲ್ಲಭ" ಕೃತಿಯು ಇಪ್ಪತ್ತೈದು ಶ್ಲೋಕಗಳನ್ನು ಒಳಗೊಂಡಿರುತ್ತದೆ. ಇಪ್ಪತ್ತೈದು ಶ್ಲೋಕಗಳು ಇಪ್ಪತ್ತೈದು ತತ್ವ ಮಹತುಂಗಳನ್ನೇ ಹೇಳುತ್ತವೆ. ಪ್ರತಿಯೊಂದು ತತ್ವ ತನ್ನದೇ ಆದ ಉದಾಹರಣೆ

ಯನ್ನು ಒಳಗೊಂಡಿರುತ್ತದೆ. ಒಬ್ಬ ಸಜ್ಜನ ಮನುಷ್ಯ, ಮುನಿ ಯಾವ ರೀತಿ ನಿರ್ಲಿಪ್ತನಾಗಿ ಜೀವಿಸಿ ಮುಕ್ತಿ ಪಡೆಯಬೇಕೆಂಬುದು ಹೇಳಬೇಕಾದ ಮಾತಾಗಿರುತ್ತದೆ. ಅದನ್ನೇ ಕೂಲಂಕಷವಾಗಿ ವಿವರಿಸಿ ಹೇಳಲಾಗಿರುತ್ತದೆ. ಯಾವ ರೀತಿಯಾಗಿರಬೇಕು, ಯಾವ ರೀತಿ ತಿಳುವಳಿಕೆ ತಿಳಿಯಬೇಕು, ಹಾಗೂ ನಿರ್ಲಿಪ್ತನಾಗಿರಬೇಕು, ಯಾವ ಆಶೆಯನ್ನು ತಳೆಯಬಾರದು ಎಂದು ವಿವರಿಸುತ್ತ ಪ್ರತಿ ಶ್ಲೋಕವು ಮಾನವನನ್ನು ಅಧ್ಯಾತ್ಮದೆಡೆಗೆ ಕೊಂಡೊಯ್ಯುತ್ತ ಹೋಗುತ್ತದೆ. ಅಧ್ಯಾತ್ಮ ವಿಚಾರ ಬೆಳೆಯುತ್ತ ಹೋಗಿ ಮುಕ್ತಿ ಮಾರ್ಗ ಸಾಧನೆಯ ಸಾಧ್ಯತೆಯನ್ನು ತೋರಿಸಿ ಕೊಡುತ್ತವೆ

ಪುಸ್ತಕದ ಪ್ರಾರಂಭವು ಎಲ್ಲ ಕಾಮನೆಯನ್ನು ನಾಶ ಪಡಿಸಿ ಮುಕ್ತಿ ಪಡೆದ ವರ್ಧಮಾನ ಜಿನೇಶ್ವರನನ್ನು ಸ್ಮರಿಸಿ ಭವ್ಯ ಜೀವಿಗಳಿಗೆ ಯೋಗ್ಯ ತಿಳುವಳಿಕೆಯನ್ನುಂಟು ಮಾಡುತ್ತೇನೆಂದು ಕವಿಯುಕ್ತಿಯಿಂದ ಕೃತಿ ರಚನೆ ಪ್ರಾರಂಭವಾಗುತ್ತದೆ. ಪ್ರಥಮವಾಗಿ ಮನುಷ್ಯನು ಚಾರಿತ್ರಹೀನನಾದರೆ ಹೇಗೆ ನಿರರ್ಥಕವೆಂದು ಹೇಳುತ್ತಾರೆ. ಕಮಲಗಳಿಲ್ಲದ ಸರೋವರ, ಪರಿಮಳರಹಿತ ಪುಷ್ಪ, ಪತಿವಿಹೀನ ಸ್ತ್ರೀ ಹೇಗೆ ಶೋಭಿಸಲಾರವೋ ಅದೇ ಪ್ರಕಾರ ಚಾರಿತ್ರ್ಯಹೀನನಾದ ಮುನಿಯಾಗಿರುತ್ತಾನೆ. ಮುನಿಯು ರಾಗದ್ವೇಷಗಳನ್ನು ತ್ಯಜಿಸದೇ ಹೋದರೆ ಅವನು ಕೇವಲ ವೇಷಧಾರಿಯಾಗುತ್ತಾನೆ. ವಿನಃ ಆತನು ಮುನಿಯಾಗಲಾರನು. ಮುನಿಯು ಧನಾಕಾಂಕ್ಷೆಯುಳ್ಳವ ನಾಗಿರಬೇಬಾರದು. ಆತನಲ್ಲಿ ಧನಾಕಾಂಕ್ಷೆಯಿದ್ದರೆ ಆತನಲ್ಲಿ ತ್ಯಾಗವಿರಲಾರದು ಅವನು ಗೃಹಸ್ಥನಂತೆಯೇ ಸ್ತ್ರಿಯಾಕಾಂಕ್ಷಿಯೂ ಆಗುವನು. ಮುನಿಗೆ ಭಕ್ತಾದಿಗಳಿಂದ ಉದರಪೂರ್ತಿ ಆಹಾರ ನಿತ್ಯ ದೊರೆಯುತ್ತಿದ್ದಾಗ ಆತನು ಧನಾಕಾಂಕ್ಷಿ ಏತಕ್ಕಾಗಿ ಆಗಬೇಕು ?

ಮುಂದಿನ ಆರನೆಯ ಶ್ಲೋಕದಲ್ಲಿ ಮುನಿಯು ಯಾವ ಗುಣಗಳನ್ನು ಹೊಂದಿರಬೇಕೆಂದು ಹೇಳುತ್ತ ಮುನಿಯಾದವನು ಶ್ರಾವಕರ ಮನೆಯಲ್ಲಿಯ ಆಹಾರ ವನ್ನು ಸೇವಿಸಿ ಕರ್ಮಕ್ಷಯ ಕ್ರಿಯೆಯಲ್ಲಿ ತೊಡಗಬೇಕು. ಸಾಮಾಯಿಕ ತೀರ್ಥಂಕರ ಸ್ತೋತ್ರ ಆತ್ಮ ಚಿಂತನೆ ಮುಂತಾದ ಕಾರ್ಯಗಳನ್ನು ಮಾಡಬೇಕು. ಕ್ಷಮಾ, ಮಾರ್ದವ, ಆರ್ಜವ, ಶೌಚ, ಸತ್ಯ, ಸಂಯಮ, ತಪ, ತ್ಯಾಗ, ಆಕಿಂಚನ್ಯ, ಬ್ರಹಚರ್ಯ ಮೊದಲಾದ ದಶ ಧರ್ಮಗಳ ಪಾಲನೆಯನ್ನು ಮಾಡಬೇಕು. ಆತ್ಮಚಿಂತನ ವನ್ನು ಸದಾ ಮಾಡುತ್ತಿರಬೇಕು. ಸಮ್ಯಗ್ದರ್ಶನ, ಜ್ಞಾನ ಚಾರಿತ್ರ್ಯಗಳ ಪಾಲನೆಯನ್ನು ಮಾಡಬೇಕು.

ಏಳನೆಯ ಪದ್ಯ ಮುನಿಗಳಿಗೆ ಅವರು ಹೇಗಿರ ಬೇಕೆಂಬುದಕ್ಕೆ ಕನ್ನಡಿ ಹಿಡಿಯುತ್ತದೆ. ಮುನಿಯಾದವರು ಹಲ್ಲುಜ್ಜಬಾರದೆಂಬ ನಿಯಮ, ಸ್ನಾನ ಮಾಡಬಾರದೆಂಬ ನಿಯಮ, ವಸ್ತ್ರಧಾರಣೆ ಮಾಡಬಾರದೆಂಬ ನಿಯಮ ಹಾಗೂ ಮೆತ್ತನೆಯ ಹಾಸುಗೆಯ ಮೇಲೆ ಮಲಗಬಾರ ದೆನ್ನುವ ನಿಯಮಗಳನ್ನು ಪಾಲಿಸುವುದರಿಂದ ಅವರು ಅರ್ಧ ಸುಡಲ್ಪಟ್ಟ ಹೆಣದಂತೆ ಕಾಣುವಂತಿರುತ್ತಾರೆ, ಅಂಥ ಮುನಿಗೆ ಸ್ತ್ರೀಯರ ಸಮೀಪ ಸುಳಿಯುವುದೂ ಅವರ ಮಧ್ಯವಿರುವುದೂ ತ್ಯಾಜ್ಯವಾಗಿರುತ್ತದೆ.

ಮುಂದಿನ ಪದ್ಯದಲ್ಲಿ ಈ ನಶ್ವರವಾದ ಶರೀರದ ಮೇಲೆ ಮೋಹವಿರಬಾರದೆಂದು ಸಾರುತ್ತದೆ. ಈ ದೇಹ ಎಲುವು, ಮಾಂಸ, ರಕ್ತಗಳ ರೂಪವಾಗಿದ್ದು ಚರ್ಮದ ಹೊದಿಕೆಯನ್ನು ಪಡೆದಿರುತ್ತದೆ. ಈ ಹೊದಿಕೆ ಇಲ್ಲದೇ ಹೋಗಿದ್ದರೆ ನಾಯಿ ಕೊಕ್ಕರೆಗಳಿಗೆ ಆಹಾರವಾಗುತ್ತಿತ್ತು. ಅಂಥಾ ಶರೀರಕ್ಕೆ ವೃಥಾ ಮೋಹಪಡಬಾರದು.

ಮತ್ತೊಂದು ಶ್ಲೋಕವು ಸ್ತ್ರೀಯರಿಂದ ಹೇಗೆ ಅಲಿಪ್ತನಾಗಿರಬೇಕೆಂದು ತಿಳಿಸುತ್ತದೆ. ಸ್ತ್ರೀಯರ ಒಡನಾಟ ಮೊದಮೊದಲು ಚೆನ್ನಾಗಿಯೇ ಎನ್ನಿಸುತ್ತದೆ. ಹೀಗೆ ವಿಷವೃಕ್ಷದ ಹಣ್ಣು ರುಚಿಕರವಾಗಿ ಮೊದಲು ಎನ್ನಿಸಿ ದರೂ ಆ ಮೇಲೆ ಕೊಲ್ಲುವಂತೆ ಸ್ತ್ರೀಯರ ಸಂಗವಾಗಿರು ತ್ತದೆ. ವಿಷ ಸರ್ಪದಿಂದ ಹೇಗೆ ದೂರವಿರುವೆಯೋ ಹಾಗೇ ಸ್ತ್ರೀ ಸಮೂಹದಿಂದ ಮುನಿಯಾದವನು ದೂರ ವಿರಬೇಕು.

ಹನ್ನೊಂದನೆಯ ಪದ್ಯದಲ್ಲಿ ಈ ಶರೀರವೇಕೆ ತ್ಯಾಜ್ಯವೆಂದು ವಿವರಿಸುತ್ತಾರೆ. ಈ ದೇಹವನ್ನು ಪೋಷಿಸಿ ಬೆಳೆಸುವುದಕ್ಕಾಗಿ ಅದಕ್ಕೆ ವಸ್ತುಗಳನ್ನೇ ಇತ್ತು ಬೆಳೆಯಿಸಲಾಯಿತು, ಆದಾಗ್ಯೂ ಈ ದೇಹ ತನ್ನೊಡನೆ ಬರುವುದಿಲ್ಲ. ಈ ದೇಹವೇ ಸಂಗಡ ಬರುವುದಿಲ್ಲವೆಂದ ಮೇಲೆ ಉಳಿದ ಬಂಧುಬಳಗ, ಸ್ನೇಹಿತರು ಬರಲು ಸಾಧ್ಯವೇ ಇಲ್ಲ. ಆದಕ್ಕಾಗಿ ಯಾವುದೇ ಮೋಹವನ್ನು ನೀನು ತಳೆಯಲೇ ಬೇಡ. ಹನ್ನೆರಡನೆಯ ಶ್ಲೋಕ ಸತ್ತಾಗ ಇನ್ನುಳಿದವರು ಅಳುವ ಪರಿಯನ್ನು ವಿಮರ್ಶಿಸು ತ್ತದೆ. ಧನವಿಲ್ಲದಿದ್ದರೆ ಅವಲಂಬಿತರು ಬಂದೊದಗಿದ

ಸಂಕಟಕ್ಕಾಗಿ ಅತ್ತು ಶಪಿಸುವರು. ಆ ಮೇಲೆ ತಮ್ಮ ಕಾರ್ಯದಲ್ಲಿ ತೊಡಗಿ ಕ್ರಮೇಣ ದುಃಖವನ್ನು ಮೃತನ ಹೆಸರನ್ನು ಮರೆಯುತ್ತಾರೆ, ಎಂದ ಮೇಲೆ ಮೋಹ ಪರವಶನಾಗಿ ಅವರಿಗಾಗಿ ಏಕಾಗಬೇಕು? ಮುನಿಯಾದ ವ್ಯಕ್ತಿ ಮೊದಲು ಇಪ್ಪತ್ತೆಂಟು ಮೂಲಗುಣಗಳುಳ್ಳ ವ್ರತವನ್ನು ಪಾಲಿಸುತ್ತಾನೆ. ಆದರೆ ಮುಂದೆ ಕಾರಣಾಂತರದಿಂದ ಚಳಿಗಾಳಿಗೆ ಹೆದರಿ ವ್ರತ ಪರಿಪಾಲನೆಯನ್ನು ತ್ಯಜಿಸಲು ಇಚ್ಛಿಸುವದು ಯೋಗ್ಯವಾಗಲಾರದು. ತ್ಯಾಜ್ಯ ಮಾಡಿದ ಪರಿಗ್ರುಹವನ್ನು ಮತ್ತೆ ಪಡೆಯಲೇ ಬಾರದು.

ಎರಡನೆಯವರು ಮರಣ ಹೊಂದುವುದನ್ನು ಕಂಡರೂ ವ್ಯಕ್ತಿ ತನಗೂ ಮರಣವಿದೆಯೆಂದು ಭಾವಿಸುವದೇ ಇಲ್ಲ. ವ್ಯರ್ಥವಾಗಿಯೇ ಸಂಸಾರ ಸಾಗರದಲ್ಲಿ ಲೀನನಾಗಿ ಇಂದ್ರಿಯ ಸುಖಗಳಲ್ಲಿ ಕಾಲಹರಣ ಮಾಡುತ್ತಾನೆ. ಅದಕ್ಕಾಗಿ ಈ ಪ್ರಕಾರ ವ್ಯರ್ಥವಾಗಿ ಕಾಲಹರಣ ಮಾಡದೇ ಜಿನಧರ್ಮವನ್ನು ಚಾಚೂ ತಪ್ಪದೇ ಪಾಲಿಸಿ ಆತ್ಮಕಲ್ಯಾಣ ಮಾಡಿಕೊಳ್ಳಿ ಎಂದು ಹದಿನಾಲ್ಕನೆಯ ಶ್ಲೋಕವು ಬೋಧಿಸುತ್ತದೆ.

ಹದಿನಾರನೆಯ ಪದ್ಯವು ಮನುಷ್ಯ ಆಯುಷ್ಯದಲ್ಲಿಯ ಉಪಯುಕ್ತ ಕಾಲವನ್ನು ಎತ್ತಿ ತೋರಿಸುತ್ತದೆ. ಅರ್ಧಾಯುಷ್ಯವು ನಿದ್ರೆಯಲ್ಲಿ ಕಳೆದು ಹೋಗುತ್ತದೆ. ಉಳಿದ ಭಾಗ ವೃದ್ಧಾಪ್ಯದಲ್ಲಿ ಕಳೆದು ಹೋಗುತ್ತದೆ. ಇನ್ನುಳಿದ ಒಂದು ಭಾಗ ಹಲವು ವ್ಯಸನಗಳಿಂದ ಕಳೆದರೆ ಗತಿಯೇನು? ಅದಕ್ಕಾಗಿ ಮೋಕ್ಷ ಪ್ರಾಪ್ತಿಯ ಮಾರ್ಗವನ್ನು ಮೋಹಪಾಶವನ್ನು ಕಳಚಿ ಪಡೆಯಲು ಪ್ರಯತ್ನಿಸಬೇಕು.

ಮುನಿಯಾದ ವ್ಯಕ್ತಿ ಇಂಥದೇ ಆಹಾರ ಬೇಕೆಂಬ ಅಭಿಮಾನ ತಳೆಯಬಾರದು ಗೃಹಸ್ಥರು ನೀರಸವಾದ ಆಹಾರವಿತ್ತರೂ ಕೆಡೆಕೆನ್ನಿಸಿಕೊಳ್ಳಬಾರದು. ಹಸಿವೆ ನೀರಡಿಕೆಗಳ ಬಾಧೆಯನ್ನು ಈ ದೇಹ ಸಹಿಸುವಂತೆ ಮಾಡಿಯೇ ಕರ್ಮಕ್ಷಯವನ್ನು ಮಾಡಬೇಕಾಗಿರುತ್ತದೆ. ಅದಕ್ಕಾಗಿ ಬಾಧೆಗಳನ್ನು ಸಹಿಸಲು ರೂಢಿಸಬೇಕಾಗಿರುತ್ತದೆ.

ಮುಂದಿನ ಪದ್ಯವು ಮುನಿಯಾದವನು ಆಹಾರದ ಬಗೆಗೆ ಹೆಚ್ಚು ಆಸಕ್ತಿ ವಹಿಸಬಾರದೆಂದು ಹೇಳುತ್ತದೆ. ಸಮಯ ಮುಗಿದ ಮೇಲೆ ಆತ್ಮನು ಈ ದೇಹವನ್ನು ತ್ಯಜಿಸಿಯೇ ತೀರುವನು. ಅದಕ್ಕಾಗಿ ಈ ದೇಹ ಆತ್ಮನಿಗಾಗಿ ಬಾಡಿಗೆಯ ಮನೆ ಇದ್ದಂತೆ. ಬಾಡಿಗೆಯ ಮನೆಗಾಗಿ ವ್ಯರ್ಥ ಸಮಯ ಹಾಳುಮಾಡಬಾರದೆಂದು ಸಾರುತ್ತದೆ.

ಇಪ್ಪತ್ತನೆಯ ಪದ್ಯವು ಧನವಂತರು ಧನವಿದ್ದಾಗ ದಾನ ಮಾಡಬೇಕು ಧನಹೀನರು ವಿಷಯಾಕಾಂಕ್ಷಿಯಾಗಿ ಬಾಳಬಾರದು. ಒಂದು ವೇಳೆ ಹಾಗೆ ಮಾಡದೇ ಹೋದಲ್ಲಿ ಅವರು ತಮ್ಮ ಆತ್ಮಕಲ್ಯಾಣವನ್ನೇ ಬಯಸುತ್ತಿರುವರೆಂದು ತಿಳಿಯಬೇಕು. ಅದರ ಮುಂದಿನ ಪದ್ಯವು ಮನುಷ್ಯ ಜನ್ಮವನ್ನೂ, ಉತ್ತಮ ಕುಲವನ್ನೂ, ಬುದ್ಧಿಮತ್ತೆಯನ್ನೂ, ಆರೋಗ್ಯವನ್ನೂ ಪಡೆದ ಮೇಲೆ ಜಿನಧರ್ಮ ಆಚರಣೆಯಲ್ಲಿ ಲೀನನಾಗದೇ ಹೋದರೆ ಒಂದು ಒಳ್ಳೆಯ ಅವಕಾಶವನ್ನು ವ್ಯರ್ಥಮಾಡಿಕೊಂಡಂತೆ. ಕ್ಷುಲ್ಲಕ ಸುಖಕ್ಕಾಗಿ ಮಹಾಪ್ರಮಾದವನ್ನು ಮಾಡಿದಂತಾಗಿರುತ್ತದೆ.

ಇಪ್ಪತ್ನಾಲ್ಕನೆಯ ಪದ್ಯವು ಈ ದೇಹಕ್ಕೆ ಅಲಂಕಾರ ವರ್ಜ್ಯವೆಂದು ಮಾರ್ಮಿಕವಾಗಿ ವಿವರಿಸಲ್ಪಟ್ಟಿದೆ. ಯಾವ ಪ್ರಕಾರ ನೂರಾರು ಸಂಸ್ಕಾರಗಳನ್ನು ಮಾಡಿದರೂ ಮಲವು ಶ್ರೀಗಂಧವಾಗಲು ಸಾಧ್ಯವೇ? ಅದೇ ಪ್ರಕಾರ ನಶ್ವರವಾದ ಈ ದೇಹ ಅಲಂಕಾರದಿಂದ ಅಜರಾಮರವಾಗಲಾರದು ಅದಕ್ಕಾಗಿ ಅಲಂಕಾರಪ್ರಿಯನಾಗಬೇಡ.

ಈ ಪ್ರಕಾರದ ನೀತಿಯನ್ನು ವಿವರಿಸುವ ಕೃತಿಯನ್ನು ಶ್ರೀ ಶಾಂತಿರಾಜ ಶಾಸ್ತ್ರಿಯವರು ಇತ್ತು ಮಾನವ ಕಲ್ಯಾಣಕ್ಕಾಗಿ ಬಹುವಾದ ಉಪಕಾರವನ್ನೇ ಮಾಡಿರುವರು. ಅವರ ಸಾಹಸ ಅಪ್ರತಿಮವಾದುದಾಗಿರುತ್ತದೆ. ಅವರ ಈ ಕೃತಿ ಪ್ರತಿಯೊಬ್ಬ ಮನುಷ್ಯನನ್ನು ಜಾಗೃತಗೊಳಿಸಿ ಈ ಸನ್ಮಾರ್ಗದಲ್ಲಿ ನಡೆಯುವಂತೆ ಮಾಡಲು ನಿಶ್ಚಿತವಾಗಿಯೂ ಸಹಾಯಕಾರಿಯಾಗಿದೆ.

ಸುಕುಮಾರ ಚರಿತ್ರಾದಿ ಸಂಗ್ರಹ

— ಶ್ರೀಮತಿ ವೈ. ಸಿ. ಭಾನುಮತಿ, ಮೈಸೂರು.

ಎರ್ತೂರು ಶಾಂತಿರಾಜಶಾಸ್ತ್ರಿಗಳ 'ಸುಕುಮಾರ ಚರಿತ್ರಾದಿ ಸಂಗ್ರಹ' ಎಂಬ ಕಿರುಕೃತಿಯಲ್ಲಿ ಸುಕುಮಾರ ಚರಿತ್ರ, ಅಂಜನಾದೇವಿ ಚರಿತ್ರ, ಸಮಾಧಿಭಕ್ತಿ ಮತ್ತು ಕರ್ಮದಹನ ಮಂತ್ರಗಳು ಎಂಬ ವಿವಿಧ ವಿಷಯಂಗಳಿವೆ. "ಈ ಪುಸ್ತಕದಲ್ಲಿ ಜೈನ ಪುರಾಣಾಂತರ್ಗತವಾದ ಸುಕುಮಾರನೆಂಬ ಪುಣ್ಯಪುರುಷನ ಚರಿತ್ರವೂ ಅಂಜನಾದೇವಿಯ ಚರಿತ್ರವೂ ಸಂಗ್ರಹಿಸಲ್ಪಟ್ಟಿರುವುವಲ್ಲದೆ ಮರಣ ಕಾಲದಲ್ಲಿ ಭಾವನಾಶುದ್ಧಿಗೆ ಸಹಕಾರಿಯೂ ಆ ಕಾಲದಲ್ಲಿ ಉಪದೇಶಕ್ಕೆ ಯೋಗ್ಯವೂ ಆದ ಸಮಾಧಿಭಕ್ತಿ ಎಂಬ ಗ್ರಂಥವೂ ಅನಾದಿಕಾಲದಿಂದ ಜೀವಾತ್ಮರನ್ನು ಬೆಂಬಿಡದಿರುವ ೧೪೮ ಕರ್ಮಗಳ ದಹನ ಮಂತ್ರಗಳೂ ಸಂಗ್ರಹಿಸಲ್ಪಟ್ಟಿವೆ" ಎಂದು ಗ್ರಂಥಕರ್ತರು ನಿವೇದಿಸಿದ್ದಾರೆ. ಸುಕುಮಾರ ಚರಿತ್ರ ಮತ್ತು ಅಂಜನಾದೇವಿ ಚರಿತ್ರ ಜೈನ ಕಾವ್ಯ ಪ್ರಕಾರಕ್ಕೆ ಸಂಬಂಧಿಸಿದ ಕಥೆಗಳಾಗಿದ್ದು ಒಂದು ಗುಂಪಿಗೆ ಸೇರುತ್ತವೆ. ಸಮಾಧಿಭಕ್ತಿ ಮತ್ತು ಕರ್ಮದಹನ ಮಂತ್ರಗಳು ಜೈನಶಾಸ್ತ್ರಪ್ರಕ್ರಿಯೆಗಳಿಗೆ ಸಲ್ಲುತ್ತವೆ.

ಶಾಂತಿರಾಜ ಶಾಸ್ತ್ರಿಗಳು ಬರವಣಿಗೆಗೆ ತೊಡಗಿಸಿಕೊಂಡ ಕಾಲದಲ್ಲಿ ಆಧುನಿಕ ಕನ್ನಡ ಸಾಹಿತ್ಯ ಒಂದು ಸ್ಪಷ್ಟರೂಪವನ್ನು ಪಡೆಯುತ್ತಿತ್ತು. ನೂತನ ಅಭಿವ್ಯಕ್ತಿಗಾಗಿ ತುಡಿದ ಮನಸ್ಸುಗಳು ಭಾವಗೀತೆ, ಕಾದಂಬರಿ, ಸಣ್ಣಕಥೆ, ನಾಟಕ ಇವೇ ಮೊದಲಾದ ಪ್ರಕಾರಗಳಲ್ಲಿ ಕೃಷಿ ಮಾಡಿದ್ದರಿಂದ ಅನೇಕ ಕೃತಿಗಳು ಹೊರಬಂದಿದ್ದವು. ಆದರೆ ಶಾಸ್ತ್ರಿಗಳು ಈ ಹೊಸ ಅಲೆಗೆ ತಮ್ಮನ್ನು ಒಡ್ಡಿಕೊಳ್ಳದೆ ಇತರರಿಗೆ ಕಷ್ಟ ಸಾಧ್ಯವಾದ ಧಾರ್ಮಿಕ ಸೃಜನೇತರ ಸಾಹಿತ್ಯ ರಚನೆಯಲ್ಲಿ ಆಸಕ್ತಿ ತಳೆದರು. ಇವರ ಬರಹಗಳು ಶಾಸ್ತ್ರಮುಖವಾದುವು. ಇವರಿಗೆ ಉಪಮಾನವಾಗಬಲ್ಲ ಮತ್ತೊಬ್ಬ ವ್ಯಕ್ತಿಯೆಂದರೆ ಫ. ಗು. ಹಳಕಟ್ಟಿ. ವೀರಶೈವ ಸಾಹಿತ್ಯಕ್ಕೆ ಹಳಕಟ್ಟಿಯವರು ಯಾವ ತೆರನಾದ ಸೇವೆ ಸಲ್ಲಿಸಿದರೂ ಅದೇ ಬಗೆಯಲ್ಲಿ ಶಾಸ್ತ್ರಿಗಳು ಜೈನ ಸಾಹಿತ್ಯಕ್ಕೆ ಸಂಬಂಧಿಸಿದ ಕಾರ್ಯಗಳಿಗೆ ತಮ್ಮನ್ನು ಅರ್ಪಿಸಿಕೊಂಡರು. ಅರ್ಧ ಶತಕದಷ್ಟು ಕೃತಿಗಳನ್ನು ಹೊರ ತಂದರು.

ಪ್ರಸ್ತುತ ಸುಕುಮಾರ ಚರಿತ್ರೆಯು ವಸ್ತು ಭಾರತೀಯ ಭಾಷೆಗಳಲ್ಲಿ ಪ್ರಸಿದ್ಧವಾದುದು. ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಹೇಳುವುದಾದರೆ ಸುಕುಮಾರ ಕಥೆ ಮೊದಲಬಾರಿಗೆ ವಡ್ಡಾರಾಧನೆ ಮತ್ತು ಶಾಂತಿನಾಥನ ಸುಕುಮಾರ ಚರಿತಂಗಳಲ್ಲಿ ಏಕಕಾಲಕ್ಕೆ ಕಾಣಿಸಿಕೊಂಡಿತು. ಕ್ರಿ. ಶ. 1068 ರಲ್ಲಿದ್ದ ಶಾಂತಿನಾಥನ ಸುಕುಮಾರ ಚರಿತಂ ಚಂಪುಕೃತಿ ಅನಂತರ ಬಂಧುವರ್ಮನ (ಕ್ರಿ. ಶ. 1200) ಜೀವಸಂಬೋಧನೆಯಲ್ಲಿ ಹಾಗೂ ನಾಗರಾಜ ಕವಿಯ (ಕ್ರಿ.ಶ.1331) ಪುಣ್ಯಾಸ್ರವದಲ್ಲಿ ಸುಕುಮಾರನ ಕಥೆ ಆನುಷಂಗಿಕವಾಗಿ ಬಂದಿದೆ. ಈ ವಸ್ತು ಕನ್ನಡ ಸಾಹಿತ್ಯದಲ್ಲಿ ಮತ್ತೊಮ್ಮೆ ಕಾಣಿಸಿಕೊಳ್ಳುವುದು ಸು. 1500 ರಲ್ಲಿದ್ದ ಆದಿದೇವನಲ್ಲಿ. ಈತ ಸಾಂಗತ್ಯದಂಥ ದೇಸಿಛಂದದಲ್ಲಿ ಸುಕುಮಾರ ಚರಿತೆಯನ್ನು ಬರೆದು ಈ ವಸ್ತುವನ್ನು ಮತ್ತಷ್ಟು ಪ್ರಚುರ ಪಡಿಸಿದನು.

ಶಾಸ್ತ್ರಿಗಳು ಸುಕುಮಾರ ಚರಿತೆಯ ವಸ್ತುವನ್ನು ವಡ್ಡಾರಾಧನೆ ಮತ್ತು ಶಾಂತಿನಾಥನ ಸುಕುಮಾರ ಚರಿತೆಯಿಂದ ಸಂಗ್ರಹಿಸಿದಂತೆ ಕಂಡುಬರುತ್ತದೆ. ಇವರ ಸುಕುಮಾರ ಚರಿತ್ರಾದಿ ಸಂಗ್ರಹ ಮೊದಲ ಮುದ್ರಣ ಕಂಡದ್ದು 1932ರಲ್ಲಿ. ಆ ಕಾಲಕ್ಕೆ ಸುಕುಮಾರಚರಿತ್ರೆಯ ವಸ್ತುವಿಗೆ ಸಂಬಂಧಿಸಿದ ಯಾವ ಗ್ರಂಥಗಳೂ ಬೆಳಕು ಕಂಡಿರಲಿಲ್ಲವೆಂಬುದನ್ನು ಗಮನಿಸಬೇಕು. ಶಾಸ್ತ್ರಿಗಳು ಹಸ್ತಪ್ರತಿಗಳನ್ನು ಓದಿ ವಿಷಯ ಸಂಗ್ರಹಿಸಿರಬೇಕಾದರೆ ಈ ಕ್ಷೇತ್ರದಲ್ಲಿ ಅವರಿಗಿದ್ದ ಆಸಕ್ತಿ, ಪಟ್ಟಶ್ರಮ, ಅಧ್ಯಯನ ಶೀಲತೆಗಳು ವ್ಯಕ್ತವಾಗುತ್ತವೆ.

ಸುಕುಮಾರ ಚರಿತೆ ಜೈನ ಧರ್ಮದ ಪ್ರಮುಖ ಅಂಗವಾದ ಪಂಚಾಣು ವ್ರತಗಳ ಹಿರಿಮೆಯನ್ನು ಸಾದರ ಪಡಿಸುತ್ತದೆ. ಅಣುವ್ರತಗಳು ಮೂಲಕಥೆಯೊಂದಿಗೆ ಸಾವಯುವ ಸಂಬಂಧ ಪಡೆದುಕೊಂಡಿರುವುದರಿಂದ ಎಲ್ಲಿಯೂ ತತ್ತ್ವವನ್ನು ಹೇರಿದ ಅನುಭವವಾಗುವುದಿಲ್ಲ. ಬ್ರಾಹ್ಮಣನಾಗಿದ್ದ ಸೂರ್ಯಮಿತ್ರನನ್ನು ಜೈನಧರ್ಮಕ್ಕೆ ಪರಿವರ್ತಿತನಾಗುವಂತೆ ಮಾಡಿ ಸಾಮಾನ್ಯರಲ್ಲಿ ಜೈನ ಧರ್ಮ ನಿಷ್ಠೆಯನ್ನು ಬೆಳೆಸುವುದೂ ವಸ್ತುವಿನ ಮುಖ್ಯ ಆಶಯಗಳಲ್ಲಿ ಒಂದಾಗಿದೆ. ಶಾಸ್ತ್ರಿಗಳು ಸಾಮಾನ್ಯರನ್ನು ದೃಷ್ಟಿಯಲ್ಲಿಟ್ಟುಕೊಂಡಿರುವುದರಿಂದ ಸುಕುಮಾರ ಚರಿತೆಯನ್ನು ಸಂಕ್ಷಿಪ್ತವಾಗಿ ಸರಳವಾಗಿ ನಿರೂಪಿಸಿದ್ದಾರೆ. ವಸ್ತುವಿಗೆ ಸಂಬಂಧಿಸಿದಂತೆ ಪ್ರಮುಖವಾದ ಮಾರ್ಪಾಟುಗಳನ್ನೇನೂ ಮಾಡಿಕೊಂಡಿಲ್ಲ. ಅಂಥ ಮರುಸೃಷ್ಟಿಯ ಉದ್ದೇಶವೂ ಶಾಸ್ತ್ರಿಗಳಿಗೆ ಇದ್ದಂತಿಲ್ಲ. ಇಲ್ಲಿ ಬರುವ ಸೂರ್ಯಮಿತ್ರನು ಅಗ್ನಿಭೂತಿ ವಾಯುಭೂತಿಗಳ ಸೋದರಮಾವನೆಂದು ಪ್ರಾಚೀನ ಕನ್ನಡ ಕೃತಿಗಳು ಉಲ್ಲೇಖಿಸುತ್ತವೆ. ಆದರೆ ಶಾಸ್ತ್ರಿಗಳು ಸೂರ್ಯಮಿತ್ರನನ್ನು ಅಗ್ನಿಭೂತಿ ವಾಯುಭೂತಿಯರ ಚಿಕ್ಕತಂದೆ ಎಂದು ಬದಲಾಯಿಸಿಕೊಂಡಿದ್ದಾರೆ. ಇಂಥ ಬದಲಾವಣೆಗೆ ಬೇರೆ ಆಕರವೇನಾದರೂ ಇರಬಹುದೆ? ಇವರು ಸುಕುಮಾರ ಕಥೆಯನ್ನು ಸಂಕ್ಷಿಪ್ತಗೊಳಿಸುವ ಭರದಲ್ಲಿ ಕೆಲವೊಂದು ಮುಖ್ಯ ಘಟನೆಯನ್ನು ಕೈಬಿಟ್ಟಿರುವುದು ಉಚಿತವೆಂದು ತೋರುವುದಿಲ್ಲ. ಉದಾಹರಣೆಗೆ ಅಗ್ನಿಭೂತಿ ವಾಯುಭೂತಿ ಸೋದರರು ಸೂರ್ಯಮಿತ್ರನ ಬಳಿಗೆ ವಿದ್ಯಾರ್ಥಿಗಳಾಗಿ ಹೋದಾಗ ಆತ ತಾನು ಸೋದರ ಮಾವನೆಂಬುದನ್ನು ಗೋಪ್ಯವಾಗಿಡುತ್ತಾನೆ. ಕಾರಣ ವಿಷ್ಟೆ, ಸೋಮಾರಿಗಳಾಗಿದ್ದ ಅವರು ಸೋದರಮಾವನೆಂದು ತಿಳಿದರೆ ವಿದ್ಯೆ ಕಲಿಯುವುದಿಲ್ಲವೆಂದು. ಜೀವನದ ಸಂಕಷ್ಟಗಳ ಅರಿವಾಗಲೆಂದು ಭಿಕ್ಷೆಬೇಡಿ ಉಂಡು ಓದಲು ಹೇಳುತ್ತಾನೆ. ಮುಂದೆ ವ್ಯಾಸಂಗ ಮುಗಿದು ಅವರು ಊರಿಗೆ ಮರಳುವಾಗ ಸೂರ್ಯಮಿತ್ರ ತಾನಾರೆಂಬುದನ್ನು ಹೊರಗೆಡಹುತ್ತಾನೆ. ಸೋದರಮಾವನಾಗಿದ್ದುಕೊಂಡು ನಮ್ಮನ್ನು ತಿರಿದುಣ್ಣುವಂತೆ ಮಾಡಿದನಲ್ಲ ಎಂದು ವಾಯುಭೂತಿಗೆ ಮಾವನ ಮೇಲೆ ದ್ವೇಷಾಂಕುರವಾಗುತ್ತದೆ. ಇದು ಮುಂದಿನ ಅನರ್ಥಗಳಿಗೆ ಕಾರಣವಾಗುವುದು. ಶಾಸ್ತ್ರಿಗಳು ಈ ಸಂದರ್ಭವನ್ನು ಕೈಬಿಟ್ಟಿರುವುದರಿಂದ ಕಥೆಯಲ್ಲಿ ವಾಯುಭೂತಿಯ ಕ್ರೋಧಕ್ಕೆ ಕಾರಣವೇ ಸ್ಪಷ್ಟವಾಗುವುದಿಲ್ಲ. ಆದರೆ ಮುಂದಿನ ಭಾಗಗಳನ್ನು ಶಾಸ್ತ್ರಿಗಳು ಸೊಗಸಾಗಿ ನಿರ್ವಹಿಸಿದ್ದಾರೆ. ವೈಭವದ ತುತ್ತತುದಿಯಲ್ಲಿದ್ದ ಸುಕುಮಾರನು ಆರತಿಯ ದೀಪದ ತೇಜಸ್ಸಿಗೆ ಕಣ್ಣೀರು ಸುರಿಸುವುದು. ತಾವರೆಯ ದಂಟಿನಲ್ಲಿಟ್ಟ ಅಕ್ಕಿಯ ಅನ್ನವನ್ನು ಮಾತ್ರ ತಿನ್ನುವುದು, ಆಸನದಲ್ಲಿ ಸಾಸಿವೆ ಒತ್ತಿದ ಬಾಧೆಯನ್ನು ಸಹಿಸದೆ ಅತ್ತಿತ್ತ ಚಲಿಸುವುದು ಕಥೆಯ ಮುಖ್ಯ ಘಟ್ಟಗಳಲ್ಲಿ ಒಂದು. ರಾಜನಿಗೂ ಅಚ್ಚರಿಯಾಗುವಂಥ ಆ ವೈಭವ ಕಲ್ಪನೆಗೆ ನಿಲುಕದು. ಈ ಸನ್ನಿವೇಶದ ಔಚಿತ್ಯವರಿತ ಶಾಸ್ತ್ರಿಗಳು ವಿವರವಾಗಿ ನಿರೂಪಿಸಿದ್ದಾರೆ.

ಶಾಸ್ತ್ರಿಗಳು ಸುಕುಮಾರ ಕಥೆಯನ್ನು ಪರಿಭಾವಿಸಿರುವ ರೀತಿ ಜೈನಧರ್ಮದ ಚೌಕಟ್ಟಿಗೆ ಅನುಗುಣವಾಗಿದೆ. ಪ್ರಾಚೀನ ಕವಿಗಳು ಹೊಂದಿದ್ದ ಧ್ಯೇಯೋದ್ದೇಶಗಳಿಗಿಂತ ಶಾಸ್ತ್ರಿಗಳದ್ದು ಭಿನ್ನವಾಗಿಲ್ಲ. ಸುಕುಮಾರ ಚರಿತ್ರೆಯನ್ನು ಸಮಾಪ್ತಿಗೊಳಿಸುವಾಗ ತಮ್ಮ ಉದ್ದೇಶವನ್ನು ಸ್ಪಷ್ಟಪಡಿಸಿದ್ದಾರೆ — "ಭವಸಮುದ್ರದಲ್ಲಿ ಪ್ರಾಣಿಗಳು ಅಧರ್ಮಾಚರಣೆಗಳಿಂದ ಎಂತೆಂತಹ ದುರವಸ್ಥೆಗಳನ್ನು ಹೊಂದುತ್ತಾರೆಂಬುದೂ ವ್ರತನಿಯಮಾದಿ ಧರ್ಮಾಚರಣೆಗಳಿಂದ ಎಂತೆಂತಹ ಉತ್ತಮಾವಸ್ಥೆಗಳನ್ನು ಹೊಂದುತ್ತಾರೆಂಬುದೂ ಈ ಸುಕುಮಾರಚರಿತ್ರದಿಂದ ಗೊತ್ತಾಗುವುದು. ವಿವೇಕಿಗಳು ಪಾಪಭೀತರಾಗಿ ಪರಹಿಂಸೆ ಪರವಂಚನೆ ದುರಾಚಾರ ದುಷ್ಕಾರ್ಯರೂಪವಾದ ದುರ್ಮಾರ್ಗದಲ್ಲಿ ತಮ್ಮ ಸ್ವಲ್ಪಕಾಲದ ಜೀವನಯಾತ್ರೆಯನ್ನು ಸಾಗಿಸದೆ ಪರೋಪಕಾರ ನಿಷ್ಕಾಪಟ್ಯ ಸದಾಚಾರ ಸತ್ಕಾರ್ಯರೂಪವಾದ ಸನ್ಮಾರ್ಗದಲ್ಲಿ ಕೊನೆಗಾಣಿಸಿ ಈ ಲೋಕದಲ್ಲಿ ಸತ್ಕೀರ್ತಿಯನ್ನೂ ಪರಲೋಕ ಸುಖಕ್ಕೆ ಪುಣ್ಯವನ್ನು ಗಳಿಸುವುದಕ್ಕೆ ಬೋಧಪ್ರದವಾದ ಈ ಸುಕುಮಾರ ಚರಿತ್ರವು ಎಲ್ಲರಿಗೂ ಮಾರ್ಗದರ್ಶಕವಾಗಲೆಂಬ ಉದ್ದೇಶದಿಂದ ಇದನ್ನಿಲ್ಲಿ ಸಂಯೋಜಿಸಿರುವುದಾಗಿದೆ".*

* ಸುಕುಮಾರ ಚರಿತ್ರಾದಿ ಸಂಗ್ರಹ ಪುಟ ೧೨.

ಅಂಜನೆಯ ಕಥೆ ರಾಮಾಯಣದ ಕಿಷ್ಕಿಂಧಾಕಾಂಡ ಹಾಗೂ ಶಿವಪುರಾಣಗಳಲ್ಲಿ ಕಾಣಸಿಕೊಂಡಿದೆ. ಕಿಷ್ಕಿಂಧಾ ಕಾಂಡದ ಪ್ರಕಾರ ಅಂಜನೆ ಪುಂಜಿಕಸ್ಥಲಿ ಎಂಬ ಅಪ್ಸರಸಿ ಯಿಂದ ಶಾಪಗ್ರಸ್ಥಳಾಗಿ ವಾನರ ನಾಯಕನನ್ನು ವಿವಾಹ ವಾಗಿ ಚಲಿಸುತ್ತಿದ್ದಾಗ ವಾಯುದೇವ ಇವಳನ್ನು ಮೋಹಿಸುವನು. ಇವರಿಬ್ಬರ ಪುತ್ರನೆ ಹನುಮಂತ. ಶಿವಪುರಾಣದಲ್ಲಿ ಆಂಜನೆಯ ಕಿವಿಗೆ ಶಿವನ ಅಂಶ ಬಿದ್ದು ಹನುಮನ ಜನನವಾದಂತೆ ನಿರೂಪಿಸಲಾಗಿದೆ. ತೆಲುಗಿನ ವಚನ ವಿಚಿತ್ರ ರಾಮಾಯಣದಲ್ಲಿ ಅಂಜನೆಯ ಕಥೆ ಬೇರೊಂದು ತಿರುವು ಪಡೆದಿದೆ. ಇದರ ಪ್ರಕಾರ ಅಂಜನೆ ಗೌತಮ–ಅಹಲ್ಯೆಯರ ಪುತ್ರಿ. ಅಹಲ್ಯೆ ಗುಪ್ತವಾಗಿ ಇಂದ್ರ ಮತ್ತು ಸೂರ್ಯನಿಂದ ಒಬ್ಬೊಬ್ಬ ಪುತ್ರನನ್ನು ಪಡೆದಿರುತ್ತಾಳೆ. ಗೌತಮ ಆ ಗಂಡು ಮಕ್ಕಳನ್ನು ತನ್ನ ಮಕ್ಕಳೆಂದೇ ತಿಳಿದಿರುತ್ತಾನೆ. ಒಂದು ದಿನ ಸಮುದ್ರ ತೀರದಲ್ಲಿ ಗೌತಮನು ಗಂಡು ಮಕ್ಕಳನ್ನು ಎತ್ತಿಕೊಂಡೂ ಮಗಳನ್ನು ನಡೆಸಿಕೊಂಡು ಹೋಗುತ್ತಿರುತ್ತಾನೆ. ಈ ತಾರತಮ್ಯವನ್ನು ಗಮನಿಸಿದ ಅಂಜನೆ ಆ ಮಕ್ಕಳ ಜನನ ರಹಸ್ಯವನ್ನು ತಿಳಿಸಿಬಿಟ್ಟಳು. ಇದರಿಂದ ಕ್ರೋಧಿತಳಾದ ಅಹಲ್ಯೆ ಮಗಳಿಗೆ ಕುರುಡಿಯಾಗಿ ಕಪಿಪುತ್ರನನ್ನು ಹಡೆಯೆಂದು ಶಾಪ ನೀಡಿದಳು. ಹಾಗೆ ಹುಟ್ಟಿದವನು ಹನುಮಂತ. ಗೌತಮನು ಸತ್ಯವನ್ನು ಅರಿಯಲು ನನ್ನ ಮಕ್ಕಳು ಆಗದಿದ್ದರೆ ಕಪಿಮುಖರಾಗಲಿ ಎಂದು ಶಾಪ ವೀಯುತ್ತಾನೆ. ಅದರಂತೆ ಅವರಿಬ್ಬರೂ ಕಪಿಮುಖರಾಗಿ ವಾಲಿ ಸುಗ್ರೀವರೆಂದು ಪ್ರಸಿದ್ಧಿ ಪಡೆಯುವರು.

ಶಾಸ್ತ್ರಿಗಳ ಅಂಜನಾದೇವಿ ಚರಿತ್ರೆಗೆ ಆಕರ ಶಿಶು ಮಾಯಣನ ಅಂಜನಾಚರಿತ್ರೆ. ಸು. 1240 ರಲ್ಲಿದ್ದ ಶಿಶುಮಾಯಣ ತ್ರಿಪುರದಹನ ಸಾಂಗತ್ಯ ಮತ್ತು ಅಂಜನಾ ಚರಿತ್ರೆ ಎಂಬ ಸಾಂಗತ್ಯ ಕೃತಿಗಳ ಕರ್ತೃ. ಶಿಶು ಮಾಯಣನ ಅಂಜನಾ ಚರಿತೆ, ಈವರೆಗೆ ಬೆಳಕು ಕಂಡಿಲ್ಲ. ಹಸ್ತಿಮಲ್ಲ ಕವಿ ಸಂಸ್ಕೃತದಲ್ಲಿ ರಚಿಸಿದ ಅಂಜನಾ ಪವನಂಜಯ ಎಂಬ ಕೃತಿಯೂ ಜೈನ ಪರಂಪರೆಯ ಅಂಜನಾ ಕಥೆಯನ್ನು ನಿರೂಪಿಸುತ್ತದೆ. ಪ್ರಸ್ತುತ ಶಾಂತಿ ರಾಜಶಾಸ್ತ್ರಿಗಳ ಅಂಜನಾದೇವಿ ಕಿಷ್ಕಿಂಧಾಕಾಂಡದ ಅಂಜನೆ ಯಂತೆ ಚಂಚಲೆಯಲ್ಲ. ಜೈನಸಾಹಿತ್ಯದಲ್ಲಿ ಅವಳು ಮೂಲದ ಕಳಂಕವನ್ನು ತೊಡೆದು ಪತಿವ್ರತೆಯ ಪ್ರತೀಕ ವಾಗಿ ಬಂದಿದ್ದಾಳೆ. ಇಲ್ಲಿನ ಅಂಜನಾದೇವಿ ಮಹೇಂದು ರಾಜ ಮತ್ತು ಹೃದಯವೇಗೆ ದಂಪತಿಗಳ ಪ್ರಿಯಪುತ್ರಿ. ಸುಂದರಿಯಾದ ಈಕೆಗೆ ಪವನಕುಮಾರನೆ ಅನುರೂಪನಾದ ವರನೆಂದು ಹಿರಿಯರ ತೀರ್ಮಾನ. ಗುಪ್ತವಾಗಿ ಅಂಜನೆಯ ಅಭಿಪ್ರಾಯವನ್ನು ತಿಳಿಯಲು ಬಂದ ಪವನ ಕುಮಾರನಿಗೆ ಅಂಜನೆಯ ಸಖಿ ಈತನನ್ನು ನಿಂದಿಸು ತ್ತಿರುವುದನ್ನು ಕೇಳಿ ಅಂಜನೆಯ ಬಗ್ಗೆ ತಪ್ಪು ತಿಳಿಯು ತ್ತಾನೆ. ಆಕೆಯನ್ನು ವಿವಾಹವಾಗಬಾರದೆಂದು ನಿರ್ಧರಿಸು ತ್ತಾನೆ. ಆದರೆ ಹಿರಿಯರ ಆಗ್ರಹದಿಂದ ಅಂಜನೆ ಮತ್ತು ಪವನಕುಮಾರನ ವಿವಾಹ ನಡೆಯುತ್ತದೆ. ವಿವಾಹದ ನಂತರವೂ ಒಂದೇ ಮನೆಯಲ್ಲಿದ್ದರೂ ಪವನಕುಮಾರ ಹೆಂಡತಿಯ ಕಡೆಗೆ ಕುಡಿನೋಟವನ್ನೂ ಬೀರದವನಾದ ; ಪವನಕುಮಾರನ ಒಲವಿಗಾಗಿ ಅಂಜನೆ ಅಲಂಕಾರಗಳನ್ನು ತೊರೆದು ದುಃಖಿಸುತ್ತ ಆತನನ್ನು ಪ್ರಸನ್ನಗೊಳಿಸುವ ಯತ್ನದಲ್ಲಿ ಹನ್ನೆರಡು ವರ್ಷ ಕಳೆದಳು. ಒಮ್ಮೆ ಯುದ್ಧಕ್ಕೆ ಹೋದ ಪವನಕುಮಾರ ಚಕ್ರವಾಕದ ವಿರಹವನ್ನು ನೋಡಿ ಹೆಂಡತಿಯನ್ನು ನೆನೆದು ಆ ಕೂಡಲೆ ರಹಸ್ಯವಾಗಿ ಊರಿಗೆ ತೆರಳಿದನು. ಹೆಂಡತಿಯನ್ನು ಗುಪ್ತವಾಗಿ ಭೇಟಿ ಮಾಡಿ ಕ್ಷಮೆಯಾಚಿಸಿ ಆ ರಾತ್ರಿ ಅವಳೊಡನೆ ಕಳೆದು ಬೆಳಗಾಗುವುದರಲ್ಲಿ ಹೊರಟುಹೋದ. ಈ ಗುಪ್ತ ಸಮಾಗಮಕ್ಕೆ ಅಂಜನೆಯನ ವಿರೋಧವಿತ್ತು. ಅವಳ ಅನುಮಾನಕ್ಕೆ ಪುಷ್ಟಿಕೊಡುವಂತೆ ಆಕೆ ಗಂಡನಿಲ್ಲದ ವೇಳೆಯಲ್ಲಿ ಗರ್ಭವತಿಯಾದಳೆಂಬ ಅಪಖ್ಯಾತಿಗೆ ಗುರಿ ಯಾದಳು. ಅತ್ತೆ ಮಾವ ಮನೆಯಿಂದ ಅಟ್ಟಿದರು. ಇವಳ ಮಾತಿನಲ್ಲಿ ಯಾರಿಗೂ ನಂಬಿಕೆ ಉಂಟಾಗಲಿಲ್ಲ. ಪವನಕುಮಾರನಾದರೊ ಯುದ್ಧರಂಗದಲ್ಲಿದ್ದಾನೆ. ಆಗ ದಮವರನೆಂಬ ಋಷಿಯ ಆಶ್ರಯದಲ್ಲಿ ಅಂಜನೆ ಹನುಮನಿಗೆ ಜನ್ಮನೀಡಿದಳು. ವಾಯುಕುಮಾರ ಹಿಂದಿರುಗಿದ ಬಳಿಕ ಪರಿಸ್ಥಿತಿ ತಿಳಿಯಾಗಿ ಎಲ್ಲರೂ ಒಂದುಗೂಡುವರು. ಅಂಜನೆ ಎದುರಿಸಿದ ಕಷ್ಟಗಳಿಗೆಲ್ಲ ವಾಯುಕುಮಾರನೆ ಹೊಣೆಗಾರನಾದರು ಕೃತಿಕಾರ ನೀಡುವ ಕಾರಣ ಅಂಜನೆಯ ಪೂರ್ವಜನ್ಮದ ಪಾಪ ಹಾಗೂ ವಿಧಿನಿಯಮ. ಶಾಸ್ತ್ರಿಗಳ ಮನೋಧರ್ಮ ಕೂಡ ಬೇರೆಯಾಗಿಲ್ಲ. ಅಂಜನಾದೇವಿಯ ಕಥೆಯನ್ನು ಮುಖ್ಯವಾಗಿ ಸ್ತ್ರೀಸಮುದಾಯಕ್ಕೆಂದು ಹೇಳಿದ್ದಾರೆ— "ಸ್ತ್ರೀ ಸಮಾಜವು ಈ ಅಂಜನಾದೇವಿಯ ಪುಣ್ಯಚರಿತ್ರ ವನ್ನು ಮೇಲ್ಪಂಕ್ತಿಯನ್ನಾಗಿಟ್ಟುಕೊಂಡು ಇಹಪರಸುಖ

ಮತ್ತು ಪುಣ್ಯಭಾಗಿಗಳಾಗಬೇಕೆಂಬುದು ಈ ಕಥೆಯಿಂದ ಪರಿಗ್ರಹಿಸಬೇಕಾದ ಸಾರಾಂಶವಾಗಿರುತ್ತದೆ"[1] ಎನ್ನುವಲ್ಲಿ ಶಾಸ್ತ್ರಿಗಳ ನಿಲುವನ್ನು ಅರ್ಥಮಾಡಿಕೊಳ್ಳಬಹುದು.

ಮರಣ ಕಾಲದಲ್ಲಿ ಜೀವಿ ತನ್ನ ಕಾಯಕ್ಲೇಶಗಳನ್ನೆಲ್ಲ ಮರೆತು ಬದುಕಿನುದ್ದಕ್ಕೂ ಅರಿತೊ ಅರಿಯದೆಯೊ ಎಸಗಿದ ಪಾಪಕರ್ಮಗಳನ್ನು ಅಳಿಸಿ ಪ್ರಶಾಂತ ಮನಸ್ಕನಾಗಿ ಭಗವಂತನಲ್ಲಿ ಧ್ಯಾನ್ಯವಿಡಬೇಕೆಂದು ಸಕಲ ಧರ್ಮಗಳೂ ಬೋಧಿಸುತ್ತವೆ. ಇದಕ್ಕೆ ವೈದಿಕ ಧರ್ಮವಾಗಲಿ, ಜೈನಧರ್ಮವಾಗಲಿ ಹೊರತಲ್ಲ. ಭಾರತೀಯರಲ್ಲಿ ಮರಣದಂಡನೆಗೆ ಗುರಿಯಾದ ವ್ಯಕ್ತಿಗೂ ಕೂಡ ಸಾಯುವ ಮುನ್ನ ಆತನ ಅಂತಿಮ ಆಸೆಯನ್ನು ಕೇಳಲಾಗುತ್ತದೆ. ಮನುಷ್ಯ ಅತೃಪ್ತ ಮನಸ್ಸಿನಿಂದ ಸಾಯಬಾರದೆಂಬುದು ಆಶಯ. ಸಾಯುವ ಸಂದರ್ಭದಲ್ಲಿ ಭಗವಂತನ ಧ್ಯಾನ ಮಾಡಬೇಕೆಂದು ಶಾಸ್ತ್ರಗಳು ನಿರೂಪಿಸುತ್ತವೆ. ಆದಕ್ಕಾಗಿಯೆ ಮರಣಶಯ್ಯೆಯಲ್ಲಿದ್ದ ವ್ಯಕ್ತಿಯ ಸಮ್ಮುಖದಲ್ಲಿ ಪ್ರಾರ್ಥನೆ ಮಾಡುವ ಸಂಪ್ರದಾಯವಿದೆ. ಧರ್ಮ, ಅರ್ಥ, ಕಾಮ, ಮೋಕ್ಷಗಳಲ್ಲಿ ಮೋಕ್ಷವೆ ಅಂತಿಮ ಘಟ್ಟ. ಹುಟ್ಟಿದ ಪ್ರತಿಯೊಂದು ಜೀವಿಯೂ ಮೋಕ್ಷಾಪೇಕ್ಷಿಯಾಗಿರುತ್ತದೆ. ಮೋಕ್ಷದ ಪೂರ್ವಭಾವಿ ಸ್ಥಿತಿ ಸಮಾಧಿ. ಸಮಾಧಿ ಎಂದರೆ "ಚಿತ್ತನಿರೋಧದಿಂದ ಆತ್ಮಜ್ಞಾನಿಯಾಗುವುದು; ಉತ್ತರ ಪರಿಣಾಮಗಳಲ್ಲಿ ಮನಸ್ಸನ್ನು ದೃಢವಾಗಿರಿಸುವುದು; ಪಂಚಪರಮೇಷ್ಠಿಗಳ ಸ್ಮರಣೆ".[2] ಮರಣೋನ್ಮುಖವಾದ ಜೀವ ಭಗವಂತನ ಧ್ಯಾನಮಾಡುವ ಬಗೆ ಸಮಾಧಿಭಕ್ತಿ ಎಂದಿಟ್ಟುಕೊಳ್ಳಬಹುದು. ಶಾಂತಿರಾಜಶಾಸ್ತ್ರಿಗಳು ಸಮಾಧಿಭಕ್ತಿಗೆ ಸಂಬಂಧಿಸಿದ ೧೮ ಶ್ಲೋಕಗಳಿಗೆ ಟೀಕು ಒದಗಿಸಿದ್ದಾರೆ. ಕಡೆಯಲ್ಲಿ ಒಂದು ಪ್ರಾಕೃತಭಾಗವೂ ಇದೆ. ಇದು ಮರಣ ಕಾಲದಲ್ಲಿ ಭಾವಶುದ್ಧಿಗೆ ನೆರವಾಗುವುದು ಎಂದು ಅವರೇ ಸ್ಪಷ್ಟಪಡಿಸಿದ್ದಾರೆ. ಶಾಸ್ತ್ರಿಗಳ ಅನುವಾದ ವೈಖರಿಗೆ ಒಂದು ಪದ್ಯವನ್ನು ನೋಡಬಹುದು—

ಆಬಾಲ್ಯಾಜ್ಜಿನ ದೇವದೇವ ಭವತಃ ಶ್ರೀಪಾದಯೋಃ ಸೇವಯಾ ಸೇವಾಸಕ್ತ ವಿನೇಯಕಲ್ಪಲತಯಾ ಕಾಲೋದ್ಯಯಾವದ್ಗತಃ ತ್ವಾಂ ತಸ್ಯಾಃ ಫಲಮರ್ಥಯೇ ತದಧುನಾಪ್ರಾಣಪ್ರಯಾಣಕ್ಷಣೇ ತ್ವನ್ನಾಮ ಪ್ರತಿಬದ್ಧವರ್ಣಪಠನೇ ಕಂಠೋಸ್ತ್ವ ಕುಂಠೋಮಮ

"ಎಲೈ ದೇವದೇವನಾದ ಜಿನನೇ, ನಿನ್ನ ಸೇವೆಯಲ್ಲಿ ಆಸಕ್ತರಾದ ಭಕ್ತರಿಗೆ ಕಲ್ಪಲತೆಯಾಗಿರುವ ನಿನ್ನ ಪಾದಗಳ ಸೇವೆಯಿಂದ ಬಾಲ್ಯದಿಂದ ಈ ಹೊತ್ತಿನವರೆಗೂ ನಾನು ಕಾಲವನ್ನು ಕಳೆದೆನು. ಈಗ ನಾನು ನಿನ್ನನ್ನು ಕುರಿತು ಆ ಸೇವೆಯ ಫಲವನ್ನು ಪ್ರಾರ್ಥಿಸುತ್ತೇನೆ. ನನ್ನ ಪ್ರಾಣಗಳು ಹೋಗುವ ಕಾಲದಲ್ಲಿ (ಮರಣ ಕಾಲದಲ್ಲಿ) ನಿನ್ನ ಹೆಸರಿನ ಅಕ್ಷರಗಳ ಪಠನದಲ್ಲಿ ನನ್ನ ಕಂಠವು ಕುಂಠಿತವಾಗದಿರಲಿ."* ಇಲ್ಲಿನ ಅನುವಾದ ಸರಳವಾಗಿದ್ದು ಸಾಮಾನ್ಯರಿಗೂ ಅರ್ಥವಾಗುವಂತಿದೆ.

ಗ್ರಂಥದ ಕಡೆಯ ಭಾಗದಲ್ಲಿ ಕರ್ಮದಹನ ಮಂತ್ರಗಳಿವೆ. ಮೊದಲ ೬೩ ಮಂತ್ರಗಳು ತ್ರಿಷಷ್ಟಿಘಾತಿಕರ್ಮದಹನ ಮಂತ್ರಗಳು. ಎರಡನೆಯ ಭಾಗದಲ್ಲಿರುವ ೮೫ ಮಂತ್ರಗಳು ಪಂಚಾಶೀತ್ಯಘಾತಿಕರ್ಮದಹನ ಮಂತ್ರಗಳು. ಪಂಚಾಶೀತ್ಯಘಾತಿಕರ್ಮದಹನ ಮಂತ್ರಗಳು. ಕರ್ಮನಾಶವಾದ ಬಳಿಕ ಮುಕ್ತಿ ಸುಲಭಸಾಧ್ಯವಾಗುವುದು. ಮೌಲ್ಯಗಳು ಪುನರ್ವಿಮರ್ಶೆಗೆ ಒಳಗಾಗುತ್ತಿರುವ ಈ ಕಾಲದಲ್ಲಿ ಇಂಥ ಕೃತಿಗಳ ಉಪಯುಕ್ತತೆಯ ಬಗೆಗೆ ಅನುಮಾನ ಮೂಡಬಹುದು. ಪಾಪ, ಪುಣ್ಯ, ಕರ್ಮ, ಮೋಕ್ಷ ಇತ್ಯಾದಿಗಳಲ್ಲಿ ನಂಬಿಕೆ ಇರುವವರಿಗೆ, ಆ ನಿಟ್ಟಿನಲ್ಲಿ ಸಾಧನೆಯ ಹಂತದಲ್ಲಿರುವವರಿಗೆ, ಆಸ್ತಿಕರಿಗೆ ಈ ಬಗೆಯ ಕೃತಿಗಳ ಅವಶ್ಯಕತೆಯಿದೆ.

ಬದುಕು ಹಸನಾಗಬೇಕು, ಸದಭಿರುಚಿ ಮೂಡಬೇಕು. ಪರಂಪರೆಯಲ್ಲಿನ ಸತ್ವಯುತವಾದ ಅಂಶಗಳನ್ನು ಸ್ವೀಕರಿಸಿ ಅವುಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಜನಹಿತವನ್ನೆ ಬಯಸಿ ಕೃತಿರಚನೆ ಮಾಡಿದ ಶಾಂತಿರಾಜಶಾಸ್ತ್ರಿಗಳು ತಮ್ಮ ಉದ್ದೇಶವನ್ನು ಸಾಧಿಸುವಲ್ಲಿ ಸಫಲರಾಗಿದ್ದಾರೆ. ಇವರಂತೆಯೆ ತೋವಿನಕೆರೆ ರಾಯಣ್ಣ, ಪದ್ಮರಾಜ ಪಂಡಿತ, ಜ್ಞಾನೇಶ್ವರ ಪಂಡಿತ, ಸುಬ್ಬಯ್ಯಶಾಸ್ತ್ರಿ, ಬೊಮ್ಮರಸ ಪಂಡಿತ ಮೊದಲಾದವರು ಜೈನಸಾಹಿತ್ಯಕ್ಕೆ ಸಲ್ಲಿಸಿದ ಸೇವೆ ಅನುಪಮವಾದುದು. □

---

1. ಸುಕುಮಾರ ಚರಿತ್ರಾದಿ ಸಂಗ್ರಹ ಪು. ೧೮
2. ಜೈನಪಾರಿಭಾಷಿಕ ರತಕೋಶ.

* ಸುಕುಮಾರ ಚರಿತ್ರಾದಿ ಸಂಗ್ರಹ ಪು. ೨೦

ತ್ರೈಲೋಕ್ಯ ಚೂಡಾಮಣಿ ಸ್ತೋತ್ರ-ಒಂದು ಅವಲೋಕನ

— ಶ್ರೀ ಟಿ. ಆರ್. ಜೋಡಟ್ಟಿ, ನಸಲಾಪುರ

ಆಸ್ಥಾನ ಮಹಾ ವಿದ್ವಾನ್, ಪಂಡಿತರತ್ನ ಎಂಬ ಗೌರವ ಪಡೆದಿದ್ದ ಸ್ವ. ಶಾಂತಿರಾಜ ಶಾಸ್ತ್ರಿಗಳ ಕಾರ್ಯ ಅವಿಸ್ಮರಣೀಯ. ಪತ್ರಕರ್ತರಾಗಿ, ಸಂಶೋಧಕರಾಗಿ, ಸಂಪಾದಕರಾಗಿ, ಸಮಾಜ ಸೇವಕರಾಗಿ, ಅವರು ಸಮಾಜಕ್ಕೆ. ಸಾಹಿತ್ಯಕ್ಕೆ ತಮ್ಮನ್ನೇ ಮುಡಿಪಾಗಿಸಿಟ್ಟು ಕೊಂಡವರು.

ಕರ್ನಾಟಕ ಕವಿಚರಿತೆಕಾರರು ಗುರುತಿಸಿರುವಂತೆ– ಈ 'ತ್ರೈಲೋಕ್ಯ ಚೂಡಾಮಣಿ ಸ್ತೋತ್ರ' ಗ್ರಂಥವು ಕ್ರಿ. ಶ. ೧೨ನೆಯ ಶತಮಾನದ ಆದಿಭಾಗದ ಬ್ರಹ್ಮಶಿವ ಕವಿಯ ರಚನೆಯಾಗಿದೆ.

ಈ ಗ್ರಂಥವನ್ನು ಸಂಶೋಧನೆ ಮಾಡಿ ಸಂಪಾದಿಸಿ ದವರು ಸ್ವ. ಎ. ಶಾಂತಿರಾಜ ಶಾಸ್ತ್ರಿಗಳವರು. ಗ್ರಂಥದ ಎರಡು ಮೂಲ ಪ್ರತಿಗಳನ್ನು ಮೈಸೂರಿನ ಓರಿಯಂಟಲ್ ಲೈಬ್ರರಿ ಮತ್ತು ಹಾವೇರಿಯ ಶ್ರೀ ಸೋಮಪ್ಪ ಮರಿತಿಮ್ಮಪ್ಪ ಕಳಸೂರ ಎಂಬುವರಿಂದ ಪಡೆದು–ಸಂಶೋಧಿಸಿ ಸರಳ ಸುಲಭವಾದ ಭಾವಾರ್ಥ ವನ್ನು ಬರೆದಿದ್ದಾರೆ. ಸಾಮಾನ್ಯ ಓದುಗರು ಈ ಭಾವಾರ್ಥವನ್ನೇ ಓದಿ, ತ್ರೈಲೋಕ್ಯ ಚೂಡಾಮಣಿಯ ಶ್ರೀ ಜಿನೇಶ್ವರನ-ತ್ರಿಲೋಕ ಅಧಿಪತಿಯ ಗುಣಲಕ್ಷಣ ಗಳನ್ನು, ಮಹಿಮೆಯನ್ನು ತಿಳಿಯಬಲ್ಲರು.

ಸ್ವ. ಶಾಸ್ತ್ರಿಯವರು ಗ್ರಂಥದ ಆರಂಭದಲ್ಲಿ ಎಲ್ಕು ಪುಟಗಳ ಮುನ್ನುಡಿಯನ್ನು ಬರೆದಿದ್ದಾರೆ. ದೇವರು ಒಬ್ಬನೆ ; ಹೆಸರುಗಳು ಬೇರೆ ಬೇರೆ. ರಾಗದ್ವೇಷ ರಹಿತ ನಾದವ, ಪ್ರಾಣಿ ದಯಾಪರನಾಗಿರುವವನೇ ನಿಜವಾದ ದೇವರು ಎಂದು ಹೇಳಿದ್ದಾರೆ. ಈ ಮಾತನ್ನು ಪುಷ್ಟೀ ಕರಿಸಲು ಕೆಳಗಿನ ಎರಡು ಪದ್ಯಗಳನ್ನು ಕೊಟ್ಟಿದ್ದಾರೆ.

> ಯಂ ಶೈವಾಃ ಸಮುಪಾಸತೇ ಶಿವ ಇತಿ ಬ್ರಹ್ಮೇತಿ
> ವೇದಾಂತಿನೋ ।
> ಬೌದ್ಧಾ ಬುದ್ಧ ಇತಿ ಪ್ರಮಾಣ ಪಟವಃ ಕರ್ತೇತಿ
> ನೈಯಾಯಿಕಾಃ ॥
> ಅರ್ಹನ್ನಿತ್ಯಥ ಜೈನ ಶಾಸನ ರತಾಃ ಕರ್ಮೇತಿ
> ಮೀಮಾಂಸಕಾಃ ।
> ಸೋಯಂ ವೋ ವಿದಧಾತು ವಾಂಛಿತ ಫಲಂ
> ತ್ರೈಲೋಕ್ಯನಾಥೋ ವಿಭುಃ ॥
>
> ವಿಷ್ಣುರ್ವಾ ತ್ರಿಪುರಾಂತಕೋ ಭವತು ವಾ ಬ್ರಹ್ಮಾ
> ಸುರೇಂದ್ರೋಥವಾ ।
> ಭಾನುರ್ವಾ ಶಶಲಾಂಛನೋಥ ಭಗವಾನ್ ಸಿದ್ಧೋಥ
> ಬುದ್ಧೋಥವಾ ॥
> ರಾಗದ್ವೇಷದಯಾರ್ತಿ ದೋಷ ರಹಿತಸ್ಯತ್ವಾನು
> ಕಂಪೋದ್ಯತೋ ।
> ಯ ಸರ್ವೈಃ ಸಹ ಸಂಸ್ಕೃತೋ ಗುಣಗಣೈಸ್ತಸ್ಮೈ ನಮಃ
> ಸರ್ವದಾ ॥

ಈ ಗ್ರಂಥದಲ್ಲಿ ಒಟ್ಟು ೩೦ (ಮೂವತ್ತು) ಪದ್ಯ ಗಳಿವೆ. ಮೊದಲನೆಯ ಪದ್ಯವು ಶಾರ್ದೂಲ ವಿಕ್ರೀಡಿತ ವೃತ್ತದಲ್ಲಿಯೂ ಉಳಿದೆಲ್ಲ ಪದ್ಯಗಳು ಮತ್ತೇಭ ವಿಕ್ರೀಡಿತ ವೃತ್ತದಲ್ಲಿಯೂ ರಚಿತವಾಗಿವೆ.

ಈ ಮೂವತ್ತೂ ಪದ್ಯಗಳೂ ತ್ರೈಲೋಕ್ಯ ಚೂಡಾಮಣಿ–ಮೂರು ಲೋಕದಲ್ಲಿಯೂ ಶ್ರೇಷ್ಠನಾದ– ಶ್ರೀ ಜಿನೇಂದ್ರನನ್ನು ಕುರಿತಾಗಿವೆ. ಮೊದಲನೆಯ— "ಶ್ರೀಯಂ ವಿಷ್ಣುಗೆ ಪದ್ಮಜಂಗೆ ಮಂತಿಯಂ ...... ತ್ರೈಲೋಕ್ಯಚೂಡಾಮಣೀ," ಎಂಬ ಪದ್ಯದಲ್ಲಿ ವಿಷ್ಣು ವಿಗೆ ಲಕ್ಷ್ಮಿಯನ್ನು, ಬ್ರಹ್ಮನಿಗೆ ಬುದ್ಧಿಯನ್ನು, ಸೂರ್ಯ ನಿಗೆ ಪ್ರಕಾಶವನ್ನು, ಇಂದ್ರನಿಗೆ ಇಂದ್ರತ್ವವನ್ನು, ನಾಗೇಂದ್ರನಿಗೆ ನಾಗಲೋಕಾಧಿಪತ್ಯವನ್ನು ದಯಪಾಲಿಸಿ, ಯಾವ ಪರಿಗ್ರಹವೂ ಇಲ್ಲದಿರುವ ಹೇ ಜಿನೇಶ್ವರ, ನೀನು ಮೂರು ಲೋಕಗಳಲ್ಲಿ ಶ್ರೇಷ್ಠನಾಗಿರುವಿ ಎಂದಿ ದ್ದಾನೆ ಕವಿ. ಶ್ರೀ ಜಿನನ ಚರಣ ಸೇವಕನಾದರೆ ಧರ ಣೇಂದ್ರಾದಿಗಳು ಬಂದು ನಮಿಸುತ್ತಾರೆ ಎಂಬುದು ಕವಿಯ ಅಪಾರ ಶ್ರದ್ಧೆ. ಶ್ರೀ ಜಿನನು ಆಚಾರ, ಜ್ಞಾನ ಆತ್ಮ ಸಂಪತ್ತಿಯಲ್ಲಿ ಉಪಮಾತೀತನಾಗಿದ್ದಾನೆ.

ಪ್ರಜೆಗರ್ಥಕ್ಕೆ ಪಂಗ್ರಹಕ್ಕೆ ಕೆಲಬರ್ತ್ಯ್ಪಾ ತುರರ್ದಂಡವುಂ-।
ದ ಜಟಾವಲ್ಕಲಭಾವವಂ ತಳೆದು ದುಃಖಾಕ್ರಾಂತ–
ರಾಗಿರ್ದಪರ್ ॥
ತ್ರಿಜಗನ್ಮಂಡಲದಲ್ಲಿ ನೋಡೆ ದಿಟದಿಂದಾಯೆಲ್ಲವುಂ ಜನ್ಮಮೃ-।
ತ್ಯು ಜರಾಕಾರಣವೆಂದು ನೀನೆ ತೊರೆದೈ ತ್ರೈಲೋಕ್ಯ
ಚೂಡಾಮಣೀ ॥೯॥

ಇಲ್ಲಿ ಬ್ರಹ್ಮಶಿವ ಕವಿಯು ; ಆಶಾತುರರು ಮಾಡುವ ತಪಸ್ಸಿನ ಒಂದು ಮಾದರಿಯನ್ನು ಕೊಟ್ಟಿದ್ದಾರೆ. ಸ್ವ. ಶಾಂತಿರಾಜ ಶಾಸ್ತ್ರಿಗಳು ಇದರ ಭಾವಾರ್ಥವನ್ನು ಹೀಗೆ ಹೇಳಿದ್ದಾರೆ :—

"ತ್ರೈಲೋಕ್ಯ ಚೂಡಾಮಣಿಯೇ ! ಆಶಾತುರರು ಕೆಲವರು ಸಂತಾನವನ್ನೂ ದ್ರವ್ಯವನ್ನೂ ಕ್ಷೇತ್ರ ವಸ್ತು ವಾಹನಾದಿ ಪರಿಗ್ರಹವನ್ನೂ ಪಡೆಯುವುದಕ್ಕೋಸ್ಕರ ತಲೆಯನ್ನು ಬೋಳಿಸಿ ದಂಡವನ್ನು ಹಿಡಿದುಕೊಂಡು ಜಟೆಯನ್ನು ಬಿಟ್ಟು ಮರದ ತೊಗಟೆಯನ್ನು ಧರಿಸಿ ದುಃಖ ವ್ಯಾಪ್ತರಾಗುತ್ತಾರೆ. ಮೂರು ಲೋಕದಲ್ಲಿ ನೋಡಿದರೆ ನಿಜವಾಗಿಯೂ ಅವೆಲ್ಲವೂ ಜನ್ಮಜರಾಮರಣಗಳಿಗೆ ಕಾರಣವೆಂಬುದಾಗಿ ತಿಳಿದು ಅವುಗಳನ್ನು ತೊರೆದವನು ನೀನೊಬ್ಬನೆ. ॥೯॥

ಎಂದು ಸುಲಭ ಸರಳ ಭಾಷೆಯಲ್ಲಿ ಆಶಾತುರರು ಮತ್ತು ಶ್ರೀ ಜಿನರ ಮಧ್ಯದ ವ್ಯತ್ಯಾಸವನ್ನು ವಿವರಿಸಿದ್ದಾರೆ.

ಏಳನೆಯ ಪದ್ಯದಲ್ಲಿ ಕೆರೆ, ಮರ, ಪರ್ವತ, ಅಗ್ನಿ ಇತ್ಯಾದಿಗಳನ್ನು ದೇವರೆಂದು ಪ್ರೀತಿಸಿ ವಂದಿಸುವುದರಿಂದ ಮುಕ್ತಿ ದೊರೆಯಲಾರದು ಎಂದು ಹೇಳಿದ್ದಾರೆ.

ಇನ್ನೂ ಮುಂದೆ ಕುದೇವನನ್ನು ಟೀಕಿಸುತ್ತ, ಗುಣವಂತನು ಶ್ರೀಜಿನನನ್ನು ಮೆಚ್ಚುತ್ತಾನೆ. ದುಷ್ಟನು ಶ್ರೀಜಿನನನ್ನು ಮೆಚ್ಚುವುದಿಲ್ಲ ಎಂದಿದ್ದಾರೆ.

ಪತಿ ನಿನ್ನಂ ನೆನೆಗುಂ ವಚಃಪ್ರತತಿ ನಿನ್ನಂ ಬಣ್ಣಿಕುಂ ಲೋಚನ-।
ದ್ವಿತಯಂ ನಿನ್ನ ನಿರೀಕ್ಷಕಂ ಕರಯುಗಂ ನಿನ್ನಂಘ್ರಿಯುಂ ಪೂಜಿಕುಂ॥
ಶ್ರುತಿ ನಿನ್ನುಕ್ತಿಯ ನಾಲಿಕುಂ ಗುಣಿಗೆ ಹೋ ಕಳ್ಳಂಗೆ ಬೆಳ್ದಿಂಗಳುಂ-।
ನ್ನತಿ ಜಾರಂಗೆ ಖಳಂಗೆ ನೀಂ ಸೊಗಯಿಸೈ ತ್ರೈಲೋಕ್ಯ
ಚೂಡಾಮಣೀ ॥೧೦॥

ಇಲ್ಲಿ "ತ್ರೈಲೋಕ್ಯ ಚೂಡಾಮಣಿಯೆ ! ಗುಣವಂತನ ಬುದ್ಧಿಯು ನಿನ್ನನ್ನು ಸ್ಮರಿಸುವುದು ; ವಚನ ಸಮೂಹವು ನಿನ್ನನ್ನು ವರ್ಣಿಸುವುದು ; ನೇತ್ರಯುಗ್ಮವು ನಿನ್ನನ್ನು ನೋಡುವುದು ; ಹಸ್ತಯುಗ್ಮವು ನಿನ್ನ ಚರಣವನ್ನು ಪೂಜಿಸುವುದು ; ಕಿವಿಯು ನಿನ್ನ ವಚನವನ್ನು ಕೇಳುವುದು. ಗುಣವಂತನಿಗೆ ನೀನು ಮೆಚ್ಚಿಕೆಯಹಾಗುತ್ತಿ. ಕಳ್ಳನಿಗೂ ಜಾರನಿಗೂ ಬೆಳದಿಂಗಳಿನ ಉನ್ನತಿಯು ಮೆಚ್ಚಿಕೆಯಾಗದಿರುವಂತೆ ; ದುಷ್ಟನಿಗೆ ನೀನು ಮೆಚ್ಚಿಕೆಯಾಗುವುದಿಲ್ಲ. ಅಯ್ಯೋ !" ಎಂದಿದ್ದಾರೆ.

ಮುಂದಿನ ಪದ್ಯಗಳಲ್ಲಿ ಕುದೇವನನ್ನು ಟೀಕಿಸಿದ್ದಾರೆ. ಅನೇಕ ರೂಪನಾಗಿರುವ ದೇವನು ನಂಬುಗೆಗೆ ಅರ್ಹನಲ್ಲ ಎಂದಿದ್ದಾರೆ.

ಈ ಲೋಕತ್ರಯವು ಶಾಶ್ವತವಾದುದು, ಅನಾದಿ. ಇದನ್ನು ಯಾರೂ ನಿರ್ಮಿಸಿಲ್ಲ. ಆದರೆ ಅಜ್ಞರು ಇದನ್ನು ಬ್ರಹ್ಮನು ಮಾಡಿಟ್ಟನೆನ್ನುತ್ತಾರೆ.

೨೩ನೆಯ ಪದ್ಯದಲ್ಲಿ ಶ್ರೀಜಿನನ ಗುಣವರ್ಣನೆಯನ್ನು ಈ ರೀತಿ ಮಾಡಿದ್ದಾರೆ :—

ನದಿಗಳ್ ವಾರ್ಧಿಯನೊಂದು ಗುಂದದೆ ಪೊಗುತ್ತಿರ್ಪಂತೆ
ವಾರಾಶಿ ಪೊ-।
ಕ್ಕುದೆ ಸಿಂಧು ಪ್ರಕರಂಗಳಂ ಜಿನಪ ನಿನ್ನೊಳ್ವೃತಾರ್ಥೋಕ್ತಿಗಳ್ ॥
ವಿದಿತಂ ನೀಂ ಪರದೃಷ್ಟಿಗಪ್ರಕಟನೈತ್ವದ್ಬೋಧದೊಳ್ಲೋಕಮಿ–।
ರ್ದುದು ಲೋಕತ್ರಯ ಬೋಧದಿಂ ಪೊರಗು ನೀಂ ತ್ರೈಲೊಕ್ಯ
ಚೂಡಾಮಣಿ ॥೨೩॥

ಇಲ್ಲಿ ಅತೀ ಭಾವುಕನಾದ ಕವಿ ಶ್ರೀ ಜಿನನೇ ನಿನ್ನನ್ನು ಪೂಜಿಸಲು ಸಾವಿರಾರು ಕೈಗಳು, ನೋಡಲು ಸಾವಿರಾರು ಕಣ್ಣುಗಳು, ವರ್ಣಿಸಲು ಸಾವಿರಾರು ಬಾಯಿಗಳು ಸಾಕಾಗುವುದಿಲ್ಲ ಎಂದಿದ್ದಾನೆ.

ಮುಂದಿನ ೨೪ನೆಯ ಪದ್ಯದಲ್ಲಿ ; ಯಾಗದಲ್ಲಿ ಆಡನ್ನು ಕೊಂದು ಅದಕ್ಕೆ ಸ್ವರ್ಗವನ್ನು ದೊರಕಿಸಿ ಕೊಡುವ ಈ ಅಧ್ವರ್ಯುಗಳು ; ತಮ್ಮ ಮಿತ್ರ, ಪತ್ನೀ, ಪುತ್ರರನ್ನೇಕೆ–ಯಾಗದಲ್ಲಿ ಕೊಲ್ಲುವುದಿಲ್ಲ ? ಎಂದು ಕೇಳಿದ್ದಾರೆ.

ಪಡೆದಾಡಂ ತವೆಕೊಂದು ಸಗ್ಗಮನದ ಕೊಲ್ಗೀವರಂ ತೀಯುಲಾ-।
ಗದೆ ತನ್ನಿಷ್ಟಕಳತ್ರ ಪುತ್ರ ನಿವಹಕ್ಕಾನಂದದಿಂ ಬಂದು ಕೊ-॥
ರದರೇ ಕೊಂದಡದಿಂಬ ಶಾಸ್ತ್ರದಿನ ಹಿಂಸಾಲಕ್ಷಣೋ ಧರ್ಮವೆಂ-।
ಬುದನೀ ತತ್ಸವಿತುರ್ವರೇಣ್ಯರಳಿದರ್ ತ್ರೈಲೋಕ್ಯ ಚೂಡಾಮಣೀ
॥೨೪॥

ಈ ಅಧ್ವರ್ಯುಗಳು ಆಡನ್ನು ಕೊಂದು ಬೇಯಿಸಿ ತಿನ್ನುವ ಶಾಸ್ತ್ರದಿಂದ "ಅಹಿಂಸಾ ಲಕ್ಷಣೋ ಧರ್ಮ" ಎಂಬುದನ್ನು ಅಳಿಸಿ ಹಾಕಿದ್ದಾರೆ.

ಕವಿಯು ಹಿಂಸೆಯನ್ನು ವಿರೋಧಿಸುವ ಶ್ರೀ ಜಿನ ಧರ್ಮವೇ ಶ್ರೇಷ್ಠ ಎಂದಿದ್ದಾರೆ. ಜೈನಾಗಮಗಳು ಜೈನ ಮುನಿ–ನಿರ್ಗ್ರಂಥ ಮುನಿ–ಸರ್ವಜ್ಞನಾದ ಶ್ರೀ ಜಿನ ಇವರಿಗೆ ಬೇರಾರೂ ಸಮಾನರಿಲ್ಲ ಎಂದು ಹಲವಾರು ಉದಾಹರಣೆಗಳೊಂದಿಗೆ ವರ್ಣಿಸಿದ್ದಾರೆ.

ಮುಂದಿನ ೨೯ನೆಯ ಪದ್ಯದಲ್ಲಿ–ಕವಿಯು ತಾನು ನಡೆ, ನುಡಿ, ಕವಿಚಕ್ರವರ್ತಿ ಬಿರುದನ್ನು ಪಡೆದ ಬಗೆಯನ್ನು ಹೇಳಿದ್ದಾನೆ.

ಎಡೆಯಾಡುತ್ತಾ ಮನೂನ ಜೈನ ಭವನಕ್ಕಾನಂದಿಂದಂ ತಳ-।
ರ್ನಡೆಗತ್ತಿಂ ಪರಮಾಗಮಾಭ್ಯಸನದಿಂದಾ ಪೊಳ್ತು ಮಾಗಳ್ತೊದ-॥
ಳ್ನುಡಿಗತ್ತಿಂ ಕಿರಿಯಂದು ಪುಣ್ಯವಶದಿಂದಾ ರಾಜ ಪೂಜ್ಯಾಸ್ಪದಂ-।
ಬಡೆದಾಗಳ್ಕವಿಚಕ್ರವರ್ತಿವೆಸರಂ ತ್ರೈಲೋಕ್ಯ ಚೂಡಾಮಣೀ
॥೨೯॥

"ತ್ರೈಲೋಕ್ಯ ಚೂಡಾಮಣಿಯೆ ! ಶ್ರೇಷ್ಠವಾದ ಜೈನ ಮಂದಿರಕ್ಕೆ ಹೋಗುತ್ತ ಆನಂದದಿಂದ ನಡೆಯನ್ನು ಕಲಿತೆನು. ಯೋಗ್ಯ ಸಮಯದಲ್ಲಿ ಚಿಕ್ಕಂದಿನಲ್ಲಿ ಪರಮಾಗಮಾಭ್ಯಾಸವನ್ನು ಮಾಡಿ ಅದರಿಂದ ಮಾತು ಕಲಿತೆನು. ಪುಣ್ಯವಶದಿಂದ ಆ ರಾಜ ಪೂಜ್ಯ ಸ್ಥಾನವನ್ನೂ ಪಡೆದು ಆಗ ಕವಿಚಕ್ರವರ್ತಿ ಎಂಬ ಹೆಸರನ್ನು ಪಡೆದೆನು."

ಶ್ರೀ ಜಿನನ ಶ್ರೇಷ್ಠತೆಯನ್ನು ವರ್ಣಿಸುವ ಈ ಗ್ರಂಥವು ಸ್ವಾಧ್ಯಾಯಕ್ಕೆ ಯೋಗ್ಯವಾಗಿದೆ. ೧೯೪೨ರಲ್ಲಿ ಸ್ವ. ಶಾಂತಿರಾಜ ಶಾಸ್ತ್ರಿಗಳ ಸಂಶೋಧನೆ ಸಂಪಾದನೆಯ ಫಲವಾಗಿ ; ಪುಣ್ಯದಂಪತಿಗಳಾದ ಪಣಪಿಲ ಅರಮನೆಯ ಶ್ರೀಮಾನ್ ಶ್ರೀವರ್ಮಶೆಟ್ಟರ ಶ್ರೀಮತಿ ದೇಜಮ್ಮನವರ ಕೊಡುಗೆಯಾಗಿ ಮುದ್ರಣಗೊಂಡ ಈ ಗ್ರಂಥವು ಪುನರ್ ಮುದ್ರಣವಾಗಿ ಎಲ್ಲ ಶ್ರಾವಕ–ಶ್ರಾವಿಕೆಯರಿಗೂ ಸ್ವಾಧ್ಯಾಯಕ್ಕೆ ದೊರೆಯುವಂತಾಗುವುದು ತೀರ ಅವಶ್ಯ ಇದೆ. □

ಸಮ್ಯಗ್ದರ್ಶನಮೂಲಂ ಜ್ಞಾನಸ್ಕಂದಂ ಚಾರಿತ್ರ ಶಾಖಾಢ್ಯಂ ।
ಮುನಿಗಣ ವಿಹಗಾಕೀರ್ಣಂ ಆಚಾರ್ಯ ಮಹಾದ್ರುಮಂ ವಂದೇ ॥

ಸಮ್ಯಗ್ದರ್ಶನವೆಂಬ ಬೇರುಳ್ಳುದೂ ಜ್ಞಾನವೆಂಬ ಮಧ್ಯಭಾಗವುಳ್ಳುದೂ ಸಮ್ಯಕ್ಚಾರಿತ್ರಗಳೆಂಬ ಕೊಂಬೆಗಳಿಂದ ಕೂಡಿರುವುದೂ ಮುನಿಸಮೂಹಗಳೆಂಬ ಪಕ್ಷಿಗಳಿಂದ ವ್ಯಾಪ್ತವೂ ಆದ ಆಚಾರ್ಯರೆಂಬ ದೊಡ್ಡ ಮರವನ್ನು ವಂದಿಸುತ್ತೇನೆ.

—ದಶಭಕ್ತಿ (ಪುಟ ೧೦೩)

ದಿಗ್ದೇಶೇಭ್ಯಃ ಖಗಾ ಏತ್ಯ ಸಂವಸಂತಿ ನಗೇ ನಗೇ ।
ಸ್ವ ಸ್ವ ಕಾರ್ಯವಶಾದ್ಯಾಂತಿ ದೇಶೇ ದಿಕ್ಷು ಪ್ರಗೇ ಪ್ರಗೇ ॥೯॥

ಸಾಯಂಕಾಲದಲ್ಲಿ ಪಕ್ಷಿಗಳು ಪೂರ್ವಾದಿ ದಿಕ್ಕುಗಳಿಂದಲೂ ಅಂಗ ವಂಗ ಕಲಿಂಗಾದಿ ದೇಶಗಳಿಂದಲೂ ಬಂದು ಮರಗಳಲ್ಲಿ ವಾಸಮಾಡುತ್ತವೆ. ಪ್ರತಿದಿನ ಪ್ರಾತಃಕಾಲದಲ್ಲಿ ತಂತಮ್ಮ ಕಾರ್ಯವಶದಿಂದ ಬೇರೆ ಬೇರೆ ದಿಕ್ಕುಗಳಿಗೂ ಹೋಗುತ್ತವೆ.

—ಆಚಾರ್ಯ ಪೂಜ್ಯಪಾದರ ಇಷ್ಟೋಪದೇಶ

ದಿಕ್ಕು ದಿಕ್ಕುಗಳಿಂದ ಒಂದೊಂದು ಮರದಲಿ । ಪಕ್ಷಿ ಕುಳಿತು ರಾತ್ರಿಯಲಿ
ದಿಕ್ಕಿನುದಯವಾಗೆ ತಮ್ಮ ತಮ್ಮ ದಿಕ್ಕಿಗೆ । ದೊಕ್ಕನೆ ಪೋಪಂತೆ ಕಾಣ ॥

—ವಿಜಯಣ್ಣನ ದ್ವಾದಶಾನುಪ್ರೇಕ್ಷೆ (೧–೩೬)

ಎತ್ತೂರು ಶಾಂತಿರಾಜಶಾಸ್ತ್ರಿಗಳು

—ಶ್ರೀ ಶೆಟ್ರ ನಾಗೇಂದ್ರನ್, ಮೈಸೂರು

ಮೈಸೂರಿನ ಮೋತಿಖಾನೆ ಲಕ್ಷ್ಮೀಪತಯ್ಯನವರ ಜೈನ ವಿದ್ಯಾರ್ಥಿನಿಲಯದಲ್ಲಿ 1918 ರಿಂದ 1927 ರ ವರೆಗೆ ನಾನು ವಿದ್ಯಾರ್ಥಿಯಾಗಿ ವ್ಯಾಸಂಗ ಮಾಡುತ್ತಿದ್ದೆ. ಅದು ವರ್ಧಮಾನಯ್ಯನವರ ಕಾಲ. ಅದನ್ನು ನೆನಸಿ ಕೊಳ್ಳುವುದೇ ಒಂದು ಹೆಮ್ಮೆ. ಅವರು ಸ್ವಸ್ತಿಶ್ರೀ ನೇಮಿಸಾಗರ ವರ್ಣಿಗಳವರನ್ನು ತಮ್ಮ ಧರ್ಮಗುರು ಗಳನ್ನಾಗಿ ನಿಲಯದಲ್ಲೇ ಇಟ್ಟುಕೊಂಡಿದ್ದರು. ಸುಮಾರು ಅದೇ ಹೊತ್ತಿಗೆ ತಮ್ಮ ಅಭ್ಯಾಸವನ್ನು ಮುಗಿಸಿ ಹಿಂದಿರುಗಿದ ಶಾಂತಿರಾಜ ಶಾಸ್ತ್ರಿಗಳವರನ್ನು ವರ್ಧ ಮಾನಯ್ಯನವರು ತಮ್ಮ ವಿದ್ಯಾರ್ಥಿನಿಲಯಕ್ಕೆ ಕರೆಸಿ ಕೊಂಡರು, ವಾಸಕ್ಕೆ ಮನೆಯನ್ನೂ ಕೊಟ್ಟರು. ನಿಲಯ ದಲ್ಲಿ ಅವರು ಶಿಕ್ಷಕರಾಗಿ, ಪ್ರಚಾರಕರಾಗಿ ಹಲವು ಕಾಲ ಸೇವೆ ಸಲ್ಲಿಸಿದರು.

ಬೆಳಗಿನ 5 ಗಂಟೆಗೆ ನಿಲಯದ ದೇವಸ್ಥಾನದಲ್ಲಿ ಸಾಮೂಹಿಕ ಪ್ರಾರ್ಥನೆ. ವಿದ್ಯಾರ್ಥಿಗಳೆಲ್ಲರೂ ಅದರಲ್ಲಿ ಹಾಜರಿರಲೇಬೇಕು. ಅಲ್ಲಿ ಶಾಸ್ತ್ರಿಗಳು ತಮ್ಮ ಸುಮಧುರ ಕಂಠದಿಂದ ಉದಯ ರಾಗವನ್ನು ಹೇಳಿಕೊಡುತ್ತಿದ್ದರು. ಮಕ್ಕಳೆಲ್ಲರೂ ಅದರಂತೆ ಹೇಳುತ್ತಿದ್ದರು. ಪ್ರತಿ ಅಷ್ಟಾ ಹ್ನಿಕದಲ್ಲಿಯೂ ಸಾಹುಕಾರರು ವ್ರತನಿಷ್ಠರಾಗಿ ಬೆಳಗಿನ ಪೂಜೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಅಲ್ಲಿ ಶಾಸ್ತ್ರಿಗಳು ನಂದೀಶ್ವರ ಪೂಜೆಯನ್ನು ಅಷ್ಟವಿಧಾರ್ಚನೆಯನ್ನು ತಮ್ಮ ಶ್ರೀ ಕಂಠದಿಂದ ಹಾಡಿ ಪೂಜೆ ಮಾಡುತ್ತಿದ್ದರು. ಪ್ರತಿ ಸಂಜೆ ಆಸಕ್ತರಾದ ಹಿರಿಯರಿಗಾಗಿ ಶಾಸ್ತ್ರಿಗಳು ಉಪನ್ಯಾಸ ಮಾಡುತ್ತಿದ್ದರು. ಇದಕ್ಕೆ ವಿದ್ಯಾರ್ಥಿಗಳ ಹಾಜರಿ ಕಡ್ಡಾಯವಿರಲಿಲ್ಲ. ಪ್ರತಿ ಭಾನುವಾರ ಮತ್ತು ಇತರ ರಜಾದಿನಗಳಲ್ಲಿ ವಿದ್ಯಾರ್ಥಿಗಳಿಗೆ ಧಾರ್ಮಿಕ ಶಿಕ್ಷಣ ನಡೆಯುತ್ತಿತ್ತು. ರತ್ನಕರಂಡಕಶ್ರಾವಕಾಚಾರ ಮೊದ ಲಾದುವುಗಳನ್ನು ಶಾಸ್ತ್ರಿಗಳು ತುಂಬ ಹೃದ್ಯವಾಗಿ ಬೋಧಿ ಸುತ್ತಿದ್ದರು. ವಿದ್ಯಾರ್ಥಿಗಳು ಈ ಧಾರ್ಮಿಕ ಪರೀಕ್ಷೆ ಗಳಲ್ಲಿ ತೇರ್ಗಡೆಯಾಗಲೇಬೇಕಿತ್ತು. ಇಲ್ಲವಾದರೆ ಮುಂದಿನ ಸಲ ನಿಲಯದಲ್ಲಿ ಪ್ರವೇಶಾವಕಾಶವಿರುತ್ತಿರಲಿಲ್ಲ. ಹೀಗೆ ಧಾರ್ಮಿಕ ಕೃತಿಗಳಲ್ಲಿ ಶಿಕ್ಷಣ ನೀಡುವುದೇ ಅಲ್ಲದೆ ತಮ್ಮ ಬಾಲ್ಯ ಸಹಜವಾದ ಹಲವು ಪ್ರಶ್ನೆಗಳಿಗೂ ನಮ್ಮ ಮನ ಮುಟ್ಟುವಂತೆ ಸಮಾಧಾನವಾಗಿ ಉತ್ತರಿಸುತ್ತಿದ್ದರು. ಹೋಟೆಲುಗಳಿಗೆ ಏಕೆ ಹೋಗಬಾರದು ? ನೀರನ್ನು ಏಕೆ ಶೋಧಿಸಲೇಬೇಕು ? ಅನ್ಯ ಧರ್ಮೀಯರ ಮನೆಯಲ್ಲಿ ಊಟತಿಂಡಿ ಮಾಡಬಾರದೇಕೆ ?—ಈ ರೀತಿಯಲ್ಲಿರು ತ್ತಿದ್ದವು ನಮ್ಮ ಪ್ರಶ್ನೆಗಳು.

ಶಾಸ್ತ್ರಿಗಳನ್ನು ಧರ್ಮೋಪದೇಶಕ್ಕಾಗಿ ಜೈನರಿರುವ ಊರುಗಳಿಗೆ ಕಳುಹಿಸುತ್ತಿದ್ದರು. ರಜಾ ಕಾಲದಲ್ಲಾದರೆ ಶಾಸ್ತ್ರಿಗಳು ನನ್ನನ್ನೂ ಜೊತೆಗೆ ಕರೆದುಕೊಂಡು ಹೋಗು ತ್ತಿದ್ದರು. ನಾನು ವಿದ್ಯಾಭ್ಯಾಸ ಮುಗಿಸಿ ಊರಿಗೆ ಹಿಂದಿರುಗಿದ ನಂತರವೂ ನನ್ನ ಅವರ ಬಾಂಧವ್ಯ ಮುಂದುವರಿದೇ ಇದ್ದಿತು. ವೈನಾಡಿನ ಅನಂತಕೃಷ್ಣ ಪುರದ ಅನಂತನಾಥಸ್ವಾಮಿ ದೇವಾಲಯದ ಪಂಚ ಕಲ್ಯಾಣೋತ್ಸವಕ್ಕೆ ನನ್ನನ್ನೂ ತಮ್ಮ ಜೊತೆಗೆ ಕರೆದು ಕೊಂಡು ಹೋಗಿದ್ದರು. 1934 ರ ಮಾರ್ಚಿಯಲ್ಲಿ ಉಪಾಧ್ಯಾಯ ನಾಗರಾಜಯ್ಯನವರ ದೇವಸ್ಥಾನದ ಪಂಚಕಲ್ಯಾಣ ನಮ್ಮೂರಿನಲ್ಲಿ ನಡೆದಾಗ ಶಾಂತಿರಾಜ ಶಾಸ್ತ್ರಿಗಳು ಪೂಜಾಕಾರ್ಯಗಳ ನೇತಾರರಾಗಿದ್ದರು. ಆ ಕಾಲಕ್ಕೆ ಅವರು ನಮ್ಮ ಮನೆಯಲ್ಲಿಯೇ ಉಳಿದು ಕೊಂಡಿದ್ದರು. ಮಾತ್ರವಲ್ಲ, ನಮ್ಮೂರಿಗೆ ಅವರು ಬಂದಾಗಲೆಲ್ಲ ನಮ್ಮ ಮನೆಯಲ್ಲಿಯೇ ಉಳಿಯುತ್ತಿದ್ದರು. ನಾನು ಮೈಸೂರಿಗೆ ಹೋದಾಗಲೆಲ್ಲ ಅವರನ್ನು ಭೇಟಿ ಯಾಗದೆ ಬರುತ್ತಿರಲಿಲ್ಲ. ನಾನು ಅವರಿಗಿಂತ ಬಹಳ ಕಿರಿಯ ಮತ್ತು ಶಿಷ್ಯ. ಹೀಗಿದ್ದೂ ಅವರೂ ನನ್ನನ್ನು "ಶೆಟ್ರೆ" ಎಂದೇ ಕರೆಯುತ್ತಿದ್ದರು, ಇದಕ್ಕೆ ನನ್ನ ಮನೆ ತನದ ಹಿರಿಮೆಯೇ ಕಾರಣವಾಗಿರಬೇಕು. ನನ್ನಲ್ಲಿ ಇಂದಿಗೂ ಉಳಿದು ಬಂದಿರುವ ಜೈನಾಚಾರಕ್ಕೆ ಸ್ವಸ್ತಿಶ್ರೀ ನೇಮಿಸಾಗರ ವರ್ಣಿಗಳವರೂ, ಶ್ರೀ ಶಾಂತಿರಾಜ ಶಾಸ್ತ್ರಿಗಳೂ ಪ್ರಧಾನಕಾರಣರು. ನನ್ನಂತೆಯೇ ಆ ಕಾಲದ ವಿದ್ಯಾರ್ಥಿಗಳೆಲ್ಲರೂ ಶಾಸ್ತ್ರಿಗಳಿಗೆ ಚಿರಋಣಿಗಳು. □

ದಶಭಕ್ತಿ-ಒಂದು ಅಧ್ಯಯನ

—ಪ್ರೊ॥ ಶುಭಚಂದ್ರ

ಭಾರತೀಯ ಪರಂಪರೆಯಲ್ಲಿ ಭಕ್ತಿಗೆ ಉನ್ನತ ಸ್ಥಾನವಿದೆ. ಪರಮಾತ್ಮನ ಬಗೆಗೆ ಇಟ್ಟ ತೀವ್ರ ಅನುರಾಗವೇ ಭಕ್ತಿಯಾಗಿರಬಹುದು. ಒಂದು ದೇವತೆಯ ಬಗ್ಗೆ, ಒಬ್ಬ ಗುರುವಿನ ಬಗ್ಗೆ, ಒಬ್ಬ ಸಿದ್ಧಪುರುಷನ ಬಗ್ಗೆ ತೋರುವ ಅನನ್ಯ ಶ್ರದ್ಧಾನವೇ ಭಕ್ತಿಯಾಗಿರಬಹುದು. ಇಲ್ಲೆಲ್ಲಾ ಭಕ್ತನ ಹೃದಯದಲ್ಲಿ ಉಂಟಾಗುವ ತೀವ್ರ ಶ್ರದ್ಧೆಯೇ ಮುಖ್ಯವಾಗುತ್ತದೆ. ಭಾರತದಲ್ಲಿ ಭಕ್ತಿಪಂಥಗಳೇ ಇದ್ದದ್ದು ತಿಳಿದಿರುವ ವಿಚಾರವೇ ಆಗಿದೆ. ಭಕ್ತಿಮಾರ್ಗ, ಭಕ್ತಿಯೋಗ–ಇವೆಲ್ಲಾ ಪ್ರಸಿದ್ಧ ವಿಚಾರಗಳಾಗಿವೆ. ಮೋಕ್ಷ ಸಾಧನೆಗಾಗಿ ಭಗವದ್ಗೀತೆ ಪ್ರತಿಪಾದಿಸುವ ಮೂರು ಯೋಗಗಳಲ್ಲಿ ಭಕ್ತಿಯೋಗವೂ ಒಂದು. ಅನೇಕ ವೈದಿಕ ಪುರಾಣಗಳು ಭಕ್ತಿಯೋಗದ ಮಹಿಮೆಯನ್ನೇ ಸಾರುತ್ತವೆ. ವೈದಿಕ ಪರಂಪರೆಯಲ್ಲಿ ಅನೇಕ ಋಷಿಗಳು (ನಾರದ, ಶಾಂಡಿಲ್ಯ ಮುಂತಾದವರು) ಭಕ್ತಿಸೂತ್ರಗಳನ್ನು ರಚಿಸಿ ವಿಖ್ಯಾತರಾಗಿದ್ದಾರೆ. ಮಧ್ಯಯುಗದ ಭಾರತ ಅನೇಕ ಸಂತರನ್ನು ಅನುಭಾವಿಗಳನ್ನೂ ಅವರ ಭಕ್ತಿಸಾಹಿತ್ಯದೊಡನೆಯೆ ಕಂಡಿದೆ.

ಭಕ್ತಿ ಎಂದರೇನೆಂದು ಖಚಿತವಾಗಿ ವಿವರಿಸುವುದು ಕಷ್ಟಸಾಧ್ಯ. ಭಕ್ತಿ ಎಂಬುದಕ್ಕೆ ವಿವಿಧ ಬಗೆಯ ವ್ಯಾಖ್ಯೆಗಳಿವೆ. ಪೂಜಾದಿಗಳಲ್ಲಿ ಇಡುವ ಅನುರಾಗವನ್ನು ಭಕ್ತಿಯೆಂದೂ, ಕಥೆ ಪುರಾಣಗಳಲ್ಲಿ ತೋರುವ ಶ್ರದ್ಧೆಯನ್ನು ಭಕ್ತಿಯೆಂದೂ, ಆತ್ಮಾನಂದಕ್ಕೆ ವಿರುದ್ಧವಲ್ಲದ ಪೂಜೆ, ಕಥೆಗಳಲ್ಲಿನ ಶ್ರದ್ಧೆಯನ್ನು ಭಕ್ತಿಯೆಂದೂ, ಭಕ್ತನು ತನ್ನೆಲ್ಲ ಆಚರಣೆಯನ್ನೂ ಭಗವಂತನಲ್ಲೇ ಅರ್ಪಣೆ ಮಾಡುವುದನ್ನು ಭಕ್ತಿಯೆಂದೂ ಬಗೆಬಗೆಯಾದ ರೀತಿಯಲ್ಲಿ ಹೇಳಿಕೆಗಳಿರುವುದು ಕಂಡುಬರುತ್ತದೆ. ಸೇವೆ, ಉಪಾಸನೆ, ಆರಾಧನೆ ಎಂಬ ಸರ್ವಸಾಮಾನ್ಯವಾದ ಅರ್ಥದಲ್ಲಿ 'ಭಕ್ತಿ' ಎಂಬ ಶಬ್ದವನ್ನು ಸ್ವೀಕರಿಸುವುದು ಮೇಲು.

ಜಗತ್ತಿನ ಇತರ ಧರ್ಮಗಳಲ್ಲಿರುವಂತೆಯೇ ಜೈನ ಧರ್ಮದಲ್ಲಿಯೂ ಭಕ್ತಿಸಾಹಿತ್ಯವು ಪ್ರಥಮಾನುಯೋಗ ಸಾಹಿತ್ಯದ ಪುರಾಣ-ಕಾವ್ಯಗಳೊಳಗೆ ಹೇರಳವಾಗಿ ಕಂಡುಬರುತ್ತದೆ. ಆದರೆ "ಭಕ್ತಿ" ಎಂಬ ಹೆಸರಿನೊಳಗೇ ರಚಿತವಾದ ಕೃತಿಗಳಲ್ಲಿ ಶ್ರೀ ಕುಂದಕುಂದಾಚಾರ್ಯರ ಪ್ರಾಕೃತ ದಶಭಕ್ತಿ ಮತ್ತು ಶ್ರೀ ಪೂಜ್ಯಪಾದಾಚಾರ್ಯರ ಸಂಸ್ಕೃತ ದಶಭಕ್ತಿ ಬಹಳ ಪ್ರಸಿದ್ಧವಾಗಿವೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಒಂದು ಇನ್ನೊಂದರ ಅನುವಾದವಲ್ಲ, ಹಾಗೂ ಅವೆರಡೂ ಸ್ವತಂತ್ರ ರಚನೆಗಳು ಎಂಬುದನ್ನು. ಶ್ರೀ ಎ. ಶಾಂತಿರಾಜಶಾಸ್ತ್ರಿಗಳು ಕನ್ನಡ ಅನುವಾದದೊಡನೆ ಹೊರತಂದ 'ದಶಭಕ್ತಿ' ಪುಸ್ತಕದ ಮೊದಲ ಮುದ್ರಣದ ಮುನ್ನುಡಿಯಲ್ಲಿ ಭಕ್ತಿಗಳ ಸಂಖ್ಯೆಗಳ ಬಗ್ಗೆ ಹೇಳಿರುವ ಮಾತುಗಳನ್ನು ಗಮನಿಸಬೇಕು: "ಸಂಖ್ಯಾಪೇಕ್ಷೆಯಿಂದ ಭಕ್ತಿಗಳು ಹನ್ನೆರಡಾದರೂ ಧಾರ್ಮಿಕ ಕ್ರಿಯಾ ಕಲಾಪಗಳಲ್ಲಿ ಹೆಚ್ಚಾಗಿ ಉಪಯೋಗಿಸಲ್ಪಡತಕ್ಕವುಗಳು ತೀರ್ಥಂಕರಭಕ್ತಿ, ಸಮಾಧಿಭಕ್ತಿಗಳು ಹೊರತಾಗಿ ಉಳಿದ (ಸಿದ್ಧಭಕ್ತಿ, ಶ್ರುತಭಕ್ತಿ, ಚಾರಿತ್ರಭಕ್ತಿ, ಯೋಗಿಭಕ್ತಿ, ಆಚಾರ್ಯಭಕ್ತಿ, ನಿರ್ವಾಣಭಕ್ತಿ, ನಂದೀಶ್ವರಭಕ್ತಿ, ಚೈತ್ಯಭಕ್ತಿ, ಶಾಂತಿಭಕ್ತಿ, ಪಂಚಗುರುಭಕ್ತಿ ಎಂಬ) ಹತ್ತು ಭಕ್ತಿಗಳಾಗಿರುವುದರಿಂದ ರೂಢಿಯಲ್ಲಿ "ದಶಭಕ್ತಿ"ಯೆಂದು ಹೆಸರು ಬಂದಿದೆ." ಭಕ್ತಿಗಳ ಸಂಖ್ಯೆಯನ್ನು ಹೆಸರುಗಳನ್ನೂ ಡಾ॥ ಹೀರಾಲಾಲ್ ಜೈನ್ ಅವರು ತಮ್ಮ 'ಭಾರತೀಯ ಸಂಸ್ಕೃತಿಗೆ ಜೈನಧರ್ಮದ ಕೊಡುಗೆ'ಯಲ್ಲಿ ಹೀಗೆ ಹೇಳಿದ್ದಾರೆ : "ಕುಂದಕುಂದ ಕೃತ ಉಪಲಬ್ಧ ದಶಭಕ್ತಿಗಳ ಹೆಸರುಗಳು ಹೀಗಿವೆ:–ತೀರ್ಥಂಕರಭಕ್ತಿ (ಗಾಹೆ ೮), ಸಿದ್ಧಭಕ್ತಿ (ಗಾಹೆ ೧೦), ಶ್ರುತಭಕ್ತಿ (ಗಾಹೆ ೧೧), ಚಾರಿತ್ರಭಕ್ತಿ (ಗಾಹೆ ೧೨), ಅನಗಾರಭಕ್ತಿ (ಗಾಹೆ ೨೩), ಆಚಾರ್ಯಭಕ್ತಿ (ಗಾಹೆ ೧೮), ನಿರ್ವಾಣಭಕ್ತಿ (ಗಾಹೆ ೨೭), ಪಂಚಪರಮೇಷ್ಠಿಭಕ್ತಿ (ಗಾಹೆ ೭),

ನಂದೀಶ್ವರಭಕ್ತಿ ಮತ್ತು ಶಾಂತಿಭಕ್ತಿ ಈ ಭಕ್ತಿಗಳು ಅವುಗಳ ಹೆಸರಿಗೆ ಅನುಸರಿಸಿ ವಂದನಾತ್ಮಕ ಮತ್ತು ಭಾವನಾತ್ಮಕವಾಗಿವೆ. ಸಿದ್ಧಭಕ್ತಿಯ ಗಾಹೆಗಳ ಸಂಖ್ಯೆಯು ಕೆಲವೊಂದು ಅನಿಶ್ಚಿತವಾಗಿವೆ. ಕೊನೆಯವೆರಡು ನಂದೀಶ್ವರಭಕ್ತಿ ಮತ್ತು ಶಾಂತಿಭಕ್ತಿಗಳು. ಈಗ ದೊರೆಯುವ ರೂಪದಲ್ಲಿ ಕೊನೆಯ ಕೆಲವು ವಾಕ್ಯಗಳು ಪ್ರಾಕೃತ ರೂಪದಲ್ಲಿ ಇವೆ. ಅವುಗಳ ಪೂರ್ಣ ಪ್ರಾಕೃತ ಪಾಠವು ಲಭಿಸಿಲ್ಲ. ಇವುಗಳ ಪ್ರಾಚೀನ ಪ್ರತಿಗಳನ್ನು ಏಕತ್ರಿತ ಗೊಳಿಸಿ ಸಂಶೋಧನೆಯನ್ನು ಮಾಡುವ ಅವಶ್ಯಕತೆಯು ಇದೆ. ಈ ಭಕ್ತಿಗಳು ಪ್ರಭಾಚಂದ್ರಕೃತ ಸಂಸ್ಕೃತ ಟೀಕೆ ಸಹಿತ 'ಕ್ರಿಯಾಕಲಾಪ' ಎಂಬ ಹೆಸರಿನಿಂದ ಪ್ರಕಟಿತವಾಗಿವೆ (ಪ್ರ. ಸೋಲಾಪುರ ೧೯೧೨)."

ಶ್ರೀ ಶಾಸ್ತ್ರಿಗಳು 'ದಶಭಕ್ತಿ'ಯ ಮುನ್ನುಡಿಯಲ್ಲಿ ವಿವಿಧ ಭಕ್ತಿಗಳಲ್ಲಿ ನಿರೂಪಿತವಾದ ವಿಷಯಗಳ ಸ್ವರೂಪವನ್ನು ಸಂಕ್ಷೇಪವಾಗಿ ತಿಳಿಸಿ, ದಶಭಕ್ತಿಗಳ ಪಠನ ಸಂದರ್ಭಗಳನ್ನು ಹೇಳಿ ಪ್ರಾಕೃತ ದಶಭಕ್ತಿಗಳನ್ನು ಬರೆದ ಕುಂದಕುಂದಾಚಾರ್ಯರ ಮತ್ತು ಸಂಸ್ಕೃತ ದಶಭಕ್ತಿಗಳನ್ನು ಬರೆದ ಪೂಜ್ಯಪಾದಾಚಾರ್ಯರ ಪರಿಚಯವನ್ನು ಮಾಡಿಕೊಟ್ಟಿದ್ದಾರೆ.

ಶ್ರೀ ಶಾಸ್ತ್ರಿಗಳು ಪ್ರಕಟಿಸಿರುವ 'ದಶಭಕ್ತಿ'ಯಲ್ಲಿನ ಆರಂಭ ಪ್ರಾಕೃತ ಣಮೋಕಾರಮಂತ್ರ, ಚತ್ತಾರಿಮಂಗಲಗಳಿಂದ ಆಗುತ್ತದೆ. ನಂತರ ಎಂಟು ಗಾಹೆಗಳಲ್ಲಿ ಇಪ್ಪತ್ನಾಲ್ಕು ತೀರ್ಥಂಕರರ ವಂದನೆಯಿದೆ. ಈ ಗಾಹೆಗಳ ನಂತರ ಬರುವ ಪ್ರಾಕೃತ ಗದ್ಯಭಾಗದಲ್ಲಿ ಸಿದ್ಧಭಕ್ತಿಗೆ ಸಂಬಂಧಿಸಿದ ಭಾಗಗಳಿವೆ. "...ತಪಸ್ಸಿದ್ಧರನ್ನೂ ನಯಸಿದ್ಧರನ್ನೂ ಸಂಯಮಸಿದ್ಧರನ್ನೂ ಚಾರಿತ್ರ ಸಿದ್ಧರನ್ನೂ ಅತೀತ ಅನಾಗತ ವರ್ತಮಾನ ಕಾಲತ್ರಯಗಳಸಿದ್ಧರನ್ನೂ ಸರ್ವಸಿದ್ಧರನ್ನೂ ಭಕ್ತಿಯಿಂದ ನಿತ್ಯಕಾಲದಲ್ಲಿಯೂ ಅರ್ಚಿಸುತ್ತೇನೆ, ಪೂಜಿಸುತ್ತೇನೆ, ವಂದಿಸುತ್ತೇನೆ, ನಮಸ್ಕರಿಸುತ್ತೇನೆ....". ಆದರೆ ಈ ಭಾಗಕ್ಕೆ ಯಾವಭಕ್ತಿಯ ಹೆಸರಿನ ಶೀರ್ಷಿಕೆಯೂ ಇಲ್ಲ. ಇದರ ನಂತರ ಸಂಸ್ಕೃತ ಸಿದ್ಧಭಕ್ತಿ ಪ್ರಾರಂಭವಾಗುತ್ತದೆ, ಅದರ ಮುಂದೆ ಪ್ರಾಕೃತ ಸಿದ್ಧಭಕ್ತಿ ಇದೆ. ಈ ಪುಸ್ತಕದಲ್ಲಿರುವ ಕ್ರಮವೇ ಹೀಗಿದೆ : ಮೊದಲು ಸಂಸ್ಕೃತ ಭಕ್ತಿ, ನಂತರ ಪ್ರಾಕೃತ ಭಕ್ತಿ.

ಸಂಸ್ಕೃತ ಸಿದ್ಧಭಕ್ತಿ :

ಇದರಲ್ಲಿ ಒಂಬತ್ತು ಸಂಸ್ಕೃತ ಪದ್ಯಗಳಿವೆ. ಸಿದ್ಧಿಯ ಪ್ರಾಪ್ತಿಗಾಗಿ ಸಿದ್ಧಪರಮೇಷ್ಠಿಗಳಿಗೆ ವಂದನೆ ಸಲ್ಲಿಸಿ ಜೀವನ ಅನಂತಜ್ಞಾನಾದಿ ಸ್ವರೂಪದ ಪ್ರಾಪ್ತಿಯನ್ನೇ ಸಿದ್ಧಿಯೆಂದು ತಿಳಿಸಲಾಗಿದೆ. ಆತ್ಮನ ಸ್ವರೂಪ, ಗುಣ, ಮುಕ್ತಾತ್ಮನ ಆಕಾರ, ಸಿದ್ಧಪರಮೇಷ್ಠಿಯ ಸುಖಗಳನ್ನು ವರ್ಣಿಸಿ, ಭೂತ ಭವಿಷ್ಯತ್ ವರ್ತಮಾನ ಕಾಲದ ಸಿದ್ಧರನ್ನೆಲ್ಲಾ ತ್ರಿಸಂಧ್ಯಾಕಾಲಗಳಲ್ಲಿಯೂ ನಮಸ್ಕರಿಸುತ್ತೇನೆ ಎಂದು ಹೇಳಿದೆ.

ಪ್ರಾಕೃತ ಸಿದ್ಧಭಕ್ತಿ :

ಇದರಲ್ಲಿ ಇಪ್ಪತ್ತು ಗಾಹೆಗಳಿವೆ. ಸಿದ್ಧರ ವಂದನೆಯಿಂದ ಪ್ರಾರಂಭವಾಗುವ ಈ ಭಕ್ತಿಯಲ್ಲಿ ಬೇರೆ ಬೇರೆ ರೀತಿಯಲ್ಲಿ ಸ್ಥಳದಲ್ಲಿ, ಶರೀರಪ್ರಮಾಣದಲ್ಲಿ, ಜಾಗದಲ್ಲಿ, ಕಾಲದಲ್ಲಿ ನಾನಾ ಅವಸ್ಥಾಭೇದಗಳಿಂದ ಮುಕ್ತರಾದವರನ್ನು ; ಬಗೆ ಬಗೆಯ ಜ್ಞಾನಗಳನ್ನು, ಚಾರಿತ್ರಗಳನ್ನು, ಆಸನಗಳನ್ನು ಪಡೆದು ಸಿದ್ಧರಾದವರನ್ನು ವಂದಿಸಲಾಗಿದೆ. ಸಿದ್ಧರ ಗುಣ, ಸ್ವರೂಪ, ಬಗೆಗಳನ್ನೆಲ್ಲಾ ಇದರಲ್ಲಿ ತಿಳಿಸಿಕೊಡಲಾಗಿದೆ. ಕೊನೆಯಲ್ಲಿರುವ ಪ್ರಾಕೃತ ಗದ್ಯವು ಈ ಪುಸ್ತಕದ ಮೊದಲ ಭಾಗದ ಕೊನೆಯಲ್ಲಿರುವ ಪ್ರಾಕೃತ ಗದ್ಯದ ಪುನರುಕ್ತಿಯೇ ಆಗಿದೆ. ಜಿನಗುಣ ಸಂಪತ್ತಿಯ ಪ್ರಾಪ್ತಿಗಾಗಿ ಇದರಲ್ಲಿ ಆಶಿಸಲಾಗಿದೆ.

ಸಂಸ್ಕೃತ ಶ್ರುತಭಕ್ತಿ :

ಇದರಲ್ಲಿ ಮೂವತ್ತು ಸಂಸ್ಕೃತ ಶ್ಲೋಕಗಳಿವೆ. ಸಮ್ಯಕ್‌ಜ್ಞಾನದ ಸ್ತುತಿಯಿಂದ ಇದು ಆರಂಭವಾಗುತ್ತದೆ. ಸಮ್ಯಜ್ಞಾನದ ಪ್ರಕಾರಗಳನ್ನೆಲ್ಲಾ ಸ್ತುತಿಮಾಡಲಾಗಿದೆ. ನಂತರ ಶ್ರುತಜ್ಞಾನದ ವರ್ಣನೆ ತುಂಬಾ ವಿವರವಾಗಿ ಬಂದಿದೆ.

ಪ್ರಾಕೃತ ಶ್ರುತಭಕ್ತಿ :

ಇದರಲ್ಲಿ ಹನ್ನೊಂದು ಗಾಹೆಗಳೂ ಕೊನೆಯಲ್ಲಿ ಗದ್ಯವೂ ಇದೆ. ಸಿದ್ಧರನ್ನೂ ದ್ವಾದಶಾಂಗಗಳನ್ನೂ ನಮಸ್ಕರಿಸುವುದರಿಂದ ಈ ಭಕ್ತಿಯು ಪ್ರಾರಂಭವಾಗುತ್ತದೆ. ಮುಂದೆ ಹನ್ನೆರಡು ಅಂಗಗಳ ಹೆಸರನ್ನೂ ಹನ್ನೆರಡನೆಯದಾದ ದೃಷ್ಟಿವಾದದೊಳಗಿನ ಪೂರ್ವಗತದ ಅಂತರ್ಭೇದಗಳಾದ ಚತುರ್ದಶ ಪೂರ್ವಗಳನ್ನು ಆ ಪೂರ್ವ

ಗಳೊಳಗಿನ ಅಧಿಕಾರ, ಆ ಅಧಿಕಾರಗಳೊಳಗಿನ ಪ್ರಾಭೃತಗಳ ಸಂಖ್ಯೆಯನ್ನು ಹೇಳಿ ಅವೆಲ್ಲಕ್ಕೂ ವಂದಿಸಲಾಗಿದೆ.

ಸಂಸ್ಕೃತ ಚಾರಿತ್ರಭಕ್ತಿ :

ಇದರಲ್ಲಿ ಹತ್ತು ಸಂಸ್ಕೃತ ಪದ್ಯಗಳ ಮೂಲಕ ಪಂಚಾಚಾರ, ಬಾಹ್ಯತಪ, ಅಂತರಂಗತಪ, ಹದಿಮೂರು ಪ್ರಕಾರದ ಚಾರಿತ್ರಗಳನ್ನು ವರ್ಣಿಸಲಾಗಿದೆ.

ಪ್ರಾಕೃತ ಚಾರಿತ್ರಭಕ್ತಿ :

ವರ್ಧಮಾನ ಮಹಾವೀರರನ್ನು ವಂದಿಸುವುದರೊಂದಿಗೆ ಪ್ರಾರಂಭವಾಗುವ ಇದರಲ್ಲಿ ಹತ್ತು ಗಾಹೆಗಳೂ ಕೊನೆಯಲ್ಲಿ ಗದ್ಯವೂ ಇದೆ. ಘಾತಿಕರ್ಮ ವಿನಾಶಕ್ಕಾಗಿ ಪಂಚಭೇದಗಳಿಂದ ಚಾರಿತ್ರವನ್ನು ಹೇಳಲಾಗಿದೆ. ಸಾಮಾಯಿಕ, ಛೇದೋಪಸ್ಥಾಪನಾ, ಪರಿಹಾರವಿಶುದ್ಧಿ, ಸೂಕ್ಷ್ಮ ಸಾಂಪರಾಯ ಮತ್ತು ಯಥಾಖ್ಯಾತ ಎಂಬಿವೇ ಪಂಚಭೇದಗಳು. ಮುಂದೆ ಇಪ್ಪತ್ತೆಂಟು ಮೂಲಗುಣ, ದಶಧರ್ಮ, ತ್ರಿಗುಪ್ತಿ, ಸಮಸ್ತಶೀಲಗಳೂ, ಇಪ್ಪತ್ತೆರಡು ಪರೀಷಹಗಳೂ, ಉತ್ತರಗುಣಗಳು ಪ್ರಶಸ್ತಗಳಾಗಿವೆ. ಇವೆಲ್ಲವುಗಳಿಂದ ಮುಕ್ತಿ ದೊರೆಯುತ್ತದೆ ಎಂದು ಇದರಲ್ಲಿ ತಿಳಿಸಲಾಗಿದೆ.

ಸಂಸ್ಕೃತ ಯೋಗಿಭಕ್ತಿ :

ಎಂಟು ಸಂಸ್ಕೃತ ಪದ್ಯಗಳಿರುವ ಈ ಭಕ್ತಿಯು "ಜೀವಿತವು ಜಲಬಿಂದುವಿನಂತೆ ಚಪಲವಾದವು, ಸಂಪತ್ತು ಮಿಂಚಿಗೂ ಮೇಘಕ್ಕೂ ಸಮಾನ" ಎಂಬ ರೀತಿಯ ಕಾವ್ಯಗುಣಗಳಿಂದ ತುಂಬಿದೆ. ಇದರಲ್ಲಿ ದಿಗಂಬರ ಮುನಿಗಳು ಮಾಡುವ ಬೇರೆ ಬೇರೆ ಕಾಲಗಳಲ್ಲಿನ ತಪಸ್ಸನ್ನು ವರ್ಣಿಸಲಾಗಿದೆ.

ಪ್ರಾಕೃತಯೋಗಿಭಕ್ತಿ :

ಇಪ್ಪತ್ತೂರು ಗಾಹೆಗಳೂ, ಕೊನೆಯಲ್ಲಿ ಪ್ರಾಕೃತ ಗದ್ಯವೂ ಇರುವ ಇದರಲ್ಲಿ ಮುನಿಗಳಲ್ಲಿನ ವೀತರಾಗತ್ವ, ಸಮ್ಯಕ್ತ್ವ, ಶುದ್ಧತೆಗಳನ್ನು ವಂದಿಸಲಾಗಿದೆ. ಯೋಗಿಗಳ ಮಹತ್ವವನ್ನು ಎಂಟು ವೃದ್ಧಿಗಳನ್ನೂ ನವವಿಧ ಬ್ರಹ್ಮಚರ್ಯ ಮೊದಲಾದವನ್ನು ಇದು ವಿವರಿಸುತ್ತದೆ.

ಸಂಸ್ಕೃತ ಆಚಾರ್ಯಭಕ್ತಿ :

ಇದರಲ್ಲಿ ಹನ್ನೊಂದು ಪದ್ಯಗಳಿವೆ. ಆಚಾರ್ಯರ ಗುಣ, ಮಹಿಮೆ ಸ್ವರೂಪಗಳನ್ನು ವರ್ಣಿಸಲಾಗಿದೆ.

ಪ್ರಾಕೃತ ಆಚಾರ್ಯಭಕ್ತಿ :

ಇದರಲ್ಲಿ ಹತ್ತು ಗಾಹೆಗಳೂ ಕೊನೆಯಲ್ಲಿ ಪ್ರಾಕೃತ ಗದ್ಯವೂ ಇದೆ. ಆಚಾರ್ಯರ ಸಾಮರ್ಥ್ಯವನ್ನು ಗುಣವನ್ನೂ ಮೇಲಿನದಕ್ಕಿಂತ ಬೇರೆಯಾದ ರೀತಿಯಲ್ಲಿ ತಿಳಿಸಿಕೊಡುತ್ತದೆ.

ಸಂಸ್ಕೃತ ನಿರ್ವಾಣಭಕ್ತಿ :

ಮೂವತ್ತೆರಡು ಸಂಸ್ಕೃತ ಪದ್ಯಗಳಿಂದ ಕೂಡಿದೆ. ಇದರಲ್ಲಿ ಮಹಾವೀರರ ಜೀವನದ ಸಂಕ್ಷಿಪ್ತ ವಿವರಗಳು ದೊರೆಯುತ್ತದೆ. ಮಹಾವೀರರ ಜನನ, ದೀಕ್ಷೆ, ತಪಸ್ಸು, ಕೇವಲ ಜ್ಞಾನಪ್ರಾಪ್ತಿ, ಮುಕ್ತಿ ಮೊದಲಾದ ವಿವರಗಳು ಇದರಲ್ಲಿವೆ. ಅಲ್ಲದೆ ಉಳಿದ ತೀರ್ಥಂಕರ ನಿರ್ವಾಣ ಭೂಮಿಗಳ ಹೆಸರುಗಳೂ ಇದರಲ್ಲಿ ಕಂಡುಬರುತ್ತವೆ. ಬೇರೆ ಬೇರೆ ಯೋಗಿಗಳು ಎಲ್ಲೆಲ್ಲಿ ಮುಕ್ತಿಯನ್ನು ಹೊಂದಿದರೋ ಆ ಮುಕ್ತಿಸ್ಥಾನಗಳ ಹೆಸರುಗಳು ಇದರಲ್ಲಿವೆ.

ಪ್ರಾಕೃತ ನಿರ್ವಾಣಭಕ್ತಿ :

ತೀರ್ಥಂಕರರುಗಳ ಮುಕ್ತಿಸ್ಥಾನವನ್ನೂ ಇತರ ಸಿದ್ಧಾತ್ಮರ ಮುಕ್ತಿಸ್ಥಾನಗಳನ್ನೂ ತಿಳಿಸಿ ಅವುಗಳಿಗೆ ವಂದನೆಯನ್ನು ಸಲ್ಲಿಸಿರುವ ಇದರಲ್ಲಿನ ವಿಶೇಷವೆಂದರೆ ತೀರ್ಥಂಕರರುಗಳೊಡನೆ ಸಂಬಂಧ ಹೊಂದಿದ್ದ ಸ್ಥಳಗಳ ಹೆಸರುಗಳೂ ಇಲ್ಲಿ ದೊರೆಯುತ್ತವೆ. ಮನುಷ್ಯಲೋಕದಲ್ಲಿನ ಎಲ್ಲ ಮುಕ್ತಿಸ್ಥಾನಗಳನ್ನೂ, ಅತಿಶಯ ಸ್ಥಾನಗಳನ್ನೂ ನಮಸ್ಕರಿಸುತ್ತೇನೆಂದು ಹೇಳಿರುವ ಈ ಭಕ್ತಿಯಲ್ಲಿ ಇಪ್ಪತ್ತೇಳು ಗಾಹೆಗಳಿವೆ. ಈ ಗಾಹೆಗಳಾದ ಮೇಲೆ ತೀರ್ಥಂಕರರುಗಳ ಸಮವಸರಣಗಳ ಪರಿಮಾಣವನ್ನು, ಅವರ ಶರೀರಗಳ ಪರಿಮಾಣ, ವರ್ಣ, ಲಾಂಛನ ವಂಶ ಮೊದಲಾದವನ್ನು ತಿಳಿಸುವ ಒಂಬತ್ತು ಸಂಸ್ಕೃತ ಪದ್ಯಗಳಿವೆ. ಕೊನೆಯಲ್ಲಿರುವ ಪ್ರಾಕೃತ ಗದ್ಯದಲ್ಲಿ ಮಹಾವೀರರ ಮುಕ್ತಿಯ ಕಾಲವನ್ನು ತಿಳಿಸಲಾಗಿದೆ.

ಸಂಸ್ಕೃತ ನಂದೀಶ್ವರ ಭಕ್ತಿ :

ಅರವತ್ತು ಪದ್ಯಗಳಷ್ಟು ದೀರ್ಘವಾಗಿರುವ ಇದರಲ್ಲಿ ನಂದೀಶ್ವರ ದ್ವೀಪದಲ್ಲಿರುವ ಐವತ್ತೆರಡು ಅಕೃತ್ರಿಮ ಚೈತ್ಯಾಲಯಗಳನ್ನೂ ಅವುಗಳಲ್ಲಿರುವ ಜಿನಬಿಂಬಗಳನ್ನೂ, ದೇವತೆಗಳು ಆ ದ್ವೀಪಕ್ಕೆ ಹೋಗಿ ಸಲ್ಲಿಸುವ ಪೂಜಾವೈಭವವನ್ನೂ, ಅಷ್ಟಮಹಾಪ್ರಾತಿಹಾರ್ಯ

ಗಳನ್ನೂ, ಮೂವತ್ನಾಲ್ಕು ಅತಿಶಯ ಮೊದಲಾದವನ್ನು ವರ್ಣಿಸಲಾಗಿದೆ.

ಪ್ರಾಕೃತ ನಂದೀಶ್ವರಭಕ್ತಿ :

ಇದರಲ್ಲಿ ಈಗಿರುವ ರೂಪದಲ್ಲಿ ಯಾವ ಗಾಹೆಗಳೂ ಇಲ್ಲ. ಪ್ರಾಕೃತ ಗದ್ಯಭಾಗ ಮಾತ್ರ ಇದೆ. ಇದರಲ್ಲಿ ಅತ್ಯಂತ ಸಂಕ್ಷಿಪ್ತವಾಗಿ, ನಂದೀಶ್ವರ ದ್ವೀಪದಲ್ಲಿರುವ ಪರ್ವತಗಳಲ್ಲಿರುವ ಐವತ್ತೆರಡು ಜಿನಚೈತ್ಯಾಲಯಗಳನ್ನು ದೇವತೆಗಳು ಭಕ್ತಿಯಿಂದ ಅರ್ಚಿಸುತ್ತಾರೆ. ನಾನೂ ಇಲ್ಲಿದ್ದುಕೊಂಡೇ ಅಲ್ಲಿರುವ ಜಿನಮಂದಿರಗಳನ್ನು ನಿತ್ಯವೂ ಅರ್ಚಿಸುತ್ತೇನೆ, ನಮಸ್ಕರಿಸುತ್ತೇನೆ ಎಂದು ಹೇಳಲಾಗಿದೆ.

ಸಂಸ್ಕೃತ ಚೈತ್ಯಭಕ್ತಿ :

ಇದರಲ್ಲಿ ನಲವತ್ತೊಂದು ಪದ್ಯಗಳಿವೆ. ಈ ಪದ್ಯಗಳಲ್ಲಿ ಜಿನರ ವಂದನೆ, ಧರ್ಮದ ವಂದನೆ, ಜಿನವಚನದ ವಂದನೆಗಳಿದ್ದು ಕೃತ್ರಿಮ ಅಕೃತ್ರಿಮ ಚೈತ್ಯಾಲಯಗಳೂ, ಬಿಂಬಗಳೂ ತೀರ್ಥಂಕರರ ರಾಗದ್ವೇಷ ರಹಿತ ಗುಣವೂ ವರ್ಣಿಸಲ್ಪಟ್ಟಿದೆ.

ಪ್ರಾಕೃತ ಚೈತ್ಯಭಕ್ತಿ :

ಇದರಲ್ಲಿಯೂ ಗಾಹೆಗಳಿಲ್ಲ. ಪ್ರಾಕೃತ ಗದ್ಯಭಾಗ ಮಾತ್ರ ಇದೆ. ಮೂರುಲೋಕದಲ್ಲಿರುವ ಸಮಸ್ತ ಚೈತ್ಯಾಲಯಗಳನ್ನೂ ದೇವತೆಗಳು ನಿತ್ಯಕಾಲದಲ್ಲಿ ಅರ್ಚಿಸುತ್ತಾರೆ,... ನಮಸ್ಕರಿಸುತ್ತಾರೆ. ನಾನೂ ಇಲ್ಲಿದ್ದು ಆ ಸ್ಥಾನಗಳಲ್ಲಿರುವ ಅವುಗಳನ್ನು ನಿತ್ಯವೂ ನಮಸ್ಕರಿಸುತ್ತೇನೆ ಎಂದು ಈ ಗದ್ಯದಲ್ಲಿ ಹೇಳಿದೆ.

ಸಂಸ್ಕೃತ ಶಾಂತಿಭಕ್ತಿ :

ಇದರಲ್ಲಿ ಹತ್ತು ಪದ್ಯಗಳಿವೆ. ಆದರೆ ಇದಕ್ಕೂ ಮೊದಲು ಶಾಂತ್ಯಷ್ಟಕವೆಂಬ ಭಾಗವಿದ್ದು ಅದರಲ್ಲಿ ಎಂಟು ಸಂಸ್ಕೃತ ಪದ್ಯಗಳಿವೆ. ಶ್ರೀಪೂಜ್ಯಪಾದಸ್ವಾಮಿಯವರು ತಮಗೆ ನೇತ್ರರೋಗ ಮೊದಲಾದ ವ್ಯಾಧಿಗಳುಂಟಾದಾಗ ಅವುಗಳ ನಿವಾರಣಕ್ಕಾಗಿ ಶಾಂತಿ ತೀರ್ಥಂಕರ ಈ ಸ್ತುತಿಯನ್ನು ಮಾಡಿದರು ಎಂಬ ಕಾರಣಕ್ಕಾಗಿ ಈ ಶಾಂತ್ಯಷ್ಟಕವು ಬಹಳ ಮಹತ್ವವನ್ನು ಹೊಂದಿದೆ. ಶಾಂತಿಭಕ್ತಿಯಲ್ಲಿ ಶಾಂತಿತೀರ್ಥಂಕರರ ಸ್ತೋತ್ರವೂ ಇದರ ಸ್ತುತಿಯಿಂದ ವಿವಿಧ ವಿಘ್ನವ್ಯಾಧಿಗಳೂ ನಾಶವಾಗುತ್ತವೆಂಬ ವಿಷಯವೂ ವರ್ಣಿತವಾಗಿದೆ.

ಪ್ರಾಕೃತ ಶಾಂತಿಭಕ್ತಿ :

ಇದರಲ್ಲಿ ಗಾಹೆಗಳಿಲ್ಲ. ಪ್ರಾಕೃತ ಗದ್ಯದಲ್ಲಿ ವೃಷಭಾದಿ ಮಹಾವೀರರವರೆಗಿನ ಮಂಗಲ ಮಹಾಪುರುಷರಿಗೆ ವಂದನೆ, ನಮಸ್ಕಾರವನ್ನು ಹೇಳಿದೆ.

ಸಂಸ್ಕೃತ ಪಂಚಗುರುಭಕ್ತಿ :

ಹನ್ನೊಂದು ಪದ್ಯಗಳಿವೆ. ಇವುಗಳಲ್ಲಿ ಪಂಚಪರಮೇಷ್ಠಿಗಳ ಸ್ವರೂಪವನ್ನು ವರ್ಣಿಸಿ ಅವರಿಗೆ ನಮಸ್ಕರಿಸಲಾಗಿದೆ.

ಪ್ರಾಕೃತ ಪಂಚಗುರುಭಕ್ತಿ :

ಇದರಲ್ಲಿ ಏಳು ಗಾಹೆಗಳೂ ಅಂತ್ಯದಲ್ಲಿ ಪ್ರಾಕೃತ ಗದ್ಯವೂ ಇದೆ. ಪಂಚಪರಮೇಷ್ಠಿಗಳನ್ನು ವರ್ಣಿಸಿ ಅವರನ್ನು ವಂದಿಸುವವನು ಕರ್ಮವೆಂಬ ಕಟ್ಟಿಗೆಯನ್ನು ದಹನ ಮಾಡುತ್ತಾನೆ ಎಂದು ಹೇಳಿದೆ.

ಸಂಸ್ಕೃತ ತೀರ್ಥಕರಭಕ್ತಿ :

ಕೇವಲ ಐದು ಪದ್ಯಗಳು ಮಾತ್ರ ಇವೆ. ಇದರಲ್ಲಿ ಚತುರ್ವಿಂಶತಿ ತೀರ್ಥಂಕರರನ್ನು ಸ್ತುತಿಸಲಾಗಿದೆ.

ಪ್ರಾಕೃತ ತೀರ್ಥಕರಭಕ್ತಿ :

ಇದರಲ್ಲಿ ಗಾಹೆಗಳಿಲ್ಲ. ಪ್ರಾಕೃತ ಗದ್ಯಭಾಗ ಮಾತ್ರ ಇದೆ. ಇದರಲ್ಲಿ ಚತುರ್ವಿಂಶತಿ ತೀರ್ಥಂಕರ ಭಕ್ತಿಯನ್ನು ಮಾಡಲಾಗಿದೆ.

ಸಂಸ್ಕೃತ ಸಮಾಧಿಭಕ್ತಿ :

ಇದರಲ್ಲಿ ಹದಿನೆಂಟು ಪದ್ಯಗಳಿವೆ. ಇದರಲ್ಲಿ ಸಮಾಧಿಮರಣವನ್ನು ಇಚ್ಛಿಸಲಾಗಿದೆ. ಮುಕ್ತಿ ಪ್ರಾಪ್ತಿಯವರೆಗೆ ಜಿನೇಶ್ವರನಲ್ಲಿ ನಿಶ್ಚಲವಾದ ಭಕ್ತಿಯು ವ್ಯಕ್ತವಾಗಿದೆ. ಜಿನೇಶ್ವರನ ಭಕ್ತಿಯನ್ನೇ ಮತ್ತೆ ಮತ್ತೆ ಬೇಡಲಾಗಿದೆ.

ಪ್ರಾಕೃತ ಸಮಾಧಿಭಕ್ತಿ :

ಗಾಹೆಗಳಿಲ್ಲದ ಇದರಲ್ಲಿ ಕೇವಲ ಎರಡು ವಾಕ್ಯಗಳ ಪ್ರಾಕೃತ ಗದ್ಯಮಾತ್ರ ಇದೆ.

'ದಶಭಕ್ತಿ'ಯು ಮೊದಲ ಮುದ್ರಣ ಮಾಡಿಸಿದವರ ಅಪೇಕ್ಷೆಯಂತೆ ಈ ಪುಸ್ತಕದಲ್ಲಿ ಸಹಸ್ರನಾಮ ಮಂತ್ರಗಳೂ, ಸರಸ್ವತೀ ಸ್ತೋತ್ರವೂ, ಸರಸ್ವತೀ ಶತಾಷ್ಟ ನಾಮಗಳೂ ಕೊನೆಯಲ್ಲಿ ಸೇರಿಸಲ್ಪಟ್ಟಿವೆ.

ಶಾಂತಿಶ್ರೀ

ಸಂಸ್ಕೃತ ಪ್ರಾಕೃತಗಳನ್ನು ಬಲ್ಲವರು ಮಾತ್ರವೇ ಅರ್ಥ ಸಹಿತವಾಗಿ ಪಠಿಸಬಹುದಾಗಿದ್ದ ಈ ಭಕ್ತಿ ಸಾಹಿತ್ಯವನ್ನು ಶ್ರೀ ಶಾಂತಿರಾಜಶಾಸ್ತ್ರಿಗಳು ಕನ್ನಡ ಲಿಪಿಯಲ್ಲಿ ಮೂಲವನ್ನೂ ಎಲ್ಲಕಡೆಯಲ್ಲಿಯೂ ವಿವರಣೆಗಳನ್ನೂ ಕೊಟ್ಟು ಅವುಗಳ ಕನ್ನಡ ಅನುವಾದವನ್ನೂ ಮಾಡಿ ಕನ್ನಡಿಗರಿಗೆ ಮಹದುಪಕಾರವನ್ನು ಮಾಡಿದ್ದಾರೆ. ದೇಶಭಾಷೆಗಳ ಜನರ ಧಾರ್ಮಿಕ ಅವಶ್ಯಕತೆಗಳನ್ನು ಆ ಕಾಲದಲ್ಲಿಯೇ ಯೋಚಿಸಿದ ಶ್ರೀ ಶಾಸ್ತ್ರಿಗಳು ಕನ್ನಡ ಅನುವಾದಗಳೊಡನೆ ಇಂಥ ಪುಸ್ತಕಗಳನ್ನು ಹೊರತಂದದ್ದು ಇಂದಿಗೂ ಅನುಕರಣೀಯವಾಗಿದೆ.

ವಿಶೇಷ ವರ್ಣನೆಗಳನ್ನು ಕೊಡುವ ಕಡೆ ಶ್ರೀ ಶಾಸ್ತ್ರಿಗಳು ನೀಡಿರುವ ವಿವರಣೆಗಳಿಂದ ಜೈನ ಸಿದ್ಧಾಂತದ, ಸಾಹಿತ್ಯದ ಆಳವೂ ಅಗಲವೂ ಅರಿವಾಗುತ್ತದೆ. ಗಣಧರರಿಂದ ಕೇಳಲ್ಪಟ್ಟ ಅರವತ್ತು ಸಾವಿರ ಪ್ರಶ್ನೆಗಳಿಗೆ ವ್ಯಾಖ್ಯಾನ ಮಾಡಿರುವ ಶಾಸ್ತ್ರವೇ ವ್ಯಾಖ್ಯಪ್ರಜ್ಞಪ್ತಿ ಅಂಗ ಎಂಬ ರೀತಿಯ ವಿವರಣೆಕೊಡುವಲ್ಲಿ ಶ್ರೀ ಶಾಸ್ತ್ರಿಗಳು ಅವಲೋಕಿಸಿರಬಹುದಾದ ಗ್ರಂಥಗಳ ವಿಸ್ತಾರ ನಮಗೆ ಆಶ್ಚರ್ಯವನ್ನುಂಟು ಮಾಡುತ್ತದೆ.

'ದಶಭಕ್ತಿ' ಪುಸ್ತಕವು ಭಕ್ತಿಸಾಹಿತ್ಯ ಮಾತ್ರವಾಗಿ ಉಳಿಯುವುದಿಲ್ಲ. ಇದರಲ್ಲಿ ಭಗವಂತನನ್ನು ಹೊಗಳುವ, ಆ ಮೂಲಕ ಲೌಕಿಕ ಭೋಗಭಾಗ್ಯಗಳನ್ನು ಬೇಡಿ ಪಡೆಯುವ ಯಾಚನೆಯಿಲ್ಲ. ಭಗವಂತನ ಅನಂತ ಮಹಿಮೆ ಮತ್ತು ಗುಣಗಳಿಗೆ ವಂದಿಸುವುದರಲ್ಲಿಯೇ ಅದು ಮುಗಿಯುವುದೂ ಇಲ್ಲ. ಜೈನದರ್ಶನದ, ಸಾಹಿತ್ಯದ, ಆಚಾರ-ನೀತಿಶಾಸ್ತ್ರದ ವಿವರಗಳೂ; ಪೌರಾಣಿಕ, ಐತಿಹಾಸಿಕ, ಧಾರ್ಮಿಕ ಸ್ಥಳನಾಮಗಳೂ ಇದರಲ್ಲಿ ವರ್ಣಿಸಲ್ಪಟ್ಟಿರುವುದರಿಂದ ಇದರ ಮಹತ್ವವನ್ನು ಅರ್ಥ ಮಾಡಿಕೊಳ್ಳಬಹುದಾಗಿದೆ. ಇಲ್ಲಿರುವ ವಿವರಗಳನ್ನು ಇತರ ಗ್ರಂಥಗಳೊಡನೆ ತೌಲನಿಕ ಅಧ್ಯಯನ ಮಾಡುವ ಅವಕಾಶವೂ ಇಲ್ಲಿದೆ. "ಸಂಪೂಜಕಾನಾಂ ಪ್ರತಿಪಾಲಕಾನಾಂ " ಮತ್ತು "ಕ್ಷೇಮಂ ಸರ್ವಪ್ರದಾನಾಂ..." ಎಂಬ ಪದ್ಯಗಳು ಲೋಕಹಿತವನ್ನು ಬಯಸುವ 'ಶಾಂತಿಭಕ್ತಿ' ಯಲ್ಲಿವೆ ಎಂದ ಮೇಲೆ ಇದರ ವ್ಯಾಪ್ತಿಗೆ ಮಿತಿಯಿಲ್ಲ. ಅಂದ ಮಾತ್ರಕ್ಕೆ ದಶಭಕ್ತಿಯು ವಿಮರ್ಶೆಗೆ ಹೊರತಾದುದೇನೂ ಅಲ್ಲ. ಪ್ರಾಕೃತ ನಿರ್ವಾಣಭಕ್ತಿಯ ಇಪ್ಪತ್ತೈದನೇ ಗಾಹೆಯಲ್ಲಿ "ಐದುನೂರು ಧನುಸ್ಸಿನ ಪರಿಮಾಣದ ದೇಹವುಳ್ಳವನಾದ ಆ ಗೋಮಟದೇವನನ್ನು ವಂದಿಸುತ್ತೇನೆ" ಎಂದು ಹೇಳಿದೆ. ಆದರೆ ಗೋಮಟದೇವನು ತನ್ನ ಕಾಲದ ಎಲ್ಲರಿಗಿಂತಲೂ ಎತ್ತರವಾಗಿ ಐನೂರಿಪ್ಪತ್ತೈದು ಬಿಲ್ಲೆತ್ತರ ಇದ್ದ ಎಂದು ಬೇರೆ ಕಡೆಗಳಲ್ಲಿ ವರ್ಣನೆಯಿದೆ. ಈ ದೃಷ್ಟಿಯಿಂದ ಈ ಗಾಹೆ ವಿಮರ್ಶೆಗೆ ಅರ್ಹವಾಗಿದೆ. ಅಲ್ಲದೆ ಈ ಗಾಹೆ ನನ್ನ ದೃಷ್ಟಿಯಲ್ಲಿ ಬಹಳ ಮಹತ್ವಪೂರ್ಣವಾದ ಪ್ರಾಚೀನವೂ ಆದ ಒಂದು ಶಬ್ದವನ್ನು ಕಾಪಾಡಿಕೊಂಡು ಬಂದಿದೆ, ಅದೇ 'ಗೋಮಟ' ಶಬ್ದ. ಬಾಹುಬಲಿಯ ಇನ್ನೊಂದು ಹೆಸರಾದ 'ಗೋಮಟ' ಎಂಬುದು ನನಗೆ ತಿಳಿದಿರುವಂತೆ ಅತ್ಯಂತ ಪ್ರಾಚೀನವಾಗಿ ಇಲ್ಲಿಯೇ-ಕುಂದಕುಂದರ ನಿರ್ವಾಣಭಕ್ತಿಯಲ್ಲಿಯೇ ಪ್ರಯೋಗವಾಗಿರುವುದು. 'ಗೋಮಟ' ಶಬ್ದದ ಬಗ್ಗೆ ಚರ್ಚಿಸಬೇಕಾದಾಗ ಇನ್ನು ಮುಂದೆ ಕುಂದಕುಂದರ ನಿರ್ವಾಣಭಕ್ತಿಯನ್ನು ಆವಶ್ಯಕ ಆಧಾರವಾಗಿ ತೆಗೆದುಕೊಳ್ಳಬೇಕಾಗುತ್ತದೆ.

'ದಶಭಕ್ತಿ'ಯೊಳಗಿನ ಭಕ್ತಿಗಳ ಸಂಖ್ಯೆ ನಿಜವಾಗಿ ಹತ್ತೇ ಅಥವಾ ಹನ್ನೆರಡೇ? ಪ್ರಾಕೃತದ ಹತ್ತು ಭಕ್ತಿಗಳೂ ಏಕೆ ಪೂರ್ಣವಾಗಿ ದೊರಕಿಲ್ಲ? ಈ ಮೊದಲಾದ ಅಂಶಗಳನ್ನು ಆಧರಿಸಿ ದಶಭಕ್ತಿಯ ಮೇಲೆ ಇರುವ ಪ್ರಾಚೀನ ಕನ್ನಡ ಟೀಕೆಗಳನ್ನು ಅವಲಂಬಿಸಿ ಪೂರ್ಣ ಪ್ರಮಾಣದ ಒಂದು ಸಂಶೋಧನ ನಿಬಂಧವನ್ನು ಸಿದ್ಧಪಡಿಸಲು ಈ ಗ್ರಂಥವು ಅರ್ಹವಾಗಿದೆ. □

ಣಾಣೇಣ ಝಾಣ ಸಿದ್ಧೀ, ಝಾಣಾದೋ ಸವ್ವ ಕಮ್ಮ ನಿಜ್ಜರಣಂ ।
ಣಿಜ್ಜರಣ ಫಲಂ ಮೋಕ್ಖಂ, ಣಾಣಬ್ಭಾಸಂ ತದೋ ಕುಜ್ಜಾ ॥

ಜ್ಞಾನದಿಂದ ಧ್ಯಾನ ಸಿದ್ಧಿಸುವುದು, ಧ್ಯಾನದಿಂದ ಸರ್ವ ಕರ್ಮ ನಿರ್ಜರೆಯಾಗುವುದು. ನಿರ್ಜರೆಯ ಫಲವೇ ಮೋಕ್ಷ. ಆದ್ದರಿಂದ ಜ್ಞಾನಾಭ್ಯಾಸವನ್ನು ಮಾಡು.

—ರಯಣಸಾರ

ಎ. ಶಾಂತಿರಾಜಶಾಸ್ತ್ರಿಗಳವರ ಸ್ಮರಣಾರ್ಥ
ಲಾವಣಿ

ಅರುಹನ ಅರ್ಚಿಸಿ ಅರ್ತಿಯಿಂದಲಿನಾವ್ ।
ಅರ್ಹದ್ಭಕ್ತನ ನೆನೆಯುವೆವು ॥
ಅನುಪಮ ಸುಂದರ ಉತ್ತಮವಾಗ್ಮಿಯ ।
ಅರಿಯಲು ನಾವು ಸೇರಿಹೆವು ॥ಪಲ್ಲ॥

ಆಳವಾಗಿಹ ಅನುಭವದಿಂದಲಿ ।
ಆಗಮಶಾಸ್ತ್ರವತಿಳಿದವಗೆ ॥
ಆರುದಶಕಗಳ ಕಳೆದಿಹ ಆತ್ಮನ ।
ಆದರದಿಂದಲಿ ಸ್ಮರಿಸುವೆವು ॥೧॥

ಇರ್ವತ್ತೂರಲಿ ಜನಿಸಿಹ ಭವ್ಯನ ।
ಇಂದಿನ ಜನತೆಯು ಹೊಗಳುವುದು ॥
ಈಪರಿಯಿಂದಲಿ ಕೊಂಡಾಡುತ ನಾವ್ ।
ಈದಿನ ಆತನ ನೆನೆಯುವೆವು ॥೨॥

ಉತ್ತರದಲಿ ಅತ್ಯುತ್ತಮವೆನಿಸುವ ।
ಉರು ಉಪಾಧ್ಯಾಯರ ಕೊಡುತ್ತಾ ॥
ಊಹಿಸಲಸದಳ ಜ್ಞಾನವಪಡೆದು ।
ಊರಲಿಬಾಳೀ ಬದುಕಿದರು ॥೩॥

ಎಲ್ಲರ ಬಳಿಯೂ ಸಂಯಮಿಯಾಗಿ ।
ಎಲ್ಲೂ ಸೋಲದೆ ಮೆರೆದಿಹರು ॥
ಎಲ್ಲೆಇಲ್ಲದ ಜ್ಞಾನದೀವಿಗೆಯ ।
ಎಲ್ಲೆಡೆಬೆಳಗಿಸಿ ತೋರಿದರು ॥೪॥

ಶಾಂತಿರಾಜರು ಶಾರದೆ ಪುತ್ರರು ।
ಸರ್ವಜನಪ್ರಿಯ ಸೇವಕರು ॥
ಶಾಸ್ತ್ರಿಗಳಾಗಿ ತನುಮನಧನಗಳ ।
ಸರ್ವರಿಗಾಗಿ ವ್ಯಯಿಸಿದರು ॥೫॥

ನೇಮಿಸಾಗರರ ಪ್ರಿಯತಮ ಶಿಷ್ಯರು ।
ನೇಮನಿಷ್ಠೆಯಲಿ ಪಳಗಿಹರು ॥
ನೇಮಿಜಿನೇಶನ ವಂದಿಸಿ ನಾವು ।
ನೆಮ್ಮದಿಯಿಂದಲಿ ಸ್ಮರಿಸುವೆವು ॥೬॥

ಬಾಹುಬಲಿಯ ಸಾನ್ನಿಧ್ಯದಿಸೇರಿ ।
ಬಾಹ್ಯಪ್ರಪಂಚವ ಮರೆತಿಹೆವು ॥
ಚಾರುಕೀರ್ತಿಗಳ ಚರಣವ ಸೇವಿಸಿ ।
ಚಾರಣಮುನಿಗಳಿಗೊಂದಿಪೆವು ॥೭॥

ನಾಗಕುಮಾರರು ನಗುಮೊಗದಿಂದಲಿ ।
ಹಿರಿಯರ ಪಥವನು ತುಳಿದಿಹರು ॥
ನಾಗೇಂದ್ರನು ಕೂಷ್ಮಾಂಡಿನಿದೇವಿಯು ।
ಹಿಂದಿನಿಂದಲೀ ಪೊರೆಯುವರು ॥೮॥

ಈ ಸಭೆಯಿಂದಲಿ ಸಂತಸತಾಳ್ದೆವು ।
ಅಮಿತಾನಂದವಹೊಂದಿದೆವು ॥
ಈ ದಿನ ಶುಭ ದಿನ ನಿಮಗೆಲ್ಲರಿಗೂ ।
ಆದರದಿಂದಲಿ ಸ್ವಾಗತವು ॥೯॥

— ಬಿ. ಎಲ್. ಜಿನರಾಜ ಇಂದ್ರ
ನರಸಿಂಹರಾಜಪುರ

ತತ್ತ್ವರತ್ನ ಪ್ರದೀಪಿಕೆ

— ಶ್ರೀಮತಿ ಕಾ.ನಾ. ಜಯಶ್ರೀ ವೃಷಭರಾಜ್

ಶ್ರೀ ಶಾಂತಿರಾಜ ಶಾಸ್ತ್ರಿಯವರು ಪ್ರತಿಯೊಬ್ಬ ಜೈನನ ಮನೆಮಾತಾಗಿರುವ ವ್ಯಕ್ತಿ. ಸ್ವಾಧ್ಯಾಯನಿರತನಾದ ಯಾವನೇ ಶ್ರಾವಕನುಂ ಶಾಂತಿರಾಜಶಾಸ್ತ್ರಿಯವರನ್ನು ಸ್ಮರಿಸದೇ ಇರುವುದು ಸಾಧ್ಯವಿಲ್ಲ. ಎತರ್ಾರರು ಸಂಸ್ಕೃತ ಮತ್ತು ಕನ್ನಡದ ಉದ್ದಾಮ ಪಂಡಿತರು. ಪ್ರಾಕೃತವನ್ನು ಮೈಗೂಡಿಸಿಕೊಂಡ ಇವರು ಹಿಂದಿಯಲ್ಲೂ ಪಾಂಡಿತ್ಯವನ್ನು ಗಳಿಸಿದ್ದರು. ಸಂಸ್ಕೃತದ ಅಪಾರ ಜೈನ ಸಾಹಿತ್ಯವನ್ನು ಸಂಪಾದಿಸಿ ಕನ್ನಡಿಸಿ ಕನ್ನಡಕ್ಕೆ ನೀಡಿದ ಏಕೈಕ ವ್ಯಕ್ತಿ ಶಾಂತಿರಾಜಶಾಸ್ತ್ರಿಗಳುಂ. ಸಾಗಣೆ, ಸಂಪರ್ಕ ಸಾಧನೆಗಳ ಅಭಾವವಿದ್ದು ಆ ಕಾಲದಲ್ಲಿಯೂ ಹಳ್ಳಿ ಹಳ್ಳಿಗಳನ್ನು ತಿರುಗಿ ಹಸ್ತ ಪ್ರತಿಗಳನ್ನು ಸಂಗ್ರಹಿಸಿ ಪರಿಷ್ಕರಿಸಿ ಸಂಪಾದಿಸುವ ಕಾರ್ಯವನ್ನು ಬಹಳ ಸಮರ್ಥವಾಗಿ ಮಾಡಿದ್ದಾರೆ. ಧರ್ಮಸ್ಥಳದಲ್ಲಿ ಮೊದಲನೆ ಸರ್ವ ಧರ್ಮಸಮ್ಮೇಳನದಲ್ಲಿ ಭಾಗವಹಿಸಿ, ಮಾತನಾಡುವ ಮಂಜುನಾಥನೆಂದು ಹೆಸರಾದ ಶ್ರೀ ಮಂಜಯ್ಯ ಹೆಗ್ಗಡೆಯವರಿಂದ ಸನ್ಮಾನಿಸಲ್ಪಟ್ಟಿದ್ದರು. ಶ್ರೀನಾಲ್ವಡಿ ಕೃಷ್ಣ ರಾಜ ಒಡೆಯರು ಮತ್ತು ಶ್ರೀ ಜಯ ಚಾಮರಾಜ ಒಡೆಯರಿಂದ 'ಆಸ್ಥಾನ ವಿದ್ವಾನ್', 'ಆಸ್ಥಾನ ಮಹಾ ವಿದ್ವಾನ್,' 'ಪಂಡಿತರತ್ನಂ' ಪ್ರಶಸ್ತಿಗಳನ್ನು ಪಡೆದಿದ್ದ ಇವರು ಶ್ರವಣಬೆಳಗೊಳದ ಶ್ರೀಮಠದಿಂದಲೂ ಸನ್ಮಾನಿತರಾಗಿದ್ದರು. ಕನ್ನಡ ಪಂಡಿತಜನರ ಪ್ರತೀಕವಾಗಿರುವ ಕನ್ನಡ ಸಾಹಿತ್ಯ ಪರಿಷತ್ತು ಇವರನ್ನು ಸನ್ಮಾನಿಸಿ ಕೃತಾರ್ಥವಾಯಿತುಂ. ಹೀಗೆ ಅರಮನೆಯ ಗುರುಮನೆಯ ಹಾಗೂ ಜನಸಾಮಾನ್ಯರ ಮೆಚ್ಚುಗೆಯನ್ನು ಏಕಕಾಲದಲ್ಲಿ ಗಳಿಸಿದ ಅಪರೂಪ ವ್ಯಕ್ತಿತ್ವದ ಮಹಾನ್ ವ್ಯಕ್ತಿ ಶ್ರೀ ಶಾಂತಿರಾಜ ಶಾಸ್ತ್ರಿಗಳು.

ಶಾಸ್ತ್ರಿಗಳು ಎಂತಹ ಉದ್ದಾಮ ಪಂಡಿತರೋ ಅಷ್ಟೇ ಸರಳಜೀವಿಗಳು, ಜನಪ್ರಿಯರು

"ಶಾಸ್ತ್ರಂ ಬಂದೊಡೆ ಶಾಂತಿ ಸೈರಣೆ ನಿಗರ್ವಂ ನಿಲಲ್‌ವೇಳ್ಕುಂ"

ಈ ಆರ್ಯೋಕ್ತಿಯ ಪ್ರತಿರೂಪದಂತಿದ್ದರು ಶಾಂತಿರಾಜಶಾಸ್ತ್ರಿಗಳು. ಮನೆಗೆ ಬಂದವರನ್ನು ಸತ್ಕರಿಸುವ ಅವರ ರೀತಿಯನ್ನು ನಾನು ಕಂಡಿಲ್ಲದಿದ್ದರೂ ನಮ್ಮ ತಾತನವರಾದ ಕಾ. ಸ. ಧರಣೇಂದ್ರಯ್ಯನವರಿಂದ ಕೇಳಿ ನಾನೇ ಕಂಡಷ್ಟು ಸ್ಥಿರವಾಗಿ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತಿದೆ. ಇಂತಹ ಶಾಸ್ತ್ರಿಗಳನ್ನು ಕರ್ನಾಟಕದಲ್ಲಿ ಪಡೆದದ್ದು ಕನ್ನಡ, ಜೈನ ಸಾಹಿತ್ಯಾಭಿಮಾನಿಗಳ ಸುಕೃತ ಎಂದರೆ ತಪ್ಪಾಗದು. ಜೈನ ಸಾಹಿತ್ಯಾಭ್ಯಾಸಿಯಾದ ಯಾರೇ ಆಗಲಿ ಶ್ರೀ ಶಾಂತಿರಾಜಶಾಸ್ತ್ರಿಗಳಿಗೆ ಋಣಿಯಾಗದೆ ಇರಲು ಸಾಧ್ಯವೇ ಇಲ್ಲ.

ಶ್ರೀಮದ್ ಉಮಾಸ್ವಾಮಿಯವರು ರಚಿಸಿರುವ ತತ್ತ್ವಾರ್ಥ ಸೂತ್ರ ಜೈನ ಸರ್ವಸಿದ್ಧಾಂತವನ್ನೊಳಗೊಂಡ ಒಂದು ಮೇರುಕೃತಿ. ಇದನ್ನು ಮಹಾನ್ ಸಂಸ್ಕೃತ ಪಂಡಿತರಾದ ಪ್ರಸಿದ್ಧ ಸ್ವಾಮಿ ಸಮಂತ ಭದ್ರಾಚಾರ್ಯರು, ಪೂಜ್ಯಪಾದಾಚಾರ್ಯರು, ಅಕಳಂಕಾಚಾರ್ಯರು, ವಿದ್ಯಾನಂದಾಚಾರ್ಯರು ಇದಕ್ಕೆ ಮಹಾ ಭಾಷ್ಯಗಳನ್ನು ಬರೆದು ಅರ್ಥೈಸಿದ್ದಾರೆ ಎಂದರೆ ಇವರ ಪ್ರಾಮುಖ್ಯತೆ ವೇದ್ಯವಾಗುತ್ತದೆ. ಇಂತಹ ಮಹಾನ್ ಗ್ರಂಥದ ಅವಶ್ಯಕತೆ ಕನ್ನಡಿಗರಿಗೂ ಇರುವುದನ್ನು ಮನಗಂಡು ಹನ್ನೆರಡನೆಯ ಶತಮಾನದಲ್ಲಿ ಬಾಲಚಂದ್ರ ಕವಿಯು ತತ್ತ್ವರತ್ನ ಪ್ರದೀಪಿಕೆಯಾಗಿ ಕನ್ನಡಿಸಿದನು. ಸಂಸ್ಕೃತ ತತ್ತ್ವಾರ್ಥಸೂತ್ರದ ಪದಪದಗಳಿಗೆ ಕನ್ನಡ ಅರ್ಥವನ್ನು ಮೂಡಿಸಿ ರಚಿಸಿರುವ ಈ ಕೃತಿ ಕನ್ನಡಿಗರು ತತ್ತ್ವಾರ್ಥಸೂತ್ರವನ್ನು ಅರಿತುಕೊಳ್ಳಲು ಸಹಾಯವಾಗಿರುವಂತೆಯೇ ಕನ್ನಡ ಸಾಹಿತ್ಯಾಭ್ಯಾಸಿಗಳಿಗೆ ಹನ್ನೆರಡನೆ ಶತಮಾನದ ಕನ್ನಡ ಭಾಷಾಬಂಧದ ವಿಶಿಷ್ಟತೆಯನ್ನೂ, ರೀತಿ ನೀತಿಗಳನ್ನು ಅರಿತುಕೊಳ್ಳಲು ಮುಖ್ಯ ಆಕರ ಗ್ರಂಥವಾಗಿದೆ.

ಈ ಕೃತಿಯು ತಾಳೆಗರಿಯ ರೂಪದಲ್ಲಿ ಜನರಿಗೆ ಸುಲಭಲಭ್ಯವಾಗಿಲ್ಲದೆ ಇರುವುದನ್ನು ಅರಿತು ಜನ ಸಾಮಾನ್ಯರಿಗೆ ಇದನ್ನು ಮುಟ್ಟಿಸುವ ಉದ್ದೇಶದಿಂದ ಶ್ರೀಮಾನ್ ಶಾಂತಿರಾಜಶಾಸ್ತ್ರಿಗಳು ಬಹಳ ಹಿಂದೆಯೇ ಈ ಗ್ರಂಥವನ್ನು ಸಮರ್ಥವಾಗಿ ಸಂಪಾದಿಸಿ ಅಚ್ಚಿಗೆ ಅಣಿಗೊಳಿಸಿದ್ದರು. ನಮ್ಮ ದುರ್ದೈವದಿಂದ ಅವರ ಜೀವಿತಕಾಲದಲ್ಲಿಯೇ ಈ ತತ್ತ್ವರತ್ನಪ್ರದೀಪಿಕೆಯು ಮುದ್ರಣವಾಗಲಿಲ್ಲ. ಆದರೆ ಅನಂತರದಲ್ಲಾದರೂ ಪ್ರಾಚ್ಯ ಸಾಹಿತ್ಯಕೋಶಾಗಾರವು ಶಾಸ್ತ್ರಿಗಳ ಶ್ರಮವನ್ನು ಮನಗಂಡು 1955 ರಲ್ಲಿ ಈ ಪುಸ್ತಕವನ್ನು ಪ್ರಕಟಿಸಿ ಶಾಸ್ತ್ರಿಗಳ ಅಪಾರ ಶ್ರಮವನ್ನು ನಮ್ಮೆಲ್ಲರಿಗೆ ಮುಟ್ಟಿಸಿದೆ. ಇದರ ಐವತ್ಮೂರು ಪುಟಗಳ ಸುದೀರ್ಘ ಪಾಂಡಿತ್ಯ ಪೂರ್ಣ ಮುನ್ನುಡಿಯು ಶಾಂತಿರಾಜಶಾಸ್ತ್ರಿಗಳ ಶ್ರಮ ಮತ್ತು ಪ್ರತಿಭೆಯನ್ನು ಪ್ರತಿಬಿಂಬಿಸುತ್ತದೆ.

ತತ್ತ್ವಾರ್ಥಸೂತ್ರವನ್ನು ರಚಿಸಿರುವ ಉಮಾ ಸ್ವಾಮಿಗಳು ಕ್ರಿ.ಶ. ಮೊದಲನೆಯ ಶತಮಾನದವರೆಂದು ತಿಳಿದು ಬರುತ್ತದೆ. ಇವರು ನಂದೀಸಂಘದ ಆಚಾರ್ಯ ರಾಗಿದ್ದು ನಲವತ್ತು ವರ್ಷಗಳ ಕಾಲ ಮುನಿಗಳಿಗೆ ಶಿಕ್ಷಣ ವನ್ನು ನೀಡಿದ ಆ ಕಾಲದ ಅದ್ವಿತೀಯ ಉದ್ದಾಮ ಪಂಡಿತರೆಂದು ಶ್ರುತಕೇವಲಿ ದೇಶಿಯಂ ಎಂಬ ಅವರ ವಿಶೇಷಣದಿಂದ ತಿಳಿಯುತ್ತದೆ. ಉಮಾಸ್ವಾಮಿಗಳ ಈ ತತ್ತ್ವಾರ್ಥಸೂತ್ರವು ಸಕಲ ಜೈನ ಸಿದ್ಧಾಂತವನ್ನು ಸೂತ್ರೀಕರಿಸಿದ ಒಂದು ಅಮೋಘ ಕೃತಿಯಾಗಿದೆ. ಇದರ ವಿಶೇಷವೆಂದರೆ ಉಮಾಸ್ವಾಮಿಗಳನ್ನು ಜೈನಧರ್ಮದಲ್ಲಿ ಎರಡು ಪ್ರಮುಖ ಆಮ್ನಾಯಗಳಾದ ಶ್ವೇತಾಂಬರ, ದಿಗಂಬರ ಪಂಥಗಳು ಆಚಾರ್ಯರೆಂದು ಸ್ವೀಕರಿಸಿರು ವುದು. ಉಭಯತ್ರರೂ ಅವರನ್ನು ತಮ್ಮ ಪಂಥೀಯ ರೆಂದು ಸಮರ್ಥಿಸಿಕೊಳ್ಳಲು ಪ್ರಯತ್ನಿಸುತ್ತಾ, ಅದು ಹೇಗೆ ಇರಲಿ, ಅವರ ತತ್ತ್ವಾರ್ಥಸೂತ್ರವನ್ನು ಆದ್ಯ ಸಿದ್ಧಾಂತ ಗ್ರಂಥವಾಗಿ ಸ್ವೀಕರಿಸಿದ್ದಾರೆ. ಇಂತಹ ಅಮೋಘ ಕೃತಿಯನ್ನು ಕನ್ನಡಿಗರಿಗೆ ಕನ್ನಡಿಸಿಕೊಟ್ಟ ಮಹಾನ್ ವ್ಯಕ್ತಿ ಬಾಲಚಂದ್ರದೇವ. ಈತನು ಈ ತತ್ತ್ವರತ್ನ ಪ್ರದೀಪಿಕೆಯನ್ನು ಕುಮುದಚಂದ್ರ ಭಟ್ಟಾರಕ ರಿಗೆ ಬೋಧಿಸಲು ರಚಿಸಿರುವುದಾಗಿ ಪ್ರತಿಯೊಂದು ಅಧ್ಯಾಯದಲ್ಲೂ ಹೇಳಿಕೊಂಡು ಬಂದಿದ್ದಾನೆ. ಆದರೆ ಈ ಭಟ್ಟಾರಕರಾರು ಎಂಬುದನ್ನು ಚರಿತ್ರಾಧಾರಗಳಿಂದ ಗುರುತಿಸಲಾಗುತ್ತಿಲ್ಲ. ಬಾಲಚಂದ್ರ ಕವಿಯು ಮುನಿ ಯಾಗಿದ್ದವನು. ಈತನು ನಯಕೀರ್ತಿ ಸಿದ್ಧಾಂತ ದೇವ ನನ್ನು ಪರಮಾತ್ಮದೇವನೆಂದೂ ಅವನ ಸೇವೆಯಿಂದ ನಿತ್ಯಾನಂದವನ್ನು ಪಡೆದನೆಂದೂ ಹೇಳಿಕೊಂಡಿದ್ದಾನೆ. ಈತನು ಜಿನಸ್ತುತಿಯನ್ನು ರಚಿಸಿ ಸಮಯಸಾರ, ಪಂಚಾಸ್ತಿಕಾಯ, ಪ್ರವಚನಸಾರಗಳೆಂಬ ಪ್ರಾಭೃತಕತ್ರಯ ಗಳಿಗೆ ಹಾಗೂ ಪರಮಾತ್ಮ ಪ್ರಕಾಶಿಕೆಗೆ ಕನ್ನಡ ಟೀಕೆ ಯನ್ನು ಬರೆದು ಅಧ್ಯಾತ್ಮ ಬಾಲಚಂದ್ರನೆಂದು ಕರೆಸಿ ಕೊಂಡಿದ್ದಾನೆ.

ತತ್ತ್ವಾರ್ಥ ಸೂತ್ರವನ್ನು ಹತ್ತು ಅಧ್ಯಾಯ ಗಳಾಗಿ ಮಾಡಿಕೊಳ್ಳಲಾಗಿದೆ. ಈ ಮೋಕ್ಷ ಶಾಸ್ತ್ರದ ಮೊದಲನೆಯ ಅಧ್ಯಾಯದಲ್ಲಿ 33 ಸೂತ್ರಗಳೂ, ದ್ವಿತೀಯಾಧ್ಯಾಯದಲ್ಲಿ 53 ಸೂತ್ರಗಳೂ, ತೃತೀಯಾ ಧ್ಯಾಯದಲ್ಲಿ 39 ಸೂತ್ರಗಳೂ, ಚತುರ್ಥಾಧ್ಯಾಯ ದಲ್ಲಿ 42 ಸೂತ್ರಗಳೂ, ಪಂಚಮಾಧ್ಯಾಯದಲ್ಲಿ 42 ಸೂತ್ರಗಳೂ, ಷಷ್ಠೋಧ್ಯಾಯದಲ್ಲಿ 27 ಸೂತ್ರಗಳೂ, ಸಪ್ತಮೋಧ್ಯಾಯದಲ್ಲಿ 39 ಸೂತ್ರಗಳೂ, ಅಷ್ಟ ಮೋಧ್ಯಾಯದಲ್ಲಿ 27 ಸೂತ್ರಗಳೂ, ನವಮೋಧ್ಯಾಯ ದಲ್ಲಿ 47 ಸೂತ್ರಗಳೂ, ದಶಮೋಧ್ಯಾಯದಲ್ಲಿ 9 ಸೂತ್ರ ಗಳೂ ಹೀಗೆ ಒಟ್ಟು 358 ಸೂತ್ರಗಳಿವೆ.

ಸಮ್ಯಗ್ದರ್ಶನಜ್ಞಾನ ಚಾರಿತ್ರಾಣಿ ಮೋಕ್ಷ ಮಾರ್ಗಃ ಇದು ಇಡೀ ತತ್ತ್ವಾರ್ಥ ಸೂತ್ರದಲ್ಲಿಯೇ ಪ್ರಮುಖವಾದ ತತ್ತ್ವಾರ್ಥ ಸೂತ್ರ ರಚನೆಗೆ ಕಾರಣೀ ಭೂತವಾದ ಸೂತ್ರವಾಗಿದೆ. ಈ ಸೂತ್ರವನ್ನು ಅರ್ಥೈ ಸುತ್ತಾ ಲೇಖಕರು "ಆದಿತ್ಯಂಗೆ ಬಗೆದ ತೀವ್ರ ಪ್ರತಾಪ ಪ್ರಕಾಶಾಭಿವ್ಯಕ್ತಿಯುವೋಲ್" ಎಂಬ ಅಮೋಘ ಉಪಮೆ ಸೂತ್ರಾರ್ಥವನ್ನು ಅರ್ಥೈಸಲು ಬಹು ಸಮರ್ಥನೀಯ ವಾಗಿದೆ.

ಕ್ಷಯೋಪಶಮನಿಮಿತ್ತಃ ಷಡ್ವಿಕಲ್ಪಂ ಶೇಷಾಣಾಂ ಈ ಸೂತ್ರವನ್ನೂ ಅರ್ಥೈಸುತ್ತಾ ಅವಧಿ ಜ್ಞಾನಾ ವರ್ಣಿಯ ಕ್ಷಯೋಪಶಮನ ಕಾರಣದಿಂದ ಷಡ್ವಿಕಲ್ಪಃ "ಅನುಗಾಮಿ ಅನನುಗಾಮಿ ವರ್ಧಮಾನ ಹೀಯಮಾನ ಅವಸ್ಥಿತ ಅನವಸ್ಥಿತ ಭೇದೋಪೇತಷಡ್ವಿಕಲ್ಪಮುಂ ಅಪ್ಪ ಅವಧಿ ಶೇಷಾಣಂ–ಉಳಿದ ಮನುಷ್ಯತಿರ್ಯಕ್ಸಂಜ್ಞಿ ಪರ್ಯಾಪ್ತಕರ್ಗಂ ಅಕ್ಕುಂ" ಎಂದು ವಿವರಿಸುತ್ತಾನೆ. ಇಲ್ಲಿ ಆರು ಪ್ರಕಾರಗಳಾದ ಅವಧಿಜ್ಞಾನಗಳನ್ನು ಹಾಗೂ

